1. దమయంతీ స్వయంవరం.

2. ఉత్తరరామచరిత్ర నాటకం.

3. శాకుంతల నాటక.

4. విక్రమోర్వశీయ నాటకం.

H H THE MAHARANI'S GIRLS' SCHOOL SERIES.

ದಮಯಂತೀಸ್ವಯಂವರಂ.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದ ಬಸವಪ್ಪಶಾಸ್ತ್ರಿಗಳಿಂದ
ರಚಿಸಲ್ಪಟ್ಟದ್ದು.

ಮೈಸೂರು:

ಸರಕಾರದ ಬ್ರ್ಯಾಂಚ್ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟಿತು,

೧೮೯೧.

ದಮಯಂತೀ ಸ್ವಯಂವರಂ.

ಪೀಠಿಕಾ ಪ್ರಕರಣಂ.

ಕಂದಂ॥ ಶ್ರೀಯಂ ಮಾಳ್ಕೆಮಗಜ ನಾ
ರಾಯಣಮುಖ ವಂದನೀಯಚರಣಂ ಕರುಣಾ ।
ತೋಯಧಿ ಗುಣೈಕನಿಧಿ ಯಾ
ಮ್ನಾಯ ಶಿರೋಗೇಯ ನಖಿಲನಾಯಕ ನೀಶಂ ॥ ೧

ವೃತ್ತಂ॥ ತಾಯೆ ಮುನೀಂದ್ರಗೇಯೆ ಸುಮನೋಹರಕಾಯೆ ರಮಾದಿಶಕ್ತಿ ಸ
ದ್ಧ್ಯೇಯೆ ಸದಾನಪಾಯೆ ಜಗದಾದಿಮಮಾಯೆ ಕರಾಸಿಕೃತ್ತ ದೈ ।
ತೇಯೆ ನತಾದಿತೇಯೆ ನಿಖಿಲಶ್ರುತಿಮೇಯೆ ತಟತ್ಪ್ರಭಾನಿಭ
ಚ್ಛಾಯೆ ಮಹೇಶಜಾಯೆ ಭಜಕಪ್ರಿಯೆ ಕಾಯೆ ಯಜೇಯೆ ಶೈಲಜೇ ॥

ಕಂ॥ ಧಾತ್ರೀಧರೇಂದ್ರಪುತ್ರೀ
ಪುತ್ರಂ ನತಹೃದಯನಳಿನ ಮಿತ್ರಂ ಕರುಣಾ ।
ಪಾತ್ರಂ ಶುಭಗಾತ್ರಂ ಸುಚ
ರಿತ್ರಂ ಕರುಣಿಸುಗೆ ಸುಮತಿಯಂ ಕರಿವಕ್ತ್ರಂ ॥ ೩

ಕಂ॥ ಪಾಣಿನಖಶಿಖರಮುಖರಿತ
ವೀಣಾಸ್ವರಮಾಧುರೀ ಸುಖಾಸ್ವಾದನ ತಂ ।
ದ್ರಾಣದೃಶೆ ದೇವಿ ಯಸದೃಶೆ
ವಾಣಿ ಸುಧಾವಾಣಿಗಳ ನೊಡರ್ಚುಗೆ ಯೆಮ್ಮೊಳ್ ॥ ೪

ವೃ॥ ಕ್ಷಿತಿಗೀದಲೇ ಮಹೋಪಕೃತಿ ಯೆಂದೆನೆ ಕನ್ನಡದಿಂ ನಿಮಿರ್ಚಿಸ
ತ್ಕೃತಿಯ ನುಪಾತ್ತನೀತಿತತಿಯಂ ಪ್ರಕಟೀಕೃತಲೋಕಶಾಸ್ತ್ರಸಂ ।
ಗತಿಯ ನಶೇಷಸೂಚಕತೆಯಿಂ ಸುಯಶೋವಪುವಿಂ ನೆಗಳ್ದಸ
ನ್ನುತ ಹರಿದೇವ ರಾಘವ ಷಡಕ್ಷರಿ ದೇವರ ನೊಲ್ದು ವಂದಿಪೆಂ ॥ ೫

ವೃ॥ ಹರಿನೀಲಸ್ಫಟಿಕಪ್ರಭರ್ಯ್ಯಿಶಿರೀಷೋತ್ತಂಸರುದ್ರತ್ನಭಾ
ಸುರಶಾಟಂಕಫಣೀಂದ್ರಕುಂಡಲವನೊಳ್ಜ್ಞೂರ್ದ್ಧ್ವಾಂಕುವುಶ್ರೀವಿಭೂ।
ತಿರುಚಿಸ್ಫುರಸಿಟಾಲ ರಾನತಜನಸ್ವಭೂರ್ಗರುಹಪರ್ಗ್ವತೀ
ಪರವೇಶ ರ್ಕರುಣಿಕ್ಕೆ ಚಾಮಜನಪಾಲಂ ಗಾಯುಮಂ ಶ್ರೀಯುಮಂ ॥

ಕಂ॥ ಶ್ರೀಯುರಸನೆನಿಸಿ ನೆಗಳ್ದಾ
ತೋಯುಜಲೋಚನನದಾವ ವಂಶದೊಳೊಗೆದಂ।
ಆಯದುವಂಶಂ ಲೋಕನಿ
ಕಾಯೈಕ ಶ್ಲಾಘ್ಯವೆಂಬುದೇ ನಚ್ಚರಿಯೇ ॥

ಕಂ॥ ಆ ಯದುವಂಶದೊ ಳೊಗೆದಂ
ಶ್ರೀಯದುರಾಜಾಖ್ಯ ನವೊಳಸುಯಶೋ ನಿಳಯಂ।
ಹೇಯೂಷಜಲಧಿಯೊ ಳ್ಪ್ರ
ಲೇಯುವುಯೂಖಂ ಪಳಚ್ಚನುದಿಸಿದ ತೆರದಿಂ ॥

ಕಂ॥ ಆಯದುರಾಜಾನ್ವಯದೊಳ್
ನ್ಯಾಯಸುರಕ್ಷಿತ ಮಹೀಕ ನೀಶಾರ್ಚನಧೌ।
ರೇಯಂ ಬುಧಪ್ರಿಯಂ ಜನೆ
ಗೇಯಗುಣಂ ಚಾಮರಾಜನೆಂಬಂ ನೆಗಳ್ದಂ ॥

ಕಂ॥ ಆತನ ಸತಿ ಪತಿಭಕ್ತಿ
ಖ್ಯಾತೆ ಕಳಾಮಹಿತೆ ಸತ್ಯಸಾಶೀಲ್ಯಗುಣೋ।
ಪೇತೆ ಜಗದಂಬಿಕಾ ಪ್ರ
ಜಾತತ್ಪರೆ ಕೆಂಪನಂಜವಾಂಬಿಕೆ ಯೆಸೆದಳ್ ॥

ವಚನಂ॥ ಇಂತೆಸೆವ ಕಾಂತಾಮಣಿವೆರಸು ಚಾಮಭೂಕಾಂತಂ ಪಲವು
ಮರಸುಗೈವುತ್ತಿರ್ದು ಪುತ್ರರಿಲ್ಲದುದರಿಂದತ್ಯಂತ ಚಿಂತೆಯಾಂತು ಪ
ಪುತ್ರಕಾಮನಾ ವ್ರತಂಗಳಂ ಮಾಡಿ, ಮತ್ತಂಕುಲಗುರುಗಳಾಜ್ಞೆ
ಕೋಟಿ ಪಂಚಾಕ್ಷರೀಪುರಶ್ಚರಣಸಂಕಲ್ಪಮಂ ಕೈಕೊಂಡು, ಯ

ಕಲ್ಪವಾಗಿ ತದ್ದೇವತಾರ್ಚನ ತರ್ಪಣ ಹೋಮಾದಿಗಳಂ ನೆಗಳ್ದು
ಸಂತಮಿರ್ಪರ್ಗಳ್ ॥ ೧೧

ಸ್ರ॥ ನಿಸದಂತಶ್ಲೋಟಿಪಂಚಾಕ್ಷರಜಪಫಲಮೋ ಮೂರ್ತಿವೆತ್ತಂತೆ ಸತ್ಶ್ರೋ
ಲ್ಲಸಿತಶ್ರೀಚಾಮಭೂಮೀಪರಿವೃಢಮಹಿಷೀ ಕೆಂಪನಂಜಾಂಬಿಕಾಗ ।
ರ್ಭಸುಧಾವಾರಾಶಿಯೊಳ್ಚಂದ್ರನೆನೆ ಜನಿಸುತ್ತೈದಬ್ದದೊಳ್ಸಾರ್ದ ಕರ್ಣಾ
ಟ ಸಮುದ್ಯದ್ರಾಜ್ಯಲಕ್ಷ್ಮೀವಧುವೊಳಿಪಸೆನಿಂದಂ ಕರಂ ಕೃಷ್ಣರಾಜಂ

ವ॥ ಮತ್ತಮಾರಾಜೋತ್ತಮಂದಿನದಿನದೊಳ್ ಶುಕ್ಲಪಕ್ಷದ ಶುಭ್ರಾಂಶುವಂ
ತೆ ಪಲವುಕಲೆಗಳನೊಳಕೊಂಡು ವರ್ಧಿಸುತ್ತಂ ಸಂಪೂರ್ಣಮಂಡಲ
ನುಂ ಕೃಷ್ಣಾಂಕಭಾಸುರನು ಮೆನಿಸಿ ನೆಗಳ್ತೆವಡೆದಿರ್ದನಂತುಮಲ್ಲ
ದೆಯುಂ ॥ ೧೨

ಕಂ॥ ಪಲವು ಕಲೆವೆರಸುತನೆ ಗು
ಜ್ಜ್ವಲಮೆನೆ ಕೃಷ್ಣಾಂಕನಿಂದು ವೊಲ್ ಕುವಲಯಮುಂ ।
ನಲವಡಿಸಿ ಬೆಳಗಿದಂ ಮುಂ
ಜುಲಕರನಾಪೂರ್ಣಮಂಡಲಂ ಕೃಷ್ಣನೃಪಂ ॥ ೧೩

ವೃ॥ ಶ್ರೀಯದುರಾಜವಂಶಕಲಶಾಂಬುಧಿ ಕೌಸ್ತುಭನಿಂದುಕುಂದಮು
ಕ್ತಾಯುತಕೀರ್ತಿ ಪಾಂಡುರಿತದಿಕ್ತಟ ನೀಶಪದಾರ್ಚನೈಕಧೌ ।
ರೇಯನಜೇಯ ವಿಕ್ರಮ ನಮೇಯ ಗುಣಾಂಕ ನನೂನದಾನರಾ
ಧೇಯನೆನಲ್ಕೆಗಳ್ತೆವಡೆದಂ ಕರುಣಾನಿಧಿ ಕೃಷ್ಣಭೂಮಿಪಂ ॥ ೧೪

ವ॥ ಮತ್ತಮಾಕೃಷ್ಣನೃಪಂ—

ಕಂ॥ ಯಾದವವಂಶದೆ ಹರಿಗೆಣೆ
ಯಾದವನೆನೆ ಸಕಲಗುಣದೆ ನೆಗಳ್ದಂ ನಿರ್ದಾ ।
ಯಾದವಸುಧಾಧಿನಾಥಂ
ಯಾದವ ನಡಿಗ್ರೈದ ವನಧಿವೋಲ್ ಗಂಭೀರಂ ॥ ೧೫

ಕಂ॥ ಆಕೃಷ್ಣನೃಪತಿತಿಲಕ
ಶ್ರೀಕರಪುತ್ರಂ ಕ್ಷಮಾಕರಂ ಚಾಮಧರಿ ।
ತ್ರೀಕಾಂತಂ ಸುಚರಿತ್ರಂ
ಲೋಕಸ್ತುತಗುಣ ನೇಕವಾಕ್ಯ ನೇಕಳತ್ರಂ ॥ ೧೭

ವೃ॥ ಯದುವಂಶಾಂಬುಧಿಚಂದ್ರಮಂ ನಿಖಿಲವಿದ್ಯಾವಾರ್ಧಿಸಂವರ್ಧಕಂ
ಸದಯಂ ಸನ್ನಯಶಾಲಿ ಸಾಧುಹೃದಯಂ ಶ್ರೀಕಂಠಚಾಮುಂಡಿಕಾ ।
ಪದಸದ್ಭಕ್ತಿವಿಶೇಷಕಲ್ಪಕ ಲತಾ ಸಂಲಬ್ಧಸತ್ಪುತ್ರಸಂ
ಪದನಿರ್ಪಂಸುಕವಿಪ್ರಿಯಂ ಶುಭಯುತಂ ಶ್ರೀಚಾಮಭೂವಿಾಧವಂ ॥ ೧೮

ವೃ॥ ನುತಿವೆತ್ತಿಪ್ಪಾರ್ವಮಹಾಭಾರತಗತನಳಚಾರಿತ್ರಮಂ ಸದ್ಬುಧರ್ ಸಂ
ಮತಿಪಂತಾತ್ಮೀಯ ರಾಜ್ಞೀರಚಿತ ಕುಲವಧೂಪಾಠಶಾಲೋಪಯೋಗ।
ಸ್ಥಿತಿಯಿಂಕಾವ್ಯಕ್ರಮಂತಳ್ತರೆ ನೆಗಳ್ವುದು ಕರ್ಣಾಟದಿಂನೀಮೆನುತ್ತಾ॥
ಣತಿಯಿತ್ತಂ ತನ್ಮಹೀಂದ್ರಂ ಸಕಲಸುಗುಣಸಾಂದ್ರಂ ಬುಧಾಂಬೋಧಿ
ಚಂದ್ರಂ ॥ ೧೯

ಕಂ॥ ತನ್ನರಪಾಲೋತ್ತಂಸನ
ಸನ್ನಿಧಿಸಚಿವಂ ಕುಲಾಂಗನಾಸಮುಚಿತವಿ ।
ದ್ಯೋನ್ನತಿನಿದಾನ ನಮಲಗು
ಣನ್ನರಸಿಹ್ಮಾರ್ಯನುಂಸಮುತ್ಸಾಹಿಸಿದಂ ॥ ೨೦

ವ॥ ಅನಂತರಮಾ ಚಾಮಮಹೀಕಾಂತನ ದ್ವಿತೀಯಪುತ್ರಸಂತಾನಾವಿ
ರ್ಭಾವಮಹೋತ್ಸವಸಸ್ಮಾರಕಮೆನಿಸಿ.—

ಕಂ॥ ಈನಳನರೇಶ್ವರೋಪಾ
ಖ್ಯಾನಮನುಸಿರ್ದಂಸಮಂತುಚಾಮಮಹೀಶಾ ।
ಸ್ಥಾನಕವಿ ಬಸವಶಾಸ್ತ್ರಿಕ
ಲಾನಿಪುಣರ್ಮೆಚ್ಚೆ ವಸ್ತುಕಕ್ರಮದಿಂದಂ ॥ ೨೧

ಕಂ॥ ಸರಸಕವಿರಚಿತಕೃತಿತಾ
ಮರಸಂ ಸೂರ್ಯಾದೃತಂ ಪ್ರಕಾಶಿಪತೆರದಿಂ ।

ಸ್ವರುಚಿರಗುಣಪರಿಮಳಮಂ
ಕರಂ ಪ್ರಕಾಶಿಪುದೆ ಮಂದತಮರಾದೃತಿಯಿಂ ॥ ೧೨

ಕಂ॥ ಅರಸಕ್ಕೆರ್ಕ್ಕಡುಮಾಕಾರ್ತ
ಸ್ವರಕಂಕಣಮಿಕ್ಕೆ ಸರಸರಾಸ್ವಾದಿಸಿಕಾ ॥
ವ್ಯರಸಮಸೂಸುಮಸುಖಭಾ ।
ಸ್ವರಾಶ್ರುಕಂಕಣಮೆ ಕವಿಗೆ ಕಂಕಣಮಲ್ತೇ ॥ ೧೩

ಕಂ॥ ದೂರೀಕರಿಸುತೆದೋಷಮ
ಸಾರಜ್ಞಂ ಗ್ರಹಿಪನೊಲ್ದು ಗುಣಮಂ ಕೃತಿಯೊಳ್ ।
ನೀರಂ ಬೇರ್ಪಡಿಸುತ್ತಂ
ಕ್ಷೀರಮ ನಾರಾಜಹಂಸ ನಾಸ್ವಾದಿಪವೋಲ್ ॥ ೧೪

ಕಂ॥ ಇರ್ದ್ದಪುದೇಂ ನಿರ್ಗುಣಮುಂ
ನಿರ್ದೋಷಮುಮೆನಿಪ ವಸ್ತು ಲೋಕದೊಳದರಿಂ ।
ಪೊರ್ದುವುದು ಗುಣಮನೊಲವಿಂ
ತಿರ್ದುವುದಿರೆದೋಷ ಮಮಲಮತಿಗಳ್ ಕೃತಿಯೊಳ್ ॥ ೧೫

ಕಂ॥ ನೆಲದೊಳದಾವನಕೀರ್ತಿಸೆ
ಕಲಿದೋಷಂ ಪೊರ್ದದಿರ್ಕುಮಾಸತ್ಯಗುಣೋ ।
ಜ್ಜ್ವಲಪುಣ್ಯಕೀರ್ತಿನಳನೃಪ
ತಿಲಕನ ಕಥೆಮೇಳೆ ಕೇಳ್ದು ಮೆಚ್ಚದರೊಳರೇ ॥ ೧೬

ಕಂ॥ ಬೆಸಗೊಳೆ ಧರ್ಮಸುತಂ ಸಂ
ತಸದಿಂ ಕಲಿದೋಷಹಾರಿ ಪುಣ್ಯಶ್ಲೋಕೋ ।
ಲ್ಲಸಿತ ನಳನೃಪತಿಚರಿತಮ
ನುಸಿರ್ದಂ ಮುನಿಮುಖ್ಯಗೇಯಮಾರ್ಕಂಡೇಯಂ ॥ ೧೭

ವ॥ ಅದೆಂತೆಂದೊಡೆ—

ಪ್ರ ಥ ಮಾ ಶ್ವಾ ಸಂ.

ಕಂದಂ॥ ವಸುಧಾ ರಮಣೀ ಹೃದಯೋ
ಲ್ಲಸಿತಮಣೀಹಾರಮೆಂಬಿನಂ ಕಂಗೊಳಿಕುಂ ।
ಪೆಸರಿಂದಂ ನಿಷಧಮೆನಿ
ಪ್ಪಸದೃಶದೇಶಂ ಸುಧಾಶಪುರಸಂಕಾಶಂ ॥ ೧

ಮತ್ತಂ—

ವೃತ್ತಂ॥ ನವಫಲಶಾಲಿ ಶಾಲಿವನದಿಂ ಜನನಂದನ ನಂದನಂಗಳಿಂ
ಕುವಲಯ ಸಾರಸಾರಸ ವಿರಾಜಿವಿರಾಜಿ ನದೀನದಂಗಳಿಂ ।
ಸುವಿಮಲರೂಪ ಶೀಲ ರಮಣೀರಮಣೀಯ ನರರ್ಕಳಿಂ ಸಮೈ
ಭವ ಭವನಂಗಳಿಂ ಮೆರೆಗು ಮಾನಿಷಧಂ ಜನಜೀವನೌಷಧಂ ॥ ೨

ವೃ॥ ಸಕಲಕಲಾ ನಟೀನಟನ ರಂಗಮನಲ್ಪವಿಚಿತ್ರ ಶಿಲ್ಪ ಕ
ಲ್ಪಕಜನತಾನಿಧಾನ ಮತಿಶೂರಭಟಾವಸಥಂ ಜನೋಪಕಾ ।
ರಕ ಪುರುಷಾಕರಂ ಧನದವದ್ಧನಿಕಾಶ್ರಯ ಮಾರ್ಯಧರ್ಮ ವಿ [೩
ನ್ನಿಕರನಿವಾಸ ಮಾನಿಷಧಮೆಂದೊಡೆ ದೇಶಮದೇಂ ಮನೋಜ್ಞಮೋ ॥

ಕಂ॥ ಬೆರಟಿದೊಡಂಗುಟದಿಂ ಪೊ
ನ್ನೊರೆ ದೋರ್ಪ್ಪರ್ವರೆ ಕಡಲ್ಗೆ ಪಡಿಯೆಂಬಿನೆಗಂ ।
ಪರಿಕಾಲೆತ್ತಂ ಪರ್ವಿರೆ
ಸಿರಿ ಕಾಲೂರಿರ್ಪ್ಪಳೆಂದು ಮಾಜನಪದದೊಳ್ ॥ ೪

ವೃ॥ ನವಮಣಿಯಿಂ ಮಹೀಧ್ರಕಟಕಂ ಕಟಕಂದಳದುನ್ಮದಾಂಬುಸಂ
ಭವ ನವಗಂಧ ಗಂಧಗಜಸಂಚಯದಿಂ ವಿಪಿನಂ ಪಿನದ್ಧಸ ।
ಸ್ಯ ವಿಭವದಿಂದ ಮುರ್ವರೆ ವರೇಣ್ಯ ವಧೂಸುತ ಸಂಪದಂಗಳಿಂ
ದವೆ ಜನವೊಪ್ಪಿನಾಡ ಸೊಬಗಾಡಲಶಕ್ಯ ಮದಾವನಾದೊಡಂ ॥ ೫

ಕಂ॥ ಮೇದಿನಿಯ ಸಗ್ಗಮೆನೆ ಮೆರೆ
ವಾದೇಶಕ್ಕಂ ಸುರೇಂದ್ರನಾವಾಸಕ್ಕಂ ।

ಪ್ರಾದೇಶಮಾತ್ರಮಲ್ತೆ ವಿ
ಭೇದಂ ತಾಂಕೆಳಗುಮೇಗೆ ನಿಪ್ಪುದರಿಂದಾ ॥ ೬

ಕಂ॥ ನಳನಾಳಿಕೆಯೊಳ್ಪಿಂದಂ
ನೆಲಸಿರ್ಪುದು ಧರ್ಮಮೆಂಬುದಡಿನಾಲ್ಕರಿನಾ ।
ನೆಲದೊಳ್ನೆ ನುಡಿವುದೇಂ ಸ
ತ್ಯಲೋಕಕ್ಕೆಣೆಯೆನಿಕುಮಲ್ತೆ ನಿಸದಂ ನಿಷದಂ ॥ ೭

ಕಂ॥ ಮಲೆಯೆಂಬುದ ರಣ್ಯದೆಕಾ
ಡಲೆಯೆಂಬುದು ಕೂರ್ತಮಡದಿಯೊಳ್ಕಲಿಪೆಂಬೊಂ ।
ಮುಲಿಪಭ್ಯಾಸದೊಳಲ್ಲದೆ
ತಲೆದೋರದು ನಲನ ನಾಡೊಳ್ನಲೇನೆಂಬೆಂ ॥ ೮

ವ॥ ಇಂತು ಧರ್ಮೈಕ ನಿವಾಸಮಾದ ನಿಷಧ ದೇಶಕ್ಕಧೀಶನೆನಿಸಿ.

ವೃ॥ ಕರಮೆಸೆದಿರ್ದ ಇಂದುಕುಲ ವಾರಿಧಿಕೌಸ್ತುಭ ನಬ್ಧಿಮೇಖಲಾ
ಪರಿವೃತ ಭೂವಧೂ ಭರಣಕೊಪ್ಪಿದ ಸಾರ್ಯಮನಸ್ಸರೋಜ ಭಾ ।
ಸ್ಕರ ನುರುಕೀರ್ತಿದೀಪಿತ ದಿಶಾವಲಯಂ ಸುಮಚಾಪರೂಪ ನೀ
ಶ್ವರ ಭಜಕಂ ನೃಪಾಗ್ರಣಿನಲಂ ವಿಮತಕ್ಷಿತಿಭೃದ್ವನಾನಲಂ ॥ ೯

ವೃ॥ ತುರಗ ಹೃದಯಾಭಿಜ್ಞಂ ಪ್ರಾಜ್ಞಂ ಮಹೀವರಶೇಖರಂ
ನಿರುಪಮಗುಣೋದಾರಂ ಧೀರಂ ದಯಾರಸಸಾಗರಂ ।
ಸರಸಹೃದಯಾರಾಮಂ ರಾಮಾಜನೇಷ್ಟಕಳೇವರಂ
ವಿರಚಿತಸಮಸ್ತೇಷ್ಟಂ ಶಿಷ್ಟಂ ಸುಪಾಕಕಲಾವಿದಂ ॥ ೧೦

ಕಂ॥ ಕಣಿಸೆದ್ಧರ್ಮಕೆ ಮಣಿದ
ಪರ್ಣಿ ನಖಿಲಾಗಮಕೆ ವಿಮಲ ಮನುಸೂತ್ರಕೆ ಟ ।
ಪ್ಪಣಿಗಂ ವಿತರಣಿಗಳೊಳ
ಗ್ರಣಿಯೆನೆ ನೆಗಳ್ದಂನಳಂಯಶೋರುಚಿಧವಳಂ ॥ ೧೧

ಕಂ॥ ನಳನೃಪನ ಚೆಲ್ವು ಮುಂದಿ
ನ್ನಿಳೆಕೈದಪುದೆಂ ದನಂಗತೆಯ ಮುನ್ನಮೆತಾಂ ।

ತಳೆದನೆನೆ ಕುಸುಮಶರ ನಿ
ನ್ನಿಳಿದರ್ ತನ್ನೃಪನ ರೂಪಿಗೆಣೆವಂದಪರೆ ॥ ೧೨

ಕಂ॥ ಆಸರ್ವಂ ಸಹೆಯಾಣ್ಮನ
ಶಾಸನದೇವತೆ ಸಮಸ್ತ ಸಾಮಂತಶಿರೋ ।
ಗ್ರಾಸನಮು ನವಷ್ಟಂಭಿಸಿ
ಯಾಸುರಮೆನೆ ಪೂಜೆಗೊಂಬ ಳೋಜೆಯಿನೆಂದುಂ ॥ ೧೩

ಕಂ॥ ಆನಳನ ನೂನತೇಜೋ
ಭಾನು ವಿದಿರ್ಚಿದೊಡೆ ಮಿತ್ರನಾದುವರಿಂದಂ ।
ಭಾನುಬರ್ದುಂಕಿವ ನೆನಲಿ
ನ್ನೀ ನೆಲದೊಳದಿರ್ಚಿಬಾಳ್ವರಿಪುಗಳು ಮೊಳರೆ ॥ ೧೪

ಕಂ॥ ದ್ವಿರಸನನಾಥಾ ಶ್ರಯಮೆನ
ಗುರಿಸದೆನುತ್ತುರ್ವಿ ಯೊಂದೆ ನಾಲಗೆಯಿಂದಂ ।
ನೆರೆದ ನಳನೃಪನ ಭುಜವಿ
ಷ್ಟರದೋಳ್ಕಿಳ್ಪಸ್ಪರ್ಶದಿಳಿದು ಫಣಿಪನ ಶಿರಮಂ ॥ ೧೫

ಕಂ॥ ಧುರಕಿದಿರಾದರಿ ಧರಣೀ
ವರರ ಪುರಂದ ರಪುರೀಪುರಂಧ್ರೀ ಜನದೊಳ್ ।
ಪರಿಣಯಿಸಿದಂ ನಳೋರ್ವೀ
ಶರನುಜ್ವಲಕರ ಕೃಪಾಣಧಾರಾಜಲದಿಂ ॥ ೧೬

ಕಂ॥ ದಾನಕರನೆನಿಸಿ ಮೇಣ್ ಸ್ವವ
ಶಾನುಗತಸ್ವಾಂತನೆನಿಸಿ ಪೇರ್ಮೆಗಡಪರ್ ।
ದಾನಳಧರಣಿವಧೂಟೀ
ಜಾನಿಯನೇಂ ಸಾರ್ವಭೌಮನೆನೆ ಬಗೆವುಗದೆ ॥ ೧೭

ಕಂ॥ ಜಡಜಜನ ಮುಖವ ನಕಟಾ
ನೆಡೆಗೊಳ್ವದ ಯುಕ್ತಮೆಂದು ಜಡತೆಯ ನುಳಿದಾ ।

ಪೊಡವಿಯೊಡೆಯನ ಮುಖಾಬ್ಜದೆ
ಕಡುರಾಗಂಬೆತ್ತು ವಾಣಿ ಮಾಣದೆನಿಂದಳ್ ॥ ೧೮

ಕಂ॥ ಅರಿದರ ಕರನಾನಂದಿತ
ನರನಾದೃತ ವಿಬುಧಕುಲನೆನಿಪ್ಪಾನಲಭೂ ।
ವರನಂ ಹರಿಯೆಂದರಿದಿಂ
ದಿರೆ ಯೆರವಿಲ್ಲದೆ ಯಶಸ್ರವೊಡನೊಂದಿರ್ದ್ದಳ್ ॥ ೧೯

ಕಂ॥ ಸಿರಿ ಯುರದೊಳ್ಧರೆ ಭುಜದೊ
ಳ್ಸರಸತಿ ವದನಾಬ್ಜದಲ್ಲಿ ನೆಲಸಿರೆ ಮೆರೆದಂ ।
ಶರದಿಂದು ವಿಮಳಕೀರ್ತಿ
ಸ್ಫುರಿತಾಶಂ ನಳನರೇಶ ನತುಲಿತಕೋಶಂ ॥ ೧೯

ಕಂ॥ ಅಕಳಂಕ ಮದೋಷಾಕರ
ಮಕುಟಿಲತಾಶ್ರಯ ಮಸಾಧುಚಕ್ರಾಬಾಧಂ ।
ಅಕಲಿತಸಂಕ್ಷಯಮೇಂ ದಿ
ಜ್ಞಿಕರಂಬೆಳಗಿದುದೊ ನಲಯಶೋನವಚಂದ್ರಂ ॥ ೨೦

ಕಂ॥ ತ್ರಿದಶರ್ಗೆಯೆ ಕುಡುವವು ಬೇ
ಳ್ಪದನಾ ನಿರ್ಜರರ ಪಶುವು ಮಗಮುಂ ಮಣಿಯುಂ ।
ಪದೆಪಿಂದೆಲ್ಲರ್ಗ್ಗಂ ಬೇ
ಳ್ಪದನೀವನಲಂಗವೆಂತು ಪಾಸಟಿಯೆನಿಕುಂ ॥ ೨೧

ವೃ॥ ಪರಬಲಭೇದಕಂ ಶುಚಿ ಸುದಂಡಧರಂ ಶ್ರಿತರಕ್ಷನಾಪ್ತ ಸಿಂ
ಧುರಚಿತಸತ್ವ ನಂಚಿತಮಹಾಬಲ ನಾಶ್ರಿತಪದ್ಮನಾಪಗಂ ।
ವರವೃಷವಾಹಿ ಯೆಂದೆನೆ ನೆಗಳ್ದನಳಕ್ಷಿತಿನಾಥನಲ್ತೆ ದಿ
ಕ್ಪರಿವೃಢರಂಶದಿಂ ದೊಗೆದಪಂ ನೃಪನೆಂಬುದ ನನ್ನಿಗೈದವಂ ॥ ೨೨

ವೃ॥ ಅರಿಯುವೊಡಾಂತೊಡಂತಕನು ಮಲ್ಪಬಲಂ ಗಡೆಸಿಪ್ಪಬಲ್ಮೆ ಮೇ
ಳೆರೆದವರ್ಗ್ಗೀವೊಡಾಂತೊಡೆ ಮಹಾಕನಕಾದ್ರಿಯು ಮಲ್ಪಮೆಂಬದೊಂ ।

ದಿರವಿನ ಚಾಗಮುಂ ಪೊರೆವೊಡಾಂ ತೊಡೆ ತಚ್ಚತುರಂ ತಭೂಮಿಯುಂ
ನೆರೆಯುದೆನಿಪ್ಪಶಕ್ತಿತನಗೊರ್ವಗೆನಲ್ಕೆಗಳ್ದಂ ನಲಂವಲಂ ॥ ೨೩

ವೃ॥ ವಶಾಪರೀರಂಭ ವಶಂಗಳಾಗಿರಲ್
ದಿಶಾಗಜಂಗಳ್ ವಲಮಾದಿಶೇಷನುಂ ।
ಸ್ವಶೀರ್ಷಭಾರಂಗಳೆದೊಲ್ಮೆ ವೆತ್ತಿರಲ್
ಶಶಾಂಕವಂಶ್ಯಂ ನಲನಾಂತನುರ್ವಿಯುಂ ॥ ೨೪

ಕಂ॥ ಜಲನಿಧಿವರೆಗಂ ನೆಲಸಿದ
ನೆಲವೆಣ್ಮಂಸಿನ ನೃಪಾಲರೊಡನಾಟದಹಂ ।
ಬಲವನೆ ಮರೆ ದೆರವಿಲ್ಲದೆ
ನಲನೃಪನಂ ನಚ್ಚಿಮಚ್ಚಿ ನಲವಾಂತಿರ್ದ್ದಳ್ ॥ ೨೫

ಕಂ॥ ಸಕಲ ವಿಬುಧಾಶ್ರಯಂ ಸು
ಪ್ರಕಟಸುವರ್ಣಾಸ್ಯ ನಾಪ್ತರಾಜಸುಧರ್ಮತ್ವ ।
ಕಲಿತ ನಖಿಲೋರ್ವಿಧಾ
ರಕನೆನಿಸಿದ ನಲನ ಮೇರುವೆನೆ ಬಗೆವುಗದೆ ॥ ೨೬

ವ॥ ಮತ್ತಮಾ ಅಖಂಡ ಮಹೀಮಂಡಲೇಶ್ವರ ನಾಖಂಡಲವೇತಂಡಶುಂಡಾ ಪ್ರಕಾಂಡ ನಿಭದೋರ್ದಂಡ ಮಂಡಿತ ಚಂಡತರ ಕುಂಡಲೀಕೃತಕೋ ದಂಡಕಾಂಡ ಖಂಡಿತ ರಿಪುಮಂಡಲೀಂದ್ರ ಮಂಡಲೀಶಿರಃ ಪುಂಡರೀಕ ಕಲಿತತಾಂಡವಾಲೋಕನಸ್ತಬ್ಧ ಮಾರ್ತಂಡನು ಮಹಮಹಮಿಕಾಭಿ ನತಸಮಸ್ತ ಸಾಮಂತ ಮಹೀಕಾಂತ ಮಸ್ತಕನ್ಯಸ್ತಮಕುಟ ತಟಘಟಿತ ಮಣಿಗಣಕಾಂತಿ ಸಂತಾನದಂತುರ ಚರಣೋಪಾಂತನು ಮಪ್ರತಿಮ ನಿಜಭುಜಪ್ರತಾಪಪ್ರವಾಳಸ್ತಂಭ ಸಮುತ್ತಂಭಿತ ವಿಪುಳ ವಿಮಳಕೀರ್ತಿ ಮುಕ್ತಾಮಯಕಾಯ ಮಾನಚ್ಛಾಯಾಶೀತಳೀಕೃತ ಸಕಲಭೂತಳನು ಮಗಣ್ಯ ಲಾವಣ್ಯ ತಾರುಣ್ಯ ಲಕ್ಷ್ಮೀಪರಿಷ್ಕೃತ ನಿಜಾಂಗರುಚಿ ತಿರ ಸ್ಕೃತ ಕಂತು ವಸಂತ ಜಯಂತ ನಳಕೂಬರಾಶ್ವಿನೇಯ ಪ್ರಮುಖ ಸಿ ಹ್ಮಸಹ್ಮನನು ಮಮಂದಮಂದರ ಮಹೀಧರ ಕ್ಷುಬ್ಧದುಗ್ಧಾಬ್ಧಿಗರ್ಭ

ಸಮಾವಿರ್ಭೂತ ತುಂಗತರತರಂಗ ಪರಂಪರಾ ಗರ್ವ ಸರ್ವಂಕಷ ಸರಸಸಾಹಿತೀಸಮಂಚಿತ ವಾಗ್ವೈಖರೀವಿಶೇಷ ವಿಸ್ಮಾಪಿತಾಶೇಷ ವಿಬುಧವಿತಾನನು ಮನಲ್ಪ ಯಾಚಮಾನ ಜನಸಂಕಲ್ಪ ಕಲ್ಪನಾಕಲ್ಪ ಕಲ್ಪಪಾದಪಕಲ್ಪನು ಮವಾರ್ಯಶೌರ್ಯ ಧೈರ್ಯ ಗಾಂಭೀರ್ಯ ಚಾತುರ್ಯಾದ್ಯನೇಕಗುಣಗಣರತ್ನ ರತ್ನಾಕರನು ಮಖಿಲ ಚಕ್ರವರ್ತಿ ಲಕ್ಷಣೋಪಲಕ್ಷಿತನು ಮೆನಿಸಿ ಪಾಕಶಾಸನನಂತೆ ನಾಕವಿಭವಾಂಚಿತನುಂ, ಪಾವಕನಂತೆ ಸದಾಗತಿಪ್ರಿಯನುಂ, ಧರ್ಮರಾಜನಂತೆ ದಂಡಧರನುಂ, ನೈಋತ್ಯನಂತೆ ಪುಣ್ಯಜನಾಶ್ರಯನುಂ, ವರುಣನಂತೆ ಸಮೃದ್ಧ ವಾಹಿನೀಕನುಂ, ಪವಮಾನನಂತೆ ಶುಚಿಹಿತನುಂ, ಕುಬೇರನಂತೆ ಪದ್ಮಾಧಿಷ್ಠಿತನುಂ, ಈಶಾನನಂತೆ ವೃಷವಾಹನುಮೆನಿಸಿ ನೆಗಳ್ತೆವಡೆದಿರೆಯಿರೆ—ಇತ್ತಲ್.

ವೃ॥ ನದೀನದವಿಶೇಷದಿಂ ಹೃದಯಹಾರಿಕೇದಾರದಿಂ
ಮದಾಳಿಕುಲಝುಂಕ್ರಿಯಾ ಮಧುರ ನಂದನೋದ್ಯಾನದಿಂ ।
ವಿದಗ್ಧ ಮಹಿಳಾಮಣೀ ಪುರುಷರತ್ನಸಂದೋಹದಿಂ
ವಿದರ್ಭಮಣವೊಪ್ಪುಗುಂ ಸಿರಿಗದಬ್ಧಿಯೆಂಬಂದದಿಂ ॥ ೧೭

ವ॥ ಇಂತೆಸೆವ ವಿದರ್ಭದೇಶಕ್ಕಧೀಶನೆನಿಸಿ.

ಕಂ॥ ಶ್ರೀಮಂತ ನಿಲಾತಲಸು
ತ್ರಾಮಂ ಭೂಭರಣ ಕೋವಿದಂ ರಂಜಿಪನುದ್ದಾ ।
ಮ ಭುಜವಿಕ್ರಮಂ ರಿಪು
ಭೀಮಂ ಭೀಮಂ ನರೇಂದ್ರನಿಚಯ ಲಲಾಮಂ ॥ ೧೮

ವ॥ ಆವಿದರ್ಭಪತಿ ಪಲವುಕಾಲ ಮರಸುಗೈಯುತ್ತಿರ್ದ್ದುಮರ್ಭಕರಿಲ್ಲದುದರಿಂ ದುರ್ಭರಮಾದ ಚಿಂತೆಯಾಂತನೇಕ ಪುತ್ರಕಾಮನಾವ್ರತಂಗಳ ನೆಸಗುತ್ತಿರ್ಪ್ಪನ ಮೊಂದುದಿವಸಂ.

ಕಂ॥ ತವಮುಮಂ ತವಿಸಲ್ ಬಪ್ಪಾ
ದ್ಯುಮಣಿಯುಮಂತೆ ನೃಪನ ಚಿಂತೆಯುಂ ಪರಿಹರಿಸಲ್ ।

ದಮನಾಭಿದಾನ ನೋರ್ವಂ
ಶಮಧನಕುಲ ತಿಲಕನೈದಿದಂ ನಲವಿಂದಂ ॥ ೬೯

ವ॥ ಅಂತು ಬಂದ ಮಹರ್ಷಿಯುಮಂ ಕಂಡಿದಿರೇಳ್ದು ಶುದ್ಧಾಂತಕ್ಕೊಡಗೊಂಡು ಬಂದು ನಿಜರಮಣಿವೆರಸು ಭಕ್ತಿ ಮಿಗೆ ಮಣಿದು ಮಣಿಮಯಾಸನದೊಳ್ಮೂರ್ತಿಗೊಳಿಸಿ ಸಮುಚಿತ ಸತ್ಕಾರಂಗೈದು ಬದ್ಧಾಂಜಲಿ ಪುಟನಾಗಿ ಮಹೀಶ ನಿಂತೆಂದಂ.

ಕಂ॥ ದೇವ ಮುನಿನಾಥ ಗೃಹಮಿದು
ಪಾವನವಾದುದು ಭವತ್ಪದನ್ಯಾಸದೊಳಾ ।
ನೇವೇಳ್ವೆ ನತಿಥಿಕುಲ ಸಂ
ಸೇವೆಯೆ ಗೃಹಿ ಗೀವುದೈಹಿಕಾಮುಷ್ಮಿಕಮಂ ॥ ೩೦

ವ॥ ಅಂತರಿಂ ನೀವ್ಮೈತಂದನುಗ್ರಹಮಂ ನಿರವಿಸುತ್ತ ಮೀಪಾರ್ಥಿವನಂ ಕೃತಾರ್ಥನಂ ಮಾಡಲ್ವೇಳ್ಕುಮೆನೆ ದಮನಂ ಸಾನಂದಮನನಾಗಿ ಜನಪನ ದೀನಾನನಮಂ ನಿರುಕಿಸಿ.

ಕಂ॥ ಏನಿದವನೀಶ ತಿಲಕ ನಿ
ಜಾನನಮಿದೆ ಮುಂಜುವೆರೆದ ಕಂಜಾತವಪ್ಪೋಲ್ ।
ಮಾನಸಕಾದಳಲಿಂಗೆ ನಿ
ದಾನಮದೇಂ ಮಾಜದೊರೆವು ದೆಮ್ಮೊಳಗೆಂದಂ ॥ ೩೧

ವ॥ ಅದಂಕೇಳ್ದೊಡಂ ಮಿಗುವರಿವಳಲಂ ತಾಳ್ದು.

ಕಂ॥ ಈ ಪೊಡವಿಯೊಳೆಲ್ಲಾ ಸಿರಿ
ಗೇ ಪೋಳ್ತುಂ ನೋಂತೆ ನಕಟ ಜನ್ಮಾಂತರದೋಳ್ ।
ತಾಪಸನೆ ಸುತನ ಪಡೆಯುವ
ಸೈಪೊಂದಕೆ ನೋಂತುದಿಲ್ಲ ಮೇನದನೊರೆವೆಂ ॥ ೩೨

ವ॥ ಎಂದರಸಂ ಕಂಬನಿದುಂಬೆ ಮುನೀಂದ್ರಂ ಸಂತಮಿಡುತ್ತ ಮಿಂತೆಂದಂ.

ಕಂ॥ ನಯನಿಧಿಯೆ ಪುತ್ರಕಾಮೇ
ಷ್ಟ್ಯಯು ನೆಸಗದರಿಂದೆ ಮಕ್ಕಳಂ ಪಡೆವೈ ನಿ ।

ಚ್ಛಯುವೆಂದು ವರವನಿತ್ತಂ
ದು ಯುಮೀಂದ್ರಂ ನಿಜನಿವಾಸಕ್ಕೈದಿದನಿತ್ತಲ್ ॥ ೩೩

ವೃ॥ ಮುನಿಯೆಂದಂತೆ ವಧೂಯುತಂ ನೃಪತಿವಿಧ್ಯುಕ್ತಂ ಕ್ರತುಪ್ರಾರ್ಥ ವಿ
ಪ್ರನಿಕಾಯಂ ಬೆರಸಂದಮರ್ತ್ಯ ನಿಚಯಂ ಸಂತುಷ್ಟಿಯಂ ತಾಳೆಭೂ।
ಜನರೆಲ್ಲಂ ವಸನಾಶನದ್ರವಿಣ ಭೂದಾನಂಗಳಿಂ ತೃಪ್ತರಾ
ಗೆ ನಿಕಾಮಂ ಮುಖಪಾವಕಂ ತಣಿಯೆ ಗೈದಂ ಪುತ್ರಕಾಮೇಷ್ಟಿಯಂ ॥

ವ॥ ಅನಂತರಂ ಕೃತಾವಭೃಥ ಪವಿತ್ರಗಾತ್ರನು ಮಾಸ್ವಾದಿತ ಸೋಮರಸನು ಮಾಶೀರ್ವಚನ ಪೂರ್ವಕಾನೇಕ ಮುನಿಕರವಿಕೀರ್ಣಾರ್ದ್ರಾಕ್ಷತ ಪೂರ್ಣೋತ್ತಮಾಂಗನು ಮೆನಿಸಿ ನಿಜಾಂತಃಪುರಂಬೊಕ್ಕು ಕಾಂತೆಯೊಡಗೂಡಿ ಸಂತಸಂಬಡೆದಿರೆಯಿರೆ ಯಾವಿದರ್ಭಾಧಿಪನರಸಿ ಗರ್ಭಮಂಧರಿಸಿ.

ಕಂ॥ ತಳೆಯೆ ಮುಖಚಂದ್ರಮಂ ಬೆ
ಳ್ವೆಳಂಗ ವಳಿಪಿಂಗೆ ಬಳೆಯೆ ನೀಡುಂ ಜಠರಂ।
ಬೆಳರ್ವಣ್ಣಮೊಡಲ್ಗಿಣ್ಮಿರೆ
ಪಳುಕಿನ ಪುತ್ಥಳಿಯ ಮಾಳ್ಕೆ ಯಿಂ ಕಣ್ಗೆಸೆದಳ್ ॥ ೩೪

ವೃ॥ ಅಲಸಗಮನಂ ಮಂದಾಲಾಪಂ ಜಡೀಕೃತದರ್ಶನಂ
ಲುಲಿತಚಿಕುರಂ ಮೃತ್ಸ್ನಾಮೊದಾನನಂ ಧುತಮೇಖಲಂ।
ಪ್ರಲಘುವಸನಂ ವೀತಾಹಾರಂ ವಿನೀಲಕುಚಾನನಂ
ಬಲಿದ ಬಸುರೊಳ್ಕಣ್ಗೊಪ್ಪಿತ್ತಾ ತನೂಲತೆತನ್ವಿಯಾ ॥ ಆಗಳ್ ॥ ೩೫

ಕಂ॥ ಗರ್ಭೋತ್ಸವಮಂಮಾಡಿ ವಿ
ದರ್ಭೇಶಂ ಸತಿಯುಬಯಕೆಯಂ ಸಲುಪುತ್ತಾ।
ವಿಭ್ರಾಂತ ಕುತುಕಭರನಿರೆ
ನಿರ್ಭರಮಾದತ್ತು ಗರ್ಭಮಾಶಶಿಮುಖಿಯಾ ॥ ೩೬

ವ॥ ಆಗಳ್ ನವಮಾಸಂಗಳ್ ತುಂಬೆಸಾರ್ತಂದ ಸುಮುಹೂರ್ತದಲ್ಲಿ.

ಕಂ॥ ಕಲಶಜಲನಿಧಿ ಯಿನ್ನೆಂದವ
ಕಲೆಯುದಿಸಿದಮಾಳ್ಕೆಯಿಂದೆ ಸತಿಯುದರದಿ ನು।

ಜ್ವಾಳಗಾತ್ರಿ ಪುತ್ರಿ ಪುಟ್ಟಿದ
ಳಿಳೆ ಯಸ್ಮಾನ ಮನಕೆ ಪುಟ್ಟೆ ಸಂತಸ ಮಾಗಳ್ ॥ ೩೮

ಕಂ॥ ನಗೆಮೊಗದ ಲರ್ಗಣ್ಗಳ ಸಂ
ಪಗೆಮೂ ಗಿನಿ ದೊಂಡೆ ದುಟಿಯ ತೆಳ್ಗದಪಿನ ನುಣ್ಗೊಬ್ಬ।
ಗ ರುಗುವ ಚಾರು ಚುಬುಕದ
ಮಗಳಂ ನಡೆ ನೋಡಿ ನಲಿದ ನಾ ಭೀಮ ನೃಪಂ ॥ ೩೯

ವ॥ ಅನಂತರಂ ಜಾತೆಗೆ ವಿಧ್ಯುಕ್ತಮೆನೆ ಜಾತಕರ್ಮಂಮಾಡಿ.

ಕಂ॥ ಕುಮರಿ ಯಿವ ಳಮರಿ ಯರುಮಂ
ದಮಿಸುವ ಳಾತ್ಮೀಯ ರೂಪ ವಿಭವದಿ ನದರಿಂ।
ದಮಯಂತಿ ಯೆನುತ್ತಂ ದವ
ಳ್ಗಮರ್ದಿರೆ ಪೆಸರ್ಗರೆದ ರೊಲ್ದು ಜನನೀ ಜನಕರ್ ॥ ೪೦

ವ॥ ಅನಂತರ ಮಾ ಬಾಲೆ ಬಾಲೇಂದು ರೇಖೆಯಂತೆ ಬಳೆಯುತ್ತಿರ್ಪಾಗಳ್.

ಕಂ॥ ಲಾಲಾಜಲದಿಂ ತೀವಿದ
ಬಾಲೆಯ ಬೆಳರ್ಗೆಂಪ ನಾಂತ ಬಾಯ್ಕಂಗೊಳಿಸಿ।
ತ್ತಾಲೋಕಿಸೆ ತೆರೆವ್ರೊಯ್ಲೊಳ
ಕಾಲದೆ ಬಾಯ್ದೆರೆವ ಸಜಲ ಶುಕ್ತಿಪುಟಂ ಬೊಲ್ ॥ ೪೧

ಕಂ॥ ಅರಳೆಲೆಗ ಳೆಸೆಯೆ ನೊಸಲೊಳ್
ಕೊರಲೊಳ್ ಕ್ಮಾಂಗಾಯ್ಗಳಲೆಯೆ ಚರಣಾಂಬುಜ ನೂ।
ಪುರ ಯುಗಳ ದುಲಿಗೆ ಕೊರಲಂ
ತಿರುತಿರುಪುತೆ ಪರಿವ ಳಣುಗಿ ಮಣಿ ಕುಟ್ಟಿಮದೊಳ್ ॥ ೪೨

ಕಂ॥ ಜನನೀಜನಕರ ಕರತಲ
ನಿನದಕೆ ನಲವೆರ್ಚಿ ಕುಣಿವ ದಮಯಂತಿ ಕರಂ।
ನೆನೆಯಿಸಿದ ಳ್ಘನನಾದಕೆ
ನನೆಕೊನೆಯಿಂ ಕುಣಿವ ಸೋಗೆಮರಿ ಯೊಂದಿರವಂ ॥ ೪೩

ಕಂ॥ ಮಣಿ ಕುಟ್ಟಿಮ ದೋಳ್ ಮ್ರಿಪ್ರೋಳೆ
ದಣುಗಿಯು ನಲ್ವರಿ ಜದೇಂ ವಿರಾಜಿಸಿದುದೊ ಥಾ ।
ರಿಣಿ ಯುರಗುವರಿಯು ಚೆಲ್ವಿಂ
ಗಣ ಮುರದೆ ಕಡಂಗಿ ಸೆಳೆದು ತಕ್ಕವಿಸಿದ ವ್ರೋಲ್ ॥ ೬೪

ಕಂ॥ ಮರಕತ ಮಣಿ ಖಚಿತ ಮೆನಿ
ಪ್ಪರಳೆ ಲೆವೆರೆದ ವಳ ವಿಮಳ ಮುಖ ಮಂಡಳ ಮೇಂ ।
ಕರ ಮೆಸೆದುದೊ ತಾವರೆ ತೆರೆ
ತೆರೆಳ್ಪದೆಳೆವಾಸೆ ಗೂಡಿ ರಾಜಿಪ ತೆರದಿಂ ॥ ೬೫

ಕಂ॥ ಅಂಬಳಕೆ ನಡೆಯೊಳಾ ಹರಿ
ಣಾಂಬಕೆ ಮಣಿ ಕುಟ್ಟಮದೊಳೆ ಮಾರ್ಪ್ಪೊಳೆದ ನಿಜಾ ।
ಸ್ಯಾಂಬುಜಮ ನೋಡಿ ದಾ ದಾ
ಎಂಬಳ್ ಪೆರತೆಂದು ಬಗೆದು ನಗೆ ಮಿಗೆ ಮೊಗದೋಳ್ ॥ ೪೬

ಕಂ॥ ಸುರಿ ತರ್ಪಲಾಲದಿಂ ದೊಡ
ವೆರೆ ದಣುಗಿಯು ಹಾಸವಲ್ಲಿ ಬಿಟ್ಟುದುಗಡ ಮೊಂ ।
ದೆರಡು ಮುಗುಳ್ಗಳನೆನೆ ಭಾ
ಸುರತೆಯು ನೊಳ ಕೈದ ಪಂದ ಮುಗೆ ಮೊಳೆವಲ್ಗಳ್ ॥ ೪೭

ಕಂ॥ ಏನೊಂ ದರ್ಥಮು ಮಿಲ್ಲದೆ
ಜೇನೆ ಯ್ಸೋನೆಯ ಕೊಡಂಕೆ ಗೆರೆದತ್ತು ಮಹೀ ।
ಜಾನಿ ಯಣುಗಿಯ ತೊದಲ್ ಮೀ
ಣಾನುಗತ ಸ್ವರ ವಿತಾನ ತಾನದ ತೆರದಿಂ ॥ ೪೮

ಕಂ॥ ಅಂತವುರಂ ಕಮಲಾಕರ
ದಂತಿರ ಉದರಂತರದೊಳೆ ದಟ್ಟಡಿ ಯಿಡುತಂ ।
ತಿಂ ತೊಲೆಯುತೆ ಚರಿಯಿಪ ದಮ
ಯಂತಿ ಕರಂ ತಳರ್ಪಬಾಲ ಹಂಸಿವ್ರೊಲೆಸೆದಳ್ ॥ ೪೯

ವ॥ ಇಂತು ದಮಯಂತಿ ತನ್ನ ಬಾಲಲೀಲೆಯಿಂ ಜನನೀ ಜನಕರ ಮನಮಂ ಸಂ
ತಸಂ ಬಡಿಸುತ್ತಿರೆಯಿರೆ.

ಕಂ॥ ಕ್ರಮದಿಂ ಪುಟ್ಟಿದರಾ ಭೀ
ಮ ಮಹೀಪಾಲಕನ ಸತಿಯ ಪುಣ್ಯೋದರದೊಳ್ ।
ದಮ ದಾಂತ ದಮನ ರೆಂಬಾ
ಕುಮಾರಕ ಮೂರ್ವ ರಧಿಕ ತೇಜೋ ಮಹಿತರ್ ॥ ೫೦

ವ॥ ಇಂತೊಗೆದ ಮೂವರನುಜರೊಡನೆ ತನುಜೆ ವರ್ಧಿಸುತ್ತಿರೆ ಮನುಜೇಂ
ದ್ರಂ ನೋಡಿ ಸತಿಯೊಡನೆ ಸಂತಸಗಡಲೊಳೋಲಾಡಿ ಬಳಿಕವರ್ಗೆ
ವಿದ್ಯಾಭ್ಯಾಸ ಸಮಯಂ ಸಾರ್ತಂದುದ ನರಿದು ಸಕಲವಿದ್ಯಾ ವಿಶಾರದ
ರೆನಿಪುಪಾಧ್ಯಾಯರಂ ಬರಿಸಿ ಪಿರಿದು ಮನ್ನಣೆಗಳಂ ಮನ್ನಿಸಿ ನಾಲ್ವರು
ಮಂ ಮಕ್ಕಳ ನೋದ ಲಿಟ್ಟಾಗಳ್.

ಕಂ॥ ಕನ್ನಡಿಯೊಳ್ಕೊಂಡಂ ತಾ
ಜೊನ್ನೊಡಲನ ಕಲೆಯ ಕಳೆಯ ನೊಳಕೊಂಡತ್ತಾ ।
ಕನ್ನೆಯ ಸನ್ಮತಿ ಗುರು ವುಸಿ
ರ್ದನ್ನಮೆ ತನ್ನಿರ್ಮಲತೆಯ ನೇಂಬಣ್ಣಿಪುದೋ ॥ ೫೧

ವ॥ ಅಂತಾ ದಮಯಂತಿಯುಂ ದಮ ದಾಂತ ದಮನರುಂ ವಿದ್ಯಾ ವಿಚಕ್ಷಣ
ರಾದುದ ನುಪಾಧ್ಯಾಯರಿ ನರಿದು ವಿದರ್ಭಾಧಿಪಂ ಪರಿಮಿತ ವಿಬುಧ
ಗೋಷ್ಠಿವೆರ ಸವರಂ ಪರೀಕ್ಷಿಸ ಲ್ಬಗೆ ದಂದಾಗಳ್.

ಕಂ॥ ವೇದಂ ವೇದಾಂಗಂ
ಮೊದ ಲಾದುದರೊಳ್ರಾಜ ನೀತಿಯೊಳ್ನಾಡೆ ಧನು
ರ್ವೇದದೊಳಂ ನೈಪುಣ್ಯಮ
ನಾದಮನುಂ ದಾಂತ ದಮನರುಂ ಪ್ರಕಟಿಸಿದರ್ ॥ ೫೨

ವ॥ ಅನಂತರಂ ದಮಯಂತಿ ದರ್ಶಿತ ವಿನಯೆಯಾಗಿ.

ಕಂ॥ ಜೇಯೆನೆ ವಿಬುಧಾವಳಿ ರಾ
ಮಾಯಣ ಮುಖ್ಯೇತಿಹಾಸ ಕಥನಂಗಳೊಳಂ ।
ಸ್ತ್ರೀಯೋಗ್ಯ ಮಾದ ಶಾಸ್ತ್ರನಿ
ಕಾಯದೊಳಂ ಕನ್ಯೆ ತೋರಿದ ಳ್ಕೌಶಲಮಂ ॥ ಮತ್ತಂ ೫೩

ಕಂ॥ ಸಂಗೀತ ಸಾಹಿತೀ ಹೃದ
ಯಂಗಮ ಶಿಲ್ಪಾದಿ ಕಲೆಗಳೊಳ್ ನೈಪುಣ್ಯಂ ।
ಸಂಗಳಿಸೆ ಬಾಲೆ ಮೆರೆದಳ್
ಸಂಗತ ಮಾದಂತೆ ಕನಕದೊಳ್ ಸಾರಭ್ಯಂ ॥ ೫೪

ವ॥ ಮತ್ತಂ ಮುನ್ನಮೆ ಶ್ರುತಿಗೈದ ತನ್ನ ಚೆನ್ನಮಾಣಿಕ ಬೀಣೆಯಂ ನುರಸ್ಥಲದೊಳ್ತಳೆದು.

ಕಂ॥ ವೀಣಾ ರಂಗದೆ ನರ್ತಿಪ
ವಾಣಿಯ ಪೊನ್ನಂದು ಗೆಗಳ ಮೆಲ್ಲುಲಿ ಯೆನೆ ನಿ ।
ಕ್ವಾಣಂ ಬಗೆಯಂ ಸೆರೆಗೊಳೆ
ಜಾಣಿಂ ಕಲವಾಣಿ ಬೀಣೆಯಂ ಬಾಜಿಸಿದಳ್ ॥ ೫೫

ಕಂ॥ ಬೀಣೆ ದನಿಗಿಂ ಗೊರ ಲ್ದನಿ
ಗೊಣಯ ಮಿಲ್ಲೆನೆ ನೆಗಳ್ದವಾಣೀ ಸ್ತವಮಂ ।
ಜಾಣಿಂ ಪಾಡಿದಳಾ ಕಲ
ವಾಣಿ ಸುಧಾ ವೃಷ್ಟಿ ಸೂಸೆ ಕೇಳ್ವರ ಕಿವಿಯೊಳ್ ॥ ೫೬

ವ॥ ಬಳಿಕ ಮಾಭೀಮನೃಪಾಲಂ ಮಕ್ಕಳ ವಿದ್ಯಾ ನೈಪುಣ್ಯಕ್ಕೆ ಮೆಚ್ಚಿಸಂತಸಂ ಮಿಗೆ ತಕ್ಕವಿಸಿ ಪಿರಿದು ಮನ್ನಣೆಗಳಿಂ ದುಪಾಧ್ಯಾಯರಂ ಮನಂದಣಿಯೆ ಮನ್ನಿಸಿ ಬೀಳ್ಕೊಟ್ಟು ಕನ್ನೆಗೆ ಪೊನ್ನ ಕನ್ನೆಮಾಡಮ ನೊಡರ್ಚಿ ಕನ್ಯಾಶತಮಂ ಪರಿಚರ್ಯೆಗೆ ನೇಮಿಸಿ ಕಾಂತೆಯುಂ ತಾನುಂ ಕನ್ನೆಯೀ ಕಣ್ಣಾಗಿಸಲಪುತ್ತಿರೆಯಿರೆ.

ವೃ॥ ನಗೆಮೊಗದಲ್ಲಿ ಬಲೆಯ್ತ್ರಡವಿ ಮೂಡಿದುದು ಪುಳ್ಕಲ ರಾದಮಕ್ಷಿಗ
ಳ್ಮಗಮುಗಿಸಿತ್ತು ತೋಳ್ಕ್ಮದ ಲೊಡ ಲ್ಪಡಮಾದುದು ಸುಣ್ಪನಾಳ್ದಪ್ರೋ।
ರುಗಳೆಡೆಯಿಂಬು ಮೆತ್ತುದು ನಿತಂಬ ಯುಗಂ ನಿಡಿದಾಯ್ತು ಬಾಸೆ ಬ
ಲ್ಮಗುಳ್ಗೆಣೆ ಯಾಯ್ತು ರೋಜಯುಗಳಂ ಪೊಸಜೌವನದೊ
ಳ್ತ್ರೈಗಾಕ್ಷಿಯಾ ॥ ೫೭

ಕಂ॥ ಒಕೆಂದುಟಿ ಕೆಂದಳಿ ರೆಂದೆನೆ
ಮಂದಸ್ಮಿತ ಮುಳ್ಳರಲ್ದ ಸುಮ ಮೆಂದೆನೆ ಪೆಂ।
ಪೊಂದಿರ್ಪ ಬಾಸೆ ಲತೆಯೆನೆ
ಬಂದುದು ಜವ್ವನಮೊ ವನಮೊ ಪೇಳೆನ ಲೆಸೆಗುಂ ॥ ೫೮

ಕಂ॥ ಬಗೆ ಲಜ್ಜೆ ಯೊತ್ತುಗೊಂಡುದು
ನಗೆ ಕದಪ ನಲರ್ಚಿದತ್ತು ನಡೆ ಕೊಂಕಿತು ನಾ।
ಲಗೆ ವಾತು ಕಣ್ಗೊಳಾದುದು
ಬಿಗುಪಾಂತುದು ಪುರ್ವು ಪರ್ವ ಶಶಿಮುಖಿಗಾಗಳ್ ॥ ೫೯

ವೃ॥ ನಗೆ ಮೊಗ ಮಿಂದುವಂ ನಗೆ ಕುರುಳ್ಮಗಿಲಂ ನಗೆ ಶಂಖಮಂ ಗಳಂ
ನಗೆ ನಯನ ದ್ವಯಂ ಕುಮುದಮಂ ನಗೆ ಪುರ್ವುಗಳಿಕ್ಷು ಚಾಪಮಂ।
ನಗೆ ತುಟಿ ತೊಂಡೆಯಂ ನಗೆ ಸುನಾಸಿಕೆ ಚಂಪಕ ಪುಷ್ಪಕೋಶಮಂ
ನಗುವಳಮರ್ತ್ಯಕಾಂತೆಯುರುಮಂ ದಮಯಂತಿ ಯದೊಂದು ಚೆಲ್ವಿನಿಂ

ಕಂ॥ ಸಿರಿಗೆ ಸರಿ ಮಿಗಿ ಲೆನಿಪ್ಪೊ
ಳ್ವರಿಜೆಂದಂ ಸೊಬಗಿನಿಂದ ವೈಸಿರಿಯಿಂದಂ।
ಸುರುಚಿರ ಯೌವನ ಲಕ್ಷ್ಮೀ
ಪರಿಷ್ಕೃತಾವಯವೆ ಭೀಮ ತನುಭವೆ ಮೆರೆದಳ್ ॥ ೬೦

ವ॥ ಇಂತಾದಮಯಂತಿ ಯಗಣ್ಯತಾರುಣ್ಯ ಲಾವಣ್ಯ ನೈಪುಣ್ಯ ವತಿಯೆನಿಸಿ
ಮೆರೆಯುತ್ತಿರ್ಪಾಗಳ್.

ವೃ॥ ನಳನ ಮನೋಜ್ಞರೂಪ ಕುಲವಿಕ್ರಮ ಶೀಲ ವಯೋ ವಿಶೇಷ ಕೌ
ಶಲ ಚತುರಂತ ಭೂಮಿ ವಿಭುತಾದಿಗಳಂ ಕಿವಿಯಾರೆ ಕೇಳ್ದಪೋಂ।

ಪುಳಗೊಳೆ ಮೆಯ್ಯಡಂಗೆ ಬಗೆ ಬಲ್ವಲ ಮುರ್ಬ್ಬಿದ ನೇಹದಿಂದೆ ಕೋ
ಮಳೆ ನಳರಾಜನಂ ಬರೆದಳೊಪ್ಪಿರೆ ತನ್ನಯ ಚಿತ್ತ ಭಿತ್ತಿಯೊಳ್ ೬೧

ವ॥ ಇಂತು ಕಾಂತೆ ನಳನೃಪಾಕ್ರಾಂತಸ್ವಾಂತೆಯೆನಿಸಿ.

ವೃ॥ ಸೀ ಯೆನೆ ಬರ್ಪ ನುಣ್ಚರದೊಳಂಟಿರೆ ಮಿಾಂಟಿದ ತಂತ್ರಿ ಯಿಂಚರಂ
ತೋಯಜ ಗರ್ಭನಂಗನೆ ಯಿವಳ್ನಿಜ ಮೆಂದೆನೆ ಬಾಜಿಪಳ್ಪಯೋ।
ಜಾಯತ ನೇತ್ರೆ ಜಾಣೆಸೆಯೆ ಬೀಣೆಯೊಳಾ ನಳ ಸದ್ಗುಣೋಲ್ಲಸ
ದ್ಗೇಯಮನಾರ್ಯ ಕರ್ಣಪುಟ ಪೇಯ ಮನಂಚಿತ ರಾಮಣೀಯಮಂ॥

ವೃ॥ ಕನಸಿನೊಳಾ ನಳಾವನಿಪನುಜ್ವಲ ಮೂರ್ತಿಯನೀಕ್ಷಿಸುತ್ತೆ ಸಂ
ಜನಿತ ಸುಖಾಶ್ರುವಿಂ ನೆನೆವಳೆಚ್ಚರ ಮಾಗೆ ಕಡಂಗಿ ಕಾಣದೊ।
ಯ್ಯನೆ ಪಲುಬುತ್ತಳಲ್ಪಳೊಡನಾತನ ರೂಪ ನೊಡರ್ಚ್ಚಿ ಭಿತ್ತಿಯೋ
ಳ್ನನೆಕೊನೆ ಮೆತ್ತು ನೋಡಿ ನಲಿವಳ್ ಪಲವೊರ್ಮ್ಮೆ ಕಡಂಗಿ ಕೀರ್ತಿಪಳ್॥

ವೃ॥ ಎನ್ನಯ ಚೆಲ್ವ ತನ್ನ ಚೆಲುವಿಂ ದಿಳೆಕೈದವನಲ್ಲಿ ನಣ್ಪನೀ
ಕನ್ನೆಗಡಾಂತಳೆಂದು ಮುನಿಸಾಂತೆಲೆ ಕಂತುವೆ ಯೆನ್ನ ನಿಂತು ನೀಂ।
ಬನ್ನಬಡಿಪ್ಪೆಯಾ ಎನುತೆ ಪಂಬಲಿಪಳ್ ಮಲಯಾನಿಲಂಗ ಮಾ
ಜೊನ್ನೊಡಲಂಗ ಮಂತು ಸುಗಿವಳ್ ದಮಯಂತಿ ಮನೋಜತಾಪದಿಂ॥

ವ॥ ಇಂತು ಕಾಂತಾಮಣಿ ನಳಮಹಿಕಾಂತನಂ ಮಚ್ಚಿ ಕಂತುಸಂತಪ್ತ ಸ್ವಾಂ
ತೆಯೆನಿಸಿರೆಯಿರೆ ಇತ್ತಲ್ ನಳನೃಪನ ಮಂತ್ರಿಗಳ್ಮಂತಣಂ ಗೊಂಡು.

ಕಂ॥ ವಿವರಿಸೆ ವಿದರ್ಭಪುತ್ರಿಯ
ನವ ರೂಪ ವಯೋ ವಿಲಾಸ ವಿದ್ಯಾ ಗುಣ ವೈ।
ಭವಮಂ ನಳನೃಪ ನಾಲಿಸಿ
ಕಿವಿವೇಟಂ ಗೊಂಡು ತರಳ ಮಾನಸ ನಾದಂ॥ ೬೫

ವ॥ ಆಪ್ರಸ್ತಾವದೊಳ್.

ಕಂ॥ ಗೆಳೆದಾಳಿ ವಿಲ್ಲ ಕೊಪ್ಪಿಂ
ಗಳಿ ದಿರುವಂ ತೊಡಿಸಿ ಕೂರ್ಗಣೆಗಳಂ ದೆಚ್ಚಂ।

ನಳನ ನಿಮಂ ನಿಜರೂಪದಿ
ನಿಳಿಕ್ಕೈದಪ ನೆಂಬ ಮುಳಿಸಿನಿಂ ಕಂದರ್ಪಂ ॥ ೬೬

ವ॥ ಆಗಳ್.

ಕಂ॥ ಪೋರಿತು ಧೃತಿ ಪಾವನೆ ತಲೆ
ದೋರಿತು ತಾರಳ್ಯ ಮೊಡನೆ ಪೀರಿತು ತೇಜ ।
ಸ್ಸಾರವ ನಂಗಜ ಶಿಖಿ ಮಿತಿ
ಮೀರಿತು ಸಂತಾಪ ಮಾಗಳಾ ನಳನೃಪನಾ । ೬೭

ವ॥ ಅಂತು ಕಂತುಸಂತಾಪಿತ ಸ್ವಾಂತ ನಾದೊಡಂ ಧೀರೋದಾತ್ತನಾದುದರಿಂ ಮೆಲ್ಲನೆ ಸಂತೈಸಿಕೊಂಡು.

ಕಂ॥ ದಮಯಂತೀ ಭ್ರೂಚಾಪ
ಕ್ಕಮರ್ಚಿ ತದಪಾಂಗ ಶರದಿ ನಿಸೆ ಕಾಮಂ ತು ।
ತ್ತುಮುರಾದು ದೆನ್ನ ಕಲ್ಲೆರ್ದೆ
ಯುಮಲ್ಲ ದಲರಂಬ ನೆಂಬ ದೇಗೆಯುಲಕ್ಕುಂ ॥ ೬೮

ವ॥ ಎಂದು ನಳನರೇಂದ್ರಂ ತನ್ನೊಳೆತಾನೆ ಪರಿಭಾವಿಸುತ್ತ ಮಾ ದಮಯಂತೀ ಕರಗ್ರಹಣ ವ್ಯಗ್ರಮಾನಸನೆನಿಸಿರೆ ಯಿರೆ.

ವೃ॥ ಪಳೆಯೆಲೆ ಜಾರೆ ಪಾದರಿಗೆ ಮಲ್ಲಿಗೆ ಮೊಗ್ಗೆಯು ನೂರೆ ಮಾಮರಂ
ತಳಿರ್ಗಳ ಪೇರೆ ಕೋಗಿಲೆಗೆ ಸಣ್ಣಸರಂ ತಲೆದೋರೆ ತೀಡಿದಂ ।
ಮಲಯ ಮಹೀಧ್ರ ಕುಂಜ ವಿಚರ ತ್ಖಚರೀ ಕಚ ಫುಲ್ಲ ಮಲ್ಲಿಕಾ
ಗಳಿತ ಮರಂದ ಬಂಧುರ ಸುಗಂಧ ಧುರಂಧರ ದಕ್ಷಿಣಾನಿಲಂ ೬೯

ವ॥ ಮತ್ತಂ.

ವೃ॥ ಬಾರದೆ ಮಾಮರಕ್ಕೆ ಪೊಸ ಕೆಂದಳಿ ರಿಂದುಗೆ ಬಾರದೊ ಳ್ಗದಿರ್
ಬಾರದೆ ಮೊಗ್ಗೆ ಮಾಧವಿಗೆ ಬಾರದೆ ಕೋಗಿಲೆಗಳ್ಗೆ ನುಣ್ಚರಂ ।
ಬಾರದೆ ಮಾರುತಂಗೆ ನರುಗಂಪು ವಿಯೋಗಿ ಜನಕ್ಕೆ ದಂದುಗಂ
ಬಾರ ದದೊಂದೆ ಬಂದುದೆ ವಿರಕ್ತ ದುರಂತ ವಸಂತ ವಾಸರಂ ॥ ೭೦

ವ॥ ಅಂತು ಬಂದ ವಸಂತರ್ತುವಿನೊಳ್ಪರ್ಬಿದ ಕಂತು ಸಂತಾಪವಂ ಸೈರಿಸಲಾ
ರದೆ ನರ್ಮಸಚಿವಂ ಬೆರಸು ನಳಮಹೀಕಾಂತಂ ನಿಜಾಂತಃಪುರದ ಪಿಂತಣ
ನಂದನೋದ್ಯಾನಮಂ ಪುಗುತಪ್ಪಾಗಳ್.

ಕಂ॥ ಆವನ ಮೊಸೆದುದು ನೊಡಿದೊ
ಡಾವನ ಬಗೆಗೊಳ್ಳ ದುಳಿಗು ಮೊಂದೆಂಬಿನ ಮಾ ।
ಕಾವನ ರತಿಯ ವಿವಾಹದ ಕಾ
ವಣ ಮೆನೆ ಶುಕಪಿಕಾಳಿ ಕೃತ ಶುಭ ಗೀತಂ ॥ ೨೧

ವ॥ ಮತ್ತಮಾನಂದನ ವನ ಮಂದಂ ಮಿಗೆ ಬೆಳೆದ ಜಂಬು ಜಂಬೀರ ಲುಂಗ
ಲವಂಗ ನಾರಂಗ ನಾರಿಕೇಳ ಕದಳೀ ಖರ್ಜೂರ ಸರ್ಜಕ ಸರಳ ಸಹ
ಕಾರ ಪನಸ ಪಟೀರ ಕುಟಜ ಕುರವಕಾ ಶೋಕ ಚಂಪಕಾ ದ್ಯನೇಕಾ
ನೋಕಹ ನಿವಹಂಗಳೊಳಂ ದರದಳಿತ ಕುಮುದ ಕಲ್ಹಾರ ಬಕುಳ
ಮಂದಾರ ತಿಲಕ ಕುಂದಾರವಿಂದ ಮಲ್ಲಿಕಾ ಮಂದ ಮಧುರ ಮಕರಂದ
ರಸಾಸ್ವಾದನಾನಂದ ಕೂಜನ್ಮಿಳಿಂದ ಸುಂದರೀಬೃಂದ ಕಲಿತ ಝುಂಕಾರ
ಮುಖರನೀಹಾರ ಶಿಶಿರ ಕಾಸಾರ ವಿಮಳಕಾಸಾರ ಪರಂಪರೆಗಳೊಳಂ
ನೂತನಮೆನೆ ತಳಿರ್ತ ತರುಣ ಚೂತ ಮಹೀಜಾತ ಜಾತಂಗಳ ಕಿಸುರಿಡಿದ
ಕಿಸಲಯ ಪ್ರಸರವಂ ಮಿಂಚುವ ಚಂಚುವಿಂ ದುಡಿದೊ ಸರ್ವರಸಾ ಸಾರ
ವಂ ಸವಿಸವಿದು ಸೊರ್ಕಿ ಸಂಚುಮಿಗಲಿಂ ಚರಂಗೈವ ಚಂಚತ್ಪಂಚಶರ
ಸುಂದರೀ ನಖಾಂಚಲ ನಿಹತ ವಿಪಂಚಿಕಾ ವಿಕಸ್ವರ ಪಂಚಮ ಸ್ವರ
ಪ್ರಪಂಚ ಮಾಧುರೀ ಧುರಂಧರ ಕಲ ಕಂಧರ ಕಲಿತ ಕಾಕಲೀ ಲಲಿತ
ಕೋಕಿಲಾಂಗನೆಯರೊಳಂ ಮತ್ತಂ ತಳಿರ್ತ ತಮಾಲ ತರು ಕುಲಮಂ
ನೆಲಕಿಳಿದ ಕಾರ್ಮುಗಿಲ್ಗೆತ್ತು ಕೂರ್ಮೆವೆತ್ತು ಬಿರ್ಬಿದ ಪಸುರ್ವಿಜ್ಜಣಿಗೆ ಯೆನೆ
ಲೀಲೆ ಮಿಗೆ ಪೀಲಿಗೆದರಿ ನೀಳ್ದ ಕಂಠದಿಂ ರಾಗಂ ಮಿಗೆ ಕೇಗುಗಳಾಗಿಪ
ಸೋಗೆ ನವಿಲ್ಗಳೊಳ ಮೆಜ್ಜವಿಕ್ಕದ ಕೆಂಬರಲ ಸಿರಿಯು ನೊಳಕೊಂಡು
ಬೀಡೆ ಪರಿದ ದಾಡಿಮದ ಬೀಜರಾಜಿಯುಂ ಕೊರ್ಕಿಂ ಕುರ್ಕಿ ಸೊರ್ವ
ತಸಿರಸಮ ಸೀಂಟಿ ಸೊರ್ಕಿ ಬನಸಿರಿ ಬಿನದಂ ಮಿಗೆ ಬಾಜಿಪ

ಸರಪ್ರೋತ್ಥಿತ ಸಂತತ ಚಿತ್ತ್ರರಂ ಮಿಗೆ ಹಿಂಡು ಗೊಂಡು ತೊಂಡು ಗೆಡೆವ ಪಂಡಿತ ಪಕ್ಕಿಗಳ ಕಂಪದೊಳಂ ಕಣ್ಗೆ ಮಂಗಳವಾಗಿ ಮನಕ್ಕೆ ಮಂಜುಳವೆ ನಿಸಿ ಮೆರೆದಿರ್ದ್ದುದಂತುಮಲ್ಲದೆಯುಂ

ಕಂ॥ ಲಸದಪ್ಸರೋ ವಿಲಾಸೋ
ಲ್ಲಸಿತಂ ಮೇಣ್ ಸುರಭಿ ಮರುದುಪಾಶ್ರಿತ ಮೆನಿಪಾ
ವಸುಧೇಂದ್ರನ ನಂದನ ವನ
ಮೆಸೆದುದು ನಂದನ ವನಂಬೊಲಾಯಿಂದಿರನಾ ॥ ೩೦

ವ॥ ಇಂತೆಸೆವ ನಂದನ ವನಮಂ ನಳ ನೊಳಪ್ಪುಗುವಾಗಳ್.

ಕಂ॥ ಇದಿರ್ಗೊಂಡ ನಿಳಾಪತಿಯಂ
ವಿದಳಿತ ವಿಚಕಿಲ ಮರಂದ ಶೀಕರ ಕಿರ ಸಾ
ನ್ಮದ ಮಧುಕರ ಕಲ ನಿನದ
ಪ್ರದರ್ಶಿತ ಪ್ರಣಯ ವಚನ ನುಪವನ ಪವನಂ ॥ ೩೧

ವ॥ ಅಂತು ಬಂದ ಮಂದ ಮಾರುತಂಗೆ ಮೆಯ್ಗೊಟ್ಟು ನಿಜೋಪವನಾ ಲೋಕನದೊಳ್ ಕೂರ್ಮೆಮಿಗೆ ನರ್ಮಸಚಿವ ಪ್ರಸಾರಿತ ಹಸ್ತಾವಲಂಬನಾಗಿ ನಳನೃಪಂ ನಡೆತರ್ಪಾಗಳುಪವನದ ಸುತ್ತಂ ಕೋದಂತಿರ್ದ ಕೇದಗೆ ವೇಲಿಯುಂ ನೋಡಿ ನರ್ಮಸಚಿವಂಗಿಂತೆಂದಂ

ಕಂ॥ ಕೇತಕಿ ಯಿದೊಂದೆ ಗಡ ಸಾ
ಕೇತಕಿ ಪೃಳಿದಂಬು ವಿರಹಿ ಜಯಕೇಂ ದಾರ್ಸ್ಯಂ ।
ಪಾತಕಿ ಮದನ ನಿದರ ಸಂ
ಪಾತಕಿ ದಿಗ್ಬ್ರದ ವಿಯೋಗಿಯೆರ್ದೆ ಬಿರಿಯದೆ ಪೇಳ್ ॥ ೩೨

ವೃ॥ ವಿಕಚಂ ವಿಯೋಗಿ ಹೃದಯ
ಕ್ರಕಚಂಬೊಲ್ಮೆರೆವ ಕೈತಕಂ ಮಧುಪಾನೋ
ತ್ಸುಕ ಚಂಚರೀಕ ನಿಚಿತಂ
ಸುಕಚಂ ತಾನೆನೆ ವಿರಾಜಿಕುಂ ಬನಸಿರಿಯಾ ॥ ೩೩

ಕಂ॥ ವಾತಾವಧೂತ ನೂತನ
ಕೈತಕವುಂಗಜನ ಕೇತು ಪಟ ವೆನೆ ಮಧುನಿ
ಷ್ಪಾತಿ ಮದ ಚಂಚರೀಕ
ವ್ರಾತಂ ಬರೆದವನ ಬಿರುದ ಮಾಲೆ ಯೆನಿಕ್ಕುಂ ॥ ೭೬

ವ॥ ಎಂದೈತರ್ಪಾಗ ಳ್ಕಟ್ಟೆದಿರೊಳ್ ಸೆವ ಬಾಲ ರಸಾಲಮುಂ ನೋಡಿ.

ಕಂ॥ ಕಿಸುರಿಡಿದ ಕಿಸಲಯಂಗಳ್
ಮುಸುಂಕೆ ಕರ ಮೆಸೆವ ಮಾಮರಂ ಕಂಗೊಳಿಕುಂ।
ಕುಸುಮಾಸ್ತ್ರನ ಜಯ ಯಾತ್ರೆಗೆ
ಬಸಂತ ನೆತ್ತಿಸಿದ ಮಿಸುನಿ ಗೂಡಾರಂಬೊಲ್ ॥ ೭೭

ಕಂ॥ ಕಲ ತಂತ್ರೀ ರವ ಮೆನೆ ಕೋ
ಮಳ ಪಲ್ಲವ ರಸನಿಷೇವಿ ಕೋಕಿಲ ನಿನದಂ।
ಕಲಿತ ಪ್ರವಾಳ ಮೇಂ ಬಗೆ
ಗೊಳಿಪುದೊ ಮಧು ನುಡಿಪ ಬೀಣೆ ಯೆನೆ ತರುಣಾಮ್ರಂ ॥ ೭೮

ಕಂ॥ ಭೃತ ಕುಸುಮ ವಿಸರ ಧವಳೀ
ಕೃತ ಮೇನೆಸೆವುದೊ ರಸಾಲ ಮಳಿಕುಲ ರವ ಬೃಂ।
ಹಿತ ಮುಪವನ ವನಧಿಸಮು
ತ್ಥಿತ ಮೈರಾವತ ಮೆನಲ್ ವಸಂತೇಂದಿರನಾ ೭೯

ವ॥ ಎಂದ ನಳನೃಪಂಗೆ ನರ್ಮಸಚಿವ ನಿಂತೆಂದಂ.

ಕಂ॥ ನೂತನ ಕಿಸಲಯ ಕುಸುಮ
ವ್ರಾತದೊಳಂ ಪಕ್ವಫಲದೊಳಂ ನೃಪ ನಿನಗೊ
ಲ್ದಾತಿಥ್ಯವ ನೆಸಪವೊಲಿದೆ
ಚೂತಂ ಕಲ ಮಧುರ ಶುಕವಚ ಸ್ಸ್ವಾಗತದಿಂ। ೮೦

ವ॥ ಅದಂ ಕೇಳ್ದು ಸಂತಸಂ ದಾಳ್ದು ನರ್ಮಸಚಿವಂಗೆ ನಳನೃಪ ನಿಂತೆಂದಂ

ಕಂ॥ ತನಗೆ ತಳಿರಂಬ ಮೇಣ್ ಶಿಂ
ಜಿನಿ ಯಾದಳಿ ಗಲರ ರಸವ ನೇರುವ ಗಿಳಿಗಂ ।
ತನಿವಣ್ಣಂಕುಡ ಲಿನಿವಿಲ್ಲ
ನಿ ನಾದುದು ಗಡ ಮದಕ್ಕೆ ಸಹಕಾರಾಖ್ಯಂ। ೮೧

ವ॥ ಎಂದೈತರುತ್ತಮಿರೆ.

ಕಂ॥ ಶುಕ ಚಂಚೂ ಸನ್ನಿಭ ಕಿಂ
ಶುಕ ಮುಕುಳಾ ವಳಿ ವಿರಾಜಿಸಿದುದು ವಿಯೋಗಿ ।
ಪ್ರಕರಮ ನಾರ್ದಿಸೆ ಕಾಸಿದ
ಮಕರ ಧ್ವಜ ನರ್ಧಚಂದ್ರ ಬಾಣಂಗಳ ವೋಲ್ ೮೨

ಕಂ॥ ಬನಸಿರಿ ಬಸಂತನೈತರೆ
ನನೆಕೊನೆವೆತ್ತೊಡನೆ ಕೆದರ್ದ ಮುಕ್ತಾಂಜಲಿ ಯೆಂ ।
ಬಿನೆಗಂ ಮಲ್ಲಿಗೆ ವಳ್ಳಿಯ
ಕೊನೆ ವರೆಗಂ ಕೋದ ನನೆಗಳೇಂ ಮಿನುಗಿದುವೊ ॥ ೮೩

ಕಂ॥ ತುಂಬಿಗ ಳೊಳ್ಸಂಪಗೆ ಗಂ
ಪುಂಬೊಡೆ ಕೊಂಬೆಗಳ ನೆಮ್ಮಿ ತಪಮಿರ್ಪವೋ ಪೇ ।
ಳಂಬಿನ ಮೇಂ ಬೆಡಗಾಂತುದೊ
ಜಂಬೂ ಶಾಖಾವಲಂಬಿ ಫಲ ನಿಕುರುಂಬಂ ೮೪

ಕಂ॥ ವನವನಧಿ ತೀರದೊಳ್ಸಂ
ಜನಿಸಿದ ಚೆಂಗುಡಿಯ ಕುಡಿಗ ಳಂಬಿನೆಗ ಮಣಂ ।
ಮಿನುಮಿನನೆ ಮಿನುಗುತಿರ್ದುವು
ನನೆ ದೀವಿದ ಪಾಟಲೀ ದ್ರುಮಂಗಳ ಕೊನೆಗಳ್ ॥ ೮೫

ಕಂ॥ ಬನಸಿರಿ ಮಾಧವ ನೈತರೆ
ಮನದೊಲವಿಂದಂದು ಬೆಳಗ ಲೆತ್ತಿದ ನೀರಾ ।
ಜನದ ಸೊಡರ್ಗುಡಿಗ ಳೆನ ಲೇಂ
ಮಿನುಗಿದವೋ ಸೊಂಪು ಗರೆವ ಸಂಪಗೆ ನನೆಗಳ್ ॥ ೮೬

ಕಂ॥ ಸುರಿದೋಕುಳಿ ಯೆಂದೆನೆ ಬನ
ಸಿರಿಗಾ ಪ್ರಥಮರ್ತು ವಿಭವದೊಳ್ಪರೆದಲತಾಂ ।
ತರುಚಿ ಲತಾಂಗನೆಯರ್ ಕೈ
ಪರೆಗುಟ್ಟುತ ಪಾಡುವವೊಲ್ ಅಳಿಧ್ವನಿಮೆರೆಗುಂ ॥ ೮೭

ಕಂ॥ ಸುಮನಸ್ತತಿ ಗಾಮೋದಮ
ನಮರ್ಚಿ ಕಮಲಾಕರ ಗೃಹಂ ಶೋಭಿಸೆ ತ ।
ಳ್ತು ಮದನಜನಕತೆಯಿಂ ಸಂ ।
ತ ಮೆಸೆವ ಮಧುಸುಚಿತ ಮಲ್ತೆ ಮಾಧವ ನಾಮಂ ॥ ೮೮

ವ॥ ಎಂದು ನಳನೃಪಂ ಬರೆವರೆಕಟ್ಟೆದಿರಲ್ಲಿ.

ವೃ॥ ಸ್ಫುಟಾಬ್ಜ ಪಟಲೀ ರಟ ನ್ಮಧು ಮದಾಳಿ ವಾಚಾಲಿತಂ
ನಟತ್ಕಲ ಶಿಖಾವಲಂ ಸ್ಫಟಿಕ ಬದ್ಧ ಸೋಪಾನಕಂ ।
ತಟೀ ಘಟಿತ ಮಲ್ಲಿಕಾ ಬಕುಳ ಮಾಲತೀ ವಾಸಿತಂ
ತಟಾಕ ಮೆಸೆದ ತ್ತದೊಂ ದುರು ತಟೀಕ ಮುಚ್ಛೋದಕಂ ೮೯

ವ॥ ಮತ್ತಮಾಸರೋವರಂ.

ಕಂ॥ ಅಮಳಿನಜೀವನದೆ ಸದಾ
ಳಿಮೋದಕಾರಿತೆಯಿ ನನಿಮಿಷಾ ಸೇವನೆಯಿಂ ।
ಕಮಲಾಕರ ಮಾಯ್ತು ಸರಂ
ಸಮನಿಸೆ ಸಿರಿ ಗುಣಮೆ ಮುಖ್ಯಕಾರಣ ಮಲ್ತೆ ॥ ೯೦

ಕಂ॥ ಅರುಣಾಂಬುಜ ಮಂತರದೊಳ್
ಮಿರುಗುವ ಕೆಂಬರಲ ತರಲದಂತಿರೆ ಸಸಿಗಲ್ ।
ಸರ ಮಾದುದು ಬನಸಿರಿ ಗಾ
ಸರಸಿ ಯದಲ್ಲದೊ ಡದಕ್ಕೆ ಸರ ಮೆಸರೆಂತೋ ॥ ೯೧

ಕಂ॥ ವಿಮಲತೆಯಿಂ ವೃತ್ತತೆಯಿಂ
ಕುಮುದಾಪ್ತತೆಯಿಂದ ಮೆಸೆವ ಶಶಿ ಯಾಸರದಿಂ ।

ದಮೆ ಸಂಜನಿಸಿದ ನಕ್ಕಂ
ಸಮನಿಕುಮುಳೆ ಕಾರಣದ ಗುಣಂ ಕಾರ್ಯದೊಳ್ಂ ॥ ೯೨

ವೃ॥ ಅಲರ್ದಬುಜಂ ಮೊಗಂ ಶಫರ ಮಂಬಕ ಮುನ್ಮದ ಭೃಂಗ ಸಂಚಯಂ
ಚಲದಳಕೋತ್ಕರಂ ಕಮಲ ಕೋಶ ಮುರೋರುಹ ಮೂರ್ಮಿಸಂಕುಲಂ
ವಳಿ ಸುಳಿ ನಾಭಿ ಪಾವಸೆಯೆ ಬಾಸೆ ಯದಾಗೆ ಪರಾಗವಾಸೆ ಕಂ
ಗೊಳಿಸಿದು ದಾಗಳಾ ಸರಸಿ ಸುಂದರಿ ಯಂದದೆ ಮುಂದೆಭೂಪನಾ ॥ ೯೩

ವ॥ ಇಂತೆಸೆವ ಸರಸಿಯು ಸಿರಿಯು ನರಸಂ ನಿರುಕಿಸುತ್ತಿರೆಯಿರೆ.

ಕಂ॥ ವಾತಾ ವಧೂತ ಮಭ್ರ
ಸ್ರೋತಸ್ವಿನಿ ಯಮಳ ಫೇನ ಪಿಂಡೌಘಂ ಧಾ ।
ತ್ರೀತಳಕೆ ಕೆಡೆದು ದೆಂಬಿನ
ಮೈತಂದುದು ಹಂಸ ವಿತತಿ ಸರ ಕಾಗಸದಿಂ ॥ ೯೪

ವ॥ ಅಂತಿಳಿದಕಲ ಹಂಸಕುಲದಲ್ಲಿ.

ಕಂ॥ ದಮಯಂತೀ ಸಂಘಟನ
ಕ್ಷಮ ನನುರಾಗಾನನಂ ದ್ವಿಜಂ ನಳರಾಜೋ ।
ತ್ತಮನ ಬಳಿ ವರ್ಪವೋ ಲ್ಕನ
ಕಮಯಂ ಕಲಹಂಸ ನೊಂದು ಸುಳಿದ ತ್ತಿದಿರೋಳ್ ॥ ೯೫

ವ॥ ಅಂತುಸುಳಿದನಂತರಂ

ಕಂ॥ ಕಮಲಜನ ಯಾನಮೆನಿಸಿ
ರ್ದ್ದಮರಾಳಮದಾತನಂತೆ ತಾನುಂ ಪದಪಿಂ ।
ಕಮಲಾಸನ ನಾ ಗೆಸೆದುದು
ಕಮಲಾಕರದೊಳ್ಮನೋಜ್ಞ ಕಮಲಾಕರದೊಳ್ ॥ ೯೬

ವ॥ (ಅಂತು ಕುಳ್ಳಿರ್ಪ ಕನಕಪಕ್ಷ ಕಲಹಂಸನಂ ಕಂಡು ಕೌತುಕಂಗೊಂಡು

ಕಂ॥ ಸುಳಿ ದುಲಿಪು ದೋರದಂತಾ
ಕಲ ಹಂಸನ ನೆಗೆಯದಂತು ಕರದಿಂ ಪಿಡಿದಂ ।

ನಳನಾ ದಮಯಂತಿಯ ಕೇೞ
ಮೞಪದಕಲ ಹಂಸಕಮನೆ ಪಿಡಿದಂತಾಗಳ್ ॥ ೯೭

ಕಂ॥ ಕರಮಂ ಕೊರ್ಕಿಂಕುರ್ಕಿದು
ದೆರಂ ಕೆಯುಂ ಬಡಿದು ದಡಿಗಳಿಂ ಪರಚಿದುದು ।
ಬ್ಬರಿಸಿದು ದೆಂಟುಂ ದೆಸೆಗಳ
ನಿರುಕಿಸಿದುದು ಪದರ್ದುದಾರ್ದುದಾ ಕಲಹಂಸಂ ॥ ೯೮

ವ॥ ಆಗಳ್.

ಕಂ॥ ಅಕ್ಕಟ ನಳನ ಕರಾಗ್ರದೆ
ಸಿಕ್ಕಿದರಾಯಂಚೆ ಯುಳಿದುಪೋಗದೆ ನಭದೋಳ್ ।
ಮಿಕ್ಕಂಚೆವಿಂಡೊರಲ್ದುದು
ಪಕ್ಕಿಗಳುಮ ನುಳಿಯದಲೆ ಸಜಾತ್ಯಭಿಮಾನಂ ॥ ೯೯

ವ॥ ಆಗಳಾನಳನೃಪಂ ನಿಜಕರದೆ ಸಿಲ್ಕಿತಳಮಳಿಪ ಕಲಹಂಸನಂ ನೋಡಿ ಮರುಕಂ ಗೂಡಿಯಂಗೈಯಿಂದದರ ಪೊಂಗರಿಗಳಂ ಸಮರಿ ಸಂತಮಿರಿಸಿ ನರ್ಮಸಚಿವಂಗಿಂತೆಂದಂ.

ಕಂ॥ ಅರಸಂ ಚೆಗಳ್ಗಮೇ ನೀ
ಧರೆಯೊಳ್ಪೊಂಗರಿಗಳ ಮಮಮೂಡಿರ್ದ್ದ ಪವ ।
ಚ್ಚರಿಯುಂ ಪೆರ್ಚ್ಚಿಕು ಮಾರಯೆ
ವಿರಂಚಸೃಷ್ಟಿಯೊ ಳದೃಷ್ಟ ಪೂರ್ವ್ವ ಮಿದಲ್ತೆ ॥ ೧೦೦

ವ॥ ಎಂದುನುಡಿದ ನಳನಂ ನೋಡಿ ಹಂಸಂ ಹಿಂಸಾಭಯಂ ಗೂಡಿನಾಗರಿಕ ವಾಕ್ಯದಿಂ ನುಡಿದುದದೆಂತೆಂದೊಡೆ.

ಕಂ॥ ಅನಲ್ತೆ ರಾಜಹಂಸಂ
ನೀನೆಂತೊರೆ ರಾಜಹಂಸ ನೆಂದೆನ್ನನದೇಂ ।
ಭೂನಾಥ ಪಿಡಿದೆಯೋ ನಭಿ
ಮಾನಂ ಮಿಗೆ ನಾಂ ದ್ವಿಜಂ ಗಡುಳಿದಪು ದೆನ್ನಂ ॥ ೧೦೧

ಕಂ॥ ಸಿರಿಗೆರೆಯು ನಾಗಿಯುಂ ನೀ
ನರಸಾ ನಿನಗೆನ್ನ ಪೊನ್ನ ಗರಿಯೊಳಮಿನಿತಾ ।
ದರ ಮಾಯ್ತು ಸಾಕು ತೆಗೆ ಯಿದ
ಪರಿದು ಕೊಳಲ್ ನಿನ್ನ ಕೋಶಮೇಂ ತೀವುಗುಮೆ ॥ ೧೦೨

ಕಂ॥ ಆರುಮ ನಳಲಿಸ ದಿಳೆಯು ವ
ನಾರಾಮ ಸರೋವರಂಗಳೊಳ್ ಫಲ ಸಲಿಲಾ ।
ಹಾರದೆ ಚರಿಪೀ ದ್ವಿಜನಂ
ಬಾರಿಸೆ ದೋಷಮಲೆ ನಿನಗೆ ಶೂರೋತ್ತಂಸಾ ॥ ೧೦೩

ಕಂ॥ ಎನಗಾಗೊರಲ್ವುದದೊ ಬಂ
ಧು ನಿಕಾಯಂ ನೋಡುಮೇ ಣ್ಮದಂಬಿಕೆ ಯದೊ ಲೋ ।
ಚನ ಜಲಮಂ ಕರೆದಪಳೆಂ
ನಿನಿಯಳಮರುಕಂತುಟೆಂತುಟೆಂಬುದಶಕ್ಯಂ ॥ ೧೦೪

ಕಂ॥ ಅದರಿಂ ದೆನ್ನಂ ಬಿಡು ಸ
ದ್ಹೃದಯ ದಯಾವಾರ್ಧಿ ಮಾಳ್ಪೆನಾಂಪ್ರಿಯ ಮೊಂದಂ ।
ಇದಕಾಂ ತಪ್ಪಿದೊ ಡೆಲೆ ಭೂ
ಸುದತೀಪತಿ ಯಾಂ ಕೃತಘ್ನನಘಕೆಡೆ ಯಪ್ಪೆಂ ॥ ೧೦೫

ವ॥ ಎಂದರಸಂಚೆ ಯೆಂದುದಂ ಕೇಳ್ದು ನಳನರೇಂದ್ರಂ ಕಾರುಣ್ಯಂದಾಳ್ದು ಇದೊ ಬಿಟ್ಟೆಂನೀ ನೆನಗೆ ಮಾಳ್ಪಪ್ರಿಯ ಮಾವು ದುಸುರೆನೆ ಹಂಸಂ ನಳ ರಾಜಶೇಖರನಿಂ ಬಂಧಮುಕ್ತಿ ಯೊಂದಿ ಸಂತಸಂ ಮಿಗೆ ಬಡನಾಡಿಯುಂ ಚೆವಿಂಡಿನೆಡೆ ಗೈದಿ ನಸುಪೊಳ್ತು ಸಡಗರಿಸುತಿರ್ದು ಮಗುಳೆ ನಳನೃಪನ ಕರಕಮಲಮಂ ಸಾರ್ದು ದಮಯಂತಿಯ ವೃತ್ತಾಂತಮಂ ಪೇಳಲು ಪಕ್ರಮಿಸಿದುದೆಂತೆನೆ.

ಕಂ॥ ಭೂಮೀಶ ಕೇಳೆ ಬಲ್ಲೈ
ಭೀಮ ಮಹೀ ಪತಿಯ ಸುತೆಯ ವೃತ್ತಾಂತಮ ನಾ ।

ಭಾಮೆಯ ಸೌಂದರ್ಯವ
ಸುತ್ರಾಮಾಚಾರ್ಯಂಗ ಮೊರ್ವ್ವಗೆ ಬಣ್ಣಿಸ ಲಳವೇ ॥ ೧೦೬

ಕಂ॥ ದಮ ಮುನಿಯ ವರದಿ ನಾ ಭೀಮ
ಮಹೀಶನ ಸತಿಯ ಗರ್ಭದುಗ್ಧಾಂಬುಧಿಯೊಳ್ ।
ಹಿಮಕರ ಕಲೆಯಂ ತುದಿಸಿದ
ಳಮಮಾ ದಮಯಂತಿ ಯೆಂಬ ಕನ್ನಿಕೆಯೋರ್ವ್ವಳ್ ॥ ೧೦೭

ವೃ॥ ಆಕೆ ಮನೋಜ ರಾಜನ ಪತಾಕೆ ಮುಖ ದ್ಯುತಿ ಧಿಕ್ಕೃತೇಂದು ನಾ
ಳೀಕೆ ಕುಚದ್ವಯಿ ಹಸಿತ ಕೋಕೆ ನಿಜಾಧರ ಕಾಂತಿ ಧೂತ ಬಂ
ಧೂಕೆ ಪರಾಜಿತಾಮರ ವಧೂಕೆ ತಟಿತ್ತುಲಿತ ಪ್ರತೀಕೆ ಸಾ
ಲೋಕ ವಿಲೋಕೆ ಯಾದಿ ರಸ ಸೂತ್ರದ ಟೀಕೆ ವಿದರ್ಭಕನ್ಯಕೆ ॥ ೧೦೮

ಕಂ॥ ಭ್ರೂಮಧ್ಯದೆ ಮೆರೆದಪುದಾ
ಸೋಮಾಸ್ಯೆಗೆ ಪುಪ್ಪುಭಾಗ್ಯಸೂಚಕ ಮಮಲಂ
ಕಾಮ ಕರಕಲಿತ ಚಾಪಲ
ತಾ ಮಧ್ಯಸ್ಥಗಿತ ಮಲ್ಲಿಕಾಶುಗ ಮೆಂಬೊಲ್ ॥ ೧೦೯

ಕಂ॥ ರತಿದೇವಿ ರೂಪದೊಳ್ಬಿ
ರತಿ ವಿದ್ಯೆಯೊಳಬ್ಜನಾಭ ಸತಿ ಸಾಭಾಗ್ಯ
ಸ್ಥಿತಿಯೊಳಗಾ ಭೀಮ ಮಹೀ
ಪತಿ ಸುತೆ ದಮಯಂತಿ ಯೆಂದೊಡಂ ಕಿರಿದಕ್ಕುಂ ॥ ೧೧೦

ಕಂ॥ ರಾಜೀವಾಕ್ಷಿಯ ಹಾಸವಿ
ರಾಜಿತ ಮೆಂದೆನಿಪ ವಿಮಲ ಮುಖ ಮಂಡಲ ಕಂ
ಭೋಜಾರಿ ಬಿಂಬಮುಂ ನೀ
ರಾಜನ ಭಾಜನ ಮದೆಂದೊಡಂ ತೀರ್ದಪುದೆ ೧೧೧

ಕಂ॥ ಸಮೆದುದ ನೆಜಡಜ ಜಂಮೋ ।
ಣ್ಣಮೆದಂಸಲ ಮೆಂಬು ದವಳ ಕಣ್ಣುಮನಂ ಭೊ ॥

ಜಮುಮುಂ ನಗೆಮೊಗಮುಮ ನಾ
ಹಿಮಕರನುಮ ನೊಡಲ ಲತೆಯುಮುಂ ನೋಳ್ಪಜನಂ ॥ ೧೧೨

ಕಂ॥ ಪಡೆದಂಬುಜಮಂ ಬನ್ನಂ
ಬಡಿಸದೆ ಬಿಡ ನೆಂಬದೊಂದು ಮತ್ಸರದಿಂದಾ ।
ಮಡದಿಯ ಮೊಗಮಂ ನಿರ್ಮಿಸಿ
ಕೆಡಿಸಿದ ನಾಚಂದ್ರಬಿಂಬಮಂ ಕಮಲಭವಂ ॥ ೧೧೩

ಕಂ॥ ವದನಂ ಲಾವಣ್ಯಶ್ರೀ
ಸದನಂ ನೇತ್ರಂ ವಿನೀಲ ಕುವಲಯ ಜೈತ್ರಂ ।
ರದನಂ ಕೃತ ಕುಂದ ಮುಕುಳ
ಕದನಂ ಸ್ಮರ ನೀಲ ಮುಕುರ ಮಾಕೆಯ ಚಿಕುರಂ ॥ ೧೧೪

ಕಂ॥ ನಡೆಯೆ ನಡೆಗೆಡಿಪ ಳೆಮ್ಮಂ
ನುಡಿಯ ಲ್ಪರುಳಗಳುಮಂ ಪುರುಳ್ಗೆಡಿಸಿದಪಳ್ ।
ಮಡಗಿಮಣಿ ಪಾಡೆ ಪೆರತೇಂ
ಕುಡುಮಳ್ಗೆಡ ಮೂಕ ಭಾವಮಂ ಕೋಕಿಲೆಗಂ ॥ ೧೧೫

ಕಂ॥ ಗಿಳಿ ಕುರ್ಕದ ಪಂಣೆಜ್ಜಂ
ಗೊಳಿಸದ ಮು ತ್ತಳಿ ಮುಸುಂಬ ನಿಕ್ಕದ ಕುಸುಮಂ
ಬಳಸದ ನಿಧಿ ಬಹುಪುಣ್ಯದ
ಫಲ ಮಾವಧು ಸೇರೆ ಸಾರ ಮಲೆ ಸಂಸಾರಂ ॥ ೧೧೬

ಕಂ॥ ಅವಳ್ಗೆಗಡ ತಕ್ಕಮಂ ನೀ
ನವನೀಪತಿ ನಿನಗೆ ತಕ್ಕಳವ ಳಾರಯುಲಾ ।
ಯುವತಿಯ ವರಿಸದಿರ ಲ್ಮಾ
ನವೇಂದ್ರ ನಿನ್ನೀಸುರೂಪ ವಿಭವಂ ವಿಫಲಂ ॥ ೧೧೭

ಕಂ॥ ಸಿರಿಗಾಕೆ ಸರಿಯೆನಿಪ್ಪಳ್
ಪರಿಜೆಂದಂ ಭಾಗ್ಯದಿಂದ ಮೊಳ್ಪುಬಗಿಂದಂ ।

ವರಿಸಿದೊ ಡಾವಧುವಂ ನೀಂ
ಪುರುಷೋತ್ತಮ ನೆಂಬುದಂದು ನನ್ನಿಯೆನಿಕ್ಕುಂ ॥ ೧೧೮

ವ॥ ಎಂದು ನುಡಿದ ರಾಜಹಂಸನ ವಚನಮಂ ನಳರಾಜಹಂಸಂಕೇಳ್ದು ಸಂತಸಂದಾಳ್ದು ಕೆಂದಳದಿಂದಾ ಅರಸಂಚೆಯ ಪೊಂಗರಿಗಳಂ ನೀವಿ ಹರುಸಂದೀವಿ.

ಕಂ॥ ಅರಸಂಚೆ ನಿನ್ನ ಗರಿಯೊಳ
ವೊರೆಯೊಳವೆಸೆಗುಂ ಸುವರ್ಣ ಸಂಪದ ಮಾದಂ ।
ದೊರೆದೆಗಡ ಪೂರ್ವಪುಣ್ಯದ
ಪರಿಪಾಕದೊ ಳೆನಗೆ ಸುವಿಮಲಂ ಸತ್ಪಕ್ಷಂ ॥ ೧೧೯

ವ॥ ಎಲೆ ಕಲಹಂಸವೆ.

ವೃ॥ ಕಣಿ ಸೌಂದರ್ಯಕ್ಕೆ ಸೀಮಂತ ಮಣಿ ಸಕಲ ರಾಜನ್ಯ ಕನ್ಯಾ ಜನಕ್ಕ
ಗ್ರಣಿ ಕಾಂತಾಸೃಷ್ಟಿಗೊಳ್ಪಿಪ್ಪಣಿ ಮನಸಿಜಸೂತ್ರಕ್ಕೆ ಜಾಂಬೂನದಾಂಚ
ತ್ಸೃಣಿ ಧೀರೋದಾತ್ತ ಚಿತ್ತದ್ವಿಪಕೆ ವಿಪಣಿ ಸದ್ವಿಭ್ರಮಂಗಳ್ಗೆ ಮುಂಗ್ಯೆ
ಗಿಣಿ ಮಾರ ಸ್ತ್ರೀಗೆ ನಿಪ್ಪಳ್ಜಗದೆ ಬಗೆವೊ ಡಾಭೈಮಿ ಯೆಂಡಾಲಿಸಿರ್ಪೆಂ ।

ಕಂ॥ ಕೇಳಿಸಿದೆ ನೀನು ಮಾಭೈ
ಮಿಾ ಲಾವಣ್ಯಾದಿ ಸದ್ಗುಣಂಗಳ ನೀಗಳ್ ।
ಕೇಳಿಸಿದ ನಂಗಜನು ಮಾ
ಭೀಳಕರಾಳಾಶುಗಾಸ ಗುಣ ಟಂಕೃತಿಯಂ ॥ ಮತ್ತಂ. ೧೨೧

ವೃ॥ ಧೃತಿಯಂ ಪಾಳ್ಗೈವ ವೈದರ್ಭಿಯ ಪಟು ಕುಟಿಲ ಭ್ರೂಕುಟೀ ಚಾಪಮಂ ಕೊಂ
ಡು ತದಾಕರ್ಣಾಂತ ರಿಂಗ ತ್ಸ್ಮಿತ ಲಸಿತ ಸಿತಾಪಾಂಗ ಪುಷ್ಪಾಸ್ತ್ರದಿಂದಂ।
ರತಿಕಾಂತಂ ರೋಷಪಾಂತೆನ್ನೆರ್ದೆ ತುಮುತುರ್ಮುರಪ್ಪಂತೆ ಪೊಯ್ದು ಪ್ಪನತ್ಯು
ದ್ಧತವೃತ್ತಂ ಪಕ್ಷಪಾತಂ ಮಿಗೆ ಪತಗ ಕುಲೋತ್ತಂ ಸನೀಂಕಾವುದೆನ್ನಂ॥

ವೃ॥ ತಪಿಸುಗು ಮೆನ್ನನಿಂ ದುಪವನಂ ಪವನಂ ಮಲಯದ್ರುಕದ್ರುಭೂ
ಲಪನ ವಿನಿರ್ಗತಂ ಹಿಮಕರಂ ಮಕರಂ ಮಕರಾಲಯೋದ್ಭವಂ ।
ಸುಪರಿಮಳಾಂಕ ಪಂಕಜವನಂ ಜವನಂತೆವೊಲಾದ ಮಾದ ನೀ
ಕುಪಿತ ಮನೋಭವಂ ಸಕಲಹಂ ಕಲಹಂಸ ವಧೂ ಪ್ರತಾನಮುಂ ॥

ಕಂ॥ ವನಜಾಸನನುಂ ಚತುರಾ
ನನನುಂ ಸನ್ಮಾನಸೋತ್ಕನು ಮೆಸಿಪ ನೀನಿಂ ।
ದೆನಗೆ ವಿಧಿ ಯಲ್ತೆ ವಿಧಿವಾ
ಹನ ಮಾಳ್ಪುದು ಜವದೆ ತದ್ವಧೂ ಯೋಜನಮಂ ॥ ೧೨೪

ವ॥ ಎಂದು ನಳನೃಪಂ ನುಡಿಯೆ.

ಕಂ॥ ಸುರಕಿನ್ನರಗಂಧರ್ವಾ
ದ್ಯರುಮಂ ಲೋಕದ ನೃಪಾಲ ಸುತರುಮ ನೆಲ್ಲಂ ।
ಸಿರುಕಿಸಿದೆನೋರ್ವನುಂ ನಿನ
ಗೊರೆವಪ್ಪವನಿಲ್ಲ ನಳನರೇಂದ್ರಲಲಾಮ ॥ ೧೨೫

ಕಂ॥ ಕಾಂತಾರತ್ನಮಲಾ ದಮ
ಯಂತಿ ಮಲಂ ಪುರುಷರತ್ನಮಲೆನೀಂ ನಿನ್ನಂ ।
ಸಂತಂ ಮರಿಸದೆ ಮಾಣ್ಬಳೆ
ಕಂತುವ ನುಳದಿನ್ನದಾವನಂ ರತಿಮರಿಪಳ್ ॥ ೧೨೬

ಕಂ॥ ಜಳಜಿನಿಗೆ ರವಿಯನಾ ಉತ್ಪ
ಳಿನಿಗೆ ಚಂದ್ರಮನ ಯೋಜಿಸಿದ ವಿಧಿ ಯಾಕೋ ।
ಮಳೆಗಂ ನಿನ್ನಂ ಯೋಜಿಸ ।
ದುಳಿಪನೆ ಸಂದೆಗಮನುಳ ನಳಾವನಿನಾಥ ॥ ಮತ್ತಂ. ೧೨೭

ಕಂ॥ ಇಂದ್ರನುಮ ನುಪೇಂದ್ರನುಮಂ
ಚಂದ್ರಾನನೆ ನಿನ್ನನುಳದು ಮರಿಸದಪ್ಪೋಲ್ ಧಾ ।

ತ್ರೀಂದ್ರನೆ ಮಾಳ್ಪಂ ನಿನ್ನಯ
ಸಾಂದ್ರಗುಣಂಗಳ ನವಳ್ಗೆ ಬಿತ್ತರಿಸುತ್ತಾಂ ‖ ೧೨೮

ವ॥ ಎಂದು ಕಲಹಂಸಂ ನುಡಿಯೆ.

ಕಂ॥ ಅರಸಂಚೆಯ ನುಡಿ ಕಿವಿಯೋ
ಳ್ಸರಿದಂತೆ ಪೊಲಾಗಲಮೃತ ವೃಷ್ಟಿಯ ಬಗೆಯೋಳ್ ।
ಹರುಸಂ ಮಿಗೆ ನುಡಿವ ನಿದಂ
ನೆರಪಿದೊ ಡೆನಗಲ್ತೆ ನೀಂ ಪ್ರಿಯಂಕರ ನೆನುತಂ ‖ ೧೨೯

ವ॥ ಎಂದಾಕಲಹಂಸನಂ ನಳನೃಪಂ ಸಮುಚಿತ ವಚನಗಳಿಂ ಸಂತಸಂ ಬಡಿಸಿನೀಂ ಬರ್ಪನ್ನೆಗ ಮಿಲ್ಲಿಯೆ ಸಂತ ಮಿರ್ಪೆನೆಂದು ಬೀಳ್ಕೊಟ್ಟಾನಂದನ ವನದೊಳೆ ನಿಜ ಮನೋ ವಿನೋದನ ವ್ಯಾಪಾರದಿಂ ದಿರೆಯಿರೆ.

ಕಂ॥ ನಲನೃಪವರನಂ ಬೀಳ್ಕೊಂ
ಡೊಲವಿಂದುಳಿ ದಂಚೆವಿಂಡುವೆರಸನುಕೂಲಾ ।
ನಿಲಶಕುನಕೆ ಶಕುನೇಂದ್ರಂ
ನಲವೇರ್ಪಿ ವಿದರ್ಭದತ್ತ ತಳರ್ದುದು ನಭದೋಳ್ ‖ ೧೩೦

ದ್ವಿತೀಯಾಶ್ವಾಸಂ.

ವೃ॥ ಕೊಡಹುತ್ತೊರ್ಮೆ ಚೆಂಬೊಂನೆ ರಕೆಗಳ ನದೊರ್ಮೆ
ಮುಂಬಾಯ್ದುಬಾನೊೞ
ಳಡಗುತ್ತೊರ್ಮೆ ಕಾರ್ಮ್ಮೋಡದೊಳೆ ಪೊಳೆವ ಬಲ್ಮಿಂಚಿದೆಂಬಂತಣಂ
ಕಣ್ಗೆಡೆಯಾಗೊರ್ಮೆ ಮಿಟ್ಟಂ ಮಿಡುಕದಿರೆ ಗರುದ್ಗುಚ್ಛಮ
ಚ್ಛಾಂಶುಕಲ್ಪಂ
ನಡೆಪಾರಿತ್ತಾತ್ಮವೇಗಾಪಹಸಿತ ಸುಮರುದ್ರಂಹಸಂ ರಾಜಹಂಸಂ ॥ ೧

ವ॥ ಇಂತು ಶಕುಂತರಾಜ ನನಂತ ಕಾಂತಾರ ನಗ ನದೀ ನದ ಸಂತಾನಮುಂ ದಾಂಟಿ ಬರ್ಪಾಗಳ್ ಕಣ್ಗೊಂಡ ವಿದರ್ಭದ ವಿಪುಲ ವಿಭವಮಂ ನೋಡುತ್ತಂ ಬರೆವರೆ ಮುಂದೆಸೆಯೊಳಂದಂಮಿಗೆ.

ವೃ॥ ಕರಮೆಸೆದತ್ತು ಕಣ್ಗೆಸಲವಿತ್ತು ಮನೋಜ್ಞತೆ ಮೆತ್ತು ತಳ್ತು ಸಿಂ
ಗರಗಳ ಬಿತ್ತು ವೈಭವದ ಗೊತ್ತು ಪಧರ್ಮದ ಮಿತ್ತು ಲೋಕವೇ।
ಳರ ತಲೆಗುತ್ತು ಭೂನಸಿತೆ ತಾಳಿದ ಮೂಗುತಿಮುತ್ತು ನೋಡಲ
ಚ್ಚರಿಯನೆತೆತ್ತು ಕುಂಡಿನಪುರಂ ಮಣಿ ಮಂಡನ ಭರ್ಮ್ಮ ಗೋಪುರಂ ॥೨

ವ॥ ಮತ್ತಮಾಪುರಂ ಪುರಂದರ ನೀಲ ಮಣಿಬೃಂದ ಬಂಧುರ ಹಿರಣ್ಮಯದೀಪ್ರಾಕಾರಂಗ ಳೆನಿಸಿದ ಪ್ರಾಕಾರಂಗಳೊಳಂ ಅತಿನೂತ್ನ ನವರತ್ನ ನಿಕರ ಖಚಿತ ಮಕರತೋರಣದಿಂ ತಳ್ತೊರಣಂಗೊಂಡ ತೋರಣದೊಳಂ ಅಧಿಗತ ಶೈತ್ಯಸಾರಭ್ಯ ಮಾಂದ್ಯ ಗುಣಾಭಿನಂದ್ಯ ಸಂವಲನ ಪವನಂಗಳೆನಿಸಿದು ಪವನಂಗಳೊಳಂ ಅನವದ್ಯ ಹೃದ್ಯತರೋದ್ಯಾನ ಲಕ್ಷ್ಮೀಹೃದಯಮಧ್ಯಸ್ಥಿತ ಮುಕ್ತಾಸರಂಗಳೆನಿಸಿದ ಸರಂಗಳೊಳಂ ಅನುಪದ ರಣನ್ನೂಪುರ ಚರತ್ಸ್ವರ ಪುರಂಧ್ರೀಜನ ವಿಮಳಮುಖಮಂಡಲ ಪರಂಪರಾ ನಿರ್ಮಿತ ರಾಜವೀಥಿಗಳೆನಿಪ ರಾಜವೀಥಿಗಳೊಳಂ ಅದಭ್ರಶರದಭ್ರಶಕಲ ವಿಭ್ರಮಾವಹ ಶುಭ್ರಾಂಶುಕಾಂತ ಶಿಲಾಕಾಂತ ನಿರ್ಮಿತ ಹರ್ಮ್ಯಾಗ್ರನಿಬದ್ಧ ಭರ್ಮ್ಮಮಯ ಕೇತನಂಗಳೆನಿಸಿಬ ನಿಕೇತನಂಗಳೊಳಂ ಅಮಂದಮಂದರಮಹೀಧರ ಮಥ್ಯಮಾನ ಪಯೊರಾಶಿ ರಿಂಗತ್ತರಂಗಂಗಳಂತೆ ತರಂ

ಗೊಂಡತುರಂಗಂಗಳೊಳಂ ಅತಿವಿಪುಲ ಕಪೋಲ ತಲ ನಿರರ್ಗಳ ನಿರ್ಗಳ ನ್ಮದಾಂಬು ಪರಿಚುಂಬಿ ರೋಲಂಬ ಕದಂಬ ಶಂಬಕರಮಣಿ ಮಾಲಾ ಮನೋರಮಂಗಳೆನಿಸಿದ ಸ್ತಂಬೇರಮಂಗಳೊಳಂ ಅಖಿಲಕಲಾವಿಲಾಸ ನಯಮಿನಯ ಸಂಪತ್ಸಮೃದ್ಧಿಭಾಜನಂಗಳೆನಿಸಿದ ಪೌರಜನಂಗಳೊಳಂ ಕಣ್ಗೆ ಮಂಗಳ ಮಾಗೆ ಸೆದಿದ್ದರ್ದಂತು ಮಲ್ಲದೆಯುಂ

ಕಂ॥ ಸುಮಹಾಧ್ವನಿಚಿತ ಮತ್ಯು
ತ್ತಮ ಸಂಪದ್ರಾಜಮಾನ ಮೆಂದೆನಿಪ ವಿದ ।
ರ್ಭಮಹೀಪತಿ ಪುರಮವನೀ
ರಮಣೀ ಮಣಿ ನೂಪುರಂಬೊ ಲೇನೊಪ್ಪಿದುದೋ ॥ ೩

ವೃ॥ ಅಂತೆಸೆವಾ ಪುರಾಂತರದೊಳೊಪ್ಪಿದು ದಂಬರಚುಂಬಿ ಶೀತರು
ಕ್ಕಾಂತ ಶಿಲಾ ನಿಬದ್ಧಕಲಧೌತ ಕನತ್ಕಲಶಾವಳಿ ಪ್ರಭಾ ।
ದಂತುರ ಕೇತು ಶೇಖರಿತ ಸೌಧಸಿತದ್ಯುತಿ ನಿರ್ಮಲೀಕೃತಾ
ಭ್ಯಂತರ ಚಂದಿರಂ ನಿವಸದಿಂದಿರ ಮಾಧರಣೀಶ ಮಂದಿರಂ ॥ ೪

ವ॥ ಇಂತು ರಾಜಹಂಸ ವಿಹಾರೋಚಿತ ರಾಜೀವಾಕರ ಮೆಂಬಂತೆ ರಾರಾಜಿಪ ರಾಜಗೃಹದೊತ್ತಿನೋಳ್ಬತ್ತರಂಬಡೆದ ಪೊನ ಕಂನೆವಾಡದ ಪಿಂದೆಸೆಯೊಳಂದಮಿಗೆ ಮೆರೆವ ದರದಳಿತ ಕಮಲ ಕಲ್ಹಾರ ಕುಂದಮಂದಾರ ಪಾಟಲಪಾರಿಜಾತ ಮುಖಕುಸುಮಬೃಂದಕಂದ ಳನ್ಮರಂದ ರಸಾಸ್ವಾದ ನಾನಂದ ಕೂಜನ್ಮಳಿಂದ ಸುಂದರೀಝುಂಕಾರ ಸಂಕಲಿತ ಸಂತತವಸಂತ ಲಕ್ಷ್ಮೀ ವಿಭವ ಭವನ ಮೆನಿಪ ಕೇಳೀ ವನದೊಳಾಳೀಗಣಂಬೆರಸುಮಧು ಮಂಟಪದೊಳ್ಮಧುಲಕ್ಷ್ಮಿಯೆನೆ ಮನೋವಿನೋದಂಮಿಗೆ ಕುಳ್ಳಿರ್ಪವಿದರ್ಭರಾಜ ನಂದನೆಯಂ ಕಂಡು ಕಲಹಂಸಂ ಕೌತುಕಂಗೊಂಡು.

ಕಂ॥ ವನಮಿದು ನಂದನ ಮಕ್ಕುಮೊ
ವನಿತೆಯ ರಿವ ರಪ್ಸರಸೆಯ ರಕ್ಕುಮೊ ವನಿತಾ ।
ಜನ ಮಧ್ಯದೆ ಕುಳ್ಳಿರ್ಪೀ
ವನಜಾಸ್ಯೆ ಪುಲೋಮಜಾತೆ ಯಕ್ಕುಮೊ ಬಗೆಯಲ್ ॥ ೫

ವ॥ ಎಂದು ಶಕುಂತರಾಜಂ ಭ್ರಾಂತಿಗೊಂಡನಂತರಂ ದಮಯಂತಿ ಯೆಂದು ತರಿಸಂದು.

ಕಂ॥ ಇಳಿತಂದು ದಭ್ರದಿಂದಾ
ಕಳಹಂಸ ಮೆರಂಕೆಯೆಳಲೆ ಯಂಚೆಗಳೊಡನು ।
ಜ್ವಲಮೆನಿಪ ಭೈಮಿಯುಪವನ
ಕಿಳಿದಂತಿರೆ ಶಾರದೆಂದು ಮಂಡಲ ಮಾಗಳ್ ॥ ೬

ಕಂ॥ ಅಂತಿಳಿತಂ ದೊಡನಾ ದಮ
ಯಂತಿ ಯಿದಿರ್ ನಡೆಬೆಡಂಗು ಮಿಗೆ ಸುಳಿದುದು ವಿ ।
ಭ್ರಾಂತಿಗೊಳೆ ಕೆಳದಿಯರ್ ಶಶಿ
ಕಾಂತನಿಭಂ ಕನಕ ಪಕ್ಷಮಾಕಲ ಹಂಸಂ ॥ ೭

ವ॥ ಅಂತು ಸುಳಿದ ಕನಕಮಯಕಲಹಂಸನಂ ಕಂಡು ಕುಂಡಿನೇಂದ್ರಸುತೆ ಪಿಡಿಯಲ್ತವಕಂಗೊಂಡು ಕೆಳದಿಯರಂ ಬಳಸವೇಳ್ದು.

ಕಂ॥ ಅಂದುಗೆ ಘಲ್ಲೆನೆ ಚರಣದೊ
ಳಂದುಗೆ ಮಲ್ಲಿಗೆಯ ಮೊಗ್ಗೆಗಳ್ ಸೋರ್ಮುಡಿಯಿಂ ।
ಕೆಂದಳಮನೀಯೆ ಕೆಳದಿಯ
ರಂದಮಿಗೆ ಭೈಮಿ ಭದ್ರಪೀಠದಿ ನೇಳ್ದಳ್ ॥ ೮

ವ॥ ಅಂತೇಳ್ದು ಮುಂಜೆ ರಂಗನಳವಡಿಸಿ ನೀಳ್ದುಡೆ ನಿರಿಯ ನುಡೆನೂಲೋಳ್ತೊಡರ್ಚಿ.

ವೃ॥ ಎನಿತ್ತನಿತ್ತಾ ಅರಸಂಚೆಯುಂ ಘನ
ಸ್ತನಂ ಕುಲುಂಕಲ್ತುಡುಕಲ್ಕೆಬರ್ಪ್ಪಳಾ ।
ಜನೇಶ್ವರಾತ್ಮೋದ್ಭವೆ ಸಾರ್ಕೆಗೀಕ್ಷಿಸುತ್ತ
ನಿತ್ತನಿತ್ತೈದಿದು ದಂಚೆ ದೂರಮಂ ॥ ೯

ವ॥ ಇಂತಾ ಶಕುಂತರಾಜಂ ದಮಯಂತಿಯುಂ ನಿಂತಲ್ಲಿನಿಲ್ಲದಂತು ವನಾಂತ ಮೆಲ್ಲಮಂ ಸುತ್ತಿಸೆ.

ಕಂ॥ ಧಡಧಡಿಸಿದ ವೊಳ್ಗೊಡೆಗಳ್
ನಿಡುಸುಯ್ ಪೊಣ್ಮಿದುದು ಮೊಗದೆ ಬೆಮರ್ವನಿ ಯೊಗೆದ।
ತ್ತುಡುಗಿದು ದಳವು ನಡುಂಗಿದು
ದೊಡ ಲ್ವಿದರ್ಭಜೆಗೆ ವಿಪಿನ ಗಮನ ಶ್ರಮದಿಂ॥ ೧೦

ವ॥ ಇಂತು ನೀಡುಂ ಬಳಲ್ದಡಿಯಿಡಲಾರದೆ ನಿಜತನುಛಾಯಾ ದ್ವಿತೀಯೆ ಯೆನಿಸಿನಿಂದ ಮಡದಿಮಣಿಯಂ ನೋಡಿ ಕಲಹಂಸಂ ಮರುಕಂಗೂಡಿ ಮನುಷ್ಯವಾಕ್ಯದಿಂ ನುಡಿದು ದದೆಂತೆಂದೊಡೆ.

ಕಂ॥ ಬಾಲೆ ಯದೇಕೆ ಬಳಲ್ದಪೆ
ಯಾಲಿಸುನಾಂ ಗಗನ ಚಾರಿ ನೀನಬಲೆ ಯಲಾ।
ಮೇಲರಿಯ ದಾಟಪರೆತೆಗೆ
ಬಾಲಕಿಯಾಟಪ ವೊಲಿಂದು ಬಿಂಬವ ಪಿಡಿಯಲ್॥ ೧೧

ವ॥ ಇದು ಮಲ್ಲದೆ.

ಕಂ॥ ಮಾನಿನಿ ನಾವು ವಿರಂಚನ
ಯಾನೋತ್ತಮ ಹಂಸವರನ ವಂಶೋದ್ಭೂತರ್।
ಮಾನಸ ಸರೋ ನಿವಾಸರ್
ಕಾನಕ ಪಂಕಜ ಮೃಣಾಳ ಮೆಮಗಾಹಾರಂ॥ ಮತ್ತಂ॥ ೧೨

ವೃ॥ ವಾಣೀ ಪಾಣಿ ಪಯೋಜ ರಾಜಶುಕಮುಂ ನಾವುಂ ಸಹಾಧ್ಯಾಯಿಗಳ್।
ಜಾಣುಂಟೆಂನೆಮಗಾಗಮಾಖಿಲ ಪುರಾಣಾಖ್ಯಾಯಿಕಾಬೃಂದದೊಳ್
ಮೇಣಾಬೊಮ್ಮಗ ದೊರ್ಮೆ ಯಾನ ಮೆ ನಿಸುತ್ತಂ ಮೆಚ್ಚನಾಂ ತಿರ್ಪೆವೌ
ಕ್ಷೋಣೀ ದರ್ಶನ ಕಾಂಕ್ಷೆಯಿಂ ತಳರ್ದೆವಾ ವೇಣೀ ವಿಲೋಲಾಂಬಕೇ

ಕಂ॥ ಬಳಲಿದೆಯೆನಗಾಗೆಲೆಕೋ
ಮಳೆ ನೀ ನದರಿಂದ ಮೆಸಪೆನಾಂ ಪ್ರಿಯಮೊಂದಂ।
ಕುಳತಾಲಿಪುದೆಂದು ಸುರ್ದುದು
ನಳರಾಜೇಂದ್ರನ ಗುಣಂಗಳಂ ಕಲಹಂಸಂ॥ ೧೪

ಕಂ॥ ಭೀಮಸುತೆ ಕೇಳ್ದು ಬಲ್ಲಾ
ಭೂವಿಶಾಲ ಲಲಾಮ ನೆನಿಪ ನಳನೃಪವರನು।
ದ್ದಾಮ ಗುಣಗಣಮ ನದನಾ
ತಾಮರಸೋದ್ಭವನು ಮೆಣಿಸೆ ಕೊನೆಗೊಂಡಪನೇ॥ ೧೫

ವೃ॥ ಕೇವಳನಲ್ತು ತನ್ನಳನೃಪಂ ಚತುರಬ್ಧಿ ಪರೀತಭೂತ ಧಾ
ತ್ರೀ ವನಿತಾ ಧವಂ ಧವಳಕೀರ್ತಿಮರೀಚಿ ಸುಧಾಭಿ ಚರ್ಚಿತಾ।
ಶಾವಲಯಂ ಮನೋಜ ಸಮ ರೂಪ ನುದಾರ ಗುಣಾಂಬುರಾಶಿ ದೀ
ನಾವನಕೋವಿದಂ ನಯವಿದಂ ನಿಗಮಾಗಮಶಾಸ್ತ್ರಪಾರಗಂ॥ ೧೬

ಕಂ॥ ತರುಣಿ ಕರೆಗಳೆದಶಶಿಖರ
ಕರನಲ್ಲದ ಭಾನು ಪುಷ್ಪಧನುವಿಡಿಯದ ಶಂ।
ಬರರಿಪು ಪಲಗಣ್ಣೊಂದದ
ಸುರೇಂದ್ರನೆಂದಪ್ಪುದು ಲೋಕ ಮಾನಳನೃಪನಂ॥ ಮತ್ತಂ॥ ೧೭

ವೃ॥ ಕುಲಮಂ ಪೇಳ್ವೊಡೆ ಚಂದ್ರವಂಶ ತಿಳಕಂ ಸೌಂದರ್ಯಮಂ ಪೇಳ್ವೊಡು
ಜ್ವಲ ಲಾವಣ್ಯ ಮನೋಹರಾಂಗ ರುಚಿ ಲೇಶಾಕ್ಷಿಪ್ತ ಪುಷ್ಪಾಶುಗಂ।
ಬಲಮಂ ಪೇಳ್ವೊಡೆ ನಿರ್ಜಿತಾಖಿಲ ರಿಪು ವ್ಯೂಹಂ ದಲೈಶ್ವರ್ಯದೊಂದ
ಳವಂ ಪೇಳ್ವೊಡೆ ಸರ್ವಭೂಮಿ ರಮಣಂ ರಾಕೇಂದು ಬಿಂಬಾನನೆ॥ ೧೮

ಕಂ॥ ನಳನಾಳ್ವಿಳೆಯೊಳಗೆಂದುಂ
ನೆಲಸಿರ್ಪುದು ಧರ್ಮ ಮೆಂಬುದಡಿ ನಾಲ್ಕರೊಳಂ।
ಪಲವ ನುಸುರ್ದೇ ನವಂ ಭೂ
ತಲದೋಳ್ ರಾಜರ್ಷಿ ಯೆಂಬ ಪೆಸರಾಂತಿರ್ಪ್ಪಂ॥ ೧೯

ಕಂ॥ ಸಿರಿಯೋಳ್ ಮೆಯ್ಸಿರಿಯೋಳ್ನಿಲ
ಸಿರಿಯೋ ಳ್ಕೆಣ್ಬೀರ ಸಿರಿಯೊಳಂ ನೆರೆಮೆರೆವಂ।
ಸರಿದೊರೆಯುದಾರು ಮಿಲ್ಲನೆ
ಸರೋಜ ಸಖ ವಂಶ ದೀಪ ನಾನಳಭೂಪಂ॥ ೨೦

ವೃ॥ ನಳನಗುಣಂಗಳಂ ಕಥಿಸೆ ಚಾರಣರಾತ್ಮ ಸಭಾಂತರಾಳದೊಳ್
ಬಳರಿಪುಕೇಳು ವಂದು ನಯನಂಗಳವೋಲ್ ಪಲವುಂಕೊಡಂಕೆಯುಂ।
ನಳಿನಜನೇಕೆನಿರ್ಮಿಸದೆ ವರ್ಣ್ಣನೆನುತ್ತೆ ಪಲುಂಬಿಕರ್ಣಪೂ
ರಳಸಿತಪಾರಿಜಾತಮುಗೆ ತಾಂ ತಲೆದೂಗುವ ನಂಬುಜಾಂಬಕೆ ॥ ೨೧

ಕಂ॥ ನರರಿಕ್ಕೆ ದಿವಿಜ ವಿದ್ಯಾ
ಧರ ರಕ್ಷೋ ನಾಗ ಯಕ್ಷ ಗಂಧರ್ವರೊಳಂ।
ಸರಸಿಜಮುಖಿ ನಳನೃಪತಿಗೆ
ಸರಿದೊರೆ ಯಾದನುಮ ನೋರ್ವ್ವನಂ ಕಂಡರಿಯೆಂ ॥ಮತ್ತಂ॥ ೨೨

ಕಂ॥ ಅಂಚೆಗಡಾಂ ನಳನೃಪತಿಗೆ
ಚಂಚಲತರನೇತ್ರೆ ನಿಖಿಲ ನರಪತಿಕನ್ಯಾ।
ಸಂಚಯದ ವಂಶ ರೂಪ ಸ
ಮಂಚಿತ ವೃತ್ತಾಂತದಿರವ ನರುಪುವ ಪದದೊಳ್ ॥ ೨೩

ಕಂ॥ ನಾರೀರತ್ನಂ ಜಗದೊಳ
ಗಾರಯೆನೀಂ ಪುರುಷರತ್ನ ಮಾನಳರಾಜಂ।
ಸೇರಲ್ನೀವಿರ್ವ್ವರು ಮಾ
ವಾರಿಜ ಸಂಭವನ ಸೃಷ್ಟಿ ಸಫಲ ಮೆನಿಕ್ಕುಂ ॥ ೨೪

ಕಂ॥ ಇಂತೆನೆ ಶಕುಂತಪತಿ ದಮ
ಯಂತಿ ಸುಧಾವೃಷ್ಟಿ ಸೂಸಿದಂತಿರೆ ಕಿವಿಯೊಳ್।
ಸಂತಸಮ ನಾಂತು ಚಿತ್ತದೊ
ಳಂತಿಂತೆಂದುಸಿರ ದುಸಿಕ ನಿರ್ದ್ದಳ್ನಾಣಿಂ ॥ ೨೫

ವ॥ ಅಂತು ಲಜ್ಜೆಯಿಂ ದುಸಿಕನಿರ್ಪ್ಪ ದಮಯಂತಿಯುಂ ನೋಡಿ.

ಕಂ॥ ಪೇಮಾಲಾಪ ದೊಳೇನೆಲೆ
ಲಲನಾಮಣಿ ನಳನ ವರಿಸಿದೊಡೆ ನೀಂ ನಿನ್ನೀ।
ಕುಲರೂಪ ಗುಣಕಳಾ ಕೌ
ಶಲ ಮೆಲ್ಲಂ ಸಫಲ ಮಕ್ಕು ಮಲ್ಲದೊಡೆಫಲಂ ॥ ೨೬

ವ॥ ಅದೊಡೆ ನಿನ್ನಿಷ್ಟಮೆಂತೆನೆ ದಮಯಂತಿ ಯತಿಲಜ್ಜೆವಿಗೆ ಕಳಹಂ
ಸನಂ ಕುರಿತು.

ತೋಟಕವೃ॥ ಕಲಹಂಸ ಶಕುಂತ ವತಂಸ ಭವ
ಲ್ಲಲಿತಾಕೃತಿ ಸೂಕ್ತಿ ಚಮತ್ಕೃತಿ ಮೇಣ್ ।
ಕಲಧೌತ ಸುಪಕ್ಷತಿ ಯೆಂಬಿವು ಗ
ಲ್ಗಲ ನಿತ್ತವು ಮನ್ಮನಕದ್ಭುತಮಂ ॥ ಮತ್ತಂ ॥ ೨೭

ಕಂ॥ ದೊರೆದೆಗಡ ಪೂರ್ವಪುಣ್ಯದ
ಪರಿಪಾಕದೊಳೆನ್ನ ದೊಂಪಭೀಷ್ಟವ ನೊಲವಿಂ ।
ನೆರೆವೇರಿಸ ಲೊರೆದಪೆನೇಂ
ಪರೆಂಗಿತಜ್ಞಾನ ನಿಪುಣನೆನಿಸಿದ ನಿನಗಾಂ ॥ ೨೮

ಕಂ॥ ಆ ನಾಲಿಸಿರ್ಪೆನಾ ನಳ
ಭೂನಾಥೋತ್ತಂಸ ನಮಲ ತರ ಗುಣ ಗಣಮಂ ।
ನೀನುಸಿರ್ದಪಾಂಗನದ ನಿ
ನ್ನೀಸೆಂಬೆಂ ನಳನೃಪತಿಯು ಕಂಡಂತಾದೆಂ ॥ ೨೯

ಕಂ॥ ಎನಗಾ ನಳನ ಗುಣಂಗಳ
ನನುನಯದಿಂದ ರುಪಿದಂತಿ ರೆನ್ನಿರವುಮನಾ ।
ಜನಪತಿ ಗುಸಿರ್ದೆಂನೊಳ್ ಕೃಪೆ
ಜನಿಪಂತುಟು ಮಾಡಿ ಮಾಳ್ಪು ದೆಂನೀಹಿತಮಂ ॥ ೩೦

ವ॥ ಎನೆ ಕಲಹಂಸಂ ಸಂತಸಂಗೊಂಡು.

ಕಂ॥ ನೀ ನೆಳೆಯ ಳ್ಮೇಣ್ಣನಕಾ
ಧೀನೆಯದಲ್ಲದೆ ವಿಚಾರಿಪೊಡೆ ಮಡದಿಯರಾ ।
ಮಾನಸವೋ ಚಂಚಲಂ ನುಡಿ
ಮಾನಿನಿ ನಿನ್ನೊಂದು ಮಾನಸದ ತರಿಸಲಮಂ ॥ ೩೧

ವ॥ ಎನೆ ದಮಯಂತಿ ಯಂತಸ್ಸ್ಮಿತೆಯಾಗಿ.

ಕಂ॥ ನಳರಾಜೇಂದ್ರನ ನುಳಿದಿ
ನ್ನಿಳೆಯೊಳದಾವರಗುವರನ ವರಿಸಲ್ಬಯಸೆಂ ।
ಕಲಹಂಸನೆ ಭಾಸ್ವಂತನ
ನುಳಿದಾ ಪದ್ಮಿನಿಯದಾರ ವರಿಸಲ್ವೇಳ್ಕುಂ ॥ ಮತ್ತಂ ॥ ೨೦

ಕಂ॥ ನಳನೆ ಪತಿ ಯಲ್ಲದೆನಗಿಂ
ನ್ನುಳಿದರ್ ಭೀಮಕ್ಷಿತೀಶ್ವರಂ ಗೆಣೆಯೆಂದಾಂ ।
ತಿಳಿದಿರ್ಪೆಂ ಪಲವರಿನೇಂ
ನಳನೆಂನಂ ವರಿಸದುಳಿದೊಡನಲನ ವರಿಪೆಂ ॥ ೨೨

ವ॥ ಎನೆ ಹಂಸಂ ಕೇಳ್ದು ಸಂತಸಂದಾಳ್ದು.

ಕಂ॥ ರತಿಯುಂ ಮನಸಿಜನಾಭಾ
ರತಿಯುಂ ವಿಧಿ ಸಿರಿಯು ನಬ್ಜನಯನಂ ಶೋಭಾ ।
ಪತಿ ನಿನ್ನ ಮನಾನಳ ಭೂ
ಪತಿ ವರಿಸದೆ ಪೋಣ್ಬುದುಂಟೆ ಪೇಳ್ಕಮಲಾಕ್ಷೀ ॥ ಮತ್ತಂ ॥ ೨೪

ವೃ॥ ಸಮಯ ಮಿದಬ್ಜಜಂ ಗನನುರೂಪ ವಧೂ ವರ ಯೋಜನ ಪ್ರಭೂ
ತಮಹಿಜನಾ ಪವಾದ ಜಲರಾಶಿಯ ನುತ್ತರಿಸಲ್ಕದಂತರಿಂ ॥
ಸಮಗುಣ ಸಂಪದರ್ಕಳೆನಿಪೀ ನಿನಗಂ ನಳಭೂಮಿಜಾನಿಗಂ
ಸಮೆದಪನಲ್ತೆ ಸಂಘಟನಮಂ ಸಲೆನಂಬಿದ ನಂಬುಜಾಂಬಕೆ ॥ ೨೫

ವ॥ ಇದಲ್ಲದೆಯುಂ.

ಕಂ॥ ಸುದತೀಮಣಿ ಕೇಳ್ನಿನ್ನಯ
ಸದಮಲ ಸೌಂದರ್ಯ ಗುಣವಿಶೇಷಂಗಳ ನೊ ।
ರ್ಮ್ಮೊದಲೆ ತಿಳಿಪಿರ್ಪೆನಾ ನಿಜ
ಹೃದಯೇಶ ನೆನಿಪ್ಪ ನಳನೃಪಂ ಗಾಂ ಪದಪಿಂ ॥ ೨೬

ಕಂ॥ ಅಂದು ಮೊದಲಾಗಿ ನಳನಾ
ಕಂದರ್ಪನ ಬಾರಿ ಗಕಟ ಸಿಲ್ಕಿರ್ದಪ ನೇ ।

ನೆಂದಪೆನೊ ನಿನ್ನ ನಲ್ಲದ
ದೊಂದುಮ ನೆಳಸಂ ನಿಜಾಂತರಂಗದೊಳರಸಂ ॥ ೩೭

ವೃ॥ ಕಾಂತೆ ಯದೆಂತು ನೊಂತೆಯೊ ಭವಾಂತರದೋಳ್ಜನಿಸಲ್ಕಿನಿತ್ತು ರೂ
ಪಾಂತು ಧರಿತ್ರಿಯೋಳಮಮ ಕಂತು ವಸಂತ ಜಯಂತ ದೇವತಾ ।
ಕಾಂತರ ನಂತದೊಂದು ಚೆಲುವಿಂ ದಿಳಕ್ಕೈದ ನಳಾಪನೀಶ್ವರಂ
ಸ್ವಾಂತದೆ ನಿನ್ನ ನಲ್ವರಿಜ ಜಾನಿಸಿ ವಿಸ್ಮಯ ವಾಂತು ಬಣ್ಣಿಪಂ ॥ವೃತ್ತಂ॥

ವೃ॥ ಕರತಲದಿಂದೆ ಸೆಜ್ಜೆವನೆಯೋಳ್ಸಲೆ ಚಿತ್ರಿಸಿ ನಿನ್ನ ರೂಪ ನ
ಚ್ಚರಿ ಮಿಗೆ ನೊಳ್ಪನಂತು ಟವೆ ವ್ರೊಯ್ವುದುಮಂ ಮರೆದಂತೆ ಬಣ್ಣಿಪಂ।
ಸುರಿವ ಸುಖಾಶ್ರುವಿಂದೆ ನನೆವಂ ನೆನೆವಂ ಭವದೀಯ ಸದ್ಗುಣೋ
ತ್ಕರವ ನೊರಲ್ದು ಪಂಬಲಿಪ ನಂಗನೆ ನಿನ್ನಯ ವಿಪ್ರಲಂಭದಿಂ ॥ ೩೯

ವೃ॥ ನಳನ ಮನೋಭವಾ ನಳನ ತಾಪವ ನೇಂ ಕಳೆಯಲ್ಕೆ ಸಾಲ್ತವೇ
ಕುಳಿರ್ವ ಕೊಳಂಗಳುಂ ಸುಳಿವ ತಂಬೆಲರುಂ ಪುಳಿನ ಸ್ಥಳಂಗಳುಂ ।
ಮಳಯಜ ಲೇಪಮುಂ ತಳಿರ ಪಾಸುಗಳುಂ ಬೆಳಪಚ್ಚ ಜೊನ್ನ ಮುಂ
ತಳಿವ ಹಿಮಾಂಬುವುಂ ಕುಳಿರ್ವಪಂಕಜಿನೀ ದಳವೀಜನಂಗಳುಂ ॥ ೪೦

ಕಂ॥ ಸುಕರ ಮೆನಗಂತರಿಂದೆಲೆ
ಶುಕವಾಣಿ ನಳಂಗೆ ನಿನ್ನನೊಂದಿಪಕಜ್ಜಂ ।
ಸುಕಮಿರ್ಪುದೆಂದು ಪೇಳ್ದಾ
ಶಕುಂತ ವರ ಮೈದಿದತ್ತು ನಳನೆಡೆ ಗೊಲವಿಂ ॥ ೪೧

ವ॥ ಇತ್ತಲ್ ನಳಂ ದಮಯಂತೀ ವಿಷಯಕ ಚಿಂತಾ ನಳ ಸಂತಪ್ಯಮಾನ
ಮಾನಸಂ ನಿಜೋದ್ಯಾನ ಮಧ್ಯದ ಶಶಿಕಾಂತ ಸರೋವರದ ಪರಿಸರದಲ್ಲಿ.

ಕಂ॥ ಪಚ್ಚೆ ಪಸಿಯೆಲೆಯ ಪಾಸಂ
ಬೆಚ್ಚನೆ ಪೊರಪೊಯ್ವ ಸುಯ್ಗಳಿಂಬಾಡಿಸುತಂ ।
ಕೆಚ್ಚನೆಸೆವಸುಗೆ ಬುಡದೋಳ್
ಮಚ್ಚಿನಳಂ ಮನದೆ ಬೆರಸಿ ಬೆಚ್ಚವೊಲಿರ್ದಂ ॥ ೪೨

ಕಂ॥ ನಳನೃಪತಿಯ ಪೃತ್ತಾಂತಂ
ಗಳೆಯಿಪದೊಂದಿಂದು ವಿದೆನಲೇಂ ಬಾಂದಳದಿಂ।
ಇಳತಂವುದೊ ನಳನೃಪತಿಯ
ಬಳಿಗಾ ಕಳಹಂಸ ನವುಳರುಚಿ ಶುಭಶಂಸಂ॥ ೪೩

ವ॥ ಇಂತಾ ಶಕುಂತರಾಜಂ ಬಳಿವರೆ ನಳಂ ಕಂಡು ಕುತುಕಂಗೊಂಡು ದಮಯಂತಿಯ ವೃತ್ತಾಂತ ಮೇನೆಂದು ಬೆಸಗೊಳೆ.

ಕಂ॥ ಅರಸ ನಿಜಗುಣಮ ನೊರೆಯ
ಲ್ಕರಸಿ ಮುದಂ ಬೆರಸು ಕೇಳ್ದೊಡಂ ಮಾನಸದೊಳ್।
ವರಸಿದಳೊಲವಿಂ ನಿನ್ನಂ
ಸ್ಮರಾಗ್ನಿ ಸಾಕ್ಷಿಕವೆನಲ್ಕೆ ರಾಜಮರಾಳಂ॥ ೪೪

ಕಂ॥ ಅದ ನಾಲಿಸಿದೊಡನೆ ಸುಧಾ
ಹ್ರದದೊಳ್ ಮುಳುಗಿದವ್ಪೊಲಾಗೆ ಹೃದಯಂ ಸವೊಗೆ।
ದದೊಳಂಚೆಯ ಮನ್ನಿಸಿದಂ
ವಿದರ್ಭಜಾ ಪರಿಣಯೋತ್ಸುಕಂ ನಳರಾಜಂ॥ ೪೫

ವ॥ ಆಗಳ್ ನಲನೃಪಂಗೆ ನರ್ಮಸಚಿವ ನಿಂತೆಂದಂ.

ಕಂ॥ ನೀರಂ ಗಡ ನೀಂ ನಳಧಾ
ತ್ರೀರಮಣನೆ ನಿನ್ನ ಪೊಲ್ಗಡಾ ಭೈಮಿ ವಲಂ।
ನೀರ ಕ್ಷೀರ ವಿಭೇದಕ
ಮೀರಾಜ ಮರಾಳ ನೊಂದಿಸಿತ್ತಿದು ಚಿತ್ರಂ॥ ೪೬

ಕಂ॥ ಆನರ್ಮಸಚಿವನುಕ್ತಿಯೊ
ಳಾನಂದಮ ನಾಂತು ನೀಡು ಮಾನಳಧರಣೀ।
ಜಾನಿಯುಬೀಳ್ಕೊಂಡೊಡನಾ
ಮಾನಸ ಸರದತ್ತ ತಳರ್ದುದಾ ಕಳಹಂಸಂ॥ ೪೭

ತೃತೀಯಾಶ್ವಾಸಂ.

ಕಂ॥ ಇತ್ತಲ್ ನಳನಗುಣಂಗಳ
ಬಿತ್ತರಿಸಿ ಮರಾಳನೈದೆ ಭೀಮಧರಿತ್ರೀ।
ಭೃತ್ತನುಜೆ ನಳನೃಪಂಗೆರ್ದೆ
ದೆತ್ತುಕರಂ ಚಿತ್ತಭವನ ಬೀರಿಗೆ ಬಂದಳ್ ॥ ೧

ಕಂ॥ ಆರೋಗಿಸ ಳೊಡನಾಡಿಗ
ಳಾರುಮ ನೇ ನೆನ್ನಳಾಟ ಪಾಟಮ ನೊಲ್ಲಳ್ ।
ಸಾರಿಕೆಯನಲ್ಲುಡಿಯು ಮಂ
ಕೂರಳ್ಮಣಾವಭೋಗಕುಂ ಬಗೆದಾರಳ್ ॥ ೨

ಕಂ॥ ಇರ್ಪ್ಪಡುಗಿತಧರ ಪೊಡನೆ ಬೆ
ಳರ್ಪ್ಪಾಂತುದೊಡಲ್ಕದಂಪು ಬಡವಾದುದು ಸುಯ್ ।
ಕರ್ಪ್ಪಾಗಿಸಿ ತೊಳ್ಪೆರ್ದೆಯು ನ
ದಾರ್ಪ್ಪೇಳ್ದಪ ರವಳ ಬೇಟ ವೆಂಕಿಯ ಬಿಸುಪಂ ॥ ೩

ವ॥ ಅಂದವಳಂದಂಗುಂದಿದಂದವಮಂ ಕಂಡು ಕೆಳದಿಯರ್ ಕಳವಳಂಗೊಂಡು ಗಳಿಲನೆ ಶಿಶಿರೋಪಚಾರಂಗೆಯ್ವಲೆಂದು ಸಸಿಗಲ್ಲ ಸರದೆಡೆ ಗೊಡಗೊಂಡು ಪೋಗಿ ಬೆಂದೊಡಲ್ಗೆ ಕುಳಿರ್ವ ಹಿಮಾಂಬುವಂ ಸೂಸಿಯುಂ ಪಳುಕುಗಪ್ಪುರವೆರಸಿ ತೇದ ಬಾವನ್ನಮಂ ಪೂಸಿಯುಂ ನಳನಳಪೆಳೆದಳರ ಬಿಜ್ಜಣಿಗೆಯಿಂ ಬೀಸಿಯುಂ ಚಿತ್ತಜಾನಲಾರ್ಚೆ ಮತ್ತೆ ಮತ್ತೆ ಪೆರ್ಚೆಬರೆ.

ಕಂ॥ ತಾಪವ ನಾರಿಸೆ ಕೆಳದಿಯ
ರೋಪಳಕುಚಮಧ್ಯದಲ್ಲಿ ಸಾರ್ಚಿದ ಶಶಿರೇ।
ಖಾ ಪಾಂಡು ಮೃಣಾಳಗಣಂ
ದೀಪಂದಗುಳ್ದಂತೆ ಕರಿಕುವರಿ ದಶಾಗಳ್ ॥ ಮತ್ತಂ ॥ ೪

ಕಂ॥ ಪಚ್ಚಪಸಿಗಪ್ಪುರಮ ಕ
ಣ್ಗೆಚ್ಚೊಡೆ ಕಾಡಿಗೆವ್ರೊ ಲಾದು ದೆಚ್ಚಳಬೆರಳುಂ ।
ಕಿಚ್ಚುದಗುಳ್ದಂತಿರಾಯ್ತೀ
ನುಚ್ಚರಿಪೇಂ ದೇಹ ದಾಹಮುಂ ಭೀಮಜೆಯಾ ॥ ೫

ಕಂ॥ ನಳದಮ ನೆಳೆಯಳ ಮೆಲ್ಲೆರ್ದೆ
ಗಿಳುಪೆನೆ ಸಖಿಗೋರ್ವಳರಸಿ ಕೇಳ್ದೀಳುತೊಡಂ ।
ನಳದ ನದಾ ರೆನ ಗೆಂದುರೆ
ಕಳವಳಿಪ ಳುಸೀರ ಮೆನ ಲುಸಿರ್ಮಿಗೆಸುಯ್ವಳ್ ॥ ೬

ಕಂ॥ ಇಳಿತಂದುದು ಬಾಷ್ಪಜಳಂ
ಬೆಳರ್ಗಣ್ಮಿಕ್ಕಳಿಸಿದತ್ತು ತನಿಗೆಂ ಪಂಕೋ ।
ಮಳೆಗದರಿದೇಂ ನಳಂಕಂ
ಗಳ ಪೊಕ್ಕಿರೆ ಕಳಲದಿರ್ಪ್ಪವೇ ಕಂಬನಿಗಳ್ ॥ ೭

ಕಂ॥ ಗಳಗಳನೆ ಗಳಪುವರೆಗಿಳಿ
ಗಳ ಕಲಗಳ ಗಳ ಮದಾಳಿಗಳ ಕಳಕಳಕಂ ।
ತಳವಿಗಳಿ ದಳಲನೊಳಕೊಂ
ಡೆಳೆಯಳ್ಕಳವಳಸೆ ಬಳಿಯ ಕೆಳದಿಯರೇವರ್ ॥ ೮

ಕಂ॥ ಯೋಷಾಮಣಿಯ ಮನೋರುಜೆ
ಗೌಷಧಮಾ ನೈಷಧಂ ಸಖೀಜನ ಮದ ಮಾ ।
ಣ್ದೀಷದ್ಧಿಮೋಪಚಾರ ವಿ
ಶೇಷಮ ನೆಸಗಿದೊಡವಳ್ಗದೇಂ ಮಾಣ್ದಪುದೇ ॥ ೯

ಕಂ॥ ಶೀತಾಂಶುವುಮಂ ತಪಿಸಿದ
ಚೇತೋಭವ ವಿಶಿಖ ಶಿಖಿಯ ತಾಪವ ತವಿಸಲ್ ।
ಶೀತೋಪಚಾರಮೆನಿತಂ
ಶಾತೋದರಿಗೆಸಗೆ ತಂಪನೇನಾಗಿಕುಮೋ ॥ ೧೦

ವ॥ ಇಂತು ದಮಯಂತಿ ಕಂತುಸಂತಾಪ ಸಮಾಕ್ರಾಂತ ಸ್ವಾಂತೆಯೆನಿಸಿ ಪ್ಪಾಗಳ್.

ಕಂ॥ ಹಂಸಂ ಗಡೆಸಗಿತಂಗಜ
ಹಿಂಸೆಯು ಸುತೆಗೆಂದು ಬಾರಿಪನೊ ಭೀಮನೆನು ।
ತ್ತಂ ಸದ್ಯಶನಾಮ ಭಯದಿಂ
ದಂ ಸರಿದಪ್ರೊ ಲಸ್ತ ಗಿರಿಯ ರವಿ ಮರೆಗೊಂಡಂ ॥ ಮತ್ತಂ ॥ ೧೧

ಕಂ॥ ಅಂಬರ ಮೆಂಬಂಭೋಜಾ
ತಾಂಬಕನ ವಿಶೀರ್ಣರಶ್ಮಿ ಕೌಸ್ತುಭ ಮುರಳ್ದ ॥
ತ್ತೆಂಬಿನ ಮಸ್ತನಿತಂಬಾ
ಲಂಬಿ ಯನೊತಮಣಿಬಿಂಬ ಮೆಸೆದುದಳಂಬಂ ॥ ೧೨

ಕಂ॥ ಅಸ್ತಮಹೀಧರಸಾನು ಶಿ
ರಸ್ತಟ ಸಂರೂಢ ವಿಕಸಿತಾರುಣ ಬಂಧೂ ।
ಕ ಸ್ತಬಕದಂತಿ ರಹಿಮಗ
ಭಸ್ತಿ ವಿರಾಜಿಸಿದು ದರುಣ ಕಿರಣ ಸ್ಥಗಿತಂ ॥ ೧೩

ಕಂ॥ ಪರಿಕಲಿತ ಶೋಣ ಪಟದಂ
ತಿರೆ ನೀಳ್ದರುಣಾಂಶುಲೇಖೆ ಮೆರೆದತ್ತು ಕರಂ ।
ಚರಮಾಂಬುರಾಶಿ ಯೆಡೆಯೊಳ್
ತರಣಿ ಯೆನಲ್ತರಣಿ ಕಾಲ ಸಾಂಯಾತ್ರಿಕನಾ ॥ ೧೪

ಕಂ॥ ಅನುದಿನಮುಂ ಕುವಲಯ ಪೀ
ಡನೆ ಯೊಡರಿಸಿ ತೀಕ್ಷ್ಣಕರ ನೆನಿಪ್ಪನನೇಂ ತಾ ।
ಳನೆ ಘನ ಪದ ಪತನಮ ನೆಂ
ದೆನೆ ಬಾನಿಂ ದುರುಳ್ದನರ್ಕ ನಪರಾಂಬುಧಿಯೊಳ್ ॥ ೧೫

ವ॥ ಆಗಳ್.

ಕಂ॥ ಅನುರಾಗದೆ ವನನಿಧಿ ಬಿ
ದ್ದಿನಂಗೆ ಸಲೆಬೆಳಗಿ ಕೆಲಕೆ ಚೆಲ್ಲಿದ ನೀರಾ ।

ಜನ ಪರ್ಯಾಣದಕೆಂನೀ
ರೆನಿಸಿತ್ತು ಮಿನುಂಗುತಿರ್ಪ ಸಂಧ್ಯಾರಾಗಂ ‖ ೧೬

ಕಂ॥ ಪಡುಗಡಲೊಳಗವಗಾಹಕೆ
ನಡೆತಂದಾ ವೃದ್ಧಹಂಸ ನೊಡಲಿಂ ತೆಗೆದೇಂ ।
ಮಡಗಿರ್ಪ ಕಾವಿಯುಡೆಯೆಂ
ಬೆಡೆಗೆಡೆಯಾಯ್ತಿಡಿದುತೋರ್ಪ ಸಂಧ್ಯಾರಾಗಂ ‖ ೧೭

ವೃ॥ ಹರನೃತ್ಯಾರಂಭ ಸಂರಂಭದೆ ಕೆದರ್ದ ಜಪಾಗುಚ್ಛವೋ ಮೇಣ್ಪೈಯತ್ಸಿಂ
ಧುರ ಶೀರ್ಷೋಪಾತ್ತ ಸಿಂದೂರವೊ ರವಿತುರಗ ಕ್ಷುಣ್ಣ ಪೂರ್ವೇತರೋರ್ವೀ
ಧರ ಶೋಣ ಗ್ರಾವರೇಣುವ್ರಜವೊ ಬಗೆಯೆ ರಾಜಾಗಮಾಬದ್ಧ ಶೋಭಾ
ಕರ ಮಾಣಿಕ್ಯಾವಳೀ ತೋರಣವೊ ಎನೆ ಬೆಡಂಗಾಯ್ತು ಸಂಧ್ಯಾಂಶು
ಜಾಲಂ ‖ ೧೮

ಕಂ॥ ಮುಗಿದವು ತಾವರೆಗಳ್ಕೆ
ಮುಗಿವಂತಿರೆ ಸಂಧ್ಯೆಗಾಸರೋಜಿ ನಿಯೆಣೆನ
ಕ್ಕಿಗಳಗಲಿ ಸುತ್ತಿಸುಳಿದವು
ಬಗೆಮಿಗೆ ಬಲವರ್ಪ ತೆರದೆ ತಿಳಿಗೊಳದೆಡೆಯೊಳ್ ‖ ೧೯

ಕಂ॥ ಇನ ವಿರಹಾನಲನಿಂ ಪ
ದ್ಮಿನಿ ಯುದರೆ ಮುದುರಿದು ಕರಿಕು ವೊದತ್ತೆನೆ ಭೋಂ ।
ಕನೆ ಮುಗಿವ ವನಜ ಮಧ್ಯದೊ
ಳೆನಸುಂ ಸಿಲ್ಕಿದ ಮದಾಳಿ ಯೇನೊಪ್ಪಿದುದೊ ‖ ೨೦

ಕಂ॥ ಇನನಗಲಿ ಪೋದೊಡಾ ಪ
ದ್ಮಿನಿ ಜೀವನ ವ್ಯೈದೆ ಕೊರಲ ವರೆಗಂ ಕರೆದಂ ।
ಜನ ಮಿಶ್ರಬಾಷ್ಪ ಬಿಂದುಗ
ಳೆನೆ ಮುಗಿದಂಬುಜದೆ ಸಿಲ್ಕಿದಳಿ ಕುಲ ಮೆಸೆಗುಂ ‖ ೨೧

ಕಂ॥ ಮಿತ್ರನತೇಜಂ ಕಿಡಲತಿ
ಮಾತ್ರಂ ಮರುಗುತ್ತೆ ಮುಗಿದುದೆನೆ ತಾವರೆವಲ್ ।

ಮಿತ್ರಾಪದ ಕಳಲದವಂ
ಧಾತ್ರಿಯೊಳದರಿಂದಮುಂ ಕರಂ ಕಡೆಯಲ್ತೆ ॥ ೨೨

ಕಂ॥ ಕೋಕಂ ನವವಿರಹೋದ್ರೇ
ಕೋಕಂ ಕೋಕನದ ಸರದೊ ಳರಸರಸುತ್ತಂ ।
ಕೋಕಿಯು ನಳಲ್ದುದಾದಂ
ಕೋಕಿಲ ಕುಲ ನೀಲ ನಿಬಿಡ ತಮದೊಳ್ ತಮದೊಳ್ ॥ ೨೩

ಕಂ॥ ಇರುಳರಸಿ ಸಿಂಗರಂಗೊಳೆ
ಪರಿಣತ ರವಿ ದೀಪಮಿಟ್ಟುಬಾಸಣಿಸಿದೊಡಂ ।
ಬರ ಪೃಥುಶರಾವಮುಂ ಕುಡಿ
ಪರಿದುದೊ ಕಾಡಿಗೆ ಯೆನಲ್ಕೆ ಪರೆದುದು ತಿಮಿರಂ ॥ ೨೪

ಕಂ॥ ಇರುಳರಸಿಗ ಮಿಂದುವಿಗಂ
ತರಿಸಂದ ಕರಗ್ರಹಣಕೆ ಕಾಲಂ ನೀಲಾಂ ।
ಬರೆದೆ ವಿತಾನಂ ಗಟ್ಟದ
ಪರಿಯಿಂದಂ ಸುತ್ತಮಿಡಿದ ಕಳ್ತಲೆ ತೋರ್ಕುಂ ॥ ೨೫

ಕಂ॥ ವಿಪ್ರುಲ ವಿಯನ್ಮಣಿ ದೂರ
ಪ್ರಪತನ ಸಂಕ್ಷುಬ್ಧ ಪಶ್ಚಿಮಾಶೋದನ್ವ ।
ಚ್ಛಪಲೋರ್ಮಿಕೀರ್ಣ ಶೈವಾ
ಲ ಪರಂಪರೆಯೆನಿಸಿ ಮಬ್ಬುಪಬ್ಬಿತ್ತಾಗಳ್ ॥ ೨೬

ಕಂ॥ ತನುಮುಂ ಪರಿಕಿಸೆ ದುರ್ಜನ
ತಮನುಂ ತಾವೊಂದೆ ತೆರನದೆಂತೆನ ಲಾಲೋ ।
ಕ ಮಹಾವಿಘಾತಿ ಕರಣೋ
ದ್ಯಮದಿಂ ಮೋಕ್ಷಾಪಥುಚಕ್ರ ಬಾಧನದಿಂದಂ ॥ ೨೭

ಕಂ॥ ಮದನನ ಜಯಯಾತ್ರಾರಂ
ಭದೆ ಪದಪಿಂ ಸಾಂಧ್ಯಕಾಲ ಸಾಂವತ್ಸರಿಕಂ ।

ಕೆದರ್ದ ಧವಳಾಕ್ಷತ ವ್ರಾ
ತದ ವೋಲ್ ಲ್ರುರುಗಿತ್ತು ನಭದೆ ತಾರಾವಾರಂ ॥ ೨೮

ವೃ॥ ಗಗನಾಂಭೋರಾಶಿ ಮುಕ್ತಾನಿಕರವೊ ವಿಯದುತ್ತುಂಗಮಾತಂಗಕಂತ
ಸ್ಥಗಿತೋದ್ಯ ದ್ರೌಪ್ಯಘಂಟಾ ಸರವೊ ಬಗೆಯೆ ತಾರಾಧ್ವತಾಪಿಂಚವಲ್ಲೀ ।
ಪ್ರಗತ ವ್ಯಾಕೋಚಪುಷ್ಪಾಘವೊ ಖತಲಕಳಿಂದಾತ್ಮಜಾ ಪೀನ ಫೇನಾ
ಳಿಗಳೋ ಪೇಳೆಂಬಿನಂ ಕಣ್ಗೆಸೆದುದಮಳಿನ ದ್ಯೋತ ತಾರಾ ಪ್ರತಾನಂ॥

ವೃ॥ ಜಾರೆ ತಮಂ ನಭೋಂಕಣದೆ ತಾರೆ ಕರಂ ತಲೆದೋರೆ ಕೈರವಂ
ಸೇರೆ ವಿಕಾಸಮಂ ಜಲಮು ನೂರೆ ವಿಧೂಪಲ ಮಬ್ಧಿಮೇರೆಯಂ ।
ಮೀರೆ ಚಕೋರಿ ಪೇರೆ ಮುದಮಂ ಸಲೆ ಬೀರಮು ನಾರೆ ಮನ್ಮಥಂ
ತೋರಿದು ದೈಂದ್ರಿಯಿಟ್ಟಮಲ ಚಂದನ ಬಿಂದುವೊ ಲಿಂದು ಮಂಡಲಂ ॥

ಕಂ॥ ಕೆಂಬೆಳಗಿಡಿದುದಯಾಚಲ
ಮೆಂಬಾಸ್ತಂಬೇರಮಾನನನ ಮುರಿವೆತ್ತೊ ।
ಕೊರ್ಂಬೆಂಬಿನ ಮೆಸೆದುದು ಶಶಿ
ಬಿಂಬಂ ಕರೆತಳ್ತ ತನ್ಮದಾಂಬು ಮೆನಿಕ್ಕುಂ ॥ ೩೧

ಕಂ॥ ಸಸಿಗದಿರ್ಗಳಿಂ ಬೆಳತ್ತಾರ್
ಗಸ ಮಿಂಗಡಲಾಗೆ ಬಟ್ಟಸಸಿ ಪಾಸಿಗೆಯಾ ।
ದ ಸರೀಸೃಪ ವರನಂತಿರೆ
ಯೆಸೆದುದು ಕರೆ ಯುದರೊಳೊರಗಿದಬ್ಜಾಕ್ಷನ ವೋಲ್ ॥ ೩೨

ವೃ॥ ಹರಿದಿಕ್ಕಾಂತಾ ಕರಾಂಚತ್ತುಹಿನ ಕರ ಶಿಲಾ ದರ್ಪಣಂ ದರ್ಪಕಕ್ಷ್ಮಾ
ವರ ಸಾಮ್ರಾಜ್ಯಾಭಿಷೇಕ ಸ್ಫಟಿಕಕಲಶ ಮಾಕಾಶ ಕಾಸಾರ ಹಂಸಂ
ವಿರಹಿ ವ್ರಾತಾಹಿ ತಾರ್ಕ್ಷ್ಯಂ ತಿಮಿರ ಗಜ ಘಟಾಟೋಪ ಸಂಹಾರಸಿಹ್ಮಂ
ಕರ ಧೌತಾಶಾ ಕದಂಬಂ ಸೊಗಯಿಸಿದು ದಳುಂಬಂ ಸುಧಾಸೂತಿ
ಬಿಂಬಂ ॥ ೩೩

ಕಂ॥ ರಜನೀಮುಖ ನಟದುಕ್ಷೆ
ಧ್ವಜ ಚರಣಸ್ರಸ್ತ ರಜತ ನೂಪುರ ಮೆಂಬೋಲ್ ।

ದ್ವಿಜರಾಜ ಬಿಂಬ ಮೆಸೆದುದು
ನಿಜ ಕಾಂತಿ ವಿಶೇಷ ಪೂರಿತಾಂತರ ಮಾಗಳ್ ‖ ೩೪

ವೃ‖ ಸೊಸಿದ ಸೇಸೆ ಯಕ್ಕಿಗಳವ್ರೋಲಿರೆ ಮೂಡಿದ ತಾರಕಾಳಿ ಯು
ಲ್ಲಾಸಿಪ ನೈದಿಲೊಳ್ಮೊರೆವಳಿಧ್ವನಿ ಮಂಗಳವಾದ್ಯಮಾಗೆ ತೇ ।
ಶೈಸಿದ ಸಂಜೆ ಯೋಸರಿಸೆ ಕಾನಕಕಾಂಡಪಟಂಬೊ ಲಾಗಳು
ದ್ಭಾಸಿತ ರಾಗ ನಿಂದು ಪಸೆನಿಂದ ನುದಂಚಿತ ರಾತ್ರಿ ಕನ್ಯೆಯೋಳ್‖ ೩೫

ವೃ‖ ಪರಿಕಿಸೆಕಾಲ ಸಿದ್ಧ ಪುರುಷಂ ರಜನೀಕರ ರೌಪ್ಯಪಿಂಡಮಂ
ಪೊರೆದಮರ್ದೆಂಬ ಸಿದ್ಧರಸದಿಂ ನವಸಾಂಧ್ಯವಿಭಾನಲಾರ್ಚಿಯೋಳ್ ।
ನೆರೆ ಪುಟವಿಕ್ಕುತಂದಲೊಡನಾಯ್ತು ಸುವರ್ಣಮದೆಂಬವಾಳ್ಕೆಯಿಂ
ದರುಣಮರೀಚಿ ಕಂಚುಕಿತ ಮೊಪ್ಪಿದು ದುತ್ಪಲ ಬಂಧು ಮಂಡಲಂ‖ ೩೬

ಕಂ‖ ಜೀವಂಜೀವಂ ನಲವಡ
ಲೋಪಿಕರಂ ಕುಮುದಮಂ ವಿಕಾಸಿಸಿ ಸನ್ಮಾ ।
ರ್ಗಾವಸಥನೆನಿಸಿ ನಡೆವ ವಿ
ಭಾವರಿಯೂಣ್ಮಂಗೆ ತಕ್ಕುದಲೆ ರಾಜಾಖ್ಯಂ ‖ ೩೭

ಕಂ‖ ಕರಿವಟ್ಟೆಯು ಬತ್ತಿಯುವ್ರೋ
ಲಿರೆಕರೆಯಿಡಿದಮರ್ದೆ ತೈಲಮೆನೆ ಕಿರಣ ಶಿಖಾ ।
ಪರಿಹೃತ ತಮಃ ಪತಂಗಂ
ಕರಮೆಸೆದುದು ದೀಪ ಮಿದೆನೆ ಶಶಿ ರೋದಸಿಯಾ ‖ ೩೮

ಕಂ‖ ಅಸಮಶರಂ ವಿರಹಿಯು ನಿಸೆ
ಮಸೆಯಲ್ಕಿಟ್ಟಸಿತ ನೀರಜಾಶುಗಮೆನೆ ತ ।
ಳ್ಕಸಿದ ಕರೆ ಚಂದ್ರಮಂಡಲ
ಮೆಸೆದುದು ಕಿಸುಗಲ್ಲ ಬಟ್ಟಸಾಣೆಯ ಪಾಂಗಿಂ ‖ ೩೯

ಕಂ‖ ಕುಡು ವಿಲ್ಲಂ ವಿರಹಿಗಳಂ
ಸುಡೆ ತೆಗೆದಾಜ್ಞೋಯು ಬಾಣ ಮೆನೆ ಪೆರೆ ಕರೆ ಸಂ ।

ಗಡಿಸಿದ ಧೂಮಾಂಕುರ ಮೆನೆ
ಕುಡಿವರಿದುರಿಯಂತೆ ಶಶಿಯ ಮುಂಬೆಳ ಗೆಸೆಗುಂ ॥ ವೃತ್ತಂ ॥ ೪೦

ಕಂ॥ ಸ್ಮರಕೃತ ವಿರಹಿಸ್ತಂಭನ
ಕರ ರಾಜತ ಪತ್ರಯಂತ್ರ ಮೆನೆ ಪೆರೆಮಸಿಯಿಂ ।
ಬರೆದೋಂಕಾರಮಿದೆನೆ ಕರೆ
ಕರ ಮೆಸೆದುದು ತಳಿವ ಬೂದಿಯಂತಿರೆ ಜೊನ್ನಂ ॥ ೪೧

ವ॥ ಇಂತೊಗೆತಂದ ಚಂದ್ರಮಂಡಲ ಮನಾ ಪುಂಡರೀಕಾಕ್ಷಿ ಪುಂಡ್ರೇಕ್ಷು ಕೋದಂಡನ ಕುಂಡಲಿತ ಕುಸುಮ ಕೋದಡಂಗೆತ್ತು ನೋಡಿ ಬಾಡಿ ಕಂಗೆಟ್ಟು ಪೆರ್ಚಿದ ವಿರಹಾನಲಾರ್ಚಿಗಾದಾದಂ ಬೆರ್ಚಿ ಬೆರಳಂಕರ್ಚಿ ಬಿದಿಗೆ ಪುಯ್ಯಲ್ಚಿ ಬಿದುವಂ ಬೈಯ್ಯಲ್ಕಿದಿರ್ಚಿ.

ಕಂ॥ ಎಲೆಎಲೆ ಕಳಂಕಿದಾ ವಾ
ನಲ ಸನ್ನಿಭ ಕಿರಣನೆನಿಸಿದೀ ನಿನ್ನಂ ಶೀ ।
ತಲ ಕಿರಣನೆಂದು ಪೇಳ್ದರ
ತಲೆಗಾದಂ ಪಿತ್ತ ಮಹಹ ಪತ್ತಿರವೇಳ್ಕುಂ ॥ ೪೨

ಕಂ॥ ಭಾಷಿಸಿದರ್ಗ್ಗಡ ಸಸಿಯಂ
ದೋಷಾಕರ ನೆಂದು ಬಲ್ಲರೆಲೆ ಸಖಿ ಯೀದೃ ।
ಗ್ದೋಷಾಜನ ಹಿಂಸೈಕಮ
ನೀಷಿಗೆ ನಿರ್ದೋಷಭಾವ ಮೆತ್ತಣಿ ನಕ್ಕುಂ ॥ ೪೩

ಕಂ॥ ಪರಿಕಿಸೆ ದಕ್ಷನ ಶಾಪಕೆ
ಗುರಿಯಾಗಿಯು ಮುಳಿದೆ ರಾಹುವದನಂಬೊಕ್ಕುಂ ।
ಮರಳ್ವಯುಸುವೆರೆಸು ಪಾಪೀ
ಚಿರಾಯು ಎಂದೆಂಬ ನೀತಿ ನಿಜಮಲೆ ಚಂದ್ರಾ ॥ ೪೪

ಕಂ॥ ನಿರುಕಿಸಿದೊಡ ಮಿವನಂ ಸೀ
ಕರಿಯಾದಪನೆವೆಗ ಳಕ್ಕಟಾ ಪೇಳಿನ್ನೀ ।

ದುರುಳನ ಖರಕರ ಪಾತಕೆ
ತರಹರಿಪೆನೆ ಕೆಳದಿ ವಾರಿಸುಡೆ ಸೆರಗಿಂದಂ ॥ ೪೫

ಕಂ॥ ಕ್ಷತ್ರಪತಿ ಯಾದವಂಗಾ
ರ್ತತ್ರಾಣ ಪರತ್ವ ಮಿರ್ಪುದೆಲೆಶಶಿ ನೀಂ ನ ।
ಕ್ಷತ್ರಪತಿ ನಿನಗಭಿಖ್ಯಾ
ಮಾತ್ರಂ ರಾಜ ಪದ ಮಲ್ಲ ದನ್ವರ್ಥವೆ ಪೇಳ್ ॥ ೪೬

ಕಂ॥ ಸ್ವಕಿರಣ ದಂಷ್ಟ್ರಾಕಾಂಡದೊ
ಳಕಟಾ ಸಖಿ ಸಾರ್ಚಿರ್ಗನುರ್ಚು ನುರಿಯೆನೆ ವಿರಹಿ ।
ಪ್ರಕರಮನಗಿವ ಪಯೋನಿಧಿ
ಮಕರಮಿದಂ ಕಾಣದಕಟ ಹಿಮಕರ ನೆಂಬರ್ ॥ ೪೭

ಕಂ॥ ಪಡೆದಂಗಂ ಭಂಗಮ ಸಂ
ಗಡಿಪಂ ಸೋದರಿಯು ಮನೆಗ ಮೊಣಿಪಂ ಕೇಡಂ ।
ನುಡಿ ಕೆಳದಿ ಯುಳ್ಳದರಂ ಗೋ
ಳ್ಗುಡಿಸದೆ ಬಿಟ್ಟಪನೆ ಪಾಪಿ ಯಿಾ ರಜನೀಪಂ ॥ ೪೮

ಕಂ॥ ಅನ್ನೆವರ ಮೆಲೆ ಕಳಂಕಿಯೆ
ಬನ್ನಂಬಡಿಸಡೆಗೆ ಬರ್ಕೆ ಯೆನ್ನಯ ನೀರಂ ।
ತನ್ನಿರ್ಮಳಮುಖ ಬಿಂಬದೆ
ನಿನ್ನಯ ಸೊರ್ಕ್ಕಡಗಿಸದೆ ವಲಂ ಮೂಣ್ಡಪನೇ ॥ ೪೯

ವ॥ ಎಂದಾ ಅರವಿಂದಮುಖಿ ಚಂದಿರನಂ ಪಲವಂದದಿಂ ನಿಂದಿಸಿ ಮತ್ತಂ ದಂದುಗಂಬಡಿಪ ಕಂದರ್ಪನಂ ಕುರಿತು.

ಕಂ॥ ಸೌಂದರ್ಯ ಲೇಶದಿಂ ದೆ
ನ್ನಂದಂ ಗೆಡಿಸಿದನ ಕೂರ್ತಳೆಂಬೊಮರ್ಳಸಿಂ ।
ದಂದುಗವಡಿಪೆಗಡೆನ್ನಂ
ಕಂದರ್ಪನೆ ತಕ್ಕುದಲ್ತು ತಕ್ಕಗೆಸೊಯಂ ॥ ೫೦

ಕಂ॥ ಸುಮನೋ ಧರ್ಮನು ಮೆನಿಸುಂ
ಸುಮಾಸ್ತ್ರ ಪೇೞಬಲೆಯರ್ಕಳಂ ಹಿಂಸಿಪುದೇಂ ।
ಸಮುಚಿತಮೆ ನಿನಗೆ ತೆಗೆಯಕ್ರಮು
ಕರ್ಮೋದ್ಯೋಗ ಮುಚಿತ ಮಲ್ತಾವಂಗಂ ॥ ೫೧

ಕಂ॥ ಫಲ್ಲಶರ ನೆಂದು ನಿನ್ನಂ
ಸೊಲ್ಲಿಸಿದವ ರನೃತವಚನ ರಲ್ಲದೊಡೆನ್ನೀ ।
ಕಲ್ಲೆರ್ದೆಯುಂ ಪೂಗಣೆಯಿಂ
ಝಲ್ಲೆನೆ ಪೊಡೆದೆಂತು ನುಚ್ಚುನುರ್ಗೈದಪೆ ಕಂತೂ ॥ ೫೨

ಕಂ॥ ಸುಡುವೈ ಜಡೋಪ ಕರಣದಿ
ನೊಡಲಂ ಮೇಣಿರೆ ದೃಢೋಪಕರಣ ಮದೇಂಗೊ ।
ಳ್ಗುಡಿಸುವೆಯೊ ನಿನಗೆ ತಕ್ಕುದ
ನಡಸಿದ ನಾ ಮೃಡ ನದೇಕೆ ಪಡೆದನೊಬೞಿಯುಂ ॥ ೫೩

ಕಂ॥ ಆನಂಗವಿದಿಡುವೆಂ ಸಖಿ
ಭಾವಜ ವಿಶಿಖಾನಲೋಗ್ರತಾಪವ ನಿದನಿ ।
ನ್ನಾವಂ ಪರಿಹರಿಸಿದಪಂ
ಕಾವನೆ ಕೊಲಲೆಳಸೆ ಕಾವರಾರಿ ನ್ನಿಳೆಯೊಳ್ ॥ ೫೪

ಕಂ॥ ಮನಸಿಜ ನೆನಿಸಿಯು ಮಹಹಾ
ಮನಮುಂ ಸುಡುವೀ ಪ್ರಸೂನ ವಿಶಿಖಂ ಸಖಿ ಕಾ
ನನದೊಳಗೊಗೆದಾ ಕಾನನ
ಮನೆ ಸುಡುವನಲಂಗನುಜನೊ ಮೇಣಗ್ರಜನೋ ॥ ೫೫

ಕಂ॥ ಕದನವು ಮಾಣೆನ್ನಿದಿರೊ
ಳ್ಮದನಾ ಮದ್ಧೃದಯು ಸದನದೊಳ್ನೆಲಸಿರ್ಪಂ ।
ಪದಪುಮಿಗೆ ರಾಜಶೇಖರ
ನಿದನೀಂಯೋಚಿಸ ದಿದಿರ್ಚಲೇ ನಪ್ಪೆಯೊ ಪೇೞ್ ॥ ವೃತ್ತಂ ॥ ೫೬

ವೃ॥ ಫಣಿವೇಣೀ ಸಾಮದಿಂ ಸಾಧಿಸೆ ಮಧುಪಗುಣಂ ದಾನದಿಂಕೂರಿಸಲ್ ಶ್ರೀ
ಯಣುಗಂ ಮೇಣ್ ಭೇದದಿಂ ಭೇದಿಸುವೆನೆನೆ ಮಹಾಭೇದವಿಚ್ಛಿಂಬ
ರೋನ್ಮಾ।
ರಣ ದಕ್ಷಂ ದಂಡದಿಂ ಬಾರಿಪೆನೆನಲುಮನಂಗಂ ವಲಂ ಪಾಪಿಯೀಪೂ
ಗಣೆಯಂ ಪೇಳನ್ನ ಜಯ್ಯುಸ್ಮರನನೆಲೆ ಸಖೀಜೈಸಲಿನ್ನೇನುಪಾಯಂ॥

ವ॥ ಇಂತು ಕಾಂತೆ ಕಂತುವಂ ಪಳಿಯುತ್ತಿರೆಯಿರೆ.

ವೃ॥ ಊದಿದುದಾಗಳಂಗಜಮಹಾಶಿಖಿ ಪ್ರೋತ್ತೆಪಟೀರಭೂಮಿಭೃ
ತ್ಪಾದವನಾಂತಚಾರಿ ಶಬರೀ ಕಬರೀ ಪರಿಫುಲ್ಲ ಮಲ್ಲಿಕಾ।
ಮೋದಧುರೀಧುರೀಣ ನನುಯಾತಮಧುವ್ರತ ಗೀತನಿಸ್ವನೋ
ತ್ಪಾದಿತ ವಿಪ್ರಯುಕ್ತವನಿತಾಶ್ರವಣವ್ರಣ ನಾಸಮೀರಣಂ॥ ೫೮

ವ॥ ಅಂತು ದಕ್ಷಿಣಸಮೀರಣಂ ತೀಡಿದ ಕ್ಷಣಮೆ ಪೆರ್ಚಿದಿಕ್ಷುಚಾಪ ಶರಾ
ನಲನಕ್ಷೀಣತಾಪಮನಾಹರಿಣಾಕ್ಷಿಸೈಸದಾಱನಿಲನನಾಕ್ಷೇಪಿಸಲೊ
ಡರ್ಚ್ಚಿ.

ಕಂ॥ ಕಾಣೆನದಾರಿವನ ಬಗ
ತ್ಪ್ರಾಣನೆನುತ್ತಿರ್ಪರೋ ಸಖೀ ತಾಗ ಲೊಡಂ।
ಬಾಣದವೊಲೆರ್ದೆಗೆ ತಾಪವ
ಕಾಣಿಪ ನಿಮಗೆುಚಿತಮೆನಿಕುಮಾಶುಗನಾಮಂ॥ ೫೯

ಕಂ। ಭುವನದೊಳತಿಬಲನೆಂಬೊಂ
ದು ವಿಶೇಷಾಭಿಧೆಯನಾಂತುಮಬಲಾಜನಮಂ।
ಪವಮಾನ ತವಿಸಲೈತ
ಪ್ಪವಮಾನಮ ನೆಂತು ಕಳೆವೆಯದನರುಪೆನ್ನೊಳ್॥ ೬೦

ಕಂ॥ ಉರಗಾಸ್ಯವ ನೊಳಪೊಕ್ಕಂ
ಬರುವುದುಮಂ ವಿರಹಿಜನರಗೋಳ್ಗಳಪುದುಮಂ।
ನೆರೆರಜನೀಕರನಿಂ ಕ
ಲ್ತಿರವೇಳ್ಕುಮದಲ್ಲ ದನಿಲ ನಿನಗೆಂತಕ್ಕುಂ॥ ೬೧

ಕಂ॥ ಕಾವನೆ ಕೊಲದೊಡಗಿದೊಡಿ
ನ್ನೇವೇಳ್ವೆಂ ನೀಂ ಪ್ರಭಂಜನಂಗಡ ಮೇಣಾ ।
ಪಾವಕಸಖ ನಾರಯಲಿ
ನ್ನೀವುದು ವಿಸ್ಮಯಮೆ ಮನಕೆ ತಾಪವ ಪವನ ॥ ೬೦

ಕಂ॥ ಪಳಿದಿಂತು ಕಂತು ಚಂದ್ರಾ
ನಿಳರಂತದ್ಬಾಧೆಗಾರದ ಳವಳಿಯುತ್ತಂ ।
ನಳ ಹಾಹಾ ಯೆನುತಂ ಕೋ
ಮಳೆ ತಾಂ ಕರುವಿಟ್ಟ ಕರುಣಮೆಂಬ ವ್ರೊಲಿರ್ದ್ದಳ್ ॥ ಆಗಳ್ ॥ ೬೩

ವೃ॥ ತೀಡೆ ವಿಭಾತವಾತ ಮಿರದೋಡೆ ತಮಂ ನಗೆಗೂಡೆ ಪಂಕಜಂ
ಪಾಡೆಮದಾಳಿ ಬಾಡೆ ಕುಮುದಾವಳಿ ಕೂಡೆ ರಥಾಂಗಯುಗ್ಮಮು ।
ಳ್ಳಾಡೆ ಚಕೋರಿ ಮೂಡೆ ಬೆಳಗೆಂಪಿಳೆಗೆಳ್ಚರಮಾಡೆ ಮೂಡಲೇಂ
ಮೂಡಿದನೋ ಸಮೂಢ ಘುಸೃಣ ಪ್ರಕರಾಭಕರಂ ವಿಭಾಕರಂ ॥ ೬೪

ಕಂ॥ ಧರಿಸಿದನವಕಾಷಾಯಮಾಂ
ಬರದಂತಿರೆ ಮುಂಬೆಳಂಗಿನಿಡಿದಂಬರ ಮಾ ।
ಹರಿದಿಕ್ಶಿಖರಸ್ಥಿತನೇಂ
ಕರಮೆಸೆದನೊ ಪರಮಹಂಸನೆನೆ ಪದ್ಮಾಪ್ತಂ ॥ ೬೫

ಕಂ॥ ಶಾಸಿಸೆತಮಸ್ಸುರಾರಿಯು
ಗೊಸಣಿಗೆಯಿನುಗಿದ ಕಾಲಹರಿಚಕ್ರಮೆನ ।
ಲ್ಕೊಸರಿಸೆ ಸಂಜೆಗೆಂಪೇಂ
ಭಾಸುರಮಾದತ್ತೊ ಮಾ ಸರೇಶ್ವರಬಿಂಬಂ ॥ ೬೬

ಕಂ॥ ಘನಮಾರ್ಗಚಾರಿತೇಜೋಂ
ಕನಿಳಾಮಿತ್ರಂ ಸುರಕ್ತಮಂಡಲನೆನಿಪಾ ।
ಯಿನನಭ್ಯುದಯಂಬೆತ್ತಿರೆ
ನನೆಕೊನೆಯಂತಾಳದಿರ್ಕುಮೇಂ ಸಚ್ಚಕ್ರಂ ॥ ೬೭

ಕಂ॥ ಇನನೈತರೆ ಪದ್ಮಿನಿ ನನೆ
ಕೊನೆಯಲರೆ ಸಮಂತುತತ್ಕರಗ್ರಹಣಾ ಮೋ೯ ।
ದಿನಿ ತುಳ್ಕಿದ ಸಂತಸಗಂ
ಬನಿಯೆನೆದಳದಬ್ಜಗಳತ ಮಧುಕಣ ಮೆಸೆಗುಂ ॥ ೬೭

ಕಂ॥ ಜಾರೆ ಸಿರಿ ಪೊದುದೈತರೆ
ಸಾರಿದುದು ಮಗುಳ್ಗಡೆನ್ನ ನೆಂದೇಳಿಕುವಮಂ ।
ಭೋರುಹ ಮೆಂದೆಣಿಸದೆಮುಸು
ರ್ದ್ದಾರಡಿತಾನದರಿನಲ್ತೆ ಬಂಡುಣಿಯೆನಿಕುಂ ॥ ೬೮

ಕಂ॥ ಪ್ರಮದಾಳಿಶೋಭಿಸುತರಂ
ಗಮನಂತಮಣೀವಸುಪ್ರಕಾಶಿತ ಕೋಶಂ ।
ಕಮಲಾಕರಮೇನೆಸೆದುದೊ
ಕಮಲಾಕರ ಗೃಹಮಿದೆನೆದಿನೇಶೋದಯದೋಳ್ ॥ ೭೦

ವೃ॥ ಪ್ರಾಚೀಮಾಣಿಕ್ಯ ತಾಟಂಕಮೊ ದಿವಸರಮಾಪಾಣಿಪಂಕೇಜಗವ್ಯಾ
ಕೋಚಸ್ವರ್ಣಾಬ್ಜಮೋ ಪುಷ್ಕರ ಮುರಹರ ಹಸ್ತಾಬ್ಜವಿನ್ಯಸ್ತಚಂಚ।
ದ್ರೋಚಿಶ್ಶ್ರೀಚಕ್ರಮೋ ಮೇಣ್ಮಲಯಶಿಖರಿಬಂಧೂಕಮೊಪೇಳಮೆಂಬಂ
ತಾಚಾಂತಧ್ವಾಂತವಾರಾಕರ ಮೆಸೆದುದಳುಂಬಂ ದಿನಾಧೀಶಬಿಂಬಂ ॥ ೭೧

ವ॥ ಆಗಳ್ ನಿದಾಘತಪನಾತಪಪ್ರತಪ್ತತರುಣತಮಾಲಲತೆಯಂತೆ ನೀಡುಂ ಬಾಡುತ್ತಮಿರ್ಪ ದಮಯಂತಿಯ ಶರೀರದ ಸ್ವಸ್ಥತೆಯಂ ಸಖಿಯರವಳ ಮಾತೆಗರುಪಿದೊಡಾ ಮಾತೆಗಾಕೆ ಯಾಕುಲಿಸುತ್ತ ಮಾತ್ಮಜೆಯೆಡೆಗೈತಂದು.

ವೃ॥ ಉಗುಮಕದುಷ್ಣಬಾಷ್ಪ ಜಲಕೀ ನಗೆಗಣ್ಬಿಸುಪಾಂತ ಸುಯ್ಲ ಸೋಂ
ಕಿಗೆ ತನಿದೊಂಡೆವಣ್ದುಟಿಬೆಡಂಗಳದಿರ್ಪುವೇಕೆ ಮಜ್ಜನಂ ।
ಬೊಗದೆಯದೇನುಮಾರೊಗಿಸದೋವೊ ನಿದಾಘಖರಾಂಶುತಪ್ತವ
ಲ್ಲಿಗೆ ದೊರೆಯಾಗಿ ತೋರ್ಪೆಯದೆಂ ದುಗುಡಂಬಗೆಗಾಯ್ತು
ಪುತ್ರಿಪೇಳ್ ॥ ೭೨

ವ॥ ಎಂದ ಮಾತೆಯ ಮಾತಿಂಗೆ ಪುಸಿಮಾತನಾಡಲಪ್ಪುದೆಯುಂ ನಾಣಿಂನಿಜ ಮನಾಡಲಪ್ಪುದೆಯುಂ ನೆಲನನುಂಗುಟದಿಂ ಬರೆವುತ್ತಮಾದಮಯಂತಿ ಯುಸಿಕನಿರ್ಪನ್ನೆಗಮೆ ಭೀಮಮಹೀಕಾಂತಂ ಸಖೀ ಮುಖವಿದಿತ ನಿಜ ಸುತಾವೃತ್ತಾಂತಂ ಕನ್ಯಕಾಂತಃಪುರಮಂ ಪುಗುತರ್ಪುದುಂ.

ಕಂ॥ ಒಡನೇಳ್ದು ಭೈಮಿ ಭಕ್ತಿಯಿ
ನಡಿಗಳ್ಗೆರಗಲ್ಕೆ ನಲವುಮಿಗೆ ಕರತಲದಿಂ ।
ಮುಡಿದಡವಿತಕ್ಕವರನಂ
ಪಡೆ ಪುತ್ರಿಯೆನುತ್ತೆ ಪರಸಿದಂ ಭೀಮನೃಪಂ ॥ ೭೩

ವ॥ ಅಂತು ಪರಸಲೊಡಂ ಹರಿಸಂಮಿಗೆ ತಲೆವಾಗಿ ಸಾರೆಯೊಳ್ ನಿಂದಿರ್ದೀರುಂ ಜವ್ವನೆಯಾದ ಕುಮಾರಿಯ ವದನಾರವಿಂದಮಂ ವಾತ್ಸಲ್ಯದಿಂ ನೀಡುಂ ನೋಡಿ ಯಣುಗಿ ವರವರಣಕೆ ನೆರೆದಳೆಂದರಿದು ನಿಜಕಾಂತೆಯೊಡನೆ ಮಂತಣಂಗೈದೊಡನಾಸ್ಥಾನಮಂಟಪಕ್ಕೈತಂದು ಮಂತ್ರಿಪುರೋಹಿತಪ್ರ ಮುಖರಂ ಬರಿಸಿ ದಮಯಂತಿಯ ಸ್ವಯಂವರ ಮಹೋತ್ಸವಾರ್ಥಂ ನಳನರೇಂದ್ರಂ ಮೊದಲಾದ ಸಕಲ ಪಾರ್ಥಿವಪ್ರತಾನಂ ಬರ್ಪಂತೆ ಶುಭ ಪತ್ರಿಕೆಯಂ ಬರೆಯುವೇಳ್ದೊಡನೆ ಪುರಮಂ ಸಿಂಗರಿಸಲುಂ ಸ್ವಯಂವರ ಮಂಟಪಮಂ ನಿರ್ಮಿಸಲುಂ ವಿದರ್ಭರಾಜನಾಣತಿಯು ನಿತ್ತಾಗಳ್.

ಕಂ॥ ಸಿಂಗರಿಸಿದರಮರಾವತಿ
ಯಂಗೆಲೆ ತತ್ಪುರಮ ಮಾತ್ಯನಾಣತಿಯಿಂದು ।
ತ್ತುಂಗನವಶಿಲ್ಪನಿಪುಣರ್
ಮಾಂಗಲ್ಯ ಕರಂಡಮಿದೆನೆ ಕುಂಡಿನಪುರಮಂ ॥ ೭೪

ವೃ॥ ಕರಮೆಸೆದಿರ್ದುದೋರಣದೆ ಕಟ್ಟಿದರನ್ನದ ತೋರಣಂಗಳಿಂ
ತರತರದಿಂದೆ ಚಿತ್ರಿಸಿದ ಚಿತ್ರತರೋಜ್ವಲ ಮಂಟಪಂಗಳಿಂ ।
ಕುರುಜುಗಳೋಳಿಯಿಂ ಮುಗಿಲಮುಟ್ಟುವಪಚ್ಚೆಯಪಂದರಂಗಳಿಂ
ಸುರುಚಿ ಸುಧಾನುಲೇಪ ಪರಿಪಾಂಡುಸಮುನ್ನತಗೋಪುರಂಪುರಂ ॥ ೭೫

ವೃ॥ ಎಸೆದತ್ತಲ್ಲಲ್ಲಿ ಪೂವಲ್ಲಿಗಳನೆಸೆವ ಪೊವಮ್ಮಾಡವಲ್ಲಲ್ಲಿ ಕೈಗೈ
ದಸಭಾಸಂವೇಶ ಮಲ್ಲಲ್ಲಿ ವಿಪುಳಕದಳೀ ಮಂಟಪವ್ರಾತಮಲ್ಲ ।
ಲ್ಲಿ ಸದುದ್ಯಾನಪ್ರತಾನಂ ಪಥಿಕಜನಮನೋಜ್ಞಪ್ರಪಾಶಾಲೆ ಯಲ್ಲ
ಲ್ಲಿ ಸರತ್ಪಾಂಚಾಲಿಕಾಂಚತ್ಪರಿಚರಣ ಸುಖಾಗಾರಮಲ್ಲಲ್ಲಿ ನೋಡಲ್॥ ೭೬

ವ॥ ಮತ್ತಂ.

ವೃ॥ ಮಗಮಗಿಸಿತ್ತು ಕತ್ತುರಿಯ ಸಾರಣೆಯಿಂ ನರುಗಂಪನೆತ್ತಲುಂ
ಮಿಗೆಪಸರಿಪ್ಪ ಕಪ್ಪುರದ ನೀರ್ಚೆಳಯಂಗಳನಪ್ಪುಗೈದ ಮ ।
ಲ್ಲಿಗೆಕಿಸುಜಾದಿ ಸಂಪಗೆ ಸರಂಗಳ ಮಂಗಳತೋರಣಂಗಳಿಂ
ದುಗುವಲದೂಳರಂಗವಲಿಯಿಂ ಶುಭಮಂಡನ ಮಾಂತು ಕುಂಡಿನಂ ॥

ವ॥ ಇಂತೆಸೆವ ಕುಂಡಿನಪುರದ ಬಹಿರ್ವನೋಪಾಂತದೊಳ್ಚತುರಶ್ರಮಾಗಿ
ನೆಲನಂ ನೇರ್ಪುಗೆಯ್ದು.

ವೃ॥ ಪಳುಕಿನ ಕಂಬದಿಂ ಕನಕವೇದಿಕೆಯಿಂ ಹರಿನೀಲಭಿತ್ತಿಯಿಂ
ತೊಳಪ ಸುಧಾಕರೋ ಪಲದ ಕುಟ್ಟಿಮದಿಂ ಮಣಿತೋರಣಗಳಿಂ ।
ವಿಲಸಿತ ಮೌಕ್ತಿಕಾಂಕಿತ ವಿತಾನದೆಮೋ ಣ್ಸುವಿಚಿತ್ರಚಿತ್ರಪು
ತ್ಥಳಿಕೆಗಳಿಂ ಸ್ವಯಂವರ ಮಹೋತ್ಸವ ಮಂಟಪಮಂ ನಿಮಿರ್ಚಿದರ್॥೭೮

ರಗಳೆ॥ ಮತ್ತಮದುಕತ್ತುರಿಯಕೆಸರಸಾರಣೆಗಳಿಂ ಭಿತ್ತಿಯೊಳ್ತಗೆದಕುಂ
ಕುಮದಕಾರಣೆಗಳಿಂ ಮುತ್ತಿನಿಂತೆತ್ತಿಸಿದಮುಕರತೋರಣಗಳಿಂ ಸುತ್ತ
ಲುಂಕಟ್ಟಿರ್ದಮುಕುರದೋರಣಗಳಿಂ ಸುತ್ತಲುಂ ಸೂಸಿರ್ಪಮಿಸುನಿಪೂ
ವಲಿಗಳಿಂ ಬಿತ್ತರದೆಬಿಟ್ಟರನ್ನದರಂಗವಲಿಗಳಿಂ ತರವರಿದುಕಟ್ಟಿರ್ದಭೃಂ
ಗಾರುನಿಚಯದಿಂ ನಿರಿವಿಡಿದುಬಳಸಿಬಿಟ್ಟಸುವರ್ಣಸಿಚಯದಿಂ ಮಗ
ಮಗಿಪಮರುಗಮಲ್ಲಿಗೆವೂಸರಂಗಳಿಂ ದುಗುವಸಾಸವಕೆಮಯುಸುರ್ವಾರ
ಡಿಸರಂಗಳಿಂ ಪೊಚ್ಚಪೊಸಪಚ್ಚೆಮಣಿಗುಚ್ಚುಗಳಪಾಳಿಯಿಂ ದುಚ್ಚರಿ
ಸಲಚ್ಚರಿಯೆನಿಪ್ಪಚಿತ್ರಾಳಿಯಿಂ ಕುಸುಮವೃಷ್ಟಿಯಕರೆವಜಂತ್ರದ
ಮುಗಿಲ್ಗಳಿಂ ಕುಸುರಿಗೆಲಸದಪಲವುಮಿಸುನಿವಾಗಿಲ್ಗಳಿಂ ನೆಗಪಿನಿಲಿಸಿ
ದಕನಕಕದಳಕಾಕಾಂಡದಿಂ ಸೊಗಸುಮಿಗೆಬಿಟ್ಟತಳಿರ್ಗುಚ್ಚುಗಳತಂ

ಡದಿಂ ಚಲಪಟೀಘಟಿತದಿವಿಜನಿಕೇತನಂಗಳಿಂ ಕಲಿತಕಲಧೌತನೂತನಕೇತನಂಗಳಿಂ ಬಳಸಿಕೀಲಿಸಿದಪೊಂಗಳಸಗಳಪಾಳಿಯಿಂ ತೊಳಗುತಿರ್ಪವಿಚಿತ್ರರತ್ನದೀಪಾಳಿಯಿಂ ದೆಸೆದಿರ್ದ್ದಾಸ್ವಯಂವರಮಹಾಮಂಟಪಂ ಪೊಸಮಿಸುನಿವೆಟ್ಟದೆನೆಹಸಿತತ್ರಿವಿಷ್ಟಪಂ ॥ ೭೯

ವ॥ ಮತ್ತಮಾಭದ್ರಮಂಟಪದಲ್ಲಿ.

ಕಂ॥ ಸಸಿಗಲ್ಲಿನ ಕುಟ್ಟಿಮಮೋ
ನೆಸೆದುದೊ ಪೊಸತಪ್ಪ ಘುಸೃಣರಸರಂಗವಲಿ ।
ಪ್ರಸರದೆ ಕೌಸ್ತುಭರುಚಿಯಿಂ
ಮುಸುಕಿದ ಪಾಡಲೆಲ್ಗನಲ್ಕಲಂಗಿದ ಹರಿಯಾ ॥ ೮೦

ಕಂ॥ ಹರಿನೀಲಭಿತ್ತಿಯೊಳ್ ಕ
ಪ್ಪುರರಸದಿಂ ಬಳಸಿತೆಗೆದ ಕಾರಣೆಗಳವೇಂ ।
ಕರಮೆಸೆದವೊ ಕಮರ್ಗಿಲಂ
ತರದೊಳ್ತೊಳತೊಳಪ ಬಳ್ಳಿಮಿಂಚುಗಳೆಂಬೋಲ್ ॥ ೮೧

ಕಂ॥ ಬೆಳಗಿವ ದೀಪಾವಳಿ ಮಾ
ರ್ಶ್ಶೊಳೆದಿರೆ ತಂಮೊಳಗೆ ಪಳುಕುಗಂ ಬಂಗಳದೇಂ ।
ಪೊಳೆದುವೊ ಬಾಲಾರುಣ ರುಚಿ
ಗಳ ನೊಳಕೊಂಡೆಸೆವ ಪಾಲ್ಗಡಲ್ದೆರೆಗಳವೋಲ್ ॥ ೮೨

ಕಂ॥ ಎತ್ತಿದ ಪಳವಿಗೆಗಳ ತುದಿ
ತುತ್ತುಮುರಪ್ಪಂತೆ ಚುರ್ಚಲುಡು ಮಂಡಲ ಮೇ ।
ನಿತ್ತಲು ದುರ್ದತ್ತೊಪ್ಪೇಳೆನೆ
ಮುತ್ತಿನ ತೋರಣಗಳತ್ತ ಪೊರ್ಬ್ಬಿತ್ತರಮಂ ॥ ೮೩

ಕಂ॥ ವೃತವಿಪುಲ ಕಾನಕಾಂಬರ
ವಿತಾನ ಕಲ್ಯಾಣಮಂಟಪಂ ಕರಮೆಸೆವ ।
ತ್ತತಿಶಯ ಮೆನೆ ಬಾಲಾರ್ಕ
ದ್ಯುತಿಕವಚಿತ ಕನಕಧರಣಿಧರ ಮೆಂಬಿನೆಗಂ ॥ ೮೪

ವ॥ ಇಂತೆಸೆವ ಭದ್ರಮಂಟಪಂ ಭೈಮೀಸ್ವಯಂವರಾರ್ಥ ಮೈತರ್ಪ ಪಾರ್ಥಿವರ ಬರವಂ ಪಾರ್ದಿರಲಿತ್ತಲ್ ಭೀಮನೃಪಾಮಾತ್ಯಪ್ರೇಷಿತಂ ಚರಮುಖ್ಯನೊರ್ವಂ ನಿಷಧೆಗೈತಂದು ರಾಜಾವಸಥಮಂ ಪೊಕ್ಕು ನಿಜಾಗಮನಕಾರ್ಯಮಂ ಕಂಚುಕಿಗರುಪಲವಂ ತೋಷಂಮಿಗೆ ನೃಪಾಸ್ಥಾನಮಂ ಪೊಕ್ಕು.

ಕಂ॥ ಈಷದ್ದರ್ಶಿತಶೀರ್ಷೋ
ಷ್ಣೀಷಂಸಿತ ಚೇಲಬದ್ಧ ಕಟಿ ವೇತ್ರಲತಾ ।
ಭೂಷಿತ ಹಸ್ತಂ ನಿರ್ಮಲ
ವೇಷಂ ಕಂಚುಕಿ ನೃಪಂಗೆ ಕೈಮುಗಿದೆಂದಂ ॥ ೮೫

ಕಂ॥ ಕ್ಷಿತಿಪತಿಲಲಾಮ ನಳನರ
ಪತಿ ಯುವಧರಿಪುದು ವಿದರ್ಭನಾಯಕ ಸಂಪ್ರೇ ।
ಷಿತ ಚರನೊರ್ವಂ ದ್ವಾರ
ಸ್ಥಿತನಿರ್ಪಂ ಭದ್ರಪತ್ರಿಕಾನ್ವಿತಹಸ್ತಂ ॥ ೮೬

ವ॥ ಎನೆ ನಳಂ ಕುತೂಹಲಂ ಮಿಗೆ ಯಾತನನೀಗಳೆಯೊಳಪೊಗಿಸೆಂಬುದುಂ ಕಂಚುಕಿ ಮರಲ್ದು ಚರಮುಖ್ಯನನೊಡಗೊಂಡುಬಂದು ಮಾರಾಯನಂ ಕಾಣಿಸಲ್ಕವನೊಸಗೆವತ್ತಲೆಯುಂಮುಂದಿಟ್ಟು ಪೊಡಮಟ್ಟುನಿಲೆ ರಾಯನವಂಗಂಗ ಚಿತ್ರವನಿತ್ತು ಕಳುಪುವಂತೆ ಕಂಚುಕಿಗಾಣತಿಸಿ ನಿಜಾಮಾತ್ಯವದನಮಂ ನೋಡಲರಸನಿಂಗಿತಮನರಿದಮಾತ್ಯಂ ತತ್ಪತ್ರಿಕೆಯಂ ಕೊಂಡುವಾಚಿಸಿದ ನದೆಂತೆಂದೊಡೆ.

ವೃ॥ ಮೇದಿನಿಯಾಣ್ಮರೊಳ್ಮುಡಿಯ ಮಾಣಿಕನೆಂದೆನಿಸಿರ್ಪ ನೈಷಧ
ಕ್ಷ್ಮಾದಯಿತಂಗೆ ಭೀಮನೃಪನಟ್ಟಿದ ಪತ್ರಮಿದಸ್ಮದೀಯ ವಂ ।
ಶೋದಧಿ ಲಕ್ಷ್ಮಿಯಪ್ಪ ದಮಯಂತಿಗೆ ಸಂಗಡಿಕುಂ ಸ್ವಯಂವರಂ
ಸಾದರಮೀಮಹೋತ್ಸವಕೆ ಬೇಗನೆನೀಮ್ ನಡೆತರ್ಪುದೆನ್ನುತಂ ॥ ೮೭

ಕಂ॥ ರಾಯಂಗದು ನಿಜಕರ್ಣ ರ
ಸಾಯನ ಮಾಗಲ್ಕೆ ಕೇಳ್ದುಹರಿಸಂಮಿಗೆ ಸೇ ।

ನಾಯುತನಾನಳಧಾತ್ರೀ
ನಾಯಕನೈತರುತಮಿರೆ ವಿದರ್ಭಕೆ ಬೇಗಂ ॥ ೮೮

ವೃ॥ ಇತ್ತಲ್ ವೃತ್ರಾರಿ ಸಂದರ್ಶನದೊಳತಿಮುದಂಬೆತ್ತು ತಾರಾಧ್ವದಿಂ ಸ್ವಾ
ಯತ್ತಂ ಸಗ್ಗಕ್ಕೆ ತತ್ಪರ್ವತಮುನಿವೆರಸುತ್ತೈದಿದಂ ಮೌನಿಲೋಕೋ।
ದಾತ್ತಂಶಶ್ವನ್ಮರುತ್ತಾಡಿತಕರ ಮಹತೀ ಸಾಧು ತಂತ್ರೀನಿನಾದೋ
ಪಾತ್ತಾನಂದಾಟ್ಟಹಾಸಸ್ಫುಟವಿಮಳ ರದಂನಾರದಂಪಾರದಾಂಗಂ" ೮೯

ವೃ॥ ಚಾರಣರಂದು ನಾರದಸಮಾಗಮಮಂ ತಿಳಿದೈದಿ ಪೇಳೆಜಂ
ಭಾರಿಗೆ ಕೇಳ್ದೊಡಂ ಹರಿಸಮಾಂತಿದಿರ್ಗೊಂಡನ ಪಾರಭಕ್ತಿಯಿಂ।
ನಾರದನಂ ಶ್ರುತಿಸ್ಮೃತಿ ವಿಶಾರದನಂ ಹಸಿತಾಂಶುಧೂತಸ
ತ್ಪಾರದನಂ ನಿಜಾಂಗಜಿತ ಶಾರದ ನೀರದನಂ ಪುರಂದರಂ ॥ ೯೦

ವ॥ ಅಂತಿದಿರ್ಗೊಂಡವರ್ಗ ಘ್ರ್ಯಪಾದ್ಯಾದಿಗಳನಿತ್ತು ಮಣಿಪೀಠದೊಳ್ಕು
ಳ್ಳಿರಿಸಿ ಸಂತಸಂ ಮಿಗೆ ಸತ್ಕರಿಸಿ.

ಕಂ॥ ಆವೆಡೆಯಿಂದಂ ಬಂದಿರಿ
ದೇವರ್ಷಿಗಳರಭವತ್ತಪಂ ವರ್ಧಿಕುಮೇ।
ನೇವಾರ್ತೆ ಪೊಸತು ಧರೆಯೊಳ್
ತಾವವನೆನಗುಸುರ್ವುದೆಂದನಿಂದಿರ ನೊಲವಿಂ। ೯೧

ವ॥ ಎನೆನಾರದಂ ನಲವಾಂತು.

ಕಂ॥ ಎಮಗೆತಪಂ ನಿರ್ವಿಘ್ನದೆ
ವಿವರ್ಧಿ ಕುಂತ್ರಿಭುವನೈಕಪರೆ ಕುಶಲಿಯೆನೀಂ।
ಭವದೀಯರ್ಕುಶಲಿಗಳೇಂ
ವಿವರಿಪುದೇಪೊಸತುವಾರ್ತೆಯುಂ ನಿನಗುಸಿರ್ವೆಂ ॥ ೯೨

ವ॥ ಎಂದ ನಾರದನ-ಕ್ತಿಯಂಕೇಳ್ದು.

ವೃ॥ ನಾರದಬಿನ್ನಪಂ ನಿಜಭುಜಾಸಿವಿಭಿನ್ನಖರಾಂಶುಮಂಡಲ
ದ್ವಾರದೆವೀರಪಾರ್ಥಿವ ಕುಮಾರಕರೆಂ ಮಪುರಕ್ಕೆಮುಂನಿನಂ ॥

ತಾರಯೆ ಬಾರದಿರ್ಪುದಕೆ ಕಾರಣವೇನಿಳೆಯಲ್ಲಿ ಪುಟ್ಟಿದೋ
ವೀರಕರೀರವೆನ್ನುತೆ ಶಚೀರಮಣಂ ಬೆಸಗೊಂಡನಕ್ಕರಿಂ ॥ ೯೩

ಕಂ॥ ಅವರಂ ಸತ್ಕರಿಪುದಕಲೆ
ದಿವಿಜದ್ರುಮಧೇನು ಸುಧೆಗಳತಿಥಿ ವ್ರಜಮಂ ।
ತವೆಹರುಸಂಬಡಿಸದ ವೈ
ಭವವೇಕೆ ಮುನೀಂದ್ರ ಬೆಸಸಿವಾಕಾರಣಮಂ ॥ ೯೪

ವ॥ ಎನೆನಾರದಂಕೇಳ್ದು ಸಂತಸಂದಾಳ್ದು.

ವೃ॥ ನಾಕಪತೀ ವಿದರ್ಭಸಲಿಲಾಕರದೊಳ್ದಮಯಂತಿ ಯೆಂಬಕ
ನ್ಯಾಕುಲರತ್ನವೊಂದೊಗೆದುದಂಚಿತಯೌವನಚಾರುಶೋಭೆಯಿಂ ।
ಲೋಕದ ಪಾರ್ಥಿವ ಪ್ರಭವರಂ ಭ್ರಮಣಂಗೊಳಿಸುತ್ತಮಿರ್ಪ್ಪದಾ
ಲೋಕಿ ಸೆವರ್ಣಿಸಲ್ಕಸದಳಂ ವಲವಾಕೆಯ ರಾಮಣೀಯಕಂ ॥ ೯೫

ಕಂ॥ ಆಪೆಣ್ಮಣಿಯೊರ್ವ್ವ ಧರಿ
ತ್ರೀಪಾಲಕಸುತನಜಾತರೂಪಶ್ರೀಯೊ ।
ಳ್ವ್ಯಾಪಿಸಿ ಸುಮರೋಪಾನಲ
ತಾಪಕೆ ಗುರಿಯಾಗಿ ಮರುಗುತಿರ್ಪ್ಪಿನವಾಗಳ್ ॥ ೯೬

ವೃ॥ ತುರಿಪದೆತತ್ಸ್ವಯಂವರ ಮಹೋತ್ಸವಮಂರಚಿಸಲ್ಕೊಡರ್ಚ್ಚಿತ
ದ್ಗುರು ಭರದಿಂದೆ ನಾಡೆರೆಯುರಂ ಬರವೇಳ್ಪೊಡೆ ಭದ್ರಪತ್ರಿಕಾ ।
ಚರಮುಖದಿಂ ತದುತ್ಸುಕತರಾಶಯರುರ್ವ್ವಿಯರಾಜನಂದನರ್
ತೆರಳ್ದಪರಂತರಿಂದವರ್ಗ್ಗೆ ಸಂಗರವೆಂಬುದು ಸಂಗರೋಪಮಂ ॥ ೯೭

ಕಂ॥ ರಣಮಿಲ್ಲದುದಕಿದೇ ಕಾ
ರಣ ಮಕ್ಕುಂ ಸುರಪಮದ್ವಿಲೋಚನ ಸುಖಪಾ ।
ರಣಕಿನ್ನೇ ಗತಿಯೆಂದೋ
ರಣ ಮುಳಿದಾಂಮರ್ತ್ಯಲೋಕದಿಂ ಪ್ರೇರಮಡುತಂ ॥ ೯೮

ಕಂ॥ ಕ್ಷಿಪ್ರದೆ ಬಂದೆಂ ಸಗ್ಗ
ಕ್ಕಪ್ರತಿಮಸುರಾ ಸುರಾಜಿಯುಮನೀಕ್ಷಿಸೆ ದೇ ।

ವ ಪ್ರವರ ನಾರದಃಕಲ
ಹಪ್ರಿಯ ಎಂಬುದ ಸವಂತು ಬಲ್ಲವನಲೆ ನೀಂ ॥ ೯೯

ವ॥ ಎನೆಪುರಂದರಂ ದರಸ್ಮಿತಾಸ್ಯನಾಗಿ.

ವೃ॥ ಚಕ್ರಿಕರಾಗ್ರ ಚಕ್ರದಳಿತಾ ಸುರನಾಯಕ ಚಕ್ರವಿಕ್ರಮ
ಪ್ರಕ್ರಮಮಾದ ಮತ್ಪುರದೊಳಂ ಭವದೀಕ್ಷಣ ಸಾಖ್ಯಪಾರಣೋ ।
ಪಕ್ರಮ ಸಂಗರಾಕ್ರಮಣ ಮಿಲ್ಲಮದೇಗೆಯಲಾರ್ಪೆನೆಂದೊಡಾ
ಶಕ್ರನಳಲ್ದ ನಂದು ಮಿಗೆ ನಾರದ ನಾರಯೆ ಪೇಳ್ವ ನಾರದಂ ॥ ೧೦೦

ವ॥ ಅಂತು ಮರುಗಿ ಮುನೀಂದ್ರನಿಂದ್ರನಂನೋಡಿ.

ವೃ॥ ತ್ರಿಭುವನ ಮೋಹನೈಕ ತಿಲಕಂಗಡ ಭೈಮಿಯದೋರ್ವಭೂಮಿಮ
ಲ್ಲಭನ ಕೊರಲ್ಗೆ ಸೂಡೆವರಮಾಲೆಯಮಿಕ್ಕಿನ ರಾಜಪಾಳಿತ ।
ಳ್ತಭಿಭವದಿಂ ಪೊಣರ್ಚ ದಿರದಂತದರಿಂದೆಮಗಕ್ಕು ಮಲ್ತೆ ಕೂ
ರ್ತಭಿಲಷಿತಂಸುರೇಂದ್ರಕುಡುಮೇಣ್ ನರಲೋಕಕೆಪೋಪೆನಾಜ್ಞೆಯಂ ॥

ವ॥ ಎನೆ ನಸುನಕ್ಕು.

ಕಂ॥ ಸಗ್ಗದಪೆಣ್ಗಳರೂಪಿಂ
ದಗ್ಗಳಮೆ ವಿದರ್ಭಸುತೆಯ ರೂಪೆಂದೊಲವಿಂ ।
ಸಗ್ಗಿಗರೆರೆಯಂ ಕೇಳ್ದೊಡೆ
ಸಿಗ್ಗಾಗೆಸುರಾಂಗನೆಯರ್ಗ ಮುಸಿರ್ದಂ ಮುನಿಪಂ ॥ ೧೦೨

ಕಂ॥ ಸುರಸಿದ್ಧಸಾಧ್ಯ ವಿದ್ಯಾ
ಧರರಕ್ಷೋಯಕ್ಷನಾಗಕನ್ಯಕೆಯರುಮಂ ।
ನೆರೆನಿರುಕಿಸಿರ್ಪೆ ನಾಕೆಗೆ
ದೊರೆಯೆನಿಸಿದ ಸುಂದರಿಯನದೆಲ್ಲಿಯಮು ಮರಿಯೆಂ ॥ ೧೦೩

ಕಂ॥ ಆವಧು ಪಿಂತುದಿಸಿರೆಹರಿ
ಯಾಮೃಂದೆಯ ಶಾಪಕೇಡೆನಿಪ್ಪನೆ ವಲಮಿ ।
ನ್ನೇವೇಳ್ವೆಂ ಹರಿಸಿನ್ನ ಕ
ಳೇವರಮುಂ ಲಜ್ಜೆಗಡೆಯನಿಕ್ಕು ಮೆಪೇಳಾ ॥ ೧೦೪

ಕಂ॥ ದಮೆಯಯಂತೆ ಯೆಂಬುದಮನಾ
ದಮಯಂತಿಯ ರೂಪು ಸಿಟ್ಟಿಸಿದಮಾತ್ರದೊಳಂ ।
ದಮಯುಕ್ತರೆನಿಪೆಮಗಮುಳಿ
ದಮರ್ತ್ಯಮರ್ತ್ಯರ್ಕಳರವ ನೇನೆಂದಪೆವೈ ॥ ೧೦೫

ವ॥ ಎಂದುಸುರ್ವನಿತರೊಳಾಸುರೇಶನೆಡೆಗೆ ಹುತಾಶಕೀನಾಶಪಾಶಹಸ್ತರೈದುತ ಮಾವೃತ್ತಾಂತಮಂ ಕೇಳ್ದು ಕೌತುಕಂದಾಳ್ದು.

ಕಂ॥ ಸುರಪನಡೆ ಮುನಿಯನುಡಿಯಂ
ಪರಿಕಿಸುವೆಮದಿಟಮದಾಗೆ ನಾಲ್ವರೊಳೋರ್ವಂ ।
ವರಿಸುಗೆ ತತ್ತರುಣಿಯನೆಂ
ದರಿಂದ್ರನೊಳ್ ನಾರದಂಗೆ ನಗೆಮಿಗೆ ಮೂವರ್ ॥ ೧೦೬

ವ॥ ಅಂತೆಂದವರನುಡಿಯ ನಮರಕಾಂತಂ ಕೇಳ್ದು ಸಂತಸಂ ಮಿಗಲಂತಕ್ಕೆಂ ದುಸಿರ್ದಾಮುನಿವರರಂ ಬೀಳ್ಕೊಟ್ಟು ತಂತಂಮವಿಮಾನಂಗಳನಡರ್ದಾ ನಾಲ್ವರ್ ಲೋಕಪಾಲರುಂವಿದರ್ಭ ದೇಶದತ್ತಲೈತರುತ್ತಿರೆಯಿರೆ.

ವೃ॥ ಐತರುತಿರ್ದನಂದಮುಗಲಂದಳದೋಳ್ಮಣಿಮೌಳಿಮಸ್ತಕಂ
ಶೀತಕರಾನನಂ ನಳಿನಲೋಚನ ನುಜ್ವಲತಾರಹಾರ ವಿ ।
ದ್ಯೋತಿತವಕ್ಷಸಂ ಚಕಚಕದ್ರುಚಿಮಂಡಲ ರತ್ನಕುಂಡಲಂ
ಭೂತಲಕಾಮನೀತನೆನೆಧಾಮ ವಿಧೂತ ಮಹಾನಲಂ ನಲಂ ॥ ೧೦೭

ವ॥ ಇಂತು ನಳಮಹೀಕಾಂತನೈತರುತ್ತಿರೆ.

ಕ॥ ಕಂದರ್ಪಜಲಿಸುವ ಮಾ
ರ್ತಂಡನ ಪ್ರೋಲ್ಮರೆವನಳನರೇಂದ್ರನನಂದಾ ।
ಖಂಡಲಶಿಖಿಯಮವರುಣರ್
ಗಂಡುಡುಗಿ ತದೀಯರೂಪ ಕಚ್ಚರಿವಡೆದರ್ ॥ ೧೦೮

ಕಂ॥ ಇವನಂ ನೋಡಿದಮೇಲೆಂ
ಮ್ಮುಮನೇಂ ವರಿಪಳೆವಿದರ್ಭ ನೃಪಸಂಭವೆಯಾ ।

ರವಿಯುಂ ನೋಡಿದ ಪದ್ಮಿನಿ
ತವಕಿಪಳೇಂ ಪೆರರೊಳೆಂದರಂದೋರೋರ್ವರ್ ‖ ೧೦೯

ವ‖ ಎಂದಾನಾಲ್ವರ್ ಲೋಕಪಾಲರುಂ ಮಂತಣಂಗೊಂಡೀಭೂತಳೇಂದ್ರನನೆಮ್ಮದೂತನಂ ಗೈದೊಡೆಮ್ಮ ಕೈತಂ ಸೈತಪ್ಪುದೆಂದು ಬಗೆದು ವಿಮಾನಂಗಳಿಂದವತರಿಸಿ ಬಂದನಂತರಂ ನಳನೊಳ್ ನಾಕಪತಿ ಯಿಂತೆಂದಂ.

ಕಂ‖ ಎಲೆ ನಳನರೇಂದ್ರ ಶಶಿಕುಲ
ತಿಲಕ ಮದರ್ದ್ಥಿಸನ್ಯೈಕ ಮಿತ್ರನೆನಿಪ್ಪಾ ।
ಬಲಿವೀರಸೇನ ನಾತ್ಮಜ
ನೆಲೆನೀಂ ತಳರ್ದಪೆಯದೆಲ್ಲಿಗಾವುದು ಕಜ್ಜಂ ‖ ೧೧೦

ಕಂ‖ ಆತಂಹುತಾಶನಂ ಕೇ
ಳೀತಂ ವೈವಸ್ವತಂ ಪ್ರಚೇತಸನೂತಂ ।
ಭೂತಲಪತಿ ಕೇಳಾಂ ಪುರು
ಹೂತಂ ನಿನಗರ್ಥಿಯಾದೆವಾವೀ ನಾಲ್ವರ್ ‖ ೧೧೧

ವ‖ ಆದೊಡೆಮ್ಮಭ್ಯರ್ಥನಮಂಗಮನಶ್ರಮಂಗಳೆದು ಬಿತ್ತರಿಪೆವೆನೆ ನಳಂ ಕುತೂಹಲಂ ಮಿಗೆ ತನ್ನೊಳಿಂತೆಂದಂ.

ಕಂ‖ ದೇವರ್ಕಳವರಿವರ್ಗ ಮ
ದಾವುದು ದುರ್ಲಭಮೆನಿಪ್ಪುದಿವರೆನ್ನಿಂ ಸಂ ।
ಭಾವಿತ ನಿಜೇಷ್ಟರಾದೊಡೆ
ಜೈವಾತೃಕ ವಂಶಮಾಗಳಲೆ ಕೃತಕೃತ್ಯಂ ‖ ೧೧೨

ಕಂ‖ ಕಿವಿಯೊಳ್ಬೀಳ್ವುದಕುಂ ಮು
ನ್ನವೆದೀನೋಕ್ತಿಗಳದಾವನರ್ಥಿಗಳಿಷ್ಟಾ ।
ರ್ಥವನಿತ್ತು ಹರುಸವಡಿಸುವ
ನವನಿಯೊಳವನಲ್ತೆ ವರವದಾನ್ಯಂಧನ್ಯಂ ‖ ೧೧೩

ಕಂ‖ ಎರೆದರ್ಗಿದ್ರ್ದಿಂ ಕುಡದಿ
ರ್ಪ್ಪರು ಲೋಭಿಯೆನಿಪ್ಪ ನರನೆ ಧರೆಗತಿಭಾರಂ ।

ಮರವುಂ ಭೂಧರವುಂ ಸಾ
ಗರವುಂ ಪರಿಕಿಪೊಡೆಧರೆಗೆ ಭಾರಮದಲ್ಲಂ ॥ ೧೧೪

ಕಂ॥ ಆವನಜನ್ಮಂ ಪರಸಂ
ಜೀವನ ಕರಮೆನಿಸದವನ ಜನ್ಮಮೆ ವಿಫಲಂ ।
ಏವೇಳ್ದಪೆನ ಹಹಾ ವೃ
ಕ್ಷಾವಳಿಯುಂ ಪರರ್ಗೆ ಸುಖಮನಾಗಿಪುವಲ್ತೆ ॥ ೧೧೫

ಕಂ॥ ಎರೆದರ್ಗೀವುದು ಮರೆವೊ
ಕ್ಕರ ಕಾವುದಿದಿರ್ಚಿದರಿಯು ನಿರಿವುದುಮೆಂಬೀ।
ದೊರೆವೆತ್ತ ಗುಣತ್ರಯಮುಂ
ಧರಿಸದ ಧರಣೀಶನೇಕೆ ಜನಿಸಲ್ವೇಳ್ಕುಂ ॥ ೧೧೬

ಕಂ॥ ಅರ್ಥಯತೀತ್ಯರ್ಥಿಯೆನಿ
ಪ್ಪರ್ಥಮದಂತಿರ್ಕೆ ಯರ್ಥಿಯರ್ಥವನುಳ್ಳಂ ।
ಅರ್ಥಿಪನೇಕೆನೆ ತನ್ನ ಕೃ
ತಾರ್ಥಂಗೆಯಲೆಂದು ಚಾಗಿಬಗೆಯಲ್ವೇಡಾ ॥ ೧೧೭

ಕಂ॥ ಕುಂದುಗುಮೈಸಿರಿ ಯೆನಗೆಂ
ಬೊಂದಃ ಭಯಂದಾಳ್ದು ದಾನಿಕುಡುವುದಮಾಣಂ ।
ಕುಂದಿದಪೆನೆಂದುವಿಬುಧರ
ವೃಂದಕೆ ನಿಜಕಲೆಯು ನೀಯುದುಳಿವನೆರಾಜಂ ॥ ೧೧೮

ಕಂ॥ ಎರೆದರ್ಗೀಗುಂ ಸಗ್ಗದೆ
ತರುಪಶು ಪಾಷಾಣಮುಂ ಮನೋರಥಮನೆನಲ್ ।
ಎರೆದರ್ಗೀಯದ ನರನಂ
ತರುಪಶುಪಾಷಾಣಮೆಂದೊಡಂ ತೀರ್ದಪುದೆ ॥ ೧೧೯

ಶ್ಲೋ॥ ವಕ್ಷ್ಮಿತಮೇವವದಾನ್ಯಂ ವದಾನ್ಯಮಿತ್ಯರ್ಥಿನೇನುಕ್ತ್ವಾ ।
ವಸುಭಿರ್ವಾಪ್ಯಸುಭಿರ್ವಾ ಪೂರಯತಿ ಮನೋರಥಂಸಹಸಾ ॥

ವ ॥ ಎಂದು ಬಗೆದಾಲೋಕಪಾಲರಂ ನೋಡಿ.

ವೃ॥ ವಲರಿಪುಮುಖ್ಯನಿರ್ಜರರೆ ನಿಮ್ಮಯ ದರ್ಶನಕಲ್ತೆ ಮಾನವರ್
ಸಲೆತಪಮಾಂಪರಂತದೆನಗಾದುದು ಕಷ್ಟಮಿನಿತ್ತು ಮಿಲ್ಲದಾ ।
ನಲೆ ಕೃತಕೃತ್ಯನೆನ್ನಯ ಪುರಾಕೃತಪುಣ್ಯಮಹಾಮಹೀರುಹಂ
ಫಲಿಸಿಸಿದುದಿಂದುನಿಮ್ಮಯ ಮನೋರಥಮೇಂಬೆಸಸಿಂದಲಿತ್ತಪೆಂ ೧೦

ವ ॥ ಮತ್ತಂ.

ಕಂ॥ ಅಕ್ಕೆಮಸುಮೆಣದೆಂ ನಸು
ವಕ್ಕೆಸಮಂತಸುವಿನಿಂದೆ ಪಿರಿದಕ್ಕೆಮ ನೀ ।
ಮೊಕ್ಕಣಿಸಿಂ ನಿಮ್ಮಯಬಗೆ
ಮೊಕ್ಕರ್ಥಮನೀಃವೆನೆಂದನಾ ನಿಷಧೇದ್ರಂ ॥ ೧೧

ವ ॥ ಎನೆ ಸುರುಪಂ ಹರುಸಂಮುತ್ತು ಎಲೈ ನಳರಾಜೇಂದ್ರನೆ.

ಪಂಚಚಾಮರವೃತ್ತ॥ ವಿದರ್ಭಜಾಸ್ವಯಂವರಾರ್ಥ ಮಾವುಬಂದೆವಳ್ಕರಿಂ
ದುಂದಂತವೇದಿ ಪೇಳಲೆಮ್ಮ ಲೋಕಕ್ಕೈದಿ ನಾರದಂ ।
ಸದಿಂದುವಂಶ ವಾರಿರಾಃಶಿ ಪಾರಿಜಾತ ಬೇಗಮ
ಸ್ಮದೀಯದೂತನಾಗಿ ಮಾಳ್ಪುದೀಯಭೀಪ್ಸಿತಾರ್ಥಮಂ ॥ ೧೨

ವ ॥ ಎನೆ ನಳಂವ್ಯಾಕುಳಮನನಾಗಿ.

ಕಂ॥ ಏಕಾರ್ಥಕೆ ಬಂದೆನ್ನು ಮ
ನೀಕಾರ್ಯಕೆ ಕಳುಪುವಂದವೊಪ್ಪುಗುಮೇಂ ಮೇ ।
ಣಾಕನ್ಯಕೆಯೆಸ್ನೊಳಿಜಾ
ತಾಕಾಂಕ್ಷೆಯದೆಂತುಮವಳವಂಚಿಸಲಾರ್ಪೆಂ ॥ ೧೩

ವ॥ಎಂದ ನಳನುಕ್ತಿಯಂಕೇಳ್ದು ಸಂಕ್ರಂದನಂ ಮಂದಸ್ಮಿತಾಸ್ಯನಾಗಿ.

ಕಂ॥ ಅಕ್ಕೆಂದುವೊದಲು ನೀನೆಮ
ಗೊಕ್ಕಣಿಸೀಗಿಂತುನುಡಿಯೆ ನಳನೃಪ ನಿನಗೇಂ ।

ತಕ್ಕುದೆ ಶಶಿಕುಲದರಸರ
ಮಕ್ಕಳಲಾ ನೀವು ಮಾಳ್ಪುದಮರಪ್ರಿಯಮಂ ॥ ೧೭೪

ವ ॥ ಎನೆ ನಳನೊಡಂಬಟ್ಟು ಶಸ್ತ್ರಪಾಣಿಗಳಿಂದಭಿರಕ್ಷಿತಮಾದದಮಯಂತಿ ಯಂತಪುರಮಂ ಚೋರನಂತಾನೆಂತೊಳಪುಗುವೆನೆನೆ ನಲವುಮಿಗಲಾ ನಲಂಗೆ ತಿರಸ್ಕರಿಣೀವಿದ್ಯೆಯ ನನುಗ್ರಹಿಸಿ ಕೊಟ್ಟು.

ವೃ॥ ಅರಸಾ ನೀಂಕನ್ಯಕಾಂತಃಪುರಕೆ ತುರಿಪದಿಂಪೋಗಿ ವೈದರ್ಭಿಗೆಮ್ಮೀ
ಬರವಂ ನಾಮಂಗಳಂ ಪ್ರಾಭವಮನನಿತುಮಂ ಪೇಳ್ದು ನಿನ್ನಲ್ಲಿಲೋಕೇ
ಶ್ವರರಾದಂಕೂರ್ತುಬರ್ಪ್ಪರ್ ಸಭೆಗವರೊಳಗಾನಾಲ್ವರೊಳ್ ಓರ್ವನಂನಿ
ರ್ಜರನಂ ಸದ್ಭಕ್ತಿಯಿಂನೀಂ ವರಿಸೆನುತುಸಿರ್ದೈತಪ್ಪುದೆಂದಂಸುರೇಂದ್ರಂ॥

ವ ॥ ಎನೆ ನಳಂ ಸುರೇಶನುಕ್ತಿಯೊಳ್ನಿಶ್ಶಂಕತೆವೆತ್ತು ದೇವದೂತ್ಯಭರಮಂ ಶಿರದೊಳ್ಪೊತ್ತು ವಿದರ್ಭದೇಶಾಭಿಮುಖನಾಗಿ ತಂನಪೊಂದೇರನಡರ್ದು ಬರ್ಪಿನಂ ಮುನ್ನಮೆ ಸುರೇಶ್ವರರ್ ನಳನೃಪನ ಸತ್ಯಮಂ ಪರಿಕಿಪೆವೆಂದು ದಮಯಂತಿ ಯಂತಃಪುರಮಂ ಪೊಕ್ಕಿರೆಯಿರೆ.

ವೃ॥ ಐತರುತಿರ್ಪ್ಪನೈಷದನ ಮುಂದೆಸೆದಿರ್ದುದುಭರ್ಮಹರ್ಮ್ಯ ವಿ
ದ್ಯೋತಿತಕೇತನೋಚ್ಚಲವಿನೂತನ ಚೇಲಶಿಖಾಭಿತಾಡನಾ ।
ಪಾತಿತಪೌರುಹೂತಪುರವೆಂಬಿನ ಮಂಚಿತಭದ್ರಮಂಡನಂ
ಶ್ರೀತರುಣೀಮಣೀತರಳತಾಗುಣಖಂಡನಕಾರಿ ಕುಂಡಿನಂ ॥ ೧೭೬

ವ ॥ ಇಂತೆಸೆವ ಕುಂಡಿನನಗರಮಂ ನಳನರೇಂದ್ರಂ ಕಂಡು ಸಂತಸಂಗೊಂಡದರ ಬಾಹ್ಯವನದೊಳ್ನಿಜಪರಿವಾರಮನಿರವೇಳ್ದೊಡನೆ ನಿಜವರೂಥದಿನಿಳಿದಾಪುರವರಮನೊಳ ಪೊಗುತ್ತದರಪಿರಿಯಸಿರಿಯ ನಿರೀಕಿಸುತ್ತೆ ಬರ್ಪಿನಂ ಮುಂದೆಸೆಯೊಳಂದಂ ಮಿಗೆ ವಿದರ್ಭಜೇಂದಿರಾ ವಿಹಾರ ಪುಂಡರೀಕಮೆನೆ ಕಣ್ಗೊಂಡ ಕನ್ನೆವಾಡದೆಡೆಗೈದಿ ಕಾಪಿನಾಳ್ಗಳಾರುಂ ತನ್ನಂ ನಿವಾರಿಸದಿರವಿಂಗಿಂದಿರನ ಮೈಮೆಯಂ ಪೊಗಳುತೊಳಪೊಕ್ಕು ನೋಳ್ಪಾಗಲೊಂದೆಡೆಯೊಳಂದಂಮಿಗೆ ಕಂದುಕಖೇಲನಲೀಲೆಯೊಳ್ ಕಂದುಗೊರಲನುರಿಗಣ್ಣಿಂ ಬೆಂದ ಕಂದರ್ಪನ ನೆಂದಿನಂತೆ ಪುಟ್ಟಿಪ ಸುಂ

ದರೀಜನಬೃಂದದೊಳಂ ಮೇಣೊಂದುತಾಣದೊಳ್ ರಯ್ಯಮೆನೆ ಕಯ್ಯ
ಕಡಗಂ ಝಣಝಣಿಸೆ ಪೊನ್ನದಾಮಂ ಪಿಡಿದೈಯ್ಯಂಬನೆಂಬ ಸೂತ್ರಿಕ
ನಾಡಿಸುವಪೊನ್ನ ಬೊಂಬೆಗಳಂ ತೊಯ್ಯಾರದಿಂದುಯ್ಯಲೆಯನಾಡುವ
ಗಾಡಿಕಾತಿಯರೊಳಂ ಬೇರೊಂದೆಡೆಯೊಳ್ತೊರತುರುಂಬು ನೀರದಂ
ಗೆತ್ತು ಸಾರೆವಂದಗಾರವುಯೂರಿಗಳನೊರೆಗಣ್ಬೆಳಗೆಂಬವಾರಿದಜ್ಯೋತಿ
ಯಿನೊಯ್ಯಾರಂಮಿಗೆಕುಣಿಯಿಪಸಾರಸಾಕ್ಷೀವಾರದೊಳಂ ಮತ್ತಮೊಂ
ದುತಾವಿನೊಳ್ಸ್ನೇಹಂ ಮಿಗೆಬಂದದೀಹದೇಣಿಗಳಸಮೂಹಕ್ಕೆಸವಿನೋ
ಟದಸೊಬಗಂಹರಿಸುಮುತ್ತು ಪದೇಶಿಪಹರಿಣಾಕ್ಷಿಯ ರೊಳಂಪೆರತೊಂ
ದುಕಡೆಯೊಳ್ ನಿಜಾನನವುನಿಂದುಬಿಬಂಗೆತ್ತು ಪಂಬಲಿಸಿಬಂದಚಕೋ
ರಕದಂಬಕ್ಕೆ ಬಿಂಬಾಧರದದರಹಾಸಚಂದ್ರಿಕಾಸಾರವಂಪ್ರೊಯ್ದುತಣ್ಣನೆ
ತಣಿಪುವ ಪುಣ್ಣಿಮೆವೆರೆವೊಗದಪೆಣ್ಗಳೊಳಂ ಮಗುಳೊಂದುವಾಡ
ದೊಳ್ ಮುಂಗೈಯೆಯ್ಯಳ್ಸಂಗರಮೆನೆಕುಳ್ಳಿರ್ದ ಶುಕಾಂಗನೆಗೆಸಂಗೀತ
ಮಂಗಳಪದ್ಯಂಗಳಂಬೆಡಂಗುಮಿಗೆಕಲಿಪಕಲವಾಣಿಯರೊಳಂಸೆರತೊಂ
ದುರನ್ನಗಟ್ಟನೊಳ್ ಪೊಂನ್ನಂದುಗೆಯ ಮೆಲ್ದನಿಗೆಸೊಲ್ದು ಬೆನ್ನಂಟಿದ
ರಾಜಹಂಸಿಗಳ್ಗ್ೀಜೆಮಿಗೆ ನಡೆಬೆಡಂಗಂತೋರ್ಪಪಿಡಿನಡೆಯಮಡದಿಯ
ರೊಳಂ ಮತ್ತ ಮೊಂದು ಮತ್ತವಾರಣದೊಳ್ ಸಲ್ಲೀಲೆಯಿಂಕೇಳ್ವರ
ಮನಂ ಪಲ್ಲವಿಸೆವಲ್ಲಕಿಯಮೆಲ್ಲುಲಿಯೊಡನೆತಾನವಾನಂದೋರಿಸೀಯ್ಯೆ
ನೆ ಗೇಯಮಂಗಾಡಿಮಿಗೆ ಪಾಡುವ ಗಾಡಿಕಾರ್ತಿಯರೊಳಂಮತ್ತಮೊಂ
ದುಚಿತ್ರಶಾಲೆಯೊಳ್ವಿಚಿತ್ರತರ ಚಿತ್ರಕಳಾಕೌಶಲಮಂಬಿತ್ತರಿಪಬಿತ್ತಗೆ
ಯರೊಳಂ ಮತ್ತಮೊಂದು ಮಣಿಮಂಟಪದೊಳ್ದಿವ್ಯತರಕಾವ್ಯಪಠನಾ
ನುಮೋದದಿಂದಿರ್ಪ್ಪಕಳಾಕುಶಲೆಯರಿಂ ನೆರೆಮೆರೆವಕನ್ಯಕಾಂತಃಪುರವಂ
ನೀಡುಂನೋಡಿ ಪಿರಿದು ಬಣಿಸುತ್ತಂ ಬರೆವರೆ.

ಕಂ॥ ಬಳಸಿರೆನೆರೆದೋಲಗಿಸುವ
ಕೆಳದಿಯರಮಳಾಂಗಿಯ ವರನಡುವೆಡೆಯೊಳದೇಂ ।
ತೊಳಗಿದಳೊ ಭೈಮಿಯುಡುಗಳ
ಬಳಗದಮಧ್ಯದೊಳಗೆಸೆವ ರೋಹಿಣಿಯೆಂಬೋಲ್ ॥ ೧೭೩

ವ॥ ಆಗಳ್.

ವೃ॥ ಗಮನ ವಿಲಾಸಲೇಶ ಪರಿಭೂತ ಮನೋಭವ ಭದ್ರದಂತಿಯಂ
ಹಿಮಕರಬಿಂಬಡಂಬರ ವಿಡಂಬಿ ಮನೋಹರ ವಕ್ತ್ರಕಾಂತಿಯಂ ।
ಕುಮುದದಳಾಕ್ಷಿಯಂ ಕುಟಿಲಕುಂತಲೆಯಂನವಕುಂದದಂತಿಯಂ
ಸುಮಶರವೈಜಯಂತಿಯನಭೀಕ್ಷಿಸಿದಂ ದಮಯಂತಿಯಂ ನಳಂ ॥ ೧೭೮

ವ॥ ಅಂತು ನೀಡುಂ ನಿರೀಕ್ಷಿಸಿ.

ಕಂ॥ ಬಗೆಯೊಳ್ಕೌತುಕಮೊಗೆಯದೆ
ಮುಗಿಯದೆ ಲಾವಣ್ಯವಸ್ತುವೆಲ್ಲಂ ನೀಡುಂ ॥
ನೆಗೆಯದೆತನಗಾಯಸಮಾ
ಮೃಗನೇತ್ರೆಯ ನಿರ್ಮಿಸಿದನೆಬಗೆಯೆ ವಿಧಾತ್ರಂ ॥ ೧೭೯

ವ॥ ಮತ್ತಮಾಕುಮಾರಿಯ ಸೌಕುಮಾರ್ಯಮಂ ಪರಿಭಾವಿಸಿದೊಡೆ.

ಕಂ॥ ಸಂದೆಗಮೆಳ್ಳನಿತಿಲ್ಲಂ
ಕಂದಿದಪಳ್ ಕರದೆಮುಟ್ಟೆ ಮಾಡಿದೊಡೆಂದೀ ॥
ಕುಂದಸುಮಕೋಮಲೆಯನರ
ವಿಂದಭವಂ ಚಿತ್ತದಿಂದೆ ಮಾಡಿದನಕ್ಕುಂ॥ ೧೮೦

ವ॥ ಮತ್ತಂ

ಕಂ॥ ನಡೆಬೆಡಗೊಂದೇಗಡನೋ
ಳ್ಪೊಡೆ ರಾಜಮರಾಳನೆಂಡಮಾಳ್ಕೆಯಿನಿಕ್ಕುರ್ಗಂ ।
ಮಡದಿಯುಳಿದೊಡಲಚೆಲ್ವಿ
ನ್ಮಡಿ ಮೂವಡಿಬಗೆವೊಡರಿದು ದುಸಿರಿದುದಕ್ಕುಂ ॥ ೧೮೧

ವೃ॥ ಕಮಲಭವಂ ಮೊದಲ್ನೆಗಳ್ದುದೀಲಲಿತಾಂಗಿಯ ವಕ್ತ್ರಬಿಂಬಮೊ
ಹಿಮಕರ ಬಿಂಬಮೋಬಗೆವೊಡೆಂಬೆಡೆ ಸಂದೆಯಮಂತೆರಳ್ಚಿತೀ ।
ರಮಣಿಯ ವಕ್ತ್ರದೊಂದು ರಮಣೀಯತೆಯೀಕ್ಷಿಸೆ ಚಿತ್ರಕಂಮೊದಲ್
ಸಮೆದುದು ಪಾಣಿಪಾಟವಕೆಮೇಣ್ಸಮೆದಾಕೃತಿಯಲ್ತೆ ಮಂಜುಳಂ ॥

ವೃ॥ ಭುವನಂಗೈದ ಪಿತಾಮಹಂ ಸಮೆದನಿತ್ತೀಕಾಂತೆಯಂ ಕಂತುಚಂ
ದ್ರವಸಂತಸ್ಸಮೆದರ್ವ್ವಲಂ ಬೆರಸುತಾಮಂತಲ್ಲದೀರೂಪವೈ
ಭವಮೀಕಾಂತಿವಿಶೇಷಮೀತನುಲತಾಸಾರಭ್ಯಸಾಭಾಗ್ಯಮೀ
ಯುವತೀರತ್ನಕದೆಂತು ಸಾರ್ದ್ದಪುದೆನುತ್ತಂ ಕೂರ್ಮೆಯಿಂನೋಡಿದಂ ॥

ವ॥ ಇಂತಾದಮಯಂತಿಯಂ ನೋಡಿದೊಡನೆ ಕಂತುಶರಾಹತಸ್ವಾಂತನಾಗಿ ನಳಮಹೀಕಾಂತನೆಂತಾನುಂ ಸಂತೈಸಿಕೊಂಡು ದೇವಕಾರ್ಯೋತ್ಸುಕಂ ಮುಂತೆ ಬರೆವರೆ.

ಕಂ॥ ಇಂತಪ್ಪಕಾಂತೆತನ್ನಂ
ಸ್ವಾಂತದೆಬಯಸಿರೆಯು ಮವಳಸುರರೊಳ್ಸೆರಪಾ ।
ಚಿಂತೆಯುವಾಣ್ದನೆ ನಳಭೂ
ಕಾಂತಂತಕ್ಕಂಪರಾರ್ಥಮನೆ ಪಿರಿದೆಂಬಂ ॥ ೧೩೪

ಕಂ॥ ಕಂಡುದುಭ್ಯೆಮಿಯು ಸಖಿಯುರ
ತಂಡಂ ವಿಭ್ರಾಂತಿಗೊಂಡದಾವನಿವಂ ಮಾ ।
ರ್ತ್ತಂಡಪ್ರಭನೆನುತೇಳ್ದ್ದದ
ಖಂಡನಳಾವಯುವದೀಪ್ತಿಗಚ್ಚರಿವಡುತಂ ॥ ೧೩೫

ವ॥ ಅನ್ನೆಗಮಾವಿದರ್ಭಸುತೆ ತೊಟ್ಟನೆಕಟ್ಟೆದಿರಲ್ಲಿ.

ವೃ॥ ಕಂಡಳಖಂಡಪುಣ್ಯ ರಮಣೀ ಮಣಿಲಭ್ಯನನಿಕ್ಷುಕಾಂಡಕೋ
ದಂಡನಿಭಾಂಗನಂ ನಳಿನಲೋಚನನಂ ಶರದಿಂದುವಕ್ತ್ರನಂ ।
ಚಂಡಮರೀಚಿತೇಜನನಗಣ್ಯಗುಣಾಕರನಂ ವಸುಂಧರಾ
ಖಂಡಲನಂ ಸುಧಾಂಶುಕುಲ ಮಂಡನನಂ ನಿಷಧಾಧಿರಾಜನಂ ॥ ೧೩೬

ಕಂ॥ ಬಗೆಯೊಳ್ಕೌತುಕಮುಂ ನು
ಣ್ಮೊಗದೊಳ್ಬೆಬ್ಬೆಮರು ಮಂಗದೊಳ್ಪೊಂಪುಳಿಯುಂ ।
ನಗೆಗಣ್ಗಳೊಳಾನಂದಾ
ಶ್ರುಗಳುಂ ನೆಗೆದತ್ತುವಧುಗೆ ನಳದರ್ಶನದಿಂ ॥ ೧೩೭

ವ ॥ ಅಂತುಕಂತು ಕೋಟಿರೂಪನೆನಿಪ ನಳಭೂಪನಂ ದಮಯಂತಿ ನೀಡುಂ
ನೋಡಿಸಂತ ಸಗಡಲೊಳೀಸಾಡಿ.

ಕಂ॥ ತಂಗದಿರನುಳಿದ ಚಂದ್ರನೊ
ಬೆಂಗದಿರಂ ಬಿಸುಟ ಬಿಸಜಬಾಂಧವನೋ ಮೇ ।
ಣಂಗವನಾಂತ ಮನೋಜನೊ
ಕಂಗೊಂಡನದಾವನಿಸಿಸು ಸೊಬಗಿನ ಮನುಜಂ ॥ ೧೩೮

ಕಂ॥ ಅರಸಂಚಕೆಯೆನ್ನೊಳುಸಿದೊರ್
ಳ್ವರಿಜೆಸೆವುದುನೋಡಲೀತನೆನ್ನ ಯಹೃದಯೇ ।
ಶ್ವರನೆನಿಪ ನಿಷಧ ಧರಣೀ
ವರನಕ್ಕುಮೆಂದು ತರುಣಿತಳವೆಳಗಾದಳ್ ॥ ೧೩೯

ವ ॥ಅಂತು ತಳವೆಳಗಾಗಿ ಕಾಂತೆನಿಜಾಂತರಂಗವಂ ಸಂತವಿಡುತಿಪ್ಪಿರ್ನಂ ಕೆಳ
ದಿಕ್ಕೈಗೈದಕನತ್ಕನಕಪೀಠವಂನಳನನಳಂಕರಿಸವೇಳ್ದುತಿವಿನಯಂವಿಗೆ.

ಕಂ॥ ಸ್ಮೇರಮುಖಿ ಕುಸುಮವಿಶಿಖ
ಪ್ರೇರಿತೆ ನಾಣ್ಣುಸುತೊಲಂಗೆ ನಿಷಧಾಧಿಪನಂ ।
ನೀರೆ ಬೆಸಗೊಂಡಳಮೃತದ
ಧಾರೆಯೆ ಸುರಿದಂತಿರಾಗೆದಂತಮಯೂಖಿ ॥ ೧೪೦

ವ॥ ಎಲ್ಲೆ ಮಹಾನುಭಾವನೆ.

ಕಂ॥ ಅತಿಭೀಮಶಾಸನಂ ಮ
ತ್ಪಿತೃಭೀಮಂ ಭೀತಿಯಿಲ್ಲದವನಿಂದೆ ಸುರ ।
ಕ್ಷಿತಮಾದಂತಃಪುರಮಂ
ಪ್ರತಿಹಾರಿಗಳರಿಯದಂತಿರೆಂತೊಳಪೊಕ್ಕೈ ॥ ೧೪೧

ವ॥ ಅಂದಂತಿರ್ಕ್ಕೆ ಎಲ್ಲೆ ಸಿಹ್ಮಸಂಪಹನನೆ.

ವೃ॥ ಆವಕುಳಂ ಭವಜ್ಜನನದಿಂದಮಳಂಕ್ರತಮಾಯ್ತು ಮತ್ತಮಿ
ನ್ನಾವುದು ನಾಡು ನಿನ್ನಯವಿಯೋಗದೆ ಬಾಗುಳಸುತ್ತಮಿಪ್ಪುದೀ ।

ಠಾವನೆ ಪಾವನಂಗೊಳಿಸಲಾವ ನಿಮಿತ್ತಮೊಪೇಳ್ವುದಿಂದುಧಾ
ತ್ರೀವಲಯ ಪ್ರಸೂನಶರನೀನೆನುತಂ ನುಡಿದಳ್ ನರೇಂದ್ರನೋಳ್‖ ೧೪೨

ವ‖ಎಂದವಿದರ್ಭನಂದಿನಿಯ ವಿನಯವಾಕ್ಸಂದರ್ಭಕ್ಕೆನಳಂಮನದೊಳ್ಮೆಚ್ಚಿ.

ಕಂ‖ ಎಲೆಮಂಗಳಾಂಗಿ ಕೇಳಾಂ
ನಳನೆಂಬಂದೇವದೂತನೀಯೆಡೆಗಿಂದ್ರಾ ।
ನಲಶಮನ ವರುಣರೈದಿದ
ರೊಲವಿಂಬಯಸುತೆ ಭವತ್ಸ್ವಯಂವರಕೀಗಳ್ ‖ ೧೪೩

ವ ‖ ಅನಂತರಮವರ್ ಮುನ್ನಮೆನ್ನಂಕಂಡು.

ಕಂ‖ ತರುಣಿಯೆಡೆಗೈದಿ ನಿನ್ನಂ
ಸುರಪಾನಲಶಮನವರುಣರೆಳಸಿಪ್ಪರ್ ನೀಂ ।
ವರಿಸವರೊಳೋರ್ವನಂ ನಿ
ರ್ಜರನನೆನುತ್ತರುಪಿ ಬರ್ಪುದೆನಲೈತಂದೆಂ ‖ ೧೪೪

ಕಂ‖ ಅವರುರುತರ ಪ್ರಭಾವದೆ
ಠವನಿಲಯಕೆಬಂದೆನಲ್ತೆ ಕಾಣಿಸದಾರ್ಗಂ ।
ವಿವರಿಸಿದೆನದೆಲ್ಲಮು ನಿ
ನ್ನವನೀಶಕುಮಾರಿಮಾಡುದೇವಪ್ರಿಯಮುಮಂ ‖ ೧೪೫

ವ‖ ಎಂದು ಸಿರೆ.

ಕಂ‖ ನೀರೆನಿಜಮೆನೆ ಬೆಮತ್ತಳ್
ಭೂರಮಣಂತಾನೆ ನಳನೆನಲ್ಕೊಡನೊಡಲೊಳ್ ।
ತೋರಿತು ರೋಮಾಂಚಂ ಮಿಗೆ
ಕಾರಿದುವಾನಂದಬಾಷ್ಪಮುಂ ಕಡೆಗಣ್ಗಳ್ ‖ ೧೪೬

ವ‖ ಅಂತು ನಳದರ್ಶನದಿಂದುಂಟಾದ ಸಂತೋಷಕ್ಕಂ ಶಕುಂತಮುಖದಿಂ ತನ್ನ ಮನಮಂತಿಳಿದು ಮಿಂದ್ರಾದಿಗಳೊಳೋರ್ವನಂ ವರಿಸವೇಳ್ಕು ಮೆಂದು ನುಡಿದ ನಳವಚನ ಶ್ರವಣದಿಂದುಂಟಾದ ಸಂತಾಪಕ್ಕಂ ಕಾಂತೆ

ಕಳವಳಂಗೊಂಡು ಮುಹೂರ್ತಂಬರಂಸಂತಮಿರ್ದ್ದು ಬಳಿಕೆ ನಳನಂ ನೋಡಿ ಲಜ್ಜೆಗೂಡಿ.

ವೃ॥ ನಮಿಸಿದಪೆಂಸುರರ್ಗ್ಗೆ ನೃಪನಿನ್ನ ಥನಂಗಡತಾನದಿರ್ಕ್ಕೆಪೇ
ಳಮರವರರ್ಕ್ಕಳೇಂವರಿಸಲಕ್ಕು ಮೆಮಾನುಷಿಯರ್ಕ್ಕಳಂದಲ।
ಕ್ರಮಮಿದಸಕ್ಕಟಾವಿಬುಧರಾದಿವರೆಂತದನೊಪ್ಪುಗೊಳ್ಳುತಾ
ಗಮಿಸಿದೆಯೆಂತು ನೀನಿದುವಿಚಿತ್ರಮಲೇನಯರತ್ನನೀರಧೀ॥ ೧೪೭

ವ॥ ಇದಲ್ಲದೆಯುಂ.

ಕಂ॥ ಅರಸಂಚಿಕೆ ನಿಜಗುಣಮನೆನೆ
ಗೊರೆದಾಗಳೆ ಮನದೆ ನಿನ್ನವರಿಸಿದೆನರಸಾ।
ಬರಿಸಲ್ ನಿನ್ನಂ ಬರಿಸಿದೆ
ನರಸರನೆಲ್ಲಂ ಸ್ವಯಂವರವ್ಯಾಜದಿನಾಂ॥ ೧೪೮

ಕಂ॥ ಸುರರಕ್ಕೆ ನೃಪತಿಮೇಣ್ಸುರ
ವರರಕ್ಕೆಮನಿನ್ನನೊಪ್ಪಿವರಿಸಿದೆನಾಂಮುಮ್।
ವರಿಸಿದಳವರಿಸಲಕ್ಕುಮೆ
ವರಿಸಿದವಳ್ ಪೆರರವರಿಸಲಕ್ಕುಮೆ ಜಗದೊಳ್॥ ೧೪೯

ಕಂ॥ ಇದುಸತ್ಯಂಬೇರಣಮಿ
ಲ್ಲದಯಾನಿಧಿಮದುವೆಸಿಲ್ವುದೆನ್ನೊಳ್ ನೀನ।
ಲ್ಲದೊಡೀ ಪ್ರಾಣಮನಿನ್ನಯ
ಪದಕರ್ಪಿಸುವೆಂನರೇಶಪಾಲಿಪುದೆಂದಳ್॥ ೧೫೦

ವ॥ ಎಂದ ದಮಯಂತಿಯ ನಯವಚನಕ್ಕಂ ಮನೋನಿಶ್ಚಯಕ್ಕಂ ನಳ ನಾಶ್ಚರ್ಯಂ ದಾಳ್ದು ಮತ್ತಮಿಂತೆಂದಂ.

ವೃ॥ ಸುರರಂ ಮೆಚ್ಚಿಪುದಕ್ಕದಗ್ರತಪಮುಂ ಮಾಳ್ಪಗ್ಗಡಾಮಾನವರ್
ಸುರವರ್ಯಕ್ಕಳೆ ನಿನ್ನಮುಚ್ಚಿವರಿಸಲ್ಕೈತಂದೊಡಾನೊಲ್ಲೆನೆಂ।
ಬಿರವೇಂಬಿಂಕವೊಬಿಣ್ಪೊಗಾಂಪತನವೋಸಾಕೊಪ್ಪಿಕೊಳ್ತುತ್ಸುರೇ
ಶ್ವರಪಾದಾಬ್ಜದ ಧೂಳಿಗಾಂಸರಿಯುಮಲ್ಲಂ ಮಾನವಂ ಮಾನಿನೀ॥ ೧೫೧

ವ|| ಮತ್ತಂ.

ವೃ|| ವರಿಸಿದೊಡಾವನಂ ಸುರಮಹೀಜವನಂ ಸುವಿಹಾರಕಾನನಂ
ಸುರಕರಿಯೇರುವಾನೆ ಸುರಸುಂದರಿಯರ್ ಪರಿಚಾರಿಕಾಜನರ್ ||
ಸುರನದಿನಾರಿಖೇಲನ ಸರಂಸವಿನ್ರೋಗರಮೋಸುಧಾರಸಂ
ಸುರಗಿರಿ ಮಾಡುವೆಟ್ಟೆನಲದಾವಸಿಯುಳ್ ವರಿಸಲ್ಕದಾತನಂ | ೧೪೨

ಕಂ|| ಬಾಲೆಯದಾವನವರಿಸುತೆ
ಪೌಲೋಮಿಯ ಗಂಡಮಂಡಲೇಂದುಗೆ ಲಂಬ |
ನ್ನೀಲಾಳಕಜಾಲಕದಿಂ
ಕಾಳಿಕೆಯ ನೊಡರ್ಚ್ವಲಾರ್ಪಳವಳಲೆನೋಂತಳ್ || ೧೪೩

ಕಂ|| ಮುಖನಾವನಖಿಲಬರ್ಹಿ
ರ್ಮ್ಮುಖರ್ಗಿನ್ನಾವಂ ವಿಚಿತ್ರಧಾಮನದಾವಂ |
ಮುಖಕೆ ಪುರೋಧಸನಾವರ
ಶಿಖಿಯಂ ವರಿಸದತುಷಾರಕರಮುಖಿಯಾವಳ್ || ೧೪೪

ಕಂ|| ಆವನದಂಡದಭಯದಿಂ
ಜೀವಪ್ರ್ವಪಮನೊಡರ್ಚ್ವಲಂಜುಗುಮೆನಲಾ |
ವೈವಸ್ವತನಂ ಧರ್ಮ
ಶ್ರೀವಿಭುವಂ ವರಿಸದಿರ್ಪಭಾಮೆಯದಾವಳ್ || ೧೪೫

ಕಂ|| ಆವಂಪ್ರಚೇತಸಂ ಮೇ
ಣಾವಂಲಾವಣ್ಯನಿಧಿಪಯಃ ಪತಿಯಾವಂ ||
ಕಾವನುಮಂಕರಿದೆನಿಸಿದ
ನಾವರುಣನ ವರಿಸದಿರ್ಪ ತರುಣಿ ಯದಾವಳ್ || ೧೪೬

ವ|| ಅದರಿನೀನಾಲ್ವರ್ಲೋಕಪಾಲರೊಳಾವನುಮನಾದೊಡೋರ್ವನಂ ಗೀರ್ವಾಣವರ್ಯನಂ ವರಿಪುದುಚಿತಮೆಂದು ನಳನರೇಂದ್ರಂ ನುಡಿಯೆದಮಯಂತಿಕೇಳ್ದು ಚಿಂತೆಯುಂತಾಳ್ದು.

ಕಂ॥ ಪತ್ತಿದತಾಪದೆ ಕಡೆಗ
ಣ್ಣತ್ತಣಿನಿಳಿವಶ್ರುಬಿಂದುಗಳ್ ನುಡುಗಣಮಂ ।
ವೃತ್ತಕಪೋಲೇಂದುಗೆ ತಾ
ನಿತ್ತಳ್ಕೃಪಗಿತ್ತಳಲ್ತುವಧುವುತ್ತರಮಂ ॥ ೧೫೭

ವ॥ ಆಗಳ್ ನಳಂನಸುನಕ್ಕು.

ಕಂ॥ ಅಮಳದ್ಯುತಿಶಾಲಿ ಸುರೋ
ತ್ತಮ ಸುಕರಗ್ರಹಣಕಲಸಿಸಮಲದ್ಯುತಿಸಂ ।
ಕ್ರಮ ರಾಜನ ಕರವಿಡಿವಾ
ಕುಮುದಿನಿಗಂನಿನಗಮುಚಿತಮಂಚಿತಜಾಡ್ಯಂ ॥ ೧೫೮

ಕಂ॥ ದೇವಪ್ರಿಯಕೆರಡೆಣಿಸಿದ
ನಾವಂ ಬಾಳ್ವಂ ಧರಿತ್ರಿಯೊಳಗದರಿಂರಾ ।
ಜೀವಾನನೆ ಬೇಡಿದಪೇಂ
ಕಾವುದುನೀನೆನ್ನನಿಂದು ವರಿಯಿಸಿಸುರರಂ ॥ ೧೫೯

ವೃ॥ ಆವಂಮೂಜಗದಾಣ್ಮನಾವನಮರಾಧ್ಯಂ ಮತ್ತಮಾವಂ ಮಹಾ
ಲಾವಣ್ಯಾಬ್ಧಿ ಶಚೀ ಪಯೋಧರತಟೀ ಪತ್ರಾವಳೀಚಿತ್ರಕಂ ।
ಆವಂವಜ್ರಕರಂ ಶತಕ್ರತುವದಾವಂ ವೃತ್ರಹರ್ತಾರನಾ
ದೇವೇಂದ್ರಂ ದಯೆಗೈವುದೆಂದು ನಿನಗೆಂದಂ ನೀನದೇಂನೋಂತೆಯೋ ॥

ವ॥ ಮತ್ತಂ.

ವೃ॥ ಮಹಿಷಿಪುಲೋಮಜಾತೆ ಸಲೆಸೇವಿಪ ಸೇವಕಿಯರ್ಕಳಪ್ಸರೋ
ಮಹಿಳೆಯರಿರ್ಪಬೀಡುದಿವ ಮಾರವೆಕಲ್ಪಮಹೀಜಕಾನನಂ ।
ಅಹಹಜಗತ್ರಯಿಾವಿಭುತೆ ಮೋಣ್ತನಗೆಂಬಮರೇಂದ್ರನೋಳ್ಕರ
ಗ್ರಹಣಮನಾಂತುಬಾಳ್ವುದಕೆ ಸಂದೆಯಮೇನೆರೆಸುಂದರೀಮಣೀ ॥

ವ॥ ಇದಲ್ಲದೆಯುಂ.

ಕಂ॥ ಬಂದುಸಿರೆನಾರದಂ ನಿಜ
ಸೌಂದರ್ಯವನಂತೆ ಸೋಲ್ತು ಪಂಬಲಿಪಂ ಸಂ ।
ಕ್ರಂದನನೆನ್ನಂದಯೆಯಿಂ
ಸುಂದರಿ ಕೈವಿಡಿವುದೆಂದು ನಿನಗೊರೆಯೆಂದಂ॥ ೧೬೦

ವೃ ನಳಿನಾಕ್ಷೀ ತ್ವದ್ವಿಯೋಗಪ್ರಳಯಶಿಖಿ ಶಿಖಾತೀವ್ರಸಂ ತಾಪಮಂತಾಂ
ಕಳೆವೆಂ ಮಂದಾನಿಲಾಂದೋಳಿತವಿಮಳನಮಂದಾಕಿನೀ ಸಂಚಲಚ್ಚೀ ।
ತಳಕಲ್ಲೋಲಾಂಬುಸಂಕ್ಷಾಳಿತಸಿತಪುಳಿನೋಪಾಂತದೊಳ್ಫುಲ್ಲಮಂದಾ
ರಳತಾಂಚತ್ಕಲ್ಪಕಾರಾಮದೊಳಮನ್ನೃತಮಲ್ತೆಂದು ಪೇಳೆಂದನಿಂದ್ರಂ ॥

ವ ॥ಮತ್ತಂ.

ವೃ॥ ದಿವಿಜಸ್ತ್ರೀನವನರ್ತನಕ್ಕಮೆಳಸಂ ವಿದ್ಯಾಧರೀಪಾಣಿಪ
ಲ್ಲವವೀಣಾರವಹೃದ್ಯಗಾನರಸಕಂಕರಂ ಪುಲೋಮಾತ್ಮಜಾ ।
ಸುವಿಹಾರಕ್ಕಮುಪೇಕ್ಷಿಸಂ ಮನದೆನಿನ್ನಿದೂಸರಿಂವಜ್ರಿಯೆಂ
ದುವಿದರ್ಭಾತ್ಮಜೆಗೆಂಬುದೆಂ ದನೆನಗಿಂದ್ರಂ ಚಂದ್ರಬಿಂಬಾನನೇ' ಮತ್ತಂ

ಕಂ॥ ದಹನಂತಾಂ ತಂನುಮನಿಂ
ದಹಹಭವದ್ವಿರಹದಾವದಹನಂದಹಿಕುಂ ।
ಮಹಿಳಾಮಣಿ ನಿಜಪಾಣಿ
ಗ್ರಹಧಾರೋದಕದೆ ತಂಪಿಸೆಂದೊರೆಯೆಂದಂ ॥ ೧೬೪

ಕಂ॥ ಕೇಳೆಯನಲೆ ದಕ್ಷಿಣಾನಿಳ
ನಳಲಿಪ್ಪಂ ನಿನ್ನದೂಸರಿಂ ಕಂನಿಕೆನೀ ।
ನಿಳಕೈಯುದೆನಳನೆಂದೆಂ
ನೊಳನುಗ್ರಹಮಾಂ ಪುದೆಂದು ಶಿಖಿಯುಸಿರೆಂದಂ ॥ ೧೬೬

ಕಂ॥ ತರುಣೀ ನಿಂನಯ ದೂಸರಿ
ನುರುಪುವ ಮದನಾಗ್ನಿಕೀಲದಿಂ ಸೀದುರೆಸೀ ।

ಕರಿವೋದ ವರುಣನೆನ್ನಂ
ಕರುಣದೆ ನೀಂ ವರಿಸಿ ತಂಪಿಸೆಂದೊರೆಯೆಂದಂ ॥ ೧೬೭

ವ ॥ ಮತ್ತಮಾವರುಣಂ.

ಕಂ॥ ಕೆಡೆದಿರ್ಪೆೞ್ಗಂ ತವ ವಿರಹದೆ
ಮಡದಿಮಣೀ ಮದನತೀವ್ರದಾವಾಗ್ನಿಯೊಳಾಂ ।
ತಡೆಗೆಯ್ಯದೆ ಮತ್ಕರಮಂ
ಪಿಡಿದೆತ್ತುವುದೆನ್ನ ನೆಂದು ನುಡಿಯೆಂದೊರೆದಂ ॥ ೧೬೮

ವ॥ ಇದುಮಲ್ಲದೆ.

ಕಂ॥ ತನಗಂ ತಾನಂತಕ ನೆನಿಸಿದ
ಮನಸಿಜನಿಸೆ ತೀಕ್ಷ್ಣಶರದೆ ಕಂಠಗತಪ್ರಾ ।
ಣನ ನೆನ್ನಂ ಕಂಠಾಲಿಂ
ಗನದಿಂ ಜೀವಿಸೆನುತಂತಕಂ ನುಡಿಯೆಂದಂ ॥ ೧೬೯

ವ ॥ ಮತ್ತಮಾಯುಮಂ.

ಕಂ॥ ಯುವತಿ ಭವದ್ವಿರಹದೆ ಸಂ
ಭವಿಸಿರ್ಪೆನ್ನಯ ಶರೀರತೀವ್ರಜ್ವರಮಂ ।
ಭವದೀಯ ಕರಗ್ರಹಮೆಂ
ಬವರೌಷಧದಿಂದ ಮಾರಿಸೆಂದೊರೆಯೆಂದಂ ॥ ೧೭೦

ವೃ॥ ಸರಸಿಜಪತ್ರನೇತ್ರೆ ಯುಸುರಾ ಪಸೆನಿಲ್ವೆಯೊ ಪಾಕವೈರಿಯೊ
ಳ್ವರಿಣಯಮಾಂಪೆಯೋ ಪವನಮಿತ್ರನ ಮಿತ್ರತನೂಭವಂಗದೇಂ ।
ಧರಿಸುವೆಯೋ ವರಸ್ರಜವ ನಲ್ಲದೊಡೇಂ ವರಿಯಿಪ್ಪೆಯೋ ವಲಂ
ವರುಣನ ನೆನ್ನೊಳೀಕೆಸಪೆ ಸಂದೆಗಮಂ ಭುವನೈಕಸುಂದರೀ ॥ ೧೭೧

ಕಂ॥ ಬರೆವಂ ಸ್ವಹಸ್ತಮಂ ಮೋ
ಕ್ಷಸುರಪರಿವೃಢವಚಮಿಂತಿದಂ ಮಾನಸದೊಳ್ ।

ಪರಿಭಾವಿಸಿ ನೀಡುಂ ತಾ
ಮರಸಾನನೆ ವರಿಸು ಸುರರೊಳೊರ್ವನನೊಲವಿಂ ॥ ೧೭೨

ವ॥ ಎಂದ ನಳನುಕ್ತಿಯುಂ ಕೇಳ್ದಂದುಪಾಯುಮಂ ಬಗೆಯೊಳ್ಬಗೆದು.

ಕಂ॥ ನರರೂಪಕುಸುಮಶರೋಪನೆ
ತರಿಸಂದೆಂನೊಂದು ನನ್ನಿಯಂ ಬಿನ್ನವಿಪೆಂ ।
ಮರುಕಂವಿಗೆ ಲಾಲಿಪುದೆಂ
ದೊರೆದಳ್ತಾಂ ಬಗೆದುಪಾಯುಮಂ ನಳನೃಪನೊಳ್ ॥ ೧೭೩

ಕಂ॥ ಸುರವರ್ಯರಂ ಪ್ರಸನ್ನೀ
ಕರಿಸುತ್ತಾನವರ ಮುಂದೆ ನಿನ್ನನೆ ವರಿಪೆಂ ।
ಪರಿಕಿಸ ಲಿದರಿಂ ದೋಷಂ
ದೊರೆಕೊಳದಲೆ ನಿನಗೆ ನೀತಿವಿದ್ಯಾನಿಳಯಾ ॥ ೧೭೪

ವ॥ ಎನೆ ನಳಂ ವ್ಯಾಕುಲ ಮನಸ್ಕನಾಗಿ.

ಕಂ॥ ಅಂತಮರರೊ ಳೊಪ್ಪುಗೊಳು
ತ್ತಿಂತು ಪರಾರ್ಥದೊಳ್ ಯತ್ನಿಸುತ್ತಂ ಪಿರಿದುಂ ।
ಸಂತಂ ಸ್ವಾರ್ಥಮೆ ಸಮನಿಸೆ
ಕಾಂತಾಮಣಿ ಯೊತದರ್ಕೆ ಸಂತಸಮಾಂಪೆಂ ॥ ೧೭೫

ವ॥ ಇಂತುಸುದರ್ಶನಳನರೇಂದ್ರಂ ದಮಯಂತಿಯುಂ ಬೀಳ್ಕೊಂಡೆಂದಿನಂ ತಾರ್ಗಂ ಗೋಚರಿಸದಂತಪುರದಿಂ ಪೊರಮಟ್ಟು ಸುರೇಶರಿರ್ದಲ್ಲಿ ಗೈತಂದು ತಾನುಸುದರ್ದುದುಮಂ ದಮಯಂತಿ ಯುಸುದರ್ದುದುಮನಿತುಮಂ ಬಿಡದಾಲೋಕಪಾಲರ್ಗ ರುಪೆ ॥

ಕಂ॥ ಅಕ್ಕೆ ನಳನೃಪತಿ ನಡೆಯೆಂ
ದೊಕ್ಕಣಿಸಿ ಬಳಕ್ಕೆ ತಕ್ಕುದಿದಕೆಸಪೆ ವೆನು ।
ತ್ತೆಕ್ಕಟಿಗೈದ ಮರೇಂದ್ರರ್
ಪೊಕ್ಕರ್ ಕುಂಡಿನಮ ನಾತ್ತಶುಭಮಂಡಸನಮಂ ॥ ೧೭೬

ಚತುರ್ಥಾಶ್ವಾಸಂ.

ವೃ॥ ಬೞಿಕಂ ಸೇನಾಪರೀತಂ ಮಣಿಮಯ ಕನಕಾಂದೋಳನಾರೂಢನಾಸ
ನ್ನಲತಾಂಗೀ ಚಾಮರಾಧೂನನ ಪರಿಚಲಚಾಮೀಕರಾಂ ಸಾಂಶುಕಾಂತಂ
ಕಲಧೌತಚ್ಛತ್ರಕಾಂತಿಚ್ಛುರಿತಗಗನ ನಾಲಂಬಿಮುಕ್ತಾಕಲಾಪೋ
ಜ್ಜ್ವಲವಕ್ಷಂ ಪೊಕ್ಕನಾಕುಂಡಿನ ಪುರವರಮಂ ನೈಷಧಕ್ಷ್ಮಾಮಹೇಂದ್ರಂ॥

ಕಂ॥ ಬಂದುದು ನಾನಾ ಜನಪದ
ದಂದಂಬಡೆದವನಿಪಾಲ ನಂದನ ಬೃಂದಂ ।
ದುಂದುಭಿಕಹಳಾ ಬಹುಳರ
ವಂ ದೆಸೆಗಳ ನಳುರೆ ಸಕಲ ಸೇನಾಸಹಿತಂ ॥ ೧

ಆಗಳ್—

ಕಂ॥ ಇದಿರೊಳ್ಕೊಂಡತಿವಿಭವದೆ
ವಿದರ್ಭಪತಿ ಬಂದ ಸಕಲರಾಜನ್ಯಕಮಂ ।
ತದುಚಿತ ಸತ್ಕಾರಂಗಳ
ಪದಪಿಂ ಗೈದಂ ಸುರೇಂದ್ರಸನ್ನಿಭವಿಭವಂ ॥ ೨

ವ॥ ಇಂತುಪಚಾರಮಂ ಮೆರೆದು.

ಕಂ॥ ಇದು ಶುಭದಿನ ಮೀದಿನದೊಳ್
ವಿದರ್ಭಕನ್ಯಾ ಸ್ವಯಂವರಂ ಬಳಿಗು ಮೆನು ॥
ತ್ತೊದರಿಮುದು ಡಂಗುರಂ ತ
ದ್ವಿದರ್ಭನಾಣತಿಯೊ ಳರಸುಕುಲ ಮಿರ್ಪೆಡೆಯೊಳ್ ॥ ೩

ವೃ॥ ಕೇಳಲೊಡಂ ನಿಜಾಂಗದೊಳೆ ಕೀಲಿಸಿದಂಗಜನಂಬಿನಂತಿರು
ಬ್ಬೇಳೆ ತನೂರುಹಂ ಕಡುಗಿ ಬೇಗನೆ ಸಿಂಗರಮಾಂತು ಸೇವಕ ।

ವ್ಯೊರ್ಗಳಿಸೆ ಕೂಡೆ ಮೌಳಿಮಣಿಕಾಂತಿಬೆಳಂಗೆ ದಿಗಂತಮಂ ಮಹೀ
ಪಾಳಸುತ ಸ್ವಯಂವರಮಹೋತ್ಸವ ಮಂಟಪಕಾಗಳೈದಿದರ್ ॥ ೫

ವ ॥ ಅಂತುಬರ್ಪಾಗಳ್.

ವೃ ॥ ಸರಿಯೊಳ್ಕೃಯ್ಸಿರಿಯೊಳ್ಮಹಾವಿಭವದೊಳ್ಗೀರ್ರೋರ್ವರೊರ್ರೋ
ರ್ವರಂ ನೆರೆನೋಡುತ್ತೆ ಕರುಂಬುತಂ ಪಲಬುತಂ ಕಾಳ್ಗಟ್ಟುತಂ ತಿಟ್ಟುತಂ
ವರಿಸಲ್ಕಾಕೆ ತೊಡೆ ಭೈಮಿ ತನ್ನ ನಿಭವಕ್ತ್ರಂಗೀವೆನಾಂ ಮೋದಕೋ
ತ್ಕರಮಂ ದುರ್ಗಿಗೆ ಬಾಯಿನಂಗುಡುವೆ ನೆಂದೈತಂದುದಾರಾಜಕಂ ॥ ೬

ವ ॥ ಅಂತೈತರುತ್ತಂ ಸ್ವಕಾಂತಿಹಸಿತತ್ರಿವಿಷ್ಟಪಮಂ ಸ್ವಯಂವರಮಂಟಪ
ಮಂ ಮಿಕ್ಕಿನ ರಾಜಕುಮಾರಕರ್ ಸಂಭ್ರಮಂಮಿಕ್ಕುಪೊಕ್ಕುತರವರಿ
ದಿಕ್ಕಿದ ಪೊನ್ನಗದ್ದುಗೆಗಳೊಳುಕ್ಕಿಮಂ ಮಿಗೆ ಕುಳ್ಳಿರ್ಪಾಗಳ್.

ವೃ ॥ ಅಂತಿರವೇಳ್ದು ಕಂತುವ ವಸಂತನ ನತ್ತಲೆಸೂರವೇಳ್ದುಮ
ತ್ತಂತೆ ಜಯಂತನಂ ಕಡೆಗೆ ನಿಂದಿರವೇಳ್ದತಿರೂಪದಿಂದಮುಂ ।
ಕಾಂತಿವಿಶೇಷದಿಂದಮು ಮುದಾರಮೆನಿಪ್ಪವಿಲಾಸದಿಂದಮುಂ
ತಾಂತಳರ್ದಂ ಸ್ವಯಂವರಸಭಾಸ್ಥಲಿಗಾತ್ತಕುತೂಹಲಂ ನಲಂ ॥ ೭

ವ ॥ ಮತ್ತಂ—

ವೃ ॥ ನಡೆ ಯೈರಾವತಯಾನಮಂ ಜಡಿಯೆ ವಕ್ತ್ರಂ ಜರ್ವ್ವಿಪರ್ವ್ವೇಂದುವಂ
ನಿಡುಗಣ್ ಪದ್ಮಪಲಾಶಮಂ ಪಳಿಯೆ ಕಂಠಂ ಕಂಬುಗಾಕ್ಷೇಪಮಂ ।
ಕುಡಲಾಜಾನುವಿಲಂಬಿ ಬಾಹುಪರಿಘಂ ಕೀಳ್ಮಾಡೆ ಶೇಷಾಹಿಯಂ
ನಡೆತಂದಂ ಮುಡಿಬಾಗೆ ನೋಳ್ಪನೃಪವರ್ಗಂ ನೈಷಧಕ್ಷ್ಮಾಧವಂ ॥ ೮

ವ ॥ ಅಂತು ನಡೆತಂದು ಮುನ್ನಮೆ ಸಮುನ್ನತಮೆನೆ ಕೈಗೈದ ರನ್ನಗದ್ದುಗೆ
ಯಂ ಸಚಿವನ ಕಯ್ಲಾಗವಿಡಿದೇರಿ ಸಂಜೆಗೆಂಪಿಂ ರಂಜಿಪ ಪೂರ್ವಪರ್ವತವ
ನಡರ್ದ ಪದ್ಮಾಪ್ತನಂತೆ ನಳನರೇಂದ್ರಂ ವಿಲಾಸಂಮಿಗೆ ಕುಳ್ಳಿರ್ದಾಗಳ್.

ಕಂ॥ ಪಲರರಗುವರರ್ ಸುತ್ತಲ್
ನೆಲಸಿರೆ ಗದ್ದುಗೆಯೊಳವರ ನಡುವೆಡೆ ಯೆಸೆದಂ।
ನಲರಾಜೇಂದ್ರಂ ತಾರಾ
ವಳಿಮಧ್ಯದೊಳೆಸೆವ ರೋಹಿಣೀ ರಮಣನವೋಲ್॥ ೯

ಕಂ॥ ಚಾಮರವು ನಿಕ್ಕುತಿರೆ ವಿಕ
ಚಾಮರತರುಕುಸುಮಧವಳಮಂ ಭಾಮಿನಿಯರ್।
ತಾಮರಸಂ ರಂಜಿಸಿದಂ
ತಾಮರಸಂ ಸೊಗಯಿಪಂತೆ ಕೆಲದಂಚೆಗಳಂ॥ ೧೦

ವ॥ ಆಗಳ್ ನಾಕಪತಿಮೊದಲಾದ ನಾಲ್ವರ್ ಲೋಕಪಾಲರುಂ ದಮಯಂತಿಯಂ ವರಿಸಲೆಳಸಿ ನಳಾಕೃತಿಯಂ ಧರಿಸಿ ಬಂದಾ ನಿಷಧೇಂದ್ರನೊಡವೆರಸು ಕುಳ್ಳಿರೆಯಿರೆ—

ಕಂ॥ ಚಂಚತ್ಕಾಂಚನ ಮಯ ಮಣಿ
ಮಂಚದೆ ಕುಳ್ಳಿರ್ದ ಪಂಚನಳರೆಸೆದರ್ ಕೈ।
ಲಾಂಚಲಮು ನೇರಿರಂಜಿಪ
ಪಂಚಾಸ್ಯಂಗಳನೆ ಸಿಂಹಸಂಹನನರ್ಕಳ್॥ ೧೧

ವೃ॥ ವಿವಿಧಮಣೀಖನಿಪ್ರಕರ ರಾಜಿತ ರೋಹಣಶೈಲಮೆಂಬಿನಂ
ದಿವಿಜತರುಪ್ರತಾನ ಪರಿರಂಜಿತ ನಂದನಮೆಂಬಿನಂ ಮಹಾ।
ಚ್ಛವಿರುಚಿತತಾರಕೋತ್ಕರವಿಭಾಸಿ ನಭಸ್ಥಲಮೆಂಬಿನಂ ಮಹೀ
ಧವತನುಜಾತಜಾತಪರಿಶೋಭಿತ ಮೊಪ್ಪಿದುದಾಸಭಾಸ್ಥಳಂ॥ ೧೨

ವೃ॥ ಸ್ಫುರದುತ್ಕೇಸರ ಕೇಸರಿಪ್ರಕರ ರಾರಾಜದ್ಗುಹಾಸ್ಥಾನದಂ
ತಿರೆ ನಿಷ್ಯಂದಿಮದಪ್ರವಾಹವಿಹರದ್ರೋಲಂಬಮಾಲಾ ಲಸ।
ತ್ಕರಿಸಂಕ್ರಾಂತವನಾಂತದಂತೆ ಭುಜಗೇಂದ್ರವ್ಯೂಹರಾಜದ್ವಸುಂ
ಧರೆಯಂ ತಾನೃಪವೀರಸಂತತಿಯು ನೊಪ್ಪಿತ್ತಾಸಭಾಮಂಟಪಂ॥ ೧೩

ವ॥ ಆಗಳಾಭೀಮಭೂಮಿಪನ ನೇಮದಿಂ ಪ್ರಸಾಧನಪ್ರವೀಣೆಯರಪ್ಪ ಭಾಮಿನಿಯರ್ ನೆರೆದು ಭೈಮಿಯಂ ಮಂಗಳಮಜ್ಜನಂಬುಗಿಸಿ ಸಡಗರಂಮಿಗಲವಳ ಘನಜಘನಮೆಂಬ ಮಾನಸಸರಃಪುಳಿನಮಂ ಮುಸುಂಕಿದ ಕನಕ ಕಮಲಪರಾಗಪೂಗಮೆನೆ ಪೊಸಮಿಸುನಿವಟ್ಟೆಯಂ ನಿರಿವಿಡಿದುಡಿಸಿಯುಂ ಕುಚಕಂಜಕುಟ್ಮಳಮಂ ಬಾಸಣಿಸಿದ ಬಿಸಿನೀಪತ್ರಮೆಂಬಂತೆ ಪಸುರ್ಗುಪ್ಪಸಮನಪ್ಪುಗೈಸಿಯುಂ ನಿಡುಮುಡಿಯೆಂಬ ನಿರಿಮುಗಿಲ್ಗೆ ಕುಡಿಮಿಂಚಿನ ಗೊಂಚಲಂ ಪಡೆವಂತೆ ಪಜ್ಜಳಿಪಬಜ್ಜರದ ಜಡೆಸರಮಂ ಸಂಗಡಿಸಿಯುಂ ಮೊಗಸಸಿಗೆ ಮೃಗಮನಮರ್ಚುವಂತೆ ಮೃಗಮದಪಂಕದಿಂ ತಿಲಕಮಂ ತಿದ್ದಿಯುಂ ಕಟಾಕ್ಷಲತೆಕವಲ್ತು ಕರ್ಚಿದ ಪೂದೊಡಂಬೆಗಳೆಂಬಂತೆ ಕೊಡಂಕೆಗಳೊಳ್ಮುತ್ತಿನೋಲೆಗಳಂ ತೊಡರ್ಚಿಯುಂ ಮುಗುಳ್ನಗೆಯೆಂಬ ಪೆಣ್ಣಂಚೆಯ ಬಳ್ವರಿವ ಮರಿಯಂಚೆಯೆನೆ ನಾಸಾಗ್ರದೊಳ್ತೋರಮುತ್ತಿನ ಮೂಗುತಿಯ ನಮರ್ಚಿಯುಂ ಕಂಠಕಂಬುವಂ ಬಾಸಣಿಸಿದ ಪಾಸೆಯೆನೆ ಪಸುರ್ವರಲ ಹತ್ತಸರಮಂ ಸೇರ್ಚಿಯುಂ ಪೃಥುಕುಚಮೆಂಬಪೂರ್ಣಕುಂಭಮ ನರ್ಚಿಸಿದ ಪಲ್ಲವಸ್ರಜಮೆನೆ ಪದ್ಮರಾಗಮಣಿಸರಮಂ ಕೊರಲೊಳೆಳಲೆವಿಟ್ಟುತರಂಗೊಳಿಸಿಯುಂ ಕರಾಂಬುಜಂಗಳಂ ಮುಸುರಿದ ಮರಿದುಂಬಿಬಂಬಲೆನೆ ಶಂಬರನೀಲಕಂಕಣಂಗಳ ನಲಂಕರಿಸಿಯುಂ ಘನಜಘನಪುಳಿನತಳಮಂ ಬಳಸಿದೊಜ್ಜರವೊನಲೆನೆ ಬಜ್ಜರದುಡೆನೂಲಂ ಲೀಲೆಮಿಗೆ ಕೀಲಿಸಿಯುಂ ಚರಣಾಂಬುಜಂಬಳಸಿದಂಚೆದತ್ತಿಗಳೆನೆ ಮುತ್ತಿನಂದುಗೆಗಳಂ ಸಂಧಿಸಿಯು ಮಿಂತು ಪಸದನಂಗೊಳಿಸಿ ವರವರಣಮಾಲೆಯ ನಾಕೆಯ ಕರಕಮಲಕಳವಡಿಸಿ ಮಂಗಳವಾದ್ಯಂಗಳ್ ಮೊಳಂಗೆ ಪೊನ್ನಂದಣಮನೇರಿಸಿ ಸಖೀಸಹಸ್ರಂ ಬೆರಸುಸ್ವಯಂವರ ಮಂಟಪಕ್ಕೆ ಕರೆದು ತರ್ಪರ್ಗಳ್ ॥ ೧೪

ಕಂ॥ ಕೆಂದಾವರೆಯೆಸಳ್ಗಳನಡು
ಪಂದಂಬಡೆದಿರ್ಪ ಸಿರಿಯ ಮೈಸಿರಿಯನದೇಂ ।

ನಿಂದೀವರಲೋಚನೆ ಗೆಲೆ
ವಂದಳೊ ಕುಳ್ಳಿರ್ದ ತೊಳಪಪೊನ್ನಂದಣದೊಳ್ ॥ ೧೫

ವೃ॥ ಆರತಿ ಯಿಕ್ಕೆಗಾರತಿಯು ನೆತ್ತುವ ತೊತ್ತಿನೆ ತನ್ಮನೋಹರಾ ।
ಕಾರವಿಶೇಷಮಂ ನುಡಿವುದೇಂ ವರಮಾಲ್ಯವಿಭಾಸಿಹಸ್ತೆ ಶ್ರಿಂ ।
ಗಾರಸುಧಾಸಮುದ್ರಮಥನೋದ್ಭವಲಕ್ಷ್ಮಿಯೆನಲ್ ಸ್ವಯಂವರಾ
ಗಾರಮ ಪೊಕ್ಕಳಂದು ದಮಯಂತಿ ಮನೋಜನ ವೈಜಯಂತಿವೊಲ್

ವೃ॥ ತೊಲತೊಲಗತ್ತಲಂಗಜನ ಮತ್ತಮತಂಗಜ ವೈದುತಿರ್ಪ್ಪದಿ ।
ತ್ತಲೆ ನಿಲುನಿಲ್ ಪ್ರಸೂನಶರನೊಯ್ಯನೆ ಪೊನ್ನೊರೆಯಿಂದೆ ಕೀಳ್ತಕಿ ।
ತ್ತಲಗು ಪಳಂಚುಗುಂ ಕೆಲಕೆ ಸಾರ್ ಸ್ಮರರಾಜ್ಯಯಕೇತನಂ ಸಮಂ
ತೊಲೆವುತೆ ಬರ್ಪ್ಪದೆಂದೊಡನೆ ಕಂಚುಕಿಗಳ್ ಜಡಿವರ್ ಜನೌಘಮಂ॥

ವೃ॥ ನಗೆಮೊಗಮೆಂಬ ತಾವರೆಯುರಗ್ಗಲದೊಳ್ ವಿಹರಿಪ್ಪರಾಜಹಂ
ಸಿಗಳನೆ ಬಿಂಕದಿಂ ಕೆಳದಿಯರ್ ತಡೆದಿಕ್ಕುವ ಚಾಮರದ್ವಯಂ ।
ನೆಗಸಿದ ಮುತ್ತಿನೊಳ್ಗೊಡೆ ಮುಖಾಂಶುಜಿತಂ ಶಿಶಿರಾಂಶುವೈದುತೋ
ಲಗಿಪವೊಲೊಪ್ಪೆಯುಂದಳದೊಳೇಂ ನಡೆತಂದಳೊ ಭೈಮಿಬಿಂಕದಿಂ ॥

ಕಂ॥ ಪೊಸತಲರ್ದ ಮಿಸುನಿದಾವರೆ
ಯೆಸಳ್ಗಳ ನಡುವಿರ್ಪ ಸಿರಿಯ ವೈಸಿರಿಯನದೇಂ ।
ಬಿಸಜಾಯತಲೋಚನೆ ಘ
ಟ್ಟಿಸಿದಳೊ ಕುಳ್ಳಿರ್ದ ಮಿಸುಪ ಪೊನ್ನಂದಣದೊಳ್ ॥ ೧೯

ಮತ್ತಂ—
ಕಂ॥ ಸಿತಕುಸುಮದಾಮಪರಿಶೋ
ಭಿತಕರತಾಮರಸೆ ಯೆನಿಸಿ ಬರ್ಪ ಮಹೀಭೃ ।
ತ್ಸುತೆ ಯುರಗುವರಕ್ಕಳ್ ಗೆಲೆ
ರತಿಯುರಲ್ಲಿಲ್ಲಿಡಿಮ ಬಂದಳೆನೆ ರಂಜಿಸಿದಳ್ ॥ ೨೦

ಕ॥ ಪೊಕ್ಕಿದು ಮಂಟಪಮಲ್ತರ
ಮಕ್ಕಳ ಕಣ್ಬಾಗಿಲತ್ತಣಿಂ ಬಗೆವನೆಯುಂ ।
ಪೊಕ್ಕಳ್ ಸೊಕ್ಕುಂಜವ್ವನೆ
ಯೊಕ್ಕಣಿಸಲ್ಕಳವೆ ಯುವಳ ಮಿಕ್ಕಿನರೂಪಂ ॥ ೭೧

ಕಂ॥ ರಮಣೀರಮಣೀ ಯುತರಾಂ
ಗಮು ನವಲೋಕಿಸಿದ ಧರಣಿರಮಣರ ಕಣ್ಗಳ್ ।
ಎಮೆವೊಯ್ಯುದ ಮರೆದುವೆನಲ್
ಕಮಲಜನಾ ಕನ್ನೆವರಿಜ ನೆನ್ನದುಗ್ಗೈದಂ ॥ ೭೨

ವೃ॥ ನೇತ್ರಾಕರ್ಷಣ ಮಂತ್ರದೇವತೆಯ ವೋಲಿರ್ಪ್ಪಾಕೆಯುಂ ನೋಳ್ಪತ
ದ್ಧಾತ್ರೀನಾಯಕಪುತ್ರರಕ್ಷಿಚಯ ಮೆತ್ತಂ ಸೂತ್ತೆ ಕಣ್ಗೊಪ್ಪಿದಳ್ ।
ವಿತ್ರಸ್ತೈಕ ಸರತ್ಕುರಂಗಪೃಥುಕಾ ಲೋಲಾಕ್ಷಿಯಾ ಭೀಮಭೂ
ವೃತ್ರಾರಾತಿತನೂಜೆ ಜಾಲವೊಳಕೊಂಡೇಣಾಂಗ ನಾರೀತಿಯಿಂ ॥ ೭೩

ಆಗಳ್—

ವೃ॥ ಬರಿದೊರೆಯಾಯ್ತು ಬಿಂಕಮಿರದೋಡಿತಹಂ ಕೃತಿಪೊಯ್ತು ನಾಣ್
ಸರಿದುದು ಧೈರ್ಯವಲ್ಲಿ ಕುಡಿಗೆಟ್ಟುದು ಸಾತ್ವಿಕಭಾವ ಮುದ್ಗಮಂ ।
ಬ್ಬರಿಸಿತು ಸುಯ್ಯುತ್ತಹಂ ಗಸೆರೆವೋದದು ಚಿತ್ತವೃತ್ತಿ ತಾ
ಮರಸದಳಾಯತಾಂಬಕಿಯ ನೀಕ್ಷಿಸಿದಂದವನೀಂದ್ರ ಪುತ್ರರಾ ॥ ೭೪

ವೃ॥ ಇವಳೀ ಕೊಂಕಿದ ಪುರ್ವು ಮಿಾಕುಟಿಲದೀರ್ಘಾಪಾಂಗ ಮಿರ್ದಿನ್ನದೇ
ಕಿವು ಪೂವಿಲ್ಸರಳೆಂದು ಮಾಣ್ದವನಿವಂ ತೊಟ್ಟೋವೊಥಟ್ಟುಚರ್ಮವಂ ।
ತೆವೊಲೆವಿಮಾಯೆರ್ದೆಯುಂ ಕರುತ್ತು ಪೊಡೆದಪ್ಪಂ ಕಾಯ್ಪಿನಿಂದಂ
ಮನೋ
ಭವನೇಗೈದಪೆನೆಂದು ತಲ್ಲಣ ಮನೊಂದಿತ್ತಂದು ರಾಜನ್ಯಕಂ ॥ ೭೫

ವ॥ ಆಗಳಾ ಭೀಮಭೂಮಿಪತಿ ನೆರೆದಿರ್ದ್ದಗಣಿತರಾಜಲೋಕಮ ನವಲೋ
ಕಿಸಿ ವಿಸ್ಮಿತಾಂತಃಕರಣನಾಗುತ್ತಿವರ ಕುಲಶೀಲವೃತ್ತವಿಭಂಗಳ ನರು
ಪಲ್ಕೆ ಸಕಲಲೋಕನಿರ್ಮಾಣಕಲಾಕುಶಲನೆನಿಪ ಕಮಲಸಂಭವನರ
ಸಿಗಲ್ಲದೆ ಪೆರಗ್ಗಸದಳವೆಂದಾತ್ರಿಭುವನಜನನಿಯಪ್ಪ ವಾಗ್ದೇವಿಯಂ
ಮನದೆಜಾನಿಸುತ್ತಿರ್ಪ್ಪಾಗಳ್.

ವೃ॥ ಅಮಳಾಂಗದ್ಯುತಿ ಬೀರೆ ಬಲ್ಪಗಲೊಳಂ ಬೆಳ್ದಿಂಗಳಂ ಮೌಳಿರ
ತ್ನಮಯೂಖಂ ದೆಸೆಯೆಲ್ಲಮಂ ಬೆಳಗೆ ಭೀಮೋರ್ವೀಂದ್ರಸಭ್ಯಾರ್ಣ
ದೊಳ್ ।
ಕಮಲಶ್ರೀಪರಿಹಾಸಿವಕ್ತ್ರೆ ಜವದಿಂ ಮೈದೋರಿದಳ್ ಸರ್ವಲೋ
ಕಮಹೀಯಸ್ತವನೀಯೆ ವಾಣಿವರವೀಣಾಪಾಣಿಕಾರುಣ್ಯದಿಂ ॥ ೨೩

ವ॥ ಅಂತು ಮೆಯ್ದೋರಿದ ವಾಗ್ದೇವಿಯಂ ಕಂಡು.

ದಂ॥ ಜಯಜಯ ಜಯವಾಣಿಕಲ್ಯಾಣಿ ಪಾಣಿಪ್ರವಾಳಾತ್ತಮಾಣಿಕ್ಯವೀಣಾ
ಗುಣಾಸ್ಫಾಲನಾವಿರ್ಭವತ್ಸ್ವಾದುನಾದಾಮೃತಾಸ್ವಾದನೋದ್ವೃತ್ತವೋ
ದಾಶ್ರುಮಿಶ್ರಾಂಬಕೇಸರ್ವಲೋಕಾಂಬಿಕೇ, ಶ್ರೀಮಹಾಶಾರದೇ ಶಾರ
ದೇಂದು ಸ್ಫುರತ್ಸ್ಮೇರವಕ್ತ್ರೋಚ್ಛಲಾಪಾಂಗ ರುಕ್ಚಂದ್ರಿಕಾಸಾರ ಕಾ
ಸಾರಮಜ್ಜನ್ನಮಜ್ಜ್ಞಾತಚೇತಶ್ಚಕೋರೇ ವಚೋಧೂತಕೀರೇ, ಚತು
ರ್ವಕ್ತ್ರವಕ್ತ್ರಾಬ್ಜಕಾಂತಾರಬೇಲನ್ಮರಾಳಿ ಪ್ರಣಮ್ರಾಮರಾಳಿಸ್ಖ
ಲನ್ಮೌಳಿಸಂದಾನಿತಾಮಂದಮಂದಾರ ಕುಂದಾರವಿಂದಾದಿಮಾಲಾಮರಂ
ದಪ್ರವಾಹಾಭಿಷಿಕ್ತಾಂಘ್ರಿಪಾಥೋರುಹೇ ಭಕ್ತಚೇತೋಗೃಹೇ, ಹಾರ
ನೀಹಾರ ಕರ್ಪೂರ ಮಂದಾರಮಂದಾಕಿನೀಪೂರತಾರಾಚಲಕ್ಷೀರಸಿರಾಕ
ರೋದಾರಶೋಭಾ ತಿರಸ್ಕಾರಿಗೌರಪ್ರಭಾಹಾರಿಹೀರಾಂಕ ಕೋಟೀರತಾ
ಟಂಕಕೇಯೂರಹಾರಾವಳೀ ಪಾರಿಹಾರ್ಯಾದಿಭೂಷಾವಿಶೇಷೋಜ್ಜ್ವಲಾ
ಗಣ್ಯ ಲಾವಣ್ಯತಾರುಣ್ಯ ಪುಣ್ಯಸ್ಫುರದ್ವಿಗ್ರಹೇದೇವಿಸಾನುಗ್ರಹೇ, ಜಯ
ಭಗವತಿ ಭಾರತಿ ಖ್ಯಾತರಂಭಾರತಿಶ್ರೀಕರಾಂಭೋಜನೃತ್ಯನ್ಮರಾಳೀಲಸ
ಚ್ಛಾಮರಾಳೀಸಮೀರಾಂಕುರಾಲೋಲನೀಲಾಲಕಾಲಂಬಿರೋಲಂ ಬಮಾ

ಲಾಮುಹುಶ್ಚುಂಬಿತಾಸ್ಯಾಂ ಬುಜೋದ್ಗೀರ್ಣಮಾರಂದಬಿಂದುಸ್ಫುರನ್ಮಂದಹಾಸಪ್ರಭಾಭಾಸಮಾನಾ ಸಮಾನಾಧರೋಷ್ಠಪ್ರವಾಳೇವತಂಸೀಕೃತ ಶ್ವೇತರುಕ್ಕೇತಕೀದೀಪ್ರವಾಲೇನಿಶಾಕಾಂತ ಕಾಂತೋಪಲಾದರ್ಶಸಂದರ್ಶನೀಯಸ್ಫುರಚ್ಛ್ರೀಕಪೋಲೇ ಕಲಾಕೇಳಿಶಾಲೇ ಸದಾನಂದಶೀಲೇ ಶಶಾಂಕಾರ್ಧಫಾಲೇ ಶತಾನಂದಲೋಲೇ ವರಾಭೀತಿಕೃತ್ಪುಸ್ತಕೋದ್ಭಾಸಿಹಸ್ತೇ ತ್ರಿಲೋಕಪ್ರಶಸ್ತೇ ನಮಸ್ತೇನತಾಭೀಪ್ಸಿತಸ್ವರ್ಲತೇ ಸರ್ವಸಂಭಾವಿತೇ ದೇವಿ ತೇ ನಮಃ ಎಂದು ವಿದರ್ಭಪುರಂದರ ನರವಿಂದಭವಸುಂದರಿಗೆವಂದಿಸಿ ನಂದನೆಯುಮಂ ವಂದನಂಗೈಸೀಕೆಯ ಮನೋರಥಮಂ ನೆರವೇರಿಪುದೆಂದು ದಮಯಂತಿಯಂ ಸರಸ್ವತಿಯಕೈಗೊಪ್ಪಿಸೆ ॥

ಕಂ॥ ಸಿರಿಯ ನೊಡಗೊಂಡು ಬರ್ಪ್ಪಂ
ತಿರೆ ನೇಹದೊಳಾವಿರಿಂಚಿಸತಿ ಭೀಮಮಹೀ ।
ವರಜಾತೆಯ ನೊಡಗೊಂಡಾ
ನರಪಾಲಕುಮಾರರಾಳಿಯೊಳ್ ನಡೆತಂದಳ್ ॥ ೨೯

ವ ॥ ಅಂತುನಡೆತಂದು.

ವೃ ॥ ಇವ ನಂಗಾಧೀಶ ನೀತಂ ಮಗಧಪತಿ ಯಿವಂ ಕೇರಳಾಧೀಶ್ವರಂ ಮಾ
ಳವದೇಶಾಧೀಶ ನೀಪಾರ್ಥಿವ ನಿವನುರುತೇಜಂ ಕಳಿಂಗೇಂದ್ರನೀತಂ ।
ಯುವರಾಜಂ ಸಿಂಧುದೇಶಕ್ಕಿವನಮಲಯಶಂ ಕುಂತಳೇಶಂ ಕರಂನೋ
ಡಿವರೊಳ್ಕಾಂತಾಮಣೀ ಕಯ್ವಿಡಿಯಲೆಳಸೆ ನೀನಾವನಂ ಕೂರ್ಮೆ
ಯಿಂದಂ ॥

ವ ॥ ಎಂದಿಂತುಪಲರರಗುವರರಂ ಪರಿವಿಡಿಯಿಂದರವಿಂದಭವಸುಂದರಿಯೊರೆದುಕ್ಕೆತನ್ನ ಮೊಗದಾವರೆಯಂತಿರುತಿರುಪಿ ದುದನೇಮಾರುತ್ತರಂಗೈದವೈದರ್ಭಿಯುಮನೋಭಾವಮ ನರಿದಾಪಂಚನಳರಿರ್ಪ್ಪ ಡೆಗಾಕೆಯನೊಡಗೊಂಡುಬರೆವರೆ.

ಕಂ॥ ನಳರೂಪರನಯ್ವರನಾ
ಯಿಳಾಧಿಪತಿಪುತ್ರಿ ನೋಡಿ ನೆರೆವಿಸ್ಮಯಮಂ ।

ತಳೆದಳದು ದೇವಮಾಯಾ
ವಿಳಾಸಮೋ ಎನ್ನ ಚಿತ್ತಮೋಹಮೊ ಎನುತಂ ‖ ೩೧

ವ‖ ಆಗಳಾನಳನಭವಕಾಂತೆ ದಮಯಂತಿಯು ಮನಮನರಿದುಂ ದೇವರ್ಕ್ಗಳ ಬಗೆಗೆವಿರೋಧಮಾಗದಿರ್ಕೆಂದು ಪದಿರನವಲಂಬಿಸಿ ದೇವೇಂದ್ರನಂ ನಿರ್ದೇಶಿಸಿ.

ಕಂ‖ ಪರಭೂಭೃತ್ಪಕ್ಷಹರಂ
ಮರುದಾಲೋಲಾಪ್ಸರಸ್ಸನಂದನವನದೊಳ್ ।
ಹರುಸದೆ ವಿಹರಿಪನೀನಿ
ರ್ಜರೇಶ್ವರಂ ನೋಡುನೀಲ ನೀರಜನೇತ್ರೇ ‖ ೩೦

ವ‖ ಬಳಿಕಗ್ನಿಯಂ ತೋರಿಸಿ.

ಕಂ‖ ಶುಚಿ ತೇಜೋ ನಿಧಿ ವಿಬುಧ
ಪ್ರಚಯಪ್ರಮುಖಂ ಸದಾಗತಿಪ್ರಿಯನಾದಂ ।
ಪ್ರಚುರರಥನಂ ಜಯವಿದಿತಂ
ಶುಚಿಕಿರಣ ಪ್ರತಿಮವದನೆ ನೋಡನಲನಿವಂ ‖ ೩೩

ವ‖ ಅನಂತಂ ವರುಣನಂ ಲಕ್ಷೀಕರಿಸಿ.

ಕಂ‖ ರುಚಿರಾಂಗಿಯೆ ನೋಡೀತಂ
ಪ್ರಚೇತಸಂ ಭುವನಪತಿ ಸುಲಾವಣ್ಯರಸ ।
ಪ್ರಚುರಂ ಪಾಶಪ್ರಿಯಕರ
ನಚಲಮನೊಳ್ಪಂದೆ ಸುಗುಣಿಯಾದವನಾಳ್ವಂ ‖ ೩೪

ವ‖ ಬಳಿಕಂತನಂ ನಿರವಿಸಿ.

ಕಂ‖ ಸಮವರ್ತಿ ವಿಹಿತನೀಯಿನ
ಕುಮಾರನವಿರುದ್ಧ ದಂಡಧರನೀಕ್ಷಿಪುದು ।
ತ್ವಮದಕ್ಷಿಣಾಧಿಪಂ ಕೇಳ್
ರಮಣೀಮಣಿ ಧರ್ಮರಾಜನೀತನೆ ಜಗದೊಳ್ ‖ ೩೫

ವ॥ ಬಳಿಕ್ಕೆ ನಳರಾಜನಂ ನೋಡಿ.

ಕಂ॥ ಇವನರಿಬಲಘಾತಿ ಮಹಾ
ಹವದೊಳ್ ಬಹುರಾಜ್ಯಲಾಭ ತುಷ್ಟಂದಾಕ್ಷಿ ।
ಣ್ಯವ ನಂಗೀಕರಿಸಿಪ್ಪರ್ನಂ
ಯುವತಿಯೆ ಬಹುವಾಹಿನೀಶ ವಿಭುವರಿಸಿವನಂ ॥ ೩೬

ವ॥ ಎಂದು ನುಡಿದಂಬುಜೋದ್ಭವನಿತಂಬಿನಿಯ ಪಡಿನುಡಿಯಿಂತನ್ನ ಸಂ
ದೆಗಮಿನ್ನುಂ ಬಲ್ಲಿಕಾಗೆ.

ಕಂ॥ ಎಲ್ಲಂದದೆ ಸಮರೆನಿಸಿದ
ಸಲ್ಲಲಿತಾಕಾರರಯ್ವರೊಳ್ ತನ್ನ ಮನೋ ।
ವಲ್ಲಭನಾರೆಂದರಿಯದೆ
ತಲ್ಲಣಿಸುತೆ ಭೈಮಿಮನದೆ ಚಿಂತಿಸುತಿರ್ದಳ್ ॥ ೩೭

ವ॥ ಅಂತು ಚಿಂತಿಪ ದಮಯಂತಿಯ ಮನೋರಥಮುಮರಲೋಕನಾಥರನು
ಜ್ಞೆಯಿಲ್ಲದೊಡೆಫಲಿಸದೆಂದಾಶತಾನಂದನರಸಿಯಾದಿಗೀಶರಂನೋಡಿ.

ವೃ॥ ವರಿಸುವಳಿಂತುಟೇಕೆ ದಿಗಧೀಶ್ವರರೇ ಸತಿನಿಮ್ಮನೆಲ್ಲರಂ
ವರಿಪಳುಮಲ್ತು ನಿಮ್ಮೊಳುಳದಗ್ಗವಮಾನಮೆನುತ್ತಮೊರ್ವನಂ ।
ಪಿರಿದನುರಾಗದಿಂ ನಿಜಮನಃಪ್ರಿಯನಂ ಭವದಂಶಪೂರ್ಣನಂ
ವರನಿಷಧೇಂದ್ರನಂ ವರಿಸಲಾಟಿಪಳೀವುದು ನೀಮನುಜ್ಞೆಯಂ ॥ ೩೮

ವ॥ ಎಂದು ದಮಯಂತಿಯನಾಲೋಕಪಾಲಗ್ಗೆ ಪೊಡಮಡಿಸೆ.

ಕಂ॥ ಕೇಳ್ದಾಮೂತನಮಾನವ
ರಾಳ್ದು ಮುಗುಳ್ನಗೆಯನೊಪ್ಪಿ ಭೈಮಿಯಬಗೆಯಂ ।
ತಾಳ್ದು ಮಹಾನುಗ್ರಹಮಂ
ಪೇಳ್ದರ್ ಭ್ರೂಸಂಜ್ಞೆಯಿಂದೆ ನಿಜಸಮ್ಮತಿಯಂ ॥ ೩೯

ವ॥ ಇಂತು ನಾಲ್ವರುಂ ದಿಕ್ಪತಿಗಳನುಜ್ಞೆಯಂ ದಯೆಗೆಯ್ವುದುಮಾ ವಾ
ಗ್ದೇವಿ ದಮಯಂತಿಯಂ ಕಯ್ವಿಡಿದಾ ನಳನಿದಿರಾಗಿ ನಿಲಿಸಲಾಕೆ ದೇವ
ರ್ಕಳ ಕಣ್ಸನ್ನೆಯಿಂದಿವಂ ನಿಷಧೇಶ್ವರನೆಂದರಿದು.

ಕಂ॥ ವರಣಾರ್ಥಂಬರೆದಿರ್ಪ
ಕ್ಷರಮಾಲಿಕೆಯಂಬತೆರದೊಳೊಪ್ಪುವ ದೂರ್ವಾಂ ।
ಕುರಮಿಳಿತಕುಸುಮಮಾಲೆಯ
ಧರಿಸಿದಳಾ ನಳನ ಕಂಠದೇಶದೊಳೊಲವಿಂ ॥ ೪೦

ಕಂ॥ ಮಾಲೆಯಗಂಟಿಕ್ಕುವನೃಪ
ಬಾಲೆಯಹೃದಯಾಭಿಲಾಷಮಂದೂರಿದುದಾ ।
ವ್ಯಾಲೋಲಪಾಣಿಪಲ್ಲವ
ನೀಲಮಣಿಗ್ರಥಿತಕನಕಕಂಕಣಯುಗಳಂ ॥ ೪೧

ವ॥ ಅಂತುಮಾಲೆಯಂಧರಿಸೆ.

ಕಂ॥ ದೇವರ್ಷಿವಿಬುಧಪಾರಜ
ನಾವಳಿಗಳಸಾಧುರವದೊಳಂಬಹುತೂರ್ಯಾ ।
ರಾವದೊಳಂ ತೀವಿದುದಿಳೆ
ಪೂವಳೆಸುರಿದುದು ವಧೂವರರ್ಕ್ಕಳ ಶಿರದೊಳ್ ॥ ೪೨

ವ॥ ಅನಂತರಂ.

ಕಂ॥ ಆಮೋದಾವಹಮಂಚಿತ
ಕೋಮಲಗುಣಕಲಿತಮೆನಿಪವರಣಸ್ರಜಮಂ ।
ಭೂಮಿಪತಿಲಕಂ ಬಗೆದಂ
ಭೈಮಿಯೆ ತಳ್ಕೈಸಿದಂತೆನಿಜಕಂಧರಮಂ ॥ ೪೩

ವ॥ ಅಂತು ಬಗೆಯೊಳ್ಬಗೆದುನಳಂ ದಮಯಂತಿಯಂ ಕುತೂಹಲಂಮಿಗಲೀಕ್ಷಿಸಿ.

ಕಂ॥ ಸುರಸನ್ನಿಧಿಯೊಳಮೆನ್ನನೆ
ವರಿಸಿದೆಗಡ ಮಡದಿ ಯದರಿನಸುವುಳ್ಳನ್ನಂ ।
ತರಿಸಂದಿರ್ಪ್ಪೆಂ ನಿನ್ನೊಳ
ಗೆರಡಂಬಗೆಯದೆವಲಂ ತ್ರಿವರ್ಗ್ಗಂಗಳೊಳಂ ॥ ೪೪

ವ॥ ಎನೆವಿನಯಂಮಿಗಲಾನುಮಂತಿರ್ಪ್ಪೆನೆಂಬುದ ನಭಿನೈಸುವಂತೆ ತಲೆವಾಗಿ ರ್ಪ್ಪ ವನಿತಾಮಣಿಯೊಡ ವೆರಸು ಹರುಸಂಮಿಗೆ ನಳಂ ಪ್ರಸಾದ ಮುಖ ರುಂ ಪ್ರಯಾಣೋನ್ಮುಖರು ಮಾಗಿ ನಿಜಾಕಾರ ದಿಂನಿಂದದೇವರ್ಕ್ಕಳಂ ಶರಣ್ಬುಗಲಾದೇವರ್ಕ್ಕಳ್ ಅವರ ಪೌಶೀಲ್ಯಕ್ಕೆ ಮೆಚ್ಚಿ ವರಂಗಳನೀ ಯಲ್‌ನಲವೆರ್ಚೆ.

ಕಂ॥ ಚಿರಕಾಲಮರಸುಗೆಯ್ದಿ
ಯರಸಿಯೊಳೊಳ್ಮಗನಪೆತ್ತು ಸುಖವಿರ್ದ್ದು ಬಳಿ ।
ಕ್ಕರಸ ಪಡೆ ಶೈಲಜಾಶಂ
ಕರಸಾಯುಜ್ಯವ ನೆನುತ್ತೆ ಹರಿವರಮಿತ್ತಂ ॥ ೪೫

ಕಂ॥ ಅರಸನೆನಿನ್ನುರುತರಸ
ಚ್ಚರಿತಕೆ ಮೆಚ್ಚಿದೆನೊರಲ್ದು ನೀಂವಿರಚಿಸುವ ।
ಧ್ವರದೆ ಹವಿಗೊಳ್ವೆನಾಂ ಗೋ
ಚರಿಸುತೆ ನಿನಗೆಂದು ವರವನಿತ್ತಂ ಸುರಪಂ ॥ ೪೬

ಕಂ॥ ಜನನಾಥನೆಕೇಳ್ಳೈನೀಂ
ನೆನೆದೆಡೆಯನಲೋದಕಂಗಳೆಮ್ಮಯಕೃಪೆಯಿಂ ।
ಜನಿಯಿಸುಗೆಂದು ನಲಂಗಂ
ದನಿಲಪ್ರಿಯುವರುಣರುಂ ವರಂಗಳನಿತ್ತರ್ ॥ ೪೭

ಕಂ॥ ನರಪತಿಯೆಧರ್ಮಮತಿಸು
ಸ್ಥಿರಮಾಗಿರ್ಕ್ಕೆಂದುವರವನಿತ್ತಂಶಮನಂ ॥
ಸುರವರರಿನಿತುವರಂಗಳ
ಕರುಣಿಸಿ ನಳನೃಪತಿಗೈದಿದರ್ ದಿವಕಾಗಳ್ ॥ ೪೮

ಕಂ॥ ಅಂತವರೊಲ್ದಿತ್ತವರದೆ
ಸಂತಸವಂಪಿರಿದನಾಂತನರಸಂಬಗೆಯಲ್ ।
ಮುಂತೇಗತಿಯೆಂಬಮನ
ಸ್ಸಂತಾಪಂಪರಿಯೆ ಸುಖಿಸದಿರ್ಪ್ಪರುಮೊಳರೇ ॥ ೪೯

ವೃ॥ ತನಗನುರೂಪನಾದಜನಪಾಲವರಂಗಲೆಮಾಲೆಸೂಡಿದ
ಳ್ತನುಭವೆಯೆಂದಮಂದಸುಖವಾರ್ಧಿನಿಮಜ್ಜನಮಾಂತನಾವಿದ।
ರ್ಭನೃಪತಿ ಯೆಂದು ಪೆತ್ತಮಗಳುತ್ತಮನಾದ ವರಂಗೆ ಸೇರುವಾ
ನನೆಕೊನೆಯಿಂದಮುಂಪೆರತುಸಂತಸವೇಂಪಡೆದಗ್ರಧಾತ್ರಿಯೊಳ್ ೫೦

ವ॥ ಅಂತು ಸಂತಸಮನಾಂತಾವಿದರ್ಭಭೂವರಂ ವಧೂವರರಂ ವಿವಾಹ
ಮಂಗಳಮಂದಿರಕ್ಕೆ ಕರೆದುತಪ್ಪದೆಂದಾಣತಿಯಿತ್ತಾಗಳ್.

ಕಂ॥ ಸಂದಣಿಸೆ ಜನಂ ಮಂಗಳ
ದುಂದುಭಿಘೋಂಮಿಡಿಸೆ ದೆಸೆಗಳಂ ಸಡಗರದಿಂ।
ಕಂದರ್ಪರತಿಯರಿವರೆನೆ
ಬಂದಪ್ಪೊರ್ನ್ನಂದಣದೆ ವಧೂವರರಾಗಳ್॥ ೫೧

ಕಂ॥ ಅನುರೂಪವರನಸೇರ್ದ್ದಳ್
ಜನಪತಿಸುತೆ ಭಾಗ್ಯವಂತೆ ಯೆನುತುಂ ಪುರಕಾ।
ಮಿನಿಯರ್ವ್ವಧೂವರಗ್ರಂ
ಮನವೊಲ್ದೆರಚಿದರಪಾಂಗಕುಸುಮಾಂಜಲಿಯಂ॥ ೫೨

ಕಂ॥ ಸಿರಿಯುಕ್ಕುವಿೂಕೆ ಯಿಾತಂ
ಪುರುಷೋತ್ತಮನಕ್ಕು ಮಲ್ಲದೀಪರಿಜೀವ್ಯೈ॥
ಸಿರಿ ಯಿಕ್ಕುರ್ವೆಪೇಳೆನುತಂ
ನಿರುಕಿಸಿತು ವಧೂವರರನಣಂಪೌರಜನಂ॥ ೫೩

ಕಂ॥ ಈಪರಿಯು ಪಾರಜನಸ
ಲ್ಲಾಪಂ ಕಿವಿಗಿಂಪನೀಯೆಬಂದಂಮಾಂಗ।
ಲ್ಯೋಪಕರಣಂಗಳಿಂದೆಸೆ
ವಾಪರಿಣಯಮಂದಿರಕೆ ನಳಂ ಸವಧೂಕಂ॥ ೫೪

ವ॥ ಆಗಳಾವಿದರ್ಭರಾಜನೋಜೆಮಿಗೆ ವರಪೂಜೆಯಂ ಮಾಡಿ.

ವೃ॥ ಪುಣ್ಯಾಹಧ್ವನಿಯುಣ್ಮೆ ಪೊಣ್ಮೆ ವಿಬುಧಾಶೀರ್ವಾದನಾದಂ ಶುಭಾ
ಗಣ್ಯಾತೋದ್ಯರವಂ ಮೊಳಂಗೆ ಸುಮುಹೂರ್ತಂ ಸಾರ್ತರಲ್ಕಾತ್ಮಜಾ

ಪಾಣ್ಯಬ್ಜಾತವನೆತ್ತು ತಂ ನಳನಹಸ್ತಾಂಭೋಜದಲ್ಲಿಟ್ಟು ಹೈ
ರಣ್ಯಾಂಚತ್ಕಲಶಾಂಬುವಿಂದ ಮೆರೆದಂ ಕೈನೀರನಾನಂದದಿಂ ॥ ೫೫

ಅನಂತರಂ.

ಕಂ॥ ಸಿರಿಮುಡಿಗಳೊಳೋರೋರ್ವರ
ಕರನಖರಮರೀಚಿ ಸೂಸೆ ಸೂಸಿದರಾಗಳ್ ।
ಪರಿಪಾಂಡುರಾಕ್ಷತಂಗಳ
ಹರುಸಂಮಿಗಲಾವಧೂವರರ್ನಿಜಕರದಿಂ ॥ ೫೬

ಕಂ॥ ಅಭ್ರಮುವಪುಷ್ಕರಮನಾ
ಅಭ್ರಗಜಂ ನೈಜಪುಷ್ಕರದೆ ಸಂಗಡಿಪಾ ।
ವಿಭ್ರಮುವನೆಸಗಿದಂ ನಿಜ
ಸುಭ್ರೂಪಾಣಿಗ್ರಹದೆನಳೋರ್ವೀರಮಣಂ ॥ ೫೭

ವ ॥ ಅಂತುಪಾಣಿಗ್ರಹಣಾನಂತರಂ ವಧೂವರರ್ ವಿಧ್ಯುಕ್ತಮಾಗಿ ಪುರೋಧ
ಸನಿಂ ಮುನ್ನಮೆಪೂಜಿಸಲ್ಪಟ್ಟಯಜ್ಞೇಶ್ವರನೆಡೆಗೆವಂದು. ೫೮

ಕಂ॥ ಜ್ವಲಿಸುವಹೋಮಾನಲನಂ
ಬಲವರ್ಪ್ವ ವಧೂವರರ್ಕ್ಕಳೆಸೆದರ್ಕ್ಕರಮು ।
ಜ್ಜ್ವಲಜಾಂಬೂನದಪುಳಿನವ
ನೊಲವಿಂ ಬಳಸುವಮರಾಳದಂಪತಿಗಳವೊಲ್ ॥ ೫೯

ಕಂ॥ ಲಾಜಾಹುತಿಯಂ ಬೇಳ್ವ
ಳಾಜಲ ಜದಳಾಯತಾಕ್ಷಿ ಗುರುಮತದಿಂದಂ ।
ನೈಜನಖದ್ಯುತಿಮುಂಪೊಸ
ಲಾಜೆಗಳಂ ಸೂಸಲೋಜೆಮಿಗೆಹುತವಹನೊಳ್ ॥ ೬೦

ವ॥ ಆಗಳ್.

ಕಂ॥ ಸೆಗಳಕೆಯಿಂ ಬೆಮರ್ದಕದಂ
ಪುಗುಳ್ದುಗುತಂದ ಕತ್ತುರಿಯುಮಕರಿಕೆಯಂ ।

ಮಗುಳತ್ತು ದುಹುತವಹನಿಂ ।
ನೆಗೆದಕವಲ್ಪೊಗೆವ್ಮೃಗಾಂಕಮುಖಿಗಾಯೆಡೆಯೊಳ್ ॥ ಅನಂತರಂ—

ಕಂ॥ ಹರಿಸದೆ ಕುಳ್ಳಿರಿಸಿ ವಧೂ
ವರರಂ ಪಸೆವಣೆಯೊ ಳರಸನುಂ ಬಂಧುಗಳುಂ
ನೆರೆದೆಯ್ದೆಯರುಮವರ್ಕಳ
ಶಿರದೊಳ್ ವಿರಚಿಸಿದ ರಕ್ಷತಾರೋಪಣಮಂ ॥ ೬೦

ವ॥ ಇಂತು ವಿದರ್ಭಪತಿ ವಿಭವಂಮಿಗೆ ಮಗಳ ವಿವಾಹಮಹೋತ್ಸವಮಂ ಮಾಡಿಸಿ ವಸುವಸನ ಮಣಿಭೂಷಣಾದಿಗಳಿಂ ದರ್ಥಿಜನಂ ತಣಿವಂತಿತ್ತು ನೆರೆದರಸುಮಕ್ಕಳನೆಲ್ಲಂ ತರವರಿದು ಮನ್ನಿಸಿ ಹರಿಸಂಮಿಗೆ ಲವರನವರ ವರಪುರಕ್ಕೆ ಬೀಳ್ಕೊಟ್ಟು ಕಟ್ಟಳ್ಕರಿಂ ದಣುಗಿಯುಮ ನಳಯನುಮ ನೊಸಗೆಮಿಗೆ ಕೆಲವುದಿನಂಬರಂ ರಾಜಗೃಹದೊಳುಪಚರಿಸುತ್ತಿರೆಯೆರ॥

ಕಂ॥ ರತಿಯುಂ ಮನ್ಮಥನುಂ ಸಂ
ಗತಿವಡೆದಂತಿರೆ ವಿದರ್ಭಸುತೆಯುಂ ನಳಭೂ ।
ಪತಿಯುಂ ಸಂಗಡಿಸುತೆ ಸಂ
ಸೃತಿಸೌಖ್ಯಮ ನನುಭವಿಸುತೆ ನಲವಿಂದಿರ್ದರ್ ॥ ೬೪

ಇಂತುಕೆಲದಿನಂಬರಮಿರ್ದು.

ವೃ॥ ಒಂದುದಿನಂ ನಳಂ ನಿಜಪುರಕ್ಕೆ ಸತೀಯುತನೈದವೇಳ್ಕುಮಾ
ನೆಂದರುಪಲ್ಕಿ ರೋಧಿಸುವೊಡಾರದೆ ಭೀಮನೃಪಂ ಮಗಳ್ಗೆ ಬೇ ।
ಕೆಂದುದ ನೊಂದುಮಂ ತಡೆಯದಿತ್ತೊಲವಿಂ ಪತಿಮಂದಿರಕ್ಕೆತಾಂ
ನಂದಸೆಯುಂ ಕರಂ ಕಳುಪುವೆಂದು ನಿಜಾಕ್ಷಿಗೆತಂದನಶ್ರುವಂ ॥ ೬೫

ವ॥ ಅಂತೊಗೆದ ಸಂತಾಪಮನೆಂತಾನುಂ ಸಂತೈಸಿ ಕೊಳುತ್ತಂ ಮರುಕಂ ಮಿಗೆ ಮಗಳ ಕಯ್ಯಂಪಿಡಿದು.

ವೃ॥ ಪತಿಪರದೈವತಂ ಸತಿಗೆನುತ್ತಲಿಗುಂ ಶ್ರುತಿ ಶಾಸ್ತ್ರಮಂತರಿಂ
ಪತಿ ಬಗೆದಂತಿರಿರ್ದು ಪತಿಸೇವೆಯೊಳಾನ ದಿನಿತ್ತುಬೇಸರಂ ।

ಪತಿಗನುಕೂಲೆ ಯೆಂದೆನಿಸಿ ಪೆತ್ತು ಶುಭೋದರದೊಳ್ ಸುಪುತ್ರನಂ
ಸುತೆ ಕುಲಪಾಲಿನೀಪದಮ ನಾಂತೆಮಗಾಗಿಸತಿಪ್ರಮೋದಮಂ ॥ ೬೬

ವ॥ ಇಂತು ಬುದ್ಧಿವಾದಮನೊರೆದು ಅಳಿಯನ ಮೊಗದಾವರೆಯುಂ ನೀಡುಂ ನೋಡಿ—

ವೃ॥ ಸುರರುಮ ನೊಲ್ಲದೆಮ್ಮನುಮ ನೇನೆನದಾತ್ಮಜೆ ಯೊಲ್ದುನಿನ್ನನೇ
ವರಿಸಿದನಲ್ಮೆಯುಂ ನೃಪತಿ ನೀಂ ಬಗೆಯೊಳ್ಬಗೆದೀಕೆ ಯೆಮ್ಮುಮಂ।
ಸ್ಮರಿಸದಮಾಳ್ಕೆಯಿಂ ದಿವಳನಾಳ್ವುದು ಬಾಳ್ವುದು ಧರ್ಮದಿಂದ ಮೆಂ
ದರಸನ ಕಯ್ಯೊಳಿತ್ತನುಗೆ ಕಣ್ಬನಿ ಬ್ಭೈಮಿಯು ಭೀಮಭೂಮಿಪಂ॥ ೬೭

ವ॥ ಅಂತಿತ್ತುಮಣಿದ ಜಾಮಾತೃವುಮಂ ತನುಜೆಯುಮಂ ವಿದರ್ಭಪತಿ ಪಲವುಸೂಳ್ಪರಸಿ ಹರಿಸಂಮಿಗೆ ಬಳುವಳಿಯಾ ಗಿತ್ತಧನ ಕನಕ ವಸ್ತ್ರ ವಾಹನಸಖೀಸಂತಾನಮ ನೊಡಮ್ಗೊಪಂತೆ ನೇಮಿಸಿ ತದ್ದಂಪತಿಗಳಂ ಬದ್ಧವಣವರೆವೊಳಂಗೆ ಪೊಂದೇರನೇರಿಸಿ ನೆರೆದಪರಿಮಿತ ಸೇನೆಯೊಡನೆ ಸುಮುಹೂರ್ತದೊಳ್ ಬೀಳ್ಕೊಟ್ಟುವಾತ್ಸಲ್ಯಂಮಿಗೆ ತಾನುಂ ಪೊಂದೇರ ನಡೆದು ಕಿರಿದುದೂರಮೊಡವಂದು ಕಳುಪಿ ಮರಳ್ದು ಕುಂಡಿನ ಪುರಮಂ ಪೊಕ್ಕಿರ್ದನತ್ತಲ್ ॥ ೬೮

ವೃ॥ ಪುಳಿನಕ್ರೀಡನ್ಮರಾಳಪ್ರಕರ ಸುಕರ ಕಾಸಾರತೀರಂಗಳೊಳ್ನಿ
ರ್ಮಳ ನಿರ್ಝರಾಂಭಶ್ಯಿಖರಿ ವಿಪುಲಸಾನುಪ್ರದೇಶಂಗಳೊಳ್ಕ್ರೀ
ಕಿಲ ಕಾಂತಾರಾವಕಾಂತೋಪವನ ನಿವಹದೊಳ್ತಳ್ವಿತಂ ಕಾಂತೆಯೊಳ್ಕ
ಟ್ಟೊಲವಿಂದಾದಂ ವಿನೋದಂಬಡುತೆ ನಿಷಧೆಗೈತರ್ಪನಂ ನೈಷಧೇಂದ್ರಂ॥

ವ॥ ಆಗಳರಸನ ಬರವ ನರಿದು ಪುರಜನ ಪರಿಜನಂಗಳ್ ಬಸಗೆಮಿಗ ಲಿದಿರ್ವರೆ—

ವೃ॥ ತನಗಿದಿರ್ವಂದ ಮಂತ್ರಿಮುಖ ಮಂಡಲಿಕರ್ಕಳ ಮನ್ನಿಸುತ್ತಜೇ
ಯೆನೆ ಜನಸಂಚಯಂ ವಿವಿಧವಾದ್ಯರವಂ ದೆಸೆದೀವೆ ಪೊಕ್ಕನಂ।

ದನುಗತ ಭದ್ರಮಂಡನಮನೋಹರಮಂ ಪುರಮಂ ಪುರಾಂಗನಾ
ಜನನಯನಾಂತವಾಂತ ಸಿತಕಾಂತಿ ಸುಮಾಂಜಲಿಸಂಕುಳಂನಳಂ ॥ ೨೧

ವ॥ ಅಂತುನಿಜರಾಜಧಾನಿಯಂಪುಗುತಪ್ಪಾಗಳ್.

ವೃ॥ ಚಲದಳಕೋತ್ಕರಂ ಮಿಳಿರ್ಪತೋರಣಮಂ ನವಪಾಟಲೋಷ್ಠಮು
ಜ್ಜ್ವಲಮಣಿದೀಪಮಂ ಘನಪಯೋಧರ ಮೌಕ್ತಿದಪೂರ್ಣಕುಂಭಮಂ ।
ತೊಳಪಕಟಾಕ್ಷಕಾಂತಿ ಸಿತಲಾಜೆಯ ನಾಗಿಸೆ ಮಂಗಳಾಂಗಿಯರ್
ಬೆಳಗಿದರಾ ನಳಂಗ ಮೊಸೆದಾರತಿಯಂ ನಳಧರ್ಮಪತ್ನಿಗಂ ॥ ೨೨

ಕಂ॥ ಕಮಲಾಕರದಲ್ಲಿಗೆ ರಾ
ಜಮರಾಳಂ ಹಂಸಿವೆರಸು ನಡೆತಪ್ಪವೊಲಾ ।
ದಮಯಂತಿವೆರಸು ನಳಭೂ
ರಮಣಂ ಪುಗುತಂದ ನಾಗಳರಮನೆಗೊಲವಿಂ ॥ ೨೩

ವ॥ ಅಂತರಸ ನರಮನೆಯಂ ಪೊಕ್ಕರಸಿವೆರಸು ಹರಿಸಂಮಿಗೆ ಸಾರತರ
ಸಂಸಾರಸುಖಮನನುಭವಿಸುತ್ತ ಮೆಂದುಂಧರ್ಮಂಗಳ್ಗೆಡರಡಸದಂತು
ಧರ್ಮದಿಂದಖಂಡಭೂಮಂಡಲಮಂ ಪಾಲಿಸುತ್ತಮಿಪ್ಪಾಗಳ್.

ಕಂ॥ ಭೈಮಿಯುಮಂ ಭೂಮಿಯುಮಂ
ಪ್ರೇಮಂಮಿಗೆ ಸತ್ಯದಿಂದಮಾಳ್ದಂ ಭೂಪಂ ।
ತಾಮರಸನಾಭ ನಾಳ್ದವೊ
ಲಾಮಂಗಳದೇವಿಯುಮ ನಿಳಾದೇವಿಯುಮಂ ॥ ಮತ್ತಂ— ೨೪

ಕಂ॥ ಈತಂ ಜಗಕೆರಡನೆಯ ಯ
ಯಾತಿಯೆನ ಲ್ಕಶ್ವಮೇಧಮಖಮಂ ದೇವ ।
ವ್ರಾತಂ ತಣಿವವೊಲೆಸಗುತಿ
ಳಾತಳದೊಳ್ ಖ್ಯಾತಿವೆತ್ತನಾನಳರಾಜಂ ॥ ಇಂತಿಪ್ಪಾಗಳ್— ೨೫

ಕಂ॥ ಚಂದಿರನುಮ ನಿಂದಿರೆಯುಮ
ನಂದಮೃತಾಂಭೋಧಿ ಪಡೆದತೆರದಿಂ ಪಡೆದಂ ।

ನಂದನನುಮ ನಂದಮಿಗೆ
ನಂದನೆಯುಮ ನರಸಿಯುದರದೊಳ್ನಳರಾಜಂ ॥ ೩೬

ವ॥ ಇಂತುಪಡೆದ ನಂದನಂಗಂ ನಂದನೆಗ ಮಿಂದ್ರಸೇನನೆಂದು ಮಿಂದ್ರಸೇನೆ
ಯೆಂದು ಮೊಳ್ಪೆಸರನಿಟ್ಟು ಕಟ್ಟಳ್ಕರಿಂ ಪಟ್ಟಮಹಿಷಿವೆರಸವರ್ಗಳಂ
ಸಲಹುತ್ತ ಮವರ ಬಾಲಲೀಲೆಗಳ ನಾಲೋಕಿಸುತ್ತ ಮಾನಂದಮಿಗೆ
ನಳನರೇಂದ್ರಂ ಧರ್ಮದಿಂದರಸುಗೆಯ್ಯುತ್ತಮಿರೆಯಿರೆ. ೩೭

ವೃ॥ ಅನಘಂ ಶಕ್ತಿತ್ರಯಂ ಸಂಗಳಿಸೆ ನೆರೆಯೆ ಸಪ್ತಾಂಗಮುಂ ಸಾಂಗಮಂತ್ರಾ
ನುನಯಂಕಯ್ಗಣ್ಮೆ ಸಾಮಾದಿಗಳೆಳವಡೆ ಸಾಮ್ರಾಜ್ಯಮುಂ ತಾಳ್ದಿ ಶೇಷಾ।
ವನಿಭೃನ್ಮೌಳಿ ಸ್ಫುರಚ್ಛಾಸನನೆನುತೆ ಸದ್ಧರ್ಮದಿಂದಂ ಪ್ರಜಾಪಾ
ಲನೆಗೈದಂ ಸತ್ಕಳತ್ರಾತ್ಮಜಯುತನನಿಶಂ ನೈಷಧಕ್ಷ್ಮಾಮಹೇಂದ್ರಂ ॥

ಸಂಪೂರ್ಣಂ.

THE

KARNATAKA GRANTHAMALA

Series No. 55

ಕರ್ಣಾಟಕ

ಉತ್ತರರಾಮಚರಿತ್ರ

ನಾಟಕಂ

ಶ್ರೀಮನ್ಮಹಾರಾಜರವರ

ಆಸ್ಥಾನಕವಿಗಳಾಗಿದ್ದ

ಬಸವಪ್ಪಶಾಸ್ತ್ರಿಗಳಿಂದ

ವಿರಚಿಸಲ್ಪಟ್ಟುದು.

MYSORE:

THE G. T. A. PRINTING WORKS.

1911

PRINTED BY
J. M. MYSOREVALLA
AT THE G. T. A. PRESS, MYSORE.

ಪೀಠಿಕೆ.

ಶ್ರೀ॥ ಬಸವಪ್ಪ ಶಾಸ್ತ್ರಿಗಳು ಶ್ರೀಮತ್ಕರ್ಣಾಟಕ ಭಾಷಾಭಿವೃದ್ಧಿ ಬದ್ಧಾದರರಾದ ಶ್ರೀ ಮಹಿಸೂರ ಸಂಸ್ಥಾನದ ಶ್ರೀಮನ್ಮಹಾರಾಜ ಶ್ರೀಚಾಮ ರಾಜವೊಡೆಯರ್ ಜಿ. ಸಿ. ಎಸ್. ಐ. ಯವರಿಂದ ಆಜ್ಞಪ್ತರಾಗಿ ನಾಟಕ ಗಳಲ್ಲಿ ಉತ್ತಮವಾಗಿಯೂ, ನೀತಿಬೋಧಕವಾಗಿಯೂ ಇರುವ ಭವ ಭೂತಿ ಮಹಾಕವಿ ಪ್ರಣೀತವಾದ "ಉತ್ತರರಾಮಚರಿತ್ರೆ" ಎಂಬ ನಾಟಕವನ್ನು ೫ ಗಂಟೆಗಳ ಕಾಲದಲ್ಲಿ ಆಡುವುದಕ್ಕೆ ಅನುಕೂಲವಾಗು ವಂತೆ ಕೆಲವು ವರ್ಣನಾಂಶವನ್ನು ಬಿಟ್ಟು ಸಂದರ್ಭಾನುಗುಣವಾದ ಹಾಡುಗ ಳಿಂದ ಪಂಡಿತಪಾಮರ ರಂಜಕವಾಗುವಂತೆ ಕರ್ಣಾಟಕ ಭಾಷೆಯಲ್ಲಿ ಸಂಕ್ಷೇಪವಾಗಿ ರಚಿಸಿದರು.

ಇವರು ಗತಿಸಿದ ೧೬ ವರುಷಗಳ ಮೇಲೆ ಈ ಗ್ರಂಥವನ್ನು ಅಚ್ಚು ಹಾಕಿಸಬೇಕೆಂದು ತೆಗೆದು ನೋಡುವಲ್ಲಿ ಅನೇಕ ಕಡೆಗಳಲ್ಲಿ ಶಿಥಿಲವಾಗಿತ್ತು. ಇವರಿಂದ ಮಾಡಲ್ಪಟ್ಟ ನಾಟಕಗಳೊಳಗೆ ಒಂದಾದ ಇದನ್ನು ಹೇಗಾದರೂ ಮಾಡಿ ಮುದ್ರಿಸಿ ಪ್ರಕಟಿಸಬೇಕೆಂಬ ಅನೇಕರ ಕೋರಿಕೆಯಂತೆ ಶ್ರೀಚಾಮ ರಾಜೇಂದ್ರ ಕರ್ಣಾಟಕ ನಾಟಕದ ಕಂಪನಿಗೆ ನಾಟಕಕ್ಕಾಗಿ ಬರೆದು ಕೊಟ್ಟಿದ್ದ ಪ್ರತಿಯನ್ನೂ, ನನ್ನಲ್ಲಿದ್ದ ಪ್ರತಿಯನ್ನೂ ಪರಿಶೀಲಿಸಿ ಮುದ್ರಣ ಮಾಡಿಸಿದೆನು.

ಮುದ್ರಣಗೊಳಿಸಿದ ನಂತರ ಈ ಪುಸ್ತಕವನ್ನು ಶ್ರೀಮನ್ಮಹಾರಾಜ ಕಾಲೇಜ್ ಕರ್ಣಾಟಕ ಪಂಡಿತರಃ ವೇ॥ ಪಿ. ಆರ್. ಕರಿಬಸವಪ್ಪ ಶಾಸ್ತ್ರಿ ಗಳಿಗೆ ತೋರಿಸಿದೆನು. ಇದನ್ನು ಅವರು ಒಂದುಸಾರಿ ನೋಡಿ ಶುದ್ಧಾಶುದ್ಧ

ಪತ್ರವನ್ನು ಬರೆದು ಕೊಟ್ಟದ್ದಕ್ಕಾಗಿ ಅವರಿಗೆ ಬಹಳವಾಗಿ ಕೃತಜ್ಞನಾಗಿರುತ್ತೇನೆ.

ಅಲ್ಲದೆ ಈ ಗ್ರಂಥವು ಪ್ರಚಾರದಲ್ಲಿ ಬರಬೇಕೆಂಬ ಆಸ್ತೆಯಿಂದ ತಮ್ಮ ಗ್ರಂಥಮಾಲೆಯಲ್ಲಿ ಪ್ರಚಾರಪಡಿಸಲು ಅತ್ಯಂತ ಸಹಾಯಮಾಡಿದ ಮ|| ರಾ|| ಮೈಸೂರು ಗೌರ್ನಮೆಂಟ್ ಸೆಕ್ರಟರಿಗಳಾಗಿದ್ದ ಯಂ. ಶಾಮರಾವ್, ಯಂ. ಎ. ಯವರಿಗೂ ಗ್ರಂಥಮಾಲಾ ಮ್ಯಾನೇಜರ್ ಮ||ರಾ|| ಬಾಪು ಸುಬ್ಬರಾವ್, ಬಿ.ಎ. ಯವರಿಗೂ ತುಂಬಾ ಕೃತಜ್ಞನಾಗಿರುತ್ತೇನೆ.

ಇನ್ನೇನಾದರೂ ಪ್ರಮಾದವಿದ್ದಲ್ಲಿ ಗುಣಜ್ಞರಾದ ವಿದ್ವಾಂಸರು ಶೃತಪಡಿಸಿದಲ್ಲಿ ಕೇವಲ ಕೃತಜ್ಞತೆಯಿಂದ ಮುಂದಣ ಮುದ್ರಣದಲ್ಲಿ ಪರಿಷ್ಕರಿಸಲಾಗುವುದು.

ಗ್ರಂಥಕಾರರ ಪುತ್ರ,
ಬಿ. ಮಹದೇವಶಾಸ್ತ್ರಿ.

ಉತ್ತರರಾಮಚರಿತ್ರೆಯ

ಶುದ್ಧಾಶುದ್ಧಪತ್ರಿಕೆ.

ಪುಟ.	ಪಙ್ತಿ.	ಅಶುದ್ಧ.	ಶುದ್ಧ.
1	3	ಶ್ರೀಪರೀ	ಶ್ರೀಪುರೀ
,,	9	ರಾಮಚರಿತವ	ರಾಮಚರಿತ್ರವ
,,	12	ತಾರೆಯಾಂಬಾ	ತಾರೆಯಾಂಬ
,,	12	ಶಿಖರೀ	ಶಿಖರಿ
,,	12	ಕುಮಾರೀ	ಕುಮಾರಿ
,,	14	ಚಾಮರಾಜಾ	ಚಾಮರಾಜ
,,	,,	ವರದಾಯಿಕೆ	ವರದಾಯಕೆ
2	18	ಪ್ರೇಮದಿ	ಪ್ರೇಮದೆ
,,	20	ವಿದೇಶಿಯು	ವಿದೇಶೀಯು
,,	22	ನಟ	ನಟ
3	2	ಭಾಂಡುಕ	ವಿಭಾಂಡುಕ
,,	,,	ರುಷ್ಯ	ಋಷ್ಯ
,,	9	ನಟ	ನಟ
,,	12	ತಿರ್ದೊಡಮೆಂ	ತಿರ್ದೊಡಮೇಂ
,,	13	ನಡೆಯೊಳು	ನಡೆಯೊಳು
,,	14	ನುಡೆಯೊಳು	ನುಡಿಯೊಳ
,,	15	ನಟ	ನಟ
4	14	ಯಲ್ಲಾ	ಎಲ್ಲಾ
,,	16	ರುಷ್ಯ	ಋಷ್ಯ
,,	21	ನಿಯಮ	ನಿಯಮಿ
,,	22	ನೀತಿಯುದುಮಾವಾ	ನೀತಿಯುದಮವಾ
,,	23	ಸ್ಥಾಲಯುವನ್ನು	ಸ್ಥರಾಲಯವನ್ನು
5	18	ಗೃಹಿತರಾದೆವು	ಗೃಹೀತರಾದೆವು
,,	22	ದಾನಿಪರಾಗದು	ದಾಗಿಪರಾಗದು
,,	9	ರುಷ್ಯ	ಋಷ್ಯ
7	12	ಜಾನಕಿಗಶ್ತ್ರಶುದ್ಧಿ	ಜಾನಕಿಗಗ್ನಿಶುದಿ
,,	13	ದೊಳಗ್ನೆಯುಂ	ದೊಳಗ್ನಿಯುಂ

ಪುಟ.	ಪಙ್ತಿ.	ಅಶುದ್ಧ.	ಶುದ್ಧ.
,,	,,	ಸಂಗಾಜಲಮುಂ	ಗಂಗಾಜಲಮಂ
,,	16	ಗಲು	ಗಲೂ
,,	22	ದೊರೆನಿದಂದದಿನಾಂ	ದೊರೆಸಿದಂದದಿನಾಂ
8	16	ಜನಕಗುಂಮೆರ್ಣ	ಜನಕಗುಂ ಮೇಣ್
,,	20	ಬಾಂವಾದರಿಗವ್ರಿಯುಂ	ಬಾಂಧವಗದಾರಿಗಪ್ರಿಯುಂ
9	3	ಭಾತೃಗಳು	ಭ್ರಾತೃಗಳು
,,	21	ಸತೆ	ಸೀತೆ
10	2 (5)	ಶಿಶುತನದೆವೊಳೆವ	ಶಿಶುತನದಿಂ ವೊಳೆವು
,,	15	ನೊಪ್ಪಿಸಿದರಘು	ಸೊಪ್ಪಿಸಿರಘು
11	16	ಗಾಸಿಯುನಿರೆನೀಂ	ಗಾಸಿಯಿನಿರೆನೀಂ
,,	17	ವಾಸದಶರಗಿನಿಂ	ವಾಸದಸೆರಗಿನಿಂ
,,	,,	ಲಲನೆಯೆಯು	ಲಲನೆಯೆಯೆ
,,	18	ಸ್ನದೆ	ಸ್ನೆದೆ
,,	25	ಳೊರೆಯುತಸನೊಕವಿ	ಳೊರೆಯುತವೇನೋಕಿವಿ
12	5	ಲುದುರುವ	ಲುದುರುವ
,,	12	ಗಾನಿಸುವುದು	ಗಾಗಿಸುವುದು
,,	23	ದೆಲ್ಲಮು	ದೆಲ್ಲೆಮು
13	9	ತಾವ	ಕಾವ
14	5	ತವಿಸವದೆನ್ನಂ	ತಪಿಸುವುದೆನ್ನಂ
15	16	ಇದುವೆರಳ	ಇದುಪೆರಳ
,,	21	ವಿಕಾಸನ	ವಿಕಾಸನೆ
,,	,,	ಮೋಹನ	ಮೋಹನೆ
17	8	ಕರ್ನ	ಕರ್ಣ
,,	12	ಪರಿಹರಿಸಿದೊಡಂ	ನೊತ್ತರಿಸಿದೊಡಂ
19	15	ನೀನಂತಪ	ನೀನಂತಪ್ಪ
19	18	ಕೈವಿಡಿದುದು	ಕೈವಿಡಿದುದ
20	24	ಜನಮೆಚ್ಚಿಸ	ಜನವಮೆಚ್ಚಿಸ
21	1	ಎಲ್ಲಿದ್ದೆಯು	ಎಲ್ಲಿದ್ಧೀಯೆ
23	17	ಶ್ವರಿನೆಂಬದಕೆ	ಶ್ವರಿನೆಂಬುದಕೆ
,,	18	ಮನದ	ಮನವ
,,	,,	ದನ್ನನುತಿಳಿದೆನ	ದನ್ನನುತಿಳಿದುಯೆನ್ನ

ಪುಟ.	ಪಙ್ತಿ.	ಅಶುದ್ಧ.	ಶುದ್ಧ.
,,	,,	ಭಿನ್ನಳಿಪಮಾಡೆ	ಬಿನ್ನಳವಮಾಡೆ
,,	21	ಪುರ್ಣೆ	ಪೂರ್ಣೆ
24	7	ಮನೆವರೆ	ಮನೆವಾರೆ
,,	11	ಚರಾಚರಧಾರಿ	ಚರಾಚರಧಾರೆ
,,	13	ರಾಗಿ	ರಾಗಿರಿ
,,	16	ಅರಸು	ಅರನು
,,	20	ಬಸರು	ಬಸಿರು
25	3	ತಾಯಿಯೆ	ತಾಯೆ
28	3	ವಿದ್ಯ	ವಿದ್ಯೆ
31	7	ಕುಂಭಿನಿ	ಕುಂಭಿಣಿ
,,	22	ತೊಳುವ	ತೊಳಲುವ
32	17	ಪರಮೇಷ್ಟಿ	ಪರಮೇಷ್ಠಿ
,,	22	ಶ್ವರನಿಂ	ಶ್ವರನೀನವೆ
33	13	ಪ್ರಿಯುರೋ	ಪ್ರಿಯರೊ
,,	14	ದಾರುಣಿ	ಧಾರಿಣಿ
34	18	ಸುಸುತಿಯಿಂದೆ	ಸುಸ್ಥಿತಿಯಿಂದೆ
35	3	ವಾತ್ಸಲ್ಯಪತಿ	ವಾತ್ಸಲ್ಯವತಿ
,,	12	ಘಳಿಘಳಿ	ಘುಳಿಘುಳಿ
,,	19	ಮುಂಚಿತೆ	ಮುಂಚಿತೆ
36	14	ತಪಸೆ	ತಮಸೆ
37	8	ವಾಲ್ಮೀಕಿ	ವಾಲ್ಮೀಕಿಯು
,,	17	ಸೀತಾದೇವಿಯುನ್ನು	ಸೀತಾದೇವಿಯುನ್ನು ಕುರಿತು
38	7	ಸೆಬೆಸುಡುವ	ಸೆಕೆಸುಡುವ
40	14	ಬೆಳೆವಾದ	ಬಿಳಿಪಾದ
42	22	ಮೋಹಸ್ಯೆಸೆಲಾವಣ್ಯಲಹರಿ	ಮೊಹವಾಸ್ಯೆಸೆ ಲಾವಣ್ಯ ಲಹರಿ
43	6	ತ್ರಿಪಿನಯುನ	ತ್ರಿಪಿನಿಯುನ
,,	7	ಕಂಡೊಡನೆ	ನೀಕ್ಷಿಸವೊಡನೆ
,,	22	ಭ್ಯಾಸದೆ	ಭಾಸದಿ
44	14	ಮದಕರಿಗಳಂತಂ	ಮದಕರಿಗಳಂತ
,,	15	ವರೆಯುಕ್ಕೆ	ವರೆಯಿಕ್ಕೆ
44	20	ಪ್ರಸೂನುಜಾತಂ	ಪ್ರಸೂನಜಾತಂ

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
45	16	ವೆತಲ್ತಿಹದ	ವೆಕ್ತಲೀಹದ
47	5	ಕನ್ಯೆದಲೆಗಳ	ಕನ್ಯೆದಿಲೆಗಳ
,,	7	ಬಡವಾದೊಡೆ	ಬಡವಾದೊಡಮೇ
,,	8	ಮೇನುಸಯಿಸಲ್	ಸುನ್ನಯಿಸಲ್ತ
,,	12	ದೋಲಾಡಿಸುವದು	ದೋಲಾಡಿಸುವುದು
48	4	ನೀಡುವದುಃಖಂ	ನೀಡುವದುಃಖಂ
,,	18	ನೊಲಯಿಸಿ	ನೆಲಿಯಿಸಿ
49	16	ಗಕವಂ	ಗಕವಂತಾಂ
50	13	ತಾದುದುಮೇಂ	ತಾದುದುವೇಣ್
52	3	ಬಳೆದು	ಬಳಿದು
56	3	ಸಮಾಗಮುನವು	ಸಮಾಗಮವು
,,	9	ಪತಿಯೊಳ್	ಪತಿಯೊಳ
,,	12	ತಿರಗದು	ತಿರುಗದು
,,	24	ಭಂಗವಿದಾಯಿನಿ	ಭಂಗದಾಯಿನಿ
,,	,,	ಶ್ರೀವದುರ	ಶ್ರೀಮದುರಂ
56	25	ದಾಮವಶಿಷ್ಠ	ದ್ದಾಮವಶಿಷ್ಠ
58	20	ಮಹಾರಾಯು	ಮಹಾರಾಜ
59	22	ವುರಳದೀ	ವುರಳದಿ
60	2	ವಲ್ಲಳಿಂದ	ವಲ್ಲಳಿಂ
,,	4	ಸ್ಮರಿಸಿದೆಪಂ	ಸ್ಮರಿಸಿದೆಪೆಂ
,,	15	ಶೊರ್ಪ	ಶೋರ್ಪ
61	14	ಅರ್ಕ್ಯಗ್ರೃಷ್ಟಿ	ಅರಗೃಷ್ಟಿ
62	13	ಜಲ್ಲೈ	ಎಲ್ಲೈ
,,	22	ತನುವಂ	ತನುವುಂ
,,	23	ನೆಗಲ್ಲ	ನೆನಗಲ್ಲಂ
63	13	ನಕಟಾ	ನಕಟ
,,	21	ಬೊಲ್ವ	ಬೋಲ್ವ
65	9	ಮೌರ್ವೀ	ಮೌರ್ವೀಮೇ
,,	10	ಬಳೆಗಳ್ರಾಜಿಸು	ಖಲೆಗಳ್ರಾಜಿಸು
,,	11	ಪಡು	ಪಟು
,,	16	ಘರೆ	ದಶಿ

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
,,	25	ಮೌರ್ವೀಖಲೆ	ಮೌರ್ವೀಮೇಖಲೆ
,,	26	ಪಳದ	ಪವಳದ
,,	,,	ದಶ್ವತ	ದಶ್ವತ್ಥ
66	13	ಮಹಿಮಾತಿಶಯ	ಮಹಿಮತಿಶಯ
67	8	ಸಾಟಿಯಾಗಿಯೆ	ಸಾಟಿಯಾಗಿಯೇ
,,	13	ಅಹಾ	ನಾಹ
67	21	ಕರತನು	ವರತನು
,,	24	ಸಾಕೃತಿಯಗು	ಸಾಕೃತಿಯನು
69	22	ಬನದಿಗೋರ	ಬನದಿಘೋರ
,,	24	ಘಸಣಿ	ಗಸಣಿ
70	2	ಗೈವದರೊಳ್	ಗೆದವರೋಳ್
,,	8	ಶಾಪದೊಳಾದೊಡೆ	ಶಾಪದೊಳಾದೊಡಮದಂ ಕರಂ
,,	11	ಮುನಿಗಳಾ	ಮೂನಿಗಳಾ
,,	12	ಮನಗಿಂತುಟಪ್ಪ	ಮನಕ್ಕಿಂತುಟಪ್ಪು
,,	27	ಪಾಶಾದ್ಭಾಗ	ಪಶ್ಚಾದ್ಭಾಗ
71	17	ಲೋಕವನೋರ್ವನೆ	ಲೋಕದೊಳೋರ್ವನೆ
72	17	ಹೂಂಕಾರವ	ಹಂಕಾರವ
,,	22	ನತ್ತುವ	ನಳಕುವ
73	15	ಜ್ಯೈತರುಪನುಚಂದ್ರಕೇತು	ಜ್ಯೈತರುವನು ರಣಕೆಚಂದ್ರಕೇತು
78	14	ಕರಗುವದೀ	ಕರಗುವುದೀ
79	8	ಜನಿಸುವದಿನ್ನೆತ್ರಣಿಂದ	ಜನಿಸುವುದಿನೆತ್ತಣಿಂದ
80	3	ರಘುಸಿಹ್ಮರ	ರಘುಸಿಂಹ್ಮರ
,,	16	ದುಃಖಿ ಪ	ದುಃಖಿಪ
82	10	ಸುಖಿಸುವ	ಸುಖಿಸುವು
85	19	ಮೊಳಗುತ್ತಿದೆ	ಮೊಳಗುತಿದೆ
86	12	ಕುವವರ	ಕುವರರ
87	10	ನುಸಿಳರಿದ್ದೈ	ನುಸಿರಲ್ಕರಿದ್ದೈ
89	6	ದೆಶೆ	ದೆಸೆ
94	5	ತಿರ್ವಿನೆಯುಳೀಗಳುಂ	ತಿರ್ವಿನಿಯುಳೀಗಳುಂ
95	4	ಅರುಂಧತಿ	ಅರುಧಂತೀ
,,	14	ಬಿರಿಯುವಗದೆಂತು	ಬಿರಿಯುವುಗದೆಂತು

ಪುಟ.	ಪಙ್ತ್ತಿ.	ಅಶುದ್ಧ.	ಶುದ್ಧ.
97	11	ಗಿರಿತಿದುರ್ಗಂ	ಗಿರುತಿದುರ್ಗಂ
98	13	ತರುಣಿ	ತರಣಿ
104	18	ಇಂದುಭವ	ವಿಂದುಭವ
105	18	ಶತೃಘ್ನನು	ಶತ್ರುಘ್ನನು
,,	20	ಮನೋರಥಕಾಮುನಾದೆನು	ಮನೋರಥನಾದೆನು
106	8	ಪಾಲಿಶಲೀಶಂ	ಪಾಲಿಸಲೀಶಂ
,,	17	ಸೇವಕನೋತ್ಕಂಠ	ಸೇವಕಜನೋತ್ಕಂಠ
,,	,,	ಖಂಡಿತಕಾಲ	ಖಂಡಿತಕಾಲಾ
,,	,,	ಕೌಂಡದಲೀಲ	ಕೋದಂಡದಲೀಲಾ
,,	18	ಪಾಲಕನಮುಕಂ	ಪಾಲಕನಸುಕಂ
,,	,,	ಪಾಲಗಿರಿಜಾಲೋಲ	ಪಾಲಯ ಗಿರಿಜಾಲೋಲ

೩೦—೧೩ ಪರಿಕಿಸಿನೋಳ್ಪಡ ಸರಿಲಯುಲ್ಬಕರ್ಣಂ ಯುನ್ನುವುದಕ್ಕೆ ಬದಲಾಗಿ (ಕಂದಾರ್ಥ) ಪರಿಕಿಸಿದೊಡೆ ಲೋಕೋತ್ತರ ಪುರುಷರ ಮಾನಸವನಾವಸರುಪಲ್ಬಕರ್ಣಂ ಯುಂಬುವುದನ್ನು ವುಪಯೋಗಿಸಬೇಕು.

೪೯—೧೬. ರಾಮ—(ನೋಡಿ) ಈ ಬ್ರಾಕೇಟಿನ ಮುಂದೆ ಈ ಕೆಳಗಣ ಪದ್ಯವನ್ನು ವುಪಯೋಗಿಸಬೇಕು.

ಕಂ॥ ಬಾಲನಿವನಾವನೋ ಹರಿ ।
ನೀಲಾಭಂ ಧ್ವನಿಯೊಳೆನಗೆ ರೋಮಾಂಚವ ತಾ ॥
ನೇಳಿಪನಾಹ ಕದಂಬಕೆ ।
ನೀಲಾಭ್ರಂ ಗುಡುಗಿನಿಂದೆ ಮುಗುಳೇರಿಪವೋಲ್ ॥

ಶ್ರೀ.

ಉತ್ತರರಾಮಚರಿತ್ರೆ.

ಪ್ರಥಮಾಂಕಂ.

*ಸೂತ್ರಧಾರ—ವೃ|| ವಾಮಾಂಕಸ್ಥಿತಶೈಲರಾಜತನಯಾ ಕರ್ಣಾವತಂಸೋ
ತ್ಪಲಂ | ಶ್ಯಾಮಂಮಾರ್ಷ್ಟಿಯದಂತರೇಕರೇಕಂಬುಗ್ರೀವದೋಷ್ಕ
ಷ್ಕರ || ಕ್ಷ್ಮಾಮಾಹಾತ್ಮ್ಯಮನಪ್ಪುಗೈದ ಕರುಣಾವಾರಾಕರಂ ಶ್ರೀಪುರೀ
ಧಾಮಂ | ರಕ್ಷಿಕೆಚಾಮಭೂಮಿಪತಿಯಂ ಶ್ರೀಕಂಧರಂ ಶಂಕರಂ ||೧||
ಎಲೇ ಸರಸಕಲಾ ವಿದರಾದ ಸಭಾಸದರೆ ಎನ್ನವಿಜ್ಞಾಪನೆಯಲ್ಲಿ
ಚಿತ್ತವಿಡಬೇಕು.

ಕಂ|| ವರವಾಗ್ದೇವತೆಯುವಶೀ |
ಕರಿಸಿದ ಭವಭೂತಿಯಿಂದೆ ವಿರಚಿತವಾದು ||
ತ್ತರರಾಮಚರಿತ್ರವನ |
ಚ್ಚರಿಮಿಗೆ ಕರ್ಣಾಟಭಾಷೆಯಿಂದಾಡಿಸುವೆಂ ||೧||

---

*ರಾಗ || ಯಮುನ || ಆದಿತಾಳ ||

ಅಮರೀಕಬರೀಭ್ರಮರೀ | ರಮಣೀಯಾಂಘ್ರಿಪದ್ಮೆ || ಪ || ಗೌರಿಶೌರಿಸೋದರಿ | ಮಾರಾರಿಸುಂದರಿ | ತಾರಯಾಂಬುಶಿಖರಿ | ಕುಮಾರಿ || ೧ || ನತಲೋಕಕಾಮಿತ | ನಂದನವಲ್ಲರೀ | ಶ್ರುತಿಶಿರೋವಿಪಿನಮಯೂರಿ || ೨ || ತಾಮರಸಾಂಬಕೆ | ಚಾಮುಂಡಾಂಬಿಕೆ | ಚಾಮರಾಜವರದಾಯಕೆ || ೩ ||

ಈಗನಾನು ಕಾರ್ಯವಶದಿಂದ ಅಯೋಧ್ಯಾವಾಸಿಯಾಗಿಯೂ, ರಾಮ ಸಮಕಾಲಿಕನಾಗಿಯೂ ಆದೆನು. (ಎಲ್ಲಾ ಕಡೆಯಲ್ಲಿಯೂ ನೋಡಿ)

ಓಹೋ ಪೌಲಸ್ತ್ಯಕುಲ ಧೂಮಕೇತುವಾದ ಮಹಾರಾಜ ರಾಮನ ಈ ಅಭಿಷೇಕಸಮಯವು ಯಾವಾಗಲೂ ಅವಿಚ್ಛಿನ್ನವಾಗಿ ಮೊಳಗುವ ಮಂಗಳವಾದ್ಯಗಳಿಂದ ಮೆರೆಯುತ್ತಿತ್ತು. ಅದೇತಕ್ಕೀಗ ರಾಜಬೀದಿಗಳಲ್ಲಿ ನಟರು ಗೀತವಾದ್ಯನೃತ್ಯಗಳನ್ನು ಬಿಟ್ಟು ಸುಮ್ಮನಿರುವರು.

(ನಟ ಪ್ರವೇಶಿಸಿ)

ನಟ—ಎಲೈ ಆರ್ಯನೆ ಮಹಾರಾಜನಾದ ರಾಮನು ತನ್ನನ್ನು ಅಭಿನಂದಿಸುವದಕ್ಕೆ ಬಂದ ಲಂಕಾಸಮರ ಸಹಾಯಿಗಳಾದ ಸುಗ್ರೀವ ವಿಭೀಷಣ ಪ್ರಮುಖರನ್ನು ಮತ್ತು ದಿಗಂತಪಾವನರಾದ ಬ್ರಹ್ಮರ್ಷಿ ರಾಜರ್ಷಿಗಳನ್ನು ತಮ್ಮತಮ್ಮ ಮನೆಗಳಿಗೆ ಕಳುಹಿಸಿದನು. ಅವರುಗಳನ್ನು ಆರಾಧಿಸುವುದಕ್ಕಾಗಿ ಇದುವರಿಗು ಮಹೋತ್ಸವ ಬೆಳೆಯಿತು. ಈಗಲಾದರೋ

ಕಂ|| ರಾಮನಮಾತೃಗಳೊಲವಿಂ |
ಜಾಮಾತೃವಿನಾಶ್ರಮಕ್ಕರುಂಧತಿಯಂ ತಾಂ ||
ಪ್ರೇಮದಿಕೂಡಿ ವಸಿಷ್ಠಮ |
ಹಾಮುನಿಯಾರ್ಕೈಕೆಯಿಂದವರ್ಪೋರಮಟ್ಟರ್ ||೧||

ಸೂತ್ರ—ಭಾವನೆ ನಾನು ವಿದೇಶಿಯನಾದ ಕಾರಣ ಕೇಳುವೆನು, ಜಾಮಾತೃವೆಂಬುವನು ಯಾರು.

ನಟ—ಕೇಳು. ದಶರಥಮಹಾರಾಜನು ಶಾಂತಾನಾಮಕಳಾದ ಕನ್ಯೆ

ಯನ್ನು ಪಡೆದನು. ಆಕೆಯನ್ನು ಅಪುತ್ರನಾದ ರೋಮಪಾದ ರಾಜನು ದತ್ತಳನ್ನುಮಾಡಿಕೊಂಡು ವಿಭಾಂಡುಕಪುತ್ರನಾದ ಋಷ್ಯ ಶೃಂಗನಿಗೆ ಮದುವೆಮಾಡಿಕೊಟ್ಟನು ; ಆತನು ದ್ವಾದಶ ವಾರ್ಷಿಕ ನಾದ ಯಜ್ಞವನ್ನು ಆರಂಭಿಸಿರುವನು. ಆತನ ನಿರ್ಬಂಧಕ್ಕಾಗಿ ಪೂರ್ಣಗರ್ಭಿಣಿಯಾದ ಜಾನಕಿಯನ್ನು ಬಿಟ್ಟು ಗುರುಜನಗಳೆಲ್ಲರು ಅಲ್ಲಿಗೆ ಹೋದರು ;

ಸೂತ್ರ.—ಈವಿಚಾರದಿಂದ ನಮಗೇನು, ನಡೆ ನಮ್ಮ ನಮ್ಮ ಜಾತಿ ಪದ್ಧತಿ ಪ್ರಕಾರ ರಾಜದ್ವಾರವನ್ನು ಪ್ರವೇಶಿಸೋಣ.

ನಟ.—ಹಾಗಾದರೆ ರಾಜೋಪಸರ್ಪಣಸಮಯದಲ್ಲಿ ಮಾಡತಕ್ಕ ಸ್ತೋತ್ರ ಪದ್ಧತಿಯನ್ನು ಭಾವನೆ ನಿರೂಪಿಸಬೇಕು.

ಸೂತ್ರ.—ಕಂ॥ ಅಳುಕದನಾಳ್ಪುದು ಮಾಳ್ಪುದ ।
ಪಳಿಬಾರದೆಬಿಡದುಕುಜನರೆಂತಿರ್ದೊಡಮೇ ॥
ಲಲನೆಯುರಸೆಡೆಯೊಳುಂ ಕವಿ ।
ಗಳ ನುಡಿಯೊಳಮಿರದ ಕುಂದನುಡಿದಪರಲ್ತೇ ॥೩॥

ನಟ.—ಅವರನ್ನು ಅತಿ ಕುಜನರೆಂದು ಹೇಳಬೇಕು. ಏತಕ್ಕೆಂದರೆ.

ಕಂ॥ ಕಿಚ್ಚಂಪೊಕ್ಕೈತಂದೊಡ ।
ಮಚ್ಚರಿರಕ್ಕಸನ ಮನೆಯೊಳಿರ್ದುದೆ ನೆಪವಾ ॥
ಗುಚ್ಚರಿಸುವರಪವಾದವ ।
ನಚ್ಚರಿತೆಯುಮಾದ ಜನಕಸುತೆಯೊಳ್ ಕುಜನರ್ ॥೪॥

ಸೂತ್ರ.—ಈಜನವಾರ್ತೆ ಏನಾದರೂ ಮಹಾರಾಜನ ಕಿವಿಗೆ ಮುಟ್ಟಿದರೆ ಕಷ್ಟ

ನಟ.—ಸರ್ವಪ್ರಕಾರದಿಂದಲೂ ಋಷಿಗಳೂ ದೇವತೆಗಳೂ ಮಂಗಳವನ್ನುಂ ಟುಮಾಡುವರು (ನಡೆವು)

*ಸೂತ್ರ—ಆಕಾಶೆ.—ಎಲೈ ಎಲೈ ಈಗ ಮಹಾರಾಜ ನೆಲ್ಲಿರುವನು. (ಕಿವಿಗೊಟ್ಟು ಕೇಳಿ) ಹೀಗೆ ಜನಗಳು ಹೇಳುವರು.

ಕಂ|| ಆದರಿಸಲೈದಿ ಜನಕಂ |
ಪೋದೊಡೆಪುರಕಳಲ್ವದೇವಿಯುಂಸಂತೈಸ ||
ಲ್ಕೊದಂಮಿಗಲಂತಃಪುರ |
ಕೈದುವನವನೀಶನುಳಿದು ಧರ್ಮಾಸನವಂ ||೫||

(ಎಂದು ಹೊರಟುಹೋದರು)

ಇದುಪ್ರಸ್ತಾಪನೆ,

(ಅನಂತರ ಪೀಠಸ್ಥಿತನಾಗಿ ರಾಮನೂ ಸೀತೆಯೂ ಪ್ರವೇಶಿಸುವರು)

ಸೀತೆ.—ಆರ್ಯಪುತ್ರನೆ ಬಲ್ಲೆನು. ಆದರೂ ಬಂಧುಜನವಿಯೋಗವು ಸಂತಾಪ ವನ್ನುಂಟುಮಾಡುವುದು.

ರಾಮ.—ನಿಜ ಈ ಸಂಸಾರ ಸ್ವರೂಪವೆ ಸಂತಾಪಕರವಾದದ್ದು. ಆದ್ದರಿಂದಲೆ ಇದರಲ್ಲಿ ಜುಗುಪ್ಸೆಯನ್ನು ಹೊಂದಿ ಬುದ್ಧಿಶಾಲಿಗಳಾದವರು ಎಲ್ಲಾ ಆಸೆಯನ್ನು ಬಿಟ್ಟು ಅರಣ್ಯದಲ್ಲಿ ವಿಶ್ರಮಿಸುತ್ತಿರುವರು.

(ಕಂಚುಕಿ ಪ್ರವೇಶಿಸುವನು)

ಕಂಚುಕಿ.—ಎಲೈ ಮಹಾರಾಜನೆ ಋಷ್ಯಶೃಂಗಾಶ್ರಮದಿಂದ ಅಷ್ಟಾವಕ್ರ ಋಷಿಗಳು ಬಂದಿರುವರು .

---

* ರಾಗ || ಜಂಜೋಟಿ ||

ಜನಕಾವನಿನಾಥಪುತ್ರೀ | ಜಲರುಹನೇತ್ರೀ | ಮನವಸಂತೈಸಿಕೊನೀಂ | ಮಂಜುಳಗಾತ್ರೀ || ಪ || ಜನಕನೃಪತಿಗೆಮ್ಮನುಳಿದುನಗರಿಗೆಪೋಗೆ | ಮನವುಬಾರದಾದೊಡುಕೇಳನವಧಿರಾಗೆ || ೧ || ಸೀತೆ ನಿಯಮಿಗಳಿಗೆ ನಿತ್ಯಕರ್ಮದನೇಮ | ಸ್ವಾತಂತ್ರ್ಯವನಪಹರಿವುದು ನೀತಿಯುರಮಾ || ೨ || ಆಹಿತಾಗ್ನಿಯುಗೃಹಸ್ಥಿಯುವನ್ನು | ಸ್ನೇಹಪಿರಲುವುಳಿಯಲಾಗದೂಹಿಸುನೀನು || ೩ ||

ಸೀತೆ--ಏತಕ್ಕೆ ಸಾವಕಾಶವಮಾಡುವೆ.

ರಾಮ—ಶೀಘ್ರವಾಗಿ ಕರೆದುಕೊಂಡುಬಾ.

(ಕಂಚುಕಿ ಹೋದನು)

(ಅಷ್ಟಾವಕ್ರರು ಬರುವರು).

ಅಷ್ಟಾ—ನಿಮಗೆ ಮಂಗಳವಾಗಲಿ.

ರಾಮ—ಇದೋ ನಮಸ್ಕರಿಸುವೆನು. ಇಲ್ಲಿ ಕುಳಿತುಕೊಳ್ಳಬೇಕು.

ಸೀತೆ—ನಿಮಗೆ ವಂದಿಸುವೆನು. ಸಕಲರಾದ ನನ್ನ ಗುರುಜನಗಳಿಗೂ ಶಾಂತಾದೇವಿಗೂ ಕ್ಷೇಮವೆ ?

ರಾಮ—ಪೂಜ್ಯರಾದ ಋಷ್ಯಶೃಂಗರೂ ಆರ್ಯೆಯಾದ ಶಾಂತಾದೇವಿಯೂ ಕೂಡ ನಿರ್ವಿಘ್ನವಾಗಿ ಸೋಮಯಾಗವನ್ನು ನೆರವೇರಿಸಿದರೆ.

ಸೀತೆ—ನಮ್ಮನ್ನೇನಾದರೂ ಸ್ಮರಿಸುವರೊ.

ಅಷ್ಟಾ—(ಕುಳಿತು) ನಿಮ್ಮ ಸ್ಮೃತಿಯಲ್ಲೇ ಇರುವರು. ಎಲೌ ದೇವಿಯೇ ಪೂಜ್ಯರಾದ ವಸಿಷ್ಠರು ನಿನ್ನನ್ನು ಕುರಿತು ಹೀಗೆ ಹೇಳುತ್ತಾರೆ”

ಕಂ|| ಪಡೆದಾತಂ ಜನಕಂ ಕೈ |
ಪಿಡಿದಾತಂ ರವಿಕುಲಾಬ್ಧಿಸೋಮಂ ರಾಮಂ ||
ನುಡಿದಪೆನಿನಗೇಂ ಹರಕೆಯ |
ಪೊಡವಿಯಸುತೆ ವೀರಮಾತೆ ಯೆನಿಸುತೆಬಾಳೌ ||೬||

ರಾಮ—ಅನುಗೃಹೀತರಾದೆವು.

ಕಂ|| ಆಗುವದನೋಡಿ ಲೌಕಿಕ |
ಯೋಗಿಗಳಾಶೀರ್ವದಿಸುವ ರಾದ್ಯರೆನಿಪ್ಪಾ ||
ಯೋಗೀಶ್ವರರಾಶಿಷದಿಂ |
ದಾಸರಾಗದುದ ನೆಂದೊಡದನೇಂ ಪೊಗಳ್ವೆಂ ||೭||

ಅಷ್ಟಾ—ಪೂಜ್ಯಳಾದ ಅರುಂಧತಿಯು ಕೌಸಲ್ಯಾ ಮೊದಲಾದ ದೇವಿಯರು,

ಶಾಂತಾದೇವಿಯೂ ಕೂಡ ಇದನ್ನು ಪದೇಪದೇ ಹೇಳಿರುವರು. ಈಕೆಗೆ ಬಸುರಬಯಕೆ ಯಾವದಾದರೂ ಇದ್ದರೆ ಅದನ್ನು ಶೀಘ್ರವಾಗಿ ನೆರವೇರಿಸುವದೆಂದು,

ರಾಮ—ಈಕೆ ಹೇಳಿದರೆ ನೆರವೇರಿಸುವೆನು.

ಅಷ್ಟಾ—ಎಲೌವತ್ಸೆ ಪೂರ್ಣಗರ್ಭಿಣಿಯಾದಕಾರಣ ನಿನ್ನನ್ನು ಕರೆಸಲಿಲ್ಲ. ನಿನ್ನ ವಿನೋದಾರ್ಥವಾಗಿಯೆ ವತ್ಸನಾದ ರಾಮಭದ್ರನನ್ನು ಇಲ್ಲಿಯೆ ಇರಿಸಿರುವೆವು. ಆದ್ದರಿಂದ ಪುತ್ರವತಿಯಾದ ನಿಮ್ಮನ್ನು ನೋಡುವೆವೆಂದು ಋಷ್ಯಶೃಂಗರು ಆಜ್ಞಾಪಿಸಿರುವರು"

ರಾಮ—(ಹರ್ಷಲಜ್ಜೆಗಳಿಂದ ಕೂಡಿ ನಕ್ಕು) ಹಾಗೆಯೆ ಆಗಲಿ. ಪೂಜ್ಯರಾದ ವಸಿಷ್ಠರು ನನಗೇನಾದರು ಆಜ್ಞಾಪಿಸಿರುವರೋ.

* ರಾಮ—ಗುರುಗಳ ಅಪ್ಪಣೆಯಾದಂತೆ ನಡೆದುಕೊಳ್ಳುವೆನು.

ಕಂ॥ ಜನಮಂಮೆಚ್ಚಿಸಿ ನಡೆಯು ।
ಲ್ಕನುರಾಗವ ನಧಿಕಸುಖವನನುಕಂಪವುಮಂ ॥
ಜನಕಜೆಯುನಾದರುಂಮೇ ।
ದಿನಿಯೊಳ್ತೊರೆವೆನಗೆ ಮನದಿಚಿಂತೆಯುದಿಲ್ಲಂ ॥೭॥

ಸೀತೆ—ಆದುದರಿಂದಲೇ ಆರ್ಯಪುತ್ರನು ರಘುಕುಲಧುರಂಧರನು.

ರಾಮ—ಯಾರಲ್ಲಿ. ಅಷ್ಟಾವಕ್ರರನ್ನು ಪಚರಿಸುವುದು.

ರಾಗ ॥ ಕಮಾಚು ॥ ರೂಪಕ ॥

* ಭಾನುಕುಲಸಂಭವ । ನೀನಾಲಿಸು । ಭಾನುಕುಲಸಂಭವ ॥ ಪ ॥ ಅಳಿಯುನಮಜ್ಞಾನ । ಬೆಳಸುವಕಾರಣ । ನೆಲಸಿದೆವ್ಯೈನಾವೀ । ಬಳಿಯೊಳಗದರಿಂದ ॥ ೧ ॥ ಬಾಲಸೀನೀರಾಜ್ಯದಾಳಿಕೆ ಪೊಸದುಪ್ರ । ಜಾಳಿರಂಜನೆಯುನೀನಾಲೋಚಿಸಿನಡೆ ॥೨॥ ದ್ಯುಮಣಿವಂಶಜರಾದ । ನಿಮಗೀಕೀರ್ತಿಯೆಸರ್ವೋ । ತ್ತಮಧನವೆಂಬುವ । ಸುಮತಿಸೀನರಿದಿರು ॥ ೩ ॥ ಈಸರಿಸಿನ್ನನಾ । ಜ್ಞಾಪಿಪ್ಪುದೆನ್ನುತ । ತಾಪಸವದನುನಿ । ರೂಪಿಸಿದನು ನಿನ್ನೊಳ್ ॥ ೪ ॥

ಅಷ್ಟಾ—(ಎದ್ದು ನಡೆದು) ಓಹೋ! ಕುಮಾರ ಲಕ್ಷ್ಮಣನು ಬಂದನು.

(ಎಂದು ಹೋಗುವನು)

(ಲಕ್ಷ್ಮಣ ಪ್ರವೇಶಿಸಿ)

ಆರ್ಯನಿಗೆ ಜಯವಾಗಲಿ. ಆರ್ಯನೆ ನೀವು ಆಜ್ಞಾಪಿಸಿದಂತೆ ಚಿತ್ರಕಾರನಿಂದ ಈಪಟದಲ್ಲಿ ಆರ್ಯನಚರಿತ್ರೆಯನ್ನು ಬರೆಸಿರುವೆನು; ಇದನ್ನು ನೋಡಬೇಕು;

ರಾಮ—ಎಲೆ ವತ್ಸನೆ ವಿಮನಸ್ಕಳಾದ ದೇವಿಯ ವಿನೋದಕ್ಕೆ ಬರೆಸಿದ್ದೆನೆಂದು ಬಲ್ಲೆಯಷ್ಟೆ? ಆದರೆ ಎಲ್ಲಿಯವರಿಗು ಬರೆಸಿರುವೆ.

ಲಕ್ಷ್ಮಣ—ಆರ್ಯೆಗೆ ಅಗ್ನಿಪರಿಶುದ್ಧಿವರಿವಿಗು.

ರಾಮ—ಶಿವಶಿವಾ.

ಕಂ॥ ಆಜನ್ಮಶುದ್ಧೆಯೆನಿಸಿ ।
ಪಿಂಜಾನಕಿಗಗ್ನಿಶುದ್ಧಿಯಿಂದಾಗುವದೇಂ ॥
ಈಜಗದೊಳಗ್ನಿಯುಂ ಗಂ ।
ಗಾಜಲಮುಂಪರಪದಾರ್ಥದಿಂ ಶುಚಿಯಲ್ಲಂ ॥೮॥

ಎಲೆ ದೇವಿ ಪ್ರಸನ್ನಳಾಗು. ನಿನಗೆ ಜನಾಪವಾದವು ಯಾವಾಗಲೂ ತಪ್ಪಲಿಲ್ಲವಲ್ಲ.

* ಸೀತೆ—ಆಗಲಿ. ಆರ್ಯಪುತ್ರನೇ ಆಗಲಿ. ನಡೆ ನಿನ್ನಚರಿತ್ರೆಯನ್ನು ನೋಡೋಣ. (ಎಂದು ಎದ್ದುಬರುವರು)

---

* ರಾಗ ॥ ತೋಡಿ ॥ ಆದಿತಾಳ ॥

ಮಾಡಿದಾಪರಾಧವ । ನೋಡದಿರುನೀನು ॥ ಪ ॥ ಜೋಡಿಸುತ್ತಾಕರಗಳ । ಬೇಡಿಕೊಂಬೆನಂಗನಾ ॥ ಚೂಡಾಮಣಿಯುನಿನ್ನ । ನಾಡದುದನಾಡಿನಾಂ ॥೧॥ ಅರಸಿಯೆಸಿರದೊಳು । ಧರಿಸುಪವುಲ್ಲಿಗೆ । ಯರಳನುಚರಣದಿಂ । ದೊರಿಸಿದಂದದಿನಾಂ ॥ ೨ ॥ ಮುಚ್ಚರಿಸದಿರುನಿನ್ನ । ಸಚ್ಚರಿತವನುನಾ । ನೆಚ್ಚಿಯುಲೋಕವ । ಮೆಚ್ಚಿಸಲಾಗಿನಾಂ ॥ ೩ ॥

ಲಕ್ಷ್ಮಣ—ಇದೇ ಆಚಿತ್ರಪಟವು"

ಸೀತೆ—(ಚನ್ನಾಗಿ ನೋಡಿ) ಇವರ್ಯಾರು. ಮೇಲೆನಿಂತು ಆರ್ಯಪುತ್ರನನ್ನು ಸ್ತುತಿಸುತ್ತಿರುವರು"

ಲಕ್ಷ್ಮಣ—ಇವು ಜೃಂಭಕಾದಿ ಮಂತ್ರಾಸ್ತ್ರಗಳು. ಕೃಶಾಶ್ವನ ದೆಸೆಯಿಂದ ವಿಶ್ವಾಮಿತ್ರರಿಗೆ ಬಂದು ಅನಂತರ ತಾಟಕಾ ವಧೆಯಲ್ಲಿ ಅವರಿಂದ ಆರ್ಯನಿಗೆ ಕೊಡಲ್ಪಟ್ಟಿರುವವು"

ರಾಮ—ದೇವಿ ಈ ದಿವ್ಯಾಸ್ತ್ರಗಳನ್ನು ವಂದಿಸು,

ರಾಮ—ಸರ್ವಪ್ರಕಾರದಿಂದಲು ಈಗ ನಿನ್ನ ಗರ್ಭವನ್ನು ಸೇರುತ್ತಿರುವವು.

ಸೀತೆ—ಅನುಗ್ರಹಿಸಲ್ಪಟ್ಟೆನು.

ಲಕ್ಷ್ಮಣ—ಇದೋ ಇದು ಮಿಥಿಲಾ ವೃತ್ತಾಂತವು.

ಸೀತೆ—ಆರ್ಯಪುತ್ರನ ಅನುಪಮಾನವಾದ ಆಕೃತಿಯು, ಇಲ್ಲಿ ಸರಿಯಾಗಿ ಬರೆಯಲ್ಪಟ್ಟಿರುವುದು.

ಲಕ್ಷ್ಮಣ—ಆರ್ಯನೆ ನೋಡು ನೋಡು.

ಕಂ|| ಅನುಬಂಧಿಗಳಾದಮಹಾ |
ಮುನಿ ಮೈತ್ರಾವರುಣ ಮುಖ್ಯರಂಪೂಜಿಸುವಂ ||
ಜನನಿನಿಜಜನಕಗುಂಪೆ[illegible]
ಜನಕರಸತ್ಕುಲಪುರೋಹಿತಂ ಗೌತಮನುಂ ||೯||

ರಾಮ—ಇದೀಗ ನೋಡತಕ್ಕದ್ದು.

ಕಂ|| ಜನಕರಘುಕ್ಷಿತಿನಾಯಕ |
ರ[illegible]ಂ ಕೊಡುವವನುಂ ||
ಇನಿಯುಳಿಕೊಂಬುವನುಂ |
ತಾನೆನಲ್ಕೆವಿಶ್ವೈಕಮಿತ್ರ ವಿಶ್ವಾಮಿತ್ರಂ ||೧೦||

ಸೀತೆ—ಇವರಲ್ಲವೆ ಪಾಣಿಗ್ರಹಣಕ್ಕೆ ಪೂರ್ವದಲ್ಲಿ ಗೋದಾನಮಂಗಳವನ್ನು ಮಾಡಿ ವಿವಾಹ ದೀಕ್ಷೆಯನ್ನು ಧರಿಸಿದ ನೀವು ನಾಲ್ವರು ಭ್ರಾತೃಗಳು. ಅದೇ ಪ್ರದೇಶದಲ್ಲಿ ಅದೇ ಸಮಯದಲ್ಲಿರುವೆನೆಂದು ಭಾವಿಸುವೆನು.

ರಾಮ—ಇದು ಆ ವಿವಾಹಕಾಲದ ಹಾಗೆಯೇ ಇದೆ ನೋಡು. ಯಾವವಿವಾಹಕಾಲದಲ್ಲಿ.

ಕಂ|| ಸುಮುಖಿ ಧೃತಕಂಕಣಂ ಗೌ |
ತಮಾರ್ಪಿತಂ ಮೂರ್ತಿವೆತ್ತ ಸುಮಹೋತ್ಸವದೋಲ್ ||
ರಮಣೀಯವಾದ ತವಕರ |
ಕಮಲಂತಾನಿತ್ತುದೆನಗೆ ಬಲುಸಂತಸಮಂ ||

ಲಕ್ಷ್ಮಣ—ಇವರು ನೀವು. ಇವರಿಬ್ಬರು ಮಾಂಡವೀ ಶ್ರುತಕೀರ್ತಿಯರು.

ಸೀತೆ—ಎಲೈ ವತ್ಸನೆ ಇನ್ನೊಬ್ಬಳಿರುವಳಲ್ಲಾ ಈಕೆ ಯಾರು.

ಲಕ್ಷ್ಮಣ—(ಲಜ್ಜೆಯಿಂದ ನಕ್ಕು) (ಸ್ವ) ಓಹೋ ಆರ್ಯೆಯು ನನ್ನ ಹೆಂಡತಿಯ ಹೆಸರನ್ನು ಕೇಳುವಳು ಒಳ್ಳೇದು (ಇನ್ನೊಂದು ಕಡೆ ತೋರಿಸಿ) ಆರ್ಯೆ ಈತನು ಪೂಜ್ಯನಾದ ಪರಶುರಾಮನು.

ಸೀತೆ—ಈತನನ್ನು ನೋಡುವುದಕ್ಕೆ ನನಗೆ ಭಯವಾಗುವುದು.

ರಾಮ—ಎಲೈ ಮಹರ್ಷಿಯೆ ನಿನಗೆ ವಂದಿಸುವೆನು.

ಲಕ್ಷ್ಮಣ—ಆರ್ಯನೆ ನೋಡು ನೋಡು. ಈತನು ನಿನ್ನಿಂದ (ಎನ್ನುವಷ್ಟರಲ್ಲೆ)

ರಾಮ—ವತ್ಸನೆ ಅದುಹಾಗಿರಲಿ ಇನ್ನೂ ನೋಡತಕ್ಕದ್ದು ಬಹಳವಾಗಿರುವುದು. ಇನ್ನೊಂದು ಕಡೆ ತೋರಿಸು.

ಸೀತೆ—(ಸ್ನೇಹ ಬಹುಮಾನಗಳಿಂದ ಕೂಡಿ) ಆರ್ಯಪುತ್ರನೆ ನೀನು ವಿನಯಸಂಪತ್ತಿನಿಂದ ಚನ್ನಾಗಿ ಶೋಭಿಸುವೆ.

ಲಕ್ಷ್ಮಣ—ಇದು ನಾವು ಅಯೋಧ್ಯೆಗೆ ಬಂದದ್ದು.

ರಾಮ—(ಕಣ್ಣೀರಿಂದ ಕೂಡಿ) ಆಃ ನೆನೆಕೊಳ್ಳುವೆನು ಆಕಾಲದಲ್ಲಿಯೂ ಜಾನಕಿಯೂ ಕೂಡ

ಕಂ|| ಶಿಶುತನದೊಳ್ಮೊಳೆವ ಶುಭ್ರೋಜ್ವಲ |
ದಶನಗಳಿಂ ವಿರಳವಿರಳವಾದಳಕಗಳಿಂ ||
ಶಶಿಕರಮನೋಜ್ಞವಿಭ್ರಮ |
ವಿಶೇಷದಿಂದೆನ್ನ ಜನನಿಯರ್ಗೊಲವಿತ್ತಳ್ ||

ಲಕ್ಷ್ಮಣ—ಇದೋ ಇವಳು ಮಂಥರೆ.

ರಾಮ—(ಮೌನದಿಂದ ಮತ್ತೊಂದು ಕಡೆಗೆ ತಿರುಗಿ) ಎಲೆ ಜಾನಕಿ ಇದೇ ಆ ಯಿಂಗುದೀ ವೃಕ್ಷವು ಇಲ್ಲೇ ನಮಗೂ ಆ ಗುಹನಿಗೂ ಮೈತ್ರಿಯುಂಟಾದದ್ದು.

ಲಕ್ಷ್ಮಣ—(ಸ್ವಗತ ನಕ್ಕು) ಓಹೋ ಆರ್ಯಪುತ್ರನು ಚಿಕ್ಕಮ್ಮನ ವೃತ್ತಾಂತವನ್ನು ಮರೆಸಿದನು.

ಸೀತೆ—ಆಃ ಇದೋ ನೀವು ಜಡೆಗಳನ್ನು ವಹಿಸಿದ ವೃತ್ತಾಂತವು.

ಲಕ್ಷ್ಮಣ-ಕಂ|| ಮುಪ್ಪಿನೊಳು ಸುತರ್ಗೆ ರಾಜ್ಯವ |
ನೊಪ್ಪಿಸಿ ರಘುಕುಲಜರಾಂಪವನವರ್ತನಮಂ ||
ಬೊಪ್ಪನಸತ್ಯಕೆಬಾಲ್ಯದೊ |
ಳಿಪ್ಪಾಗಳೆ ತಳೆದನಾರ್ಯನನುಪಮಚರ್ಯಂ ||

ಸೀತೆ—ಇದೋ ಪಾವನೆಯಾದ ಭಾಗೀರಥಿಯು.

* ರಾಮ—ಪೂಜ್ಯಳಾದ ರಘುಕುಲದೇವತೆಯೆ ನಿನಗೆ ವಂದಿಸುವೆನು.

---

* ರಾಗ || ಜಲಾಬ್ || ಆದಿ ||

ಭಾಗೀರಥೀಮಹಾಭಾಗೆವಂದಿಪೆನಾಂ | ನಾಗಭೂಷಣಶಿರೋಭಾಗವಿಭೂಷೆ || ಪ || ಕಪಿಲಕೋಪಾಗ್ನಿಯಿಂ | ತಪಿಸಿದನಮ್ಮಯ | ಪ್ರಪಿತಾಮಹರನು | ಕೃಪೆಯೊಳುಪೊರೆದ || ೧ || ಅಭಿವಂದಕಜನ | ಕಭಿಮತವೆನಿಸುವ | ಶುಭಫಲವೀಯುವ | ತ್ರಿಭುವನಪಾವನೆ || ೨ || ಕ್ಷಿತಿಸುತೆಯೊಳಗರುಂ | ಧತಿಯೊಲುನೀನು | ಹಿತವನುಚಿಂತಿಸಾ ಶ್ರಿತಪರಿಪಾಲೆ || ೩ ||

ಲಕ್ಷ್ಮಣ—ಇದು ಭರದ್ವಾಜರು ತೋರಿಸಿದ ಶ್ಯಾಮನಾಮಕವಾದ ಕಾಳಿಂದೀ ತಟದ ವಟವೃಕ್ಷವು.

ಸೀತೆ—ಆರ್ಯಪುತ್ರನೆ ಈ ಪ್ರದೇಶವನ್ನು ಸ್ಮರಿಸುವೆಯಾ .

‡ರಾಮ—

ಲಕ್ಷ್ಮಣ—ಇದು ವಿಂಧ್ಯಾಟವಿಯು ಇಲ್ಲಿಯೆ ಆ ವಿರಾಧನು ಬಂದು ತಡೆದದ್ದು. (ಇನ್ನೊಂದು ಕಡೆ ತೋರಿಸಿ) ಇದು ಗೋದಾವರೀ ತೀರದಲ್ಲಿರುವ ಪ್ರಸ್ರವಣ ಪರ್ವತವು.

*ರಾಮ—

ಲಕ್ಷ್ಮಣ—ಇದೋ ಪಂಚವಟಿಯಲ್ಲಿ ಸಂಘಟಿಸಿದ ಶೂರ್ಪಣಖಿಯು.

ಸೀತೆ—ಹಾ ಆರ್ಯಪುತ್ರನೆ ಇಲ್ಲಿನವರೆಗೆ ನಿನ್ನ ದರ್ಶನ.

ರಾಮ—ಎಲೆ ಭೀರುವೆ ಇದು ಚಿತ್ರವಲ್ಲವೆ.

ಸೀತೆ—ಚಿತ್ರದಲ್ಲಿದ್ದರು ದುರ್ಜನರು ದುಃಖವನ್ನುಂಟುಮಾಡುವರು.

---

‡ ರಾಗ ॥ ಪೂರ್ವಿ ॥ ಆದಿ ॥

ಮರೆವೆನೆಂತಿದಕಾಂತೆ | ಮನದಿನಾಂ ॥ ಪ ॥ ಪರಿಪರಿಯಿಂದುಪಚರಿಸಿದಪರಿಯನಾಂ ॥ ಅ ॥ ಪ ॥ ನಡೆಯುತಾಲಸ್ಯವ | ಪಡೆದನಿನ್ನಂಗವ | ಕಡುಹಿತವಾನುಪ್ರೋಲ್ | ಬಿ[illegible]ದೊತ್ತಿದ್ದುದನ್ನುನಾಂ ॥ ೧ ॥ ಸೈಸದೆತಾಪವ | ಗಾಸಿ[illegible]ರೆನೀಂ | ವಾಸದ[illegible]ಪರಿಯುನಾಂ ॥ ೨ ॥ ಬಳಲಿದದೇಹವ | ಲಲನೆಯೆಮೆನ್ನೈದೆ | ಯೊಳಗೊರಗಿಸಿನೀ | ಮಲಗಿದರೀತಿಯ ॥ ೩ ॥

---

* ರಾಗ ॥ ಬೇಹಾಗ ॥ ಆದಿ ॥

ಸ್ಮರಿಸುವೆಯಾ ಸರಸೀರುಹಮುಖಿಯಾ | ಗಿರಿಯೊಳುನಾಂ ಪೊಂದಿರ್ದುದನು ॥ಪ॥ ಕಂದನೀ ಲಕ್ಷ್ಮಣ | ನಿಂದುತಂದಿತ್ತ ಕಂದಮೂಲಫಲಗಳ ಸವಿದು | ಚಂದದೊಳೀ ಪರ್ಣಮಂದಿರದೊಳಗಾ | ವಂದದೊಳಿರ್ದದಿನಂಗಳನು ॥ ೧ ॥ ತಾವರೆ ನೈದಿಲೆ | ಪೂವಿನವಾಸನೆ | ತೀವಿದನೀರಿಂ ಶೋಭಿಸುವ | ಪಾವನಗೋದಾವರಿತೀರದೆ | ನಾವನುಭವಿಸಿದಾನಂದಗಳನು ॥ ೨ ॥ ಬರಸೆಳದಪ್ಪುತೆ | ಬೆರೆಯೆಕಪೋಲಗಳೊರೆಯುತ[illegible]ವಿಯೊಳಗೆ | ಹರಿಸದೊಳಿರ್ದೆ ಮಗಿರುಳೆಕಳೆದುಪೋ | ದರಿಕೆಯತೊರೆದಾ ಸಮಯವನೂ ॥ ೩ ॥

‡ ಲಕ್ಷ್ಮಣ—ಆಃ ಜನಸ್ಥಾನದ ವೃತ್ತಾಂತವು ಈಗ ನಡೆದಹಾಗೆ ಕಾಣು ವುದಲ್ಲ.

ಸೀತೆ—(ದುಃಖದಿಂದ) ಆರ್ಯಪುತ್ರನೆ ನನಗಾಗಿ ಬಹಳ ಕಷ್ಟಪಟ್ಟೆಯು.

ಲಕ್ಷ್ಮಣ—(ರಾಮನನ್ನು ನೋಡಿ) ಆರ್ಯನೆ ಇದೇನು.

ಕಂ|| ಕಿತ್ತ ಸರದಿಂದಲುಚ್ಚರುವ |
ಮುತ್ತಿನಮಣಿಯಂತೆ ತೋರ್ಪ ಕಂಬನಿ ಚಲನಂ ||
ಬಿತ್ತಿಹನಾಸಾಧರಗಳು |
ಮೊತ್ತರಿಸಿದ ನಿನ್ನ ದುಃಖಮಂಸೂಚಿಸುಗುಂ ||

ರಾಮ—ಎಲೈ ವತ್ಸ—ಕಂ|| ಆಗಳ್ಸೈಸಿದೆನಸಿಯ್ಯವಿ |
ಯೋಗವ್ಯಾಕುಲವ ಬಿಡಿಸಿತರ್ಪಾಸೆಯೊಳಾಂ ||
ಈಗಳದುಮಸಗಿಮನದೊಳ |
ಗಾಡಿಸುವದು ನೋವಹೃದಯಮುರ್ಮವ್ರಣದೋಲ್ ||

ಸೀತೆ—ಆಹಾ ನಾನುಕೂಡ ಈ ಶೋಕದಿಂದಲೆ ಆರ್ಯಪುತ್ರನು ಅಗಲಿದಂತೆ ಭಾವಿಸುವೆನು.

ಲಕ್ಷ್ಮಣ—ಓಹೋ ಇವರ ದುಃಖವು ಮಿತಿಮಿರಿತು. ಇನ್ನೊಂದು ಕಡೆ ತೋರಿಸುವೆನು. (ತೋರಿಸಿ) ಇವನು ಕಲ್ಪಾಂತರಗಳನ್ನು ಕಂಡ ಗೃಧ್ರರಾಜನಾದ ಜಟಾಯುವು.

ಸೀತೆ—ಹಾ ತಂದೆ ಮಗಳ ಕಂಡಂತೆ ನನ್ನಲ್ಲಿ ನಿನಗೆ ವಾತ್ಸಲ್ಯವು ಅಧಿಕ ವಲ್ಲವೆ.

ರಾಮ—ಹಾ ತಂದೆ ಜಟಾಯುವೆ ನಿನ್ನಂಥಾ ಮಹಾನುಭಾವನು ಎಲ್ಲಿತಾನೆ ಸಂಭವಿಸ್ಯಾನು.

---

‡ ರಾಗ || ಜಲಾಬ್ || ರೂಪಕ ||

ಖುಲ್ಲರು ಕನಕದ ಹುಲ್ಲೆಯುದೆಶೆಯಿಂ ದೆಲ್ಲೆಮಗಾನಿಸಿದ | ತಲ್ಲಣವೆಲ್ಲವ | ನೀನಿ ರ್ದುದುಮೆದೆರ್ಝುಲ್ಲೆನುವದುನೆನೆಯೆ || ೧ || ಸೊಲ್ಲಿಸಲ್ಲದಿದಾಗಾರ್ಯನಹಂಬಲಫುಲ್ಲ ಚೆಯುನುಕೇಳಿ || ಕಲ್ಲುಗಳಂ ಘೋಳಿಟ್ಟವು ವಜ್ರವು | ನಿಲ್ಲದೆಬಿರಿದುದು || ೨ ||

ಲಕ್ಷ್ಮಣ— ಇದು ಜನಸ್ಥಾನಕ್ಕೆ ಪಶ್ಚಿಮಭಾಗದಲ್ಲಿರುವ ದನುನಾಮಕನಾದ ಕಬಂಧನಿಂದ ಆಕ್ರಾಂದಿತವಾದ ದಂಡಕಾರಣ್ಯ ಭಾಗವು. ಇದು ಮತಂಗಮುನಿಗಳ ಆಶ್ರಮವು. ಇವಳು ಶಬರಿಯು. ಇದು ಪಂಪಾ ಸರೋವರವು.

ಸೀತೆ—ಆಹಾ! ಇಲ್ಲಲ್ಲವೆ ಆರ್ಯಪುತ್ರನು ಧೈರ್ಯವನ್ನು ಬಿಟ್ಟು ಘಟ್ಟಿಯಾಗಿ ರೋದನಮಾಡಿದ್ದು.

ರಾಮ—ಎಲೆ ಜಾನಕಿ ಈ ಸರೋವರದಲ್ಲಿ.

ಕಂ|| ಕಲಹಂಸಂಗಳ ಪಕ್ಷಗ |
ಳಲೆಯಿಂ ಕೆಲಸಿಡಿದ ಕಾವ ತಾವರೆಗಳನು ||
ತ್ಪಲಗಳನೆಸೆವೀ ಯೆಡೆಯೊಳು |
ತುಳುಕುವ ಕಣ್ಣೀರನಡುವೆ ನೋಡಿದೆನಾಗಳ್ ||

ಲಕ್ಷ್ಮಣ—ಈತನು ಪೂಜ್ಯನಾದ ಹನುಮಂತನು.

ಸೀತೆ—ಈತನೆ ಶೋಕಾರ್ತ ಜನರನ್ನುದ್ಧರಿಸಿದ ಮಹೋಪಕಾರಿಯಾದ ಆಂಜನೇಯನು.

ರಾಮ—

ಕಂ|| ದೇವಿನುಡಿ ದೈವಯೋಗದೆ |
ನಾವೀತನಸೇರಿ ಧನ್ಯರಾದೆವಲಾ ಲೋ ||
ಕಾವಳಿಯೆಲ್ಲಮುಮಂ ತಾಂ |
ಪಾವನಮಂಗೈದ ಪರಮಪಾವನಹನುಮಂ ||

ಸೀತೆ—ಕುಸುಮಿತಗಳಾದ ಈ ವಕುಳ ವೃಕ್ಷಗಳಲ್ಲಿ ನರ್ತಿಸುವ ನವಿಲುಗಳಿಂದ ಮೆರೆಯುವ ಈ ಪರ್ವತವ್ಯಾವದು. ಇಲ್ಲಿ ಕಳೆಗುಂದಿದ್ದರೂ ಸ್ವಭಾವವನ್ನು ಬಿಡದ ಆರ್ಯಪುತ್ರನು ಮೂರ್ಛೆಯನ್ನು ಹೊಂದಿ ನಿನ್ನಿಂದ ಅವಲಂಬಿತವಾಗಿರುವಂತೆ ಬರೆದಿರುವದು.

ಲಕ್ಷ್ಮಣ—

ಕಂ|| ನವಮೇಘತತಿಗೆ ಪದವೆನಿ |
ಸುವ ಶಿಖರವನಾಂತ ಮಾಲ್ಯವದ್ಗಿರಿಯಿದುತಾಂ ||

ರಾಮ— ವಿವರಿಸದಿರನುಜ ಮುಂದಕೆ |
ಯುವತಿಯು ವಿರಹಾಗ್ನಿ ಮರಳಿ ತಪಿಸುವ್ರದೆನ್ನಂ ||

ಲಕ್ಷ್ಮಣ—ಇನ್ನು ಮುಂದಕ್ಕೆ ಕಪಿರಾಕ್ಷಸರುಗಳಿಗೆ ನಡೆದ ಆಶ್ಚರ್ಯಕರಗಳಾದ ಯುದ್ಧಕಾರ್ಯಗಳು ಬರೆಯಲ್ಪಟ್ಟಿರುವುವು. ಪೂಜ್ಯಳಾದ ಈಕೆಯಾದರೋ ಬಹಳವಾಗಿ ಬಳಲಿರುವಳು. ಆದ್ದರಿಂದ ಸ್ವಲ್ಪ ವಿಶ್ರಮಿಸಿಕೊಳ್ಳಲೆಂದು ವಿಜ್ಞಾಪಿಸುವೆನು.

ಸೀತೆ—ಆರ್ಯ ಪುತ್ರನೆ ಈ ಚಿತ್ರವನ್ನು ನೋಡಿದ್ದರಿಂದ ನನಗೊಂದು ಬಯಕೆಯುಂಟಾಯಿತು.

ರಾಮ—ಅದೇನು ಹೇಳು.

ಸೀತೆ—ಪುನಶ್ಚ ಮನೋಹರವಾದ ವನಗಳಲ್ಲಿ ವಿಹರಿಸುವುದಕ್ಕೂ ಜಗತ್ಪಾವನೆಯಾದ ಗಂಗೆಯಲ್ಲಿ ಸ್ನಾನಮಾಡುವುದಕ್ಕೂ ಬಯಸುವೆನು.

ರಾಮ—ಎಲೈ ವತ್ಸನೆ ಈಗತಾನೆ ಗುರುಗಳು ಈಕೆಯ ಬಯಕೆಯನ್ನು ಶೀಘ್ರವಾಗಿ ನೆರವೇರಿಸಬೇಕೆಂದಾಜ್ಞಾಪಿಸಿರುವರು. ಆದ್ದರಿಂದ ಕುಳಿತರೆ ಕುಲುಕದಂತಿರುವ ರಥವನ್ನು ಸಿದ್ಧಪಡಿಸು.

ಸೀತೆ—ಆರ್ಯಪುತ್ರನೆ ನೀನೂ ನನ್ನಸಂಗಡ ಬರಬೇಕು.

ರಾಮ—ಎಲೆ ಕಠಿಣಹೃದಯಳೆ ಇದನ್ನೂ ಹೇಳಬೇಕೆ.

ಲಕ್ಷ್ಮಣ—ಆರ್ಯಸಾಜ್ಞೆಯಾದಂತಾಗಲಿ. (ಎಂದು ಹೋಗುವನು)

ರಾಮ—ಪ್ರಿಯೆ ಇತರರಿಗೆ ಮರೆಯಾಗಿರುವ ಈ ಸೌಧದಲ್ಲಿ ಸ್ವಲ್ಪ ವಿಶ್ರಮಿಸಿಕೊಳ್ಳೋಣ ಬಾ.

ಸೀತೆ—ಹಾಗೆಯೇ ಆಗಲಿ. ಬಳಲಿಕೆಯಿಂದುಂಟಾದ ನಿದ್ರೆಯಿಂದ ಪೀಡಿತಳಾಗಿರುವೆನು.

ರಾಮ—ಆದರೆ ನನ್ನನ್ನು ಅವಲಂಬಿಸಿ ವಿಶ್ರಮಿಸಿಕೋ.

(ಕಾಂತೆಯಿಂದ ಆಲಿಂಗಿಸಲ್ಪಟ್ಟು)

ಕಂ|| ನಿರ್ಣಯಿಸಲಾರೆ ನಿದನಾ |
ಕರ್ಣಾಯತನಯನೆ ಸುಖವೊ ದುಃಖವೊ ಕಂಠಾ ||
ಭ್ಯರ್ಣದೆನೀಂ ನಳತೋಳಿಡೆ |
ವರ್ಣಿಪುದೇಂ ಬಂದುದೆನಗೆ ಪರವಶಭಾವಂ ||

ಸೀತೆ—ಪ್ರಿಯನೆ! ನೀನು ಸರ್ವದಾ ಪ್ರಸನ್ನ ಹೃದಯನು. ಇನ್ನು ಹೇಳತಕ್ಕದ್ದೇನು.

*ರಾಮ—

ಸೀತೆ—ಪ್ರಿಯಂವದನೆ! ಮಲಗುವೆನು. (ತಲೆದಿಂಬನ್ನು ಹುಡುಕುವಳು)

ರಾಮ—ಪ್ರಿಯೆ! ಅದೇನನ್ನು ಹುಡುಕುವೆ ?

ಕಂ|| ಮದುವೆಮೊದಲಿಂದುವರೆಗಂ |
ಸದನದೆಮೇಣ್ವನದೆಬಾಲ್ಯಯೌವನಗಳೊಳಂ ||
ಇದುಹೆರಳಶಯನಕೆಡೆಯಾ | ಪೆ
ಗದರಾಮನ ಬಾಹು ನಿನಗೆ ತಲೆದಿಂಬೆನಿಕುಂ ||

ಸೀತೆ—ಆರ್ಯಪುತ್ರನೆ! ಹಾಗೆಯೇ ಸರಿ. (ಮಲಗಿ ನಿದ್ರಿಸುವಳು)

---

* ರಾಗ || ಬೇಹಾಗ್ || ಆದಿ ||

ನಿನ್ನಯುವಮಾತು | ಎನ್ನಜೀವಾತು || ಪ || ಅರಸಿಮುಖೇಂದುವಿಂ | ಸುರಿವಸುಧಾರಸ ಝರಿಗೆಣೆಯೆಂಬೋಲಾ ದರದಿಂದಲಾಡಿದ || ೧ || ಕುಂದರದೇಜೇವ ಕುಸುಮವಿಕಾಸನೆ | ಇಂದುಮುಖೀಸಕ | ಲೇಂದ್ರಿಯಮೋಹನೆ || ೨ || ವರ್ಣಿಪುದೇಂ ವರವರ್ಣಿನಿ ನಿನ್ನಯ | ಪೂರ್ಣಾನುರಾಗವಾ | ಕರ್ಣಾಂತಲೋಚನೆ || ೩ ||

ರಾಮ—ಈ ಪ್ರಿಯವಾದಿನಿಯಾದ ಕಾಂತೆಯು ನನ್ನ ವಕ್ಷಸ್ಥಲದಲ್ಲಿ ಮಲಗೇಬಿಟ್ಟಳು. (ಪ್ರೀತಿಯಿಂದ ಸವರಿ)*
ಆದರೆ ಈಕೆಯ ವಿಯೋಗವಮಾತ್ರ ಉಂಟಾಗದಿದ್ದರೆ ಎಲ್ಲಾ ಪ್ರಿಯವೇ ಸರಿ.

ಪ್ರತಿಹಾರಿ—(ಬಂದು) ಎಲೈ ಮಹಾರಾಜನೆ ಸಮ್ಮುಖದ ಸೇವಕನಾದ ದುರ್ಮುಖನು ಬಂದಿರುವನು.

ರಾಮ—(ಸ್ವಗತಂ) ಅಂತಃ ಪುರಚಾರಿಯಾದ ದುರ್ಮುಖನೋ ಇವನನ್ನು ಪುರಜನರ ವೃತ್ತಾಂತವನ್ನು ರಹಸ್ಯವಾಗಿ ತಿಳಿದುಬರುವಂತೆ ಹೇಳಿಕಳುಹಿಸಿದ್ದೆನು. (ಪ್ರತ್ಯ) ಒಳ್ಳೇದು ಬರಲಿ. (ಕರೆತರುವಳು)

ದುರ್ಮುಖ—(ಪ್ರವೇಶಿಸಿ) (ಸ್ವಗ) ಅಯ್ಯೋ ಸೀತಾದೇವಿಯ ವಿಷಯದಲ್ಲಿ ನೆನೆಯು ಬಾರದ ಜನಾಪವಾದವನ್ನು ಮಹಾರಾಜನಿಗೆ ಹ್ಯಾಗೆ ತಾನೆ ವಿಜ್ಞಾಪಿಸಲಿ.

ಸೀತೆ—(ಕನವರಿಸುತ್ತ) ಹಾ ! ಆರ್ಯಪುತ್ರನೆ ಎಲ್ಲಿದ್ದೀಯೆ.

ರಾಮ—ಚಿತ್ರವನ್ನು ನೋಡಿದ್ದರಿಂದುಂಟಾದ ಆ ದುಃಖವು ದೇವಿಗೆ ಕನಸಿನಲ್ಲಿ ಕಳವಳವನ್ನುಂಟುಮಾಡಿತು. (ಪ್ರೀತಿಯಿಂದ ಸವರಿ)

ಕಂ|| ಬಂದೆನಿಪದುಃಖಸುಖಗಳೊ |
ಳೊಂದುಂ ವಿಶ್ರಾಂತಿಯೆನಿಸಿ ಹೃದಯಕೆ ಜರೆಯೈ ||
ತಂದೊಡಮುರ್ವಿದನೇಹದೊ |
ಳೊಂದಿದದಾಂಪತ್ಯಕರ್ಥಿಪೆಂ ಮಂಗಳಮಂ ||

ದುರ್ಮು—(ಬಂದು) ಮಹಾರಾಜನಿಗೆ ವಿಜಯವಾಗಲಿ.

ರಾಮ—ಎಲೈ ದುರ್ಮುಖನೆ ಏನು ತಿಳಿದು ಬಂದಿರುವೆ.

---

* ರಾಗ || ಬೇಹಾಗ್ || ರೂಪಕ ||

ಈಕೆಯನಾನೇಂವರ್ಣಿಪೆನಹಹಾ || ಪ || ಈ ಕಣ್ಗಳಿಗಮೃತಾಂಜನ | ವೀಕೆ ಜೀವನ | ಈಕೆಭಾಗ್ಯಲಕ್ಷ್ಮಿಯೆನಗೆ | ಲೋಕದೊಳಹಹಾ || ೧ || ತೋಳಿದೆನ್ನ ಕಂದರಕ್ಕೆ | ತೋರಮುತ್ತಿನ | ಮಾಲೆಯಾಗಿ ತೋರ್ಪದೇನ ಹೇಳುವೆನಹಹಾ || ೨ || ಸೀರೆಯು ಸೋಕಂಗಕೆ | ಕರ್ಪುರಲೇಪನ | ಸಂಸಾರವೆನಗೆ ಸಾರವಿವಳ ಸೇರಿರಲಹಹಾ || ೩ ||

ದುರ್ಮುಖ—ಮಹಾರಾಜನೆ ರಾಮನ ರಾಜ್ಯಭಾರದಲ್ಲಿ ಪೂರ್ವದ ದಶರಥ ಮಹಾರಾಜನನ್ನು ಮರೆದೆವೆಂದು ಪುರಜನರೆಲ್ಲರೂ ತಮ್ಮನ್ನು ಕೊಂಡಾಡುತ್ತಿರುವರು.

ರಾಮ—ಈ ಸ್ತೋತ್ರಭಾಗ ಹಾಗಿರಲಿ. ಏನಾದರೂ ದೋಷವನ್ನು ಹೇಳಿದ್ದರೆ ಹೇಳು. ಅದಕ್ಕೆ ತಕ್ಕ ಪ್ರತೀಕಾರವನ್ನು ಮಾಡೋಣ.

ದುರ್ಮುಖ—(ದುಃಖದಿಂದ) ಮಹಾರಾಜನೆ ಲಾಲಿಸಬೇಕು. (ಕಿವಿಯಲ್ಲಿ ಹೇಳುವನು)

ರಾಮ—(ಖಿನ್ನನಾಗಿ) ಆಹಾ ವಜ್ರಪ್ರಾಯವಾದ ಈ ವಚನವು ಕರ್ಣಕಠೋರವಾಯಿತಲ್ಲಾ. (ಮೂರ್ಛೆಸುವನು)

ದುರ್ಮುಖ—ಮಹಾರಾಜನೆ ಸಂತೈಸಿಕೊಳ್ಳಬೇಕು.

ರಾಮ (ಎದ್ದು)—ಕಂ॥ ಅರಸಿಯ ಪರಗೃಹವಾಸದ |
ಕೊರತೆಯ ನಾನಗ್ನಿಮುಖದಿ ಸೋಧಿಸಿದೊಡಂ ||
ಮರಳಿ ಹತವಿಧಿವಿಪಾಕದಿ |
ಕೆರಳಿದು ದುನ್ಮತ್ತಶುನಕವಿಷದಂತೀಗಳ್ ||

ಅಯ್ಯೋ ಮಂದಭಾಗ್ಯನಾದ ನಾನು ಇದಕ್ಕೆ ಏನು ತಾನೇ ಮಾಡಲಿ (ಯೋಚಿಸಿ) ಇನ್ನು ಬೇರೆ ಮಾಡತಕ್ಕದ್ದೇನು ? ಯಾವ ಪ್ರಕಾರದಿಂದಲಾದರೂ ಲೋಕ ಮೆಚ್ಚುವಂತೆ ನಡಿಯುವದೆ ಸತ್ಪುರುಷರಿಗೆ ಕುಲವ್ರತವು. ಆದ್ದರಿಂದಲೆ ನನ್ನ ತಂದೆಯು ನನ್ನನ್ನು ಮತ್ತು ತನ್ನ ಪ್ರಾಣಗಳನ್ನು ಬಿಟ್ಟನಲ್ಲದೆ ಲೋಕಾರಾಧನ ವ್ರತವನ್ನು ಬಿಡಲಿಲ್ಲ. ಈಗತಾನೆ ವಸಿಷ್ಠರಿಂದ ಆಜ್ಞಾಪಿಸಲ್ಪಟ್ಟಿರುವೆನು.

ಕಂ॥ ಕುಲವಿದು ಪೂರ್ವದನೃಪರಿಂ |
ಬೆಳಗಿದುದಾಕುಲದೊಳೆನ್ನ ಸಂಬಂಧದೆ ಕ ||
ಶ್ಮಲವಾದಪವಾದಂಬರೆ |
ನೆಲನೊಳು ನಾಂ ಬಾಳಿ ಫಲಮದೇಂತೆಗೆಯಕಟಾ || *

---

* ರಾಗ ॥ ಮುಖಾರಿ ॥ ಆದಿ ॥

ಏನಿದು ಹಾಹಾಜಾನಕಿ | ಏನನೆಂಬೆನಾಂ ಜಲಜಾಂಬಕಿ ॥ ಪ ॥ ಮಾನನೀಯ ದೇವಯಾಗಸಂಭವೆ | ಮಾನಿನೀ ಮಣೀ ಮ | ನ್ಮಾನಸೋತ್ಸವೆ ॥ ೧ ॥ ಪಾವಕಾಭಿ

ಕಂ|| ನಿನ್ನಿಂಪಾವನ ಮಾಯೆಳೆ |
ನಿನ್ನಲ್ಲಿ ಜನೋಕ್ತಿ ತಾನೆ ಪಾವನಮೆನಿಕುಂ ||
ನಿನ್ನಿಂದೆಸನಾಥರ್ಜನ |
ರೆನ್ನುವದೇಂ ನೀನನಾಥೆಯಾದೆಯುದಯಿತೆ ||

ಎಲೈ ದುರ್ಮುಖನೆ ನೂತನನಾದ ರಾಮನು ಹೀಗೆ ಆಜ್ಞಾಪಿಸಿದನೆಂದು ಕುಮಾರ ಲಕ್ಷ್ಮಣನಿಗೆ ತಿಳಿಸು.

(ಕಿವಿಯಲ್ಲಿ ಹೇಳುವನು)

ದುರ್ಮು—ಇದೇನು ಅಗ್ನಿಪರಿಶುದ್ಧೆ ಯಾಗಿಯು ಪವಿತ್ರಗಳಾದ ರಘುಕುಲ ಸಂತಾನಗಳನ್ನುದ್ಧರಿಸಿದವಳಾಗಿಯೂ ಇರುವ ದೇವಿಯ ವಿಷಯದಲ್ಲಿ ದುರ್ಜನರಾಡಿದ ಮಾತಿಗಾಗಿ ಮಹಾರಾಜನು ಹೀಗೆ ಆಲೋಚಿಸುವನು.

ರಾಮ—ಸಾಕುಸಾಕು ಸುಮ್ಮನಿರು. ಪುರಜನರನ್ನೂ ದೇಶದ ಜನರೆಲ್ಲರನ್ನೂ ದುರ್ಜನರೆನ್ನತಕ್ಕದ್ದು ಹ್ಯಾಗೆ. ಇಕ್ಷ್ವಾಕುವಂಶವಾದರೊ ಪ್ರಜೆಗಳಿಗೆಲ್ಲಾ ಅಭಿಮತವಾದದ್ದು. ಇಂಥಾ ಕುಲದಲ್ಲಿ ದೈವಯೋಗದಿಂದ ಅಪವಾದ ಉಂಟಾಯಿತು. ದೇವಿಗೆ ನಾವು ದೂರದಲ್ಲಿ ನಡೆಸಿದ ಅದ್ಭುತವಾದ ಕಾರ್ಯವನ್ನು ಇಲ್ಲಿನವರು ಏನುಬಲ್ಲರು, ಇನ್ನು ನಿನ್ನ ಕಾರ್ಯವನ್ನು ಮಾಡು. ನಡೆ.

(ಹಾ ದೇವಿ) ಎಂದು ತೆರಳುವನು.

ರಾಮ—ಅಯ್ಯೊ ಕೊನೆಗೆ ಎಂಥಾ ಕೆಟ್ಟ ಕೆಲಸವನ್ನು ಮಾಡುವನಾದೆ ಇಂಥಾಕ್ರೂರನು ಎಲ್ಲಾದರೂ ಉಂಟೆ.

ಕಂ|| ಬಾಲತೆ ಮೊದಲಾಗಿವಳಂ |
ಪಾಲಿಸಿ ನಂಬಿಸಿಯೆ ಯೆದೆಯೊಳೊರಗಿರ್ಪಳನಾಂ ||

ನಂದ್ಯ | ಶೀಲಶಾಲಿನಿ | ಈ ವಿಧಾಪವಾದಕೆ | ಯೆಡೆಮಾಡೆ ‖ ೨ ‖ ಕೋಮಲಾಂಗಿ ಹಾಹಾ ರಾಮಜೀವಿತೆ | ಭಾಮಿನಿ ನಿನಗೀಪರಿ ನಾಮವಾಯಿತೆ ‖ ೩ ‖

ಕಾಲಂಗಿವೆಂವೋಸದೊ |

ಳಾಲಯದೊಳ್ಪೊರೆದ ಪಕ್ಷಿಯಂ ಕಟುಕನವೋಲ್ ||

ಆದ್ದರಿಂದ ಮುಟ್ಟುವದಕ್ಕೂ ಅರ್ಹನಲ್ಲದ ಪರಮ ಪಾಪಿಯಾದ ನಾನು ದೇವಿಯನ್ನು ಮುಟ್ಟಿಕೊಂಡಿರುವದು ಹ್ಯಾಗೆ (ಸೀತೆಯನ್ನು ಕೆಳಗೆ ಮಲಗಿಸಿ)*

ಕಂ|| ದೇವಿಯವಿಯೋಗದುಃಖದೆ |

ಬೇವುದಕೀ ರಾಮನಲ್ಲಿ ನಿಂತುದು ಜೀವಂ ||

ಏವೇಳ್ವೆ ಕಷ್ಟಮಿಾ [illegible]

[illegible]ರ್ಣಾವಳಿ ಹೃದಯಕ್ಕೆ ವಜ್ರಕೀಲದೊಲಾಯ್ತು ||

ಹಾ ಪೂಜ್ಯಳಾದ ಅರುಂಧತಿಯೆ, ಹಾ ಪೂಜ್ಯರಾದ ವಸಿಷ್ಠ ವಿಶ್ವಾಮಿತ್ರರೆ, ಹಾ ಪೂಜ್ಯನಾದ ಯಜ್ಞೇಶ್ವರನೆ, ಹಾ ಪರಮೋಪಕಾರಿಯಾದ ವಿಭೀಷಣನೆ, ಹಾ ! ಪ್ರಿಯ ಸಖನಾದ ಸುಗ್ರೀವನೆ, ಹಾ ಚಿರಂಜೀವಿಯಾದ ಹನುಮಂತನೆ, ಈ ದುಷ್ಟ ರಾಮನಿಂದ ನಿಮ್ಮ ಸರ್ವಸ್ವವನ್ನೂ ಕಳೆಕೊಂಡು

---

* ರಾಗ || ನಾದನಾಮಕ್ರಿಯೆ || ಗತಿ ||

ಮುಗುದೆ ಮೋಹಿಸಿದುದ ಕಾದುದೆ || ಪ || ಕಾಂತೆ ನೀನಂತಪ್ಪ | ಕರ್ಮಚಂಡಾಲಗೆ | ಕಾಂತೆಯಾಗುವದಕೇಂ | ನೋಂತೆಯೊ ಹಾ ಹಾ || ೧ || ಶ್ರೀಕರಚಂದನಾ | ನೋಕಹಭ್ರಾಂತಿಯಿಂ | ನೇಕೆಹೊಂದಿದೆ ದುರ್ವಿ | ಪಾಕವಿಷತರುವನ್ನು || ೨ || ಬಿಡು ಬಿಡು ಧೂರ್ತನಗೊಡವೆಯೇತಕೆ | ಕೈವಿಡಿದು[illegible] ಕಾದುದ| ಕಡೆಗೀಸುಖವು ಹಾ ಹಾ || ೩ ||

(ಮೇಲಕ್ಕೆ ಎದ್ದು)

ರಾಗ || ತೋಡಿ ||

ಈಗ ಜಗತ್ತಿದೆನ್ನಯಭಾಗಕೆ ಹೋದುದು ನಿಶ್ಚಯ | ತೆಗೆ ತೆಗೆ ರಾಮನಬಾಳಿಕೆ || ಜಗದೊಳಗಿನ್ನ ಕಟೀತಕೆ ||೧|| ಧರೆಯೊಳಗೀ ಶರೀರವು | ಧರಿಸಲತಿಭಾರವು ||೨|| ಪರಿಕಿಸಲೀ ಸಂಸಾರವು | ಬರೆಯುವದೇನಸಾರವು ||೩|| ಶಶಿಮುಖಿಗಾದುದೀ ರೀತಿ ಅಶರಣನಾದೆನಗೇಗತಿ || ೪ ||

ಕೆಟ್ಟರಿ. ಅಥವಾ ಇವರ ನಾಮಸ್ಮೃತಿಯನ್ನು ಮಾಡುವದಕ್ಕೆ ತಾನೆ ನನಗೆ ಯೋಗ್ಯತೆಯಲ್ಲಿರುವದು ಕೃತಘ್ನನಾದ ನಾನು ಇವರ ನಾಮಸ್ಮರಣೆಯುನ್ನೆತ್ತಿದರೆ ಇವರಿಗೂ ಪಾಪಲೇಪ ಉಂಟಾದೀತೊ ಏನೋ ಯಾತಕ್ಕೆಂದರೆ.

ಕಂ॥ ನಂಬುತೆದೆಯಲ್ಲಿ ಮಲಗಿದ ।
ತುಂಬಿದ ಗರ್ಭಿಣಿಯ ಗೃಹಕೆ ಲಕ್ಷ್ಮಿಯೆನಿಪ್ಪೀ ॥
ಯೆಂಬುರುಹಮುಖಿಯಬಿಡುತೇ ।
ನೆಂಬೇಂಮಾಂಸಾಶನರ್ಗೆ ಬಲಿಗೊಟ್ಟಪೆನಾಂ ॥

(ಗಲ್ಲವನ್ನು ಹಿಡಿದು) ಪ್ರಿಯೆ ! ನಿನ್ನ ದರ್ಶನವಿಲ್ಲಿಗಾಯಿತೆ (ರೋದಿಸುವನು)

ತೆರೆಯಲ್ಲಿ—ಮಹಾರಾಜನೆ ಬದುಕಿಸು, ಬದುಕಿಸು.

ರಾಮ—(ಗಾಬರಿಯಿಂದ) ಇದೇನು ತಿಳಿಯೋಣ,

ತೆರೆಯಲ್ಲಿ—ಯಮುನಾತೀರವಾಸಿಗಳಾದ ಋಷಿಗಳು ಲವಣಾಸುರನಿಂದ ಭೀತರಾಗಿ ನಿನ್ನನ್ನು ಮರೆಹೊಕ್ಕಿರುವರು.

ರಾಮ—ಆಹ ಇದೇನು ಇನ್ನೂ ರಾಕ್ಷಸರ ಭಯತಪ್ಪಲಿಲ್ಲವೆ ಆಗಲಿ ಆ ದುರಾತ್ಮನಾದ ಲವಣಾಸುರನನ್ನು ಸಂಹರಿಸುವುದಕ್ಕೆ ಶತ್ರುಘ್ನನನ್ನು ಕಳುಹಿಸುವೆನು.

(ಸ್ವಲ್ಪ ನಡೆದು ಹಿಮ್ಮೆಟ್ಟಿ ಸೀತೆಯ ಗಲ್ಲವನ್ನು ಹಿಡಿದು)

ಹಾ ದೇವಿ ನನ್ನನ್ನು ಸೇರಿ ಈ ಅವಸ್ಥೆಗೆ ಗುರಿಯಾದೆಯು. *

(ದುಃಖದಿಂದ ತೆರಳಿದನು)

ರಾಗ ॥ ಜಂಜೋಟ ॥

ಭೂಮಿದೇವಿಪಾಲಿಸು ವೈದೇಹಿಯ ॥ಪ॥ ಇನವಂಶದರಸರ । ಮನೆಗೆಮಂಗಳೆಯಾದ । ಜನಕಕುಲಾಂಬುಧಿಲಕ್ಷ್ಮಿಯ ॥೧॥ ದೇವಯಾಗದೊಳುಭೂ । ದೇವಿ ನೀನೆಯೆಂಪೆತ್ತ ಪಾವನಳಾದಿಸೀತೇಯ ॥೨॥ ಮನದಿನಾಂಪರಮಪಾ । ವನೆಯೆಂದುತಿಳಿದರು । ಜನನುಚ್ಚಿಸೆಬಿಟ್ಟ ಸೀತೆಯ ॥೩॥

ಸೀತೆ—(ಕನವರಿಸುತ್ತ) ಹಾ ಆರ್ಯಪುತ್ರನೆ ಎಲ್ಲಿದ್ದೀಯೆ. (ಜಾಗ್ರತೆಯಾಗಿ ಎದ್ದು) ಹಾ ತೆಗೆತೆಗೆ. ಆರ್ಯಪುತ್ರನನ್ನು ಅಗಲಿದಂತೆ ದುಸ್ವಪ್ನವನ್ನು ಕಂಡು ಕಳವಳಿಸಿದೆನು. (ಅತ್ತಿತ್ತ ನೋಡಿ) ಅಯ್ಯೊ ಇದೇನು! ಆರ್ಯಪುತ್ರನು ಮಲಗಿದ ನನ್ನೊಬ್ಬಳನ್ನೇ ಬಿಟ್ಟು ಹೊರಟು ಹೋದನು. ಇರಲಿ. ಈಗೇನು! ಆರ್ಯಪುತ್ರನನ್ನು ಕಂಡಕೂಡಲೇ ನನ್ನ ಮನಸ್ಸನ್ನು ತಡೆದುಕೊಳ್ಳುವಳೇ ಆದರೆ ಆಗ ಆತನಮೇಲೆ ಕೋಪಿಸಿಕೊಳ್ಳುವೆನು. ಅದ್ಯಾರು ಹೊರಗೆ.

ದುರ್ಮುಖ—(ಪ್ರವೇಶಿಸಿ) ಎಲಾ ದೇವಿಯೆ ಕುಮಾರಲಕ್ಷ್ಮಣನು ರಥವು ಸಿದ್ಧವಾಗಿರುವದೆಂದು ವಿಜ್ಞಾಪಿಸುವನು.

ಸೀತೆ--ಇದೋ ಹತ್ತುವೆನು. ಎಲ್ಲಿ ವತ್ಸ ಲಕ್ಷ್ಮಣನು.

ದುರ್ಮುಖ—ಇದೋ ಬರುತ್ತಿರುವನು. ಎಲಾದೇವಿಯೆ ಈಕಡೆಗೆ ದಯಮಾಡಿಸಬೇಕು.

ಲಕ್ಷ್ಮಣ—(ಖಿನ್ನನಾಗಿ ಪ್ರವೇಶಿಸಿ) ಆರ್ಯೆ ರಥವನ್ನು ಸಿದ್ಧಪಡಿಸಿರುವೆನು. ಬಿಜಯಂಗೈಯ್ಯಬೇಕು.

ಸೀತೆ—ಇದೋ ಬರುವೆನು ಗರ್ಭವು ಅಲ್ಲಾಡುವದರಿಂದ ಮೆಲ್ಲಗೆಹೋಗೋಣ. ಎಲೈ ವತ್ಸನೆ ಸ್ವಲ್ಪತಾಳು ಆಶ್ರಮದ ಮುನಿಪತ್ನಿಯರಿಗೆ ಬಾಗಿನಗಳನ್ನು ಕೊಡುವುದಕ್ಕೆ ತಕ್ಕ ಮಂಗಳದ್ರವ್ಯಗಳನ್ನು ಸಿದ್ಧಪಡಿಸಿಕೊಂಡು ಬರುವೆನು. (ಒಳಕ್ಕೆ ಹೋಗುವಳು)

*ಲಕ್ಷ್ಮಣ—ಅಯ್ಯೊ ಆರ್ಯೆಯು ಯಾವಪಾಪವನ್ನೂ ಕಾಣಳಲ್ಲಾ. ಆರ್ಯನಾದರೆ ಕಾಡಿಗೆ ಬಿಟ್ಟುಬರುವಂತೆ ಆಜ್ಞಾಪಿಸಿರುವನು. ಈಕೆಯ

---

* ರಾಗ ॥ ನಾದನಾಮಕ್ರಿಯೆ ॥ ರೂಪಕ ॥

ಗತಿಯೇನಿದಕೆಗೈವೆನು । ಪತಿದೇವತೆಯಾದಾ । ಕ್ಷಿತಿಜಾತೆಯ । ಮಮಮಾತೆಯು। ವನಕೈದಿಪನೆಂತೋಹಾಹಾ ॥ ೧ ॥ ಜನಕಗೆನಂದನೆಯೆನಿಸುತೆ। ಮನುಕುಲದರಸನಿಗೆ । ವನಿತಾಮಣಿಯೆನಿಸಿಯುಹಾ । ಸಿನಗೀಗತಿಯಾಯ್ತೆ ಮಾತೆ॥ ೨ ॥ ಅ೦ದಾ ರಾಕ್ಷಸಮಂದಿರ । ಬಂಧನದೊಳುಸೊಂದೆ । ಇಂದೀಪರಿಯಾದಳಲಿಗೆ । ಸಂದೆಯಾ ಹಾ ಮಾತೆ ಸೀತೆ ॥ ೩ ॥

ಸ್ನು ಹ್ಯಾಗೆತಾನೇ ವಂಚಿಸಿ ಬಿಟ್ಟುಬರಲಿ. ಹಾ ದೈವವೆ ಕೊನೆಗೆ ಇಂಥಾಕಾರ್ಯಕ್ಕೆ ಗುರಿಮಾಡಿದೆಯಾ.

ಸೀತೆ—(ಬಂದು) ವತ್ಸನೆ ಇನ್ನು ನಡೆ. ಗರ್ಭವು ಕುಲುಕುವದರಿಂದ ಮೆಲ್ಲಗೆ ರಥವನ್ನು ನಡೆಸುವನಾಗು.

ಲಕ್ಷ್ಮಣ—ಅಪ್ಪಣೆಯಾದಂತಾಗಲಿ.

* ಸೀತೆ—

(ಎಂದು ಹೋಗುವರು)

ಅರಣ್ಯ

(ರಥಾರೋಹಣಳಾದ ಸೀತೆಯು ಲಕ್ಷ್ಮಣನೊಡನೆ ಪ್ರವೇಶ)

(ಘೋರಾರಣ್ಯವನ್ನು ನೋಡಿ ಹೆದರಿ)

† ಸೀತೆ—

ಲಕ್ಷ್ಮಣ—ಅಯ್ಯೋ ಈಗ ಏನುಮಾಡಲಿ ಹೇಳುವದೂ ಕಷ್ಟ. ಹೇಳದಿದ್ದರೆ ಆರ್ಯೆಯು ಸುಮ್ಮನೆ ಬಿಡಳು. ಹಾಹಾದೈವವೆ (ಯೋಚಿಸುವನು)

ಸೀತೆ—ವತ್ಸನೆ ಯಾತಕ್ಕೆ ಸುಮ್ಮನಿರುವೆ.

---

* ರಾಗ ॥ ಹಿಂದೂಸ್ಥಾನಿ ಕಾಪಿ ॥ ಆದಿತಾಳ ॥

ವಂದಿಸೆಗುರುಜನ । ವೃಂದಕೆ । ನಾನು ॥ ಪ ॥ ವಂದಿಸೆನಿಜಪದ । ವಂದಕಜನತಾ । ನಂದಿತಪೋಧನ । ಬೃಂದಕೆನಾನು ॥ ೧ ॥ ವಂದಿಪೆನಿಜಪವು । ರಘುಕುಲದೇವತಾ । ಬೃಂದಪದಾಂಬುಜ । ದ್ವಂದ್ವಕೆನಾನು ॥ ೨ ॥ ವಂದಿಪೆರವಿಕುಲಾ । ನಂದಾರ್ಯಪುತ್ರನ । ಸುಂದರಪಾದಾರ । ವಿಂದಕೆನಾನು ॥ ೩ ॥

† ರಾಗ ॥ ಜಂಜೋಟಿ ॥ ಆದಿ ॥

ಏನಿದೇನುಸೌಮಿತ್ರಿಯೆ । ಕಾನನಾಂತಕೆಕರತಂದೆ ಹಾ । ಸೌಮಿತ್ರಿಯೆ ॥ ಪ ॥ ಎತ್ತನೋಡೆಕಣ್ಗೆ । ಕಗ್ಗತ್ತಲೆಕವಿವುದು । ಸುತ್ತನೋಡೆಚಿತ್ತವಿದು । ತತ್ತರಿಪುದುಸೌಮಿತ್ರಿಯೆ ॥ ೧ ॥ ಎಲ್ಲಿನೊಡಲೆನ್ನದೆ । ಝಲ್ಲೆನುತಲಿರ್ಪುದು । ಇಲ್ಲಿಗೇತಕೆನ್ನ । ಕರೆತಂದೆಯಿದೇನೈಸೌಮಿತ್ರಿಯೆ ॥ ೨ ॥ ತೋರದಿಲ್ಲಿಪುಣ್ಯಾಶ್ರಮ । ತೋರುತಿದೆದೇಪಶ್ರಮ । ಘೋರವನಕೈದಿಸುವ । ಕಾರಣವೇನೈ ಸೌಮಿತ್ರಿಯೆ ॥ ೩ ॥

ಲಕ್ಷ್ಮಣ—ಆರ್ಯೆ ಏನುಹೇಳಲಿ. (ಕಿವಿಯಲ್ಲಿ ಹೇಳುವನು)

ಸೀತೆ—ಹಾ ಆರ್ಯಪುತ್ರನೆ. ಹಾ ರಘುಕುಲಧುರಂಧರನೆ (ಮೂರ್ಛಿಸುವಳು)

ಲಕ್ಷ್ಮಣ— ಹಾ ಆರ್ಯೆ ಸಂತೈಸಿಕೊಳ್ಳಬೇಕು: ಸಂತೈಸಿಕೊಳ್ಳಬೇಕು. (ವಸ್ತ್ರದಿಂದ ಬೀಸುವನು)

ಸೀತೆ—ಸಂತೈಸಿಕೊಂಡು ಎದ್ದು. *

ಕಂ॥ ಎನಗೋಸುಗ ಬಹುಕಷ್ಟವ ।
ನನುಭವಿಸುತೆ ಖಳನಕೊಂದು ಉರಿಯೊಳಗೆನ್ನಂ ॥
ಮನವೊಪ್ಪಿಪರಿಗ್ರಹಿಸಿದ ।
ಮನುಕುಲಪತಿಯಿಂದು ವನದಿ ಬಿಡವೇಳ್ದನೆ ಹಾ ॥ ‡

ಹಾ ವತ್ಸನೆ ಪಾಪಿಯಾದ ರಾವಣನನ್ನು ಸಂಹರಿಸಿದ ಬಳಿಕ ಸರ್ವರೂ ತಿಳಿಯುವಹಾಗೆ ನನ್ನನ್ನು ಯಜ್ಞೇಶ್ವರನಲ್ಲಿ ಹೊಗಿಸಿದ ಸಂಗತಿಯನ್ನು ಆರ್ಯಪುತ್ರನು ಮರೆತರೆ ಅದನ್ನು ತಿಳಿದಿದ್ದ ನೀನಾ

---

* ರಾಗ ॥ ಶಹನ ॥ ತ್ರಿಪುಟ ॥

ದೈವವೇ । ಈವಿಧಗೈವುದೆ ಹಾಹಾ ॥ ಪ ॥ ಮನದೊಳಗೆಂದುರಾ । ಮನೆಯಲ್ಲದನ್ಯವ । ನೆನೆಯದಿರ್ದಕಾರಾ । ಮನೆಸಾಕ್ಷಿಯಲ್ತೆ ಹಾ ॥ ೧ ॥ ವರಿಸಿದ್ದುವೊದಲಾಗೆ। ನ್ನರಸುರಾಮನೆಜೀವೇ।ಶ್ವರನೆಂಬುಕೆಯಜ್ಞೇ। ಶ್ವರಸಾಕ್ಷಿಯಲ್ತೆಹಾ॥ ೨॥ ಎನ್ನಮನಸಮನ। ದನ್ನನುತಿಳಿದು ।ನನ್ನಳವಾಡೆಮಂ । ದಿನ್ನೇನುಗತಿ ಹಾ ಹಾ ॥ ೩ ॥

‡ ರಾಗ ॥ ಹಿಂದೂಸ್ಥಾನಿ ಭೈರವಿ ॥ ಏಕತಾಳ ॥

ಎಂತುಬಿಟ್ಟುಬಾಳ್ವೆ । ಕಾಂತನಪಾದಾಂಬು । ಜಾತವನಾ ॥ ಪ ॥ ರಾಮನಸುಗುಣಾ ರಾಮನಪೂರ್ಣ । ಕಾಮನರಘುವಂಶಾಂಭೋಧಿಸೋಮನ ॥ ೧ ॥ ನೀರಸಸಾವ್ಯಾ ಕಾರನಲೋಕಾ । ಧಾರನವೇರುಸಮಾನಧೀರನ ॥ ೨ ॥ ಕಾಂತನಕರುಣಾ। ಸ್ವಾಂತನಕೀರ್ತಿ ! ಕಾಂತನನೀತಿನಿಶಾಂತನ ಕಾಂತನ ॥ ೩ ॥

ದರೂ ಎಚ್ಚರಿಸಬಾರದಾಗಿತ್ತು. ಅಯ್ಯೋ ದೈವವೇ. *

(ಮೂರ್ಛೆಸುವಳು)

ಲಕ್ಷ್ಮಣ—ಆರ್ಯೆ ಅಪ್ಪಣೆಯೆ ಇದೋ ಕೃತಘ್ನನಾದ ಲಕ್ಷ್ಮಣನು ನಮಸ್ಕರಿಸುವನು.

(ಹೊರಟು)—ಕಂ॥ ಜನಕನಸತ್ಯಕ್ಕಾರ್ಗಂ ।
ವನಕ್ಕೈದಲ್ಕಂದು ತನ್ನಜನನಿಯತೆರದಿಂ ॥
ಮನೆವಾರೆಸಲಹಿದೀಕ್ಷಿತಿ ।
ತನುಜೆಯಕಾಡಿನೊಳದೆಂತು ಬಿಟ್ಟೈದಲಿ ಹಾ ॥

ಮಾಡತಕ್ಕದ್ದೇನು. ಆರ್ಯನ ಆಜ್ಞೆಯು ಅಲಂಘ್ಯವಾದದ್ದು, (ನಮಸ್ಕರಿಸಿ) ಎಲೈ ಕುಲಪತಿಯಾದ ಸೂರ್ಯನಾರಾಯಣನೆ ಎಲೌ ಕುಲೋದ್ಧಾರಿಣಿಯಾದ ಗಂಗಾದೇವಿಯೆ, ಎಲೌ ಸಕಲ ಚರಾಚರಾಧಾರಿಯಾದ ಭೂದೇವಿಯೆ, ಸರ್ವಪ್ರಕಾರದಿಂದಲೂ ಆರ್ಯೆಯನ್ನು ಕಾಪಾಡಿಕೊಳ್ಳುವರಾಗಿರಿ. ನಾನಂತೂ ಹೋಗಿಬರುವೆನು. (ಎಂದು ಹೋಗುವನು)

---

* ರಾಗ॥ ಕಾಂಬೋದಿ॥ ತ್ರಿಚಾಪು॥

ಅರಸು । ಆಡುವದೇಕಿದುನನ್ನ । ಕ್ರೂರಕರ್ಮದಫಲವು ॥ ಪ॥ ಕಡೆಗೆದಯಾಳುರಾಘವನಲ್ಲೂ ತಪ್ಪಿಲ್ಲ । ನುಡಿವುದೇನಣುಗನಿನ್ನಲ್ಲೂ ತಪ್ಪಿಲ್ಲ । ಕಡುಪಾತಕಿನಾಂ । ಹೆಣ್ಣಾಗಿಹುಟ್ಟಿದೆಂ । ದೊಡಲಪೂರವುದೆನ್ನದೆ ತಪ್ಪಲ್ಲದೆ ॥ ೧॥

ಭಾಮಿನೀ ಷಟ್ಪದಿ.

ಕಂದನೀಂನಡೆಕೊಂಡುಕೊಂಬೊಡೆ । ಬೆಂದೊಡಲೊಳಿದೆ ಬಸಿರಿದೆಂದುಗ । ಬಂದುದನುಭವಿಸುವೆನು ಮರೆಯದೆಪೇಳು ನೀನಿದನು॥ ಎಂದುನಿಮ್ಮಯರಾಜಧರ್ಮಕ್ಕೆ । ಕುಂದುಬರದೋಲ್ ನಡೆವುದೆನ್ನುತೆ । ಮಂದಭಾಗ್ಯೆಯು ಸೀತೆ ನಮಿಸಿದಳೆಂದುಮತ್ಪತಿಗೆ ॥

ಸೀತೆ—(ಎದ್ದುನೋಡಿ ಅತ್ಯಂತದುಃಖದಿಂದ) *

ಕಂ॥ ಹಾ ತಾತ ಜನಕರಾಜನೆ ।

ಹಾ ತಾಯೆಯೆ ಭೂಮಿದೇವಿ ಯಿಾಪಾತಕಿಯಂ ॥

ಏತಕೆಪೆತ್ತಿರಿಸೀವಕ ।

ಟೀತೆರವಾದಳಲನೆಂತು ಸೈರಿಪೆ ಹಾ ಹಾ ॥

(ರೋದಿಸುತ್ತ ಹೋಗುವಳು)

ಪ್ರಥಮಾಂಕಂ ಸಂಪೂರ್ಣಂ

---

* ರಾಗ ॥ ತೋಡಿ ॥ ಗತಿತಾಳ ॥

ಹಾ ಆರ್ಯಪುತ್ರನೆ । ಹಾ ಸುಚರಿತ್ರನೆ । ಹಾ ಸರಸಿಜನೇತ್ರ । ಹಾ ಕರುಣಾ ಸುಪಾತ್ರನೆ ॥ ೧ ॥ ಹಾ ಮಮಮಾನಸ । ಹರ್ಮ್ಯಾಗ್ರವಾಸಿಯೆ । ರಾಮ ಗುಣಾಭಿರಾಮಹಾ । ತಾಮರಸಾನನ ॥ ೨ ॥ ಕಾಂತನೆನಿನ್ನಡಿ । ದಾವರೆಬಿಟ್ಟಿನಾಂ । ನೆಂತಿಳೆಯಲ್ಲಿಜೀವಿಪೆ । ಚಿಂತೆಯನೆಂತುಸೈಪೆ ॥ ೩ ॥

೨ ನೇ ಅಂಕ ಪ್ರಾರಂಭಃ.

ತೆರೆಯಲ್ಲಿ—ತಾಪಸಿಗೆ ಸುಖಾಗಮನವಿ.

ತಾಪಸಿ—(ಪ್ರವೇಶಿಸಿ) ಆಃ ಈ ವನದೇವತೆಯು ಫಲಕುಸುಮ ಪಲ್ಲವಾ ರ್ಘ್ಯಗಳನ್ನು ಹಿಡಿದುಕೊಂಡು ಬಳಿಯಲ್ಲಿ ನಿಂತಿರುವಳು.

ವನದೇವತೆ—(ಪ್ರವೇಶಿಸಿ ಅರ್ಘ್ಯವನ್ನು ಕೊಟ್ಟು) *

ತಾಪಸಿ—ಈ ವಿಷಯದಲ್ಲಿ ಹೇಳತಕ್ಕದ್ದೇನು.

ಕಂ॥ ಪ್ರಿಯವರ್ತನೆಮೊಣ್ಮಂಗಳ ।
ಮಯಮತಿಮಿತವಾಣಿ ಪಿಂದುಮುಂದೊಂದೆನಿಪಾ ॥
ಶಯವವ್ಯಾಜಪ್ರೇಮಂ ।
ನಯವಿದರಹಸಾಧುಗಳ ಚರಿತ್ರಮಿದಿಳೆಯೊಳ್ ॥

(ಇಬ್ಬರೂ ಕುಳಿತುಕೊಳ್ಳುವರು)

ವನದೇವತೆ—ಪೂಜ್ಯಳೆ ನೀನು ಯಾರು.

ತಾಪಸಿ—ಎಲೌ ವನದೇವತೆ ನಾನು ಆತ್ರೇಯಿಯು.

---

* ರಾಗ ॥ ಚಾಲಕ್ ॥ ಏಕತಾಳ ॥

ವನವಿದುನಿಮ್ಮದುಭೋಗಿಸುವುದುನೀ । ವೆಮಗೀದಿನಸುದಿನಂಜನಿಯಿಸುದು ಸ । ಜ್ಜನರಿಗೆಸುಕೃತದಿಸ । ಜ್ಜನರೊಡನನುಷಂಗಂ ॥ ೧ ॥ ವನತರುಗಳನೆ ಳಲಿದುವಿಮಲೋದಕ । ವನಫಲಪೋಂಯೋಗ್ಯಂ । ಎನಿಸಿದಫಲಮೂಲಾಶನ ವಿದೊತಾಂ ಪರತಂತ್ರಮದೊಂದಲ್ಲಂ ॥ ೨ ॥

ವನದೇವತೆ—ಆರ್ಯೆ ಏತಕ್ಕಿಲ್ಲಿಗೆ ಬಂದೆ? ದಂಡಕಾರಣ್ಯವನ್ನು ಕುರಿತು ಬಂದು ದಕ್ಕೆ ಪ್ರಯೋಜನವೇನು.

ತಾಪಸಿ—ಇಲ್ಲಿ ಅಗಸ್ತ್ಯಪ್ರಮುಖರಾದ ಬ್ರಹ್ಮರ್ಷಿಗಳು ವಾಸಿಸುತ್ತಿರುವರು. ಅವರಮುಖದಿಂದ ವೇದಾಂತ ವಿದ್ಯೆಯನ್ನು ತಿಳಿಯುವದಕ್ಕೋಸ್ಕರ ವಾಲ್ಮೀಕಿಗಳಾಶ್ರಮದಿಂದ ಇಲ್ಲಿಗೆ ಬಂದೆನು.

ವನದೇವತೆ—ಇದೇನು? ಎಲ್ಲಾ ಮುನಿವರರೂ ಬ್ರಹ್ಮಪಾರಾಯಣಕ್ಕಾಗಿ ಆ ವಾಲ್ಮೀಕಿಗಳನ್ನೇ ಉಪಾಸಿಸುತ್ತಿರುವರಲ್ಲಾ. ಹೀಗಿರುವಲ್ಲಿ ಬಹು ದೂರ ಬರುವ ಪ್ರಯಾಸ ನಿನಗೇತಕ್ಕೆ.

ತಾಪಸಿ—ಅಲ್ಲಿ ವೇದಾಂತಶಾಸ್ತ್ರಾಧ್ಯಯನಕ್ಕೆ ದೊಡ್ಡ ವಿಘ್ನಸಂಭವಿಸಿತು. ಆದ್ದರಿಂದ ಎಷ್ಟು ದೂರವಾದರೂ ಬರಬೇಕಾಯಿತು.

ವನದೇವತೆ—ಅದೆಂಥಾ ವಿಘ್ನ ಹೇಳು.

ತಾಪಸಿ—ಯಾವಳೋ ಒಬ್ಬ ದೇವತೆಯು ಪೂಜ್ಯರಾದ ವಾಲ್ಮೀಕಿಗಳಿಗೆ ಸರ್ವಪ್ರಕಾರದಿಂದಲೂ ಆಶ್ಚರ್ಯವನ್ನುಂಟುಮಾಡುವ ಎರಡು ಮಕ್ಕಳನ್ನು ಸ್ತನ್ಯತ್ಯಾಗಮಾಡುವ ವಯಸ್ಸಿನಲ್ಲಿಯೇ ತಂದುಕೊಟ್ಟಳು. ಆ ಮಕ್ಕಳು ಮುನಿಗಳಿಗೂ ಅಲ್ಲಿನ ಸಕಲ ಚರಾಚರ ಭೂತಗಳಿಗೂ ಮನಸ್ಸನ್ನು ಸ್ನೇಹಪಡಿಸುತ್ತಿರುವವು.

ವನದೇವತೆ—ಆ ಮಕ್ಕಳ ಹೆಸರೇನಾದರೂ ತಿಳಿಯುವದೋ.

ತಾಪಸಿ—ಅವರನ್ನು ತಂದುಕೊಟ್ಟ ದೇವತೆಯು ಕುಶಲವರೆಂದು ಅವರ ಹೆಸರನ್ನೂ ಅವರ ಪ್ರಭಾವವನ್ನೂ ಕೂಡ ಹೇಳಿದಳು.

ವನದೇವತೆ—ಅದೆಂಥಾ ಪ್ರಭಾವ ಹೇಳು.

ತಾಪಸಿ—ಅವರಿಗೆ ಹುಟ್ಟುವಾಗಲೆ ರಹಸ್ಯಗಳಾದ ಜೃಂಭಕಾಸ್ತ್ರಗಳು ಪ್ರಾಪ್ತವಾಗಿರುವುದೆಂದು ಹೇಳಿದಳು.

ವನದೇವತೆ—ಇದೀಗ ಆಶ್ಚರ್ಯ. ಆಮೇಲೆ.

ತಾಪಸಿ—ಆ ಮಕ್ಕಳುಗಳನ್ನು ಪೂಜ್ಯರಾದ ವಾಲ್ಮೀಕಿಗಳೇ ಸಾಕಿ ಚೌಲವನ್ನು ಮಾಡಿ ವೇದತ್ರಯ ಹೊರ್ತಾಗಿ ಎಲ್ಲಾ ವಿದ್ಯೆಗಳನ್ನು ಕಲಿಸಿ ಹನ್ನೊಂದನೆಯ ವರ್ಷದಲ್ಲಿ ಉಪನಯನವನ್ನು ಮಾಡಿ ವೇದಾಭ್ಯಾಸವನ್ನು ಮಾಡಿಸಿದರು. ಬಹು ಬುದ್ಧಿಶಾಲಿಗಳಾದ ಆ ಬಾಲಕರೊಡನೆ ನಮ್ಮಂಥಾವರಿಗೆ ಸಹಾಧ್ಯಯನ ಯೋಗ್ಯತೆಯಿಲ್ಲವಾಯಿತು. ಆದ್ದರಿಂದ ಇಲ್ಲಿಗೆ ಬಂದೆನು.

ಕಂ|| ಕಲಿವೊಲ್ ಜಾಣಗೆ ವಿದ್ಯೆಯ |
ಕಲಿಪಂ ಗುರು ಜಡಗೆ ಬಾರದವಗೇಗೈವಂ ||
ತೊಳಗುವ ಮುಕುರಂ ಬಿಂಬವ |
ನೊಳಕೊಂಬಂತೊಳಕೊಳುವುದೆಪೆಳ್ಮೃತ್ಪಿಂಡಂ ||

ವನದೇವತೆ—ಇದೆಯೋ ನೀನು ಹೇಳಿದ ವಿಘ್ನ.

ತಾಪಸಿ—ಹೌದು. ಎಲೆ ಭದ್ರೆ ಇನ್ನು ನನಗೆ ಅಗಸ್ತ್ಯಾಶ್ರಮದ ಮಾರ್ಗವನ್ನು ತೋರಿಸು.

ವನದೇವತೆ—ಇತ್ತ ಪಂಚವಟಿಯನ್ನು ಹೊಕ್ಕು ಈ ಗೋದಾವರೀ ತೀರದಿಂದ ಹೋಗಬೇಕು.

ತಾಪಸಿ—ಏನು ಇದು ಪಂಚವಟಿಯೆ? ಇದು ಗೋದಾವರಿಯೆ? ಅಯ್ಯೋ ಜನಸ್ಥಾನದೇವತೆಯಾದ ವಾಸಂತಿಯು ನೀನೆಯೋ.

ವನದೇವತೆ—ಹೌದು.

ತಾಪಸಿ—ಹಾ ವತ್ಸೆ ಜಾನಕಿ ನಿನಗೆ ಪ್ರಿಯಬಂಧುಗಳಾಗಿದ್ದ ಈ ಪದಾರ್ಥಗಳು ನೀನು ನಾಮಶೇಷಳಾದಾಗ್ಯೂ ನಿನ್ನನ್ನು ಪ್ರತ್ಯಕ್ಷ ಕಂಡಂತೆ ಮಾಡುವದಲ್ಲ.

ವಾಸಂತಿ—(ಸ್ವಗತಂ) ಇದೇನು ನನ್ನ ಪ್ರಿಯಸಖಿಯನ್ನು ನಾಮಶೇಷಳೆಂದು ಹೇಳುತ್ತಾಳೆ (ಪ್ರಕಾಶ) ಆರ್ಯೆ ಸೀತಾದೇವಿಗೆ ಬಂದ ಭಯವೇನು.

ತಾಪಸಿ—ಬರೀ ಭಯವಲ್ಲ ಅಪವಾದದಿಂದ ಕೂಡಿದ ಭಯ. (ಕಿವಿಯಲ್ಲಿ ಹೇಳುವಳು)

ವನದೇವತೆ—ಆಹ ವಿಧಿವಿಪಾಕವು ಎಷ್ಟು ಕ್ರೂರವಾಗಿದ್ದು. (ಮೂರ್ಛಿಸುವಳು)

ತಾಪಸಿ—ಭದ್ರೆ ಸಂತೈಸಿಕೊ.

ವಾಸಂತಿ—(ಸಂತೈಸಿಕೊಂಡೆದ್ದು) *

ಹಾ ಪ್ರಿಯಸಖಿ, ಹಾ ಮಹಾಭಾಗ್ಯೆ, ನಿನ್ನ ನಿರ್ಮಾಣಭಾಗ ಪರಿಣಮಿಸಿತೆ? ರಾಮಭದ್ರ ರಾಮಭದ್ರ ಒಂದುವೇಳೆ ನಿನ್ನನ್ನಾಡಿಫಲವೇನು. ಎಲೌ ಆರ್ಯಳೆ ಅರಣ್ಯದಿಂದ ಲಕ್ಷ್ಮಣನು ಹಿಂತಿರುಗಿದ ಮೇಲೆ ಸೀತಾವೃತ್ತಾಂತವನ್ನೇನಾದರು ತಿಳಿದಿರುವೆಯಾ.

ತಾಪಸಿ—ಇಲ್ಲ ಇಲ್ಲ.

ವಾಸಂತಿ—ಹಾ ಕಷ್ಟ ಕಷ್ಟ ರಘುವಂಶ ಜರಿಗೆ ಅರುಂಧತೀ ವಸಿಷ್ಠರು ಗುರುಗಳಾಗಿರುವಾಗ ಮತ್ತು ವೃದ್ಧೆಯರಾದ ಕೌಸಲ್ಯೆ ಮೊದಲಾದ ರಾಣಿಯರು ಬದುಕಿರುವಾಗ ಈ ಕಾರ್ಯನಡೆದದ್ದು ಹ್ಯಾಗೆ?

ತಾಪಸಿ—ಆ ಕಾಲದಲ್ಲಿ ಗುರುಜನಗಳೆಲ್ಲರೂ ಋಷ್ಯಶೃಂಗಾಶ್ರಮದಲ್ಲಿದ್ದರು. ಈಗಲಾದರೋ ಯಾಗಪೂರ್ಣಮಾಡಿ ಋಷ್ಯಶೃಂಗರು ಗುರುಜನಗಳೆಲ್ಲರನ್ನೂ ಸತ್ಕರಿಸಿ ಕಳುಹಿಸಿದರು. ಅನಂತರ ಅರುಂಧತಿಯು ಸೀತಾ

---

* ರಾಗ ॥ ॥ ॥

ವನೇಜನೇತ್ರಿ ಪಾವನಾಂಗಿಜಾನಕೀ । ಮುನೀಪಿಮಾನ್ಯೆ ಪಾಪಿದೈವಕೃತ್ಯಮೇನಿದು । ಜನಾಪವಾದ ಪಾತ್ರಳೇನೆ ನೀಂಸಖಿ ॥ ೧ ॥ ಕ್ಷಿತೀಶಸೂರ್ಯ ವಂಶರತ್ನರಾಮನೇಹಾ ಹಾ ಹಾ । ಪತಿವ್ರತಾಶಿರೋಮಣಿ ಯೆನಿಪ್ಪರಾಣಿಯು । ಕೃತಘ್ನ ನೀನದೆಂತುಬಿಟ್ಟೆ ಕಾಡಿಗೆ ಹಾಹಾಹಾಹಾ ॥ ೨ ॥

*

ವಿರಹಿತವಾದ ಅಯೋಧ್ಯೆಯನ್ನು ಪ್ರವೇಶಿಸುವದಿಲ್ಲವೆಂದು ಹೇಳಿದಳು. ಅದನ್ನೇ ಕೌಸಲ್ಯೆ ಮೊದಲಾದವರೆಲ್ಲರು ಒಪ್ಪಿಕೊಂಡರು. ಅನಂತರ ವಸಿಷ್ಠರು ಹಾಗಾದರೆ ವಾಲ್ಮೀಕಿಗಳ ಆಶ್ರಮಕ್ಕೆ ಹೋಗೋಣವೆಂದು ಹೇಳಿದರು.

ವಾಸಂತಿ—ಆಯಿತು. ಈಗ ಆ ರಾಮಭದ್ರ ಏನು ಮಾಡುತ್ತಿರುವನು. ?

ತಾಪಸಿ—ಆ ರಾಮನು ಈಗ ಅಶ್ವಮೇಧಕ್ಕೆ ಉಪಕ್ರಮಿಸಿರುವನು.

ವಾಸಂತಿ—ಹಾ ತೆಗೆತೆಗೆ. ಆತನನ್ನು ಪರಿಣಯಮಾಡಿಕೊಂಡವಳಂ ನಿಂದಿಸು.

ತಾಪಸಿ—ಹಾ ! ಹಾ ! ಹಾಗೆನ್ನಬೇಡ.

ವಾಸಂತಿ—ಹಾಗಾದರೆ ಯಜ್ಞದಲ್ಲಿ ಧರ್ಮಪತ್ನಿಯಾವಳು.

ತಾಪಸಿ—ಸುವರ್ಣದಿಂದ ಮಾಡಿದ ಸೀತಾಪ್ರತಿಕೃತಿಯು.

ವಾಸಂತಿ—ಆಹ !

ಕಂ|| ಬಿರಿಸಾದಪುವಮುಮಾ ವ |
ಜ್ರದಿಂದಂ ಮೃದುಗಳಾದಪುವು ಸುಮದಿಂದಂ ||
ಪರಿಕಿಸಿನೋಳ್ಪೊಡೆ ಲೋಕೋ |
ತ್ತರ ಪುರುಷರ ಮನವನಾವನರಿಯಲ್ಬಕ್ಕುಂ ||

ಪರಿಕಿಸಿ ನೋಡೆ ಲೋಕೋ
ತ್ತರ / ಪುರುಷರ ಮಾನ
ವನಾವ ನರುವಿಲ್ಲ
ಕ್ಕುಂ ||

ತಾಪಸಿ—ವಾಮದೇವ ಮುನಿಯಿಂದ ಅಭಿಮಂತ್ರಿತವಾಗಿ ಯಜ್ಞದ ಕುದುರೆಯು ಬಿಡಲ್ಪಟ್ಟಿರುವದು. ಅದರ ಆರೈಕೆಗಾಗಿ ಸೇನಾಸಮೇತನಾಗಿ ದಿವ್ಯಾಸ್ತ್ರಸಂಪ್ರದಾಯಜ್ಞನಾದ ಚಂದ್ರಕೇತುವೆಂಬ ಲಕ್ಷ್ಮಣಕುಮಾರನು ಕಳುಹಿಸಲ್ಪಟ್ಟಿರುವನು.

ವಾಸಂತಿ—(ಸ್ನೇಹಭಾವದಿಂದ ಕೂಡಿ) ಆಃ! ಕುಮಾರ ಲಕ್ಷ್ಮಣನಿಗೂ ಮಗನುದಿಸಿರುವನೇ ? ಸಂತೋಷ ಸಂತೋಷ.

ತಾಪಸಿ—ಈ ಮಧ್ಯದಲ್ಲಿ ಒಬ್ಬ ಬ್ರಾಹ್ಮಣನು ಮೃತನಾದ ತನ್ನಪುತ್ರನನ್ನು ಹೊತ್ತುಕೊಂಡು ರಾಜದ್ವಾರದ ಬಳಿಗೆ ಬಂದು ತನ್ನಪುತ್ರನನ್ನು ಬದು

ಕಿಸು ಬದುಕಿಸು. ಎಂದು ಘಟ್ಟಿಯಾಗಿ ರೋದಿಸಿ ಕೂಗಿಕೊಂಡನು. ಅನಂತರ ರಾಜನಲ್ಲಿ ಅಧರ್ಮ ಉಂಟಾಗದೆ ಪ್ರಜೆಗಳಿಗೆ ಅಕಾಲ ಮೃತ್ಯುವು ಸಂಭವಿಸಲಾರದು. ಆದ್ದರಿಂದ ನನ್ನಲ್ಲಿ ಏನೋ ದೋಷ ವುಂಟಾಯಿತೆಂದು ಶ್ರೀರಾಮನು ಯೋಚಿಸುತ್ತಿರುವಾಗ ಆಕಾಶವಾಣಿಯಾಯಿತು. ಏನಂದರೆ

ಕಂ॥ ಶಂಬೂಕನೆಂಬಶೂದ್ರಂ ।
ಕುಂಭಿನಿಯೊಳಗುಗ್ರತಪವನಿರದಾಚರಿಪಂ ॥
ನೀಂಬಿಡದವನಂಹತಿಸು ।
ತ್ತಂಬದುಕಿಸು ರಾಮಭದ್ರ ಭೂಸುರಸುತನಂ ॥

ಎಂಬ ಶಬ್ದವನ್ನು ಕೇಳಿ ಶ್ರೀರಾಮನು ಖಡ್ಗಪಾಣಿಯಾಗಿ ಪುಷ್ಪಕವನ್ನು ಹತ್ತಿ ಎಲ್ಲಾ ದಿಕ್ಕುಗಳಲ್ಲಿಯೂ ಶೂದ್ರತಾಪಸನನ್ನು ಹುಡುಕಲುಪಕ್ರಮಿಸಿರುವನು.

ವಾಸಂತಿ—ಆರ್ಯೆ ಶಂಬೂಕನೆಂಬ ಶೂದ್ರನು ಈ ಜನಸ್ಥಾನದಲ್ಲೇ ತಪಸ್ಸನ್ನು ಮಾಡುತ್ತಿರುವನು. ಆದ್ದರಿಂದ ರಾಮಭದ್ರನು ಪುನಃ ಈ ವನವನ್ನು ಅಲಂಕರಿಸುವನಲ್ಲವೆ.

ಭವೈ ನಾನುಹೋಗಿಬರುವೆನು. (ಎದ್ದು) ಓಹೋ ಆ ರಾಮಭದ್ರನು ಬಂದೇ ಬಂದನು. (ಇಬ್ಬರೂ ತೆರಳುವರು)

ಶಂಬೂಕಾಶ್ರಮ

(ಖಡ್ಗಪಾಣಿಯಾದ ಶ್ರೀರಾಮನ ಪ್ರವೇಶ)

ರಾಮ *

ರಾಗ॥ ಚಾಲಕ॥

ಏಲೆ ದಕ್ಷಿಣಹಸ್ತವೆ ವಿಪ್ರನ ಮಡಿದೆಳೆಕೂಸುಳಿವುದಕೆ। ತಳೆದಿಹ ಖಡ್ಗವಬಿಡು ಶಂಬೂಕನೊಳಳುಕುವದಿನ್ನೇಕೆ॥ ಬಲುಬಸುರಿಂದಲಿ ತೊಳಲುವಸೀತಾ। ಲಲನೆಯುಕಾಡಿಗೆಕಳುಹಿದ ರಾಮನಕೈಯುಲೆ ನೀಂ ದಯೆಯೆಲ್ಲಿಯುದ್ದೈನಿನಗೆ॥

(ಶಂಬೂಕನನ್ನು ಸಂಹರಿಸಿ)

ರಾಮನಿಗೆ ತಕ್ಕಕಾರ್ಯವನ್ನು ಮಾಡಿದ್ದಾಯಿತಷ್ಟೆ. ಇನ್ನು ಆ ಬ್ರಾಹ್ಮಣ ಪುತ್ರನು ಜೀವಿಸಲಿ. (ಶಂಬೂಕನು ಶಾಪವಿಮೋಚನೆಯನ್ನು ಹೊಂದಿ ದಿವ್ಯರೂಪನಲ್ಲಿ ನಿಲ್ಲುವನು)

ಶಂಬೂಕ—ಎಲೈ ಮಹಾರಾಜನೆ ನಿನಗೆ ವಿಜಯವಾಗಲಿ.

ಕಂ॥ ಯಮನತ್ತಣಿನಭಯವನಿ ।
ತ್ತ ಮನಮಾ ನೀಂಶಿರವನರಿದುಬದುಕಿತುಶಿಶುಮೇಣ್ ॥
ಸಮನಿಸಿತೆನಗೀಲೇಸು ।
ತ್ತಮಸಂಗದೊಳಾದಮೃತಿಯುಮಿವಾವುದುಗತಿಯಂ ॥

(ನಮಸ್ಕರಿಸುವನು)

ರಾಮ—ಎಲೈ ಶಂಬೂಕನೆ ಶಿಶುಬದುಕಿದ್ದೂ ನೀನು ಅಭ್ಯುದಯವನ್ನು ಹೊಂದಿದ್ದೂ ಇವೆರಡೂ ಬಹಳ ಪ್ರಿಯವಾದದ್ದು. ಆದ್ದರಿಂದ ನಿನ್ನ ಉಗ್ರತಪಸ್ಸಿಗೆ ತಕ್ಕ ಫಲವನ್ನು ಅನುಭವಿಸು.

ಕಂ॥ ಉರತರತಪೋವಿಶೇಷವ ।
ವಿರಚಿಸೆ ಬಹುಪುಣ್ಯದಿಂದೆದೊರೆವಾನಂದಂ ॥
ಬೆರಸಿದ ತೇಜೋಮಯವಹ ।
ಪರಮೇಷ್ಠಿಯಪದದೆ ನೆಲಸುನೀನಾವಗಮುಂ ॥

ಶಂಬೂಕ—ಎಲೈ ಮಹಾರಾಜನೆ ಈ ಪದವಿಗೆ ನಿನ್ನ ಅನುಗ್ರಹವೆ ನಿಮಿತ್ತವಲ್ಲದೆ ತಪಃಫಲ ಬೇರೆಅಲ್ಲ. ಬಂದುವೇಳೆ ತಪಸ್ಸೂ ಬಹಳ ಉಪಕಾರಮಾಡಿತು.

ಕಂ॥ ಅರಸಲ್ಕೆತಕ್ಕಜಗದೀ ।
ಶ್ವರ [illegible]ಸುತೆನ್ನನಿಲ್ಲಿನವರೆಗಂ ॥ ನೀನೇಅರ
ಬರೆಗೈದತಪಃಫಲವೇ ।
ಸರಿಯಲ್ಲದೊಡೆಲ್ಲಯೋಧ್ಯೆದಂಡಕೆಯಲ್ಲೈ ॥

ರಾಮ—ಏನು ಇದು ದಂಡಕಾವನವೇ ? (ಸುತ್ತಲೂ ನೋಡಿ).

ಕಂ|| ಪರಿಪರಿಯಾಗಿಹ ಗಿರಿನದಿ |
ವೆರಸಿದ ಕಾಂತಾರಸಂತತಿಗಳಿಂ ಸುಮನೋ ||
ಹರವಾಗಿಕಾಣ್ಬುದಿದೊ ತಾಂ |
ಪರಿಚಿತವಾಗಿರ್ದ ದಂಡಕಾವನವಳಯಂ ||

ಶಂಬೂಕ—ಎಲೈ ಮಹಾರಾಜನೆ ಇದೇ ದಂಡಕಾವನವು. ಇಲ್ಲಿ ನೀವು ವಾಸ ಮಾಡಿಕೊಂಡಿದ್ದಾಗಲೆ ಖರದೂಷಣ ತ್ರಿಶಿರರೆಂಬ ರಾಕ್ಷಸರು ನಿಮ್ಮಿಂದ ಸಂಹೃತರಾದರು. ಆಮೇಲೆ ಈ ಜನಸ್ಥಾನವು ಭಯಶಾಲಿಗಳಾದ ನಮ್ಮಂಥಾವರಿಗೂ ನಿರ್ಭಯ ಸಂಚಾರಕ್ಕೆ ಯೋಗ್ಯವಾಯಿತು.

*ರಾಮ—ಇದು ದಂಡಕಾವನ ಮಾತ್ರವೇ ಅಲ್ಲ. ಜನಸ್ಥಾನವೂ ಇದೆಯೋ? (ನೋಡಿ ವ್ಯಸನದಿಂದ) ಇವಲ್ಲವೆ ಪೂರ್ವದಲ್ಲಿ ನಾನು ಕಾಂತಾಸಮೇತನಾಗಿ ವಿಹರಿಸಿದ ಕಾಂತಾರಗಳು. ಹಾ, ಹಾ,

ಕಂ|| ಆರಿಗದಾರ್ಪಿರಿಯರೊ ತಾಂ |
ಧಾರುಣಿಯೊಳವರ್ಗದೇನುಮೆಸಗದೊಡವರುಂ||
ಸಾರೆಯೊಳಗಿರ್ದಮಾತ್ರದೆ |
ದೂರೀಕರಿಪರ್ ಸಮಸ್ತದುಃಖವನಹಹಾ ||

ಎಲೈ ಶಂಬೂಕನೆ ನಿನಗೆ ಮಾರ್ಗವೆಲ್ಲಾ ಮಂಗಳವಾಗಲಿ ಇನ್ನು ನೀನು ಪುಣ್ಯಲೋಕಗಳನ್ನು ಹೊಂದು ಹೋಗು.

---

* ರಾಗ || ಕಮಾಚ್ || ಆದಿ||

ಸತಿಯುಬಿಟ್ಟಿಂತುಸೈರಿಪೆ । ರತಿರೂಪವತಿಯು || ಪ || ಇನಿಯುನಿನ್ನೊಡನೀ । ವನದೊಳು ವಿಹರಿಪೆ । ನೆನುವಮಾತ್ರದೆ ತೋಷಿಪ ||೧|| ಸರಸಿಗೆಪೋಗಿ ತಾಂ । ಬರೆ ತಡವಾಗೆ ನಾಂ । ಬರುವದಾರಿವೀಕ್ಷಿಪ ||೨|| ಆಸೆಯಿಂಮತ್ಸಹಾ । ವಾಸಸುಖದೆ ವನ । ವಾಸವದುಃಖವಕಾಣದ ||೩||

ಶಂಬೂಕ—ಎಲೈ ಮಹಾರಾಜನೆ ಅಗಸ್ತ್ಯಮುನಿಗಳನ್ನು ನಮಸ್ಕರಿಸಿ ಕೂಡಲೇ ಬ್ರಹ್ಮಲೋಕವನ್ನು ಪ್ರವೇಶಿಸುವೆನು (ಎಂದು ಹೋದನು).

* ರಾಮ—

ಇದೇ ಆ ಗೋದಾವರೀ ನದಿಯು. ಇದೇ ಆ ಪಂಚವಟಿಯು. ಇವೇ ನನ್ನ ಪ್ರಾಣಪ್ರಿಯೆಯೊಡನೆ ವಿಹರಿಸಿದ ಪ್ರದೇಶಗಳು. ಓಹೋ ಪ್ರಿಯಸಖಿಯಾದ ವಾಸಂತಿಯೂ ಇಲ್ಲೇ ಇರುವಳು. ಇವೆಲ್ಲಾ ಅವುಗಳೇ ಆದರೆ ಇವನು ಮಾತ್ರ ಅವನಲ್ಲಾ. ಅವನೇ ಆಗಿದ್ದಲ್ಲಿ ಅಂಥಾ ಕಾಂತೆಯನ್ನು ಅರಣ್ಯಕ್ಕೆ ಬಿಟ್ಟು ಸೈರಿಸಿಕೊಂಡಿರುವನೆ? ಅಯ್ಯೋ ದುಷ್ಟ ರಾಮನಿಗೆ ಏನುಬಂತು †

ಕಂ॥ ಈ ಪಂಚವಟಿಯೊಳೊಡವೆರೆ ।
ದೋಷಸಳ್ ಕಾಲವನು ಕಳೆದುಕಳೆಕೊಂಡನಿಯುಂ ॥
ಪಾಪಿಗಡರಾಮನೊರ್ವನೆ ।
ಏನರಿಯಿಂನೋಳ್ಪನೆಂತು ನೋಡದೆಪೋಪಂ ॥

(ರಾಮ) ಇದನ್ನು ಬಿಟ್ಟು ಬಹುದಿವಸವಾದರೂ ಪಂಚವಟಿಯ ಸ್ನೇಹವು ನನ್ನನ್ನು ಸೆಳೆಯುತ್ತಿರುವುದು.

---

* ರಾಗ ॥ ಪೀಲು ॥

ಆಡಲದೇಂಪ್ರಿಯೆ । ಗೂಡಿನಾನಿರ್ದ। ಕಾಡಿದುರ್ಪುನರಪಿ।ನೋಡಿದೆನಾಹ॥ಪ॥ ಸುಸ್ಥಿತಿಯಿಂದೆಗೃ । ಹಸ್ತನುವಾನ । ಪ್ರಸ್ಥನುಮಾನಿಲ್ಲಿ। ಸ್ವಸ್ಥನಾಗಿರ್ದನೆ॥೧॥ ಬಹುಕಾಲವುನಿಜ । ಮಹಿಳೆಯೊಡನೆ ನಾನೀ । ಗಹನದೆಮುದದಲಿ । ವಿಹರಿಸಿದೆನೋ ನಾಂ ॥೨॥

† ರಾಗ ॥ ಜುಂಜೋಟಿ ॥ ಆದಿ ॥

ಇದನೆಂತು ನಾಂಸೈರಿಸುವೆನು । ಸುದತೀ। ವಿಯೋಗ । ವೇಗವ ॥ ಪ ॥ ಕಟಕಟವೀಪಂಚ । ವಟಿಯುನುನೋಡಲ್ಕೆ । ಘಟಕುಚೆಯ ಸ್ಮೃತಿಮನಕೆ। ಘಟಿಸುವದೆಂತು ॥೧॥ ಆರಸಿಯುಸುಶೀಲ । ವರಿಯದ ಜನಂಗ। ಳೊರೆದರೆ ನಾಂ । ತೊರೆವುದೆ ಹಾ ॥ ೨ ॥ ಪರಿಪರಿಯಾಗಿರ್ಪ । ಪರಿಚಿತ ವನಾಳಿ । ನಿರುಕಿಸಲು । ಮರುಗಿಪುದು ಮನವ ॥ ೩ ॥

ಶಂಬೂಕ—(ಪ್ರವೇಶಿಸಿ) ಮಹಾರಾಜನೆ ಅಗಸ್ತ್ಯ ಮಹರ್ಷಿಗಳು ನನ್ನ ಮುಖದಿಂದ ನಿನ್ನ ಆಗಮನವನ್ನು ಕೇಳಿ ನಿನಗೆ ಹೀಗೆ ಆಜ್ಞಾಪಿಸಿರುವರು. ವಾತ್ಸಲ್ಯವತಿಯಾದ ಲೋಪಾಮುದ್ರೆಯೂ ಮತ್ತು ಆಶ್ರಮ ನಿವಾಸಿಗಳೂ ನಿನ್ನಾಗಮನವನ್ನೇ ನಿರೀಕ್ಷಿಸುತ್ತಿರುವರು. ಆದ್ದರಿಂದ ಆಶ್ರಮಕ್ಕೆ ಬಂದು ನಮ್ಮನ್ನು ಸಂಭಾವಿಸಿ ಅನಂತರ ಅಶ್ವಮೇಧಕ್ಕೆ ಸಿದ್ಧವಾಗುವದೆಂದು.

ರಾಮ—ಪೂಜ್ಯರು ಅಪ್ಪಣೆ ಕೊಡಿಸಿದಂತೆಯೇ ಆಗಲಿ.

ಶಂಬೂಕ—ಹಾಗಾದರೆ ಪುಷ್ಪಕವನ್ನು ಇತ್ತ ತಿರುಗಿಸಬೇಕು.

* ರಾಮ—ಪೂಜ್ಯವಾದ ಪಂಚವಟಿಯೆ ಗುರುವಚನದ ನಿರ್ಬಂಧದಿಂದುಂಟಾದ ರಾಮನ ಅತಿಕ್ರಮಣವನ್ನು ಕ್ಷಣಕಾಲ ಕ್ಷಮಿಸು.

ಶಂಬೂಕ—ಎಲೈ ಮಹಾರಾಜನೆ ನೋಡುನೋಡು.

ಕಂ॥ ಕುಹರದೆ ಘುಘುಳಿಸುತ್ತಂ ।
ಬಹ ಗೋದಾವರಿಯ ಜಲನೆ ಮೆರೆವದ್ರಿಗಳಂ ॥
ಅಹಹಾ ಸರಸ್ಸರಾಪತಿ ।
ಬಹುಳಿತಕಲ್ಲೋಲವಹ ಸರಿತ್ಸಂಗಮಮಂ ॥

ಎಂದು ಹೋದರು.

→ ದ್ವಿತೀಯಾಂಕ ಸಂಪೂರ್ಣಂ. ←

---

* ರಾಗ ॥ ಸುರುಟಿ ॥ ರೂಪಕ ॥

ಪಂಚವಟಿ ಮುನಿನಿಕರಸ । ಮುಂಚಿತೆಮಹಾ ॥ ಪ ॥ ಶರಧಿಯನಾಚಮನಗೈವ । ಪರಮಮಹಿಮರು । ಬರುವದೆಂದುಪೇಳಿದ । ವರಮುನೀಂದ್ರರು॥೧ ಗುರುಜನೋಪದೇಶದೆಗೈ । ದಿರುವ ರಾಮನ । ಪಿರಿದತಿ ಕ್ರಮವಸೈ । ಸಿರುನೀನೀಕ್ಷಣ ॥೨॥ ಆಗುರುಗಳ ಸನ್ನಿಧಿಗನುರಾಗದಿಂದಲಾಂ । ಪೋಗಿಬರುವೆ ನೀಗಸುಜನಪೂಗಸನ್ನುತೆ ॥ ೩ ॥

ಮೂರನೆಯ ಅಂಕ

(ತಪಸೆ ಮುರಳೆ ಎಂಬ ನದಿಗಳ ಪ್ರವೇಶ)

*ತಪಸೆ—ಎಲೌ ಪೂಜ್ಯಳೆ ಅದೇನು ವಿಷಯವನ್ನು ಹೇಳುವುದಕ್ಕೆ ಕಳುಹಿಸಿದಳು.

†ಮುರಳೆ—ನಿನಗೂ ತಿಳಿದಿರುವದಷ್ಟೆ. ಶ್ರೀರಾಮ ಕಾಂತೆಯನ್ನು ತೊರೆದದ್ದು ಮೊದಲುಗೊಂಡು.

ಕಂ|| ಅತಿಗಾಂಭೀರ್ಯಾ |
ನ್ವಿತನಹ ಕತದಿಂದೆ ಬಹಿಃಪ್ರಕಾಶವಲ್ಲದಧೀರರೋ ||
ದ್ಧತರಾಮನ ಶೋಕಭರಂ |
ಕ್ಷಿತಿಯೊಳ್ಪುಟಪಾಕಕೆಣೆಯೆನಿಪ್ಪುದು ಕೇಳೌ ||

ಆದ್ದರಿಂದ ಇಷ್ಟಜನಕ್ಕೆ ಬಂದ ಕಷ್ಟದಿಂದುಂಟಾದ ದುಃಖಪರಂಪರೆಯಿಂದ ಪರಿಕ್ಷೀಣನಾದ ಆ ರಾಮನು ಈಗ ಅಯೋಧ್ಯೆಯನ್ನು ಕುರಿತು ಹೊರಡುವನು. ಆತನಿಗೆ ಪೂರ್ವದಲ್ಲಿ ಸೀತೆಯೊಡನೆ ವಿಹರಿಸಿದ ಪ್ರದೇಶಗಳನ್ನು ಕಂಡಾಗ ಏನವಸ್ಥೆಯುಂಟಾಗುವದೋ ?

---

* ರಾಗ|| ಶಂಕರಾಭರಣ|| ಏಕತಾಳ||

ತಮಸೆ—ಈಗಳೇತಕೆ ಬಲುತರಳೆ। ಯಾಗಿಹೆಹೇಳೆನ್ನೊಳುಮುರಳೆ ||ಪ||

†ಮುರಳೆ—ಕೇಳೌನನ್ನಿರವನು ತಮಸೆ। ಪೇಳುವೆನಾಂನಿರ್ಮಲಸುರಸೆ। ಕಳುಹಿಸಿದಳು ಸದ್ಗುಣಭದ್ರೆ। ಚಂದದೊಳೆನ್ನನು ಲೋಪಾಮುದ್ರೆ ||೧||

*ತಮಸೆ—ಎಲ್ಲಿಗೆತಾಂಕಳುಹಿಸಿದಳುನಿನ್ನ। ಸೊಲ್ಲಿಸುನೀನಿಲ್ಲಿಯೆಮುನ್ನ ||

†ಮುರಳೆ—ಪಾವನೆಯಹಗೋದಾವರಿಗೆ।ಈವಿಷಯವಪೇಳಲ್ಕೆನಗೆ ||೨||

ಆದ್ದರಿಂದ ಎಲೌ ಪೂಜ್ಯೆಯಾದ ಗೋದಾವರಿಯೆ ನೀನು ಸಾವಧಾನಳಾಗಿ ನಿನ್ನ ತಂಪಾದ ತರಂಗಗಳಿಂದ ರಾಮಭದ್ರನನ್ನು ಸಂತೈಸುವದೆಂದು ಹೇಳುವುದಕ್ಕೆ ಕಳುಹಿಸಿದಳು.

ತಮಸೆ—ಸ್ನೇಹಕ್ಕೆ ಸಮಯದಲ್ಲಿ ಅನುಕೂಲಪಡಿಸುವುದೇ ಯುಕ್ತವಾದದ್ದು. ರಾಮಭದ್ರನ ಜೀವನೋಪಾಯವಾದರೋ ಸನ್ನಿಹಿತವೇ ಆಯಿತು.

ಮುರಳೆ—ಅದು ಹ್ಯಾಗೆ.

ತಮಸೆ—ಕೇಳು ವಾಲ್ಮೀಕಿ ಯ ಆಶ್ರಮದ ಬಳಿ ಬಿಟ್ಟು ಲಕ್ಷ್ಮಣನು ಹಿಂತಿರುಗಿ ಹೋದಮೇಲೆ ಸೀತೆಯು ಪ್ರಸವವೇದನೆಯನ್ನು ಸೈಸಲಾರದೆ ಗಂಗೆಯಲ್ಲಿ ಬಿದ್ದಳು. ಬಿದ್ದಕೂಡಲೆ ಅವಳ ಮಕ್ಕಳನ್ನು ಗಂಗೆಯು ಆ ವಾಲ್ಮೀಕಿಗಳಿಗೆ ಸಮರ್ಪಿಸಿದಳು. ಈಗ ಶಂಬೂಕ ವೃತ್ತಾಂತದಿಂದಿಂದ ಜನಸ್ಥಾನಕ್ಕೆ ಬಂದ ರಾಮಭದ್ರನ ಆಗಮನವನ್ನು ಸರಯೂ ನದಿಯ ಮುಖದಿಂದ ಕೇಳಿದ ಭಾಗೀರಥಿಯು ಸೀತಾ ಸಮೇತಳಾಗಿ ಗೋದಾವರಿಯನ್ನು ನೋಡುವುದಕ್ಕೆ ಬಂದಳು.

ಮುರಳೆ—ಪೂಜ್ಯಳಾದ ಭಾಗೀರಥಿಯು ಚನ್ನಾಗಿ ಯೋಚಿಸಿದಳು. ಆದರೆ ಸೀತಾದೇವಿಯು ರಾಮಭದ್ರನನ್ನು ಸಂತೈಸುವುದು ಹ್ಯಾಗೆ.

ತಮಸೆ—ಭಾಗೀರಥಿಯು ಸೀತಾದೇವಿಯುನ್ನು ಕುರಿತು ಹೀಗೆ ಹೇಳಿದಳು. ಎಲೌ ವತ್ಸೆ ಈಗಲಾದರೋ ಆಯುಷ್ಮಂತರಾದ ಕುಶಲವರಿಗೆ ದ್ವಾದಶವರ್ಷ ಸಂಖ್ಯಾಮಂಗಳ ಗ್ರಂಥಿಯು ಕಟ್ಟಲ್ಪಡುವುದಾದ್ದರಿಂದ ಮಾವನಾಗಬೇಕಾದ ಸೂರ್ಯನನ್ನು ಸ್ವಹಸ್ತದಿಂದ ಕೊಯ್ದ ಪುಷ್ಪಗಳಿಂದ ಪೂಜಿಸು. ಭೂತಳದಲ್ಲಿ ಸಂಚರಿಸುವ ನಿನ್ನನ್ನು ನನ್ನ ಪ್ರಭಾವದಿಂದ ವನದೇವತೆಗಳೂ ಕೂಡ ಕಾಣದಿರುವರು. ಇನ್ನು ಮನುಷ್ಯರ ಮಾತೇನು. (ಎಂದು ಹೇಳಿದಳು)

ಮುರಳೆ—ನಾನೂ ಕೂಡ ಈ ವೃತ್ತಾಂತವನ್ನು ಲೋಪಾಮುದ್ರೆಗೆ ತಿಳಿಸು ವೆನು. ರಾಮಭದ್ರನೂ ಕೂಡ ಬಂದೇ ಬಂದನೆಂದು ಊಹಿಸುವೆನು.

*ತಮಸೆ—

ಅಯ್ಯೋ-ಕಂ|| ತೊಟ್ಟಂ ಚಿವುಟಿದ ಚಿಗುರೆನೆ |
ದಿಟ್ಟಿಗೆತೋರ್ಪೀಕೆ ಯೊಡಲನೀಘನಶೋಕಂ ||
ಸುಟ್ಟಪುದು ಶರತ್ಸಮಯದೆ |
ಹುಟ್ಟಿದ ಸೆಕೆ ಸುಡುವ ತೆರದೆ ಕೇದಗೆಯೆಸಳಂ ||

(ಎಂದು ತೆರಳುವರು)

(ಇಂತು ವಿಷ್ಕಂಭವು)

ತೆರೆಯಲ್ಲಿ—ಪ್ರಮಾದವು. ಪ್ರಮಾದವು.

(ಪುಷ್ಪಾಪಚಯ ನಿರತೆಯಾದ ಸೀತೆಯು ಕರುಣದೊಡನೆ ಕೇಳುತ್ತಾ ಪ್ರವೇಶ)

ಸೀತೆ—ಆಃ ನನ್ನ ಪ್ರಿಯಸಖಿಯಾದ ವಾಸಂತಿಯು ಮಾತನಾಡುವಂತಿದೆ.

†ತೆರೆಯಲ್ಲಿ—

ಸೀತೆ—ಆಯಿತು ಅದಕ್ಕೇನು.

§ತೆರೆಯಲ್ಲಿ—

---

* ರಾಗ|| ನಾದನಾಮಕ್ರಿಯ|| ||

ಬರುವಳುಬನಕೆ| ಧರಣೀಕನ್ಯಕೆ| ಕರುಣಾರಸದಕಳೇ| ವರದವೋಲಿಕೆ||ಪ||
ಆಲೋಲಕಬರೀ । ಜಾಲಕೆ ನಿಬರೀ । ಸಾಲಕೆಪಾಂಡುಕಪೋಲಫಲಕೆ ||೧||
ತನುಪಾಂತವಿರಹ । ವ್ಯಥೆಯುಂಬೊಲಹಹಾ | ಇನನಗಲಿದಕೋಕಿ । ಗೆಣೆ ಯಾದಜಾನಕಿ ||೨||

† ರಾಗ|| ಚಾಲಕ' || ||

ಧರಣಿಜೆ ತನ್ನಯ ಕರದೊಳೆಸಲ್ಲಕಿ । ತರುಪಲ್ಲವವಿತ್ತು । ಕರಿಕಲಭವನಾವುದ ನಿಗೆ ಪೂರ್ವದಿ ಪರಿಪೋಷಿಸಿದಳೊ ತಾಂ ||೧||
§ ಸರಸಿಯೊಳದುನಿಜ ಕರಿಣಿಯುಕೂಡುತ । ನೆರೆ । ವಿಹರಿಸುತಿರಲು । ಬರು ತೊಂದುಮಹಾ । ಕರಿಕೆಡಹುತ್ತಿಳೆ ।ಗಿರದಾಕ್ರಮಿಸಿದುದು ||೨||

ಸೀತೆ—(ತ್ವರೆಯಿಂದ ಮುಂದೆನಡೆದು) ಆಹಾ ಆರ್ಯಪುತ್ರನೆ ನನ್ನ ಕುಮಾರನನ್ನು ರಕ್ಷಿಸು. ರಕ್ಷಿಸು. (ಸ್ಮೃತಿಯನ್ನಭಿನಯಿಸಿ ವ್ಯಾಕುಲೆಯಾಗಿ) ಆಃ ತೆಗೆತೆಗೆ ಮೊದಲು ಪಂಚವಟಿಯಲ್ಲಿ ಆರ್ಯಪುತ್ರನೊಡನೆ ವಿಹರಿಸುತ್ತಿದ್ದಾಗ ಆಡುತ್ತಿದ್ದಮಾತುಗಳೇ ಮಂದಭಾಗ್ಯೆಯಾದ ನನ್ನ ಬಾಯಿಂದ ಪುನಶ್ಚ ಹೊರಟವು. ಹಾ ಆರ್ಯಪುತ್ರನೆ (ಎಂದು ಮೂರ್ಛಿಸುವಳು)

ತಮಸೆ—(ಪ್ರವೇಶಿಸಿ) ಎಲೆ ವತ್ಸೆ ಸಂತೈಸಿಕೊ ಸಂತೈಸಿಕೊ. (ಸಂತೈಸುವಳು).

ತೆರೆಯಲಿ—ಎಲೆ ವಿಮಾನರಾಜನೆ ಇಲ್ಲಿ ನಿಲ್ಲು.

*ಸೀತೆ—(ಕೇಳಿ ಎಚ್ಚತ್ತು)

ತಮಸೆ—ಎಲೆ ವತ್ಸೆ ಇದೇನು? ಗೊತ್ತಿಲ್ಲದ ದನಿಯನ್ನು ಕೇಳಿ ಮೇಘಧ್ವನಿಯನ್ನು ಕೇಳಿದ ನವಿಲಿನಂತೆ ನಲಿಯುವೆ.

†ಸೀತೆ—

ತಮಸೆ—ಇದ್ದೀತು. ಶಂಬೂಕನನ್ನು ದಂಡಿಸುವುದಕ್ಕೋಸ್ಕರ ಇಕ್ಷ್ವಾಕುಕುಲಜನಾದ ಮಹಾರಾಜನು ಜನಸ್ಥಾನದಲ್ಲಿಗೆ ಬಂದಿರುವನೆಂದು ಕೇಳಿರುವೆನು..

---

* ರಾಗ॥ ಬೇಹಾಗ್॥ ಆದಿತಾಳ॥

ಎಲ್ಲಿಂದಲಾಯಿತೀ । ಸೊಲ್ಲಿನದನಿಯು ॥ಪ॥ ನೀರನುತಾಳಿದ । ನೀರದದತಿಗಂಭೀರನಿಸ್ವನದೋಲ್ ॥೧॥ ಕಿವಿಗೆತಾಂಬೀಳ್ದಮಾ । ತ್ರವೆನನಗಿಂತುಜೀ । ವವಸಂತೈಸಿದುದು ॥೨॥

† ರಾಗ॥ ॥

ಆರ್ಯೆಯಿದೇಕಿಂ । ತಾಡುವೆ ನುಡಿದವ ನಾರ್ಯಪುತ್ರನೆತಾಂ ॥೩॥

ಸೀತೆ—ಆಃ ದೈವಯೋಗದಿಂದ ಆ ಮಹಾರಾಜನ ರಾಜಧರ್ಮಕ್ಕೆ ಕೊರತೆ ಯುಂಟಾಗಲಿಲ್ಲವಲ್ಲ. ಇದೇ ಬೇಕಾದದ್ದು.

ತೆರೆಯಲ್ಲಿ—ಕಂ॥ ತರುಮೃಗಗಳುಬಂಧುಗಳಾ ।
ಗಿರಲಾವೆಡೆಯಲ್ಲಿ ಕಾಂತೆಯೊಡನಿರ್ದೆನೊನಾಂ ॥
ಸುರುಚಿರವಾದಾ ಗೋದಾ ।
ವರಿಯುಡೆಮುಸುನಿರ್ಝರಾದ್ರಿತಟಗಳಿವಲ್ತೆ ॥

* ಸೀತೆ—

ತಮಸೆ—ಎಲೆ ವತ್ಸೆ ಸಂತೈಸಿಕೋ ಸಂತೈಸಿಕೊ.

† ತೆರೆಯಲ್ಲಿ—

ಸೀತೆ—(ಸಂತೈಸಿಕೊಂಡು) ಅಹಾ ಇದೇನಿದು !

$ ತೆರೆಯಲ್ಲಿ—

(ಎಂದು ಮೂರ್ಛಿಸುವನು)

---

* ರಾಗ ॥ ಚಾಲಕ್ ॥

ಬೆಳಗಿನ ಶಶಿಮಂಡಲಮೆಂಬಂದದಿ ಬಿಳಿಪಾದಾಕೃತಿಯಿಂ । ಬಲು ಬಡವಾಗಿರ್ದರು ಗಾಂಭೀರ್ಯವನುಳಿಯದರಿಂದಮೆ ತಾಂ ॥ ೧ ॥ ತಿಳಿಯಲ್ತಕ್ಕವನೆನಿಸುತ್ತಲಿ ಕಂ । ಗೊಳಿಪನೆನುತ್ಪತಿಯು । ಮುಳುಗಿದೆವೋಹಾಂಬುಧಿಯೊಳು ಹಿಡಿಹಿಡಿಚಳಕದೊಳೆನ್ನನು ನೀಂ ॥ ೨ ॥ (ತಮಸೆಯನ್ನು ತಬ್ಬಿಕೊಂಡು ಮೂರ್ಛಿಸುವಳು).

† ರಾಗ ॥ ಕಮಾಚು ॥ ರೂಪಕ ॥

ಪಂಚವಟೀದರ್ಶನದಿಂ । ಸಂಚಲಿಸಿತು ಮನವೀ ॥ ಪ ॥ ಒಳಗಡಗಿರ್ದೀಗ ಸಮು । ಜ್ವಲಿಪದುಃಖಶಿಖಿಯು । ಬಲುವಿೂರೆಯುಂತಿರೆ ಮೋಹವಿದೊಳಕೊಳುವದು ಬಗೆಯಾ ॥೧॥(ಹಾ ಪ್ರಿಯೆ. ಜಾನಕಿ).

$ ರಾಗ ॥ ಹಿಂದೂಸ್ಥಾನಿ ॥ ಬೇಹಾಗ್ ॥ ಆದಿ ॥

ಹಾಹಾಪ್ರಿಯೆ । ವೈದೇಹಿ ॥ ಪ ॥ ಹಾ ದಂಡಕಾವನ । ವಾಸಪ್ರಿಯಸಖಿ । ಆದರಿಪುದೆನ್ನಸುಮುಖಿ । ಹಾದೇವಿಜಾನಕಿ ॥

‡ ಸೀತೆ—ಹಾಹಾ ಪೂಜ್ಯೆಯಾದ ತಮಸಾದೇವಿ ಆರ್ಯಪುತ್ರನನ್ನು ಬದುಕಿಸು ಬದುಕಿಸು.

(ವಂದಿಸುವಳು).

ತಮಸೆ—ಕಂ|| ಕ್ಷೋಣಿಯೊಳ್ ನೀನೆಲಾಕ |
ಲ್ಯಾಣಿ ಜಗತ್ಪತಿಯ ನೀನೆಬದುಕಿಸು ನಿನ್ನೀ ||
ಪಾಣಿಸ್ಪರ್ಶದೆ ಬಗೆಯು |
ಲ್ಪ್ರಾಣಪ್ರಿಯಮಲ್ತೆ ನಿನ್ನ ಹಸ್ತಸ್ಪರ್ಶಂ ||

ಸೀತೆ—ಪೂಜ್ಯೆಯೆ ನೀನು ಹೇಳಿದಹಾಗೆಯೇಆಗಲಿ (ಎಂದು ಹೋಗುವಳು).

(ಸೀತೆಯಿಂದ ಸಂಸ್ಪೃಷ್ಟನಾಗಿ ಉಸಿರುಕೂಡಿದ ರಾಮನಪ್ರವೇಶ)

ಸೀತೆ—(ಸ್ವಲ್ಪ ಸಂತೋಷದಿಂದ ಆತ್ಮಗತಂ) ಅಹ! ತ್ರಿಲೋಕಪತಿಯಾದ ನನ್ನ ಪತಿಯ ಜೀವವು ಪುನಶ್ಚ ಬಂದು ಕೂಡಿಕೊಂಡಂತೆ ತಿಳಿಯುವೆನು.

ರಾಮ—ಅಹ! ಇದೇನು—

ಕಂ|| ಸುರತರು ಪಲ್ಲವರಸವಂ |
ಸುರಿದರೊಚಂದ್ರಮನಹಿಂಡಿಸುಧೆಗರೆದರೊಮೇ ||
ಣೆರೆದರೊ ತಪ್ತ್ರಸುವನಾ |
ದರಿಸುವ ಸಂಜೀವನೌಷಧಿಯನೆನ್ನರ್ದೆಯೊಳ್ ||

ಕಂ|| ಸಂತಾಪಜನಿತ ಮೂರ್ಛೆಯು |
ತಾಂತೊಲಗಿಸುತೆನ್ನನಿಂತುಸಂತೈಸಿದುದಾ ||
ಕಾಂತಾಸ್ಪರ್ಶವೆ ನಿಶ್ಚಯು |
ಮಂತಲ್ಲದೊಡಿಂತು ಮನಕೆ ಸಂತಸವಹುದೇ ||

---

‡ ರಾಗ || ಧನಾಸರಿ || ತ್ರಿಭಾಪು ||

ಹಾಹಾಹಾ ಮಂದಭಾಗ್ಯಳಾದೆನ್ನನು। ಹಂಬಲಿಸುತಲಕ್ಕಟ || ಪ || ಮೋದ ಮುದ್ರಿತನೇತ್ರ। ನಾಗುತಬೀಳ್ದನು। ಓಹೊ ಭೂಮಿಯಮೇ | ಲೆಗತಿನ ನಗೆ || ೧ ||

ಸೀತೆ—(ಭಯಕರುಣಗಳಿಂದ ಕೂಡಿ) (ಸ್ವಲ್ಪ ಹಿಂಚಿಗಿದು) ಇಷ್ಟಕ್ಕೇ ನಾನೀಗ ಬಹಳ ಹರ್ಷಪಡುವೆನು.

ರಾಮ—(ಕುಳಿತುಕೊಂಡು) ವಾತ್ಸಲ್ಯವುಳ್ಳ ಸೀತಾದೇವಿಯಿಂದ ನಾನು ಸಂತೈಸಲ್ಪಟ್ಟೆಸಲ್ಲವೆ.

ಸೀತೆ—ತೆಗೆತೆಗೆ ಆರ್ಯಪುತ್ರನು ನನ್ನನ್ನು ನೋಡುತ್ತಿರುವನು. ಎಲೌ ಪೂಜ್ಯಳಾದ ತಮಸಾದೇವಿಯೆ ನಡೆನಡೆ ಹೋಗೋಣ. ಆರ್ಯಪುತ್ರನು ನನ್ನನ್ನು ಕಂಡರೆ ನನ್ನ ಅಜ್ಞೆಯನ್ನು ಪಡೆಯದೆ ಏತಕ್ಕೆ ಬಂದೆಯೆಂದು ನನ್ನಮೇಲೆ ಕೋಪಿಸಿಕೊಂಡಾನು.

ತಮಸೆ—ಎಲೆ ವತ್ಸೆ ಇದೇನು ? ಮರತೆಯಾ ? ಭಾಗೀರಥಿಯ ವರಪ್ರಭಾವದಿಂದ ವನದೇವತೆಗಳಿಗೂ ಕಾಣಿಸಿಕೊಳ್ಳದಿರುವೆಯಲ್ಲವೆ ?

ಸೀತೆ—ಹೌದು ಹೌದು ಮರೆತಿದ್ದೆನು.

*ರಾಮ—

ಸೀತೆ—(ಕೋಪಗದ್ಗದದಿಂದ ಕೂಡಿ) ಆರ್ಯಪುತ್ರನೆ ಈ ಮಾತು ನಿನಗಿನ್ನು ತಕ್ಕದ್ದಲ್ಲ. (ಕಂಬನಿದುಂಬಿ) ಅಥವಾ ವಜ್ರದಂತೆ ಕಠಿಣಳಾದ ನಾನು ಜನ್ಮಾಂತರದಲ್ಲಿಯೂ ಕಾಣಲಶಕ್ಯವಾದರೂ ಮಂದಭಾಗ್ಯಳಾದ ನನ್ನನ್ನು ಹಂಬಲಿಸುವ ಆರ್ಯಪುತ್ರನಮೇಲೆ ಯಾತಕ್ಕೆ ನಿರ್ದಯಳಾಗಲಿ. ಈತನ ಹೃದಯವನ್ನು ನಾನು ಬಲ್ಲೆನು. ನನ್ನ ಹೃದಯವನ್ನು ಈತನು ಬಲ್ಲನು.

ರಾಮ—(ಸುತ್ತಲೂ ನೋಡಿ) ಹಾ ಇದೇನು ಯಾರೂ ಇಲ್ಲವಲ್ಲ.

ಸೀತೆ—ಎಲೌ ಪೂಜ್ಯಳಾದ ತಮಸಾದೇವಿಯೆ ನಿಷ್ಕಾರಣವಾಗಿ ನನ್ನನ್ನು

---

* ರಾಗ ॥ ಸಾಮ ॥ ಆದಿ ॥

ಆಹಭೂಮಿಕುಮಾರಿ ॥ ಪ ॥ ಮೋಹಸ್ಸೈಸೆಲಾವಣ್ಯಾಹರಿ । ಅಕಟವೈದೇಹಿ ಕೋಮಲಾಂಗಿ ॥ ೧ ॥ ದೇವಿ ದಂಡಕಾರಣ್ಯಸವಿಹರಿ । ಸುಮುಖಿಮದ್ಗೇಹ ಕಲ್ಪಶಾಖಿ ॥ ೨ ॥

ಬಿಟ್ಟಿದ್ದವನಾದರೂ ಈತನನ್ನು ನೋಡಿ ನನ್ನ ಮನಸ್ಸು ಕರಗಿ ಬಹಳ ಕಳವಳಪಡುತ್ತಿರುವದು.

ತಮಸೆ—ಎಲೆ ವತ್ಸೆ ನಿನ್ನ ಮನಸ್ಸನ್ನು ನಾನು ಬಲ್ಲೆನು.

ಕಂ॥ ಉಳಿದನಕಾರಣಮೆನ್ನುತ ।
ಮುಳಿದಿದ್ದರ್ಂ ನಿನ್ನ ಸದಯಮಾದೀ ಹೃದಯಂ ॥
ತೊಳಲುತಿರ್ಪ ನಿಯನಹಂ ।
ಬಲವಿಲ್ಲದೊಡನೆ ಕರಗಿ ನೀರಾಯಿತ್ತೀಗಳ್ ॥

*ರಾಮ—

ಸೀತೆ—ಆಹ ಆರ್ಯಪುತ್ರನ ಮಾತುಗಳನ್ನು ಕೇಳಿದ ನನ್ನ ಮನಸ್ಸು ಕರಗಿ ನೀರಾಯ್ತಲ್ಲಾ.

†ರಾಮ—

ತೆರೆಯಲ್ಲಿ ರಾಗ॥ಧರಣಿಜಿತನಯಾ (ಪೂರ್ವೋಕ್ತವಾಗಿಹೇಳುವುದು)

ರಾಮ—(ಕರುಣ ಕಳವಳದಿಂದ) ಆ ವತ್ಸನಿಗೆ ಏನಾಯಿತು

ತೆರೆಯಲ್ಲಿ—ರಾಗ॥ ಸರಸಿಯೊಳದುನಿಜ (ಪೂರ್ವದಂತೆಯೆ)

ಸೀತೆ—ಈ ದುಷ್ಟಗಜವನ್ನಾಕ್ರಮಿಸುವರ್ಯಾರೂ ಇಲ್ಲವಲ್ಲಾ.

ರಾಮ—ನನ್ನ ಪ್ರಿಯಳ ಪುತ್ರನನ್ನು ಆಕ್ರಮಿಸುವ ದುಷ್ಟ ಗಜವೆಲ್ಲಿ ಯೆಲ್ಲಿ (ಏಳುವನು)

‡ವಾಸಂತಿ—(ಸಂಭ್ರಾಂತಳಾಗಿ ಪ್ರವೇಶಿಸಿ) ಇದೇನು ಪೂಜ್ಯನಾದ ರಘುಪತಿಯು ಇಲ್ಲಿರುವನು.

---

* ರಾಗ ॥ ಧನಾಸರಿ ॥

ಎಲ್ಲಿರುವೇವಲ್ಲಭೆನಿ ॥ ಪ ॥ ದೇವಿಯೆನಿನ್ನಕೈ । ದಾವರೆಸೋಕೆನ್ನ । ಜೀವವ ಕಂಪಿಪುದೀಗಳ್ ॥ ೧ ॥

† ರಾಗ.

ಎಲ್ಲಿನಿಯಳು ನಾ । ನೆಲ್ಲಿ ಮನೋಭ್ರಮೆ । ಯುಲ್ಲದೆರಾಮಭದ್ರನು ॥೨॥ ಅಗಳು ನಿನ್ನನಾಂ । ಕೂಗುವಭ್ಯಾಸದಿ । ನೀಗಳು ಕೂಗಿದೆ ನಲ್ಲದೆ ॥ ೩ ॥

‡ ರಾಗ ॥ ಮುಖಾರಿ ॥ ಆದಿತಾಳ ॥

ಬಂದುನಿಂದ ಪೂರ್ಣಕಾಮಂ । ಸುಂದರಾಂಗ ರಾಮಂ ॥ ಪ ॥ ಕಂದಳಿತಗುಣೈಕಧಾಮಂ । ಕರುಣಾಭಿರಾಮಂ ॥ ೧ ॥ ಬಿಸಿಲಿಂದವಾತಪೋತಂ । ವಾಸ

ಸೀತೆ—ಇದೇನು ನನ್ನ ಪ್ರಿಯಸಖಿಯಾದ ವಾಸಂತಿ ಬಂದಳು.

ವಾಸಂತಿ--ಎಲೈ ಪೂಜ್ಯನೆ ನಿನಗೆ ಜಯವಾಗಲಿ.

ರಾಮ—(ಚನ್ನಾಗಿ ನೋಡಿ) ಓಹೋ! ದೇವಿಗೆ ಪ್ರಿಯಸಖಿಯಾದ ವಾಸಂತಿ ಇವಳು

ವಾಸಂತಿ—ಆರ್ಯನೆ ನಡೆಸಡೆ ದೇವಿಗೆ ಪುತ್ರಪ್ರಾಯವಾದ ಮರಿಯಾನೆಯನ್ನು ಸಂಭಾವಿಸುವೆ.

(ರಾಮನೂ, ಸೀತೆಯೂ, ತಮಸೆಯೂ ಹೊರಡುವರು)

ವಾಸಂತಿ—(ತೋರಿಸಿ) ಆರ್ಯನೆ ಜಯಶಾಲಿಯಾಗಿ ದೇವಿಯ ಮರಿಯಾನೆಯನ್ನು ನೋಡಿ ಸಂತೋಷಪಡುವನಾಗು.

ರಾಮ—ಎಲೈ ಆಯುಷ್ಮಂತನೆ ವಿಜಯಿಯಾಗು. ಎಲೆ ದೇವಿ ದೈವಯೋಗದಿಂದ ವರ್ಧಿಸುವೆಯಾ.

ಕಂ|| ಲಲನೆನಿಜಕರ್ಣಪೂರೋ |
ತ್ಪಲಮಂ ಮೊಳೆವಲ್ಲೊಳೆವ ನಿನ್ನೀಪುತ್ರಂ ||
ಗೆಲಿದು ಮದಕರಿಗಳಂ ತ |
ನ್ನೆಳೆವರೆಯೊಕ್ಕ ತಕ್ಕ ಕಾರ್ಯಕೆಡೆಯಾದುದುತಾಂ ||

ಸೀತೆ—ಎಲೌ ಪೂಜ್ಯೆಯಾದ ತಮಸಾದೇವಿಯೆ ಇದಂತೂ ಹೀಗಾಯಿತು. ಕುಶಲವರು ಈವರಿಗೆ ಹ್ಯಾಗಾಗಿರುವರೋ ಕಾಣೆ.

ತಮಸೆ—ಇದರಂತೆಯೆ ಅವರೂ ಕೂಡ ಬೆಳವಳಿಕೆಯನ್ನು ಹೊಂದಿ ಶೋಭಿಸುತ್ತಿರುವರು.

ನಾಸಮೇತಂ। ಸೂಸಲೀಪ್ರಸೂನಜಾತಂ। ಸೌಸವಂಗಳಂತಾಂ॥ ೨ ॥ ನೀಡಲಿನ್ನು ವೃಕ್ಷಜಾಲಂ। ನಾಡೆನಿಜಫಲಂಗಳಂ। ಆಡಲೇನಿದೇಸುಕಾಲಂ। ಪಾಡಲೀಗ ಕೋಕಿಲಂ ॥ ೩ ॥

*ಸೀತೆ—

ತಮಸೆ—ಎಲೈ ವತ್ಸೆ ನಾವು ಪಡೆದದ್ದನ್ನು ಯಾರಿಗೆ ಕೊಡೋಣ ಹೇಳು.

†ಸೀತೆ—

ತಮಸೆ—ಎಲೈ ವತ್ಸೆ ದೇವತಾನುಗ್ರಹದಿಂದ ನಿನ್ನ ಕೋರಿಕೆ ಸಿದ್ಧಿಸಲಿ,

ಸೀತೆ—ಎಲೌ ತಮಸಾದೇವಿಯೆ ಈ ಪುತ್ರಸ್ಮರಣೆಯಿಂದ ಎದೆ ತೊರೆದು ಸುರಿವ ಸ್ತನ್ಯದಿಂದ ಕೂಡಿ ಪುತ್ರವಂತನಾದ ಪತಿಯ ಸನ್ನಿಧಿಯನ್ನು ಹೊಂದಿ ಕ್ಷಣಮಾತ್ರ ನಾನು ಸಂಸಾರಿಯಾದೆನು

ತಮಸೆ—ಈ ವಿಷಯದಲ್ಲಿ ಹೇಳತಕ್ಕದ್ದೇನು ಮಕ್ಕಳಲ್ಲವೆ ಮನಸ್ಸನ್ನು ಸೆಳೆಯುತಕ್ಕವರು.

ಕಂ॥ ಒದವಿದನುರಾಗ ಸಂಬಂ ।
ಧದೆ ದಂಪತಿಗಳ ಮನಕ್ಕೆ ಮಕ್ಕಳೆತಾಂ ಸೌ ॥
ಖ್ಯದ ಗಂಟು ಪೇಳ್ವುದೇ ನಿ ।
ನ್ನದು ತಾಂ ಸಲೆಬಂಧಿಸಿಪ್ಪುದವನೀತಲದೊಳ್ ॥

ವಾಸಂತಿ—ಆರ್ಯನೆ ಇತ್ತನೋಡಬೇಕು.

---

* ರಾಗ ॥ ಭೈರವಿ ॥ ತ್ರಿಪುಟ ॥

ಆಹಾ ತಮಸೆ ಅಳಲ ಸೈಸೆ ॥ ಪ ॥ ದೇಹವೆತ್ತಲಿಹದನ್ನೆಸೆ ॥ ಅ ॥ ಪತಿಯ ನ್ನಗಲಿ । ಸುತರನ್ನಗಲಿ । ಕ್ಷಿತಿಯುಲ್ಲಿರಲೇಂ । ಹತಭಾಗ್ಯಳುನಾಂ ॥ ೧ ॥ ಹಾಹಾಯನ್ನಂದದಸ್ತ್ರೀಜನರು। ಇಹರೇನಿಳೆಯೊಳ್। ಬಹುಪಾತಕಿನಾಂ॥೨॥

† ರಾಗ ॥ ನಾದನಾಮಕ್ರಿಯ ॥

ಫಲವೇನುಪಡೆದುಮಕ್ಕಳನಾನು ॥ ಪ ॥ ಸ್ಮಿತಮುಕರಂದಾ ನ್ವಿತರಾದೆನ್ನಯ । ಸುತರಾಸ್ಯಕಮಲವ । ಪತಿಚುಂಬಿಸದಮೇಲೆ ॥ ೧ ॥ ಕಿವಿನಿಂಪುಗರದೆನ್ನ । ಕುವರರ್ಕಳಾಡುವ । ಸವಿಮಾತುಗಳನಾತ್ಮ । ಧವನುಕೇಳದಮೇಲೆ ॥ ೨ ॥ ದಟ್ಟಡಿಯಿಕ್ಕುವ । ಪುಟ್ಟಮಕ್ಕಳನೆನ್ನ । ಪಟ್ಟದರಸುಕ । ಣ್ಣೆತ್ತಿನೋಡದ ಮೇಲೆ ॥ ೨ ॥

ಕಂ|| ಕುಣಿಕುಣಿದು ಕಾಲಕೊನೆಯೊಳ್ |
ಮಣಿಮುಕುಟದೊಳೆಸೆವನೆಗೆದ ಸಿಖಿಗರಿಗೆದರು ||
ತ್ರಣಿಯುರದಿಂದೆ ಕದಂಬದೆ |
ಗೆಣೆಯುಳ ಕೂಡುತ್ತೆ ಕೇಕಿಯಿದೋ ಕೂಗಿಡಿಗುಂ ||

ಸೀತೆ—(ಕಣ್ಣೀರಿಂದ ಕೂಡಿ) ಇದೇ ಆ ನನ್ನ ನವಿಲು.

ರಾಮ—ಎಲೈ ವತ್ಸನೆ ಸಂತೋಷಪಡು ಸಂತೋಷಪಡು.

ಕಂ|| ಲೋಲಾಕ್ಷಿಯು ಕರಕಿಸಲಯ |
ತಾಳಕೆ ಸರಿಯಾಗಿ ಕುಣಿಯುತ್ತಿರ್ದಾ ನಿನ್ನಂ ||
ತಾಳಿದವಾತ್ಸಲ್ಯದಿ ನಿಜ |
ಬಾಲನವೋಲ್ ಸ್ಮರಿಪೆನಾಂ ಮಯೂರನೆ ಮನದೋಳ್ ||

ಆಹ ತಿರ್ಯಗ್ಜಾತಿಯೂ ಕೂಡ ಪೂರ್ವ ಪರಿಚಯವನ್ನು ಮರೆಯದಿರುವುದಲ್ಲ.

ಕಂ|| ಅರಸಿ ಬೆಳಸಿದುದೆನುತ್ತಂ |
ಪಿರಿದಾದಭಿಮಾನದಿಂದೆ ದೇವಿಯ ನವಿಲೀ ||
ಪರಿಯುಂ ಕದಂಬತರುವೋಳ್ |
ಹರಿಸಂಬಡುತಿರ್ಪ ದಹಪ ನೆನಪುದಕೆಂತೋ ||

ಸೀತೆ—ಆರ್ಯಪುತ್ರನು ಚನ್ನಾಗಿ ಸ್ಮರಿಸಿಕೊಂಡನು.

ವಾಸಂತಿ—ಆರ್ಯನೆ ಇಲ್ಲಿ ಕುಳಿತುಕೊಳ್ಳಬೇಕು. ಇದೋ ನೀನು ಕಾಂತೆಯೊಡನೆ ಶಯನಿಸಿದ ಕದಳೀವನ ಮಧ್ಯದ ಶಿಲಾತಲವು.

ರಾಮ—ಇಲ್ಲಿವರಿಗೂ ನೋಡಿದೆನು. ಇದನ್ನಂತೂ ನೋಡುವುದೇ ಕಷ್ಟ.

ಸೀತೆ—ಎಲೆ ಸಖಿ ವಾಸಂತಿ ನನಗೂ ಆರ್ಯಪುತ್ರನಿಗೂ ಇದನ್ನು ತೋರಿಸುವುದರಿಂದ ಏನುಮಾಡಿದಹಾಗಾಯಿತು. ಆಹಾ ತೆಗೆತೆಗೆ ಅವನೆ ಆರ್ಯಪುತ್ರನು ಅದೇ ಪಂಚವಟಿಯು ಅವಳೆ ಪ್ರಿಯಸಖಿ ವಾಸಂತಿಯು

ಅವೆ ಅನ್ಯೋನ್ಯಪ್ರಿಯವಾದ ಮೃಗಪಕ್ಷಿಗಳು. ಇವೆಲ್ಲವಂ ನೋಡು ತ್ತಿದ್ದರೂ ಮಂದಭಾಗ್ಯೆಯಳ ಭಾಗಕ್ಕೆ ಯಾವುದೂ ಅಲ್ಲವಾಗಿರು ವುದು. ಆಃ ಲೋಕದ ನಡವಳಿಕೆಯು ಎಂಥಾದ್ದು.

ವಾಸಂತಿ—ಎಲೆ ಸಖಿ ಸೀತೆ ರಾಮನ ಅವಸ್ಥೆಯನ್ನು ನೋಡಿದೆಯಾ.

ಕಂ॥ ಕನ್ನೈದಿಲೆಗಳಪ್ಪೋಲುವ ।
ತನ್ನಂಗದೆ ನಿನ್ನಕಣ್ಗೆ ನಲವಿತ್ತರಸಂ ॥
ಬನ್ನದೆಬಡವಾದೊಡಮೇ
ನೀನು ಕ್ಷಮಿಸಲ್ಕೆ ತಕ್ಕನವನೆ ನಿಜವೆನುತೀತಂ ॥

*ಸೀತೆ—ಎಲೆ ಸಖಿ ನೋಡುವೆನು ನೋಡುವೆನು.

ತಮಸೆ—ಕಂ॥ ಬಾಲೆಭವದೀಯವಿರಹ ।
ಜ್ವಾಲಾಪರಿತಪ್ತನಾದ ಹೃದಯೇಶನನಿಂ ॥
ದೋಲಾಡಿಸುವುದು ಪಾಲಿನ ।
ಕಾಲುವೆಯಂ ಪೋಲ್ವ ನಿನ್ನ ಸ್ನೇಹದ ನೋಟಂ ॥

ರಾಮ—ಬಾ ಸಖಿ ವಾಸಂತಿ ಬಾ ಇಲ್ಲಿ ಕುಳಿತುಕೊ.

ವಾಸಂತಿ—(ಕುಳಿತು) ಎಲೈ ಮಹಾರಾಜನೆ ಕುಮಾರ ಲಕ್ಷ್ಮಣನು ಕ್ಷೇಮ ದಲ್ಲಿರುವನೆ ?

ರಾಮ—(ಕೇಳದವನಂತೆ)

---

* ರಾಗ ॥ ಅಸಾವೇರಿ ॥

ಹಾಹಾದಯಾಶೂನ್ಯವೇ ದೈವವೆ ॥ ಪ ॥ ಈತನೆನ್ನನುಬಿಟ್ಟು । ಪಿತನನಾಂ ಬಿಟ್ಟು । ಪಿತೆರವಿರಹೆಂಬ । ರೀತಿಯನಾಂಬಲ್ಲೆನೆ ಹಾಹಾ ॥ ೧ ॥ ಅರೆನಿಮಿ ಷವುಮೆ । ನ್ನರಸನನಾಂಕಾಣ । ದಿರೆಯುಗವಾದಂತೆ ನರಿಯುವೆನಲ್ಲಾ ॥ ೨ ॥ ಕಡುನೇಹಮುಳ್ಳೆ । ನ್ನೊಡೆಯನಕಣ್ಣೀರ । ನಡುವೆನೋಡುವೆನಾರ್ಗೆ । ಕೊಡುವೆನಾಂಪಡೆದುದ ॥ ೩ ॥

ಕಂ|| ಎಳೆವುಲ್ಲಂ ತಿಳಿನೀರಂ |
ನಲವಿಂ ಪ್ರಿಯೆಕರದೊಳಿತ್ತು ಸಾಕಿದ ಹರಿಣಾ ||
ವಳಿಯುದ ನೀಕ್ಷಿಸೆ ಬರ್ಪುದು |
ಶಿಲೆಯುಮನಿರದಹಹ ನೀರಮಾಡುವದುಃಖ್ಯಂ ||

ವಾಸಂತಿ—ಮಹಾರಾಜನೆ ಕುಮಾರ ಲಕ್ಷ್ಮಣನ ಕ್ಷೇಮವನ್ನು ಕೇಳುತ್ತೀನಲ್ಲವೆ ?

ರಾಮ—(ಸ್ವಗತ) ಮಹಾರಾಜನೆ ಎಂದು ನನ್ನನ್ನು ಕರೆದದ್ದು ಲಕ್ಷ್ಮಣನಲ್ಲಿ ಮಾತ್ರ ಮರುಕದಿಂದ ಈಕೆ ಕುಶಲಪ್ರಶ್ನೆ ಮಾಡಿದ್ದು ನೋಡಿದರೆ ಸೀತಾ ವೃತ್ತಾಂತವು ಈಕೆಗೆ ತಿಳಿದಿರುವಂತೆ ಕಾಣುತ್ತೆ. (ಪ್ರಕಾಶ) ಸಖಿ ವಾಸಂತಿ ಕುಮಾರಲಕ್ಷ್ಮಣನು ಕುಶಲಿಯಾಗಿರುವನು.

ವಾಸಂತಿ—(ದುಃಖಿಸಿ) ಮಹಾರಾಜನೆ ಇದೇತಕ್ಕೆ ಇಷ್ಟು ಕ್ರೂರನಾದೆ ?

ಸೀತೆ—ಎಲೆ ಸಖಿ ವಾಸಂತಿಯೆ ಇದೇತಕ್ಕೆ ನೀನು ಹೀಗಾದೆ. ಆರ್ಯಪುತ್ರನಲ್ಲಿ ಪ್ರಿಯಸಖಿಯಾದ ನಿನಗೆ ಪ್ರಿಯೋಕ್ತಿಯಂಬುವುದು ವಿಶೇಷವಾಗಿರಬೇಕಲ್ಲವೆ.

ವಾಸಂತಿ-ಕಂ|| ನೀನೆನಗೆ ಜೀವಿತಂ ನಯು |
ನಾನಂದಿನಿ ನೀನೆಯೆಂದು ಸವಿಮಾತುಗಳಂ ||
ದೇನುಮನರಿಯದಳನೆ[illegible]ಯಿಸಿ ||
ನೀನವಳಿಗೆ || (ಮುಂದೆಹೇಳುವುದಕ್ಕೆ ಬಾಯಿಬಾರದೆ)
ಹರಹರಾ ಮುಂದಕ್ಕೆ ಹೇಳಿ ಪ್ರಯೋಜನವೇನು.

(ಎಂದು ಮೂರ್ಛಿಸುವಳು)

ರಾಮ—ಎಲೆ ವಾಸಂತಿಯೆ ನೀನು ಹೇಳದೆ ಬಿಟ್ಟದ್ದು ಮೂರ್ಛೆಹೊಂದಿದ್ದು ಸಖಿಯಾದ ನಿನಗೆ ಯುಕ್ತವೆ ಸರಿ. ಸಂತೈಸಿಕೋ ಸಂತೈಸಿಕೊ.

ವಾಸಂತಿ—(ಸಂತೈಸಿಕೊಂಡು) ಮಹಾರಾಜನೆ, ಏತಕ್ಕಿಂಥಾ ಅಕಾರ್ಯವನ್ನು ಮಾಡಿದೆ?

ಸೀತೆ—ಸಖಿ ವಾಸಂತಿ, ಸುಮ್ಮನಿರು ಸುಮ್ಮನಿರು.

ರಾಮ—ಜನಮೆಚ್ಚುವುದಿಲ್ಲವೆಂದು.

ವಾಸಂತಿ—ಜನ ಮೆಚ್ಚುವುದಕ್ಕೆ ಕಾರಣವೇನು.

ರಾಮ—ಕಾರಣವನ್ನು ಆ ಜನವೇ ಬಲ್ಲದೇನೋ.

ತಮಸೆ—ಜನವನ್ನು ಮಹಾರಾಜನು ಚನ್ನಾಗಿ ನಿಂದಿಸಿದನು.

* ವಾಸಂತಿ

ಸೀತೆ—ಸಖಿ ವಾಸಂತಿ, ಆರ್ಯಪುತ್ರನನ್ನು ಕಠಿಣ ಹೃದಯನೆಂದು ಯಾತಕ್ಕನ್ನುವೆ. ತಪ್ತನಾದ ಆರ್ಯಪುತ್ರನನ್ನು ಪುನಶ್ಚ ತಾಪಪಡಿಸುವ ನೀನಲ್ಲವೆ ಕಠಿಣಹೃದಯಳು.

ರಾಮ—ಸಖಿ ವಾಸಂತಿ ಸೀತೆಯ ವಿಷಯದಲ್ಲಿ—†

ಕಂ|| ಚಕಿತಮೃಗಶಿಶುವಿಲೋಲಾಂ |
ಬಕಿಯಚಲದ್ಗರ್ಭಭರದೆಬಳಲುವಭೂಕ ||
ನ್ಯಕೆಯಸುಕುಮಾರವಾದಂ |
ಗಕವಂ ಕ್ರೂರಜಂತು ಭಕ್ಷಿಸಿತಕಟಾ ||

---

* ರಾಗ || ಹಿಂದೂಸ್ಥಾನಿ ||

ಎಲ್ಲೆ ಕ್ರೂರನೆ ನೀನೆಂತು ಬಿಟ್ಟೆ ಸತಿ | ಕುಲಸ್ತ್ರೀಯಾದಾಕೆಯಂಭೂಪತಿ|| ವನಕೆಂತು ನೂಕಲ್ಕೆಕೈಬಂದುದು | ವನೇಜಾಕ್ಷಿಯಂ ಮುಂದಕೇನಾದದು|| ಧರಾನಾಥ ಪೇಳ್ವಲ್ಲರೆ ನಲ್ಲನೀಂ|ಸರೋಜಾಕ್ಷಿಯ ಸುದ್ದಿಯಂ ಕೇಳ್ವೆನಾಂ||೩||

† ರಾಗ || ಘಟಾಕರ್ನ ||

ಕಳುಹಿದಮೇಲೆ ಕಾನನಕೇಂ ತಿಳಿಯತಕ್ಕದ್ದು || ಪ || ಲಲನಾಮಣಿಯಾದ| ಮಹಿಜೆಯು || ಅ| ಪ|| ಅಕಟಾ ಏನಜ್ಞನೊನಾಂ| ಗರ್ಭವಾಂತಿಹ|ಲಲನಾ ಮಣಿಯಾದ ಮಹೀಜೆಯು || ೧|| ಊಸುರುವದೇಂ ಕ್ರೂರಮೃಗವಾಸದಲ್ಲಿಗೆ| ಲಲನಾಮಣಿಯಾದ ಮಹೀಜೆಯು || ೨ ||

ಸೀತೆ—ಆರ್ಯಪುತ್ರನೆ ಇದೋ ಬದುಕಿರುವೆನು.

* ರಾಮ

ಸೀತೆ—ಅಯ್ಯೊ ತೆಗೆತೆಗೆ ಆರ್ಯಪುತ್ರನು ತೊರೆದು ರೋದಿಸುವನು.

ತಮಸೆ—ದುಃಖವು ದುಃಖಿಸಿದಹೊರತು ಶಾಂತವಾಗದು.

ಆದರೆ ಪ್ರಾಣಿಗಳೇ ಬಹು ಪ್ರಕಾರ ಕಷ್ಟವುಳ್ಳವರು. ರಾಮ ಭದ್ರನಿಗಾದರೋ ವಿಶೇಷವಾಗಿರುವದು.

ವಾಸಂತಿ—ಎಲೈ ಮಹಾರಾಜನೆ, ಮೀರಿಹೋದಮೇಲೆ ಧೈರ್ಯವನ್ನವಲಂಬಿಸಬೇಕು.

ರಾಮ—ಸಖಿ, ಹ್ಯಾಗೆತಾನೆ ಧೈರ್ಯವನ್ನು ಧರಿಸುವುದಕ್ಕಾದೀತು.

ಕಂ॥ ಆದೇವಿಕಳಿದಜಗಕ್ಕಾ ।
ದುದು ಪನ್ನೆರಡುವತ್ಸರಂಗಳ್ ಬಗೆಯಲ್ ॥
ಪೋದಂತೆ ಸೀತೆವೆಸರಿಂ ।
ತಾದುದುಮೆ ರಾಮನಿಂತು ಬದುಕಿಯುಮಿರ್ಪಂ ॥

ವಾಸಂತಿ—(ಆತ್ಮಗತಂ) ದುಃಖವಾದರೆ ದುಸ್ಸಹವಾಗಿದೆ. ಆದ್ದರಿಂದ ಈ ಮಹಾರಾಜನ ಮನಸ್ಸನ್ನು ವಿಷಯಾಂತರದಲ್ಲಿ ಎರಗಿಸುವೆನು. (ಪ್ರಕಾಶ) ಎಲೈ ಮಹಾರಾಜನೆ, ಚಿರಪರಿಚಿತಗಳಾದ ಈ ಜನಸ್ಥಾನ ಭಾಗಗಳನ್ನು ನೋಡಬೇಕು.

ರಾಮ—ಹಾಗೆಯೆಆಗಲಿ. (ಎಂದು ಎದ್ದುಬರುವನು)

ಸೀತೆ—ದುಃಖವನ್ನು ಹೆಚ್ಚಿಸುವಸ್ಥಾನಗಳನ್ನು ನನ್ನಸಖಿಯು ದುಃಖಪರಿಹಾರಕಗಳೆಂದು ತಿಳಿದಿರುವಳು.

---

* ರಾಗ ॥ ನಾದನಾಮಕ್ರಿಯ ॥

ಸೀತೆ । ಧರಣಿತನುಜೆ । ವಿನೀತೆ । ಹಾಹಾ । ಪ್ರಿಯನಸಂತಾಪವ ನೋಡಿ ನೀನುಪೇಕ್ಷಿಸೆ । ಪ್ರೇಯಸಿಹಾ । ಸಂತೈಪೆನದೆಂತೆಹಾಹಾ ॥ ೧ ॥ ತರುಣೀಶಿರೋಮಣೀ । ತಾಳೆನಾಂ ತಾಪವಾ। ತಂಪಿಸುಹಾಹಾ । ವಿದೇಹ । ಕುಮಾರೀಹಾಹಾ ॥ ೨ ॥

* ವಾಸಂತಿ—

ಸೀತೆ—ಎಲೆಸಖಿ,ನೀನುಬಹುಕ್ರೂರಳು. ಪದೇಪದೇ ಮರ್ಮಚ್ಛೇದಕಗಳಾದ ಮಾತುಗಳಿಂದ ಆರ್ಯಪುತ್ರನನ್ನು ಏತಕಿಂತು ಸಂತಾಪಪಡಿಸುವೆ ?

† ರಾಮ—

(ಎಂದು ಮೂರ್ಛಿಸುವನು)

ಸೀತೆ—ಅಯ್ಯೋ ಆರ್ಯಪುತ್ರನು ಮೂರ್ಛೆಹೊಂದಿದನಲ್ಲಾ !

ವಾಸಂತಿ—ಮಹಾರಾಜನೆ, ಸಂತೈಸಿಕೋ ಸಂತೈಸಿಕೋ.

ಸೀತೆ—ಆಹಾ ಆರ್ಯಪುತ್ರನೆ, ಸಕಲಲೋಕಗಳಿಗೂ ಆಧಾರನಾದನೀನು ಮಂದಭಾಗ್ಯಳಾದ ನನಗಾಗಿ ಪದೆಪದೇ ಇಂಥಾಅವಸ್ಥೆಯನ್ನು ಹೊಂದುತ್ತಿರುವೆಯಲ್ಲಾ. ಆಹಾ ಕೆಟ್ಟೆನು ಕೆಟ್ಟೆನು. (ಮೂರ್ಛಿಸುವಳು)

ತಮಸೆ—ವತ್ಸೆ ಸಂತೈಸಿಕೊಸಂತೈಸಿಕೊ, ಏತಕ್ಕೆ ಕಳವಳಿಸುವೆ ? ಪುನಃ ನಿನ್ನಹಸ್ತದಿಂದ ರಾಮನನ್ನು ಉಜ್ಜೀವಿಸು.

ವಾಸಂತಿ—ಇದೇನು ಇನ್ನೂ ಮಹಾರಾಜನಿಗೆ ಮೂರ್ಛೆ ತಿಳಿಯಲಿಲ್ಲವಲ್ಲ. ಹಾ ಪ್ರಿಯಸಖಿಯಾದ ಸೀತೆಯೆ ಎಲ್ಲಿರುವೆ ? ನಿನ್ನ ಜೀವಿತೇಶ್ವರನನ್ನು ಉಜ್ಜೀವಿಸುಬಾ.

ಸೀತೆ— (ತ್ವರೆಯಿಂದ ಬಂದು ರಾಮನ ಹೃದಯವನ್ನೂ ಲಲಾಟವನ್ನೂ ಮುಟ್ಟುವಳು).

---

* ರಾಗ ॥

ಮೆರವೀಲವಲೀಮಂಟಪದಲ್ಲಿಯೆ । ನಿರುಕಿಸುತಂಗನೆಯು ॥ ಬರುವನುನೀನಿರೆಗೋದಾ । ವರಿಯೆಡೆಚರಿಸುವಹಂಸಗಳ ॥ ೧ ॥ ನೆರೆನೋಡೆತಡವಾಗಲು ಬಂದ । ಧರಣಿಜೆಭಯದಿಂದ ॥ ಯರಗಿದಳಲೆಮುನಿದಂತಿಹನಿನಗಾ । ಪರಿಕೈಜೋಡಿಸುತಂ ॥ ೨ ॥

† ರಾಗ ॥ ಬೇಹಾಗ್ ॥

ಜಲಜಾಂಬಕಿಪ್ರಿಯೆ ಹಾಜಾನಕಿ ॥ ಪ ॥ ಪುಂಡರೀಕಮುಖಿ । ದಂಡಕಾವನಸಖಿ । ಚಂಡಿಯಪ್ಪರೇನೇ । ಗಂಡನೊಳಾಹ ॥ ೧ ॥ ಕಾಂತೆಯೆ ನಿನ್ನನಾಂ ಕಾಣದೆ ಸೈರಿಪೆ । ನೊಂತು ನನ್ನನೀನು ಸಂತೈಸು ಬಾಜಾ ॥ ೨ ॥

ವಾಸಂತಿ—ಮಹಾರಾಜನು ಪುನಶ್ಚ ಉಜ್ಜೀವಿಸಿದನು.

ರಾಮ—ಕಂ॥ ಒಳಹೊರಗು ದೇಹಧಾತುಗೆ ।
ಬಳಿದು ಸುಧಾರಸವನೆನ್ನಸಂತೈಸಿದ ಕೈ ॥
ದಳಿರಿನ ಸೋಂಕಿನಂದದೆ ।
ಬೆಳವಿಗೆಯಂ ಮರಳಿ ನೀಡುವುದು ವ್ಯೈಮರವಂ ॥

(ಆನಂದದಿಂದ ಕಣ್ದೆರೆಯದೆ)

ಸಖಿ ವಾಸಂತಿಯೆ ದೈವಯೋಗದಿಂದ ವರ್ಧಿಸುವೆಯಾ?

ವಾಸಂತಿ—ಮಹಾರಾಜನೆ ಇದು ಹ್ಯಾಗೆ ಉಜ್ಜೀವಿಸಿದೆ.

ರಾಮ—ಹ್ಯಾಗೇನು? ಪುನಶ್ಚ ಜಾನಕಿಯು ಬಂದಿದ್ದರಿಂದಲೆ.

ವಾಸಂತಿ—ಆಕೆ ಎಲ್ಲಿರುವಳು.

ರಾಮ—ಇದೋ ನಿನ್ನೆದುರಿಗೆ ಇರುವಳು.

ವಾಸಂತಿ—ಇದೇನು ಬರೀ ಮಾತುಗಳನ್ನಾಡಿ ಪ್ರಿಯಸಖಿಯ ವಿಯೋಗದಿಂದ ತತ್ಪರಳಾದ ನನ್ನನ್ನು ಮತ್ತೂ ಸಂತಾಪಪಡಿಸುವೆ.

ಸೀತೆ—ಹಿಂಜಗಿಯಲಿಚ್ಛೈಸುವೆನು, ಆನಂದವನ್ನುಂಟುಮಾಡುವ ಆರ್ಯಪುತ್ರನ ಅಮೃತಲೇಪನದಂತಿರುವ ಅಂಗಸ್ಪರ್ಶನದಿಂದ ನನ್ನ ಹಸ್ತವು ವಜ್ರಲೇಪನವನ್ನು ಮಾಡಿದಹಾಗೆ ನಿಶ್ಚಲವಾಯಿತು.

ರಾಮ—ಎಲೆ ಸಖಿ ಇದೇತಕ್ಕೆ ಬರೀ ಮಾತೆಂದು ಹೇಳುವೆ.

ಕಂ॥ ಪರಿಣಯಕಾಲದಿನಾಂಪಿಡಿ ।
ದರಸಿಯಕೈದಳಿರ ಸೋಂಕಿನಾನಂದಮನೇ ॥
ನರಿಯೆನೆಲನಲೀಕಂದಳ ।
ಸುರುಚಿರಮಾದಾ ಕರಾಬ್ಜವನೆ ನಾಂ ಪಿಡಿದೇಂ ॥

ಸೀತೆ—ಹಾಹಾ ತೆಗೆ ತೆಗೆ ಆರ್ಯಪುತ್ರನ ಹಸ್ತಸ್ಪರ್ಶದಿಂದ ಪರವಶಳಾದ ನನಗಾದರೋ ಪ್ರಮಾದವುಂಟಾಯಿತು.

ರಾಮ—ಸಖಿ ವಾಸಂತಿ ಆನಂದಾತಿರೇಕದಿಂದ ಪರವಶನಾಗಿರುವೆನು. ಈಕೆ ಯನ್ನು ನೀನು ಹಿಡಿದುಕೋ.

ವಾಸಂತಿ—ಕಷ್ಟ ಕಷ್ಟ ಇದು ಉನ್ಮಾದವೆ ಸರಿ.

ಸೀತೆ—(ತ್ವರೆಯಿಂದ ಕೈಬಿಡಿಸಿಕೊಳ್ಳುವಳು).

ರಾಮ—ಅಹಾ ತೆಗೆ ತೆಗೆ ಪ್ರಮಾದವಾಯಿತು. ಪ್ರಮಾದವಾಯಿತು.

ಕಂ॥ ನಡುಕಂಜಡತೆಬೆಮರ್ಸಂ ।
ಗಡಿಸಿದ ತತ್ಪಾಣಿಪದ್ಮದತ್ತಣಿನೀಗಳ್ ।
ನಡುಕಂಜಡತೆಬೆಮರ್ಸಂ ।
ಗಡಿಸಿದಮತ್ಪಾಣಿಜಾರಿದತ್ತಕಟೀಗಳ್ ॥

ಸೀತೆ—ಆಹಾ ಅದ್ಯಾಪಿ ಆರ್ಯಪುತ್ರನು ತನ್ನನ್ನು ತಾನು ಸಂತೈಸಿಕೊಳ್ಳ ದಿರುವನು.

ತಮಸೆ—ಎಲೈ ವತ್ಸೆ, ಪ್ರಿಯನ ಹಸ್ತಸ್ಪರ್ಶದಿಂದ ಪುಳಕಾಂಕಿತಳಾದ ನೀನು ಮೊಗ್ಗುಗಳನ್ನು ಬಿಟ್ಟ ಕದಂಬಲತೆಯಂತೆ ಕಾಣುವೆ.

ಸೀತೆ—(ಸ್ವಗತ) ಓಹೋ ಪೂಜ್ಯಳಾದ ತಮಸೆಯ ಮುಂದೆ ಹಾಸ್ಯಕ್ಕೆ ಗುರಿ ಯಾದೆನು. ಏತಕ್ಕಂದರೆ ನನ್ನ ವಿಷಯದಲ್ಲಿ ಆರ್ಯಪುತ್ರನು ಮಾ ಡಿದ ಪರಿತ್ಯಾಗಕ್ಕೂ ಪುನಶ್ಚ ಆತನ ವಿಷಯದಲ್ಲಿ ನನಗಾದ ಅನುರಾ ಗಾತಿಶಯಕ್ಕೂ ಏನು ತಿಳಿಯುವಳೋ ಎಂದು.

ರಾಮ—(ಸುತ್ತಲೂನೋಡಿ) ಹಾ ಪ್ರಿಯೆಯು ಇಲ್ಲವೆ ಇಲ್ಲ. ಇನ್ನೇನು ಗತಿ. ಜಾನಕಿ ನೀನು ನಿರ್ದಯಳಲ್ಲವೆ? *

---

* ॥ ರಾಗ ॥ ಕಮಾಚು ॥

*ಪ್ರಾಣಸಖಿ ಯಲ್ಲಿಹೆ ಯನ್ನಾಣೆ ಶಶಿಮುಖಿ । ಕಾಣದೆ ತಲ್ಲಣಿಪೆ ಕಡು । ಜಾಣೆ ಜಾನಕಿ ॥ಪ॥ ತೋರುಪ್ರಿಯೆ ನಿನ್ನಯಮುಖ ವಾರಿಜಾತವ । ನೀರೆನಾ ನಿನ್ನು ಸೈಸ ಲಾರೆತಾಪವ ॥೧॥ ಲೋಕತೃಪ್ತಿಗೆಸಗಿದೆನೆಲೆ । ಕೋಕಿಲಾರವೆ । ಸಾಕು ಪೇಳಲೇಂ ಕರವಿಡಿದಾಕೆಭಾರವೆ ॥೨॥ ಲಲನೆ ನೀನೆನ್ನ ಮನವ ತಿಳಿದು ಮುನಿವುದೆ । ಚಳಿಸಬಹುದೆ । ಕಲಂತನ ಬಂದುಳುಹಬಾರದೆ ॥೩॥ ಇನ್ನು ನೀ ನೆನ್ನಯ ತಪ್ಪನು ನೋಡದೆ। ಮನ್ನಿಸು ಬಾಬಾಗುಣ ಸಂಪನ್ನದೆ ಕಾಣದೆ॥೪॥

ಸೀತೆ—ಆರ್ಯಪುತ್ರನೆ ಇದೇನು ನೀಹೇಳುವದು ವಿಪರೀತವಾಗಿದೆ.

ವಾಸಂತಿ—ಮಹಾರಾಜನೆ ಪ್ರಸನ್ನನಾಗು. ಧೈರ್ಯದಿಂದ ನಿನ್ನ ದುಃಖವನ್ನು ನೀನೆ ಸೈರಿಸಿಕೊಳ್ಳಬೇಕಲ್ಲದೆ ದೇವಿಯು ಇಲ್ಲೆಲ್ಲಿರುವಳು.

ರಾಮ—ನಿಜ ದೇವಿಯು ಇಲ್ಲೆಲ್ಲಿರುವಳು ಇದ್ದಪಕ್ಷದಲ್ಲಿ ವಾಸಂತಿಯಾದರೂ ಕಾಣದಿರುವಳೆ. ಇದೇನು ಸ್ವಪ್ನವಾಗಿದ್ದೀತೆ. ನಾನು ಮಲಗಿರಲಿಲ್ಲ. ಸ್ವಪ್ನವೆಲ್ಲಿಂದ ಬಂದೀತು ಸರ್ವಥಾ ಇವೆಲ್ಲಾ ದೇವಿಯ ವಿಯೋಗಪ್ರಭಾವವಲ್ಲದೆ ಅನ್ಯಥಾ ಅಲ್ಲ.

ವಾಸಂತಿ—ಎಲೈ ಮಹಾರಾಜನೆ ! *

ಸೀತೆ—ಆರ್ಯಪುತ್ರನೆ ತಾತ ಜಟಾಯುವಿನಿಂದ ಬಿಡಲ್ಪಟ್ಟನಾನು ಅಪಹರಿಸಲ್ಪಟ್ಟೆನು.

ರಾಮ—ಆಹಾ ! ತಾತ ಜಟಾಯುವನ್ನು ಕೆಡಹಿ ಸೀತೆಯನ್ನು ಅಪಹರಿಸಿ ಕೊಂಡುಹೋಗುವ ದುರಾತ್ಮನೆ ಎಲ್ಲಿಗೆ ಹೋಗುವೆ ನಿಲ್ಲು ನಿಲ್ಲು.

ವಾಸಂತಿ—ಮಹಾರಾಜನೆ! ರಾಕ್ಷಸಕುಲಕ್ಕೆ ಪ್ರಳಯಾಗ್ನಿಯಾದ ನಿನ್ನ ಕೋಪಕ್ಕೆ ವಿಷಯನಾದವನು ಇನ್ನೂ ಬದುಕಿರುವನೆ?

ರಾಮ—ಕಂ || ರಾವಣಹನನಾವಧಿಯಿಂ |
ದಾವಿರಹವ ರಣವಿನೋದದಿಂ ತೀರಿಸಿದೇಂ ||
ದೇವಿಯ ವಿರಹವಿದೆನವಧಿ |
ಯಾವಂದದೊಳಿದನದೆಂತು ಸೈರಿಪುದಕಟಾ ||

|| ರಾಗ ||

*ನೋಡು ನೋಡು ನೋಡು । ನಾಡೊಡೆಯನೀ ||ಪ|| ಕಾಯಲುಬಂದಜ। ಟಾಯುವ ಮುರಿದು ಬಿ। ಟ್ಟಾಯುಸರಥಖಳ ರಾಯನದು ||೧|| ಧುರದೆ ಜಟಾಯುವ। ಗರಿಯೇನಗುರುಳಿದ। ತುರಗಂಗಳಸ್ಥಿಪಂ। ಜರಗಳಿವು। ಉರಿವ ಸೀತೆಯು ರಥ। ಕರಸಿಕೊಂಡಲ್ಲಿಂದ । ದುರುಳನು ಗಗನಾಂ। ತರಕೆ ನೆಗೆದ ಮೋಡಿ.||೨||

ಸೀತೆ—ಆಹಾ ಇದಕ್ಕೆ ಅವಧಿಯೇ ಇಲ್ಲವೆ. ಹಾ ಕೆಟ್ಟೆನು. (ಎಂದು ರೋದಿಸುವಳು).

ರಾಮ—ಎಲೌ ಸಖಿ ವಾಸಂತಿಯೆ, ಈಗ ರಾಮನ ದರ್ಶನವು ಮಿತ್ರಜನರಿಗೆ ದುಃಖಕರವಲ್ಲದೆ ಮತ್ತೆ ಬೇರೆಯಿಲ್ಲ. ಎಲ್ಲಿನವರಿಗೆ ನಿನ್ನನ್ನೂ ದುಃಖಪಡಿಸಲಿ. ಆದ್ದರಿಂದ ನಾನು ಹೊರಡುವದಕ್ಕೆ ಆಜ್ಞೆಯನ್ನು ಕೊಡು.

ಸೀತೆ—(ಭಯದಿಂದ) ಎಲೌ ಪೂಜ್ಯೆಯೆ, ಆರ್ಯಪುತ್ರನು ಹೋಗುವಂತಿದೆ. ಇನ್ನು ಹ್ಯಾಗೆಮಾಡಲಿ. (ತಬ್ಬಿಕೊಂಡು ರೋದಿಸುವಳು).

ತಮಸೆ—ವತ್ಸೆ, ಸಂತೈಸಿಕೊ. ಸಂತೈಸಿಕೊ. ನಾವ್ರೂಕೂಡ ಚಿರಂಜೀವಿಗಳಾದ ಕುಶಲವರ ವರ್ಷಗ್ರಂಥಿ ಮಂಗಳವನ್ನು ಮಾಡುವದಕ್ಕೆ ಭಾಗೀರಥಿಯಲ್ಲಿಗೆ ಹೋಗೋಣ ನಡೆ.

* ಸೀತೆ—

ವಾಸಂತಿ—ಮಹಾರಾಜನೆ, ಈಗ ನಿನ್ನ ಅಶ್ವಮೇಧದಲ್ಲಿ ಧರ್ಮಪತ್ನಿಯುಂಟೆ.

ರಾಮ—ಉಂಟು.

ಸೀತೆ—(ಭಯದಿಂದ) ಆರ್ಯಪುತ್ರನೆ ಆಕೆ ಯಾರು ?

ರಾಮ—ಸುವರ್ಣದಿಂದ ಮಾಡಿದ ಸೀತಾಪ್ರತಿಕೃತಿಯು.

ಸೀತೆ—ಈಗ ನೀನು ಆರ್ಯಪುತ್ರನಹುದು. ಆಹ! ಈಗಲೀಗ ಆರ್ಯಪುತ್ರನು ಪರಿತ್ಯಾಗದಿಂದುಂಟಾದ ನನ್ನ ಲಜ್ಜಾಶಲ್ಯವನ್ನು ಕಿತ್ತುಹಾಕಿದನು.

ರಾಮ—ಆ ಸೀತಾಪ್ರತಿಕೃತಿಯನ್ನು ನೋಡಿಕೊಂಡು ಸಮಾಧಾನನಾಗುತ್ತಿರುವೆನು.

---

* ರಾಗ ॥ ಜುಂಜೋಟಿ ॥

ನಿಲ್ಲುನಿಲ್ಲು ನಿಮಿಷವಾರ್ಯೆ ನಿನ್ನಬೇಡುವೆ। ಯಲ್ಲಿಯುದುರ್ಲಭನೆನಿಪ್ಪ। ವಲ್ಲಭನನ್ನು ನೋಡುವೆ ॥ ೧ ॥ ಯಂದಿಗಿನ್ನುನೊಳ್ಪೆ ನೀ ಸುಂದರಾಂಗನ। ಇಂದುವನಿಂದಿಸುವ ವದನದಂದವನಾಂ ॥೨॥ ನೋಡಿಬರುವೆಬರುವೆ ನಿನ್ನೊಂಮೆ ಕಾಂತನಾ। ಕೂಡಿದಳಕೃತಾರ್ಥೆಗೈವ। ಕೋಮಲತರಸ್ವಾಂತನಾ ॥೩॥

ಸೀತೆ—ಆರ್ಯಪುತ್ರನ ಮನೋ ವಿನೋದಾಸ್ಪದವಾದ ಆ ಪ್ರಕೃತಿಯೆ ಸುಕೃತಿಯಾದದ್ದು. ಮತ್ತು ಜೀವಲೋಕಕ್ಕೆ ಮಹೋಪಕಾರಿಯಾಯಿತು.

ವಾಸಂತಿ—ಈ ಸಮಾಗಮವು ನಮಗೆ ಅನುಗ್ರಹರೂಪವಾದದ್ದು. ಗಮನ ವಿಷಯದಲ್ಲಿ ಕಾರ್ಯಹಾನಿಯಾಗದಂತೆ ನಡೆದುಕೊಳ್ಳಬಹುದು.

ಸೀತೆ—ಈಗಲೀಗ ವಾಸಂತಿಯು ನನಗೆ ಪ್ರತಿಕೂಲೆಯಾದಳು.

ತಮಸೆ—ಎಲೆ ವತ್ಸೆ ಬಾ ಹೋಗೋಣ.

ಸೀತೆ—ಆಗಲಿ ಹೋಗೋಣ.

ತಮಸೆ—ಹ್ಯಾಗೆತಾನೆ ಬಂದೀಯೆ ?

ಕಂ ॥ ಪಿರಿದಾಸೆಯಿಂದ ಪತಿಯೊಳ್ ।
ಗೆರಕಂಗೊಂಡಿರುವ ದೃಷ್ಟಿಯಂ ಕಷ್ಟದಿನೀ ॥
ನಿರದೆಳೆದಪೆಂ ವಿರಹದು।
ವಿಂಧುಮುಹದು ಭವದೃಷ್ಟಿ ಪಥವನಿರ್ಪನ್ನೆವರಂ ॥

ಸೀತೆ—ಅಪೂರ್ವ ಪುಣ್ಯದಿಂದ ಕಂಡ ಆರ್ಯಪುತ್ರನ ಚರಣಗಳಿಗೆ ನಮಸ್ಕರಿಸುವೆನು. (ಎಂದು ರೋದಿಸುವಳು).

ತಮಸೆ—ವತ್ಸೆ ಸಂತೈಸಿಕೊ ಸಂತೈಸಿಕೊ.

ಸೀತೆ—ಇಂಥಾ ಅವಸ್ಥೆಯಲ್ಲಿ ಆರ್ಯಪುತ್ರನನ್ನ ನೋಡುವುದಕ್ಕೆ ಎಷ್ಟುತಾನೆ ಅವಕಾಶ ದೊರಕೀತು.

ರಾಮ—ಎಲೈ ವಿಮಾನರಾಜನೆ ಇತ್ತ ನಡೆ.

(ಎಲ್ಲರೂ ತೆರಳುವರು).

* ವಾಸಂತಿ—

ಮೂರನೆ ಅಂಕ ಮುಗಿದುದು

---

* ರಾಗ॥ ಕಲಹರಪ್ರಿಯ॥

ನಿನಗಾಶೀರ್ವಚಿಸಲಿ। ನಿತ್ಯಸುಮಂಗಳವಾಗಲೆನುತ ॥ ಪ॥ ಸಕಲಚರಾಚರ ನಿಕರಧಾರಿಣಿ। ಅಕಳಂಕಗುಣಾಧಿಕೆ ಧಾರಿಣಿ ॥೧॥ ತುಂಗದುರಿತ ಕುಲ ಭಂಗದಾಯಿನಿ। ಮಂಗಳದಾಯಿನಿ ಮಂದಾಕಿನಿ ॥೨॥ ಶ್ರೀ ವರರುಂಧತಿ ಶ್ರೀಯುತ ಮಹಿಮೋ। ದ್ದಾಮವಸಿಷ್ಠ ಮಹಾಮುನಿಪತಿ ॥೩॥

ನಾಲ್ಕನೆಯ ಅಂಕ.

(ಅನಂತರ ಭಾಂಡಾಯನ ಸೌಧಾತಕಿ ಯೆಂಬ ಋಷಿಪುತ್ರರ ಪ್ರವೇಶ)

* ಭಾಂಡಾಯನ—

ಸೌಧಾತಕಿ—ಇದೊ ಸರತಗಡ್ಡದ ಗುರುಜನಗಳು ಬಹುಮಂದಿ ಬಂದಿರುವರು. ಆಃ ಅನಧ್ಯಯನಕ್ಕೆ ಈಗ ಒಳ್ಳೇ ಕಾಲಸಿಕ್ಕಿತು.

ಭಾಂಡಾ -ಎಲೈ ಸೌಧಾತಕಿ ಗುರುಜನಗಳಲ್ಲಿರುವ ಗೌರವಕಾರಣವಾದದ್ದು ಎಷ್ಟೋ ಇದೆ. ಅವನ್ನೆಲ್ಲಾ ಬಿಟ್ಟು ಸರತಗಡ್ಡದವರಮೇಲೆ ದೃಷ್ಟಿ ಬಿತ್ತಲ್ಲಾ, ಅದ್ದರಿಂದ ನಿನಗೆ ಗಡ್ಡ ಬೆಳ್ಳಗಿದ್ದವರಮೇಲೆ ಪ್ರೀತಿಯೊ.

ಸೌಧಾ—ಅದು ಹಾಗಿರಲಿ ಇವರ‍್ಯಾರು ? ಬಹು ದೊಡ್ಡಗಡ್ಡದವರು. ಮುನುಕರಿಗೆಲ್ಲಾ ಮುಖ್ಯರಾಗಿರುವರು. ಇವರ ಹೆಸರೇನು ?

ಭಾಂಡಾ—ಛೀ! ನಿನ್ನ ಪರಿಹಾಸವನ್ನು ಬಿಡು. ಇವರಲ್ಲವೆ ವಸಿಷ್ಟಮಹರ್ಷಿಗಳು. ರುಷ್ಯಶೃಂಗಾಶ್ರಮದಿಂದ ಅರುಂಧತಿ ಕೌಸಲ್ಯೆಯರನ್ನು ಕರೆದುಕೊಂಡು ವಾಲ್ಮೀಕಿಗಳ ಸನ್ನಿಧಿಗೆ ಬಂದಿರುವರು.

ಸೌಧಾ—ಅಯ್ಯೋ! ಆತನು ಹುಲಿಯೋ ಕರಡಿಯೊ ಎನ್ನುತ್ತಿದ್ದೆ. ಇವರು ವಸಿಷ್ಠಮಹರ್ಷಿಗಳೆ ?

* ರಾಗ॥ ನೋಟ॥ ಆದಿ॥

ನೋಡುಸೌಧಾತಕಿ ವಾಲ್ಮೀಕಿಯಾಶ್ರಮದೊಳು। ಕೂಡಿದತಿಥಿಜನದ ಸಮಾರಂಭವನು ॥೧॥ ಮಡದಿಕುಡಿದುಮಿಕ್ಕ ನೀವಾರಾನ್ನದಕೆನೆಯು ಕುಡಿಯುತಿರ್ಪುದಲ್ಲಿ ಕೃಷ್ಣಸಾರವಿದರಪರಿಯು ॥೨॥ ಎತ್ತನೋಡಲತ್ತಶಾಕಪಾಕಾದಿ ಪರಿಮಳವು । ಸುತ್ತಿಕೊಂಡಿರುವುದು ಘ್ರಾಣ ವರ್ಣಿಸಲಸದಳವು ॥ ೩ ॥

ಭಾಂಡಾ—ಬಿಡುಬಿಡು. ಪೂಜ್ಯರನ್ನು ಪರಿಹಾಸ್ಯಮಾಡಬಾರದು.

ಸೌಧಾ—ಇದೇನವರು ಬಂದಕೂಡಲೇ ಎಳೆಗರುವನ್ನು ಕುರುಮಿದರಲ್ಲ.

ಭಾಂಡಾ—ಸೌಧಾತಕಿಯೆ ಕೇಳು ? ಅಭ್ಯಾಗತನಾದ ಶ್ರೋತ್ರಿಯನಿಗೆ ಮಾಂಸಸಮೇತವಾದ ಮಧುಪರ್ಕವನ್ನು ಗೃಹಸ್ಥರು ಕೊಡಬೇಕೆಂದು ಧರ್ಮಶಾಸ್ತ್ರಕಾರರಾದ ಋಷಿಗಳು ಹೇಳುವರು. ಆದ್ದರಿಂದ ಎತ್ತನ್ನಾಗಲಿ ಆಡನ್ನಾಗಲಿ ಬಂದ ಅತಿಥಿಗಳಿಗೆ ಅರ್ಪಿಸಬೇಕು.

ಸೌಧಾ—ಹಾಗೊ ತಿಳಿಯಿತು. ಇನ್ನು ಆಕ್ಷೇಪಣೆಗೆ ಅವಕಾಶವಿಲ್ಲ.

ಭಾಂಡಾ—ಪ್ರಮಾಣವಿರುವದ್ದರಿಂದಲೇ ಬಂದ ವಸಿಷ್ಠಾದಿ ಮಹರ್ಷಿಗಳಿಗೆ ಎಳಗರುವನ್ನು ನಿವೇದಿಸಿದರು. ಆಗಲೇ ಬಂದಂಥ ಜನಕರಾಜನಿಗೆ ಮಾತ್ರ ಮಾಂಸವಿಲ್ಲದೆ ಮಧುಪರ್ಕವನ್ನು ಕೊಟ್ಟರು.

ಸೌಧಾ—ಅದೇನುಕಾರಣ.

ಭಾಂಡಾ—ಕೇಳು? ಸೀತಾದೇವಿಗೆ ಬಂದ ಕಷ್ಟವನ್ನು ಕೇಳಿದಾರಭ್ಯ ವೈಖಾನಸವ್ರತವನ್ನು ಹಿಡಿದು ಚಂದ್ರದ್ವೀಪ ತಪೋವನದಲ್ಲಿ ತಪಸ್ಸನ್ನು ಮಾಡಿದನು. ವ್ರತಕ್ಕಾಗಿ ಜನಕರಾಯನು ಮಾಂಸಭಕ್ಷಣೆಯನ್ನು ಬಿಟ್ಟಿರುವನು. ಆದ್ದರಿಂದ ಅವನಿಗೆ ಎಳೆಗರು ದೊರೆಯಲಿಲ್ಲ.

ಸೌಧಾ—ಅಲ್ಲಿಂದ ಇಲ್ಲಿಗೆ ಯಾತಕ್ಕೆ ಬಂದನು.

ಭಾಂಡಾ—ಪುರಾತನ ಸ್ನೇಹಿತರಾದ ವಾಲ್ಮೀಕಿಗಳನ್ನು ನೋಡುವುದಕ್ಕೆ ಬಂದನು.

ಸೌಧಾ—ಆದರೆ ಈಗ ಜನಕನು ದಶರಥನ ಧರ್ಮಪತ್ನಿಯನ್ನು ಕಂಡನೊ.

ಭಾಂಡಾ—ನೀನೇ ಹೋಗಿ ಜನಕಮಹಾರಾಜನನ್ನು ಕಾಣಬೇಕೆಂದು ಕೌಸಲ್ಯಾದೇವಿಯ ಸಮೀಪಕ್ಕೆ ತಮ್ಮ ಧರ್ಮಪತ್ನಿಯಾದ ಅರುಂಧತಿಯನ್ನು ಕಳುಹಿಸಿದರು.

ಸೌಧಾ—ಹಾಗಾದರೆ ಈ ವೃದ್ಧರೆಲ್ಲಾ ಪರಸ್ಪರ ಹ್ಯಾಗೆ ಸೇರುವರೊ ಹಾಗೆ ಯೆ ನಾವುಕೂಡ ಹುಡುಗರೊಡನೆ ಸೇರಿ ಅನಧ್ಯಾಯ ಮಹೋತ್ಸವವನ್ನು ಅನುಭವಿಸೋಣವೆಂದು (ಸ್ವಲ್ಪನಡೆದು)

ಭಾಂಡ—ಇದೋ ರಾಜರ್ಷಿಯಾದ ಜನಕನು ವಸಿಷ್ಠ ವಾಲ್ಮೀಕಿಗಳನ್ನು ಕಂಡು ಉಪಚರಿಸಿ ಈಗ ಆಶ್ರಮದ ಹೊರಗಣ ವೃಕ್ಷಮೂಲದಲ್ಲಿ ಕುಳಿತಿರುವನು.

ಕಂ॥ ಮನದೊಳಗೆಂದುಂ ನೆಲಸಿದ ।
ಘನಸೀತಾಶೋಕದಿಂದೆ ತಪಿಸುತ್ತಿರ್ಪಂ ॥
ಅನಲನನೊಳಕೊಂಡಿಹ ಕಾ ।
ನನತರು ತಾಂ ಪ್ರಜ್ವಲಿಸುವ ತೆರದಿಂದೀಗಳ್ ॥

(ಎಂದು ಹೋಗುವರು)

* (ಅನಂತರ ಜನಕನು ಪ್ರವೇಶಿಸುವನು)

ಹಾವತ್ಸೆ ಗುಣವತಿ ಏನೇನುಮಾಡಿದರೂ ನಿನ್ನ ಸ್ಮೃತಿಯು ನನಗೆ ತಪ್ಪುವದಿಲ್ಲ. ಎಲೌ ಸೀತೆ ದೇವಯಾಗ ಸಂಭೂತಳಾದ ನಿನಗೆ ಇಂಥಾ ಅಪವಾದ ಸಂಭವಿಸಿತೆ? ಅಯ್ಯೊ ಸ್ವಚ್ಛಂದವಾಗಿರೋದನ ಮಾಡುವದಕ್ಕೂ ಲಜ್ಜೆ ಬಾಧಿಸುವದಲ್ಲಾ. ಹಾ ಪುತ್ರಿ

---

* ರಾಗ॥ ತಾಳ॥

ಮಾರುವರಾರೀ । ಧಾರುಣಿ ಯೊಳಗಹ ಪ್ರಾರಬ್ಧಕರ್ಮವ ನಕಟಾ ॥ ಪ ॥ ಪರಮ ಪಾವನೆಯಾದರು ಮಗಳಿಗೆ ಬಂದ । ದುರಿತವನೀಗಳು ಸ್ಮರಿಸೆ।ಗರಗ ಸದಂದದಿ ಕೊರೆಯುತ್ತಲಿಹುದುತಾ । ನಿರದೆನ್ನ ಹೃದಯವ ನಹಹಾ ॥ ೧॥ ಜರೆಯಿಂದಲು ದುರ್ಧರ ದುಃಖದಿಂದಲು । ವಿರಚಿಸಿದುಪವಾಸಗಳೊಳು । ಕರಗಿ ನೀರಸವಾದರು ಒಡಲೀಗಳು ಉರುಳದಿದೇಗೈವೆ ನಕಟಾ ॥ ೨ ॥ ಈ ತೆರದಳಲತಾನನುಭವಿಪುದಕಿಂತ । ಚೈತನ್ಯವ ಬಿಡಲೆಣಿಸೆ । ಪಾತಕವಹುದಾತ್ಮ । ಘಾತಿಗೆನುವ ಮನುನೀತಿ ಬಾಧಿಪುದೇಗೈವೆ ॥ ೩ ॥

ಕಂ|| ಅನಿಮಿತ್ತಮಾದನಗುವಿಂ |
ಮಿನುಗುವ ಮೊಳೆವಲ್ಲಳಿಂದ ತೊದಲ್ವಾತುಗಳಿಂ ||
ಮನಕೆ ಬಹುತೋಷವಿತ್ತಾ |
ತನುಜೆಯ ಕೋಮಲ ಮುಖಾಬ್ಜಮಂ ಸ್ಮರಿಸಿದಪೆಂ ||

ತೆರೆಯಲ್ಲಿ ಪೂಜ್ಯರಾದ ಅರುಂಧತಿ ಮಹಾ ದೇವಿಯರೆ ಇತ್ತಿತ್ತ ದಯ ಮಾಡಬೇಕು.

ಜನಕ—(ನೋಡಿ) ಓಹೋ ಪೂಜ್ಯೆಯಾದ ಅರುಂಧತಿ ಬರುವಳು. ಮಹಾ ದೇವಿ ಎಂದು ಹೇಳಿದ್ದು ಯಾರನ್ನು (ಚನ್ನಾಗಿ ನೋಡಿ) ಆಹ ಈಕೆ ಮಹಾರಾಜ ದಶರಥನ ಧರ್ಮಪತ್ನಿಯಾದ ಕೌಸಲ್ಯೆಯು. ಅಯ್ಯೋ ಈಕೆಯನ್ನು ಆ ಕೌಸಲ್ಯೆ ಎಂದು ಯಾರುತಾನೇ ನಿಶ್ಚಯಿಸುವದಕ್ಕಾದೀತು.

ಕಂ|| ಮೆರದಿರ್ದಾಳೀಕೆ ದಶರಥ |
ನರಮನೆಯೊಳ್ ಸಿರಿಯತೆರದಿ ಉಪಮಾನದೊಳೇಂ ||
ಸಿರಿಯೋ ಇವಳೀಗೀಕ್ಷಿಸೆ |
ಪೆರಳಂತಿರೆತೋರ್ಪಳಹಹ ಹತವಿಧಿವಶದಿಂ ||

ಹಾ! ಗಾಢದಲ್ಲಿ ಖಾರತಗಲಿದಂತೆ ಇಂಥಾ ಕಷ್ಟಕಾಲದಲ್ಲಿ ಇಷ್ಟ ಜನರನ್ನು ಕಾಣುವ ದುರವಸ್ಥೆ ಬೇರೆ ನನಗೆ ಸಂಭವಿಸಿತೆ.

(ಅನಂತರ ಅರುಂಧತಿ, ಕೌಸಲ್ಯೆ, ಕಂಚುಕಿಯರು ಪ್ರವೇಶಿಸುವರು)

ಅರುಂಧತಿ—ಎಲೆ ದೇವಿ ಏತಕ್ಕೆ ಹಿಂದೆಗೆಯುವೆ. ನೀನೇ ಹೋಗಿ ಜನಕನನ್ನು ಕಾಣಬೇಕೆಂದು ನಿಮ್ಮ ಕುಲಗುರುಗಳು ಆಜ್ಞಾಪಿಸಿರುವರಲ್ಲಾ. ಅದಕ್ಕಾಗಿ ನನ್ನನ್ನು ಕಳುಹಿಸಿದರು.

ಕಂಚುಕಿ—ಎಲೌ ಮಹಾದೇವಿಯೆ ಗುರುಗಳ ಆಜ್ಞೆಯನ್ನು ಮನಸ್ಸಮಾಧಾನದಿಂದ ನೆರವೇರಿಸಬೇಕು.

ಕೌಸಲ್ಯೆ—ಇಂಥಾ ಕಾಲದಲ್ಲಿ ಮಿಥಿಲಾಧಿಪನನ್ನು ಹ್ಯಾಗೆ ನೋಡಲಿ, ಅಯ್ಯೋ! ದುಃಖದಮೇಲೆ ದುಃಖ ಸಂಭವಿಸುವದಲ್ಲಾ! ಸೈರಿಸಬಾರದ ದುಃಖವನ್ನು ಹ್ಯಾಗೆತಾನೆ ಸೈರಿಸಲಿ.

ಅರುಂಧತಿ—ಎಲೆ ದೇವಿ, ಅದಕ್ಕೆ ಸಂದೇಹವೇನು ದುಃಖಕಾಲದಲ್ಲಿ ಇಷ್ಟರನ್ನು ಕಂಡರೆ ಮತ್ತೂ ದುಃಖ ಹೆಚ್ಚುವುದು.

ಕೌಸಲ್ಯೆ—ವತ್ಸೆಯಾದ ಸೀತೆಗೆ ಇಂಥಾ ಅವಸ್ಥೆಯಾಗಿರುವಾಗ ಈ ರಾಜರ್ಷಿಗೆ ನನ್ನ ಮುಖವನ್ನು ಹ್ಯಾಗೆ ತೋರಿಸಲಿ!

ಅರುಂಧತಿ—ಇದೋ ನಿನಗೆ ಪರಮಬಂಧುವಾದ ಜನಕಮಹಾರಾಜನು.

ಕೌಸಲ್ಯೆ—ಹಾ! ದೈವವೇ!! ಇಂಥಾ ಸಮಯದಲ್ಲಿ ಈತನನ್ನು ಕಾಣುವ ಹಾಗೆ ಮಾಡಿದೆಯಾ!

ಜನಕ—(ಸಮೀಪಕ್ಕೆ ಬಂದು) ಎಲೌ ಪೂಜ್ಯೆಯಾದ ಅರುಂಧತಿಯೆ! ವಿದೇಹಸಂಭವನಾದ ಸೀರಧ್ವಜನು ವಂದಿಸುವನು.

ಅರುಂಧತಿ—ಎಲೈ ಸೀರಧ್ವಜನೆ ನಿನಗೆ ಬ್ರಹ್ಮಜ್ಞಾನಸಿದ್ಧಿಯಾಗಲಿ.

ಜನಕ—ಎಲೌ ಆರ್ಯಗೃಷ್ಟಿಯೆ, ಪ್ರಜಾಪಾಲಕನ ಮಾತೆಯಾದ ಈಕೆಗೆ ಕುಶಲವೇ.

ಕಂಚುಕಿ—(ಸ್ವಗತ) ಈತನು ನಮ್ಮ ಮಹಾರಾಜನನ್ನು ಚನ್ನಾಗಿ ನಿಂದಿಸಿದನು (ಪ್ರಕಾಶವಾಗಿ) ಎಲೈ ರಾಜರ್ಷಿಯೆ ಈ ಕೋಪದಿಂದಲೇ ರಾಮಭದ್ರನ ಮುಖವನ್ನು ನೋಡದೆ ಬಿಟ್ಟಿರುವಳು. ಆದ್ದರಿಂದ ಅತಿ ದುಃಖಿತೆಯಾಗಿರುವ ದೇವಿಯನ್ನು ಮತ್ತೂ ದುಃಖಿಸತಕ್ಕದ್ದಲ್ಲ. ಅಥವಾ ರಾಮಭದ್ರನು ತಾನೇ ಏನುಮಾಡ್ಯಾನು. ಅಗ್ನಿ ಪರಿಶುದ್ಧೆಯಾಗಿದ್ದರೂ ಸೀತಾದೇವಿಯ ವಿಷಯದಲ್ಲಿ ಲೋಕಕ್ಕೆ ವಿಶ್ವಾಸವುಂಟಾಗದ್ದರಿಂದ ಆ ಲೋಕಾರಾಧನ ವ್ರತಕ್ಕಾಗಿ ರಾಮಭದ್ರನು ಕ್ರೂರಕೃತ್ಯವನ್ನು ಮಾಡಬೇಕಾಯಿತು.

ಜನಕ—ಆಹಾ! ನನ್ನ ಮಗಳ ಪರಿಶೋಧನೆ ಮಾಡುವುದಕ್ಕೆ ಅವನ್ಯಾರು ಅಗ್ನಿ ಎಂಬುವನು. ರಾಮಮಾಡಿದ್ದಕ್ಕೆ ತಕ್ಕದ್ದನ್ನು ನಾನು ಮಾಡುವೆನು.

ಅರುಂಧತಿ—(ನಿಟ್ಟುಸುರುಬಿಟ್ಟು) ಹಾಗೆಯೇ ಸರಿ. ಸೀತೆಯು ಪಾವನತ್ವದ ಮುಂದೆ ಅಗ್ನಿಯುಮಾತೆಲ್ಲಿ. ಹಾ ವತ್ಸೆ!

ಕಂ|| ಮಗುವಾದರೇನು ನಿನ್ನಯ |
ಸುಗುಣಂ ಪುಟ್ಟಿಸುವುದೆನಗೆ ಭಕ್ತಿಯ ನಿನ್ನೊಳ್ ||
ಮಗಳೇನು ಶಿಷ್ಯಳೇನೀ |
ಜಗದೊಳ್ ಸದ್ಗುಣಗಳಲ್ತೆ ಪೂಜಾಸ್ಥಾನಂ ||

ಕೌಸಲ್ಯೆ—ಅಯ್ಯೋ! ವೇದನೆ ಹೆಚ್ಚಿತು ನಾನು ಸೈರಿಸಲಾರೆನು. (ಎಂದು ಮೂರ್ಛಿಸುವಳು.)

ಜನಕ—ಹಾ! ಕಷ್ಟ ಇದೇನು.

ಅರುಂಧತಿ—ಐಲೈ ರಾಜರ್ಷಿಯೆ ಇನ್ನೇನು.

ಕಂ|| ಆದಶರಥನಾಸೌಖ್ಯವು |
ಮಾದಿನಮಾಶಿಶುಗಳೆಲ್ಲ ನಿನ್ನಂ ನೋಡ||
ಲ್ಕೀದೇವಿಗೆ ನೆನಪಾ |
ಗಿಂತಾದಳ್ ಸ್ತ್ರೀಮನವು ಕುಸುಮಕೋಮಲವಲ್ತೇ ||

ಜನಕ—ಆಹ! ಬಹುಕಾಲಕ್ಕೆ ಕಾಣಿಸಿಕೊಂಡ ನನ್ನ ಪ್ರಿಯಮಿತ್ರನಾದ ದಶರಥನ ಧರ್ಮಪತ್ನಿಯನ್ನು ಚನ್ನಾಗಿ ನೋಡಲಾರೆನು.

ಕಂ|| ಅನುಬಂಧಿಯುಹಿತಮಿತ್ರನು |
ಘನವೆನಿಸಿದ ಸುಖವು ನನ್ನಜೀವಿತಫಲವುಂ ||
ತನುವುಂಜೀವವು ನನಗೆಂ |
ದೆನಿಸಿದ ದಶರಥನರೇಂದ್ರನೇನ್ಸಗಿಲ್ಲಂ ||

ಕಷ್ಟ ಇವಳೇ ಆ ಕೌಸಲ್ಯೆಯು. ಈ ದಂಪತಿಗಳಿಗೆ ಏಕಾಂತದಲ್ಲಿ ಏನಾದರೂ ಮನಮುನಿಸುಂಟಾದರೆ ನಾನೇ ಇವರನ್ನು ಸಮಾಧಾನ ಪಡಿಸುತ್ತಿದ್ದೆನಲ್ಲ. ಇಬ್ಬರೂ ನನ್ನ ಮಾತಿಗೆ ಪ್ರತ್ಯುತ್ತರವನ್ನು ಹೇಳಿದವರಲ್ಲ ಅಯ್ಯೋ ಅದೆಲ್ಲವನ್ನೂ ಸ್ಮರಿಸಿ ಪ್ರಯೋಜನವೇನು! ನನ್ನ ಮನಸ್ಸೂ ಬಲು ಸಂತಾಪ ಪಡುವದು.

ಅರುಂಧತಿ—ಅಯ್ಯೋ! ದೇವಿಗೆ ಇನ್ನೂ ಮೂರ್ಛೆ ತಿಳಿಯಲಿಲ್ಲವಲ್ಲ.

ಜನಕ—ಹಾ! ಪ್ರಿಯಸಖಿ ಸಂತೈಸಿಕೊ (ಎಂದು ಕಮಂಡಲುಜಲವನ್ನು ಪ್ರೋಕ್ಷಿಸುವನು.)

* ಕೌಸಲ್ಯೆ—(ಮೂರ್ಛೆತಿಳಿದು)

ಕಂ॥ ಐವರುಮಕ್ಕಳೊಳೆಮ್ಮಮ ।
ಜೀವರಗತಿಹಿತನೆನಿಪ್ಪವೋಲ್ ಶ್ರೀರಾಮಂ ॥
ಈ ವೈದೇಹಿಯು ಸೊಸೆಯುರೊ ।
ಳೇವೇಳ್ದಪೆನಕ್ಟ ಜೀವಕೆಣೆಯಾಗಿರ್ದಳ್ ॥

ಜನಕ—ಹಾ! ಪ್ರಿಯಮಿತ್ರನೇ! ಹಾ ದಶರಥಮಹಾರಾಯನೆ! ಹೀಗಿದ್ದೆಯೂ, ಸರ್ವಪ್ರಕಾರದಿಂದ ಹೃದಯಂಗಮನಾದ ನಿನ್ನನ್ನು ಹ್ಯಾಗೆ ಮರೆಯಲಿ.

---

* ರಾಗ ॥ ॥

ಹಾಮಹೀಸುತೆ ಸೀತೆ ಹಾಮದಂಬಿಕೆ ಜಾತೆ ॥ಪ॥ ಕೋಮಲಾಂಗಿ ಹಾಹಾ ರಾಮನದಯಿತೆ ॥೧॥ ಪರಿಣಯೋತ್ಸವಶೋಭಾ । ಕರವೆನಿಸಿದ ನಿನ್ನ । ದರ ಹಸಿತಾನನ । ಸರಸಿರುಹವನು । ಸ್ಮರಿಸುತ್ತೆನ್ನೆದೆ । ಬಿರಿಯುವದಹಹಾ ॥೨॥ ಅಂಗನಾಮಣಿಯೆ ಬೆಳ । ದಿಂಗಳನೆರೆಪೊಲ್ವ । ಅಂಗಗಳಿಂದೆ । ನ್ನಂಕವ ಪುನರಪಿ ಸಿಂಗರಿಸೌ । ಸಾರಂಗಸುನಯನೆ ॥೩॥ ಇನಕುಲೋದ್ಭವ ನೃಪರ । ಮನೆಗೆ ತಾಂ ಸೊಸೆಯಾಕೆ । ಜನಕನ ಸಂಬಂಧದೊಳೆನಗುಂ । ಮಗಳೆನುತಿರ್ದನು ನಿನ್ನಿನಿಯನು ನಿನ್ನ ॥೪॥

ಕಂ|| ಅಳಿಯನ ಪಿತನಂ ಪೂಜಿಪ |
ನೆಲೆಕನ್ಯಾಪಿತನು ಪೂಜಿಸಿದೆ ನೀನೆನ್ನಂ ||
ಅಳಿದೈ ನೀನೀಪರಿಯಾದಳಲಿಂ |
ತೊಳಲುವದು ತುಳಿದೆನೇಂ ಪಾತಕಿಯೋ ||

ಕೌಸಲ್ಯೆ—ಹಾ ವತ್ಸೆ ಜಾನಕಿ, ಏನುಮಾಡಲಿ? ಹಾಳುಜೀವವು ಮಂದಭಾಗ್ಯಳಾದ ನನ್ನನ್ನು ಬಿಡದಲ್ಲ.

ಅರುಂಧತಿ—ಎಲೆ ರಾಜಪುತ್ರಿಯೆ ಸಂತೈಸಿಕೋ. ಋಷ್ಯಶೃಂಗಾಶ್ರಮದಲ್ಲಿ ನಿಮ್ಮ ಕುಲಗುರುಗಳು ಹೇಳಿದ್ದನ್ನು ಮರೆತೆಯೊ, ಮೊದಲು ಕಷ್ಟವಾಗಿ ಮುಂದೆ ಮಂಗಳ ವುಂಟಾಗುವದೆಂದು ಹೇಳಿದರಲ್ಲವೆ.

ಕೌಸಲ್ಯೆ—ಎಲೌ ಪೂಜ್ಯೆ. ಕೋರಿಕೆಯು ಕೈಮಿಾರಿಹೋಯಿತಲ್ಲಾ.

ಅರುಂಧತಿ—ಎಲೌ, ರಾಜಪುತ್ರಿಯೆ ಹಾಗೆಣಿಸಬೇಡ.

ಕಂ|| ಧಾರಿಣಿಯೊಳಾತ್ಮಸಾಕ್ಷಾ |
ತ್ಕಾರವಪಡೆದಿರ್ಪಮುನಿಗಳಾಡಿದನುಡಿಯೊಳ್ ||
ಬಾರದು ಹುಸಿ ತದ್ವಚನದಿ|
ಸೇರಿರ್ಪುದು ಲಕ್ಷ್ಮಿತಪ್ಪದವರುಕ್ತಿಯು ಕೇಳ್ ||

* ತೆರೆಯಲ್ಲಿ—

(ಎಲ್ಲರೂ ಕೇಳುವರು)

ಜನಕ—ಇದು ಅನಧ್ಯಾಯ ಕಾಲವೆಂದು ಆಡುವ ಹುಡುಗರ ಕೋಲಾಹಲವಲ್ಲವೆ?

ಕೌಸಲ್ಯೆ—ಬಾಲ್ಯವೆ ಸುಲಭಸೌಖ್ಯವುಳ್ಳದ್ದು. (ನೋಡಿ) ಆಹ; ಈ ವಟುಗಳ ಮಧ್ಯದಲ್ಲಿರುವ ಈ ಬಾಲಕನ್ಯಾರು? ರಾಮಭದ್ರನನ್ನು ಪೋಲುವ ತನ್ನ ಚಲುವಿಕೆಯಿಂದ ನಮ್ಮ ಕಣ್ಗಳನ್ನು ಆನಂದಪಡಿಸುತ್ತಿರುವನು.

---

* ರಾಗ || ನೋಟು ||

ಬನ್ನಿಬನ್ನಿ ಬಾಲರೆ | ನಾವಿನ್ನು ಚಂಡನಾಡುವ | ತನ್ನಿ ತನ್ನಿ ದಾಂಡುವ|
ನಾವಿನ್ನು ಚಂಡನಾಡುವ ||

ಅರುಂಧತಿ—(ಮರೆಯಲ್ಲಿ) ಗಂಗಾದೇವಿ ಹೇಳಿದ ಕರ್ಣಾಮೃತವಾದ ರಹಸ್ಯ ಇದೇತಾನೆ ? ಆದರೆ ಆಯುಷ್ಮಂತರಾದ ಕುಶಲವರಲ್ಲಿ ಇವನಾವನೋ ಕಾಣೆ.

* ಜನಕ—

ಕೌಸಲ್ಯೆ—ಈ ಬಾಲಕನು ಕ್ಷತ್ರಿಯಬ್ರಹ್ಮಚಾರಿಯೆಂದು ನನ್ನ ಮನಸ್ಸಿಗೆ ತೋರುವುದು.

† ಜನಕ—ನೀನಂದಹಾಗೆಯೇ ಕಾಣುವುದು.

‡ಕಂ॥ ಹೊಳೆವುದು ಬೆನ್ನೊಳಗಿದೊ ಬ ।
ತ್ತಳಿಕೆಯು ನಡುವಿನೊಳು ಕಾಣುತಿದೆ ಮೌರ್ವೀಮೇ॥
ಖಲೆಗಳ್ರಾಜಿಸುತಿದೆ ಕರ ।
ದೊಳು ಪಿಪ್ಪಲದಂಡದಂತೆ ಪಡುಕೋದಂಡಂ ॥

ಎಲೌ ಪೂಜ್ಯಳೆ ಇವನಾರ ಕುಮಾರನು.

---

* ರಾಗ ॥ ॥ ॥

ಇವನಾವನೊ । ಬಹುಸುಂದರನಾಗಿಹಬಾಲಕನು ॥ಪ॥ ಕುವಲಯದಳವ । ಪೋಲುವತನುಕಾಂತಿಯಿಂ । ನವಜಲಧರಶಾಬದೋಲ್ । ಬಹು ॥೧॥ ತಳೆದಶಿಖಂಡದಿಂ । ಚಲುವಾದಕದಪಿಸಿಂ । ನಲಿಯುವನವಿಲಂದದಿ । ಬಹುಸುಂದರ ॥೨॥ ಮರಳಿಶಿಶುತ್ವವಧರಿಸಿದ । ಸುಗುಣಾಕರರಘುವರನಂದದಿ ॥ ಬಹು ॥೩॥ ನಿಟ್ಟಿಸಿದೊಡನೆನ್ನ । ದಿಟ್ಟಿಗಮೃತಾಂಜನ । ವಿಟ್ಟಂತೆಸಂತೋಷಿಪ ॥ ಬಹುಸಂದರ ॥೪॥

† ರಾಗ ॥ ॥ ॥

ನೆರದಿರ್ಪವಟುಗಳನೆರವಿಯಸಿರದಲಂ । ಕರಿಸುತಸಿಜಕಾಂತಿಯಿಂ । ಬಹುಸುಂದರನಾಗಿಹಬಾಲಕನು ॥೧॥

‡ ರಾಗ ॥ ॥ ॥

ಎಸೆವುವುಬತ್ತಳಿಕೆಗಳಿದೊಬೆನ್ನೊಳು । ಭಸಿತಂದಳೆದೆದೆಯೊಳ್ । ಮಿಸುಗುತ್ತಿದೆಮೃಗಚರ್ಮವುಮೌರ್ವೀಖಲೆಗಳ್ನಡುವೋಳ್ । ವಸನದೆಬಿಗಿದಿರ್ಪಿವ್ರಕೈ । ಪೊಸಪಳದಜಪಮಾಲಿಕೆಯುಂಪಿಡಿದಶ್ವತ್ಥದಂಡಂ ॥

ಅರುಂಧತಿ—ಎಲೈ ರಾಜರುಷಿಯೆ ಈಗತಾನೇ ವಾಲ್ಮೀಕಿಯಾಶ್ರಮಕ್ಕೆ ಬಂದ ನಾವು ಈತನ ಸಂಗತಿಯನ್ನು ತಿಳಿಯುವುದು ಹ್ಯಾಗೆ?

ಜನಕ—ಎಲೈ ಕಂಚುಕಿಯೆ ನನಗಾದರೆ ಬಹು ಕುತೂಹಲವುಂಟಾಗಿರುವುದು ಆದ್ದರಿಂದ ಪೂಜ್ಯರಾದ ವಾಲ್ಮೀಕಿಗಳನ್ನು ಕುರಿತು ಯಾರೋ ಕೆಲವರು ವೃದ್ಧರು ಈ ಬಾಲಕನ್ಯಾರೆಂದು ಕೇಳಿ ತಮ್ಮ ದರ್ಶನವನ್ನು ಅಪೇಕ್ಷಿಸುತ್ತಿರುವರೆಂದು ಹೇಳು.

ಕಂಚುಕಿ—ಆಜ್ಞೆಯಾದಂತಾಗಲಿ (ಎಂದು ಹೋಗುವನು)

ಕೌಸಲ್ಯೆ—(ನೋಡಿ) ಇದೋ ಕಂಚುಕಿಯ ವಚನವನ್ನು ಕೇಳಿದೊಡನೆ ಮುನಿಕುಮಾರರನ್ನು ಬಿಟ್ಟು ವಿನಯಪೂರ್ವಕವಾಗಿ ಆ ಬಾಲಕನು ನಮಗೆ ಅಭಿಮುಖವಾಗಿ ಬರುವನು.

ಜನಕ—ಚೆನ್ನಾಗಿ ನೋಡಿ ಆಹಾ ! ಇದೇನಾಶ್ಚರ್ಯ.

ಕಂ॥ ಇವನೋಳ್ವಿನಯಶಿಶುತ್ವಂ ।
ಕವಿದೀಮಹಿಮಾತಿಶಯರಭಿಜ್ಞೆಗೆತಿಳಿಗುಂ ॥
ಅವಲೋಕನ ಸುಖಮಿರದೆ ।
ನ್ನುವನೆಳೆಗುಂ ಸೂಜಿಕಲ್ಲವೋಲ್ಧಾತುವನೋಲ್ ॥

(ಲವನು ಪ್ರವೇಶಿಸುವನು)

ಲವ—ಪೂಜ್ಯರಾದಾಗ್ಯೂ ಇವರ ಕುಲನಾಮಕ್ರಮಗಳನ್ನು ತಿಳಿಯದೆ ಇವರನ್ನು ಸ್ವತಂತ್ರಿಸಿ ಹ್ಯಾಗೆ ನಮಸ್ಕರಿಸತಕ್ಕದ್ದು. (ಚಿಂತಿಸಿ) ಯಾರಾದರೇನು ಹಿರಿಯರಾದವರಿಗೆ ನಮಸ್ಕರಿಸಬೇಕೆಂದು ಗುರುಜನಗಳಿಂದ ಕೇಳಬಲ್ಲೆನು. (ವಿನಯಪೂರ್ವಕವಾಗಿ ಸಮೀಪಕ್ಕೆ ಬಂದು) ಇದೋ ಲವನು ನಮಸ್ಕರಿಸುವನು.

{ ಅರುಂಧತಿ, ಜನಕ. } ಎಲೈ ಮಂಗಳಾಂಗನೆ ಆಯುಷ್ಮಂತನಾಗು.

ಕೌಸಲ್ಯೆ—ಮಗನೆ ಚಿರಂಜೀವಿಯಾಗು.

ಅರುಂಧತಿ—ಬಾ ವತ್ಸನೆ ಬಾ. (ಎಂದು ಲವನನ್ನು ತೊಡೆಯಮೇಲೆ ಕೂಡಿಸಿ ಕೊಂಡು ಮರೆಯಲ್ಲಿ) ದೈವಯೋಗದಿಂದ ನನ್ನ ಅಂಕವು ಪೂರ್ಣ ವಾದದ್ದಲ್ಲವೆ? ಮನೋರಥವು ಪೂರ್ಣವಾಯಿತು.

*ಕೌಸಲ್ಯೆ—ಜಾತನೆ ಯಿತ್ತ ಸ್ವಲ್ಪ ಬಾ. (ಲವನನ್ನು ತಬ್ಬಿಕೊಂಡು) ವತ್ಸ ಎಲ್ಲಿ ನಿನ್ನ ಮುಖಚಂದ್ರನನ್ನು ಚೆನ್ನಾಗಿ ನೋಡುವೆನು. (ಎಂದು ಗಲ್ಲವನ್ನು ಹಿಡಿದೆತ್ತಿ ನೋಡಿ ಕಣ್ಣೀರಿಂದ ಕೂಡಿ) ಎಲೈ ರಾಜ ರುಷಿಯೆ ನೋಡಲಿಲ್ಲವೆ ಚೆನ್ನಾಗಿ ನೋಡಲು ಈ ಮಗುವಿನ ಮುಖವು ಆ ಜಾನಕಿಯ ನಗೆಮೊಗಕ್ಕೆ ಸಾಟಿಯಾಗಿಯೇ ಇರುವುದು

ಜನಕ—ಎಲೌ ಪ್ರಿಯಸಖಿಯೆ ನೋಡುವೆನು. (ಎಂದು ನೋಡಿ)

ಕಂ|| ಆಮೊಗವಾಕಣ್ಗಳ್ಗೆ |
ಣಾಮಾತಾವಿನಯಮೆಲ್ಲ ವೀಕ್ಷಿಸೆಸೀತಾ ||
ರಾಮರಪೂರ್ಣಛಾಯೆಯೊ |
ಳೀ ಮಗುವೊಳುತೋರ್ಪುದೆಂತು ಸೈರಿಪೆನಾಂ ||

ಕೌಸಲ್ಯೆ—ವತ್ಸ ನಿನ್ನ ತಾಯಿ ಇರುವಳೆ, ನಿನ್ನ ತಂದೆಯನ್ನು ಸ್ಮರಿಸುವೆಯೊ?

ಲವ—ಇಲ್ಲ.

ಕೌಸಲ್ಯೆ—ಹಾಗಾದರೆ ನೀನು ಯಾರಮಗ?

ಲವ—ಪೂಜ್ಯರಾದ ವಾಲ್ಮೀಕಿಗಳ ಮಗನು.

ಕೌಸಲ್ಯೆ—ವತ್ಸನೆ ಹೇಳತಕ್ಕದ್ದನ್ನೆಲ್ಲಾ ಹೇಳು ಕೇಳುವೆನು.

---

* ರಾಗ || ಬೇಹಾಗ್ ||

ಅನುಕರಿಸುವನು । ಮತ್ತನೆಯನಾಕೃತಿಯನು ||ಪ|| ಕೋಮಲದೂರ್ವಾಶ್ಯಾಮಳನು । ಭರತನುರಾಮಣೀಯಕದೆ । ರಾಮಭದ್ರನನು ||೧|| ನಳಿನಕೇಸರವನಸಿದರಸಂಚೆಯಕಲರವದಂತಿಹ । ಲಲಿತಸ್ವರದಿಂ ||೨|| ಆರೈದೊಡೆಸುಕುಮಾರನವ್ಮೃದುಳಶರೀರಸ್ಪರ್ಶವು। ಈರೀತಿಯತಾನನುಕರಿಸುವನೆನ್ನ । ತನಯನಾಕೃತಿಯನು ||೩||

ಲವ—ಇಷ್ಟೇ ನನಗೆ ತಿಳಿಯತಕ್ಕದ್ದು.

ತೆರೆಯಲ್ಲಿ—ಎಲಾ ಎಲಾ ಸೈನಿಕರಿರ! ಆಶ್ರಮಸಮೀಪ ಭೂಮಿಯನ್ನು ಯಾರೂ ಆಕ್ರಮಿಸಕೂಡದು. ಇದೋ ಕುಮಾರ ಚಂದ್ರಕೇತು ಆಜ್ಞಾಪಿಸುವನು.

ಅರುಂಧತಿ—ಓಹೊ! ಅಶ್ವಮೇಧ ಕುದುರೆಯ ರಕ್ಷಣನಿಮಿತ್ತ ವತ್ಸನಾದ ಚಂದ್ರಕೇತುವು ಬಂದನು. ಅವಶ್ಯವಾಗಿ ಅವನನ್ನು ಕಾಣಬೇಕು. ಹಾಹಾ ಸುದಿನವು.

ಕೌಸಲ್ಯೆ—ವತ್ಸನಾದ ಲಕ್ಷ್ಮಣಕುಮಾರನು ಆಜ್ಞಾಪಿಸುವನೆಂಬ ಅಕ್ಷರಗಳು ಕರ್ಣಾಮೃತಗಳಾಗಿರುವುವು.

ಲವ—(ಜನಕನನ್ನು ಕುರಿತು) ಆರ್ಯನೆ! ಚಂದ್ರಕೇತುಯಾರು.

ಜನಕ—ಎಲೆವತ್ಸನೆ ದಶರಥಪುತ್ರರಾದ ರಾಮಲಕ್ಷ್ಮಣರನ್ನುಕೇಳಿಬಲ್ಲೆಯ?

ಲವ—ಬಲ್ಲೆ ಅವರುತಾನೆ ರಾಮಾಯಣಕಥಾನಾಯಕರು.

ಜನಕ—ಇಷ್ಟು ತಿಳಿದು ಈಚಂದ್ರಕೇತುವು ಲಕ್ಷ್ಮಣಪುತ್ರನೆಂದು ತಿಳಿಯದೆ ಹೋದೆಯಾ.

ಲವ—ಹಾಗೆ? ಬಲ್ಲೆಬಲ್ಲೆ. ಮಿಥಿಲಾಧಿಪತಿಯಾದ ಜನಕನದೌಹಿತ್ರ ಈತ ಊರ್ಮಿಳಾಪುತ್ರನು.

ಅರುಂಧತಿ-(ನಕ್ಕು) ಕಥಾಪಾಂಡಿತ್ಯವನ್ನು ಈತನು ಚೆನ್ನಾಗಿ ಪ್ರಕಟಿಸಿದನು.

ಜನಕ—ನೀನು ಇಷ್ಟು ಜಾಣನಾದರೆ ಕೇಳುವೆನು ಹೇಳು ದಶರಥನಪತ್ನಿಯರಲ್ಲಿ ಯಾರ್ಯಾರು ಉದಿಸಿದರು. ಅವರ ಹೆಸರೇನು?

ಲವ—ಈ ಕಥಾವಿಭಾಗವು ನಮ್ಮಿಂದಲೂ ಮತ್ತೊಬ್ಬನಿಂದಲೂ ಕೇಳಿದ್ದಲ್ಲ.

ಜನಕ—ಕವಿಯಿಂದಲೂ ಹೇಳಲ್ಪಡಲಿಲ್ಲವೆ?

ಲವ—ಹೇಳಲ್ಪಟ್ಟಿದೆ. ಪ್ರಕಾಶಪಡಿಸಲಿಲ್ಲ. ಅದರಲ್ಲಿ ಒಂದು ಭಾಗವನ್ನು ನಾಟಕರೂಪವಾಗಿಮಾಡಿ ಸ್ವಹಸ್ತದಿಂದಲೆ ಬರೆದು ಪೂಜ್ಯರಾದ ವಾಲ್ಮೀಕಿಮುನಿಗಳು ಭರತಮುನಿಗೆ ಕೊಟ್ಟು ಕಳುಹಿಸಿದರು.

ಜನಕ—ಯಾತಕ್ಕಾಗಿ ?

ಲವ—ಆ ಭರತಮುನಿಗಳು ವಾಲ್ಮೀಕಿಗಳಿಗೆ ಅದರಲ್ಲಿ ಬಹಳ ವಿಶ್ವಾಸವುಂಟು. ಶಿಷ್ಯರ ಹಸ್ತದಿಂದ ಭರತಾಶ್ರಮಕ್ಕೆ ಕಳುಹಿಸಿದರು. ಅವರಸಂಗಡ ರಕ್ಷಣಾರ್ಥವಾಗಿ ಧನುರ್ಧಾರಿಯಾದ ನನ್ನ ಸಹೋದರನನ್ನು ಕಳುಹಿಸಿರುವರು.

ಜನಕ—ನಿನಗೆ ಸಹೋದರನು ಇರುವನೆ ?

ಲವ—ಇರುವನು.

ಕೌಸಲ್ಯೆ—ಆತನು ನಿನಗೆ ಅಣ್ಣನೊ ತಮ್ಮನೊ ?

ಲವ—ಉತ್ಪತ್ತಿಕ್ರಮದಲ್ಲಿ ಅವನೇ ಜ್ಯೇಷ್ಟನು.

ಕೌಸಲ್ಯೆ—ಹಾಗಾದರೆ ನೀವು ಅವಳೀ ಮಕ್ಕಳೊ ?

ಲವ—ಹೌದು.

ಜನಕ—ಪೂರ್ತಿಯಾಗಿ ಆ ಕಥೆಯನ್ನು ಹೇಳು.

ಲವ—ಪುರಜನರ ಮಿಥ್ಯಾಪವಾದವನ್ನು ಕೇಳಿ ಭೀತನಾದ ಮಹಾರಾಜನ ಆಜ್ಞಾನುಸಾರವಾಗಿ ಪೂರ್ಣಗರ್ಭಿಣಿಯಾದ ಜಾನಕಿಯನ್ನು ಅರಣ್ಯದಲ್ಲಿ ಬಿಟ್ಟು ಲಕ್ಷ್ಮಣನು ಹಿಂತಿರುಗಿದನು.

ಕೌಸಲ್ಯೆ—ಹಾ ವತ್ಸೆ ! ಕೋಮಲಾಂಗಿಯಾದ ನಿನ್ನೊಬ್ಬಳಿಗೆ ಹೀಗೆ ಪರಿಣಮಿಸಿತೆ ?

* ಜನಕ—

ಲವ—ಎಲೌ ಆರ್ಯೆ, ಇವರ್ಯಾರು ?

ಅರುಂಧತಿ—ಈಕೆ ಕೌಸಲ್ಯೆ, ಈತ ಜನಕ.

---

* ರಾಗ॥ ತಾಳ॥

ಸೀತೆ ಭೂಮಿಜಾತೆ ಅಹಾ । ಮಾತೆ ಅಹಾ ॥ಪ॥ ಈತೆರದಜನಾಪವಾದಕ್ಕೀಡಾದೆಯ । ಮಾತೆ ಅಹಾ ॥ ಅ ॥ ಬನದಿಘೋರಮೃಗಗಳು । ತಿನಲುಮೇಲೆ ಬೀಳಲು । ಜನಕ ಅಹಾ ಯೆನ್ನುತೆಂತು ವನದಿಗೋಳಿಟ್ಟೆಯೊ ಅಹಾ ॥೧॥ ಪ್ರಸವವೇದನೆಯಲಿ । ಬಸಣಿಯಾಗುತ್ತಲಿ । ಬಸವಳಿಯುತಾಲೆಂತದೆನ್ನ । ಪೆಸರನೆತ್ತಿಕೂಗಿದೆಯೊ ಹಾ ॥೨॥

(ಬಳಿಕ ಲವನು ಬಹುಮಾನವಾಗಿ ನೋಡುವನು)

ಜನಕ—(ಕೋಪದಿಂದ) ಆಹ ಪುರಜನರು ಮರ್ಯಾದೆಯನ್ನು ಮೀರಿ ನಡೆದದ್ದು ರಾಜನಾದ ರಾಮನು ವಿಚಾರಮಾಡದೆ ನುಡಿದದ್ದು ಇವೆರಡೂ ಆಶ್ಚರ್ಯ.

ಕಂ॥ ಈಪರಿಗೈವದರೊಳ್ ಮ |
ತ್ಕೋಪಾನಲನಿಂದು ಭುಗಿಲೆನುತ್ತು ಜ್ವಲಿಕುಂ ||
ಚಾಪದೊಳಾದೊಡಮಥವಾ |
ಶಾಪದೊಳಾದೊಡ್ಪ್ರಶಮಿಸುವೇಂ ||

ಕೌಸಲ್ಯೆ—ಎಲೌ ಪೂಜ್ಯಳೆ ಕಾಪಾಡು ಕಾಪಾಡು. ಕುಪಿತನಾದ ರಾಜರ್ಷಿಯನ್ನು ಪ್ರಸನ್ನನನ್ನಾಗಿ ಮಾಡು.

ಅರುಂಧತಿ—ಕಂ॥ ಅವಮಾನದೆಪ್ಪುಮಾನಿಗಳಾ |
ದವರ ಮನಕ್ಕೆಂಟಪ್ಪುದಾದೊಡಮವನೀ ||
ಧವಸೈರಿಸೈಯ್ಯರಾಮಂ |
ಕುವರಂ ಪುರಜನರು ದೀನರವರಂಸಲ್ಹೈ ||

ಸಹಜ ಎಲೈ ರಾಜರ್ಷಿಯೆ ಸೈರಿಸು ಸುಪುತ್ರನಾದ ರಾಮಭದ್ರನಲ್ಲಿಯು ದೀನರಾದ ಪುರಜನಗಳಲ್ಲಿಯು ಕೋಪಿಸಕೂಡದು.

ಜನಕ—ಕಂ || ನಂದಿತ್ತು ಕೋಪಶಿಖಿ ರಘು |
ನಂದನನೊಳು ಪೌರರೊಳು ಮಕಟಾ ರಾಮಂ ||
ಕಂದಂಪರಿಕಿಸೆ ಪುರಜನ |
ವೃಂದಂ ತಾನಹುದು ಬಾಲವೃದ್ಧಸ್ತ್ರೀಯರ್ ||

ವಟುಗಳು—(ಸಂಭ್ರಾಂತರಾಗಿ) ಎಲೈ ಕುಮಾರನೆ ಅಶ್ವಅಶ್ವವೆಂದು ಯಾವುದೊ ಒಂದು ಪ್ರಾಣಿ ಅನ್ಯದೇಶದಲ್ಲಿ ಕೇಳಿಬಲ್ಲೆವಷ್ಟೆ. ಅದನ್ನು ಈಗ ಪ್ರತ್ಯಕ್ಷವಾಗಿ ಕಂಡೆವು.

ಲವ—ಅಶ್ವವೆಂದು ಪಶುಶಾಸ್ತ್ರದಲ್ಲಿಯೂ ಯುದ್ಧದಲ್ಲಿಯೂ ಕರೆಯಲ್ಪಟ್ಟದೆ. ಆದ್ದರಿಂದ ಅದು ಹ್ಯಾಗಿದೆ ಹೇಳಿ.

* ವಟುಗಳು—

---

* ರಾಗ॥ ತಾಳ॥

ಕೇಳುಕೇಳುಪೇಳುವಮಾತ। ಬಾಲಪಶ್ಚಾದ್ಭಾಗದೊಳುಮಿಗೆ। ತಾಳಿದೆಕೊಂಡಿಹುದವಗಳು ॥೧॥ ಉದ್ದವಾಗಿಕತ್ತುನೋಡಲಿಕೆ। ಇದ್ದವುಗೊರಸುಗಳು

ಲವ—(ವಿನಯದಿಂದ) ಎಲೈ ಆರ್ಯರುಗಳಿರ ! ನೋಡಿನೋಡಿ ಇವರು ನನ್ನನ್ನು ಸೆಳೆದುಕೊಂಡು ಹೋಗುತ್ತಾರೆ. (ತ್ವರೆಯಿಂದ ಹೋಗುವನು)

ಕೌಸಲ್ಯೆ—ಎಲೌ ಪೂಜ್ಯಳೆ ಈತನನ್ನು ಕಾಣದಿದ್ದರೆ ಸೈರಿಸಲಾರೆನು: ಆದ್ದರಿಂದ ಇನ್ನೊಂದುಕಡೆಗೆ ಹೋಗಿ ವಟುಗಳೊಡನೆ ಹೋದ ಕುಮಾರನನ್ನು ಪುನಶ್ಚ ನೋಡೋಣ.

ಅರುಂಧತಿ—ಎಲೈ ದೇವಿಯೆ ಆ ಚಪಲನು ಬಹು ದೂರಕ್ಕೆಹೋದನು. ಕಾಣಿಸುವುದು ಹ್ಯಾಗೆ ?

(ಅನಂತರ ಕಂಚುಕಿ ಬರುವನು)

ಕಂಚುಕಿ—ಸಮಯದಲ್ಲಿ ನಿನಗೆ ತಿಳಿಯುವುದೆಂದು ಪೂಜ್ಯರಾದ ವಾಲ್ಮೀಕಿಗಳು ಆಜ್ಞಾಪಿಸಿದರು.

ಜನಕ—ಇದು ಬಹು ಗಂಭೀರವಾಗಿದೆ. ಏನೋ ಒಂದು ಆಶ್ಚರ್ಯವು ನಡೆಯುವುದು. ಆದುದರಿಂದ ಎಲೌ ಅರುಂಧತಿಯೆ ಎಲೌ ಕೌಸಲ್ಯೆಯೆ ಬನ್ನಿ ಹೋಗೋಣ. (ಎಂದೆಲ್ಲರೂ ಹೋಗುವರು)

(ಅನಂತರ ಲವನೊಡನೆ ವಟುಗಳು ಪ್ರವೇಶಿಸುವರು)

ವಟುಗಳು—ಎಲೈ ಕುಮಾರನೆ ಆಶ್ಚರ್ಯವನ್ನು ನೋಡು.

ಲವ—ನೋಡಿದೆ ತಿಳಿದೆ ಇದೇ ಅಶ್ವಮೇಧದಕುದುರೆ.

ತೆರೆಯಲ್ಲಿ-ಕಂ || ಈರೇಳ್ ಲೋಕಕ್ಕೊರ್ವನೆ |
ವೀರಾಗ್ರಣಿಯೆನಿಪ ರಾವಣಾರಾತಿಯದೀ ||
ಚಾರುತರಾಶ್ವಂ ಮೇಣ್ |
ದ್ವೀರತೆಯುಂ ಸಾರುತಿರ್ಪ ವಿಜಯಪತಾಕಂ ||

ಲವ—(ಕೋಪದಿಂದ) ಆಹ ಈ ಮಾತುಗಳು ನನಗೆ ಕೋಪವನ್ನು ಹೆಚ್ಚಿಸುವುವು. (ತೆರೆಯಕಡೆ ನೋಡಿ) ಎಲಾ ಏನು ಹೀಗೆಹೇಳುತ್ತೀರಿ ! ಈ ಭೂಮಿಯಲ್ಲಿ ಕ್ಷತ್ರಿಯರು ಯಾರೂ ಇಲ್ಲವೋ ?

ತೆರೆಯಲ್ಲಿ—ನಮ್ಮ ಮಹಾರಾಜನನ್ನು ಬಿಟ್ಟರೆ ಇನ್ಯಾರೂ ಕ್ಷತ್ರಿಯರೇ ಇಲ್ಲ.

ನಾಲ್ಕವಕೆ ||೨|| ಎಳೆಹುಲ್ಲತಿಂದು । ಪುರೀಷವನುಬೆಳಗಾಯಿ । ಯಂತಿದು ಪರಿದು ||೩|| ಆಡುವದೇಚರುವದು । ಮುಂದೆವೋಡುವೆವಾಂ । ಬಾಬಾ ಹಿಂದೆ ||೪|| (ಎಂದು ಎಳೆಯುವರು)

* ಲವ—ಎಲೈ ವಟುಗಳಿರಾ ಈ ಕುದುರೆಯನ್ನು ಕಲ್ಲುಗಳಿಂದ ಹೊಡೆದು ಅರಣ್ಯಕ್ಕೆ ಓಡಿಸಿ.

(ಅನಂತರ ಕ್ರೋಧಗರ್ವಗಳಿಂದ ಕೂಡಿದ ಪುರುಷನು ಪ್ರವೇಶಿಸುವನು)

ಪುರುಷ—ಎಲೈ ನಿನ್ನ ಚಪಲತೆಯನ್ನು ತೆಗೆತೆಗೆ. ಯಾರಮುಂದೆ ತೋರಿಸುವೆ ತೀಕ್ಷ್ಣಗಳಾದ ಶರಗಳು ಶಿಶುಗಳಾದಾಗ್ಯೂ ಗರ್ವದಮಾತುಗಳನ್ನು ಸಹಿಸುವವಲ್ಲ. ಅರಿಮರ್ದನನಾದ ಲಕ್ಷ್ಮಣಪುತ್ರನಾದ ಚಂದ್ರಕೇತುವು ಇದೋ ಬರುವನು. ಆತನುಬರುವುದರೊಳಗಾಗಿ ಓಡಿಹೋಗಿ.

ವಟುಗಳು—ಎಲೈ ಕುಮಾರನೆ ಕುದುರೆಯಿಂದ ನಮಗಾಗತಕ್ಕದ್ದೇನು? ಬಿಡುಬಿಡು, ಜ್ವಲಿಸುವ ಆಯುಧಶ್ರೇಣಿಗಳು ನಮ್ಮನ್ನು ಭಯಪಡಿಸುವುವು. ಆಶ್ರಮವು ದೂರವಾಗಿದೆ ಆದ್ದರಿಂದ ಬಾ ಹುಲ್ಲೆಯ ಹಾರಿಕೆಯಂತೆ ಓಡಿಹೋಗೋಣ.

ಲವ—ಏನುಏನು? ಶಸ್ತ್ರಗಳು ಜ್ವಲಿಸುತ್ತಿರುವುವೋ ಹಾಗಾದರೆ ನೋಡಿ. (ಎಂದು ಧನುಸ್ಸನ್ನು ತೋರಿಸಿ)

ಕಂ॥ ಹೂಂಕಾರದೊಳಹ ಮೌರ್ವೀ ।
ಟಂಕಾರದೆ ಮೇಘರವವ ಮಾಳ್ಪೀಚಾಪಂ ॥
ಶಂಕಿಸದೆಕವಿದವೀರರ ।
ಹುಂಕಾರವನೀಗಳರದೆ ನಿಲ್ಲಿಪೆರಣದೊಳ್ ॥

(ಎಂದೆಲ್ಲರೂ ಹೋಗುವರು)

ನಾಲ್ಕನೆಯ ಅಂಕ ಮುಗಿದುದು

***

---

* ರಾಗ॥ ಬೇಹಾಗ್॥ ತಾಳ॥

ಹೊಡೆಹೊಡೆನೀಚರ। ಕಡುಗಿದಬಾಯನು। ಫಡಫಡ। ದಾರೊಳು। ನುಡಿವಿರಿಪಂಥವ ॥೧॥ ಛಲನಿಮ್ಮರಸನು। ಕಲಿಯಾದವರೆ। ನಳುಕದೆಶೂರಿದ। ಕೆಲಸೈನಿಕರಿರ ॥೨॥ ಸಾಕಾಡುವದಿ। ನ್ನೇತಕೆಕ್ಷಣದೊಳು। ತಾಕುತವಿಜಯಪ। ತಾಕೆಯಕೊಂಬೆನು ॥೩॥

ಐದನೆಯ ಅಂಕ.

* (ತೆರೆಯಲ್ಲಿ ಗಾನಮಾಡುವರು)

(ಅನಂತರ ಸುಮಂತ್ರ ಸಾರಥಿ ಸಮೇತನಾಗಿ ಚಂದ್ರಕೇತು ರಥಾರೂಢನಾಗಿ ಪ್ರವೇಶಿಸುವನು)

† ಚಂದ್ರಕೇತು—ಎಲೈ ಆರ್ಯ ಸುಮಂತ್ರನೆ! ನೋಡುನೋಡು.

ಸುಮಂತ್ರ—ಎಲೈ ವತ್ಸನೆ! ನಿಜ.

ಕಂ|| ಚೆಲ್ವಿಂದೆ ನಿನ್ನ ರೂಪನೆ |
ಪೋಲ್ವೀ ಶಿಶುವಿವನ ನೋಡೆ ಕೌಶಿಕಮಖದೊಳ್ ||
ಗೆಲ್ವೊಡೆ ಸುಬಾಹುಮುಖರಂ |
ಬಿಲ್ವಿಡಿದಾ ರಾಮಭದ್ರನಂ ನೆನೆಯಿಸುವಂ ||

ಚಂದ್ರಕೇತು—ಇವನೊಬ್ಬನಲ್ಲಿ ಬಹುಮಂದಿಗಳು ಯುದ್ಧವನ್ನುಪಕ್ರಮಿಸಿದ್ದು ನೋಡಿ ನನ್ನ ಮನಸ್ಸು ಲಜ್ಜೆಪಡುವುದು.

---

* ರಾಗ || ಸೋಟು || ತಾಳ ||

ಎಲೆಲೆಸೈನಿಕರೆ ನಿಮಗೆ ಬೆಂಬಲವಾಯ್ತು | ಅಳುಕಲೇಕೆ ಬಾಲಕನೊಳು ಬಲುಜನ್ನಾಯ್ತು || ೧ || ಖ್ಯಾತನೆನಿಸುವಾಸುಮಂತ್ರ | ಸೂತನಕೂಡಿ ಐತರುವನು ರಣಕೆ ಚಂದ್ರಕೇತುವುನೋಡಿ || ೨ || ತೋರುವದಿದೋನೋಡಿ | ಕೋವಿದಾರಪತಾಕೆ | ತೇರಿನಲ್ಲಿ ಚಲಿಪಪಟವು | ಗಗನತಾಕೆ ||

† ರಾಗ || ಸೋಟು || ತಾಳ ||

ಆರೋ ಕಾಣೆನು | ಕುಮಾರ ನೀತನು | ವೀರನಾಗಿ ಸುರಿವನು | ಶರಧಾರೆಯುನ್ನುತಾ ||೧|| ಇನಿತು ಶೌರ್ಯವೀ | ತನೊಳಗಿಹುದಕೆ | ಮನವಿದಾಶ್ಚರ್ಯಪಡೆವು | ದೆನುತುಮುಸುರ್ವೆನು || ೨ || ಬಲಿಯುದಿಹ ರಘು ಕುಲದ ಮೊಳಕೆ ವೋಲ್ | ಹೊಳೆವನಿವನ ಕಲಿತನವೇಂ | ಹೊಗಳ್ವೆನಹಹತಾಂ || ೩ ||

ಕಂ|| ಒಂದುಕಡೆ ಶಸ್ತ್ರಧರಭಟ |
ವೃಂದಂ ಮತ್ತೊಂದುಕಡೆ ರಥಾರೋಹಕರುಂ ||
ಇನ್ನೊಂದುಕಡೆ ಮದಗಜಂಗಳ |
ಸಂದೋಹಂ ಮುತ್ತಿ ತಹಹ ಶಿಶುವಿವನೊರ್ವಂ ||

ಸುಮಂತ್ರ—ಎಲೈ ವತ್ಸನೆ! ಎಲ್ಲಾ ಕಡೆಯಲ್ಲೂ ಮುತ್ತಿದರೂ ಈ ಬಾಲಕನು ನಮ್ಮ ಬಲವನ್ನು ಗಣಿಸದಿರುವನು. ಇನ್ನು ಮುತ್ತದಿದ್ದರೆ ಹೇಳತಕ್ಕದ್ದೇನು ?

ಚಂದ್ರಕೇತು—ನಿಜ. ಆರ್ಯನೆ! ಬೇಗ ರಥವನ್ನು ಹಾರಿಸು ನಮ್ಮ ಸೈನಿಕರ ಕೊಲೆಗೆ ಇವನು ಉಪಕ್ರಮಿಸಿದನು. ನೋಡು ?

ಕಂ|| ಅತಿಬಲನೀ ಶಿಶು ಮುತ್ತಿದ |
ಚತುರಂಗಬಲಂಗಳಂ ಕ್ಷಣಾರ್ಧದೊಳಹಹಾ ||
ಕ್ಷಿತಿಯೊಳ್ ಕೆಡಪಿಹನಿವನ |
ಪ್ರತಿಭಟನೀತನ ಪರಾಕ್ರಮಕ್ಕೆಣೆಯಿಲ್ಲಂ ||*

ಸುಮಂತ್ರ—ಇಂಥಾ ಪರಾಕ್ರಮಿಯಾದ ಇವನೊಡನೆ ವತ್ಸನಾದ ಚಂದ್ರಕೇತುವನ್ನು ದ್ವಂದ್ವಯುದ್ಧಕ್ಕೆ ಹ್ಯಾಗೆತಾನೆ ನೇಮಿಸಲಿ. ಅಥವಾ ಇಕ್ಷ್ವಾಕುಕುಲದ ವೀರವ್ರತವನ್ನು ನಾವು ಬಲ್ಲವರಷ್ಟೆ. ಅಂಥಾ ಸಮಯವೊದಗಿದಾಗ ಮಾಡತಕ್ಕದ್ದೇನು ?

ಚಂದ್ರಕೇತು—(ಸವಿಸ್ಮಯ ಲಜ್ಜೆಗಳಿಂದ ಕೂಡಿ) ತೆಗೆ ತೆಗೆ. ನಮ್ಮ ಸೈನ್ಯವೆಲ್ಲಾ ಹಿಂತೆಗೆಯಿತಲ್ಲಾ. ಆರ್ಯನೆ! ರಥವನ್ನು ಬೇಗಬಿಡು.

---

* ರಾಗ || ಕಮಾಚ್ || ತಾಳ ||

ಅನುಮಾ ಕುಮಾರನು | ಸಮರೈಕ ಶೂರನು ||ಪ|| ತಿರುವಿನಬ್ಬರದಿ ದಿ | ಕ್ಕರಿಗಳಕಿವಿಡಾಗಿಸುತ್ತ ಕರದಚಳಕವೆಂತೊ | ಸರಳ ಸರಿಯ ಸುರಿವನು || ೧ || ಗಂಡುಗಲಿಯ ಬಾಣದಿ | ಕಡಿಖಂಡವಾದಬಲದೆ ಭೂ | ಮಂಡಲವಿದೊ ತೀವಿತೇನ | ಖಂಡಶೌರ್ಯನು || ೨ ||

ಸುಮಂತ್ರ—(ರಥವೇಗವನ್ನಭಿನಯಿಸಿ) ಎಲೈ ವತ್ಸನೆ! ಇದೋ ನಾವು ಮಾತನಾಡಿಕೊಳ್ಳುತ್ತಿದ್ದ ಆ ವೀರನು.

ಚಂದ್ರಕೇತು—(ವಿಸ್ಮೃತಿಯನ್ನಭಿನಯಿಸಿ) ಆರ್ಯನೆ! ಈತನ ಹೆಸರೇನು?

ಸುಮಂತ್ರ—ಈತನ ಹೆಸರು ಲವನೆಂದು ಸ್ತುತಿಪಾಠಕರಿಂದ ಕೇಳಿದೆನು.

ಚಂದ್ರಕೇತು—ಎಲೈ ವೀರನೆ! ನಿನಗೀ ಬಲದವರೊಡನೆ ಕಲಹವೇತಕ್ಕೆ ಬಾ, ಬಾ. ಯುದ್ಧಭೂಮಿಯಲ್ಲಿ ರಣಕೌಶಲವಂ ತೋರುವೆನು.

ಸುಮಂತ್ರ—ಎಲೈ ವತ್ಸ! ಚಂದ್ರಕೇತುವೆ ನೋಡು ನೋಡು.

ಕಂ॥ ಕರೆಯಲ್ ನೀಂ ಕೂಡಲೆ ಹಿಂ।
ದಿರುಗಿದನಿದೊ ಬಾಲನೆಮ್ಮ ಸೈನಿಕರಂ ಸಂ॥
ಹರಿಪುದುಳಿದಹಹ ಗುಡಿಗಿಗೆ।
ಕರಿಗಳಕೊಲೆಬಿಟ್ಟು ಬರ್ಪ ಸಿಹ್ಮದವರಿಪ್ಪೋಲ್॥

(ಅನಂತರ ತ್ವರಿತವಾಗಿ ಕೂಗುತ್ತಾ ಲವನು ಪ್ರವೇಶಿಸುವನು)

ಲವ—ಭಾಪು, ರಾಜಪುತ್ರನೆ! ಭಾಪು, ನೀನು ಇಕ್ಷ್ವಾಕುಕುಲಸಂಭೂತನಲ್ಲವೆ! ಆದ್ದರಿಂದ ನಿನ್ನೊಡನೆ ಯುದ್ಧಮಾಡಬೇಕೆಂದು ತಿರುಗಿ ಬಂದೆನು.

*ತೆರೆಯಲ್ಲಿ—

† (ತೆರೆಯಲ್ಲಿ ಕೋಲಾಹಲವಾಗುವುದು)

---

* ರಾಗ॥ ನೋಟ್॥ ತಾಳ॥

ಭಲಾರಾಜಪುತ್ರ। ಭಾನುಕುಲಭವನೆಲೆಯೆನುತ್ತ। ಯುದ್ಧವೆಸಗೆ ಬಂದನೀ ಲವ ॥೧॥ ಸಮರಭಟನಕೂಡಿಮಾಳ್ಪ ಸಮರಫಲವು। ಕ್ರಮದೆನಿಲ್ಲು ಸೆಣಸೆ ಕುಣಿವುದಮಮ ಬಾಹು ॥೨॥

† ರಾಗ॥ ನೋಟ್॥ ತಾಳ॥

ಬಾರೈ ಬಾರೈ ಬಾಲನೆಂದು। ಸೈರಿಸಿದೊಡೆ ಕೊಬ್ಬಿನೀನು। ವಿಾರಿನಮ್ಮ ಜೈಸುತಲಿ। ಜಾರಿದೆ ಜಾರಿದೆ ಭಾಪುಕಲಿ ॥೧॥

ಲವ—(ಕೋಪದಿಂದ ಹಿಂತಿರುಗಿ) ಆಹ! ಈಗತಾನೆ ಪರಾಜಯುವನ್ನು ಹೊಂದಿ ಪಲಾಯನ ಮಾಡಿದ ಸೇನಾ ಜನಗಳು ಪುನಶ್ಚ ಮೇಲೆಬಿದ್ದು ಪ್ರಹರಿಸುವರು. ಹೊಡೆ ನೀಚರಬಾಯನ್ನು.

ಕಂ|| ಎಲೆ ಸೇನಾಪತಿಗಳಿರಾ !
ಜಲನಿಧಿಯ ತರಂಗತತಿಯ ಕುಡಿಯುವ ಬಡಬಾ ||
ನಲನಂತೆ ನನ್ನ ಕೋಪ್ಪೋ |
ಜ್ವಲನಂ ದಹಿಸುವದು ನಿಲ್ಲಿ ನಿಮ್ಮಯ ಬಲಮಂ ||

(ಎಂದು ಹೋಗುವನು)

ಚಂದ್ರಕೇತು—ಎಲೈ ಕುಮಾರನೆ ಬಾ, ಬಾ.

ಕಂ|| ಘನಗುಣದಿಂ ಮಿತ್ರಂ ನೀ |
ನೆನಗಾಂ ಸಖನಯ್ಯನಿನಗೆ ಕೊಲುವರೆ ನಿನ್ನೀ ||
ಜನಮಂ ನಿನ್ನಯ ವಿಕ್ರಮ |
ಕನಕಕ್ಕಿದೊ ಚಂದ್ರಕೇತುವೊರೆಗಲ್ಲಲ್ತೇ ||

ಲವ—(ಹರ್ಷಸಂಭ್ರಮದಿಂದ ಕೂಡಿ) ಆಹ ಮಹಾನುಭಾವನಾದ ರವಿಕುಲ ಕುಮಾರನ ಮಾತುಗಳು ಪ್ರಸನ್ನಗಳಾಗಿಯೂ ಕರ್ಕಶಗಳಾಗಿಯೂ ಇರುವುವು. ಈ ಸೈನಿಕರಿಂದ ನನಗೇನು. ಈತನನ್ನೇ ಸಂಭಾವಿಸುವೆನು.

(ಅನಂತರ ತೆರೆಯಲ್ಲಿ ಪುನಶ್ಚ ಕೋಲಾಹಲ ವಾಗುವುದು ಹಿಂದಿನಮಟ್ಟು, ಬಾರೈ ಬಾರೈ ಎಂದು ಹೇಳುವರು.)

ಲವ—(ಕೋಪದಿಂದ) ಆಹ ತೆಗೆತೆಗೆ ಈ ವೀರನೊಡನೆ ಸಲ್ಲಾಪಮಾಡುವೆನೆಂದರೆ ಪಾಪಿಗಳಾದ ಸೈನಿಕರು ಅವಕಾಶಕೊಡರಲ್ಲ. (ಎಂದು ಅವರ ಅಭಿಮುಖನಾಗಿ ಹೋಗುವನು)

ಚಂದ್ರಕೇತು—ಆರ್ಯನೆ! ನೋಡು ನೋಡು.

ಕಂ॥ ಇರಿಸುತ್ತೆನ್ನೊಳುಲಕ್ಷ್ಯವ |
ನಿರದನುಸರಿಸುತ್ತೆ ಪಿಂದೆಬಹಸೈನಿಕರಿಂ ||
ಮೆರೆವಂಧೃತಚಾಪನಿವಂ |
ಮರುತನಿನಲೆವಿಂದ್ರಚಾಪಯುತಜಲಧರದೋಲ್ ||

ಸುಮಂ—ಎಲೈ ವತ್ಸನೆ ಈತನನ್ನು ನೀನೇ ನೋಡು. ನಾನಂತು ಆಶ್ಚರ್ಯದಿಂದ ಪರವಶನಾಗಿರುವೆನು.

*ಚಂದ್ರ—ಎಲೈ ಸೇನಾನಾಯಕರಿರ!

ಲವ—ಆಹಾ ಇದಕೇನಮಾಡಲಿ, ಒಳ್ಳೇದು ಈಗ ಈ ಸೈನ್ಯವನ್ನೆಲ್ಲಾ ಜೃಂಭಕಾಸ್ತ್ರದಿಂದ ಸ್ತಂಭಿಸಿಬಿಡುವೆನು. (ಎಂದು ಧ್ಯಾನವನ್ನು ಅಭಿನಯಿಸುವನು)

ಸುಮಂ—ಇದೇನು ಅಕಸ್ಮಾತ್ತಾಗಿ ನಮ್ಮ ಸೇನಾಕೋಲಾಹಲವು ಶಾಂತವಾಯಿತು.

ಲವ—ಇನ್ನು ಈತನನ್ನು ಚನ್ನಾಗಿ ನೋಡುವೆನು.

ಸುಮಂ—ವತ್ಸನೆ ಕುಮಾರನು ಜೃಂಭಕಾಸ್ತ್ರವನ್ನು ಪ್ರಯೋಗಿಸಿದನು.

ಚಂದ್ರ—ಆರ್ಯನೆ ಅದಕ್ಕೆ ಸಂದೇಹವೇನು.

ಕಂ॥ ನಿಶ್ಚಯಮಿದೆಮ್ಮಸೈನ್ಯಂ |
ನಿಶ್ಚಲಮಾಗಿಹುದು ಬರೆದ ಚಿತ್ರದತೆರದಿಂ ||
ಆಶ್ಚರ್ಯಮಂಬರಂತೇ |
ಜಶ್ಚಿತ್ರಿತಮಾಯ್ತುಜೃಂಭಕಾಸ್ತ್ರಗಳಿಂದಂ ||

---

* ರಾಗ ॥ ಬೇಹಾಗ್ ॥

ಏನಿದೇನುಮಾನವೇಂದ್ರರೆ । ಸೂನುವಿನೊಳುರಣವಮಾಡೆ । ಮಾನವಿಲ್ಲವೇನಿಕೈಯ್ಯ ॥೧॥ ಕಿರಿಯುನಿವನುವಯುಸಿನಲಿ | ಹಿರಿಯುರುನೀವೀತನೊಬ್ಬ। ನರಕೆನೀವನೇಕರಿಂತು । ಧುರವನೆಸಗೆಮುನವಮಾಳ್ಪಿರೇನಿದೇನಿದು ॥೨॥ ತೆಗೆತೆಗೆನಿಮ್ಮನುನಾವುಮಿಗೆಜರಿಯುವದೇತಕೀ । ಮಗುವಿನಲ್ಲಿಕದನವೆಮಗೆ | ಜಗದೊಳಪಕೀರ್ತಿಯಲ್ತೆ ॥೩॥

*

ಸುಮಂ—ಈತನಿಗೆ ಜೃಂಭಕಾಸ್ತ್ರಗಳು ಯಾರಿಂದ ಲಭಿಸಿದವೊ ಕಾಣೆ.

ಚಂದ್ರ-ಇನ್ಯಾರಿಂದ,ವಾಲ್ಮೀಕಿಮುನಿಗಳಿಂದ ಲಭಿಸಿರುವುವೆಂದು ಊಹಿಸುವೆನು.

ಸುಮಂ—ಎಲೈ ಕುಮಾರನೆ ಹಾಗಲ್ಲ ಕೇಳು. ಈ ಅಸ್ತ್ರಗಳು ಕೃಶಾಶ್ವನಿಂದ ವಿಶ್ವಾಮಿತ್ರರಿಗೆ ಬಂದವು. ಅನಂತರ ತಾಟಕಾವಧೆಯಲ್ಲಿ ವಿಶ್ವಾಮಿತ್ರರಿಂದ ರಾಮಭದ್ರನಿಗೆ ಕೊಡಲ್ಪಟ್ಟವು.

ಚಂದ್ರ—ಮಂತ್ರದೃಷ್ಟಿಯುಳ್ಳವರು ತಾವೇಬಲ್ಲಿರಿ.

ಸುಮಂ—ಎಲೈ ಕುಮಾರನೆ ಸಾವಧಾನನಾಗು ವೀರನಾದ ಲವನು ಬಂದನು.

ಕುಮಾರರು—(ಕುಮಾರರು ಪರಸ್ಪರವಾಗಿ)

ಆಹ ಕುಮಾರನ ದರ್ಶನವು ಬಹು ಪ್ರಿಯಕರವಾದದ್ದು.

(ಸ್ನೇಹದಿಂದ ಚನ್ನಾಗಿ ನೋಡಿ)

ಕುಮಾರರಿಬ್ಬರು—ಕಂ॥ ಪರಿಕಿಸಲೇನಿದುಜನ್ಮಾಂ।
ತರಮೈತ್ರಿಯೊ ಮೋಕ್ಷ್ಯಕೀಯಸಂಬಂಧವೊ ನಾ ॥
ನರಿಯೆನಿವನಂವಿಲೋಕಿಸೆ।
ಕರಗುವುದೀಚಿತ್ತಮಿವನಗುಣಮುಹಿಮೆಯೊ ತಾಂ ॥

ಸುಮಂ-ಕಂ॥ ಅನಿಮಿತ್ತವಾದಮೈತ್ರಿಗೆ।
ಜನಿಸದುಜಗದೊಳ್ಪ್ರತಿಕ್ರಿಯಂ ತಾನದರಿಂ ॥
ಮನವನಿರದೊಂದುಗೂಡಿಸಿ।
ಸನೆಕೊನೆಯಂ ಮಾಳ್ಪುದದು ಪರಸ್ಪರಮರಿಯೈ॥

*ಚಂದ್ರ—
†ಲವ—

* ರಾಗ॥ ತಾಳ॥

ಆಹ ಈತನನೋಡಲಹ। ಈತನ ॥ಪ॥ ಆಹ ಈತನನ್ನುನೋಡೆ ಸ್ನೇಹಮನದೊಳುಕ್ಕುತಿಹುದು। ಈಹದನೇಂಕಾಣೆ। ನೆಂಟುಪೂಹೆಗೈದರು ॥೧॥
†ಅರಸುಮಗನನಿವನನೋಡೆ। ಕರಗುವದೀಗೆನ್ನಮನವು। ಪರಿಕಿಸಲರಿದಿದು ಜನ್ಮಾಂತರದಮೈತ್ರಿಯೊ। ಏನುಸುರುವೆ ॥೨॥

‡ಚಂದ್ರ—

ಇಬ್ಬರೂ. ಕ್ಷತ್ರಿಯಪದ್ಧತಿಯೆ ಕ್ರೂರವಾದದ್ದು. ಮಾಡತಕ್ಕದ್ದೇನು.

ಸುಮಂ—ಲವನನ್ನು ನೋಡಿ (ಆತ್ಮಗತಂ) ಎಲೆ ಮನಸ್ಸೆ ಏತಕ್ಕೆ ಈತನನ್ನು ಸೀತಾಪುತ್ರನೆಂದು ಭ್ರಮೆಪಡುವೆ.

ಕಂ॥ ಮನುಕುಲಕೆಬೀಜವಾದಾ ।
ಜನಕಜೆಯುಂ ಮೊದಲೆ ದೈವವಳಿಸಿತ್ತಿನ್ನೇಂ ॥
ವನಲತೆ ಮುರಿದಬಳಿಕ್ಕಂ ।
ಜನಿಸುವ್ರದಿನ್ನೆತ್ತಣಿಂದ ಕುಸುಮಂ ಜಗದೊಳ್ ॥

ಚಂದ್ರ—ಆರ್ಯನೆ ರಥದಿಂದ ಇಳಿಯುವೆನು.

ಸುಮಂತ್ರ—ಅದೇತಕ್ಕೆ ಇಳಿಯುವೆ.

ಚಂದ್ರ—ಏತಕ್ಕೆಂದರೆ ನಾನು ಇಳಿದರೆ ಈ ವೀರಪುರುಷನನ್ನು ಪೂಜಿಸಿದ ಹಾಗೂ, ಕ್ಷತ್ರಧರ್ಮವನ್ನು ಹಿಡಿದಹಾಗೂ ಆಗುವುದು. ಅದು ಹೇಗೆಂದರೆ ಪ್ರತಿಭಟನು ಪಾದಚಾರಿಯಾಗಿರುವಾಗ ಸುಭಟನು ರಥಾರೂಢನಾಗಿ ಯುದ್ಧಮಾಡಕೂಡದೆಂದು ಶಾಸ್ತ್ರಜ್ಞರು ಹೇಳುವರು.

ಸುಮಂ-ಏನುಮಾಡಲಿ ನ್ಯಾಯವಾದದ್ದನ್ನು ನನ್ನಂಥಾವನು ಬೇಡವೆನ್ನುವದು ಹ್ಯಾಗೆ ಸಾಹಸೈಕಹೇತುವಾದ ಈ ಕಾರ್ಯವನ್ನು ಹ್ಯಾಗೆತಾನೇ ಆಜ್ಞಾಪಿಸಲಿ.

ಚಂದ್ರ—ಪೂಜ್ಯರಾದ ತಂದೆಗಳೂ ಕೂಡ ಧರ್ಮವಿಷಯದಲ್ಲಿ ಸಂಶಯಬಂದದ್ದೇ ಆದರೆ ತಮ್ಮನ್ನೇ ಕೇಳುತ್ತಿದ್ದರು. ಈಗ ಏತಕ್ಕೆ ಯೋಚಿಸುವಿರಿ.

ಸುಮಂ—ಎಲೆ ಆಯುಷ್ಮಂತನೆ ಕೇಳು.

‡ ಈತನ್ನೆದಲಪ್ಪಲುಮನ ।ವಾಚುರಿಸುತಲಿಹುದು ॥ಅಹ॥ ನಿಶಾತಶರವಬಿಡುವೆ। ನೆಂತೀತನಂಗದೊಳ್ ಅಹ । ನೋಡಲೀತನು ॥೩॥

ಕಂ|| ನೀನೆಂದುದೆ ಧರ್ಮಂ ವೀ |
ರಾನುಮತಂ ರಣದನೀತಿಯಿದು ಸತ್ಯಂಕೇಳ್ ||
ಈನೆಲದೊಳ್ ರಘುಸಿಹ್ಮರ |
ಭೂನುತವಹವೀರಚರಿತಪದ್ಧತಿಯಿದೆತಾಂ ||

ಚಂದ್ರ—ಆರ್ಯನೆ ಸಕಲಶಾಸ್ತ್ರಗಳನ್ನೂ ಮತ್ತು ರಘುಕುಲದವರ ಪದ್ಧತಿಯನ್ನೂ ತಾವೇಬಲ್ಲಿರಿ.

ಸುಮಂ—(ಸ್ನೇಹ ಬಾಷ್ಪದಿಂದಕೂಡಿ) ಎಲೈ ವತ್ಸನೆ ನೀನು ಹೇಳಿದ್ದು ಯುಕ್ತ.

ಕಂ|| ಅಣುಗನಿಜಜನಕನಹ ಲ |
ಕ್ಷ್ಮಣನಿನ್ನಂ ಬಾಲನವನಮಗನಹನೀನುಂ ||
ರಣನೀತಿಯರಿತೆ ದೈವಕ |
ರುಣದಿಂ ದಶರಥಕುಲಂಪ್ರತಿಷ್ಠಿತಮಾಯ್ತು ||

ಚಂದ್ರ—(ದುಃಖದಿಂದ)

ಕಂ|| ಕುಲದೊಳ್ಪಿರಿಯಾತಂ ಮ |
ಕ್ಕಳ ಪಡೆಯುದಮೇಲೆ ನಮ್ಮ ಕುಲಕುನ್ನತಿಯೇ ||
ನಿಳೆಯೊಳೆನುತಕಟ ದುಃಖಿಪ |
ರುಳಿದೆಮ್ಮಯ ಮೂರುಮಂದಿ ತಂದೆಗಳೆಂದುಂ ||

ಸುಮಂ—ಆಹ ಚಂದ್ರಕೇತುವಿನ ಮಾತುಗಳು ಬಹಳವಾಗಿ ಮನಸ್ಸನ್ನು ಮರುಗಿಸುವುವು.

ಲವ—ಇದೇನಾಶ್ಚರ್ಯವಾಗಿದೆ.

ಕಂ|| ಉದಿಸಿದಶಶಿಯೊಳ್ ಕುಮುದಿನಿ |
ಮುದಪಡೆವಂತೆನ್ನ ದೃಷ್ಟಿ ಸುಖಿಸುವದಿವನೊಳ್ ||
ಕದನಕ್ಕೆಳಸುತ್ತಿಹುದೇ |
ನಿದು ಮೊಳಗುವ ಬಿಲ್ಲೊಳಾಸೆಯಾಂತೆನ್ನ ಭುಜಂ ||

ಚಂದ್ರ—(ರಥದಿಂದ ಇಳಿದು) ಆರ್ಯನೆ ಇದೋ ಸೂರ್ಯವಂಶಜನಾದ ಚಂದ್ರಕೇತುವು ನಮಸ್ಕರಿಸುವನು.

ಸುಮಂ—ಎಲೈ ವತ್ಸನೆ

ಕಂ॥ ಕುವರಕುಲಕಾದ್ಯನಾದಾ ।
ರವಿಯುಂ ಗುರುವಹವಸಿಷ್ಠನುಂ ರಕ್ಷಿಕೆ ರಾ ॥
ಘುವರರಾಮಲಕ್ಷ್ಮಣಜ್ಯಾ ।
ರವಮಂತ್ರವುಮಿಗೆ ನಿನಗೆ ರಣದೊಳ್ ಜಯಮಂ ॥

ಲವ—ಎಲೈ ಕುಮಾರನೆ ನೀನು ರಥದಮೇಲೆ ಇರುವದೇ ನನಗೆ ಪ್ರಿಯವಾದದ್ದು. ಏತಕ್ಕೆ ಇಷ್ಟು ವಿನಯ.

ಚಂದ್ರ—ಎಲೈ ಭಾಗ್ಯಶಾಲಿಯೆ ನೀನು ರಥದಲ್ಲಿ ಕುಳಿತುಕೊಳ್ಳಬೇಕು. ಆರ್ಯನೆ ರಾಜಪುತ್ರನನ್ನು ರಥವನ್ನೇರಿಸು.

ಸುಮಂ—ನೀನು ಚಂದ್ರಕೇತುವಿನ ವಚನವನ್ನು ಸಲಿಸುವನಾಗು.

ಲವ—ನಮ್ಮ ಪದಾರ್ಥದಲ್ಲಿ ನಾವು ಕೂತುಕೊಳ್ಳುವದಕ್ಕೆ ವಿಚಾರವೇತಕ್ಕೆ ಆದರೆ ನಾವು ಅರಣ್ಯವಾಸಿಗಳು ರಥವನ್ನು ಹತ್ತುವ ಅಭ್ಯಾಸ ನಮಗಿಲ್ಲ.

ಸುಮಂ—ಎಲೈ ವತ್ಸನೆ! ಪರಾಕ್ರಮಕ್ಕೂ ಸುಜನತೆಗೂ ತಕ್ಕಹಾಗೆ ನಡೆಯಬಲ್ಲವನು ನೀನು. ಇಂಥಾ ಪರಾಕ್ರಮಿಯಾದ ನಿನ್ನನ್ನು ಮಹಾರಾಜನಾದ ರಾಮಭದ್ರನು ಕಂಡದ್ದೇ ಆದರೆ ಎಷ್ಟು ಸಂತೋಷಪಡುವನೋ ಕಾಣೆ.

ಲವ—ಎಲೈ ಆರ್ಯನೆ ಆ ರಾಜಋಷಿಯು ಸತ್ಪುರುಷನೆಂದು ಕೇಳಿರುವೆವು.

*ಕಂ॥ ನಾವೇಂ ಕ್ರತುಘಾತಿಗಳೇ ।
ಆವಂ ಧರ್ಮಾತ್ಮನೆನಿಸಿದಾ ರಾಜನ ಸಂ ॥

---

* ರಾಗ॥

ಕೇಳಿರೆನ್ನಯಮಾತನು । ಕೋಪದಾಳದೆನ್ನೊಳಗಾರ್ಯರೇನೀವು ॥ ಕೇಳಿ ॥
ಭೂತಲದೊಳು ಯಜ್ಞಘಾತಿಗಳಲ್ಲ । ನಾವೇತಕೀತೆರಗೈದೆವೆಂದೊಡೆನೀವು ॥
ತುರಗರಕ್ಷಕರನಿಷ್ಠುರಗರ್ವೋಕ್ತಿ । ಈಪರಿಗೈದುದೆಮ್ಮಯಚಿತ್ತವನ್ನು ॥೨॥

ಭಾವಿಸದಿರ್ಪಂ ಕುದುರೆಯು ।
ಕಾವರ ಗರ್ವೋಕ್ತಿಯಿಂತು ಗೈದುದು ನಮ್ಮಂ ॥

ಚಂದ್ರ—(ನಕ್ಕು) ಹಿರಿಯರ ಪರಾಕ್ರಮದಲ್ಲೂ ನಿನಗೆ ಸೈರಣೆ ಇಲ್ಲವೆ ?

ಲವ—ತಮಗೆ ಕೋಪವುಂಟಾಗದಿದ್ದರೆ ಕೇಳುವೆನು. ರಘುಕುಲದರಸು ನಿರಹಂಕಾರನೆಂದು ಕೇಳಿರುವೆನು. ಆ ಮಹಾರಾಜನು ತಾನು ಗರ್ವಪಡತಕ್ಕವನಲ್ಲ. ಆತನ ಪ್ರಜೆಗಳು ಗರ್ವಿಸುವವರಲ್ಲ. ಹೀಗಿರುವಾಗ ಆತನ ಮನುಷ್ಯರು ರಾಕ್ಷಸೋಕ್ತಿಯನ್ನು ಹ್ಯಾಗೆ ಹೇಳಿದರು.

ಕೇಳಿ.

ಕಂ॥ ಮುನಿವರರು ಪೇಳ್ವರುನ್ಮ ।
ತ್ತನಗರ್ವೋದ್ಧತನನುಡಿಯು ರಾಕ್ಷಸಮೆನುತಂ ॥
ಜನಿಪುದದರಿಂದೆ ವೈರಂ ।
[illegible]ಕದೆ ಲಕ್ಷ್ಮಿಯನು ಕೆಡಿಪುದವನೀತಲದೊಳ್ ॥

ಮತ್ತು— ಖ್ಯಾತಿಯನೀಯುತೆ ಲಕ್ಷ್ಮಿಯ ।
ನೈತರುವೊಲ್ಮಾಡಿ ಸಕಲ ಮಂಗಳಕೆಲ್ಲಂ ॥
ಮಾತೆಯೆನಿಸುತ್ತೆ ಮೆರೆವಾ ।
ಮಾತೆ ದೈವಕಸೂನೃತವೆನುತ್ತೆ ಪೇಳ್ವರ್ ಮುನಿಗಳ್ ॥

ಸುಮಂ—ಈ ಕುವರನ ಸ್ವಭಾವವಾದರೆ ಪಾವನವಾದದ್ದು. ಈತನು ವಾಲ್ಮೀಕಿಗಳ ಶಿಷ್ಯನಲ್ಲವೆ, ಆದ್ದರಿಂದ ಯೋಗ್ಯವಾಗಿ ಹೇಳುವನು.

ಲವ—ಎಲೈ ಚಂದ್ರಕೇತುವೆ ತಂದೆಯ ಪರಾಕ್ರಮಾತಿಶಯದಲ್ಲಿಯೂ ನಿನಗೆ ಕೋಪವೆಂದು ಹೇಳಿದೆಯಷ್ಟೆ, ಆದರೆ ನಾನೊಂದನ್ನು ಕೇಳುವೆನು. ಕ್ಷಾತ್ರಧರ್ಮಗಳೇನು ಬಬ್ಬನಲ್ಲೀ ನೇಮಿಸಲ್ಪಟ್ಟಿರುವವೋ ಏನು ? ಹೇಳಬೇಕು.

ಸುಮಂ—ಎಲೈ ಸುಕುಮಾರನೆ ಪೂಜ್ಯನಾದ ರಾಮಭದ್ರನ ಪ್ರತಾಪವನ್ನು ನೀನರಿಯೆ. ಸುಮ್ಮನಿರು, ಸುಮ್ಮನಿರು. ಅತಿ ಪ್ರಸಂಗವೇತಕ್ಕೆ

ಕಂ|| ಸೈನಿಕರಗೆಲ್ದವಮಾತ್ರಕೆ |
ನಾನೇ ರಣವೀರನೆಂದು ಬಗೆದೈ ನಿಜದಿಂ ||
ಭೂಸುತನಹ ಜಮದಗ್ನಿಯ |
ಸೂನುವಗೆಲ್ದವನ ಮಾತು ನಿನಗೇತಕೆ ಪೇಳ್ ||

ಲವ—(ನಗೆಯಿಂದ ಕೂಡಿ) ಭಲ.

ಕಂ|| ಬಾಯಲಿ ವಿಪ್ರರ್ ಬಲ್ಲಿದ |
ರಾಯುಧಮಂ ಪಿಡಿದ ವಿಪ್ರನಾ ಭೃಗುರಾಮಂ ||
ಆಯತಿಸುತನಂ ಗೆಲ್ದಾ |
ರಾಯಂಗೇಂ ಖ್ಯಾತಿಬಂದುದೋ ನಾಸರಿಯೆಂ ||

ಚಂದ್ರ—(ಕೋಪೋದ್ರೇಕದಿಂದ ಕೂಡಿ)

ಕಂ|| ಆವನಿವನೆಣಸೆನಾರಣ |
ಕೋವಿದನಹ ಪರಶುರಾಮನಂ ತಿಳಿಯಂ ಲೋ ||
ಕಾವಳಿಗಭಯಮನಿತ್ತಿಹ |
ರಾವಣಮರ್ದನನ ಪಿತನ ಸಚ್ಚರಿತೆಯುಮಂ ||

*ಲವ—ರಘುಪತಿಯ ಚರಿತ್ರೆಯನ್ನು ಮಹಿಮೆಯನ್ನು ಯಾರುತಾನೆ ತಿಳಿಯರು. ಆದರೆ ಸ್ವಲ್ಪ ಆಡತಕ್ಕ ವಿಷಯವುಂಟು. ಆಹ ಆಡಕೂಡದು. (ಶಾಂತಂ)

---

* ರಾಗ ||

ಅರಸಲುಕೂಡದು ಹಿರಿಯರದೋಷವ । ನೆಡೆಗಳಕಿರಿಯರಾದವರಂತಿರಲಿದುತಾ ನರಸಲು||೧||ಸುಂದರಸ್ತ್ರೀಯನು । ಕೊಂದೊಡುಕೀರ್ತಿಯ । ಪೊಂದಿದವರುಮಹಾ ಪುರುಷರಲ್ಲೇನಾ ||೨|| ಖರನಸಂಗರದೊಳ । ಗೆರಡುಮೂರಡಿಯ । ಹಿಂಜರಿದವರು ಲೋಕೋತ್ತರರವರು ||೩|| ವಾಲಿವಧೆಯಗೈದ ಜಾಲವನೆಲ್ಲವ । ನೀಲೋಕವೆತಾಂ ಪೇಳುವದು ||೪||

ಚಂದ್ರ—ಎಲೋ ಧೂರ್ತನೆ ಮಿತಿಮೀರಿ ತಂದೆಯನ್ನು ಕೂಡ ಆಡುವೆಯು.
ಸಾಕು ಸಾಕು ಸುಮ್ಮನಿರು.

ಲವ—ಓಹೋ ಈತನು ನನ್ನಲ್ಲಿ ಅತಿಕೋಪಿಯಾದನು. ಒಳ್ಳೇದು. ನಾವಿಬ್ಬರೂ ಯುದ್ಧರಂಗಕ್ಕಿಳಿಯೋಣ.

(ಎಂದೆಲ್ಲರೂ ಹೊರಟುಹೋಗುವರು.)

ಐದನೆಯ ಅಂಕ ಮುಗಿದುದು.

ಆರನೆಯ ಅಂಕ.

(ಅನಂತರ ವಿದ್ಯಾಧರ ವಿದ್ಯಾಧರಿಯರು ಪ್ರವೇಶಿಸುವರು.)

ವಿದ್ಯಾಧರ—ಆಹಾ ಸೂರ್ಯವಂಶಸ್ಥರಾದ ಈ ಕುಮಾರರ ಪರಾಕ್ರಮವು ದೇವಾಸುರರ ಪರಾಕ್ರಮವನ್ನು ಮೀರುವುದು ಎಲಾ ಪ್ರಿಯೆ ನೋಡು *

ವಿದ್ಯಾಧರಿ—ಓ ಪ್ರಿಯನೆ ಇದೇನಿದು ಅಕಾಲದಲ್ಲಿ ಅಂಬರವೆಲ್ಲಾ ಮಿಂಚುಗಳಿಂದ ಹೊಳೆಯುತ್ತಿದೆ.

ವಿದ್ಯಾಧರ—(ನೋಡಿ) ನಿಜ ಇದೇನಾಗಿದ್ದೀತು (ಸ್ವಲ್ಪ ಯೋಚಿಸಿ) ತಿಳಿಯಿತು ತಿಳಿಯಿತು. ಇದು ಚಂದ್ರಕೇತು ಪ್ರಯೋಗಿಸಿದ ಆಗ್ನೇಯಾಸ್ತ್ರಪ್ರಭಾವವು, ಓಹೋ ಅದರ ಅಗ್ನಿಜ್ವಾಲೆಯು ಇತ್ತಲೂ ಮುತ್ತಿಕೊಂಡಿತ್ತು. ಇನ್ನೇನುಗತಿ ? ನನ್ನ ಪ್ರಿಯಳನ್ನು ಅಂಗದಲ್ಲಿ ಅನಚಿಕೊಂಡು ದೂರ ಹೊರಟುಹೋಗುವೆನು. (ಎಂದು ಪ್ರಿಯಳನ್ನು ಎತ್ತಿಕೊಂಡು ಮುಂದಕ್ಕೆ ಹೋಗುವನು)

ವಿದ್ಯಾಧರಿ—ಆಹ ಪ್ರಿಯನ ಅಮೃತದಂತಿರುವ ಅಂಗಸ್ಪರ್ಶದಿಂದ ಸಂತಾಪವನ್ನು ನೀಗಿದೆನು. (ಮೇಲೆ ನೋಡಿ) ಓ ಪ್ರಿಯನೆ ಇದೇನು ಅಂತರಿಕ್ಷದಲ್ಲಿ ಗುಡುಗು ಮಿಂಚು ಮೋಡಗಳು ಕವಿದುಕೊಂಡಿರುವವು.

---

* ರಾಗ ॥ ನೋಟು ॥

ಕರಕಂಕಣಝುಣಝುಣಿಸುತ್ತಿರೆಮಿಗೆ । ಕರೆಕರೆಯುತೆಸಿತಶರವರ್ಷವನು ।
ನಿರುಕಿಸಲರಿದೆನೆಮಾಡುವರಿದೊಸಂ। ಗರವನುಸುಕುಮಾರಕರಹಹ ॥ ೧ ॥
ಇವರಿಬ್ಬರಬಲುಬವರಕೆಮೆಚ್ಚುತದಿವಿಜರದುಂದುಭಿಮೊಳಗುತ್ತಿದೆ। ನವನಂದನತರುಕುಸುಮಂಗಳನಿದೊದಿವಿಜರುಕರೆಯುವರೇಂಪೊಗಳ್ವೆ ॥ ೨ ॥

*

ವಿದ್ಯಾಧರ—ಎಲೆ ಪ್ರಿಯೆ ಇದು ಕುಮಾರಲವನು ಪ್ರಯೋಗಿಸಿದ ವಾರು ಣಾಸ್ತ್ರಪ್ರಭಾವವು, ಆಹ ಈ ವಾರುಣಾಸ್ತ್ರದಿಂದುಂಟಾದ ಜಲ ಧಾರಾಸಂಪಾತಗಳಿಂದ ಆಗ್ನೇಯಾಸ್ತ್ರವು ತಣ್ಣಗಾಯಿತು,

ವಿದ್ಯಾಧರಿ—ಇದು ನನಗೆ ಪ್ರಿಯವು.

ಕೈಯಲ್ಲಿ ಪಟ್ಟೇವಸ್ತ್ರದ ಸೆರಗನ್ನು ಬೀಸುತ್ತ ಮಧುರವಚನಗ ಳಿಂದ ಯುದ್ಧವನ್ನು ಬೇಡಬೇಡವೆಂದು ಹೇಳುತ್ತ ಕುಮಾರರಮಧ್ಯ ದಲ್ಲಿ ವಿಮಾನದಿಂದಿಳಿಯುವ ಈತನು ಯಾರು.

ವಿದ್ಯಾಧರ—(ನೋಡಿ) ಶಂಬೂಕವಧಾನಂತರ ಹಿಂತಿರುಗಿದ ರಘುಪತಿ.

ಕಂ|| ಕಿವಿದಾಗಲೊಡನಾರಾ |
ಘುವವಚನಂ ರಣವನುಳಿದನಾವಂ ಲವನಂ ||
ದವನತನಾದಂಲಕ್ಷ್ಮಣಿ|
ಕುವರರಸಂಗಮದೊಳರಸಿಗಾಗಲಿಕುಶಲಂ ||

(ಎಂದು ವಿದ್ಯಾಧರರು ಹೊರಟುಹೋಗುವರು)

(ಅನಂತರ ರಾಮನೂ ಲವನೂ ವಿನತನಾದ ಚಂದ್ರ
ಕೇತುವೂ ಕೂಡಬರುವರು)

ಚಂದ್ರ—(ಪುಷ್ಪಕದಿಂದಿಳಿದು) ಎಲೈ ತಂದೆಯೇ ಇದೋ ಕುಮಾರ ಚಂದ್ರ ಕೇತುವು ನಮಸ್ಕರಿಸುವನು. (ಎಂದು ನಮಸ್ಕರಿಸುವನು)

ರಾಮ—ಕಂ|| ಬಾಮಗನೆ ಚಂದ್ರಕೇ |
ತು ಮಹಾಮನುಕುಲಚಂದ್ರ ಬೇಗನಾಲಿಂಗಿಸು ನ ||
ನ್ನೀ ಮನದದಾಹವಿಂಗಲಿ |
ಕೋಮಲವಹನಿನ್ನ ದೇಹಸಂಸ್ಪರ್ಶದೆತಾಂ ||

(ಎಂದು ಎತ್ತಿ ಬಿಗಿದಪ್ಪಿಕೊಂಡು) ಎಲೈ ಕುಮಾರನೆ ನಿನಗೆ ಕುಶಲವೆ ?

ಚಂದ್ರ—ಮಹಾವೀರನಾದ ಲವನು ನನಗೆ ದೊರಕಿದ್ದರಿಂದ ನಾನು ಕುಶಲವುಳ್ಳವನು. ನನ್ನನ್ನು ನೋಡಿದಂತೆ ಈ ವೀರಾಗ್ರೇಸರನನ್ನು ಕರುಣಾದೃಷ್ಟಿಯಿಂದ ನೋಡಬೇಕು.

ರಾಮ—(ಲವನನ್ನು ನೋಡಿ) ಎಲೈ ವತ್ಸ ಚಂದ್ರಕೇತುವೆ ದೈವಯೋಗದಿಂದ ಮಹಾ ಪರಾಕ್ರಮಿಯಾದ ಪುತ್ರನನ್ನು ಪಡೆದೆ.

ಲವ—ಆಹ ಈ ಪುರುಷನನ್ನು ನೋಡಿದರೆ ಮಹಾನುಭಾವನಾಗಿರುವನು.

ಕಂ॥ ಈತನನಾಂ ನೋಡೆ ವಿರೋ |
ಧಾತಿಶಯಂ ಪೋಗಿ ಭಕ್ತಿಪುಟ್ಟಿತು ಮನದೊಳ್ ||
ಈತೆರನದೇನೊ ಮೇಣೀ |
ಭೂತಲದೆ ಮಹಾತ್ಮರಿರವನುನಿಕಲ್ಕರಿದೈ ||

ರಾಮ—ಇದೇನು! ಈತನನ್ನು ನೋಡಿದಮಾತ್ರಕ್ಕೆ ಸೀತಾ ವಿರಹದಿಂದುಂಟಾದ ದುಃಖವೆಲ್ಲಾ ಹೋಗಿ ನನ್ನ ಮನಸ್ಸು ಸಂತೋಷಪಡುವುದು. ಅಥವಾ ಸ್ನೇಹಕ್ಕೆ ನಿಮಿತ್ತ ಬೇಕೆಂಬ ಮಾತು ನಂಬತಕ್ಕದ್ದಲ್ಲ. ಹಾಗೆಯೇ ಸರಿ.

ಕಂ॥ ಸ್ನೇಹಗೊಳಿಸುವದು ಮನುಜರ |
ನಾಹಹ ಕಾರಣಮದೊಂದದಂತರ್ಗತಮೆಂ ||
ತೂಹಿಂಪುದು ಸೂರ್ಯನುದಯಿಸೆ |
ನೇಹಂ ಮಿಗೆ ಕಮಲಮಲರ್ವ ಕಾರಣಮೇನೈ||

ಲವ—ಎಲೈ ಚಂದ್ರಕೇತು ಇವರು ಯಾರು ?

ಚಂದ್ರ—ಪ್ರಿಯಮಿತ್ರನೆ! ಇವರಲ್ಲವೆ ನಮ್ಮ ತಂದೆಗಳು.

ಲವ—ನೀನು ನನ್ನನ್ನು ಪ್ರಿಯಮಿತ್ರನೆಂದು ಕರೆದದ್ದರಿಂದ ನನಗೂ ತಂದೆಗಳೇ ಸರಿ. ಆದರೆ ನಿಮಗೆ ನಾಲ್ವರುಂಟಷ್ಟೆ ? ಅವರಲ್ಲಿ ಇವರು ಯಾರು ಹೇಳು.

ಚಂದ್ರ—ಇವರೇ ಹಿರಿಯ ತಂದೆಗಳೆಂದು ತಿಳಿ.

ಲವ—(ಉಲ್ಲಾಸದಿಂದ ಕೂಡಿ) ಆಹ! ರಘುಪತಿಯೆ! ಈದಿನ ಸುದಿನವು. ದೈವಯೋಗದಿಂದ ದೇವನನ್ನು ಕಂಡೆನು. (ವಿನಯಕೌತುಕಗಳಿಂದ ಕೂಡಿ) ರಘುಪತಿಯೆ ಇದೋ ವಾಲ್ಮೀಕಿಗಳ ಶಿಷ್ಯನಾದ ಲವನು ವಂದಿಸುವನು. (ಎಂದು ವಂದಿಸುವನು)

ರಾಮ—ಎಲೈ ಆಯುಷ್ಮಂತನೆ? ಬಾ. ಬಾ. (ಎಂದು ಸ್ನೇಹದಿಂದ ಆಲಿಂಗಿಸಿಕೊಂಡು) ಎಲೈ ವತ್ಸನೆ! ಸಾಕು ಸಾಕು. ಅತಿ ವಿನಯವೇತಕ್ಕೆ ಅನೇಕವಾಗಿ ನನ್ನನ್ನು ದೃಢವಾಗಿ ಆಲಿಂಗಿಸಿಕೋ.

ಕಂ|| ಅಲರಿದತಾವರೆಯೊಳಗಣ |
ದಳದಂತೆ ಮನೋಜ್ಞವಾದ ನಿನ್ನೀ ಸ್ಪರ್ಶಂ ||
ಮಲಯಜದರಸವ ನೆದೆಯೊಳು |
ವಿಲೇಪನಂಗೈದತೆರದೊಳಾನಂದಿಪುದೈ ||

ಲವ—(ತನ್ನಲ್ಲಿ ತಾನು) ಇಷ್ಟು ಪ್ರೀತಿಯುಳ್ಳವರ ಸಂಗಡ ಯುದ್ಧ ಮಾಡಿದ ನಾನು ಅಜ್ಞನಲ್ಲವೆ. ಎಲೌ ಪೂಜ್ಯರೆ ಬಾಲಕನ ಅಪರಾಧವನ್ನು ಕ್ಷಮಿಸಬೇಕು.

ರಾಮ—ಎಲೈ ಚಂದ್ರಕೇತುವೆ ಇವನು ಮಾಡಿದ ತಪ್ಪೇನು?

ಚಂದ್ರ—ಅಶ್ವರಕ್ಷಕರು ಆಡಿದ ತಮ್ಮ ಪರಾಕ್ರಮವನ್ನು ಕೇಳಿ ಸೈರಿಸದೆ ತನ್ನ ಪರಾಕ್ರಮವನ್ನು ತೋರಿಸಿದನು.

ರಾಮ—ಅದೇತಾನೆ ಕ್ಷತ್ರಿಯನಿಗೆ ಅಲಂಕಾರವು.

ಚಂದ್ರ—ಎಲೈ ತಂದೆಯೆ ಈ ನನ್ನ ಪ್ರಿಯಮಿತ್ರನು ಜೃಂಭಕಾಸ್ತ್ರದಿಂದ ನಮ್ಮ ಸೈನ್ಯವನ್ನೆಲ್ಲಾ ನಿಶ್ಚೇಷ್ಟಿತರನ್ನಾಗಿ ಮಾಡಿರುವನು. ನೋಡಬೇಕು.

ರಾಮ—(ನೋಡಿ) ಎಲೈ ವತ್ಸನಾದ ಲವನೆ ಜೃಂಭಕಾಸ್ತ್ರವನ್ನು ಉಪಸಂಹಾರಮಾಡು.

ಲವ—ಅಪ್ಪಣೆಯಾದಂತಾಗಲಿ. (ಎಂದು ಅಸ್ತ್ರೋಪಸಂಹಾರವನ್ನು ಅಭಿನೈಸುವನು.)

ರಾಮ—ಎಲೈ ಚಂದ್ರಕೇತುವೆ ನೀನೇಹೋಗಿ ನಿಶ್ಚೇಷ್ಟಿತರಾಗಿ ಬಿದ್ದಿರುವ ಸೈನ್ಯವನ್ನು ಸಂತೈಸು.

ಚಂದ್ರ—ಆಜ್ಞೆಯಾದಂತಾಗಲಿ. (ಎಂದು ಹೋಗುವನು)

ರಾಮ—ಎಲೈ ವತ್ಸನೆ! ಈ ಮಹಾಸ್ತ್ರಗಳು ಕೃಶಾಶ್ವನ ದೆಸೆಯಿಂದ ವಿಶ್ವಾಮಿತ್ರರಿಗೆ ಸೇರಿದವು. ಅವರಿಂದ ನನಗೆಲಭಿಸಿದುವು. ಅವು ನಿನಗೆ ಲಭ್ಯವಾದ ಕ್ರಮವು ಹ್ಯಾಗೆ.

ಲವ—ಇವು ಹುಟ್ಟುವಾಗಲೆ ನಮ್ಮಿಬ್ಬರಲ್ಲಿ ಸೇರಿದವು.

ರಾಮ—ಇದು ಪುಣ್ಯಪ್ರಭಾವವೇ ಸರಿ. ಆದರೆ ನಿಮ್ಮಿಬ್ಬರಲ್ಲಿ ಅಂದರೇನು?

ಲವ—ಅವಳಿಮಕ್ಕಳು ನಾವು.

ರಾಮ—ಹಾಗಾದರೆ ಇನ್ನೊಬ್ಬನೆಲ್ಲಿ ?

ತೆರೆಯಲ್ಲಿ—ಎಲೈ ಭಾಂಡಾಯನ ಭಾಂಡಾಯನ ಆಯುಷ್ಮಂತನಾದ ಲವನಿಗೆ ರಘುಕುಲದ ನರೇಂದ್ರನೊಡನೆ ಯುದ್ಧನಡೆಯುವುದೆಂದು ಹೇಳದೆಯಲ್ಲಾ? ಇನ್ನು ಕ್ಷತ್ರಿಯಜಾತಿಯ ಪರಾಕ್ರಮವನ್ನು ನಿಲಿಸುವೆನು.

*ರಾಮ—(ನೋಡಿ) ಬಾಲನಿವನಾವನೋ ಹರಿನೀಲಾಭಂ ಧ್ವನಿಯೊಳೆನಗೆ [illegible]

ಲವ—ಈತನೆ ನಮ್ಮಣ್ಣನಾದ ಕುಶನು. ಭರತಾಶ್ರಮದಿಂದ ಬಂದನು.

ರಾಮ— (ಸಂತೋಷದಿಂದ ಕೂಡಿ) ಎಲೈ ವತ್ಸನೆ! ಆಯುಷ್ಮಂತನನ್ನು ಇತ್ತಿತ್ತ ಕರೆ.

ಲವ—ಆಗಲಿ. (ಎಂದು ಸ್ವಲ್ಪದೂರ ನಡೆದು ಕರೆತರುವನು)

---

* ರಾಗ॥ ತಾಳ॥

ಜಲಧರಶ್ಯಾಮನಿವನಾವಂ ॥ಪ॥ ಧ್ವನಿಮಾತ್ರದೆ ಮ। ತ್ತನು ರೋಮಾಂಚವ। ಅನುಗೊಳಿಸುವನಾಲಿಸೆ ॥ ೧ ॥

ಕುಶ—(ಪ್ರವೇಶಿಸಿ ಧನುಷ್ಟಂಕಾರವನ್ನು ಮಾಡಿ)

ಕಂ|| ಭುವನೈಕವೀರರೆನಿಸುವ |
ರವಿಕುಲದ ನರೇಂದ್ರರೊಡನೆ ಸಂಗರವಾಗಲ್ ||
ಪ್ರವಿಲಸದಸ್ತ್ರಜ್ವಾಲಾ |
ಕವಚಿತಗುಣವೆನಿಸಿದೆನ್ನ ಗುಣವಿದು ಧನ್ಯಂ ||

(ಕೋಪದಿಂದ ಬರುವನು)

ರಾಮ—(ನೋಡಿ) ಆಹ! ಈ ಕ್ಷತ್ರಿಯ ಪುತ್ರನನ್ನು ನೋಡಿದರೆ ತನ್ನ ದೃಷ್ಟಿಯಿಂದ ಜಗತ್ತನ್ನು ತೃಣೀಕರಿಸುವನು.

ಕುಶ—ಎಲೈ ಆಯುಷ್ಮಂತನೆ ಯುದ್ಧವೆಂದು ಕೇಳಿ ಬಂದೆನಲ್ಲಾ.

ಲವ—ಎಲ್ಲೋ ಸ್ವಲ್ಪ ನಡೆಯಿತು. ಆರ್ಯನೆ ಗರ್ವವನ್ನುಬಿಟ್ಟು ಇಲ್ಲಿ ವಿನಯದಿಂದಿರಬೇಕು.

ಕುಶ—ಅದೇನುಕಾರಣ.

ಲವ—ಇದೋ ಪೂಜ್ಯನಾದ ರಘುಪತಿಯು.

ಕುಶ—(ಯೋಚಿಸಿ) ಓಹೋ ಜಗತ್ಪತಿಯಾದ ಆ ರಾಮಾಯಣ ಕಥಾನಾಯಕನೋ.

ಲವ—ಹೌದು.

ಕುಶ—ಹಾಗಾದರೆ ಈ ಮಹಾನುಭಾವನನ್ನು ಹ್ಯಾಗೆ ಉಪಚರಿಸಬೇಕೊ ಕಾಣೆನಲ್ಲ.

ಲವ—ಹ್ಯಾಗೇನು ತಂದೆಯನ್ನು ಕಂಡಂತೆ ಉಪಚರಿಸಬೇಕು.

ಕುಶ—ಅದು ಹ್ಯಾಗೆ.

ಲವ—ಲಕ್ಷ್ಮಣಪುತ್ರನಾದ ಚಂದ್ರಕೇತುವು ನಮಗೆ ಪ್ರಿಯಮಿತ್ರನು. ಆದ್ದರಿಂದ ಈ ರಾಜಋಷಿಯು ತಂದೆಯೇ ಸರಿ.

*ಕುಶ—(ರಾಮನನ್ನು ನೋಡಿ)

ಇದೋ ವಾಲ್ಮೀಕಿಗಳ ಶಿಷ್ಯನಾದ ಕುಶನು ನಮಸ್ಕರಿಸುವೆನು (ಎಂದು ನಮಸ್ಕರಿಸುವನು)

†ರಾಮ—ಬಾ ಆಯುಷ್ಮಂತನೇ ಬಾ (ಎಂದು ಆಲಿಂಗಿಸುವನು)

ಲವ—ತಂದೆಯೇ ಸೂರ್‍ಯನು ಲಲಾಟವನ್ನು ತಪಿಸುತ್ತಿರುವನು, ಆದ್ದರಿಂದ ಬಂದು ಮುಹೂರ್ತ ಈ ಮಾವಿನಮರದ ನೆರಳಲ್ಲಿ ಕುಳಿತುಕೊಳ್ಳಬೇಕು.

ರಾಮ—ಎಲೈ ವತ್ಸನೆ ಯುದ್ಧದಲ್ಲಿ ದಣಿದಿರುವಿರಿ. ಈ ಮಾವಿನಮರದ ನೆರಳಲ್ಲಿ ಕುಳಿತುಕೊಳ್ಳೋಣ ಬನ್ನಿ (ಎಂದು ಎಲ್ಲರೂ ಹೋಗಿ ಕುಳಿತುಕೊಳ್ಳುವರು)

ರಾಮ—(ಸ್ವಗತ) ಈ ಮಕ್ಕಳು ಎಷ್ಟು ವಿನೀತರಾಗಿದ್ದರೂ ನಡೆನುಡಿಮೊದಲಾದದ್ದೆಲ್ಲಾ ಸಾಮ್ರಾಜ್ಯಸೂಚಕವಾಗಿದೆ. (ಸೂಕ್ಷ್ಮದರ್ಶಿಯಾಗಿ) ಓಹೋ ಇವರಲ್ಲಿ ಅಧಿಕವಾಗಿ ರಘುಕುಲಕುಮಾರಚಿಹ್ನೆಯು ತೋರುವುದು.

ಕಂ|| ಪಾರಾವತಕಂಠದೊಳು ಶ |
ರೀರದ್ಯುತಿ ಹೆಗಲುಕಕುದಮೆನೆ ನೋಟಂಕಂ ||

---

* ರಾಗ || ತೋಡಿ ||

ಶ್ರೀಕರವಿಖ್ಯಾತನಾಕೃತಿ ಆಹ । ಲೋಕೋತ್ತರನೀಭೂಪತಿ । ಆಹ ||ಪಲ್ಲ|| ಲೋಕಮೆಲ್ಲದರೊಳಾ | ಲೋಕಿಸೆಸಕಲಗು । ಣಾಕರನೀಸೀತಾಪತಿ | ಆಹಾ ||೧||ರಾಯುನೀತನುಕಥಾ।ನಾಯುಕನಾಗೆರಾ।ಮಾಯುಣಕವಿ ಕೃತಕೃತ್ಯನು||೨||

† ರಾಗ| ನಾರಾಯಣಿ||

ಆನಂದರಸಭರಿತ । ನಾನಾದೆ । ಏನಿವನುಪರಿಭಾವಿಸಲುಮ । ತ್ಸೂನುವೋ ಪ್ರಾಣವೋ। ದೇಹಜನಿತಸ್ನೇಹಸಾರವೊ ||ಅ|| ಪೇಳುವದೇನಿನ್ನು । ಸೀತಾ ವಿರಹಜ್ವಾಲೆಪೋಗಿ। ತನುತಂಪಾದುದು । ಮೇಲೆಸುರಿದವೊಲಾಯ್ತೆನಗೆನವ। ಮೇಘವಾಹಅಮೃತವರ್ಷವುನೀಲಮೇಘಶ್ಯಾಮನಾದೀ | ಬಾಲನಾಲಿಂಗಿಸಿದಮಾತ್ರದೆ ||

ಕೀರವದೊಲ್ ಧ್ವನಿ ।
ಮೆರೆದಪುದಾರಯೆಮಂಗಳಮೃದಂಗನಿಸ್ವನಮೆಂಬೋಲ್ ॥

(ಚೆನ್ನಾಗಿ ನೋಡಿ) ಓಹೋ ಇವರಲ್ಲಿರುವದು ನನ್ನ ಹೋಲಿಕೆ ಮಾತ್ರವೇ ಅಲ್ಲ *

(ಆಲೋಚಿಸಿ) ವತ್ಸ ಲಕ್ಷ್ಮಣನು ದೇವಿಯನ್ನು ವಾಲ್ಮೀಕಿಗಳ ತಪೋವನದ ಬಳಿ ಬಿಟ್ಟಿರಬಹುದು. ಇವರಾಕೃತಿಯಂತು ಹೀಗಿರುವುದು. ಇದಲ್ಲದೆ ಜೃಂಭಕಾಸ್ತ್ರಗಳು ಸ್ವತಃ ಪ್ರಾಪ್ತವಾಗಿರುವುವು. ಇದೆಲ್ಲವನ್ನು ವಿಚಾರಿಸಿ ನೋಡಲು ಚಿತ್ರದರ್ಶನಪ್ರಸ್ತಾವದಲ್ಲಿ ಅಸ್ತ್ರಾಭಿಜ್ಞಾನವುಂಟಾಗಿದ್ದೀತು. ಉಪದೇಶಿಸಿದಲ್ಲದೆ ಮಹಾಸ್ತ್ರಗಳು ಪ್ರಾಪ್ತವಾಗತಕ್ಕದ್ದಲ್ಲವೆಂದು ಪೂರ್ವೀಕರಿಂದ ಕೇಳಿರುವೆನು. ಆದರೆ ಈ ಕುಮಾರರನ್ನು ನೋಡಿದುದರಿಂದುಂಟಾದ ಸಂತೋಷವು ಡೋಲಾಯಮಾನನಾದ ನನ್ನನ್ನು ಸಂದೇಹಪಡಿಸುವುದು. ಏನುಪಾಯದಿಂದ ಇವರನ್ನು ಕೇಳಿ ನನ್ನ ಮನದ ಕಳವಳವನ್ನು ಪರಿಹರಿಸಿಕೊಳ್ಳುವೆನು. (ಎಂದು ಕಂಬನಿಬಿಟ್ಟು ವ್ಯಸನಪಡುವನು)

†ಲವ—

---

* ರಾಗ॥ ತೋಡಿ ॥

ಇರುವದುಜನಕಾತ್ಮಜೆಯಹೋಲಿಕೆಯು । ಪರಿಕಿಸಲೀಕುವರರೊಳಗೀಪರಿಯು ॥ ಪ ॥ ಒರೆವುದಿನ್ನೇನುತಾನದೆಚೆಲುವಿಕೆಯು ॥ ಅ ॥ ಆವೊಗವಾಕಣ್ಗಳು ಆಮನೋಹಾರಿಣಿಯ ಕದಪುಗಳು । ಈ ಮಕ್ಕಳೊಳುದ್ಧಾಮವಾಗಿಹವು । ನಿರುಕಿಸಲೆನ್ನಿನಿಯಳ । ತಾವರೆಗೆಸಿರಿಯನು । ನೀಡುವನಗೆಮೊಗವೆಂದೆನೆ । ಮರಳಿಕಣ್ಗೆಗೋಚರಿಸಿದಹಾಗೆ ॥ ೧ ॥

† ರಾಗ ॥ ಸುರಟಿ ॥ ಆದಿತಾಳ ॥

ಇದೇನಿದು ಮರುಗುತಿರುವೆ ಮನುಜೇಂದ್ರ । ವರಗುಣಸಾಂದ್ರ ಭಾಸ್ಕರಕುಲಚಂದ್ರ ॥ಪ॥ ಹೊಳೆವಮುಖೇಂದು ಕಳೆಗುಂದಿಹುದು ಅಳುವದೇತಕೆ ನೀನರಸ ನೀನಿಂದು ॥೧॥

ಕುಶ—(ಲವನನ್ನು ಕುರಿತು) *

ರಾಮ—(ಸ್ವಗತಂ) ಇವರ ಮಾತನ್ನು ಕೇಳಿದರೆ ಸೀತಾತನಯರಲ್ಲವೆಂದು ತೋರುವುದು. ಹಾಗಿದ್ದ ಪಕ್ಷದಲ್ಲಿ ಕುಶನು ಸೀತೆಯನ್ನು ತನ್ನ ತಾಯಿಯೆಂದು ಹೇಳದೆ ಸೀತೆಯೆಂದು ಹ್ಯಾಗೆಹೇಳಿದನು.

ಎಲೆ ಹತಹೃದಯವೆ! ಇವರೇ ಸೀತಾತನಯರೆಂದು ತಿಳಿದು ಯಾತಕ್ಕೆ ಕಳವಳಿಸುವೆ. ಸಾಕು ಸಾಕು. ಸುಮ್ಮನಿರು.

(ಪ್ರಕಾಶಂ) ಎಲೈ ಮಕ್ಕಳಿರಾ ವಾಲ್ಮೀಕಿಗಳು ರಾಮಾಯಣವನ್ನು ಹೇಳಿರುವರೆಂದು ಕೇಳಿಬಲ್ಲೆ. ಅದರಲ್ಲಿ ಸ್ವಲ್ಪ ಹೇಳಿ. ಕೇಳಲಿಚ್ಛೆಯಿಸುವೆನು.

ಕುಶ—ಆಗಲಿ. ಆದರೆ ಬಾಲಕಾಂಡದಲ್ಲಿ ಇನೆರಡು ಶ್ಲೋಕಗಳು ನೆನಪಿನಲ್ಲಿ ಇರುವುವು. ಅದನ್ನು ಹೇಳುವೆನು.

ರಾಮ—ಅವನ್ನು ಹೇಳು.

ಕುಶ—ಶ್ಲೋ॥ ಪ್ರಕೃತ್ಯೈವ ಪ್ರಿಯಾ ಸೀತಾ ।
ರಾಮಸ್ಯಾಸೀನ್ಮಹಾತ್ಮನಃ ॥
ಪ್ರಿಯಭಾವಸ್ಸ ತು ತಯಾ ।
ಸ ಗುಣೈ ರೇವ ವರ್ಧಿತಃ ॥೧॥
ತಥೈವ ರಾಮಸ್ಸೀತಾಯಾಃ ।
ಪ್ರಾಣೇಭ್ಯೋಪಿ ಪ್ರಿಯೋಭವತ್ ॥
ಹೃದಯಂ ತ್ವೇವ ಜಾನಾತಿ ।
ಪ್ರೀತಿಯೋಗಂ ಪರಸ್ಪರಂ ॥೨॥

---

* ರಾಗ॥ ಬೇಗಡೆ॥ ತಾಳ॥

ಏತಕೇಳ್ವೆಸೀತಾನಾಥನನಿಂ ॥ಪ॥ ಸೀತೆಯುಳಿದ ರಘುಜಾತಗೆ ಸುಖಮುಂಟೆ। ॥ಅ॥ಪ॥ ಭೂಮಿಜೆಯಂಬಿಟ್ಟು ಭೂರಿದುಃಖವಲೆ ಶ್ರೀ। ರಾಮಗೆ ಧಾತ್ರಿಯೊಳು। ಈಮರ್ಮನುಳಿ । ದೀಮಹಾರಾಜನ । ರಾಮಾಯಣವನೀ। ನೋದದವನವೊಲು ॥೧॥

*

ರಾಮ-ಕಷ್ಟ. ಹೃದಯ ಮರ್ಮಚ್ಛೇದಕವಾದದ್ದನ್ನು ಕೇಳಿದೆನು. ಹಾ ದೇವಿ ಆಗ ನಾವು ಹೀಗಿದ್ದೆವಲ್ಲವೆ. † (ಒಂದುಮುಹೂರ್ತ ನಿಶ್ಚಲವಾಗಿದ್ದು ಕರುಣದಿಂದ ಕೂಡಿ)

ಕಂ॥ ಚಿಂತಿಸಿಚಿಂತಿಸಿ ಯಿದಿರೊಳು ।
ನಿಂತಂತಿರ್ದಿನಿಯಳೀಗಳುಂ ಸಂತೈಪಳ್॥
ಅಂತಹವಿರಹವಿಶೇಷಂ ।
ತಾಂ ತೊಲಗಲ್ ಮನವ ದಹಿಸುತಿದೆ ಸಂತಾಪಂ ॥

ಕುಶ—ಇದು ಚಿತ್ರಕೂಟದಲ್ಲಿ ವನವಿಹಾರ ಮಾಡುವಾಗ ಸೀತಾದೇವಿಯನ್ನು ಕುರಿತು ರಘುಪತಿಯಾಡಿದ್ದು.

ಶ್ಲೋ ॥ ತ್ವದರ್ಥಮಿವವಿನ್ಯಸ್ತಃ ।
ಶಿಲಾಪಟ್ಟೋಯ ಮಗ್ರತಃ ॥
ಯಸ್ಯಾಯಮಗ್ರತಃ ।
ಪುಷ್ಪೈಃ ಪ್ರವೃಷ್ಟ ಇವಕೇಸರಃ ॥

ರಾಮ—(ಲಜ್ಜಾಸ್ಮಿತಗಳಿಂದ ಕೂಡಿ) ಶಿಶುಜನವೆ ಕೇವಲ ಮುಗ್ಧತೆಯುಳ್ಳದ್ದು. ಇದರಮೇಲೆ ಇವರು ಅರಣ್ಯವಾಸಿಗಳು. ಹೇಳುವುದೇನು. ಹಾ ದೇವಿ ನಮ್ಮ ವಿಹಾರಪ್ರಸಂಗಕ್ಕೆ ಸಾಕ್ಷಿಯಾದ ಆ ಪ್ರದೇಶವನ್ನು ಸ್ಮರಿಸುವೆಯ. ಕಷ್ಟ, ಕಷ್ಟ.

ಕಂ॥ ಬೆಮರ್ವನಿಗಳಿನಿಳತರೆ ಕುಂ ।
ಕುಮಮುಜ್ವಲಿಸಿದ ಕಪೋಲದಿಂ ತೊಡವುಳಿದುಂ ॥

---

* ರಾಗ॥ ಪೂರ್ವಿಕಲ್ಯಾಣಿ॥ ಆದಿತಾಳ॥

ಹೀಗಿರ್ದೆವೆನಾ । ವಾಗಹ ಜಾನಕಿಯೆ॥ಪ॥ ನಾ । ನೆಲ್ಲಿಯಮನೋನುರಾಗ। ವೆಲ್ಲಿಯಸುಖಾನುಭೋಗ । ಎಲ್ಲಿಯದುಃಖಸುಖಗಳೊಳೆರ । ಡಿಲ್ಲದಮನೋಭಾವ ॥೧॥ ಇಂತುನೇಹವುಳ್ಳಪ್ರಾಣ । ಕಾಂತೆಯನಾಂ ಕಾಂತಾರದಿ । ನಾಂ ತೊರೆದರುಮಕಟ ಪ್ರಾಣ । ನಿಂತಿಹುದೇಂ ಪಾಪಿಯೊ ಹಾ ॥೨॥

ರಮಣೀಯವಾದ ಕರ್ಣದಿ |
ಸುಮನೋಹರವಾದ ನಿನ್ನ ಮುಖವಂ ಸ್ಮರಿಪೆಂ ||

ತೆರೆಯಲ್ಲಿ—ಪೂಜ್ಯರಾದ ವಸಿಷ್ಠ ವಾಲ್ಮೀಕಿಗಳು, ಕೌಸಲ್ಯಾ ದೇವಿಯರು ಅರುಂಧತೀಸಮೇತರಾಗಿ ಶಿಶುಗಳಿಗೆ ಉಂಟಾದಕಲಹವನ್ನು ಕೇಳಿ ಭೀತರಾಗಿ ಬರುವರು.

ರಾಮ—ಓಹೋ ಪೂಜ್ಯರಾದ ಅರುಂಧತಿ, ವಸಿಷ್ಠರು, ನನ್ನ ತಾಯಿ ಕೌಸಲ್ಯಾ ದೇವಿಯರು, ಮತ್ತು ಜನಕಮಹಾರಾಜನು ಇಲ್ಲಿಗೆ ಬರುವಂತಿದೆ. ಅವರನ್ನು ಹ್ಯಾಗೆತಾನೆ ನೋಡಲಿ. (ಎಂದು ಕರುಣದಿಂದ ಕೂಡಿ) ಆಹ ಜನಕನು ಇಲ್ಲಿಗೆ ಬರುವನೆಂದು ಕೇಳಿ ಮಂದಭಾಗ್ಯನಾದ ನಾನು ವಜ್ರದಿಂದ ತಾಡಿತನಾದೆನು.

ಕಂ|| ಧರಣಿಜೆಯಮದುವೆಗೈದಾ |
ದರಿಸಿದ ಜನಕಾವನೀಂದ್ರನೀಪರಿಯಳಲೊಳ್ ||
ಬರೆನೋಡಿಯು ವಿಾಹೃದಯಂ |
ಬಿರಿಯದು ಬಿರಿಯುವದದೆಂತು ರಾಮನಹೃದಯಂ ||

ತೆರೆಯಲ್ಲಿ—ಕಷ್ಟ. ಕಷ್ಟ.

ಕಂ|| ಮಡದಿಯವಿಯೋಗದುಃಖದಿ |
ಬಡವಾಗಿಹ ರಾಮನಿರವನೀಕ್ಷಿಸಿ ಜನಕಂ ||
ಪಡೆದಂ ಮೂರ್ಛೆಯನವನಂ |
ತಡೆಯಲ್ಕರಿದಾಗೆ ಮಾತೆಯರ್ ಮೈಮರೆತರ್ ||

ರಾಮ—ಅಯ್ಯೋ ಮುಂದೇನುಗತಿ.

ಕಂ|| ಜನಕರಘುಕ್ಷಿತಿನಾಥರ |
ಮನೆಗೆ ಮಹಾಲಕ್ಷ್ಮಿಯಾದವಳವಿಷಯದೊಳ್ ||

ಳ್ಳನಿತುಂ ಮರುಕಾನದ ದು ।
ರ್ಜನನಾದೆನ್ನಲ್ಲಿ ನಿಮಗದೇತಕೆ ಕರುಣಂ ॥

ಎಲ್ಲರನ್ನೂ ಸಂತೈಸುವೆನು. (ಎಂದು ಏಳುವನು) *

ಕುಶಲವರು-ಎಲೈ ತಾತನೆ ಇತ್ತಿತ್ತ ಬರಬೇಕು. (ಕರುಣದಿಂದ ಆಕುಲನಾಗಿ ಹೊರಟು ಎಲ್ಲರೂ ಹೋಗುವರು).

ಆರನೆಯ ಅಂಕ ಮುಗಿದುದು

---

* ರಾಗ॥ ತಾಳ॥

ಹಾ ಮಾತೆ ಹಾ ತಾತ ಜನಕ । ಭೂಮಿಾಶರವಿವಂಶಜನಕ । ನೀವಿದೇನಿಂತು ಮೋಹವತಾಳ್ವರೆ ॥೧॥ ಕೋಮಲಾಂಗಿಯಾದ । ಸೀತಾಭಾಮಿನಿಯುಬಿಟ್ಟ ದುಷ್ಟ ರಾಮನೊಳೇತಕ್ಕೆ । ನಿಮಗೀಪ್ರೇಮವು ॥೨॥

ಏಳನೆಯ ಅಂಕ.

(ಬಳಿಕ ಲಕ್ಷ್ಮಣನ ಪ್ರವೇಶ)

ಲಕ್ಷ್ಮಣ—ಈಗ ಪೂಜ್ಯರಾದ ವಾಲ್ಮೀಕಿಗಳು ತಾವು ಮಾಡಿದ ನಾಟಕವನ್ನು ನೋಡುವದಕ್ಕಾಗಿ ನಮ್ಮನ್ನು ಬ್ರಹ್ಮ ಕ್ಷತ್ರ ಪುರಜನ ಪರಿಜನ ಸಮೇತ ಸಕಲಪ್ರಜೆಗಳನ್ನೂ ಕೂಡ ಕರೆದಿರುವರು. (ಸುತ್ತಲೂ ನೋಡಿ) ಓಹೋ ಆ ವಾಲ್ಮೀಕಿಗಳ ಪ್ರಭಾವದಿಂದ ದೇವದೈತ್ಯ ನಾಗನಾಯಕಸಮೇತ ಸಕಲ ಚರಾಚರ ಭೂತಂಗಳೆಲ್ಲವೂ ಸೇರಿರುವವು. ಮತ್ತು ಆರ್ಯನಾದ ಅಗ್ರಜನು ನಾಟಕಾವಲೋಕನಾರ್ಥವಾಗಿ ಗಂಗಾತೀರದಲ್ಲಿ ಸಮಾಜಸನ್ನಿವೇಶವನ್ನು ಮಾಡೆಂದು ಆಜ್ಞಾಪಿಸಿರುವನು. ತದಾಜ್ಞಾನುಸಾರವಾಗಿ ಸಭಾಸ್ಥಲವನ್ನು ಸಿದ್ಧಪಡಿಸಿರುವೆನು. ಇದೋ ಆರ್ಯನು ಕೂಡ,

ಕಂ|| ಧರೆಯೊಳಿಕೆಯಾಶ್ರಮವಾ |
ಗಿರುತಿರ್ದುಂ ಕಷ್ಟವಹ ಮುನಿವ್ರತವಂ ತಾಂ ||
ಧರಿಸಿರ್ಪಗ್ರಜನಿಲ್ಲಿಯೆ |
ಇರುವಂ ವಾಲ್ಮೀಕಿಮುನಿಯೊಳಿಹಗೌರವದಿಂ ||

(ಬಳಿಕ ರಾಮನ ಪ್ರವೇಶ)

ರಾಮ—ವತ್ಸ ಲಕ್ಷ್ಮಣನೆ ನಾಟಕವನ್ನು ನೋಡುವುದಕ್ಕೆ ಕರೆಯಲ್ಪಟ್ಟವರೆಲ್ಲರೂ ಬಂದಿರುವರೋ.

ಲಕ್ಷ್ಮಣ—ಆರ್ಯನೆ ಎಲ್ಲರೂ ಬಂದಿರುವರು.

ರಾಮ—ಕುಶಲವರನ್ನು ಚಂದ್ರಕೇತುವು ಕುಳ್ಳಿರುವ ಸ್ಥಲದಲ್ಲಿ ಕುಳ್ಳಿರಿಸುವನಾಗು.

ಲಕ್ಷ್ಮಣ—ಅಪ್ಪಣೆ. ತಾವು ರಾಜಾಸನದಲ್ಲಿ ಕುಳಿತುಕೊಳ್ಳಬೇಕು (ರಾಮನು ಕುಳಿತುಕೊಳ್ಳುವನು)

ಲಕ್ಷ್ಮಣ—ಎಲೈ ಸೂತ್ರಧಾರನೆ ಇನ್ನು ನಿನ್ನ ಪ್ರಸ್ತಾವನೆಯನ್ನುಪಕ್ರಮಿಸು ಬಾ.

ಸೂತ್ರಧಾರ— (ಪ್ರವೇಶಿಸಿ) ಪೂಜ್ಯರಾದ ಮತ್ತು ಸತ್ಯವಾದಿಗಳಾದ ವಾಲ್ಮೀಕಿಗಳು ಸಕಲವಾದ ಸಚರಾಚರ ಜಗತ್ತಿಗೆ ಹೀಗೆ ಆಜ್ಞಾಪಿಸುವರು. ನಾವು ಜ್ಞಾನದೃಷ್ಟಿಯಿಂದ ನೋಡಿ ಕರುಣಾದ್ಭುತರಸಗಳಿಂದ ಕೂಡಿರುವ ಪಾವನವಾದದ್ದೊಂದು ನಾಟಕವನ್ನು ರಚಿಸಿರುವೆವು. ಅದನ್ನು ಕಾರ್ಯಗೌರವದಿಂದ ಅವಧರಿಸಬೇಕೆಂದು,

ರಾಮ—ಅಹ ಮಹರ್ಷಿಗಳು ಅರಿಯದ ವಿಷಯವಾವುದುಂಟು. ಅವರ ವಾಕ್ಯಗಳು ಅಮೃತರಸಗಳು, ಆಜ್ಞೆಗಳು ಅಸಾಧಾರಣಗಳು. ಅದಕ್ಕೆ ಸಂದೇಹವೇನು.

ಸೂತ್ರ—ಕಂ॥ ತರಣಿಕುಲದರಸನುಳಿದಾ ।
ಧರಣಿಜೆ ಬನದಲ್ಲಿ ತಾಂ ಪ್ರಸವವೇದನೆಯಂ ॥
ಪರಿಹರಿಸಲಾರದಕಟಾ ।
ಸುರನದಿಯೊಳು ದೇಹವಂ ಸಮರ್ಪಿಪಳೀಗಳ್ ॥

(ಎಂದು ಹೋಗುವನು)

(ಬಳಿಕ ಗಂಗಾತೀರ—ಸೀತಾಪ್ರವೇಶ) *

---

* ರಾಗ ॥ ತಾಳ ॥

ಹಾ ಆರ್ಯಪುತ್ರ । ಹಾವತ್ಸಲಕ್ಷ್ಮಣ ॥ಪ॥ ಈ ಕಾಂತಾರದೊಳ್ । ಳೇಕೆನ್ನ ಮನೇ । ಕಾಕಿನೀಮಾಡಿದೆ । ಹಾ ಕರುಣಾಳುವೆ ॥ಅ॥ ಪ್ರಸವವೇದನೆಯ ಸೈ । ರಿಸಲಾರೆನುನಾಂ । ಮುಸುಕುವವಿದೊಘಾತುಕಮೃಗಗಳು ಹಾ ॥೧॥ ಮಂದಭಾಗ್ಯೆಯನಾ । ನೆಂದೆಂನಿಮ್ಮನು । ಇಂದೀಗಂಗಾನದಿಯೊಳುಬಿಳ್ವೆಂ॥ (ಎಂದು ಗಂಗೆಯಲ್ಲಿ ಬೀಳುವಳು)

ಲಕ್ಷ್ಮಣ—ಹಾ ಕಷ್ಟ ಇದೇನುಸಂಭವಿಸಿತು.

ರಾಮ—ಹಾ ದೇವಿ ಹಾ ದೇವಿ ವತ್ಸ ಲಕ್ಷ್ಮಣ ನೋಡು ನೋಡು.

ಲಕ್ಷ್ಮಣ—ಆರ್ಯನೆ ಇದೇತಕ್ಕೆ ಧೈರ್ಯಗುಂದುವೆ ಇದು ನಾಟಕವಲ್ಲವೆ.

*ರಾಮ—ಹಾ ವತ್ಸ ಲಕ್ಷ್ಮಣನೆ ಸೈರಿಸಲಾರೆನು. ನನ್ನನ್ನು ಹಿಡಿದುಕೊ.

(ಎಂದು ಲಕ್ಷ್ಮಣನಮೇಲೆ ಮಲಗಿಕೊಳ್ಳುವನು)

(ಬಳಿಕ ಪೃಥ್ವಿಭಾಗೀರಥಿಯರು ಅವಳಮಕ್ಕಳುಸಮೇತ ಸೀತೆಯನ್ನು ಹಿಡಿದು ಜಲಮಧ್ಯದಲ್ಲಿ ಪ್ರವೇಶ)

ಪೃಥ್ವಿಭಾಗೀರಥಿಯರು—ಎಲೆ ದೇವಿ ವೈದೇಹಿಯೆ ಸಂತೈಸಿಕೊ. ಎಲೆ ಮಂಗಳಾಂಗಿ ಜಲಮಧ್ಯದಲ್ಲಿ ಮಕ್ಕಳನ್ನು ಹೆತ್ತು ದೈವಯೋಗದಿಂದ ಬದುಕಿದೆಯು.

ಸೀತೆ—(ಸಂತೈಸಿಕೊಂಡು) ದೈವಯೋಗದಿಂದ ಮಕ್ಕಳನ್ನು ಹೆತ್ತೆನು. ಹಾ ಆರ್ಯಪುತ್ರನೆ (ಎಂದು ಮೂರ್ಛಿಸುವಳು.)

ಲಕ್ಷ್ಮಣ—(ಪಾದಗಳಮೇಲೆ ಬಿದ್ದು) ಆರ್ಯನೆ ದೈವಯೋಗದಿಂದ ವರ್ಧಿಸುವರಾದೆವು. ಇನ್ನು ರಘುವಂಶವು ಮಂಗಳಮಯುಗಳಾದ ಅಂಕುರಗಳನ್ನು ಪಡೆದುದು (ನೋಡಿ) ಹಾ ಆರ್ಯನೆ ಚೇತರಿಸುವನಾಗು (ಎಂದು ವಸ್ತ್ರದಿಂದ ಬೀಸುವನು.)

ಪೃಥ್ವಿ—ಎಲೆ ವತ್ಸೆ ಸಂತೈಸಿಕೊ.

ಸೀತೆ—(ಸಂತೈಸಿಕೊಂಡು) ಎಲೌ ಪೂಜ್ಯಳೆ ನೀನು ಯಾರು, ಈಕೆಯಾರು.

ಪೃಥ್ವಿ—ಎಲೆ ವತ್ಸೆ ಈಕೆಯು ನಿಮ್ಮ ಮಾವನ ಕುಲದೇವತೆಯಾದ ಗಂಗಾದೇವಿಯು.

---

* ರಾಗ ॥

ಹಾಮಹೀಜೆ ವೈದೇಹಿಯೆ। ಕೋಮಲಾಂಗಿ ಹಾಹಾಪ್ರಿಯೆ ॥ಪ॥ ದೇವಿಹಾ ರಾಮನ। ಕೈವಿಡಿದುದಕೆನಿನ। ಗೀವಿಧಿಯು ಬಂದುದೇನೆ। ಹಾಪಾವನಾಂಗಿ ಚಂದ್ರಾನನೆ॥೧॥

ಸೀತೆ—ಎಲೌ ಪೂಜ್ಯಳೆ ನಿನಗೆ ವಂದಿಸುವೆನು.

ಭಾಗೀರಥಿ—ಎಲೆ ವತ್ಸೆ ನಿನ್ನ ಸಚ್ಚರಿತ್ರೆಗೆ ತಕ್ಕ ಫಲವನ್ನು ಹೊಂದು.

ಲಕ್ಷ್ಮಣ—ಅನುಗೃಹೀತರಾದೆವು.

ಗಂಗೆ—ಎಲೌ ವತ್ಸೆ ಈಕೆಯು ನಿನ್ನನ್ನು ಹೆತ್ತ ಭೂದೇವಿಯಲ್ಲವೆ.

ಸೀತೆ—ಹಾ ಜನನಿ ಇಂಥಾ ಅವಸ್ಥೆಯಲ್ಲಿ ನನ್ನನ್ನು ನೋಡಿದೆಯ.

ಭೂದೇವಿ—ಬಾ ವತ್ಸೆ ಬಾ. (ಎಂದು ಆಲಿಂಗಿಸಿಕೊಂಡು ಮೂರ್ಛಿಸುವರು)

ಗಂಗೆ—ಎಲೈ ವತ್ಸೆ ವೈದೇಹಿಯೆ ಎಲೌ ಪೂಜ್ಯಳಾದ ಭೂದೇವಿಯೆ ಸಂತೈಸಿಕೊಳ್ಳಿ ಸಂತೈಸಿಕೊಳ್ಳಿ.

ಭೂಮಿ—ಎಲೌ ಪೂಜ್ಯಳೆ ಸೀತೆಯನ್ನು ಹೆತ್ತ ಬಡಲನ್ನು ಹ್ಯಾಗೆ ಸಂತೈಸಿಕೊಳ್ಳಲಿ, ಹೇಳು. ಮಗಳಿಗೆ ಆಗ ರಾಕ್ಷಸರ ಮಧ್ಯದಲ್ಲಿದ್ದ ಕಷ್ಟವೊಂದು. ಈಗ ಪತಿಯು ತ್ಯಾಗಮಾಡಿದ ಕಷ್ಟವೊಂದು. ಹೀಗಿರುವಾಗ ಹ್ಯಾಗೆ ಸಹಿಸಲಿ.

ಗಂಗೆ—ಎಲೌ ಭಾಗೀರಥಿಯೆ ನೀನು ಹೇಳಿದ್ದು ನಿಜ. ಯಾರಿದ್ದರೇನು? ಮಗಳಿಗೆ ಬಂದ ಕಷ್ಟವನ್ನು ಯಾರೂ ಪರಿಹರಿಸಲಿಲ್ಲ. ಕೈಹಿಡಿದ ಪತಿಯೇ ಸತಿಯನ್ನು ದೂರುಮಾಡಿದಮೇಲೆ ಇನ್ನೇನು ಹೇಳತಕ್ಕದ್ದು.

ಸೀತೆ—ಹಾ ಆರ್ಯಪುತ್ರನೆ.

ಪೃಥ್ವಿ—ಅವನುಯಾರು ನಿನಗೆ ಆರ್ಯಪುತ್ರನು.

ಸೀತೆ—(ಲಜ್ಜೆಯಿಂದ ಕೂಡಿ) ತಾಯಾದವಳು ಹ್ಯಾಗಾದರೂ ಹೇಳಬಹುದು.

ರಾಮ—ಮಾತೆ ಭೂಮಿದೇವಿಯೆ ನೀನು ಹೇಳಿದ್ದು ಸಹಜ. ನಾನು ಆರ್ಯಪುತ್ರನಾಗಿದ್ದಲ್ಲಿ ಸೀತಾ ವಿಷಯದಲ್ಲಿ ಹಾಗಿದ್ದು ಹೀಗೆ ಮಾಡುತ್ತಿದ್ದೆನೆ.

ಗಂಗೆ—ಎಲೌ ಪೂಜ್ಯಳಾದ ಭೂಮಿದೇವಿಯೆ ಲೋಕಮಾತೆಯಾದ ನೀನು ತಿಳಿಯದವಳಂತೆ ಅಳಿಯನಮೇಲೆ ಏತಕ್ಕೆ ಕೋಪಮಾಡುವೆ ? ಕೇ

ಳು ಇಕ್ಷ್ವಾಕುಕುಲಜರಿಗೆ ಲೋಕವಮೆಚ್ಚುವಂತೆ ನಡೆಯುವುದೇ ಕುಲಕ್ರಮಾಗತವು. ವತ್ಸನಾದ ರಾಮಭದ್ರನು ತಾನೆ ಏನುಮಾಡಿಯಾನು. ಲೋಕಾಪವಾದವೆಂಬುವದು ಕಷ್ಟ. ಸರ್ವಪ್ರಯತ್ನದಿಂದಲೂ ಮನುಷ್ಯನು ಲೋಕಾಪವಾದಕ್ಕೆ ಸಿಕ್ಕದಂತೆ ಬಾಳಬೇಕಲ್ಲವೆ. ಇದೋ ನಿನಗೆ ನಮಸ್ಕಾರ.

ಲಕ್ಷ್ಮಣ—ಎಲೌ ಗಂಗಾದೇವಿ ಎಲ್ಲವನ್ನೂ ತಿಳಿದ ಪರದೇವತೆಯೇ ನೀನು. ನಿನಗೆ ತಿಳಿಯದ ವಿಷಯವ್ಯಾವದುಂಟು.

ರಾಮ—ತಾಯೆ ಭಾಗೀರಥಿಯೆ ನೀನು ನಮ್ಮ ಕುಲೋದ್ಧಾರಿಣಿಯಲ್ಲವೆ ? ಇನ್ನು ಹೇಳತಕ್ಕದ್ದೇನು.

ಪೃಥ್ವಿ—ಎಲೌ ಗಂಗೆ ನಿನಗೆ ನಾನು ಯಾವಾಗಲೂ ಪ್ರಸನ್ನೆಯಾಗಿಯೇ ಇರುವೆನು. ಆದರೆ ಮಗಳ ಕಷ್ಟವನ್ನು ನೋಡಿ ಸೈರಿಸಲಾರೆನು. ಸೀತಾವಿಷಯದಲ್ಲಿ ರಾಮಭದ್ರನಿಗೆ ಇರುವ ಪ್ರೇಮವನ್ನೂ ನಾನು ತಿಳಿಯದವಳುಬೇರೆಯಲ್ಲ.

ಕಂ॥ ನಿಜವೀ ಲೋಕವಮೆಚ್ಚಿಸೆ ।
ಸುಜನೆಯುಮೆಂದರಿದು ವತ್ಸೆಯುಂ ವಿಧಿವಶದಿಂ ॥
ತ್ಯಜಿಸುತ್ತ ತಿಕಷ್ಟದೆತಾಂ ।
ಪ್ರಜೆಮಾಡಿದಪುಣ್ಯದಿಂದೆ ಬದುಕಿಹನಾತಂ ॥

ರಾಮ—ಗುರುಜನಗಳಿಗೆ ಹ್ಯಾಗಾದರೂ ಪುತ್ರರಲ್ಲಿ ದಯವಿಲ್ಲವೆ.

ಸೀತೆ—(ರೋದಿಸುತ್ತಾ ಕೈಜೋಡಿಸಿಕೊಂಡು) *

---

* ರಾಗ ॥ ಮಾಂಜಿ ॥ ತಾಳ ॥

ಸಾಕುಸಾಕು । ಲೋಕದಬಾಳು । ಮನ್ಮಾತೆ ॥ಪ॥ ಸ್ವೀಕರಿಸಿಕೊನೀನು ॥ಅ॥ ಕುಂದುಬಾರ । ದಂದದಿನಡೆ । ಕೊಂಡರುಜನರು ಲೋಕದಿ । ಹಿಂದುಮುಂದು ನೋಡದಕಟ । ನಿಂದಿಸುವರುಹಾ ॥ ೧ ॥ ಹಿಂದೆರಾಕ್ಷಸನ ಮಂದಿರಾಂತ ಕಷ್ಟವು । ಇಂದೆನಗೀ ಕಷ್ಟವಾಗಲಿನ್ನೆಂತೊ । ಸೈರಿಪೆ ಮನ್ಮಾತೆ ॥೨॥

ರಾಮ—ಇನ್ನೇನುತಾನೇ ಹೇಳಾಳು.

ಭೂಮಿದೇವಿ—ಎಲೆ ಮಗಳೆ ಸ್ತನ್ಯತ್ಯಾಗದ ವರಿಗೂ ಮಕ್ಕಳನ್ನು ಸಂರಕ್ಷಿಸುವಳಾಗು. ಆಮೇಲೆ ನಿನ್ನ ಮನಸ್ಸಿಗೆ ಬಂದಂತೆ ಮಾಡುವೆಯಂತೆ ನಡೆ. ರಸಾತಳಕ್ಕೆ ಹೋಗೋಣ.

ಗಂಗಾ—ಹಾಗೆಯೇ ಸರಿ. (ಎಂದೆಲ್ಲರೂ ಹೋಗುವರು)

* ರಾಮ—(ಮೂರ್ಛಿಸುವನು).

ಲಕ್ಷ್ಮಣ—(ದುಃಖದಿಂದ) ಎಲೌ ಪೂಜ್ಯರಾದ ವಾಲ್ಮೀಕಿಗಳೆ ಇದೇಯೊ ನಿಮ್ಮ ನಾಟಕಕ್ಕೆಪ್ರಯೋಜನ.

ತೆರೆಯಲ್ಲಿ—ಎಲೈ ನಿಮ್ಮ ವಾದ್ಯಗಳ ಕಲಕಲವೆಲ್ಲಾ ನಿಲ್ಲಲಿ. ಎಲೈ ಸಕಲ ಸಭಾಸದರೆ ವಾಲ್ಮೀಕಿಗಳು ಅನುಜ್ಞೆಗೈದ ಆಶ್ಚರ್ಯವನ್ನು ಈಗ ನೋಡುವರಾಗಿ.

ಲಕ್ಷ್ಮಣ—ಆಹ ಇದೇನು.

ಕಂ॥ ಕಲಕಿತುಕಡೆದೋಲ್ ಗಂಗಾ ।
ಜಲಮಂಬರದಲ್ಲಿ ದೇವಮುನಿಗಳ್ ನೆರೆದಳ್ ॥
ಛಲೆಗಂಗಾಪೃಥ್ವಿಯರಿಂ ।
ಸಲಿಲದಿತಾನೆದ್ದು ಬರ್ಪಳಾರ್ಯೆಯೆ ಈಗಳ್ ॥

ತೆರೆಯಲ್ಲಿ—ಎಲೌ ಪೂಜ್ಯಳಾದ ಅರುಂಧತಿಯೆ ನಾವು ಗಂಗಾಪೃಥ್ವಿಯರು. ಇದೋ ಪುಣ್ಯಚರಿತೆಯಾದ ಸೀತಾದೇವಿಯನ್ನು ನಿನ್ನಡಿಗೆ ಸಮರ್ಪಿಸಿದೆವು.

---

* ರಾಗ ॥ ಪೂರ್ವಿಕಲ್ಯಾಣಿ ॥ ಆದಿ.

ಇನ್ನೆಂತುಬಾಳ್ವೆ । ಇನಿಯಳನುಡಿದುನಾಂ ॥ಪ॥ ವರದಂಡಕಾವನ । ವಾಸಪ್ರಿಯಾಸಖಿ । ತೊರದೆನ್ನೊಳೆನ್ನೊಳಾಸೆಯ । ತೆರಳ್ವೆಯುಸುಮುಖಿ ॥೧॥ ಹಾ ಕಾಂತೆಭೊಂದೆನೀಂ । ಲೋಕಾಂತರವನುನಾ । ನೇಕಾಕಿಯಾದೆ । ಲೋಕದೊಳಕಟ ॥೨॥

ಲಕ್ಷ್ಮಣ—ಆಹ ಆಶ್ಚರ್ಯ ಆಶ್ಚರ್ಯ ಆರ್ಯನೆ ನೋಡುನೋಡು. ಅಯ್ಯೋ ಆರ್ಯನು ಇನ್ನೂ ಮೂರ್ಛೆ ತಿಳಿಯದಿರುವನು.

(ಬಳಿಕ ಪೃಥ್ವೀ ಭಾಗೀರಥೀ ಸೀತಾ ಅರುಂಧತಿಯರು ಪ್ರವೇಶಿಸುವರು).

ಅರುಂಧತಿ—ಬೇಗ ನಿನ್ನ ಹಸ್ತಸ್ಪರ್ಶದಿಂದ ರಾಮಭದ್ರನನ್ನು ಸಂತೈಸು ಸಂತೈಸು. ಲಜ್ಜೆಯನ್ನು ಬಿಡು. ಇದೋ ನಿನ್ನ ಆರ್ಯಪುತ್ರನು ಮೂರ್ಛೆಯನ್ನು ಹೊಂದಿರುವನು.

ಸೀತೆ—(ರಾಮನನ್ನು ಮುಟ್ಟಿ) ಆರ್ಯಪುತ್ರನೆ ಸಂತೈಸಿಕೊ.

ರಾಮ—(ಸಂತೈಸಿಕೊಂಡು ಸಂತೋಷದಿಂದ) ಆಹಾ ನನ್ನ ಪ್ರಾಣಪ್ರಿಯಳು ಇಲ್ಲೇ ಇರುವಳು. ಓಹೋ ಪೂಜ್ಯಳಾದ ಅರುಂಧತಿಯೂ ಇರುವಳು ಈ ಪೂಜ್ಯೆಯರ್ಯಾರೋ ಕಾಣೆ. ಜನಗಳು ಇರುವರು.

ಅರುಂಧತಿ—ಎಲೈ ವತ್ಸನೆ ಈಕೆಯು ಭಗೀರಥನ ಗೃಹದೇವತೆಯಾದ ಪ್ರಸನ್ನ ಗಂಗಾದೇವಿಯು.

ಗಂಗಾ—ಎಲೈ ಜಗತ್ಪತಿಯಾದ ರಾಮಭದ್ರನೆ ಚಿತ್ರದರ್ಶನ ಕಾಲದಲ್ಲಿ ಸೀತಾವಿಷಯದಲ್ಲಿ ಕ್ಷೇಮಚಿಂತಕಳಾಗೆಂದು ಹೇಳಿದ್ದೆಯಷ್ಟೆ. ಅದಕಂತೆ ಈಕೆಯನ್ನು ಕಾಪಾಡಿದೆನು. ಇನ್ನು ನಾನು ಋಣಮುಕ್ತೆಯು. ಈಕೆ ನಿಮ್ಮ ಅತ್ತೆಯಾದ ಭೂಮಿದೇವಿಯು.

ಭೂದೇವಿ—ಎಲೈ ಆಯುಷ್ಮಂತನೆ ಸೀತೆಯನ್ನು ತ್ಯಜಿಸುವಕಾಲದಲ್ಲಿ ಹೇಳಿದಂತೆ ನಾನು ಈಕೆಯನ್ನು ಕಾಪಾಡಿ ವತ್ಸನ ವಚನವನ್ನು ನೆರವೇರಿಸಿದೆನು.

ರಾಮ—ಎಲೈ ಪೂಜ್ಯೆಯರೆ ಅಪರಾಧಿಯಾದ ನನ್ನಲ್ಲಿ ನೀವು ಹಾಗೆ ಅನುಗ್ರಹಿಸಿದಿರಿ.

(ಬಳಿಕ ವಾಲ್ಮೀಕಿ ಪ್ರವೇಶಿಸಿ)

* ವಾಲ್ಮೀಕಿ—ಎಲಾ ಪುರಜನನಿವಾಸಿಗಳೇ ಕೇಳಿರಿ.

* ಎಲ್ಲರು—

ವಾಲ್ಮೀಕಿ-ಕಂ॥ ಧರಣಿಪತಿ ರಾಮಭದ್ರನೆ ।
ಹರಿಸದಿ ನೀನಿನ್ನು ಧರ್ಮಚಾರಿಣಿಯಾದೀ ॥
ಧರಣಿಜೆಯೊಡಗೂಡುತ್ತಂ ।
ನೆರವೇರಿಸು ನೆಗಳುವಶ್ವಮೇಧಾಧ್ವರವಂ ॥

ರಾಮ—ಪೂಜ್ಯರೇ ತಮ್ಮ ಅಪ್ಪಣೆಯಾದಂತೆ ನಡೆಯುವೆನು.

ಅರುಂಧತಿ—ಎಲೈ ಪೂಜ್ಯರಾದ ವಾಲ್ಮೀಕಿಗಳೇ ಸೀತಾಗರ್ಭಸಂಭವರಾದ ಕುಶಲವರನ್ನು ರಾಮಭದ್ರನಿಗೆ ಸಮರ್ಪಿಸುವರಾಗಿ.

ವಾಲ್ಮೀಕಿ—(ಕುಶಲವರಿಗೆ ರಾಮನನ್ನು ತೋರಿಸಿ) ಎಲೈ ವತ್ಸರಾದ ಕುಶಲವರೆ ಈತನೇ ನಿಮ್ಮ ತಂದೆಯಾದ ರಘುಪತಿಯು. ಈತನು ನಿಮ್ಮ ಚಿಕ್ಕಪ್ಪನಾದ ಲಕ್ಷ್ಮಣನು. ಈತನು ನಿಮಗೆ ಮಾತಾಮಹನಾದ ಜನಕನು.

---

* ರಾಗ॥ ಕರಹರಪ್ರಿಯ॥ ರೂಪಕ.

ಘಡಘಡದೇಶಪುರನಿವಾಸಜನರೆಕೇಳಿರೆ । ನುಡಿದುದನೀವು ಕೇಳಿರೈ । ಸಂದೇಹವನೀಡಾಡಿರೈ ॥ ಅ॥ ಪ॥ ಕ್ಷಿತಿತನೂಜೆಪರಮಪತಿ। ವ್ರತೆಸುಶೀಲೆಸತ್ಯವೆಂದು। ಕ್ಷಿತಿಯುಗಂಗೆಈರ್ವರು । ಕೈಯೆತ್ತುತಿದೋ ಸಾರ್ವರು ॥೧॥ ಅಂದುಯಜ್ಞೇಶ್ವರನರ । ಹಿಂದುಭವಮುಖಾಮರರ್ಕಳೆಂದು। ಇಂದುರೈಸಾಸೀತೆಯು। ಸುಶೀಲೆಯುಂದುಸರ್ವರು ॥೨॥ ದೇವಯಾಗಜಾತೆಸೀತೆ । ಪಾವನಾಂಗಿಯನ್ನುನಿಮ್ಮ। ಭಾವವೇಸುಪೇಳಿರೈ । ಸತ್ಯಾತ್ಮರಾಗಿ ಬಾಳಿರೈ ॥೩॥

* ॥ ರಾಗ ॥

ಜಯಜಯಮಹಿತೆ ಮಹೀಸುತೆ ॥ಪ॥ ಮಹೀಸುತೆಮಹೀಸುತೆ । ಮಹಾಜನಶ್ಲಾಘಿತನಿಜಚರಿತ್ರೆ ॥ಅ॥ ಕ್ಷಿತಿಗಂಗಾಸನ್ನುತಸುಚರಿತೆಜಯ। ಪತಿಹಿತೆ । ಪರಮಪತಿವ್ರತೆ ॥೧॥

ಕುಶಲವರು—ಹಾ! ತಂದೆ ಹಾ! ಜನನಿ ಹಾ! ಮಾತಾಮಹನೆ ಇದೊ ನಿಮ್ಮ ಗಳಿಗೆ ವಂದಿಸುವೆನು. (ಎಂದೆಲ್ಲರಿಗೂ ವಂದಿಸುವರು)

ರಾಮ—(ಮಕ್ಕಳನ್ನು ಆಲಿಂಗಿಸಿಕೊಂಡು)

ಕಂ|| ವೈರಿ ಗಜಾಂಕುಶ ಕುಶಬಾ |
ಸಾರಸ ಸಖಕುಲಲತಾಸುಪಲ್ಲವ ಲವ ಬಾ ||
ಸೇರುತ ಸಮವಾಗಿಂದು ಕು |
ಮಾರರೆ ನೀವ್ಪೊಪ್ಪುತೆನ್ನ ಸಂತೋಷಿಸಿರೈ ||

ಸೀತಾ—ಬಾ ವತ್ಸಕುಶಲನೆ! ಬಾ. ಬಾವತ್ಸಲವನೆ! ಬಾ. ಜನ್ಮಾಂತರ ಗತೆ ಯಾದ ಜನನಿಯನ್ನು ಆಲಿಂಗಿಸಿಕೊಳ್ಳುವರಾಗಿರಿ.

ಕುಶಲವರು—(ತಾಯಿಯನ್ನು ಆಲಿಂಗಿಸಿಕೊಂಡು) ಈಗಲೀಗ ನಾವು ಧನ್ಯ ರಾದೆವು.

ಸೀತಾ—ಎಲೌ ಪೂಜ್ಯರಾದ ವಾಲ್ಮೀಕಿಗಳೆ ನಿಮಗೆ ವಂದಿಸುವೆನು.

ವಾಲ್ಮೀಕಿ—ಎಲೌ ವತ್ಸೆ! ಪತಿ ಪುತ್ರರೊಡನೆ ಬಹುಕಾಲ ಬದುಕು.

ರಾಮ—ಪೂಜ್ಯರೆ ತಮ್ಮ ಅಪ್ಪಣೆಯಾದರೆ ಅಯೋಧ್ಯೆಗೆ ಹೋಗಿಬರು ವೆನು. (ಎಂದು ಪತ್ನಿ ಪುತ್ರರೊಡನೆ ನಮಸ್ಕರಿಸುವನು)

ವಾಲ್ಮೀಕಿ—ವತ್ಸ! ರಾಮಭದ್ರನೆ! ನಿನ್ನ ಕೋರಿಕೆಯಲ್ಲಾ ನೆರವೇರಲಿ. (ಮುಂದೆನೋಡಿ) ಓಹೋ ಲವಣಾಸುರನನ್ನು ಜೈಸಿದ ಮಧುರಾ ಪತಿಯಾದ ಶತ್ರುಘ್ನನು ಬಂದನು.

ಲಕ್ಷ್ಮಣ—ಕಲ್ಯಾಣದಮೇಲೆ ಕಲ್ಯಾಣವುಂಟಾಯಿತು.

ರಾಮ—ಈಗನಾನು ಪೂರ್ಣಮನೋರಥ [illegible]ನಾದೆನು.

ವಾಲ್ಮೀಕಿ—ಎಲೈ ರಾಮಭದ್ರನೆ! ನಿನಗೇನು ಪ್ರಿಯವನ್ನುಂಟುಮಾಡಲಿ ಹೇಳು.

ರಾಮ—ಎಲೈ ಪೂಜ್ಯರೆ! ಇದಕ್ಕಿಂತಲೂ ಇನ್ನೇನು ಪ್ರಿಯವುಂಟು. ತಮ್ಮ ಅನುಗ್ರಹದಿಂದ ಎಲ್ಲಾ ವಿಷಯಗಳಲ್ಲಿಯೂ ನಾನು ಪೂರ್ಣ ಮನೋರಥನು. ಆದರೆ ಇದು ತಮ್ಮ ಕೃಪೆಯಿಂದುಂಟಾಗಲಿ.

‖ ಭರತವಾಕ್ಯಂ ‖

ಕಂ‖ ಈಕಥೆ ಪಾಪಂಗಳನು ನಿ |
ರಾಕರಿಸಲಿ ಗಂಗೆಯಂತೆ ಸಲಹಲಿ ತಾಯೋಲ್ ‖
ಲೋಕದ ಬುಧರೊಪ್ಪಲಿ ವಾ |
ಲ್ಮೀಕಿಯ ಭಾರತಿಯನೆಮ್ಮ ಪಾಲಿಸಲೀಶಂ ‖

(ಎಂದೆಲ್ಲರೂ ಹೋಗುವರು)

ಏಳನೆಯ ಅಂಕ ಮುಗಿದುದು.

ಉತ್ತರರಾಮಚರಿತ್ರೆ ಸಂಪೂರ್ಣಂ.

ವರಗುಣಯುತ ಚಾಮಮಹೀ |
ಶ್ವರನಿಂ ದಾಜ್ಞಪ್ತನಾಗಿ ತಾಂ ಸಂಸ್ಕೃತ ದು ‖
ತ್ತರರಾಮಚರಿತ್ರವ ನಿಳೆ |
ಯರಿಯಲ್ ಬಸವಪ್ಪಶಾಸ್ತ್ರಿ ಕನ್ನಡಿಸಿರ್ದಂ ‖

ರಾಗ॥ ಸುರುಟಿ॥ ಆದಿತಾಳ ॥

ಜಯಜಗದಾವನ ನಿಪುಣ ಶಿತಿಕಂಠ ॥ಪ॥ ಜಯಶಿತಿಕಂಠಸೇವಕನೋತ್ಕಂಠ ॥ಅ॥ ಖಂಡಿತಕಾಲಾ। ಖಂಡಲಬಾಲಶೋಂಡದಲೀಲ । ಮೃಕಂಡುಜ ಪಾಲ ॥೧॥ ಪಾಲಯಚಾಮಭೂ। ಪಾಲಕಸಮ್ಮುಕಂ। ಪಾಲ್ಗಿರಿಜಾಲೋಲ। ಸುಶೀಲ ॥೨॥

KARNATAKA

SAKUNTALA NATAKAM.

ಕರ್ಣಾಟಕ

ಶಾಕುಂತಲ ನಾಟಕವು.

ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನಕವಿಗಳಾದ
ಬಸವಪ್ಪಶಾಸ್ತ್ರಿಗಳಿಂದ ರಚಿಸಲ್ಪಟ್ಟದು.

ಎರಡನೆ ಮುದ್ರಣವು.

ಮೈಸೂರು:
ಮೈಸೂರು ಸರಕಾರದ ಬ್ರಾಂಚ್ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟಿತು,
೧೮೯೦.

ಎರಡನೇ ಮುದ್ರಣದ ಪೀಠಿಕೆ.

ಕರ್ಣಾಟಕ ಭಾಷೆಯನ್ನು ವೃದ್ಧಿಪಡಿಸಬೇಕೆಂಬ ಶ್ರೀಮನ್ಮಹಾರಾಜರವರ ಅಭಿಪ್ರಾಯಾನುಸಾರವಾಗಿ ವಿದ್ಯಾಭಿಮಾನಿಗಳಾದ ದರಬಾರ್ ಬಕ್ಷಿ ರಾಯ ಬಹದ್ದೂರ್ ಮಹಾರಾಜಶ್ರೀ ಎ. ನರಸಿಹ್ಮಯ್ಯಂಗಾರ್ಯರವರಿಂದ ಪ್ರೋತ್ಸಾಹಿಸಲ್ಪಟ್ಟು ನಾಟಕಗಳಲ್ಲಿ ಉತ್ತಮವಾಗಿಯೂ ನೀತಿಬೋಧಕವಾಗಿಯೂ ಇರುವ ಕಾಳಿದಾಸಮಹಾಕವಿರಚಿತವಾದ ಸಂಸ್ಕೃತ ಶಾಕುಂತಲ ನಾಟಕವನ್ನು ಐದು ಘಂಟೆಗಳ ಕಾಲದಲ್ಲಿ ಆಡುವದಕ್ಕೆ ಅನುಕೂಲವಾಗಿಯೂ ನಾಟಕಸಂವಿಧಾನ ಕೆಡದಂತೆಯೂ ಕೆಲವು ವರ್ಣನಾಂಶವನ್ನು ಬಿಟ್ಟು ಗಾನಯೋಗ್ಯಗಳಾದ ಪದಗಳಿಂದ ಕೂಡಿ ಪಂಡಿತಪಾಮರರಂಜಕವಾಗಿರುವಂತೆ ಕರ್ಣಾಟಕಭಾಷೆಯಲ್ಲಿ ಸಂಕ್ಷೇಪವಾಗಿ ರಚಿಸಿರುತ್ತೇನೆ.

ಬಳಿಕ ಅನೇಕ ವಿಷಯಗಳಲ್ಲಿ ಸಾರಜ್ಞರಾಗಿಯೂ ವಿದ್ವಾಂಸರಿಗೂ ವಿದ್ಯಾರ್ಥಿಗಳಿಗೂ ಬಹಳವಾಗಿ ಪ್ರೋತ್ಸಾಹಕರರಾಗಿಯೂ ಈ ದೇಶಕ್ಕೆ ಹಿತಚಿಂತಕರಾಗಿಯೂ ಇದ್ದದ್ದರಿಂದ ಎಂದೆಂದಿಗೂ ಸ್ಮರಣೀಯರಾದ ಪೂರ್ವದ ದೀವಾನರಾದ ಸಿ. ರಂಗಾಚಾರ್ಯರವರು ಸಂಸ್ಕೃತ ನಾಟಕದಲ್ಲಿರುವ ಒಂದಂಶವನ್ನೂ ಬಿಡದೆ ರಚಿಸಬೇಕೆಂದು ಅಭಿಪ್ರಾಯಪಟ್ಟಂತೆ, ಓದುವವರಿಗೂ ನಾಟಕದವರಿಗೂ ಅನುಕೂಲವಾಗಿರುವ ಹಾಗೆ ರಚಿಸಿ ಮೊದಲನೆ ಮುದ್ರಣವು ಬಲುಬೇಗನೆ ಆಗಬೇಕೆಂದುದರಿಂದ ನಾಟಕಕ್ಕೋಸ್ಕರ ಉಪಯೋಗಿಸಿದ್ದ ತಾತ್ಪರ್ಯಮಾತ್ರವುಳ್ಳ ಕೆಲವು ಕಂದಗಳನ್ನೇ ಸೇರಿಸಿದ್ದಾಯಿತು. ಈಗಿನ ಮುದ್ರಣೆಯಲ್ಲಿ ಪೂರ್ವೋಕ್ತವಾದ ಕಂದಗಳಿಗೆ ಪ್ರತಿಯಾಗಿ ವೃತ್ತಗಳನ್ನು ಸೇರಿಸಿ ಪರಿಷ್ಕರಿಸಲ್ಪಟ್ಟಿರುತ್ತೆ.

ಇನ್ನೇನಾದರು ಪ್ರಮಾದವಿದ್ದಲ್ಲಿ ಗುಣಿಗಳಾದ ವಿದ್ವಾಂಸರು ತಿಳಿಯಪಡಿಸಿದಲ್ಲಿ ಕೃತಜ್ಞತೆಯಿಂದ ಮುಂದಣ ಮುದ್ರಣೆಯಲ್ಲಿ ಪರಿಷ್ಕರಿಸಲ್ಪಡುತ್ತೆ.

ಮೈಸೂರು,
ಜನವರಿ ೧೮೯೦

ಬಸವಪ್ಪಶಾಸ್ತ್ರಿ.

☞ ಓದುವವರು ಕೆಳಗಡೆ ಗೀಟುಹಾಕಿ ಸಣ್ಣಾಕ್ಷರದಲ್ಲಿ ಮುದ್ರಿತವಾಗಿರುವ ಪದಗಳನ್ನು ಬಿಟ್ಟು ಓದಿಕೊಳ್ಳತಕ್ಕದ್ದು. ನಾಟಕದವರು (*) ಮೊದಲಾದ ಗುರುತು ಹಾಕಿರುವ ಪದ್ಯಗಳನ್ನು ಬಿಟ್ಟು ಅವಕ್ಕೆ ಪ್ರತಿಯಾಗಿ ಕೆಳಗಡೆ ಸಣ್ಣಾಕ್ಷರದ ಅದೇ ಗುರುತಿನ ಪದಗಳನ್ನು ಉಪಯೋಗಿಸಿ ಕೊಳ್ಳತಕ್ಕದ್ದು.

KARNATAKA

SAKUNTALA NATAKAM.

ಕರ್ಣಾಟಕ

ಶಾಕುಂತಲ ನಾಟಕಂ.

ಪ್ರಥಮಾಂಕಂ.

*ವೃತ್ತ॥ ಆವುದು ಧಾತೃಸೃಷ್ಟಿಗೆ ಮೊದಲ್ ಹುತಹವ್ಯಮ ನಾಂಪುದಾವುದಿ ।
ನ್ನಾವುದು ಹೋತೃಶಬ್ದಗುಣಮಾವು ದವಾವುವು ಕಾಲಕರ್ತೃಗಳ್॥
ಆವುದುಸಿರ್ಜಗಕ್ಕುಸಿರ್ವರಾವುದ ಭೂತಕುಲಪ್ರಧಾನಮೆಂ ।
ದಾವ್ರೊಡಲೆಂಟರಿಂದೆ ಮೆರೆವೀಶನೊಡರ್ಚುಗೆ ನಿಮ್ಮಭೀಷ್ಟಮಂ ॥

ಸೂತ್ರಧಾರಂ.—(ತೆರೆಯ ಕಡೆಗೆ ನೋಡಿ) ಆರ್ಯೆ, ಅಲಂಕಾರ ನೆರವೇರಿದ್ದರೆ ಇತ್ತ ಬಾ.

ನಟಿ.—ಅಯ್ಯಾ, ಇದೋ ಬಂದೆನು. ನಾನು ಮಾಡತಕ್ಕ ಕಾರ್ಯವೇನು ಆಜ್ಞಾಪಿಸಬೇಕು.

ಸೂ.—ಆರ್ಯೆ, ಸಭಾಸದರಿವರು ಸಕಲಕಲಾಪ್ರವೀಣರು. ಈಗಲಾ ಕಾಳಿದಾಸ ಮಹಾಕವಿ ರಚಿತವಾದ ಅಭಿಜ್ಞಾನ ಶಾಕುಂತಲವೆಂಬ ನಾಟಕವು ಕರ್ಣಾಟಕ ಭಾಷೆಯಲ್ಲಿ ಬಸವಪ್ಪಶಾಸ್ತ್ರಿಯಿಂದ ರಚಿಸಲ್ಪಟ್ಟಿರುವದು,

---

*ವೃತ್ತ॥ ಶ್ರೀಮದ್ವಾಮಾಂಕಪರ್ಯಂಕಗತಗಿರಿಸುತಾಸ್ಮೇರವಕ್ತ್ರಾಬ್ಜಭೃಂಗಂ ।
ವ್ಯೋಮಾಬ್ತೇಜೋನಿಲಕ್ಷ್ಮಾರುಣಶಶಿಯಜಮಾನಾಷ್ಟಮೂರ್ತಿಪ್ರಪನ್ನಂ ॥
ಸೋಮಾರ್ಧೋತ್ತಂ ಸಮೂರ್ಧಂ ಜಗದವನಸಮುತ್ಕಂಠನಾ ನೀಲಕಂಠಂ ।
ಚಾಮೋರ್ವೀಪಾಲನಂ ಪಾಲಿಸುಗೆ ನರಪುರೀಕ್ಷೇತ್ರವಾಸಂ ಮಹೇಶಂ ॥

ಆ ನಾಟಕವನ್ನಾಡಿ ಇವರನ್ನು ಸಂತೋಷ ಪಡಿಸಬೇಕು. ಆದುದರಿಂದ ಪ್ರತಿಪಾತ್ರವೂ ತಮ್ಮತಮ್ಮ ಕಾರ್ಯದಲ್ಲಿ ಎಚ್ಚರವಾಗಿರತಕ್ಕದ್ದು.

ನಟಿ.—ಆಯ್ಯಾ, ತಾವು ಆಯಾ ವಸ್ತುಗಳ ಅಭಿನಯರೂಪ ಕಾರ್ಯದಲ್ಲಿ ತಕ್ಕಂತೆ ಪಾತ್ರವನ್ನು ನೇರ್ಪಗೊಳಿಸಿರುವ ಕಾರಣ ತಮಗೇನೂ ಕೊರತೆಯುಂಟಾಗಲಾರದು.

ಸೂ.—ಆರ್ಯೆ, ಆದರೂ ನಿಜವನ್ನು ಹೇಳುವೆನು ಕೇಳು.

ಕಂದ ॥ ರಸಿಕರ್ಕಳೊಪ್ಪುವನ್ನಂ ।
ರಸಾಭಿನಯ ಕೌಶಲಂಗಳೊಳ್ಳಿದುವೆನುತಾ ॥
ನುಸಿರೆಂವಲವೋದಿದ ಮಾ ।
ನಿಸರ್ಗಂ ತಮ್ಮೊಳಗೆ ತಮಗೆ ನಂಬುಗೆಯಿಲ್ಲಂ ॥ ೨

ನಟಿ.—(ನಮ್ರಳಾಗಿ) ಅಯ್ಯಾ ಮುಂದಣ ಕಾರ್ಯವೇನಾಜ್ಞಾಪಿಸಬೇಕು.

ಸೂ —ಆರ್ಯೆ, ಸಭಾಸದರಿಗೆಕರ್ಣಾನಂದವನ್ನುಂಟುಮಾಡುವದಕಿಂತಲೂ ಬೇರೆ ಕಾರ್ಯವೇನುಂಟು ?

ನಟಿ.—ಹಾಗಾದರೆ ಯಾವ ಋತುವನ್ನುದ್ದೇಶಿಸಿ ಗಾನವಂಮಾಡಲಿ ?

ಸೂ.—ಆರ್ಯೆ, ಈ ಗ್ರೀಷ್ಮಋತುವು ಬಂದು ಬಹುದಿವಸಗಳಾಗದಕಾರಣ ಉಪಭೋಗಕ್ಕೆ ಯೋಗ್ಯವಾಗಿರುವದು, ಇದನ್ನು ಉದ್ದೇಶಿಸಿ ಗಾನವಂಮಾಡು.

ಈಗಲಾದರೊ

॥ ರಾಗ—ಮೋಹನಕಲ್ಯಾಣಿ ॥ ॥ ಆದಿತಾಳ ॥

ಶ್ರೀಚಕ್ರಾವಾಸಿನಿ । ಶ್ರಿತಲೋಕೋಲ್ಲಾಸಿನಿ ॥ ಪಲ್ಲ ॥ ಶುಂಭನಿಷೂದಿನಿ । ಜಂಭಾರಿಪೋಷಿಣಿ । ಶಂಭುಸಂತೋಷಿಣಿ ॥ ೧ ॥ ಮಹಿತಮಹಾಬಲ । ಮಹಿಧರಾವಾಸಿನಿ । ಮಹಿಷವಿಧ್ವಂಸಿನಿ ॥ ೨ ॥ ಶ್ರೀಚಾಮನೃಪಮನೋ । ಗೋಚರಪದೆಜಯ । ಶ್ರೀಚಾಮುಂಡೇಶ್ವರಿ ॥ ೩ ॥

ಕಂದ॥ ಸಲಿಲಾವಗಾಹನಕ್ಕತಿ।
ಲಲಿತತೆಯಂ ಬನದೆಲರ್ಗೆ ಪಾದರಿಗಂಪಂ॥
ಸುಲಭತೆಯಂ ನಿದ್ರೆಗೆನೆಳ।
ಲೊಳಗಿತ್ತುವು ಪರಿಣತಿಯೊಳೆಸೊಗಯಿಪಪಗಲ್ಗಳ್॥ ೩

ನಟಿ.—ಹಾಗೆಯೇ ಸರಿ (ಯೆಂದು ಗಾನವಂ ಮಾಡುವಳು)

*ಕಂದ॥ ಯೋಷಾಜನ ಮೊಲವಿಂದೆ ಶಿ।
ರೀಷಮನತಿಮೃದುಲಕೇಸರಾಗ್ರಮ ನಳಯಿಂ॥
ದೀಷಚ್ಚುಂಬಿತಮಂ ಸವಿ।
ಶೇಷದಯಂ ಕನ್ನವುರವ ನೆಸಗುವುದಲ್ತೆ॥ ೪

ಸೂ.—ಆರ್ಯೆ, ಚೆನ್ನಾಗಿ ಪಾಡಿದೆ, ನಿನ್ನ ರಾಗದಲ್ಲಿ ಚಿತ್ತವಿಟ್ಟ ಸಭಾಸದರೆಲ್ಲರೂ ಚಿತ್ರ ಪ್ರತಿಮೆಗಳಂತಾದರು, ಹೇಳು, ಈಗ ಯಾವ ನಾಟಕವನ್ನಾಡಿ ಈ ಸಭಾಸದರನ್ನು ಸಂತೋಷ ಪಡಿಸೋಣ?

ನಟಿ.—ಅಯ್ಯಾ, ಮೊದಲೇ ಅಭಿಜ್ಞಾನ ಶಾಕುಂತಲವೆಂಬ ಅಪೂರ್ವ ನಾಟಕವನ್ನು ಕರ್ನಾಟಕ ಭಾಷೆಯಿಂದಾಡುವಂತೆ ತಾವು ಅಪ್ಪಣೆಯಂ ಕೊಡಲಿಲ್ಲವೆ?

ಸೂ.—ಆರ್ಯೆ, ಚೆನ್ನಾಗಿ ಎಚ್ಚರಿಸಿದೆ, ಈಗ ಹೇಳಿದ್ದನ್ನು ಈಗಲೇ ಮರೆದೆನಲ್ಲಾ! ಏತಕ್ಕೆಂದರೆ:

---

* ॥ ರಾಗ—ಬೆಹಾಗ್ ॥ ॥ ಆದಿತಾಳ ॥

ನಟಿ॥ ಭೂಸುರ ಮಾದುದೊಪೇಸಗೆ ಜನಗಳ ಪೇಸರನೆಲ್ಲವ ಕಳೆಯುತಲೇಂ॥ ಪ॥ ದರದಳಿತೋಜ್ವಲ ಪಾಟಲಪಾಳಿ। ಸುರಭಿಮನೋಜ್ಞಮಧೂಳಿ। ಮೆರೆಯುತಲೊಪನನುಸರಿಸೆ ಮುದಾಳಿ। ಬರುವದು ಮಗಮಗಿಸುತೆ ಬನಗಾಳಿ॥ ೧॥ ತಲೆಯನು ತಗ್ಗಿಸೆಗತಿಗೆ ಮರಾಳಿ। ತಳರ್ವತರುಣಿಯರ ಜಲಕೇಳೀ। ಚಲಿತ ಕಚಚ್ಯುತಕುಸುಮ ಧೂಳೀ। ಕಲನಾ ಸುರಭಿಸರೋವರಪಾಳಿ॥ ೨॥ ತರುಗಳ ನೆಳಲೊಳು ಪಥಿಕಸಿಕಾಯಂ। ನೆರೆ ಮಲಗಿರೆತಾಪಿತ ಕಾಯಂ। ಬರೆಪರಿಣಾಮಸಮಯರಮಣೀಯಂ। ಮೆರೆವದಿವಸವಾದರಣೀಯಂ॥ ೩॥

ಕಂದ ॥ ಅಂಗನೆ ಹೃತನಾದೆಂ ಹೃದ ।
ಯಂಗೊಳ್ವೀ ನಿನ್ನ ಗೀತರಾಗದೊಳೀಗಳ್ ॥
ತುಂಗತರವೇಗಶಾಲಿ ಕು ।
ರಂಗದೆ ಹೃತನಾದತೆರದೊಳೀದುಷ್ಯಂತಂ ॥ ೫

॥ ಇದುಪ್ರಸ್ತಾವನೆ ॥

(ಆಮೇಲೆ ಶರಚಾಪ ಹಸ್ತನಾದ ರಾಜನು ರಥಾರೂಢನಾಗಿ ಮೃಗವನ್ನು ಬೆನ್ನಟ್ಟಿಕೊಂಡು ಸೂತನೊಡನೆ ಬರುವನು.)

ಸೂತಂ.—(ರಾಜನನ್ನೂ ಮೃಗವನ್ನೂ ನೋಡಿ) ಎಲೈ ಆಯುಷ್ಮಂತನೆ

ಕಂದ ॥ ಹರಿಣನುಮ ನಧಿಜ್ಯಧನು ।
ರ್ಧರನೆನಿಸಿದ ನಿನ್ನುಮಂ ನಿರೀಕ್ಷಿಸುವೆನಗೇ ॥
ನೊರೆದಪೆ ನಮುವಾ ದೃಗ್ಗೋ ।
ಚರನಾದಂತಿದೆ ಪಿನಾಕಿ ಹರಿಣಾನುಗತಂ ॥ ೬

ರಾಜಂ.—ಎಲೈ ಸಾರಥಿಯೇ, ಈ ಮೃಗವು ನಮ್ಮನ್ನು ಬಹುದೂರ ಸೆಳೆಕೊಂಡುಬಂತು, ಇದು ಈಗಲೂಕೂಡ.

*ಪ॥ ಕೊರಲಂತಾಂ ಕೊಂಕು ಗೆಯ್ದುತ್ತಡಿಗಡಿಗೊಡ ನೈತಪ್ಪ ತೇರಲ್ಲಣಂನ।
ಟ್ಟಿರೆನೋಟಂ ಬಾಣಪಾತಕ್ಕಗಿ ದಿರುಕಿಸುತಂ ಪೃಷ್ಠಮಂ ಮಾರ್ಗ
ದೊಳ್ತೀ ॥
ವಿರೆನೀಡುಂಬಿಟ್ಟಬಾಯಿಂಶ್ರಮದುದಿರ್ವರೆಮೆಲ್ದಿರ್ದ್ದದರ್ಭಾಂಕುರಂಗಳ್।
ಧರೆಯುಲ್ಲೋರೋರ್ಮ್ಮೆ ಕಾಲಿಟ್ಟಹಹ ನಿರುಕಿಸೈ ಬಾನೊಳೇಪಾರಿ
ಪೋಕುಂ ॥ ೭

---

*॥ ರಾಗ — ಜಲಾಬು ॥ ॥ ಆದಿತಾಳ ॥

ರಾಜಂ ॥ ಪಾರಿತು ಪಾರಿತು ಘಡಮೃಗಪೋತ । ತೇರನಿದರಬಳಿ ಸೇರಿಸುಸೂತ ॥ ಪ ॥
ಕೊರಲನುಕೊಂಕಿಸಿ । ಬರುವ ರಥವತಾ । ತಿರುತಿರುಗಿಕ್ಷಿಪ ಪರಿಯ ನೋಡಿದೆಯಾ ॥ ೧ ॥
ಶರಪತನದ ಭಯ । ಕಿರದಿದು ಪೃಷ್ಠವ । ನಿರುಕಿಸಿ ಮುಂಬರಿ ದರರೆ ಧೀಂಕಿಡುತಾ ॥ ೨ ॥
ಶ್ರಮ ವಿವೃತಾಸ್ಯದಿ । ಸಮೆದಗಳತ್ತುಕ ಶ । ಸಮಿತಿಪನೋರ್ವಿಯನ । ಮಮುಮುಸುಕಲೂ ॥
ವೇಗವದೆಂತೊ ಭೂ । ಭಾಗದೆಕಾಣಿಪು । ದಾಗಳೆ ಬಾನೊಳೆ ಪೋಗುವದಹ ಹಾ. ॥ ೪ ॥

ರಾಜಂ.—(ಆಶ್ಚರ್ಯಯುಕ್ತನಾಗಿ) ಇದೇನು ! ನಾನು ಬೆನ್ನಟ್ಟಿ ಬಂದಾಗ್ಯೂ ಈ ಮೃಗವನ್ನು ಕಷ್ಟದಿಂ ಕಾಣಬೇಕಾಗಿದೆ.

ಸೂತಂ.—ಎಲೈ ಆಯುಷ್ಮಂತನೆ ಭೂಮಿಯು ಪಳ್ಳವಾಗಿರುವದೆಂದು ಕಡಿವಾಣವನ್ನು ಸೆಳೆದಕಾರಣ ರಥವೇಗವು ಮಂದವಾಯಿತು, ಆದ್ದರಿಂದ ಮೃಗವು ನಮಗೆ ಬಹುದೂರ ಗತವಾಯಿತು. ಸಮಪ್ರದೇಶವನ್ನು ಹೊಂದಿದ ನಿನಗಿನ್ನು ಮೃಗವು ಸಿಕ್ಕದೆ ಇರಲಾರದು.

ರಾಜಂ.—ಆದರೆ ಕುದುರೆಗಳ ಕಡಿವಾಣಗಳನ್ನು ಸಡಿಲಬಿಡು.

ಸೂತಂ.—ಆಯುಷ್ಮಂತನಾಜ್ಞೆಯುಂತಾಗಲಿ,(ಎಂದುರಥವೇಗವನ್ನುತೋರಿಸಿ) ಎಲೈ ಆಯುಷ್ಮಂತನೆ ಕಡಿವಾಣವನ್ನು ಸಡಿಲಿಸಿದೊಡನೆ ನೋಡು ನೋಡು.

ಕಂದ ॥ ನಡೆಮಿಡುಕದಚಮರದನೀ ।
ಳ್ದೊಡಲೆತ್ತಿದಕಿವಿಯು ತಮ್ಮಪದರಜಮುಂಪಾ ॥
ಯ್ದೊಡೆ ಸಿಲ್ಕದಶ್ವಗಳ್ಧೀಂ ।
ಕಿಡುವುವುತನ್ಮೃಗಜವಾಸಹಿಷ್ಣುಗಳೆಂಬೋಲ್ ॥ ೮

ರಾಜಂ.—ಎಲೈ ಸಾರಥಿಯೆ ನಿಶ್ಚಯವಾಗಿ ಕುದುರೆಗಳು ಸೂರ್ಯಾಶ್ವಗಳನ್ನೂ ಮೀರಿರುವವು, ಹಾಗೆಯೇಸರಿ.

ವೃತ್ತ ॥ ಆವುದುನೋಡೆ ಸೂಕ್ಷ್ಮಮದೆವಿಸ್ತೃತಮಪ್ಪುದು ಮಧ್ಯದಲ್ಲಿತಾ ।
ನಾವುದು ಛಿನ್ನಮಾಗಿರುವುದಂತದೆ ಜೋಡಿಸಿದಂತೆ ತೋರ್ಪುದೈ ॥
ಆವುದುವಕ್ರ ಮಿಪ್ಪುದದೆತಾಂ ಋಜುವಾಗುತೆಕಾಣ್ಬುದನ್ನಕ ।
ಣ್ಣಾವುದುಮಿಲ್ಲದೂರದೆಚಣಂ ರಥವೇಗದೆ ಪಾರ್ಶ್ವದಲ್ಲಿಯುಂ ॥ ೯

ಎಲೈ ಸೂತನೆ, ಇದೋ ಮೃಗವನ್ನು ಹೊಡೆಯುವೆನು ನೋಡು.
(ಎಂದು ಶರಸಂಧಾನವನ್ನು ಅಭಿನೈಸುವನು.)

ತೆರೆಯಲ್ಲಿ.—ಓಹೋ ! ಮಹಾರಾಜನೆ ಆಶ್ರಮ ಮೃಗವಿದು ಕೊಲ್ಲತಕ್ಕದ್ದಲ್ಲ ! ಕೊಲ್ಲತಕ್ಕದ್ದಲ್ಲ !

ಸೂತಂ.—ಎಲೈ ಆಯುಷ್ಮಂತನೆ, ನಿಲ್ಲುನಿಲ್ಲು ! ನಿನ್ನ ಬಾಣಕ್ಕೆ ಗುರಿಯಾದ ಈ ಮೃಗಕ್ಕೆ ಅಡ್ಡಲಾಗಿ ಮುನಿಗಳು ಬಂದರು.

ರಾಜಂ.—(ತ್ವರೆಯಿಂದ ಕೂಡಿ) ಹಾಗಾದರೆ ಕುದುರೆಗಳನ್ನು ನಿಲ್ಲಿಸು.

ಸೂತಂ.—ಆಗಲಿ (ಎಂದು ರಥವನ್ನು ನಿಲ್ಲಿಸುವನು.)

(ಅನಂತರ ಮೂವರು ವೈಖಾನಸರು ಬರುವರು.)

ಮೂರನೆ ವೈಖಾ —ಕಯ್ಯೆತ್ತಿ ಮೃಗವನ್ನು ತೋರಿಸಿ) ಎಲೈ ರಾಯನೇ

*ವೃತ್ತ॥ ಸಲ್ಲದುಸಲ್ಲದಂಬಿದನಿ ಸಲ್ಗಡವೆಲ್ಲಿತರಿಂದೆಕೂಡಿದೀ ।
ಪುಲ್ಲೆಯಮೆಯ್ಯೊಳಕ್ಕಟಿಡುವಂತೆವೊಲಗ್ನಿಯತೂಲರಾಶಿಯೊಳ್ ॥
ಎಲ್ಲಿಕುರಂಗಕಂಗಳತಿಚಂಚಲ ಮಪ್ಪಬದುರ್ಗಂಕು ಭೂಪಪೇ ।
ಳೆಲ್ಲಿಸಿಡಿಲ್ಗೆ ಸಾಟಿಯೆನೆ ಬಿರ್ರನೆ ಬೀಳ್ವ ಭವಚ್ಛಿಳೀಮುಖಂ ॥ ೧೦

ಕಂದ॥ ಆದರಿಂದೆ ತೊಟ್ಟಬಾಣವ ।
ನಿದ ನಿಳುಹೈ ಜನಪ ದೀನರಂ ಪೊರೆವುದಕ ।
ಲ್ಲದೆ ನಿರಪರಾಧಜಂತುವ ।
ಸದೆಯಲ್ಕಿ ಮಗಲ್ತು ಶಸ್ತ್ರಮವನೀತಳದೋಳ್ ॥ ೧೧

ರಾಜಂ.—ಇದೋ ಬಾಣವನ್ನು ಇಳಿಸಿದೆನು(ಎಂದು ಬಾಣವನ್ನು ಇಳಿಸುವನು)

ವೈಖಾ.—ಪುರುಕುಲತಿಲಕನಾದ ನಿನಗಿದು ತಕ್ಕದ್ದು.

ಕಂದ॥ ಖ್ಯಾತಪುರುರಾಜಕುಲಸಂ ।
ಜಾತಂ ನೀಂ ನಿನಗೆ ವಿನಯ ವಿಂತಿದು ಸಹಜಂ ॥
ಈ ತೆರದ ಗುಣವನಾಂತ ವಿ ।
ಸೀತಾತ್ಮನ ಚಕ್ರವರ್ತಿ ಪುತ್ರನ ಪಡೆಯೈ ॥ ೧೨

---

*ಕಂ ॥ ಬಿಡಬೇಡಿದರೋಳ್ಬಾಣವ ।
ನಿಡುವಂತಿರೆ ಕಿಡಿಯ ಕುಸುಮರಾಶಿಯೊಳಕಟಾ ॥
ಬಡಮಿಗವಿದೆಲ್ಲಿ ನಿನ್ನಯ ।
ಸಿಡಿಲಂದದ ಸರಳಿದೆಲ್ಲಿ ನುಡಿ ಮನುಜೇಂದ್ರಾ ॥

ಉಳಿದವರು.—ಕಯ್ಯೆತ್ತಿ ಸರ್ವಥಾ ಚಕ್ರವರ್ತಿಯಾದ ಪುತ್ರನನ್ನು ಪಡೆ.

ರಾಜಂ.—(ನಮಸ್ಕಾರಪೂರ್ವಕವಾಗಿ) ಬ್ರಾಹ್ಮಣ ವಚನವನ್ನು ಪರಿಗ್ರಹಿಸಿದೆನು.

ವೈಖಾ.—ಎಲೈ ರಾಜನೆ ಸಮಿತ್ತುಗಳನ್ನು ತರುವದಕ್ಕೆ ಹೊರಟಿರುವೆವು. ಇದೋ ಕುಲಪತಿಗಳಾದ ಕಣ್ವರಾಶ್ರಮವು ಮಾಲಿನೀ ತೀರದಲ್ಲಿ ಕಾಣುವುದು, ಅವಕಾಶವಿದ್ದಲ್ಲಿ ಅಲ್ಲಿಗೆ ಹೋಗಿ ಆತಿಥ್ಯವನ್ನು ಸ್ವೀಕರಿಸು.

ಕಂದ॥ ಇನಿಸುಂ ವಿಘ್ನಮದಿಲ್ಲದ ।
ಮುನಿಗಳ ತಪಮಂ ವಿಲೋಕಿಸುತ್ತಂ ಮೌರ್ವೀ ॥
ಜನಿತ ಕಿಣಾಂತ ಮದ್ಭುಜ ।
ಮೆನಿತೆಡೆಯುಂ ಪೊರೆವುದೆಂದು ತಿಳವೈ ನೃಪನೀಂ ॥ ೧೨

ರಾಜಂ.—ಕುಲಪತಿಗಳಾದ ಕಣ್ವರು ಆಶ್ರಮದಲ್ಲಿರುವರೆ ?

ವೈಖಾ.—ಇಲ್ಲ. ಈಗತಾನೆ ಪುತ್ರಿಯಾದ ಶಕುಂತಳೆಯನ್ನು ಅತಿಥಿಸತ್ಕಾರಕ್ಕೆ ನೇಮಿಸಿ ಆಕೆಯ ಪ್ರತಿಕೂಲ ದೈವಶಮನಾರ್ಥವಾಗಿ ಸೋಮತೀರ್ಥಕ್ಕೆ ಹೋಗಿರುವರು.

ರಾಜಂ.—ಆಗಲಿ ಆಕೆಯನ್ನು ಕಾಣುವೆನು. ಆ ಮಹರ್ಷಿಗೆ ನನ್ನ ಭಕ್ತಿಯನ್ನು ಆಕೆಯೆ ವಿಜ್ಞಾಪಿಸುವಳು.

ವೈಖಾ.—ಇನ್ನು ನಮ್ಮ ಕಾರ್ಯಕ್ಕೆಹೋಗುವೆವು. (ಎಂದು ಮೂವರು ಹೋಗುವರು.)

ರಾಜಂ.—ಎಲೈ ಸಾರಥಿಯೆ, ಕುದುರೆಗಳನ್ನು ನಡೆಸು. ಪುಣ್ಯಾಶ್ರಮ ದರ್ಶನದಿಂದ ಪವಿತ್ರನಾಗುವೆನು.

ಸೂತಂ.—ಆಯುಷ್ಮಂತನಾಜ್ಞೆಯಂತಾಗಲಿ, (ಎಂದು ರಥವನ್ನುನಡೆಸುವನು)

ರಾಜಂ.—(ಎಲ್ಲಾಕಡೆಯಲ್ಲಿಯೂ ನೋಡಿ) ಎಲೈ ಸಾರಥಿಯೇ, ಯಾರು ಹೇಳದಿದ್ದರೂ ಇದು ತಪೋವನವೆಂದು ತಿಳಿಯ ಬರುವದು.

ಸೂತಂ.—ಅದು ಹ್ಯಾಗೆ ?

ರಾಜಂ.—ಇದೇನು. ನೀನು ನೋಡಲಿಲ್ಲವೇ? ಇದೋ !

ವೃತ್ತ ॥ ಆರಯೆಸೂಚಿಕುಂ ಗಿಳಿಗಳಿರ್ಪ್ಪ ಗಕೋಟರದಿಂ ಜಗುಳ್ದ ನೀ ।
ವಾರವುಮಿಂಗುದೀಫಲವಿಭೇದದೆನುಣ್ಪಿಡಿದಿರ್ಪ್ಪ ಕಲ್ಗಳುಂ ॥
ತೀರಿನಶಬ್ದಮಂಸಹಿಸಿ ನಂಬುಗೆಯಿಂ ಸುಳಿವೇಣ ಬೃಂದಮುಂ ।
ನಾರುಡೆಯಂಚಿನಿಂದಿಳಿದನೀರ್ಗೆರೆಯಾಂತತಟಾಕಮಾರ್ಗಮುಂ । ೧೪

*ವೃತ್ತ ॥ ಗಾಳಿಯ ಸೋಂಕಿನಿಂಚಲಿಪ ಕಾಲುವೆನೀರೊಳೆ ಧೌತಮೂಲಮಾ ।
ಸಾಲಸಮೂಹ ಮಾಕಿಸಲಯಂಗಳ ಕಾಂತಿ ಹುತಾಜ್ಯಧೂಮದಿಂ ॥
ಕ್ಷಾಳಿತರಾಗಮೇಣಶಿಶುಸಂತತಿಲೂನಕುಶಾಂಕುರೋರ್ವಿಯೊ ।
ಳ್ಕಾಲನಿಡುತ್ತೆ ಶಂಕೆ ಯಣಮಿಲ್ಲದೆ ಮೆಲ್ಲನೆ ಮೆಲ್ಲನೈದುಗಂ ॥ ೧೫

ಸೂತಂ.—ನೀನು ಹೇಳಿದ್ದೆಲ್ಲಾ ಸರಿ.

ರಾಜಂ.—(ಸ್ವಲ್ಪ ದೂರ ಹೋಗಿ)ಎಲೈ ಸೂತನೆ ತಪೋ ವನವಾಸಿಗಳಿಗೆ ಬಾಧೆಯುಂಟಾಗಬಾರದು ಆದ್ದರಿಂದ ಇಲ್ಲೇ ರಥವನ್ನು ನಿಲ್ಲಿಸು. ಇದೊ ಇಳಿಯುವೆನು.

ಸೂತಂ.—ಇದೊ—ಕಡಿವಾಣವನ್ನು ಹಿಡಿದಿರುವೆನು ಇಳಿಯಬೇಕು.

ರಾಜಂ.—(ಇಳಿದು) ಎಲೈ ಸೂತನೆ ತಪೋವನಗಳು ಸಾಮಾನ್ಯವೇಷದಿಂದ ಪ್ರವೇಶಿಸುವದಕ್ಕೆ ಯೋಗ್ಯಗಳು ಆದ್ದರಿಂದ ಈ ಆಭರಣಗಳನ್ನೂ ಧನುರ್ಬಾಣಗಳನ್ನೂ ಹಿಡಿ. ನಾನು ಆಶ್ರಮವಾಸಿಗಳನ್ನು ನೋಡಿ ಬರುವಷ್ಟರಲ್ಲಿ ಕುದುರೆಗಳನ್ನು ನೀರಿಗೆ ಬಿಟ್ಟು ಪೃಷ್ಠವನ್ನು ತೊಳೆದು ದಣುವನ್ನಾರಿಸು.

ಸೂತಂ.—ಹಾಗೇ ಆಗಲಿ (ಎಂದು ಹೊರಟು ಹೋದನು.)

---

*ಕಂದ॥ ದೂರದೆ ಕಂಡೊಡೆ ಬೆದರುತೆ ।
ಪಾರುವ ಮೃಗವಿತತಿ ಬಳಿಯೊಳಾ ವೈತರೆಯುಂ ॥
ಸ್ವೈರಿಸುವಿರವಿಂದೇಂವಿ ।
ಸ್ತಾರಿಪುದೊ ದಯಾಪರತ್ವಮಂಮುನಿಜನದಾ ॥

ರಾಜಂ.—(ಸ್ವಲ್ಪ ನಡೆದು ನೋಡಿ) ಇದೋ ಆಶ್ರಮದ ಬಾಗಿಲು, ಇದನ್ನು ಪ್ರವೇಶಿಸುವೆನು. (ಎಂದು ಪ್ರವೇಶವನ್ನು ಅಭಿನೈಸಿ, ನಿಮಿತ್ತವನ್ನು ಸೂಚಿಸಿ)

*ಕಂದ ॥ ಮುನಿವಸತಿನಿರ್ವಿಕಾರಮಿ ।
ದೆನಗಾದೊಡೆ ತೋಳುಪಾರ್ವುದಿದಕೆಲ್ಲಿಂದಂ ॥
ಜನಿಯಿಸುವುದೊಸುಫಲಂಮೇಣ್ ।
ತನಗಪ್ಪದುತಪ್ಪದಕ್ಕುಮೆಲ್ಲೆಡೆಯೊಳಗಂ ॥ ೧೬

ತೆರೆಯಲ್ಲಿ.—ಇತ್ತಲಿತ್ತಲ್ ಸಖಿಗಳಿರಾ.

ರಾಜಂ.—(ಕಿವಿಗೊಟ್ಟು ಕೇಳಿ) ಇದೇನು! ಈ ವೃಕ್ಷವಾಟಿಯ ದಕ್ಷಿಣದಿಕ್ಕಿನಲ್ಲಿ ತರುಣಿಯರ ಸಲ್ಲಾಪ ಕೇಳಬರುವಂತಿದೆ! ಅಲ್ಲಿಗೆ ಹೋಗುವೆನು (ಎಂದು ಮುಂದಕ್ಕೆ ಬಂದು ನೋಡಿ) ಇದೊ! ತಪಸ್ವಿ ಕನ್ನೆಯರು ತಮ್ಮತಮ್ಮ ಪ್ರಮಾಣಕ್ಕೆತಕ್ಕ ಸೇಚನ ಘಟಗಳಿಂದ ಎಳೆ ಸಸಿಗಳಿಗೆ ನೀರೆರೆಯುವದಕ್ಕೆ ಇಲ್ಲೇ ಸಂಚರಿಸುತ್ತಿರುವರು! (ಎಂದು ಚನ್ನಾಗಿ ನೋಡಿ) ಆಹ! ಇವರ ರೂಪು ಸ್ವಭಾವದಿಂದ ಮನೋಹರವಾಗಿರುವದು.

ಕಂದ॥ ಓವ್ರೊ ತಪೋವನವಧುಗಳ ।
ಲಾವಣ್ಯಂರಾಣಿವಾಸಕರಿದೆನೆಪಡೆಯು ॥
ಲ್ಕೇವೇಳ್ದಪೆನುದ್ಯಾನಲ ।
ತಾವಳಿ ವನಲತೆಗಳಿಂ ತಿರಸ್ಕೃತವಲ್ತೇ ॥ ೧೭

ಒಳ್ಳೇದು! ಈ ಮರದ ನೆರಳಲ್ಲಿ ಮರೆಯಾಗಿದ್ದು ನೋಡುವೆನು (ಎಂದು ಮರದ ಮರೆಯಲ್ಲಿ ನಿಂದು ನೋಡುತ್ತಿರುವನು.)

---

* ॥ ರಾಗ—ಜಂಗಲ ॥ ॥ ಆದಿತಾಳ ॥

ಪದ ॥ ಶಾಂತಮಿದಾಶ್ರಮಪದವಾದೊಡು ಮಿಗೆ ಪಾರುವುದೀಬಲದೋಳ್ । ಎಂತಿದಕೆತ್ತಣಿನೇಂ ಫಲಮೋ ಬಿಡ ದೈ ತಹುದೆಲ್ಲೆಡೆಯೊಳ್ ॥ ಚಿಂತಿಸಲೇಕಿನ್ನಿದನಾಂಪರಿಭಾವಿಸೆಭವಿತವ್ಯಂಗಳ್ । ಕಾಂತಾರಮದೇನಂತಃಪುರಮೇಂ ತಾಂತಗುಳುವವಿಳೆಯೊಳ್ ॥

(ಶಕುಂತಳೆ ಮೊದಲು ಹೇಳಿದಂತೆ ಸಖಿಯರೊಡನೆ ಜಲಕುಂಭವನ್ನು ತೆಗೆದುಕೊಂಡುಪ್ರವೇಶಿಸುವಳು.)

ಶಕುಂ.—ಇತ್ತಲಿತ್ತಲ್ ಸಖಿಯರಿರಾ.

ಅನಸೂಯೆ.—*ಎಲೆ ಸಖಿ ಶಕುಂತಳೆ! ನವಮಾಲಿಕಾ ಕುಸುಮದಂತೆ ಕೋಮಲೆಯಾದ ನಿನ್ನನ್ನು ಈ ವೃಕ್ಷಗಳ ಪಾತೆಗೆ ನೀರನ್ನೆರೆಯುವದಕ್ಕೆ ನೇಮಿಸಿದಕಾರಣ ನಿನ್ನ ತಂದೆಯಾದ ಕಣ್ವರಿಗೆ ನಿನ್ನಲ್ಲಿರುವ ಪ್ರೀತಿಗಿಂತಲೂ ಈ ಆಶ್ರಮ ವೃಕ್ಷಗಳಲ್ಲಿ ಪ್ರೀತಿ ಹೆಚ್ಚಾಗಿರುವದೆಂದು ಭಾವಿಸುವೆನು.

ಶಕು.—†ಎಲೆ ಅನುಸೂಯೆ, ತಂದೆಯ ಆಜ್ಞೆಯೋ ಅಲ್ಲ. ಈ ವೃಕ್ಷಗಳಲ್ಲಿ ನನಗೂ ಸೋದರ ಸ್ನೇಹವಿರುವದು. (ಎಂದು ವೃಕ್ಷಗಳಿಗೆ ನೀರೆರೆಯುವಳು.)

ರಾಜಂ.—ಈಕೆ ಆ ಕಣ್ವರ ಕುವರಿಯೋ! ಈಕೆಯನ್ನು ಆಶ್ರಮಧರ್ಮದಲ್ಲಿ ನೇಮಿಸಿದ ಆ ಕಣ್ವರು ಔಚಿತ್ಯವನ್ನರಿತವರಲ್ಲ, ಏತಕ್ಕೆಂದರೆ:—

ಕಂದ ॥ ಇವಳವ್ಯಾಜವನೋಜ್ಞಾಂಗ।
ಡಿವಳಂ ತಪಕೀಡನಾಗಿಸಲ್ಕೆಳಸಿರ್ಪರ್ ॥
ತವಸಿನಿಜಮುಜ್ಜುಗಿಪ್ಪಂ।
ಕುವಲಯದಳಧಾರೆಯಿಂದೆ ಪೋಳಲ್ ಶಮಿಯಂ ॥ ೧೮

ರಾಜಂ.—ಆಗಲಿ, ಈ ಮರದ ಮರೆಯಲ್ಲಿಯೋ ನಿಂತು ನಂಬಿಕೆ ಮಿಗೆ ಈಕೆಯನ್ನು ನೋಡುವೆನು. (ಎಂದು ಮರದ ಮರೆಯಲ್ಲಿ ನೋಡುವನು).

॥ ರಾಗ—ಶಂಕರಾಭರಣದ ನೋಟು ॥ ॥ ರೂಪಕತಾಳ ॥

ಬಿಜಯಂಗೈಯಿತ್ತಲ್ ನೀರಜಮುಖಿಯೆ ಸಖಿಯೋ ॥ ಪ ॥ *ಅನಸೂಯೆ.—ತಾತಗೆ ಸಖಿನಿನ್ನತ್ತಣಿನೀತರುಲತೆಗಳೊಳು। ಪ್ರಿತಿಯುಃಪಿರಿದೆನುತೀಕ್ಷಿಪೆನಾತಗೆ ಚಿತ್ತದೊಳು ॥ ೧ ॥ ಏತರಿನೀರುಲತೆಗಳ ಪಾತೆಗೆ ನೀರೆರೆಯೆ। ತಾತನಿನಾಜ್ಞಪ್ತಳೊನೀಂ ಜಾತೀ ಕೋಮಲೆಯೆ ॥ ೨ ॥ †ಶಕುಂತಳೆ.—ಪಿತನಾಣತಿಯಲ್ಲದೆ ತರುಲತೆಗಳೊಳೆನಗಿಹುದು। ಸುತಸೋದರ ಸಾಹೃದವೀಮತಿಯೊಳು ಸಖಿಪಿರಿದು ॥ ೩ ॥

ಶಕುಂ.—ಎಲೆ ಅನಸೂಯೆಯೇ ! ಈ ಪ್ರಿಯಂವದೆ ಬಿಗಿಯಾಗಿ ಕಟ್ಟಿದ ವಲ್ಕಲದಿಂದ ನನ್ನ ಎದೆಯು ಬಿಗಿಯುತ್ತಿರುವದು ಇದನ್ನು ನೀನು ಸಡಿಲಿಸು.

ಅನ.—ಹಾಗೇ ಆಗಲಿ (ಎಂದು ಸಡಿಲಿಸುವಳು).

ಪ್ರಿಯಂ.—(ನಸುನಕ್ಕು) ಈ ವಿಷಯದಲ್ಲಿ ನನನ್ನು ಏತಕ್ಕೆ ನಿಂದಿಸುವೆ ? ಎದೆಯನ್ನು ವಿಸ್ತಾರಪಡಿಸುವ ನಿನ್ನ ಯೌವನವನ್ನು ನಿಂದಿಸು.

ರಾಜಂ.—ಈಕೆ ಚೆನ್ನಾಗಿ ಹೇಳಿದಳು.

ಕಂದ ॥ ಗುರುಕುಚವಂ ಮುಸುಕುತೆಭುಜ ।
ಶಿರದೊಳ್ ಕುರುಗಂಟನಾಂತವಲ್ಕಲದಿಂ ಸುಂ ॥
ದರಿಯು ತನುತನ್ನ ಕಾಂತಿಯು ।
ಪೊರೆಯದು ಬೆಳ್ಳೆಲೆಯ ಮರೆಯ ಕುಸುಮದತೆರದಿಂ ॥ ೧೮

ಬಂದುವೇಳೆ ಈ ವಲ್ಕಲವು ಈಕೆಯ ಶರೀರಕ್ಕೆ ಯೋಗ್ಯವಲ್ಲದಿದ್ದರೂ ಕಾಂತಿಯನ್ನುಂಟುಮಾಡೇ ಮಾಡುವದು. ಹ್ಯಾಗೆಂದರೆ :

ವೃತ್ತ॥ ಶೈವಲದಿಂದೆ ತಾವರೆ ಮುಸುಂಕಿದೊಡಂ ರಮಣೀಯ ಮಿಂದುವಿಂ।
ಗೀವುದು ಕಾಂತಿಯಂ ಮಲಿನಮಾದೊಡಮೇಂ ಕರೆ ವಲ್ಕದಿಂದಿವಳ್ ॥
ಪ್ರಾವೃತೆಯಾದೊಡಂಬಹುಮನೋಜ್ಞಮನೋಹರವಾದರೂಪುಗ।
ಳ್ಗಾವುದುತಾನೆತಾಳದೊಡೆಭೂಷಣಮಾಗದೆಪೋಪುದುರ್ವಿಯೊಳ್ ॥

ಶಕುಂ.—(ಮುಂದೆ ನೋಡಿ) ಎಳೆದಾದ ಈ ಕೇಸರ ವೃಕ್ಷವು ಗಾಳಿಯಿಂದ ಚಲಿಸುವ ಚಿಗುರೆಂಬ ಬೆರಳುಗಳಿಂದ ನನ್ನನ್ನು ತ್ವರೆಗೊಳಿಸುವಂತಿದೆ ಇದನ್ನು ಆದರಿಸುವೆನು. (ಎಂದು ಹೋಗುವಳು).

ಪ್ರಿಯಂ.—ಎಲೆ ಶಕುಂತಳೆ, ಇಲ್ಲಿಯೇ ಬಂದು ಮುಹೂರ್ತ ನಿಲ್ಲು.

ಶಕುಂ.—ನಿಮಿತ್ತವೇನು ?

ಪ್ರಿಯಂ.—ನೀನು ಸಮೀಪದಲ್ಲಿ ನಿಂತಿರುವದರಿಂದ ಈ ಕೇಸರವೃಕ್ಷವು ಲತೆಯಿಂದ ಕೂಡಿದಂತೆ ಶೋಭಿಸುತ್ತಿರುವದು.

ಶಕುಂ.—ಆದ್ದರಿಂದಲೇ, ನಿನ್ನ ಹೆಸರು ಪ್ರಿಯಂವದೆ.

ರಾಯಂ.—ಪ್ರಿಯಂವದೆ ಶಕುಂತಳೆಯನ್ನು ಕುರಿತು ಪ್ರಿಯವಾದದ್ದನ್ನೂ ನಿಜವಾಗಿಯೇ ಹೇಳಿದಳು.

ಕಂದ ॥ ತುಟಿ ತಳಿರ್ಗೆಸಾಟಿ ಕೋಮಲ ।
ವಿಟಪಂಗಳ ನನುಕರಿಸುವುವೀನಳದೋಳ್ಗಳ್ ॥
ಕುಟಿಲಾಳಕೆಯ ಶರೀರದೆ ।
ಘಟಿಸಿದ ಯೌವನವೆ ಸುಮದವ್ರೋಲ್ ಸ್ಪೃಹಣೀಯಂ ॥ ೨೧

ಅನ.—ಎಲೆ ಶಕುಂತಳೆ, ಎಳೆ ಮಾವಿನಮರಕ್ಕೆ ಈ ನವಮಾಲಿಕಾಲತೆಯನ್ನು ಸ್ವಯಂವರವಧುವನ್ನಾಗಿ ಮಾಡಿ ಇದಕ್ಕೆ ವನಜ್ಯೋತ್ಸ್ನೆಯೆಂದು ನೀನು ಹೆಸರಿಟ್ಟೆಲ್ಲವೆ ? ಇದನ್ನು ಮರೆದೆಯಾ ?

ಶಕುಂ.—ಈ ಲತೆಯನ್ನು ಮರೆಯುವಪಕ್ಷದಲ್ಲಿ ನನ್ನ ಶರೀರವನ್ನೂ ಮರೆಯುವೆನು. (ಎಂದು ಆ ಲತೆಯ ಬಳಿಗೆ ಬಂದು ನೋಡಿ) ಎಲೆ ಪ್ರಿಯಸಖಿ ನವಕುಸುಮವೆಂಬ ಯೌವನವನ್ನು ಹೊದ್ದಿದ ವನಜ್ಯೋತ್ಸ್ನೆಗೂ ಪಲ್ಲವಿತವಾಗಿರುವದರಿಂದ ಉಪಭೋಗಕ್ಕೆ ಯೋಗ್ಯವಾದ ಎಳೆಮಾವಿಗೂ ರಮಣೀಯವಾದಕಾಲದಲ್ಲಿ ಸಂಬಂಧ ಉಂಟಾಯಿತು. (ಎಂದು ನೋಡುತ್ತಾ ನಿಂತಿರುವಳು.)

ಪ್ರಿಯಂ.—(ನಸುನಕ್ಕು) ಎಲೆ ಅನಸೂಯೆ ಶಕುಂತಳೆ ಏಕಿಂತು ಈ ವನಜ್ಯೋತ್ಸ್ನೆಯನ್ನು ನೋಡುವಳು ಬಲ್ಲೆಯಾ ?

ಅನ.—ನಾನರಿಯೆ, ಅದೇನು ಹೇಳು.

ಪ್ರಿಯಂ.—ಈ ವನಜ್ಯೋತ್ಸ್ನೆಯು ಅನುರೂಪವಾದ ವೃಕ್ಷವನ್ನು ಹ್ಯಾಗೆ ಸೇರಿರುವದೋ, ಹಾಗೆಯೇ ತಾನೂ ತನಗೆ ತಕ್ಕವರನನ್ನು ಸೇರಬೇಕೆಂದು.

ಶಕುಂ.—(ಅಸೂಯೆಯೊಡನೆ ಕೂಡಿ) ನಿಜ. ಈ ಮನೋರಥ ನಿಮ್ಮಮನೋಗತವಾದದ್ದು, (ಎಂದು ನೀರೆರೆಯುವಳು.)

ರಾಯಂ.—ಕುಲಪತಿಗಳಾದ ಕಣ್ವರಿಗೆ ನಿಜವಾಗಿ ಈಕೆ ಅಸವರ್ಣಸ್ತ್ರೀಯಲ್ಲಿ ಜನಿಸಿರಬಹುದೆ? ಬಂದು ಪಕ್ಷದಲ್ಲಿ ಸಂದೇಹವೇತಕ್ಕೆ?

ವೃತ್ತ ॥ ಎಣಿಸಲ್ ಕ್ಷತ್ರಪರಿಗ್ರಹೋಚಿತೆ ನಿಜಂ ಸಂದೇಹಮಿನ್ನೇತಕೀ।
ಫಣಿರಾಡ್ವೇಣಿಯೊಳಾರ್ಯಮೆಂದೆನಿಸಿದೀ ಮನ್ಮಾನಸಂ ನಟ್ಟಕಾ॥
ರಣದಿಂ ಸಂಶಯಪಾತ್ರವಸ್ತುಗಳೊಳಾದಂ ಸಂತರಾದಗ್ಗೆಧಾ।
ರಿಣಿಯೊಳ್ ತಮ್ಮಮನಃಪ್ರವರ್ತನಮೆ ತಾನಕ್ಕುಂ ಪ್ರಮಾಣಂವರಂ॥

ಆದರೂ ಪ್ರಮಾಣಾಂತರದಿಂದ ಚೆನ್ನಾಗಿ ವಿಚಾರಮಾಡಿ ಈಕೆಯ ಸಂಗತಿಯನ್ನು ತಿಳಿಯುವೆನು.

ಶಕುಂ.—(ತ್ವರೆಪಟ್ಟು) ಓ ಹೊ! ನೀರೆರೆದದ್ದರಿಂದ ಬೆದರಿ ನವಮಾಲಿಕಾಲತೆಯನ್ನು ಬಿಟ್ಟು ಈ ತುಂಬಿಯು ನನ್ನ ಮುಖಕ್ಕೆ ಎರಗುವದು. (ಎಂದು ಭೃಂಗಬಾಧೆಯನ್ನು ಅಭಿನೈಸುವಳು.)

ರಾಯಂ.—(ಅಭಿಲಾಷ ಯುಕ್ತನಾಗಿ ನೋಡಿ) ಭಾಪು, ಈಕೆ ಬಾಧೆಪಡುವದುಕೂಡಾ ರಮಣೀಯವಾಗಿರುವದು.

ಕಂದ ॥ ತುಂಬಿಯಿದೆರಗಿದಕಡೆ ತ।
ನ್ನಂಬಕಮಂ ತಿರುಗಿಸುತ್ತೆ ಕಾಮವಿಕಾರ॥
ಕ್ಕಿಂಬಾಗದೊಡಂ ಭಯದೆ ನಿ।
ತಂಬಿನಿ ನೋಟದ ಬೆಡಂಗ ಕಲಿಯುತ್ತಿರ್ಪಳ್ ॥ ೬೩

(ಅಸೂಯೆಯಿಂದ ಕೂಡಿ)

ವೃತ್ತ ॥ ನಡುಕಂಬೆತ್ತಿರ್ಪ್ಪಳಂ ಸೋಂಕುವೆ ಯಡಿಗಡಿಗಂಚಲ್ಲೆಪೆತ್ತೋರೆ ನೋಟ।
ಕ್ಕೆಡೆಯಾಗೇಕಾಂತಮಂ ಪೇಳ್ವವೊಲೆ ಜಿನಗುತಿರ್ದ್ದಪ್ಪೆ ಕರ್ಣಾಂತದೊಳ್ಳೆ॥
ಗೊಡಹುತ್ತಿರ್ಪ್ಪಬ್ಜಪತ್ರಾಕ್ಷಿಯ ನವರತಿ ಸರ್ವಸ್ವ ಬಿಂಬೋಷ್ಠಮಂ ಮು।
ತ್ತಿಡು ವೈ ರೋಲಂಬನೀನೇಕೃತಿನಿಜವರಸುತ್ತಾ ವಣಂಕೆಟ್ಟೆವಲ್ತೇ॥

ಶಕುಂ.—ಈ ದುಷ್ಟಭೃಂಗವು ಸುಮ್ಮನಿರದು ಆದ್ದರಿಂದ ಇನ್ನೊಂದು ಕಡೆಗೆ ಹೋಗುವೆನು (ಎಂದು ಸ್ವಲ್ಪದೂರ ಹೋಗಿ ನಿಂತು ಸುತ್ತಲೂ ನೋಡಿ) ಇದೇನಿಲ್ಲಿಗೂ ಬಂತು ! ಎಲೌ ಸಖಿಯರೆ, ಈ ದುರದುಂಬಿಯಿಂದ ಬಾಧೆ ಪಡುವ ನನ್ನನ್ನು ರಕ್ಷಿಸಿ, ರಕ್ಷಿಸಿ.

ಸಖಿಯರು.—(ನಸುನಕ್ಕು) ನಿನ್ನನ್ನು ರಕ್ಷಿಸುವದಕ್ಕೆ ನಾವ್ಯಾರು ? ದುಷ್ಯಂತನಿಗೆ ಮೊರೆಯಿಡು, ತಪೋವನಗಳು ರಾಜರಕ್ಷಿತಗಳಲ್ಲವೆ ?

ರಾಯಂ.—ನಾನು ಕಾಣಿಸಿಕೊಳ್ಳುವದಕ್ಕೆ ಇದೇಸಮಯ, ಹೆದರಬೇಡಿ. (ಎಂಬುವಷ್ಟರಲ್ಲಿ ವಿಚಾರಯುಕ್ತನಾಗಿ) ಓ ಹೊ ! ನಾನು ಈ ರೀತಿಯಲ್ಲಿ ಹೋದರೆ ನನ್ನ ರಾಜಭಾವವು ತಿಳಿದೀತು. ಬಳ್ಳೇದು ಹೀಗೆ ಹೇಳುವೆನು.

ಶಕುಂ.—(ಒಂದು ಹೆಜ್ಜೆ ಮುಂದಕ್ಕೆ ನಡೆದು) ಇಲ್ಲಿಗೂ ನನ್ನನ್ನು ಅನುಸರಿಸಿ ಬರುವದು !

ರಾಯಂ.—ಕಂದ॥ ದುರುಳರ ಶಿಕ್ಷಿಪ ಪುರುಕುಲ ।
ದರಸಂ ವಸುಮತಿಯ ಪಾಲಿಸುತ್ತಿರಲಾವಂ ॥
ವಿರಚಿಪನವಿನಯಮಂ ನಿ ।
ರ್ನೆರವತಿಮುಗ್ಧೆಯರೆನಿಪ್ಪಮುನಿಪುತ್ರಿಯರೊಳ್ ॥ ೨೪

(ಎಲ್ಲರೂ ರಾಜನನ್ನು ನೋಡಿ ಸ್ವಲ್ಪ ಭ್ರಾಂತೆಯರಾದಂತೆ ನಟಿಸುವರು).

ಅನ.—ಎಲೈ ಆರ್ಯನೆ, ಅಂತಾ ಭಯವೇನೂಯಿಲ್ಲ. ನಮ್ಮಾಪ್ರಿಯ ಸಖಿಯು ಭೃಂಗಬಾಧೆಯಿಂದ ಕಾತರಿಸಿದಳು.

ರಾಯಂ.—(ಶಕುಂತಳೆಯ ಕಡೆಗೆ ತಿರುಗಿ) ತಪಸ್ಸು ವರ್ಧಿಸುತ್ತಿರುವದೆ ?

ಶಕುಂ.—(ಲಜ್ಜೆಯಿಂದ ಸುಮ್ಮನಿರುವಳು).

ಅನ.—ಅತಿಥಿ ವಿಶೇಷ ಲಾಭದಿಂದ ಈಗ ನಮ್ಮ ತಪಸ್ಸುವರ್ಧಿಸುವದು. ಆರ್ಯನಿಗೆ ಸುಖಾಗಮನವೆ ? ಎಲೆ ಸಖಿ ಶಕುಂತಳೆ ಪರ್ಣಶಾಲೆಗೆ ಹೋಗಿ ಫಲ ಮಿಶ್ರವಾದ ಅರ್ಘ್ಯವನ್ನು ತೆಗೆದುಕೊಂಡು ಬಾ. ಈ ಕಲಶೋದಕವೇ ಪಾದ್ಯವಾಗುವದು.

ರಾಯಂ.—ನಿಮ್ಮ ಸವಿನುಡಿಗಳಿಂದಲೇ ಸತ್ಕೃತನಾದೆನು.

ಪ್ರಿಯಂ.—ಆದರೆ, ಎಲೈ ಆರ್ಯನೆ, ನೆಳಲಿಂದ ತಂಪಾದ ಈ ಏಳೆಲೆ ಬಾಳೆ ಬುಡದ ಜಗಲಿಯಲ್ಲಿ ಕುಳಿತು ಒಂದು ಮುಹೂರ್ತ ವಿಶ್ರಮಿಸಿಕೊಳ್ಳ ತಕ್ಕದ್ದು.

ರಾಯಂ.—ನಿಜ, ಈ ವೃಕ್ಷಕ್ಕೆ ನೀರೆರೆದು ನೀವೂ ಆಯಾಸಪಟ್ಟಿರು ವಿರಿ.

ಅನ.—ಎಲೆ ಸಖಿ ಶಕುಂತಳೆ, ಅತಿಥಿಗಳನ್ನಾದರಿಸತಕ್ಕದ್ದು ನಮಗೆ ಉಚಿತವಾದಕಾರ್ಯ, ಆದ್ದರಿಂದ ಇಲ್ಲಿ ಕುಳಿತುಕೊಳ್ಳೋಣ (ಎಂದು ಎಲ್ಲರೂ ಕುಳಿತುಕೊಳ್ಳುವರು).

ಶಕುಂ.—ವಿಚಾರವಮಾಡಿ, (ತನ್ನಲ್ಲಿತಾನು) ಇದೇನು ! ಈತನನ್ನು ನೋಡಿ ತಪೋವನಕ್ಕೆ ವಿರೋಧಿಯಾದ ವಿಕಾರಕ್ಕೆ ಒಳಗಾದೆನು.

ರಾಯಂ.—(ಎಲ್ಲರನ್ನು ನೋಡಿ) ಆಹ ! ನಿಮ್ಮ ಮೈತ್ರಿಯು ಸಮಾನವಾದ ವಯಸ್ಸಿನಿಂದಲೂ, ರೂಪಿನಿಂದಲೂ, ರಮಣೀಯವಾಗಿರುವದು.

ಪ್ರಿಯಂ.—(ಮರೆಯಲ್ಲಿ) ಎಲೆ ಅನಸೂಯೆ, ಈತನಾವನು, ಗಂಭೀರವಾದ ಈತನ ಆಕೃತಿಯನ್ನೂ ಮಧುರಾಲಾಪಗಳನ್ನೂ ನೋಡಿದರೆ ಪ್ರಭುವಿನಂತೆ ಕಾಣುವನು.

ಅನ.—ನನಗೂ ಕುತೂಹಲವುಂಟು ಈತನನ್ನೇ ಕೇಳೋಣ.

(ರಾಜನನ್ನು ಕುರಿತು).

ಎಲೈ ಆರ್ಯನೆ, ನಿನ್ನ ಸವಿನುಡಿಗಳಿಂದುಂಟಾದ ಸಲುಗೆಯು ನಮ್ಮನ್ನು ಮಾತಾಡುವಂತೆ ಮಾಡುವದು. ಆರ್ಯನಾದ ನಿನ್ನಿಂದ ಯಾವರಾಜವಂಶವು ಅಲಂಕೃತವಾಗಿರುವದು ? ನಿನ್ನ ವಿಯೋಗದಿಂದ ಯಾವದೇಶದ ಜನವು ಕಳವಳಪಡುವದು ? ಸುಕುಮಾರನಾದರೂ ನೀನು ಈ ತಪೋವನ ಪರಿಶ್ರಮಕ್ಕೆ ಪಾತ್ರನಾಗಲು ಕಾರಣವೇನು ?

ಶಕುಂ.—(ಆತ್ಮಗತಂ) ಎಲೆ ಮನಸ್ಸೆ ಕಳವಳಿಸಬೇಡ, ನೀನು ಚಿಂತಿಸಿ ದ್ದನ್ನು ಈ ಅನಸೂಯೆ ವಿಚಾರಿಸುವಳು.

ರಾಯಂ.—(ಆತ್ಮಗತಂ) ಈಗ ನನ್ನ ನಿಜಸ್ಥಿತಿಯನ್ನು ಹ್ಯಾಗೆ ತಿಳಿಸಲಿ ! ಹ್ಯಾಗೆತಾನೇ ಆತ್ಮವಂಚನೆಯನ್ನು ಮಾಡಲಿ ! ಒಳ್ಳೇದು ಈಕೆಗೆ ಹೀಗೆ ಹೇಳುವೆನು.

(ಪ್ರಕಾಶವಾಗಿ) ಎಲೌ ಪೂಜ್ಯಳೆ, ಪುರುಕುಲದ ಅರಸನಿಂದ ಧರ್ಮಾಧಿ ಕಾರದಲ್ಲಿ ನಿಯುಕ್ತನಾದಾ ಆ ನಾನು, ಆಶ್ರಮವಾಸಿಗಳ ನಿರ್ವಿಘ್ನವಾದ ಕ್ರಿಯೆಯನ್ನು ತಿಳಿಯುವದಕ್ಕೆ ಈ ಧರ್ಮಾರಣ್ಯಕ್ಕೆ ಬಂದೆನು.

ಅನ.—ಈಗ ಆಶ್ರಮವಾಸಿಗಳು ಸನಾಥರು.

(ಶಕುಂತಳೆ ಶೃಂಗಾರ ಲಜ್ಜೆಯನ್ನು ತೋರ್ಪಡಿಸುವಳು.)

(ಸಖಿಯರು ಇವರಿಬ್ಬರ ಇಂಗಿತವನ್ನೂ ತಿಳಿದು ಮರೆಯಲ್ಲಿ).—

ಎಲೆ ಶಕುಂತಳೆ ಈಗ ಇಲ್ಲಿ ತಂದೆಯಾದ ಕಣ್ವರು ಇದ್ದರೆ.

ಶಕುಂ.—(ಕೋಪದೊಡನೆ ಕೂಡಿ) ಇದ್ದರೇನಾಗುತ್ತಿತ್ತು?

ಸಖಿಯರು.—ತಮ್ಮ ಜೀವಿತ ಸರ್ವಸ್ವದಿಂದಲೂ ಈ ಅತಿಥಿಯನ್ನು ಕೃತಾರ್ಥನನ್ನು ಮಾಡುತ್ತಿದ್ದರು.

ಶಕುಂ.—ಬಿಡಿಬಿಡಿ ಮನಸ್ಸಿನಲ್ಲಿ ಏನೋ ಎಣಿಸಿಕೊಂಡು ಮಾತಾಡುತ್ತೀರಿ, ನಿಮ್ಮ ಮಾತನ್ನು ಕೇಳಲಾರೆ.

ರಾಜಂ.—ನಾವು ಕೂಡ ನಿಮ್ಮ ಸಖೀ ವಿಷಯವಾಗಿ ಸ್ವಲ್ಪ ಕೇಳುವೆವು

ಸಖಿಯರು.—ಆರ್ಯನೆ, ಈ ಪ್ರಾರ್ಥನೆಯು ಅನುಗ್ರಹವಾದಹಾಗೆ.

ರಾಯಂ.—ಪೂಜ್ಯರಾದ ಕಣ್ವರು ನಿರಂತರ ಬ್ರಹ್ಮಚರ್ಯದಲ್ಲಿ ಇರುವರೆಂದು ಪ್ರಸಿದ್ಧಿಯು, ಈ ನಿಮ್ಮ ಸಖಿಯು ಅವರಿಗೆ ಮಗಳೆಂಬುವದು ಹ್ಯಾಗೆ ?

ಅನ.—ಎಲೈ ಆರ್ಯನೆ ಕೇಳು, ಕೌಶಿಕನೆಂದು ಕುಲದ ಹೆಸರನ್ನು ಪಡೆದಿರುವ ಮಹಾಪ್ರಭಾವವುಳ್ಳ ಒಬ್ಬ ರಾಜಋಷಿಯುಂಟು.

ರಾಜಂ.—ಉಂಟು, ಕೇಳಿ ಬಲ್ಲೆನು.

ಅನ.—ಅವರನ್ನು ಈ ನಮ್ಮ ಸಖಿಗೆ ಜನಕರೆಂದು ತಿಳಿ ಅವರಿಂದ ಬಿಡಲ್ಪಟ್ಟ ಈಕೆಯನ್ನು ತಾತ ಕಣ್ವರು ಸಾಕಿದ್ದರಿಂದ ತಂದೆಯು.

ರಾಜಂ.—ಅವರಿಂದ ಬಿಡಲ್ಪಟ್ಟಳೆಂಬ ಮಾತಿನಿಂದ ನನಗೆ ಕುತೂಹಲ ಉಂಟಾಗಿರುವದು. ಆದಕಾರಣ ಮೊದಲಿಂದ ಕೊನೆಗೂ ಕೇಳಲಿಚ್ಛೈಸುವೆನು.

ಅನ.—ಎಲೈ ಆರ್ಯನೆ ಕೇಳಬೇಕು, ಪೂರ್ವದಲ್ಲಿ ಗೌತಮೀತೀರದಲ್ಲಿ ಉಗ್ರತಪಸ್ಸನ್ನು ಆಚರಿಸುತ್ತಿದ್ದ ಆ ರಾಜಋಷಿಯು ನಿಯಮ ವಿಘ್ನಾರ್ಥವಾಗಿ ಭೀತರಾದ ದೇವತೆಗಳಿಂದ ಮೇನಕೆಯೆಂಬ ಅಪ್ಸರಸ್ತ್ರೀಯು ಕಳುಹಿಸಲ್ಪಟ್ಟಳು.

ರಾಜಂ.—ಇತರರ ತಪಸ್ಸಿನ ವಿಷಯದಲ್ಲಿ ಈ ಭಯ ದೇವತೆಗಳಿಗುಂಟೇ ಉಂಟು, ಆಮೇಲೆ ?

ಅನ.—ಆಮೇಲೆ ಉತ್ಕೃಷ್ಟವಾದ ವಸಂತ ಸಮಯದಲ್ಲಿ ಮೋಹಜನಕವಾದ ಆ ಮೇನಕೆಯ ರೂಪಾತಿಶಯವನ್ನು ನೋಡಿ—(ಎಂದು ಅರ್ಧೋಕ್ತಿಯಲ್ಲಿ ಲಜ್ಜೆಯಿಂದ ಸುಮ್ಮನಿರುವಳು).

ರಾಜಂ.—ಆಮೇಲೆ ತಿಳಿದೇ ಇದೆ. ಸರ್ವಪ್ರಕಾರದಿಂದಲೂ ಈಕೆ ಅಪ್ಸರಃಕನ್ಯಕೆಯೇ.

ಅನ.—ಹೌದು.

ರಾಜಂ.—ಒಪ್ಪತಕ್ಕದ್ದು !

ಕಂದ॥ ಈ ಮಧುರಾಕೃತಿ ಮಾನುಷ ।
ಕಾಮಿನಿಯುರ ಬಸುರೊಳೆಂತು ಪುಟ್ಟುಗುಮಿಳೆಯೊಳ್ ॥
ವ್ಯೋಮದೊಳುದಯಿಪ ಮಿಂಚೇ ।
ಭೂಮಿತಲ ದತ್ತಣಿಂದದೇಂ ಪುಟ್ಟುಗುಮೇ ॥ ೨೬

ಶಕುಂ.—(ತಲೆಯನ್ನು ತಗ್ಗಿಸಿಕೊಂಡು ನಿಂತಿರುವಳು).

ರಾಜಂ.—(ತನ್ನಲ್ಲಿತಾನೆ) ನನ್ನ ಮನೋರಥಕ್ಕೆ ಅವಕಾಶದೊರಕಿತು! ಆದರೆ ಸಖಿಯು ಹಾಸ್ಯವಾಗಿ ಆಡಿದ ಈಕೆಯ ವರಪ್ರಾರ್ಥನೆಯನ್ನು ಕೇಳಿ ನನ್ನ ಮನಸ್ಸು ಎರಡು ವಿಧವಾಗಿ ಕಳವಳಿಸುತ್ತಿದೆ.

ಪ್ರಿಯಂ.—(ನಸುನಕ್ಕು, ಶಕುಂತಳೆಯನ್ನು ನೋಡಿ; ಅರಸನಿಗೆ ಅಭಿಮುಖಳಾಗಿ) ಆರ್ಯನು ಮತ್ತೂ ಏನನ್ನೋ ಆಡಲಿಚ್ಛೈಸುವಂತೆ ತೋರುವದು.

ಶಕುಂ.—(ಸಖಿಯನ್ನು ಬೆರಳಿನಿಂದ ಬೆದರಿಸುವಳು)

ರಾಜಂ.—ಪೂಜ್ಯಳಾದ ನೀನು ಚೆನ್ನಾಗಿ ಊಹಿಸಿದೆ. ಸಚ್ಚರಿತ್ರೆಯನ್ನು ಕೇಳಬೇಕೆಂಬ ಆಶೆಯಿಂದ ನಿಮ್ಮನ್ನು ಕೇಳತಕ್ಕದ್ದು ಇನ್ನೊಂದೂ ಉಂಟು.

ಪ್ರಿಯಂ.—ತಪಸ್ವಿಜನಗಳನ್ನು ಶಂಕೆಯಿಲ್ಲದೆ ಕೇಳಬಹುದಷ್ಟೆ ಆಲೋಚನೆ ಏತಕ್ಕೆ?

ರಾಜಂ.—ನಿಮ್ಮ ಸಖಿಯು ಸಂಗತಿಯನ್ನು ತಿಳಿಯಲಿಚ್ಛೈಸುವೆನು.

ಕಂದ॥ ಪರಿಣಯ ಮಪ್ಪನ್ನೆಗವೀ।
ಸರಸಿಜಮುಖಿ ಮದನರೋಧಿ ನಿಯಮವನಂಗೀ॥
ಕರಿಪಳೊ ತಾನಲ್ಲದೊಡೀ।
ಹರಿಣಿಗಳೊಡನಾಡುತೆಂದುಮಾವಾಸಿಪಳೋ॥ ೨೭

ಪ್ರಿಯಂ.—ಎಲೈ ಆರ್ಯನೆ, ಧರ್ಮಾಚರಣೆಯಲ್ಲಿಯೂ ಈಕೆ ಪರಾಧೀನೆ; ಈಕೆಯ ತಂದೆಗಾದರೋ, ಈಕೆಯನ್ನು ಅನುರೂಪನಾದ ವರನಿಗೆ ಕೊಡುವ ಸಂಕಲ್ಪವಿರುವದು.

ರಾಜಂ.—(ತನ್ನಲ್ಲಿತಾನೆ) ಈ ಪ್ರಾರ್ಥನೆ ಪಡೆಯುವದಕ್ಕೆ ಅಶಕ್ಯವೇ!

ಕಂದ॥ ಎಲೆ ಹೃದಯವೆ ಸಂದೇಹಂ।
ತೊಲಗಿದುದಭಿಲಾಷಯುಕ್ತನಾಗಾವುದನೀಂ॥
ಅಳುಕಿದೆಯೊ ಕೆಂಡಮೆನುತದು।
ತಳದಿಂಮುಟ್ಟಲ್ಕೆ ತಕ್ಕ ನವಮಾಣಿಕ್ಯಂ॥ ೨೮

ಶಕುಂ.—(ಕೋಪಗೊಂಡವಳಂತೆ) ಅನಸೂಯೆ, ನಾನು ಹೋಗುವೆನು.

ಅನ.—ನೀನು ಹೋಗುವದೇತಕ್ಕೆ ?

ಶಕುಂ.—ಅಸಂಬದ್ಧವಾಗಿ ಮಾತಾಡುವ ಪ್ರಿಯಂವದೆಯ ನಡತೆಯನ್ನು ಆರ್ಯೆಯಾದ ಗೌತಮಿಗೆ ತಿಳಿಸುವದಕ್ಕೆ.

ಅನ.—*ಎಲೆಸಖಿ, ಸತ್ಕಾರವನ್ನು ಹೊಂದದ ಅತಿಥಿವಿಶೇಷವನ್ನು ಬಿಟ್ಟು ಮನಸ್ಸಿಗೆ ಬಂದಂತೆ ಹೋಗುವದು ಆಶ್ರಮವಾಸಿ ಜನಕ್ಕೆ ಯುಕ್ತವಲ್ಲ.

ಶಕುಂ.—(ಯಾವದನ್ನೂ ಆಡದೆ ಹೊರಟಳು.)

ರಾಜಂ.—(ಆಕೆಯನ್ನು ಹಿಡಿಯಲಿಚ್ಛೈಸಿ, ಮನಸ್ಸನ್ನು ತಡೆದು, ತನ್ನಲ್ಲಿತಾನೇ) ಆಹ ! ಕಾಮಿಗಳ ಮನೋವ್ಯಾಪಾರವು ಚೇಷ್ಟೆಗೆ ಪ್ರತಿರೂಪವಾದದ್ದು ಏತಕೆಂದರೆ—

ಕಂದ॥ ಮುನಿಸುತೆಯುನೆನುಸರಿಸುತೊಡ ।
ನನುನಯದಿಂಪೋಪುದಲ್ಲವೆಂದಿರ್ದೆಡೆಯಿಂ ॥
ದಿನಿಸುಂಚಲಿಸದೊಡಂತ ।
ದ್ವನಿತೆಯುಬಳಿಗೈದಿ ಮಗುಳ್ದುಬಂದವೊಲಾದೆಂ ೨೯

ಪ್ರಿಯಂ.—(ಶಕುಂತಳೆಯನ್ನು ತಡೆದು) ಎಲೆಸಖಿ, ಹೋಗುವದು ನಿನಗುಚಿತವಲ್ಲ.

ಶಕುಂ.—(ಹುಬ್ಬನ್ನು ಗಂಟಿಕ್ಕಿ) ಏತಕ್ಕೆ ಹೋಗಬಾರದು ?

ಪ್ರಿಯಂ.—ಸಸಿಗಳಿಗೆ ಎರಡು ಸಾರಿ ನೀರೆರೆಯುವ ಸಾಲವನ್ನು ಹೊತ್ತಿರುವೆ. ಆದ್ದರಿಂದ ಅದನ್ನು ತೀರಿಸಿಕೊಂಡು ಹೋಗುವೆ. ಬಾ (ಎಂದು ಬಲಾತ್ಕಾರದಿಂದ ಎಳೆಯುವಳು.)

---

* ॥ ರಾಗ—ದೇಶಿಕಾಪಿ ॥ ॥ ಆದಿತಾಳ ॥

ಪೋಗಬೇಡವೆ ಸಖಿನೀಂ ಪೋಗಬೇಡವೆ ॥ ಪಲ್ಲವಿ ॥ ಆರ್ಯನು ಬರೆಪರಿ । ಚರ್ಯವ ಮಾಡದೆ । ಕಾರ್ಯವಾವುದನಿ । ವಾರ್ಯವೆಮಗೆ ಸಖಿ । ಪೋಗ ॥ ೧ ॥ ಅತಿಥಿವಿಶೇಷವ । ಪತಿಕರಿಸದಬಗೆ । ಮತವೇನಾಶ್ರಮ । ಗತರಿಗೆ ಸಖಿ ನೀಂ । ಪೋಗ ॥ ೨ ॥ ಸಮ್ಮತವಲ್ಲಿದು । ನಮ್ಮನುಳಿದುನೀಂ । ಸುಮ್ಮನೆ ಪೋಗದಿ । ರಮ್ಮೆ ಶಕುಂತಳೆ । ಪೋಗ ॥ ೩ ॥

ರಾಜಂ.— ಎಲೆ ಕಾರುಣ್ಯವತಿಯೆ, ಗಿಡಗಳಿಗೆ ನೀರೆರೆದ್ದರಿಂದಲೇ ಈಕೆ ಇಷ್ಟು ಆಯಾಸ ಪಟ್ಟಿರುವಂತೆ ಎಣಿಸುವೆನು, ಹಾಗೆಯೇಸರಿ, ಈಕೆಯು—

ವೃತ್ತ॥ಕಲಶೋತ್ಕ್ಷೇಪಣದಿಂಕರಂಕರತಲಂಕೆಂಪಾಂತುತೋರ್ಕುಂಕುಚಂ।
ಗಳೊಳಿನ್ನುಂಮಿತಿವಿಾರಿಬರ್ಪನಿಡುಸುಯ್ಗಳ್ಕಂಪವಂಪುಟ್ಟಿಕುಂ ॥
ವಿಳಸತ್ಕರ್ಣಶಿರೀಷರೋಧಿ ಬೆಮರಾದಂ ವಕ್ತ್ರದೋಳ್ನಿಂದುದಾ ।
ಕುಲ ಮಾಯ್ತೊತ್ತ್ರಳದಿಂದೆ ಕಟ್ಟಿದುದರಿಂ ಬಿಚ್ಚಿರ್ದ್ದ ಕೇಶೋ
ತ್ಕರಂ ॥ ೨೦

ಆದ್ದರಿಂದ ಈಕೆಯು ಸಾಲವನ್ನು ನಾನು ತೀರಿಸುವೆನು (ಎಂದು ಉಂಗುರವನ್ನು ಕೊಡುವದಕ್ಕೆ ಇಚ್ಛೈಸುವನು.)

ಸಖಿಯರು.—(ಉಂಗುರದಲ್ಲಿ ಕೆತ್ತಿರುವ ನಾಮಾಕ್ಷರಗಳನ್ನು ಓದಿಕೊಂಡು ಒಬ್ಬರ ನೊಬ್ಬರು ನೋಡುವರು)

ರಾಜಂ.—ಈ ವುಂಗರದ ದೆಸೆಯಿಂದ ನನ್ನನ್ನು ಬೇರೆಯೆಣಿಸಬೇಡಿ, ನಾನು ರಾಜಸಂಬಂಧಿಯಾದ ಪುರುಷನು.

ಪ್ರಿಯಂ.—ಹಾಗಾದರೆ ಈ ವುಂಗುರವು ಆರ್ಯನ ಅಂಗುಲಿಯನ್ನು ಅಗಲ ಕೂಡದು. ಆರ್ಯನ ಮಾತಿನಿಂದಲೆ ಈಕೆ ಈಗ ಋಣಮುಕ್ತೆಯಾದಳು. (ಸ್ವಲ್ಪ ಶಕುಂತಳೆಯ ಕಡೆಗೆ ತಿರುಗಿ) ಎಲೆ ಶಕುಂತಳೆ, ಕರುಣಾಳುವಾದ ಆರ್ಯ ನಿಂದ ಅಥವಾ ಮಹಾರಾಜನಿಂದ ಬಿಡುಗಡೆಯನ್ನು ಒಂದಿದೆ, ಇನ್ನು ಹೋಗು.

ಶಕುಂ.—(ತನ್ನಲ್ಲಿತಾನು) ಹೋಗುವದು ನನ್ನ ಕೈಲಾಗುವದಾದರೆ (ಪ್ರಕಾ ಶವಾಗಿ) ನನ್ನನ್ನು ಬಿಡುವದಕ್ಕೂ ತಡೆಯುವದಕ್ಕೂ ನೀನಾವಳು?

ರಾಜಂ.—(ಶಕುಂತಳೆಯನ್ನು ನೋಡಿ ತನ್ನಲ್ಲಿ ತಾನು) ಈಕೆಯಲ್ಲಿ ನಾವುಹ್ಯಾಗೊ, ನಮ್ಮಲ್ಲಿ ಈಕೆಯೂ ಹಾಗೆಯೇ ಇರುವಳೆ? ಒಂದುವೇಳೆ ನನ್ನ ಕೋರಿಕೆ ಕೈಗೂಡಿದಂತೆ ಕಾಣುವದು, ಏತಕಂದರೆ—

ಕಂದ॥ ನುಡಿಯುತ್ತಿರೆನಾಂನುಡಿಯುಳ್ ।
ಕುಡುವಳ್ ಕಿವಿಯಂ ಮುದುಕ್ತಿಗವಲೋಕಿಸೆನಾ ॥

ನೊಡನೆ ತಲೆವಾಗಿಪಳ್ ಕ |
ಣ್ಗ ಡೆಯುಂಪಿರಿದಿತರವಿಷಯ ದೊಳಗಿಡಳಾದಂ ‖ ೨೧

ತೆರೆಯಲ್ಲಿ.—ಎಲೆ, ಎಲೆ, ತಪಸ್ವಿಗಳಿರಾ ! ತಪೋವನ ಪ್ರಾಣಿಗಳ ರಕ್ಷಣೆಗೋಸ್ಕರ ಸನ್ನದ್ಧರಾಗಿ ! ಬೇಟೆಯಾಡುತ್ತಬಂದ ದುಷ್ಯಂತಮಹಾರಾಜನು ನಿಮ್ಮ ಸಮೀಪದಲ್ಲಿರಬೇಕಷ್ಟೆ !

ಕಂದ ‖ ಸಳಿಳದೊಳೆನಾಂದವಲ್ಕಂ |
ದಳೆದಾಶ್ರಮ ತರುಗಳಲ್ಲಿ ಹಯಖುರಹತಿಯಿಂ ‖
ದಳುರ್ದೇಳ್ದ ಧೂಳಿಪರಿಣತ |
ಜಳಜಸಬಾಭಂಪತಂಗತತಿವೊಲ್‌ಬೀಳ್ಗುಂ ‖ ೨೦

ವೃತ್ತ ‖ ಪರಪುತ್ತಂಪುಲ್ಲೆ ಗುಂಪಂಪದಕೆತೊಡರ್ದ ಪೆಬ್ಬಳ್ಳಿಗಳ್‌ಪಾಶದಂತೊ |
ಪ್ಪಿರೆ ನೋಡಲ್ ಪೊಯ್ಲಬಲ್ಪಿಂ ಮುರಿದ ಮರದಪೇಗ್ಗೊಂಬಿನೊಳ್
ಕೊಂಬದೊಂದಂ ‖
ಟಿರೆಧರ್ಮಾರಣ್ಯಮಾರ್ಗಂಬಿಡಿದುರದೆತಪೋವಿಘ್ನವೇಮೂರ್ತಿವೆತ್ತಂ |
ತಿರೆಸೊರ್ಕ್ಕಾಂತಾನೆಯೈತಂದಪುದುನೃಪರಥಾ ಲೋಕದಿಂದಂಜುತೀಗ
ಳ್ ‖ ೨೨

ಎಲ್ಲರೂ.—(ಈ ಏಗೊಟ್ಟು ಕೇಳಿ ಸ್ವಲ್ಪ ಸಂಭ್ರಾಂತೆಯರಾದಂತೆ ಇರುವರು).

ರಾಜಂ.—(ತನ್ನಲ್ಲಿ ತಾನು) ಓಹೋ ! ಛಿ ! ಪುರಜನರು ನನ್ನನ್ನು ಹುಡುಕುತ್ತಾ ಬಂದು ತಪೋವನವನ್ನು ಮುತ್ತುವರು ; ಆಗಲಿ ಹೋಗುವೆನು.

ಅನ.—ಎಲೈ, ಆರ್ಯನೆ, ಆನೆಯವೃತ್ತಾಂತದಿಂದ ಕಳವಳಪಟ್ಟಿರುವೆವು ! ಪರ್ಣಶಾಲೆಗೆ ಹೋಗುವದಕ್ಕೆ ಅನುಜ್ಞೆಗೊಡು.

ರಾಜಂ.—ನೀವು ಹೋಗಿ, ನಾವೂ ಕೂಡ ಆಶ್ರಮಕ್ಕೆ ಬಾಧೆಯುಂಟಾಗದ ಹಾಗೆ ಪ್ರಯತ್ನಿಸಿ ಹೋಗುವೆವು.

ಎಲ್ಲರು.—(ಏಳುವರು)

ಸಖಿಯರು.—ಆರ್ಯನೇ ಸತ್ಕಾರವನ್ನು ಹೊಂದದ ನಿನ್ನನ್ನು ಪುನಶ್ಚ ನೋಡುವನಿಮಿತ್ತವಾಗಿ ಆರ್ಯನಿಗೆ ವಿಜ್ಞಾಪಿಸುವದಕ್ಕೆ ಲಜ್ಜೆಪಡುವೆವು.

ರಾಜಂ.—ಹೀಗೆನ್ನಬೇಡಿ, ನಿಮ್ಮ ದರ್ಶನದಿಂದಲೇ ಸತ್ಕೃತನಾದೆನು.

ಶಕುಂ.—ಎಲೆ ಅನಸೂಯೆ, ಸೂಜಿಯಂತಿರುವ ದರ್ಭೆಯತುದಿಯು ನನ್ನ ಕಾಲಿಗೆ ಚುಚ್ಚಿತು; ಇದಲ್ಲದೆ ಈ ಗೋರಂಟೆ ಮರದ ಕೊನೆಗೆ ನನ್ನ ನಾರ ಸೀರೆಯ ಸೆರಗು ಸಿಕ್ಕಿತು; ಬಿಡಿಸಿಕೊಂಡು ಬರುವಪರ್ಯಂತ ನನ್ನನ್ನು ಕಾದಿರಿ. (ಎಂದು ರಾಯನನ್ನೇ ನೋಡುವ ನೆವದಿಂದ ತಡಮಾಡುತ್ತಾ ಸಖಿಯರೊಡನೆ ಹೊರಟು ಹೋದಳು.)

*ರಾಜಂ.—ನನಗೆ ಪಟ್ಟಣಕ್ಕೆ ಹೋಗುವ ಕುತೂಹಲ ಕಿರಿದಾಯಿತು. ನನ್ನ ಹಿಂದೆ ಬಂದವರ ಬಳಿಗೆ ಹೋಗಿ ತಪೋವನಕ್ಕೆ ಅತಿದೂರವಲ್ಲದ ಸ್ಥಳದಲ್ಲಿ ಇಳಿಸುವೆನು. ನಾನಾದರೋ ಶಕುಂತಳೆಯ ಅನುರಾಗ ಚೇಷ್ಟೆಯದೆಸೆಯಿಂದ ನನ್ನ ಮನಸ್ಸನ್ನು ಹಿಂದಿರುಗಿಸಲಾರೆನು.

*ಕಂದ ॥ ಮುಂದಕೆ ಪೋಪುದು ತನುವಿದು ।
ಪಿಂದೆಸೆ ಗೋಡುವುದು ಬಳಕೆಗೈದದ ಮನವೇ ॥
ಸೆಂದಪೆನೊ ಪವನನಿದಿರೊಳ್ ।
ತಂದ ಪತಾಕಿಕೆಯ ಚೀನವಸನಮಿದೆಂಬೊಲ್ ॥ ೩೪

---

* ॥ ರಾಗ—ನೀಲಾಂಬರಿ ॥ ॥ ತ್ರಿಪುಟ ತಾಳ ॥

ಕಾಂತೆಯನುಳಿದೆಂತುಪೋಪೆಂ । ಚಿಂತೆಯನ್ಸೈಪೆಂ ॥ ಪ ॥ ದಂತಿವಾರ್ತೆಯೊಳಂಜಿ ತನ್ನದೃ । ಗಂತದಿಂದೀಕ್ಷಿಸುತಪ್ರಿಯೆಪೋಗೆ । ಬಂದುದೀಪೇಗೆ ॥ ಅನು ॥ ಕೆಳದಿಯರೊಳು ನೆವವಾಂತು । ಅಲ್ಲಲ್ಲಿನಿಂತು । ತಳರುತಲೆಪಿಂದಿರುಗಿದರಸಿಯು । ವಲಿತಕಂಧರವಾದವದನೇಂದು ವೆದೆಯೊಳಿದೆನಿಂದು ॥ ೧ ॥ ನಗರೀಗಮನವೆನ್ನಬಗೆಗೆ । ಬಾರದೀಗಳಿಗೆ । ಯುಗದ ಪರಿಯಲಿತೋರ್ಪುದೆಂದಿಗೆ । ಬೊಗಸೆಗಣ್ಣಿನಮುಗುದೆಯನುನೋಳ್ಪೆ । ನಿಂನಾರಬೇಳ್ಪೆ ॥ ೨ ॥ ಪೋಗುವದೊಡಲಿದುಮುಂದೆ । ಹೃದಯವಿದುಹಿಂದೆ । ಪೇಗನೋಡುವದಿದಿರುಗಾಳಿಯೊಳ್ ಸಾಗಿಸುವ ಪಳವಿಗೆಯಪಟದಂತೆ । ಏಗೈವೆಮುಂತೆ ॥ ೩ ॥

ದ್ವಿತೀಯಾಂಕಂ.

(ಬಳಿಕ ದುಃಖಿತನಾದ ವಿದೂಷಕನು ಪ್ರವೇಶಿಸುವನು.)

ವಿದೂಷಕನು.—*(ನಿಟ್ಟುಸುರನ್ನು ಬಿಟ್ಟು) ಅಯ್ಯೋ ದೈವವೆ! ಬೇಟೆಯಲ್ಲೇ ಆಸಕ್ತನಾದ ಈ ರಾಯನ ಸ್ನೇಹದಿಂದ ಕೆಟ್ಟೆನಲ್ಲಾ! ಇದೋ ಹುಲ್ಲೆ! ಇದೊ ಹಂದಿ! ಇದೊ ಹುಲಿ! ಎನ್ನುತ್ತಾ ಮಧ್ಯಾಹ್ನದಲ್ಲಿಯೂ ಬೇಸಿಗೆಯಿಂದ ದಟ್ಟವಾಗಿ ಮರದ ನೆರಳಿಲ್ಲದ ಅಡವಿಗಳಲ್ಲಿ ಸುತ್ತಿ ಸಾಕಾಯಿತು! ಉದುರಿದೆಲೆಗಳಿಂದ ಒಗರಾಗಿ ಬೆಚ್ಚಗಿರುವ ಬೆಟ್ಟದ ಜೋಗಿನ ನೀರುಗಳನ್ನೆಲ್ಲಾ ಕುಡಿದದ್ದಾಯಿತು. ಇದು ಹೊರತಾಗಿ ಹೊತ್ತುಗೊತ್ತಿಲ್ಲದೆ ಸುಟ್ಟಮಾಂಸವೇ ಹೆಚ್ಚಾಗಿರುವ ಆಹಾರವು ಭುಂಜಿಸಲ್ಪಟ್ಟಿತು; ಕುದುರೆಯ ಹಿಂದೋಡಿ ಶರೀರದ ಕೀಲುಗಳೆಲ್ಲಾ ಸಡಿಲಿ ನೋವಿಂದ ರಾತ್ರಿಯಲ್ಲಿಯೂ ನಾನು ಚೆನ್ನಾಗಿ ಮಲಗಲಿಲ್ಲ. ಆಮೇಲೆ ಬೆಳಕು ಹರಿಯುವದಕ್ಕಿಂತಾ ಮುಂಚೆಯೇ ಅರಣ್ಯವನ್ನು ಆಕ್ರಮಿಸುವ ತೊತ್ತಿನ ಮಕ್ಕಳಾದ ಹಕ್ಕಿಯ ಬೇಟೆಗಾರರ ಕಲಕಲಧ್ವನಿಯಿಂದ ಎಚ್ಚರವಾಯಿತು; ಇಷ್ಟಾದರೂ ಇನ್ನೂ ಕಷ್ಟತಪ್ಪಲಿಲ್ಲ! ಆದ್ದರಿಂದ ಕುರುವಿನಮೇಲೆ ಬೊಕ್ಕೆಯೆದ್ದಂತಾಯಿತು. ನೆನ್ನೆಯ ದಿವಸ ನಮ್ಮನ್ನು ಹಿಂದೆ ಬಿಟ್ಟು ಹುಲ್ಲೆಯನ್ನು ಅಟ್ಟಿಕೊಂಡು ಆಶ್ರಮವನ್ನು ಹೊಕ್ಕ ನಮ್ಮ ರಾಯನಿಗೆ ನನ್ನ ದುರದೃಷ್ಟವು ಶಕುಂತಳೆಯೆಂಬುವಳನ್ನು ಬೇರೇ ತೋರಿಸಿತು. ಈಗ ನಮ್ಮ ರಾಯನು ಊರಿಗೆ ಹೋಗುವ ಸಮಾಚಾರವನ್ನೇ ಎತ್ತುವದಿಲ್ಲ. ಈಗಲೂ ಆ ಸಂಗತಿಯನ್ನೇ ಚಿಂತಿಸುತ್ತಿರುವ ನನಿಗೆ ಕಣ್ಣುಗಳನ್ನು ಬಿಟ್ಟುಕೊಂಡಿ

---

* ॥ ರಾಗ—ಧೀರಶಂಕರಾಭರಣ ನೋಟು ॥ ॥ ಆದಿತಾಳ ॥

ವಿದೂಷಕನು—ಹಾಹಾ ಇದೇನಿದು । ಮ್ರೋಹವಾಮದು ॥ ಊಹೆಗೈಯದರಸನೊಡನೆ । ಸ್ನೇಹವಾಂತುದು ॥ ಪ ॥ ಎಲ್ಲಿ ನೋಡುವೆ । ಎಲ್ಲಿ ಗೈದುವೆ ॥ ಹುಲ್ಲೆಯೊಡನೆ ಹೋದ ನೃಪನ । ನೆಲ್ಲಿ ಹುಡುಕುವೆ ॥ ೧ ॥ ಹೊತ್ತುಹೊತ್ತಿಗೆ । ತುತ್ತ ಬಾಯಿಗೆ । ಇತ್ತು ಕಾಣೆ ಹತ್ತಿತು ಬಲು । ಪಿತ್ತ ನೆತ್ತಿಗೆ ॥ ೨ ॥ ಬೇಡಬೇಡವು । ಬೇಟೆ ಯಾಟವು ॥ ಕಾಡ ತಿರುಗಿ ತಿರುಗಿ ಮೈ । ಬಾಡಿತಲ್ಲವು ॥ ೩ ॥

ದ್ದಹಾಗೆಯೇ ಬೆಳಗಾಯಿತು. ಮಾಡತಕ್ಕದ್ದೇನು? ಪ್ರಾತಃಕಾಲದ ಕಾರ್ಯಗಳನ್ನು ಮುಗಿಸಿಕೊಂಡು ಬರುವ ಆತನನ್ನು ಯಾವಾಗ ಕಂಡೇನು? (ಸ್ವಲ್ಪ ನಡೆದು ನೋಡಿ) ಇದೋ! ಕಾಡು ಹುವ್ವುಗಳನ್ನು ಮುಡಿದು ಕೈಯ್ಯಲ್ಲಿ ಬಿಲ್ಲನ್ನು ಹಿಡಿದುಕೊಂಡಿರುವ ಯುವನಸ್ತ್ರೀಯರ ಗುಂಪಿಂದ ಪರಿವೃತನಾಗಿ ಈಕಡೆಯೇ ನನ್ನ ಮಿತ್ರ ಬರುವನು. ಆಗಲಿ ಅಂಗಭಂಗವಿಕಲನಂತೆ ನಿಂದಿರುವೆನು. ಹೀಗಾದರೆತಾನೇ ವಿಶ್ರಾಂತಿಯನ್ನು ಹೊಂದಬಹುದು. (ಎಂದು ದೊಣ್ಣೆಯನ್ನು ಊರಿಕೊಂಡು ನಿಲ್ಲುವನು)

ಇದು ಪ್ರವೇಶಕವು.

(ಅನಂತರ ಪೂರ್ವೋಕ್ತ ಪರಿವಾರದೊಡನೆ ರಾಜನು ಪ್ರವೇಶಿಸುವನು.)

ರಾಜಂ.—ಕಂದ॥ ಮುನಿತನಯೆ ಸುಲಭೆಯಲ್ಲಂ।
ಮನಮಾದೊಡೆ ಕಳವಳಿಪುದು ತದ್ಭಾವಾ ಲೋ॥
ಕನದಿಂ ಕಾಮಂ ಸಾರ್ಥಕ।
ನೆನಿಸದೊಡಂ ಮಾಳ್ಪುದೀರ್ವರಾಸೆಯೆ ರತಿಯಂ॥ ೩೫

(ನಸುನಕ್ಕು) ಇಷ್ಟಜನದ ಚಿತ್ತವೃತ್ತಿಯನ್ನು ತನ್ನ ಅಭಿಪ್ರಾಯಕ್ಕೆ ಅನುಸಾರಿಯನ್ನಾಗಿ ಹೀಗೆ ಕಲ್ಪಿಸಿಕೊಳ್ಳುವ ಕಾಮುಕನು ಹಾಸ್ಯಕ್ಕೆ ಗುರಿಯಾಗುವನು. ಹಾಗೇಸರಿ,

ವೃತ್ತ॥ ಬೇರೆಡೆ ಯಿಟ್ಟದಿಟ್ಟಿಯಿನಭೀಕ್ಷಿಸುವಾಕೆಯನೇಹನೋಟವುಂ।
ತೋಂಡನಿತಂಬ ಭಾರ ಕಲಸುತ್ತವೆ ಪೋಪಳಮಂದಯಾನಮುಂ॥
ಸಾರದಿರೆಂದ ತನ್ನಸಖಿಗುತ್ತರವಂ ಮುನಿದಾಕೆಯಿತ್ತುದುಂ।
ತೋರಿದುದೆನ್ನದಾಗಹಹ ಕಾಮುಕನೀಕ್ಷಿಪನಲ್ತೆ ನೈಜಮಂ॥ ೩೬

ವಿದೂ.—(ಮೊದಲಿನಂತೆ ದಂಡವನ್ನು ಊರಿಕೊಂಡು ನಿಂತು) ಎಲೈ ಮಿತ್ರನೆ, ನನ್ನ ಕೈಕಾಲುಗಳನ್ನು ಆಡಿಸಲಾರೆನು ಆದ್ದರಿಂದ ಬಾಯಿಮಾತಿನಿಂದಲೇ ಹರಸುವೆನು, ಜಯಶೀಲನಾಗು.

ರಾಜಂ.—ಏತರಿಂದ ನಿನ್ನ ಶರೀರಕ್ಕೆ ಈ ವಿಕಾರ ಉಂಟಾಯಿತು?

ವಿದೂ.—ಏತರಿಂದ ! ತಾನೇ ಕಣ್ಣು ಚುಚ್ಚಿ ಕಣ್ಣೀರು ಏತರಿಂದ ಬಂತೆಂದು ಕೇಳುವೆ, ಚೆನ್ನಾಯಿತು ! ಚೆನ್ನಾಯಿತು !

ರಾಜಂ,—ನಾನರಿಯೆನು, ಸ್ಪಷ್ಟವಾಗಿ ಹೇಳು.

ವಿದೂ.—ಎಲೈ ಮಿತ್ರನೆ, ನೀರಹಬ್ಬೆಗಿಡ ಬಾಗಿರುವದು ತನ್ನ ಪ್ರಭಾವದಿಂದಲೋ ಅಥವಾ ನದೀ ವೇಗದ ಪ್ರಭಾವದಿಂದಲೋ ?

ರಾಜಂ.—ಅದು, ನದೀ ವೇಗದ ಪ್ರಭಾವದಿಂದ.

ವಿದೂ.—ನಾನು ಹೀಗಾದದ್ದೂ, ನಿನ್ನ ಪ್ರಭಾವದಿಂದ.

ರಾಜಂ.—ಅದು ಹ್ಯಾಗೆ ?

ವಿದೂ.—ಹೀಗೆ, ನೀನು ರಾಜ ಕಾರ್ಯಗಳನ್ನು ಬಿಟ್ಟು ಮನುಷ್ಯಸಂಚಾರವಿಲ್ಲದ ಇಂಥಾ ಕಾಡಿನಲ್ಲಿ ಕಾಡಮನುಷ್ಯನಂತೆ ತಿರುಗುತ್ತಿರುವೆ; ನಿಜವಾಗಿ ಪ್ರತಿಹಗಲು ದುಷ್ಟಜಂತುಗಳನ್ನು ಓಡಿಸುವದರಿಂದ ನನ್ನ ಶರೀರದ ಕೀಲುಗಳೆಲ್ಲಾ ಸಡಿಲಿ ನೋವಾಗಿ ನನ್ನ ಅಂಗಗಳೇ ನನಗೆ ಸ್ವಾಧೀನವಿಲ್ಲದಹಾಗಾಯಿತು ; ಆದ್ದರಿಂದ ನೀನು ದಯೆಮಾಡಿ, ಒಂದು ದಿನವಾದರೂ ವಿಶ್ರಮಿಸಿಕೊಳ್ಳುವದಕ್ಕೆ ನನ್ನನ್ನು ಬಿಡಬೇಕೆಂದು ಬೇಡಿಕೊಳ್ಳುವೆನು.

ರಾಜಂ.—(ತನ್ನಲ್ಲಿ ತಾನು) ಇವನೂ ಹೀಗೆ ಪೇಳುವನು ; ಕಣ್ವಪುತ್ರಿಯನ್ನು ನೆನೆದು ನನಗೂ ಬೇಟೆಯಲ್ಲಿ ಮನಸ್ಸು ಬೇಸರಪಟ್ಟಿರುವದು.

ಕಂದ ॥ ಕಣೆದೊಟ್ಟು ಹರಿಣ ಗಣದೊ ।
ಳ್ಮಣಿಯಿಸಲಾರೆಂ ಗುಣಾಂಕ ಚಾಪವ ನೆದುಪೆ ॥
ಣ್ಮಣಿಗೆ ಸವಿನೋಟಮಂ ತಾಂ ।
ಪ್ರಣಯದಿ ನೊಡನಿರ್ದು ಕಲಿಸಿದಂತಿ ರಲರಿದಾಂ ॥ ೩೭

ವಿದೂ.—(ಅರಸನ ಮುಖವನ್ನು ನೋಡಿ) ನೀನು ಮನಸ್ಸಿನಲ್ಲಿ ಏನೋ ಇಟ್ಟುಕೊಂಡು ಆಲೋಚಿಸುವಂತೆ ಕಾಣುವದು ; ನಾನು ಅರಣ್ಯದಲ್ಲಿ ಅತ್ತ ಹಾಗಾಯಿತು !

ರಾಜಂ.—(ನಸುನಕ್ಕು) ಮತ್ತೇನೂ ಅಲ್ಲ, ಮಿತ್ರನ ಮಾತು ಮೀರತಕ್ಕದ್ದಲ್ಲವೆಂದು ಸುಮ್ಮನಿದ್ದೆನು.

ವಿದೂ.—ಬಹುಕಾಲ ಬದುಕು (ಎಂದು ಹೋಗುವದಕ್ಕೆ ಯತ್ನಿಸುವನು.)

ರಾಜಂ.—ಎಲೈ ಮಿತ್ರನೆ ನಿಲ್ಲು, ನನ್ನ ಮಾತು ಇನ್ನೂ ಮುಗಿಯಲಿಲ್ಲ.

ವಿದೂ.—ಅದೇನು ಅಪ್ಪಣೆಯಾಗಲಿ,

ರಾಜಂ.—ನೀನು ವಿಶ್ರಮಿಸಿಕೊಂಡು ಅನಾಯಾಸವಾದ ಒಂದು ಕಾರ್ಯದಲ್ಲಿ ನನಗೆ ಸಹಾಯನಾಗಬೇಕು.

ವಿದೂ.—ಏನು, ಕಡುಬ ಮೆಲ್ಲುವದರಲ್ಲೋ ?

ರಾಜಂ.—ನಾನುಹೇಳುವದರಲ್ಲಿ.

ವಿದೂ.—ಇದೋ ತೆಪ್ಪಗಿರುವೆನು.

ರಾಜಂ.—ಅದ್ವಾರು ಹೊರಗೆ ?

ದ್ವಾರಪಾಲಕ.—(ದ್ವಾರಪಾಲಕ ಬಂದು) ಸ್ವಾಮಿ, ಆಜ್ಞಾಪಿಸಬೇಕು.

ರಾಜಂ.—ಎಲೈ ರೈವತಕನೆ, ಸೇನಾಪತಿಯನ್ನು ಕರೆದುಕೊಂಡು ಬಾ.

ದ್ವಾರಪಾಲಕ.—ಮಹಾರಾಜನಾಜ್ಞೆ (ಎಂದು ಹೋಗಿ ಸೇನಾಪತಿಯೊಡನೆ ಪುನಃ ಬಂದು) ಎಲೈ ಆರ್ಯನೆ, ಇದೋ ನಮ್ಮ ಮಹಾರಾಜನು ಆಜ್ಞಾಪಿಸುವದಕ್ಕೆ ಕುತ್ತಿಗೆಯನ್ನು ಎತ್ತಿಕೊಂಡು ಇತ್ತಲೇ ನೋಡುತ್ತ ನಿಂದಿರುವನು; ಸಮೀಪಕ್ಕೆ ಹೋಗು.

ಸೇನಾಪತಿ.—(ರಾಜನನ್ನು ನೋಡಿ) ಮೃಗದ ಬೇಟೆಯು ದುಷ್ಟವಾದಾಗ್ಯೂ ನಮ್ಮ ರಾಯನಲ್ಲಿ ಪ್ರಯೋಜನಕಾರಿಯೇ ಆಯಿತು. ಹಾಗೆಯೇ ಸರಿ.

ವೃತ್ತ॥ ಸೆಳೆಯುತ್ತಿಪ್ಪ್ಪಂತರಿಂ ಮೌರ್ವಿಯು ಕಠಿಣತೆವೆತ್ತಿಪ್ಪ ಪೂರ್ವಾಂ
ಗದಿಂ ಕಂ ।
ಗೊಳಿಸುತ್ತಂ ಸೂರ್ಯನುಗ್ರಾತಪವ ಸಹಿಪ ಮೇಣ್ ಸ್ವೇದ ಲೇಶಂಗ
ಳಿಂದಂ ॥

ಕಳೆಯೇನುಂ ಕುಂದದಿಪ್ಪೀತನ ತನುಬಡವಾಗಿರ್ದೊಡಂ ದಾರ್ಢ್ಯ
ದಿಂದಂ |
ಬಳಮೊತ್ತಾಳ್ದಿರ್ಕ್ಕುಮುರ್ವೀಧರಕಟಕಚರದ್ವನ್ಯದಂತಾವಳಂಬೊಲ್

(ಸಮೀಪಕ್ಕೆ ಬಂದು) ಸ್ವಾಮಿಗೆ ವಿಜಯ ಉಂಟಾಗಲಿ. ಈ ಅರಣ್ಯದಲ್ಲಿ ದುಷ್ಟಮೃಗ ಸಂಚಾರವು ನಿರೋಧಿಸಲ್ಪಟ್ಟಿರುವದು. ಇನ್ನು ತಡವೇತಕ್ಕೆ?

ರಾಜಂ.—ಎಲೈ ಸೇನಾಪತಿಯೆ, ಬೇಟೆಯನ್ನು ನಿಂದಿಸುವ ಮಾಢವ್ಯನ ದೆಸೆಯಿಂದ ನನಗೆ ಉತ್ಸಾಹ ಭಂಗವಾಯಿತು.

ಸೇನಾಪತಿ.—(ಮರೆಯಲ್ಲಿ) ಎಲೈ ಮಿತ್ರನೇ ನೀನು ಪ್ರತಿಕೂಲನಾಗಿಯೇ ಇರು; ನಾನಾದರೋ, ಪ್ರಭುವಿನ ಚಿತ್ತವೃತ್ತಿಯನ್ನು ಅನುಸರಿಸುವೆನು. (ಪ್ರಕಾಶವಾಗಿ) ಈ ಮೂಢನು ಮನಸ್ಸಿಗೆ ಬಂದಂತೆ ಹರಟಲಿ; ಬೇಟೆಯು ಪ್ರಯೋಜನಕಾರಿ ಯೆಂಬುವದಕ್ಕೆ ಸ್ವಾಮಿಯೇ ದೃಷ್ಟಾಂತವಲ್ಲವೆ ?

ಕಂದ॥ ಮೇದಶ್ಛೇದನದಿಂದೆ ಕೃ |
ಶೋದರ ಮೆಂದೆನಿಸಿ ದೊಡಲಿದುತ್ಸಾಹಕ್ಕಿಂ ॥
ಬಾದಪುದು ಬನದಮಿಗಗ |
ಳ್ಗಾದಂಜಿಕೆ ಮುಳಿಸಿವೆರಡು ಮರಿಯಲ್ಬರ್ಕ್ಕುಂ ೩೯

ಮತ್ತಂ.

ಕಂದ॥ ಚಲಮಾದ ಲಕ್ಷ್ಯದೊಳಗಂ |
ಫಲಿಪುದು ಧನ್ವಿಗಳ ಬಾಣ ಮೀ ಬೇಂಟೆಯುಮಂ ॥
ನೆಲದೊಳ್ ವ್ಯಸನಮೆನುತ್ತಂ |
ಪಳಿವುದು ಪುಸಿಯಿಂತು ಬಿನದ ಮೇತರಿನಕ್ಕುಂ ॥ ೪೦

ವಿದೂ.—(ಕೋಪದಿಂದ) ಎಲೋ! ಪ್ರೋತ್ಸಾಹಕನೆ! ತೆಗೆ! ನಮ್ಮ ಪ್ರಭು, ಬೇಟೆಯಲ್ಲಿ ವಿಮುಖನಾದನು, ನೀನಾದರೋ ಅಡವಿಯಿಂದಡವಿಗೆ ಸುತ್ತುತ್ತಾ ಮನುಷ್ಯರ ಮೂಗಿನ ಮಾಂಸದಲ್ಲಿ ಆಶೆಯುಳ್ಳ ಯಾವದಾದರೂ ಒಂದು ಮುದಿ ಕರಡಿಯ ಬಾಯಿಗೆ ಬೀಳುವೆ.

ರಾಜಂ.—ಎಲೈ ಮಾವ್ಯನಾದ ಸೇನಾಪತಿಯೆ, ಬಹಳ ಮಾತಿನಿಂದ ಪ್ರಯೋಜನವೇನು ? ನಾವು ಆಶ್ರಮದ ಸಮೀಪದಲ್ಲಿರುವದರಿಂದ ನೀನು ಹೇಳುವದು ಅಭಿನಂದಿಸತಕ್ಕದ್ದಲ್ಲ. ಈಗಲಾದರೋ—

ವೃತ್ತ॥ ಮುಳುಗುಗೆ ಕೋಡುಗುಟ್ಟುತೆ ಜಲಾಶಯಮಧ್ಯದೆ ಕಾಡಕೋಣ
 ಗಳ್‌।
 ನೆಳಲೊಳೆ ಮೆಲ್ಕಮಾಡುಗೆ ಮೃಗಾವಳಿ ಸೇರುತೆಸೂಕರಾಳಿಪ ॥
 ಲ್ವಲದೊಳೆ ಮುಸ್ತೆಯಂ ಬಗಿದುಕೀಳುಗೆ ನೆಮ್ಮದಿವೆತ್ತು ವಿಶ್ರಮಂ।
 ದಳೆಗೆ ಮದೀಯಚಾಪ ಮಿದುವುಂ ಶಿಥಿಲೀಕೃತ ರಜ್ಜುಬಂಧನಂ॥ ೪೧

ಸೇನಾಪತಿ.—ಪ್ರಭುಗಳ ಇಷ್ಟವಿದ್ದಂತಾಗಲಿ.

ರಾಜಂ.—ಬಳ್ಳೀದು ಮೊದಲು ಬಂದ ಬೇಟೆಗಾರರನ್ನು ಕಳುಹಿಸಿ ನನ್ನ ಸೈನಿಕರನ್ನೂ ತಪೋವನದ ಸಮೀಪಕ್ಕೆ ಬಾರದಂತೆ ನಿಲ್ಲಿಸು. ಕೇಳು,—

ಕಂದ॥ ಶಾಂತಿಪ್ರಧಾನ ಮುನಿಗಳೊ ।
 ಳಂತರ್ಗತಮಿಪ್ಪ ದುರಿಪತೇಜಂ ಪರತೇ ॥
 ಜಂತಗುಳ್ದೊಡೆ ಸಲೆತೋರ್ಪರ ।
 ದಂತಾಂಸ್ಪರ್ಶಾನುಕೂಲ ರವಿಕಾಂತಂಬೊಲ್ ॥ ೪೨

ಸೇನಾಪತಿ.—ಪ್ರಭುವಿನಾಜ್ಞೆಯಂತಾಗಲಿ.

ವಿದೂ.—ಎಲೆ ತೊತ್ತಿನಮಗನೆ, ನಿನ್ನ ಉತ್ಸಾಹ ಸಮಾಚಾರ ಧ್ವಂಸವಾಯಿತು ಇನ್ನು ನಡೆ.

(ಸೇನಾಪತಿ ಹೊರಟುಹೋಗುವನು.)

ರಾಜಂ.—(ಪರಿಜನವನ್ನು ನೋಡಿ) ನಿಮ್ಮ ಬೇಟೆಯ ವೇಷವನ್ನು ತೆಗೆದುಬಿಡಿ ; ಎಲೈ ರೈವತಕನೆ, ನೀನುಕೂಡ ನಿನ್ನ ಕೆಲಸವನ್ನು ನೋಡು.

ಪರಿಜನರು.—ಪ್ರಭುವಿನಾಜ್ಞೆಯಂತೆ. (ಎಂದು ಹೊರಟು ಹೋಗುವರು.)

ವಿದೂ.—ಎಲೈ ಮಿತ್ರನೆ, ಈಗ ಇಲ್ಲಿ ಬಂದು ನೊಣವೂ ಇಲ್ಲದಂತೆ

ಮಾಡಿದೆ. ಮರದ ನೆಳಲಿಂದ ಶೀತಲವಾದ ಈ ಶಿಲಾಪೀಠದಲ್ಲಿ ಕುಳಿತುಕೊ. ನಾನುಕೂಡ ಕುಳಿತು ವಿಶ್ರಮಿಸಿಕೊಳ್ಳುವೆನು.

ರಾಜಂ.—ಮುಂದೆನಡೆ.

ವಿದೂ.—ದಯೆಮಾಡಬೇಕು.

(ಇಬ್ಬರೂ ಶಿಲಾಪೀಠದಲ್ಲಿ ಕುಳಿತು)

ರಾಜಂ.—ಎಲೈ ಮಾಢವ್ಯನೆ ನಿನ್ನ ಕಣ್ಣು ಹುಟ್ಟಿದ್ದು ನಿಷ್ಫಲವಾಯಿತು ; ಮುಖ್ಯವಾಗಿ ನೋಡತಕ್ಕ ವಸ್ತುವನ್ನು ನೀನು ನೋಡಲಿಲ್ಲ.

ವಿದೂ.—ಅಂಥಾ ವಸ್ತು ನನ್ನ ಇದಿರಿಗೇ ಇರುವುದಲ್ಲವೆ !

ರಾಜಂ.—ಎಲ್ಲರಿಗೂ ತಮ್ಮ ತಮ್ಮ ವಸ್ತು ತಮಗೆ ಚೆನ್ನಾಗಿ ಕಾಣುವುದು; ನಾನಾದರೋ, ಆಶ್ರಮಕ್ಕೆ ಅಲಂಕಾರಪ್ರಾಯಳಾದ ಆ ಶಕುಂತಳೆಯನ್ನೇ ಕುರಿತು ಹೇಳುವೆನು.

ವಿದೂ.—(ತನ್ನಲ್ಲಿತಾನು) ಒಳ್ಳೇದು, ಇವನ ಮಾತಿಗೆ ಅವಕಾಶವನ್ನು ಕೊಡದೆ ಇರುವೆನು. (ಪ್ರಕಾಶವಾಗಿ) ತಪಸ್ವಿಕನ್ಯೆಯೂ ಅಪೇಕ್ಷಿಸತಕ್ಕವಳಾಗಿರುವಳೇ ?

ರಾಜಂ.—ಎಲೈ ಮಿತ್ರನೆ, ಗ್ರಾಹ್ಯವಲ್ಲದ ವಸ್ತುವಿನಲ್ಲಿ ಪುರುಕುಲದರಸರ ಮನಸ್ಸು ಪ್ರವರ್ತಿಸುವದೆ ?

*ಕಂದ॥ ಸುರಯುವತಿ ಭವೆಯಲಾ ಮುನಿ ।
ವರ ಕೌಶಿಕ ಪುತ್ರಿ ಮಾತ್ರ ತೊರೆದೈದಲ್ ಕ ॥
ಣ್ವರಬಳಿ ಸೇರ್ದ್ದಳ್ ಮಾಲತಿ ।
ಯರಲೆಕ್ಕದ ಗಿಡದ ಮೇಲೆ ಜಗಳ್ದುರುಳಿದವೋಲ್ ॥ ೪೩

ವಿದೂ.—(ನಕ್ಕು) ಎಲೈ ಮಿತ್ರನೆ ಪಿಂಡ ಖರ್ಜೂರದಲ್ಲಿ ಬೇಸರಪಟ್ಟು ಹುಣಸೆ ಹಣ್ಣನ್ನು ತಿನ್ನಲು ಬಯಸಿದವನಂತೆ ರಾಣಿವಾಸದ ಉತ್ತಮಾಂಗನೆಯರನ್ನು ತಿರಸ್ಕರಿಸಿ ನೀನು ಮುನಿಪುತ್ರಿಯನ್ನು ಬಯಸುವನಾದೆ !

ರಾಜಂ.—ಆಕೆಯನ್ನು ನೀನು ನೋಡಿದ್ದರೆ ಹೀಗೆ ಹೇಳುತ್ತಿರಲಿಲ್ಲ.

ವಿದೂ.—ಆದರೆ ನಿನಗೂ ಆಶ್ಚರ್ಯವನ್ನುಂಟುಮಾಡುವ ವಸ್ತು ರಮಣೀಯವಾದದ್ದೇಸರಿ.

ರಾಜಂ.—ಎಲೈ ಮಿತ್ರನೇ ಬಹಳ ಮಾತುಗಳಿಂದೇನು ?

*ವೃತ್ತ॥ ಪ್ರಾಣಂಬೊಯ್ದನೊ ಚಿತ್ರಿಸುತ್ತಮವಳಂ ಸೌಂದರ್ಯ ಸಾರಂಗಳಿಂ।
ವಾಣೀ ವಲ್ಲಭನೋರ್ವನೋನಿರ್ಮಿಸಿದನೋರ್ಮೇಣಚಿತ್ತದಿಂಗೆಯ್ದನೋ
ಜಾಣಿಂ ಬ್ರಹ್ಮನ ಮತ್ತಮಾಕೆ ಯೊಡಲಂ ನೋಡಲ್ಕದೇನೆಂದಪೆಂ ।
ಕ್ಷೋಣೀಭಾಗದೆಬೇರೆತೋರ್ಕುರ್ಮೆನಗಾಸ್ತ್ರೀರತ್ನಸೃಷ್ಟಿಕ್ರಮಂ

ವಿದೂ.—ಹೀಗಿದ್ದದ್ದೇ ಆದರೆ ಆಕೆ ರೂಪವತಿಯರನ್ನೆಲ್ಲಾ ತಿರಸ್ಕರಿಸತಕ್ಕವಳೇ !

ರಾಜಂ.—ಇದು ಬೇರೆ ನನ್ನ ಮನಸ್ಸಿನಲ್ಲುಂಟು.

ವೃತ್ತ॥ ಎಣಿಸೆ ನಖಂಗಳಿಂ ದುಡಿಯದಿರ್ದ ಚಿಗುರ್ ಕಡೆದೆಜ್ಜವಿಕ್ಕದೊ ।
ಳ್ಮಣಿ ಸವಿನೋಡದಿದ್ದ ರ್ಭಿನವಂ ಮಧುವಾಸಿಸದಿರ್ದಪೂವು ಧಾ ॥
ರಿಣಿಯೊಳಖಂಡ ಪುಣ್ಯಫಲ ಮಾಕೆಯ ರೂಪನಘಂ ಗಡಾ ಅದ ।
ಕ್ಕೆಣೆಯೆನೆ ಭೋಕ್ತೃವಂ ವಿಧಿಯದಾವನನೊಂದಿಪನಾಹ ಕಾಣೆ
ನಾಂ ॥ ೪॥

ವಿದೂ.—ಹಾಗಾದರೆ ಆಕೆಯನ್ನು ಜಾಗ್ರತೆಯಾಗಿ ಕಾಪಾಡಿಕೊ. ಇಂಗುದೀ ತೈಲದಿಂದ ಜಿಡ್ಡಾದ ತಲೆಯುಳ್ಳ ಯಾವನಾದರೂ ಒಬ್ಬ ದರಿದ್ರನಾದ ಕಾಡಮನುಷ್ಯನ ಕಯ್ಗೆ ಬಿದ್ದಾಳು.

---

*॥ ರಾಗ—ಧನಾಸರಿ ॥ ॥ ಅದಿತಾಳ ॥

ಸಖನೆ ಕೇಳಾಕೆ । ಮುಖಿಯನೇಂ ವರ್ಣಿಪೇಂ ॥ ಪಲ್ಲ ॥ ನಿಖಿಲವಧೂಕುಲ । ಶಿಖಾಮಣಿಯನುನಾಂ ॥ ಅನು ॥ ಮೊದಲೊಳಾಮೇನಕೆ । ಯುದರದೊಳಾಕೆ । ಉದಿಸಿದ ಕನ್ಯಕೆ । ಮದನ ಪತಾಕೆ ॥ ೧ ॥ ಆ ಕೌಶಿಕ ಮುನಿ । ಯಾಕೆಗೆ ಜನಕನು। ಆ ಕಣ್ವನವಳನು ಸಾಕಿದಪಿತನು । ೨ ॥ ಅವಳನದೇಪರಿ । ವಿವರಿ ನಿರ್ಜರೀ । ಭವೆಯುಲಾ ಸುಂದರಿ । ನವರಸಲಹರಿ ॥ ೩ ॥ ವರನನ ದಾವನ । ದೊರೆಯಿಪನೋ ವಿಧಿ । ಅರಿಯೆನಾನಾಕೆಗೆ । ಸರಿಯನೀ ಜಗದಿ ॥ ೪ ॥

ರಾಜಂ.—ಆಕೆಯಾದರೋ ಪರಾಧೀನೆ—ಅಲ್ಲಿ ಗುರುಜನಗಳೂ ಸಮೀಪದಲ್ಲಿರಲಿಲ್ಲ.

ವಿದೂ.—ಹಾಗಾದರೆ ನಿನ್ನ ವಿಷಯದಲ್ಲಿ ಆಕೆಯ ಕಟಾಕ್ಷಾನುರಾಗ ಹ್ಯಾಗಿತ್ತು ?

ರಾಜಂ.—ಸ್ವಾಭಾವಿಕವಾಗಿ ತಪಸ್ವಿ ಕನ್ಯೆಯರು ಚದುರೆಯರಲ್ಲ ; ಆದರೂ—

ಕಂದ ॥ ಬರೆನಾ ನಿದಿರೊಳ್ ನೋಟವ ।
ತಿರುಪುತ್ತಂ ನಗೆಯ ಪರನಿಮಿತ್ತಂಗೈದಾ ॥
ತರುಣಿಯ ನಾಣಿಂ ಮದನಂ ।
ನೆರೆಮರೆಯನಿಸಿ ಮುಚ್ಚಿವಂತೆಮೆರೆದನುಮಲ್ಲಂ ॥ ೪೬

ವಿದೂ.—ನಿನ್ನನ್ನು ನೋಡಿದ ಮಾತ್ರದಲ್ಲೇ ಆಕೆ ನಿನ್ನ ತೊಡೆಯನ್ನೇರುವಳೆ ?

ರಾಜಂ.—ಸಖಿಯರೊಡನೆ ಹೊರಟಕಾಲದಲ್ಲಿ ಬಹು ಲಜ್ಜೆಯುಳ್ಳವಳಾದಾಗ್ಯೂ ಆಕೆ ನನ್ನ ವಿಷಯದಲ್ಲಿ ತನ್ನ ಅನುರಾಗವನ್ನು ಚೆನ್ನಾಗಿ ಪ್ರಕಟಮಾಡಿದಳು, ಹ್ಯಾಗಂದರೆ—

ಕಂದ ॥ ನಡೆಯುತ್ತೊಡನೆ ಕುಶಾಂಕುರ ।
ಮಡಿಯೊಳ್ ತಾಗಿದುದೆನುತ್ತೆ ನಿಂದಳ್ ಮೇಣ್ ಪೂ ॥
ಗಿಡದೊಳ್ ಸಿಲ್ಕಿದೊಡಂ ನಾ ।
ರುಡೆಯುಂ ಬಿಡಿಸುತ್ತೆ ತಿರುಗಿ ನೋಡಿದಳೆನ್ನಂ ॥ ೪೭

ವಿದೂ.—ಹಾಗಾದರಿನ್ನೇನು ? ಬುತ್ತಿಯಕಟ್ಟು ; ಈಗ ನಿನಗೆ ತಪೋವನವೂ ಉಪವನವಾಯಿತೆಂದೂಹಿಸುವೆನು.

ರಾಜಂ.—ಎಲೈ ಮಿತ್ರನೆ ನಾನಿಲ್ಲಿರುವದನ್ನು ಕೆಲವರು ತಪಸ್ವಿಗಳು ಬಲ್ಲರು ; ಯೋಚಿಸು ಯಾವನೆವದಿಂದ ಪುನಃ ಆಶ್ರಮವಕ್ಕೆ ಹೋಗೋಣ?

ವಿದೂ.—ನಿನಗೆ ಬೇರೇ ನೆವವೇತಕ್ಕೆ ? ನೀನು ಅರಸಲ್ಲವೆ ?

ರಾಜಂ.—ಅದರೇನು ?

ವಿದೂ.—ತೃಣಧಾನ್ಯದ ಆರನೇ ಭಾಗವನ್ನು ನಮಗೆ ಕೊಡಬೇಕೆಂದು ಹೋಗುವದು.

ರಾಜಂ.—ಎಲೈ ಮೂರ್ಖನೇ ಕೇಳು, ಈ ತಪಸ್ವಿಗಳು ಮತ್ತೊಂದು ವಿಧವಾದ ಭಾಗವನ್ನು ನಮಗೆ ಕೊಡುವರು, ರತ್ನರಾಶಿಯುನ್ನಾದರೂ ಬಿಟ್ಟು ಅದು ಅಭಿನಂದಿಸತಕ್ಕದ್ದಾಗಿದೆ ; ನೋಡು—

ಕಂದ ‖ ಜನವರ್ಗ್ಗ ನಿಖಿಲ ವರ್ಣದ ।
ಜನಗಳ್ ಕುಡುತಿರ್ಪ್ಪ ಷಷ್ಠಭಾಗ ಮದಳಗುಂ ‖
ಮುನಿಗಳ್ ಕುಂದದ ತಪದಾ ।
ರನೆಯಂಶವ ನೆಮಗೆ ಸಖನೆ ಕೊಟ್ಟಪರಲ್ತೇ ‖ ೩೮

ತೆರೆಯಲ್ಲಿ.—ಆಹ ! ನಮ್ಮ ಕಾರ್ಯಸಿದ್ಧಿಸಿತು.

ರಾಜಂ.—(ಕಿವಿಗೊಟ್ಟು) ಓಹೋ ! ಗಂಭೀರವಾಗಿಯೂ ಸೌಮ್ಯವಾಗಿಯೂ ಇರುವ ಈ ಧ್ವನಿಯು ಮುನಿಗಳದಾಗಿರುವದು !

(ದ್ವಾರಪಾಲಕ ಬಂದು).

ದ್ವಾರಪಾಲಕ.—ಸ್ವಾಮಿಗೆ ವಿಜಯುವಾಗಲಿ, ಇದೋ, ಇಬ್ಬರು ಋಷಿಕುಮಾರಕರು ಬಾಗಿಲಬಳಗೆ ಬಂದಿರುವರು.

ರಾಜಂ.—ಹಾಗಾದರೆ ಜಾಗ್ರತೆಯಾಗಿ ಅವರನ್ನು ಕರೆದುಕೊಂಡು ಬಾ.

ದ್ವಾರಪಾ.—ಸ್ವಾಮಿ, ಕರತರುವೆನು ; (ಎಂದು ಹೋಗಿ ಋಷಿ ಕುಮಾರಕರೊಡನೆ ಬಂದು) ಪೂಜ್ಯರು ಹೀಗೆ ದಯಮಾಡಬೇಕು.

(ಅವರಿಬ್ಬರೂ ಅರಸನನ್ನು ನೋಡಿ).

ಮೊದಲನೆಯುವನು.—ಆಹ ! ಈತನ ಶರೀರವು ತೇಜೋಮಯುವಾದಾಗ್ಯೂ ವಿಶ್ವಾಸವನ್ನುಂಟು ಮಾಡತಕ್ಕದ್ದಾಗಿರುವದು. ಋಷಿಕಲ್ಪನಾದ ಈ ರಾಜನಲ್ಲಿ ಇದು ಯುಕ್ತವೇ, ಏತಕ್ಕಂದರೆ—

ವೃತ್ತ॥ ಪರಿಕಿಸೆ ಸರ್ವಭೋಗ್ಯ ಮೆನಿಪಾಶ್ರಮದೊಳ್ ನೆಲಸಿರ್ಪ ನುರ್ವಿ
ಯಂ ।
ಪೊರೆವ ನಿಮಿತ್ತದಿಂದೆ ತಪಮಂ ತವೆಪೆರ್ಚಿಪನೆಂದು ವಿಖ್ಯಾತನುಂ ॥
ಕರಣ ಜಯಿತ್ವಮಂ ಧರಿಸಿದಂತರಿನೀತನ ನಂತರಿಕ್ಷದೊಳ್ ।
ಕರಗಳನೆತ್ತಿ ರಾಜಋಷಿಯೆಂದುರೆ ಕೀರ್ತಿಪರಲ್ತೆ ಚಾರಣರ್॥ ೪೯

ಎರಡನೆಯವನು.—ಎಲೈ ಗೌತಮನೆ ಈತನು ಇಂದ್ರಸಖನಾದ ಆ ದುಷ್ಯಂತ ಮಹಾರಾಜನು.

ಮೊದಲನೆಯವನು.—ಹೌದು.

ಎರಡನೆಯವನು.—ಆದ್ದರಿಂದಲೇ—

ವೃತ್ತ॥ ಪುರಪರಿಘಾಯತಾತ್ಮಭುಜನಾದಿವನೆ ೊರ್ವನೆ ಸಾಗರಂಗಳಿಂ ।
ಕರಿದೆನಿಸಿರ್ದ ಸೀಮೆ ದಳೆದೀನೆಲನೆಲ್ಲವು ನಾಳ್ವನೆಂಬುದ ॥
ಚ್ಚರಿಯೆಸಮೌರ್ವಿಯಾದಿವನ ಬಿಲ್ಲೊಳಮಿಂದ್ರನವಜ್ರದಲ್ಲಿಯುಂ।
ಸುರರಮಣೀಜನಂಗಳಭಿಕಾಂಕ್ಷಿಸುವರ್ ಜಯಮಂರಣಂಗಳೊಳ್ ॥

ಇಬ್ಬರೂ.—(ರಾಜನ ಸಮೀಪಕ್ಕೆ ಬಂದು) ಎಲೈ ರಾಯನೆ ಜಯಶೀಲನಾಗು.

ರಾಜಂ.—(ಪೀಠದಿಂದೆದ್ದು) ಪೂಜ್ಯರಾದ ನಿಮಗೆ ನಮಸ್ಕರಿಸುವೆನು.

ಇಬ್ಬರೂ.—ಎಲೈ ಮಹಾರಾಜನೆ ನಿನಗೆ ಮಂಗಳವಾಗಲಿ (ಎಂದು ಫಲಗಳನ್ನು ಕೊಡುವರು.)

ರಾಜಂ—(ನಮಸ್ಕಾರಪೂರ್ವಕವಾಗಿ ಫಲಗಳನ್ನು ತೆಗದುಕೊಂಡು) ಪೂಜ್ಯರೆ ತಮ್ಮಾಜ್ಞೆ ಏನು ? ಕರುಣಿಸಬೇಕು.

ಇಬ್ಬರೂ.—ಎಲೈ ಮಹಾರಾಜನೆ ನೀನಿಲ್ಲಿರುವದನ್ನು ತಿಳಿದ್ದರಿಂದ ಆಶ್ರಮವಾಸಿಗಳು ಹೀಗೆ ನಿನ್ನನ್ನು ಪ್ರಾರ್ಥಿಸುವರು.

ರಾಜಂ.—ಏನೆಂದಾಜ್ಞಾಪಿಸುವರು ?

ಇಬ್ಬರು.—ಪೂಜ್ಯರಾದ ಕಣ್ವರು ಆಶ್ರಮದಲ್ಲಿಲ್ಲದ ಕಾರಣ ರಾಕ್ಷಸರು ನಮ್ಮ ಯಾಗಕ್ಕೆ ವಿಘ್ನವನ್ನಾಚರಿಸುವರು ; ಆದ್ದರಿಂದ ಕೆಲವು ರಾತ್ರಿಗ

ಳಲ್ಲಿ ಸಾರಥಿಯೊಡನೆಕೂಡಿ ನೀನು ಆಯುಧಪಾಣಿಯಾಗಿ ಆಶ್ರಮವನ್ನು ಸನಾಥವನ್ನಾಗಿ ಮಾಡಬೇಕೆಂದು.

ರಾಜಂ.—ಅನುಗ್ರಹಿಸಲ್ಪಟ್ಟೆನು.

ವಿದೂ.—(ಮರೆಯಲ್ಲಿ) ಈಪ್ರಾರ್ಥನೆ, ಈಗ ನಿನಗೆ ಅನುಕೂಲವಾದದ್ದು,

ರಾಜಂ.—ಎಲೈ ರೈವತಕನೆ, ಧನುರ್ಬಾಣಗಳೊಡನೆ ರಥವನ್ನು ತರುವಂತೆ ನಾನು ಹೇಳಿದೆನೆಂದು ಸಾರಥಿಗೆ ಹೇಳು.

ದೌವಾರಿಕನು.—ಮಹಾರಾಜನಪ್ಪಣೆ ಯಾದಂತೆ (ಎಂದು ಹೋದನು)

ಋಷಿಕುಮಾರರಿಬ್ಬರೂ.—(ಸಂತೋಷ ಯುಕ್ತರಾಗಿ)

ಕಂದ ॥ ಚಿತ್ರಮಿದೇಂ ಪೂರ್ವಿಕರ ಚ ।
ರಿತ್ರಂಗಳನನುಕರಿಸಿದ ನಿನಗಿದು ಸಹಜಂ ॥
ಧಾತ್ರಿಯೊಳಾಪನ್ನಾಭಯ ।
ಸತ್ರದೆ ಧೃತದೀಕ್ಷರಲ್ತೆ ಪುರುಕುಲದರಸರ್ ॥ ೫೧

ರಾಜಂ.—ತಾವು ಮೊದಲು ದಯಮಾಡಬೇಕು, ನಾನೂ ಸಂಗಡಲೇ ಬಂದೆನೆಂದು ಭಾವಿಸಿ.

ಇಬ್ಬರು.—ಎಲೈ ರಾಯನೆ ಜಯಶೀಲನಾಗು. (ಎಂದು ಹರಸಿ ಹೋದರು)

ರಾಜಂ.—ಎಲೈ ಮಾಢವ್ಯನೆ, ನಿನಗೆ ಶಕುಂತಳೆಯನ್ನು ನೋಡಬೇಕೆಂಬ ಕುತೂಹಲ ಉಂಟೊ ?

ವಿದೂ.—ಮೊದಲು ನನ್ನಲ್ಲಿ ಆ ಕುತೂಹಲ ತುಂಬಿ ತುಳುಕುತ್ತಿತ್ತು ಈಗ ರಾಕ್ಷಸರ ಸಮಾಚಾರದಿಂದ ಬಿಂದು ಮಾತ್ರವೂ ಉಳಿಯದಂತಾಯಿತು.

ರಾಜಂ.—ಅಂಜಬೇಡ, ನೀನು ನನ್ನ ಸಮೀಪದಲ್ಲಿರುವೆಯಲ್ಲವೇ ?

ವಿದೂ.—ನಾನು ರಾಕ್ಷಸರ ದೆಸೆಯಿಂದ ಬದುಕಿಸಲ್ಪಟ್ಟೆನು.

(ದೌವಾರಿಕನು ಬಂದು)

ದೌವಾರಿಕನು.—ಸನ್ನದ್ಧವಾದ ರಥವು ಸ್ವಾಮಿಯ ಜಯ ಪ್ರಯಾಣವನ್ನು ಅಪೇಕ್ಷಿಸುವದು ; ಇದಲ್ಲದೆ ದೇವಿಯರಪ್ಪಣೆಯನ್ನು ತೆಗೆದುಕೊಂಡು ಪಟ್ಟಣದಿಂದ ಕರಭಕನು ಈಗತಾನೇ ಬಂದಿರುವನು.

ರಾಜಂ.—(ವಿಶ್ವಾಸಯುಕ್ತನಾಗಿ) ಮಾತುಶ್ರೀಯವರು ಕಳುಹಿಸಿರುವರೆ ?

ದೌವಾ.—ಹೌದು.

ರಾಜಂ.—ಹಾಗಾದರೆ ಬೇಗ ಕರೆದುಕೊಂಡು ಬಾ.

ದೌವಾ.—ಅಪ್ಪಣೆ (ಎಂದು ಹೋಗಿ ಕರಭಕನೊಡನೆ ಬಂದು) ಇದೋ ಸ್ವಾಮಿಯು, ಸಮೀಪಕ್ಕೆ ಹೋಗು.

ಕರಭಕಂ.—(ಸಮೀಪಕ್ಕೆ ಬಂದು) ಸ್ವಾಮಿಗೆ ವಿಜಯವಾಗಲಿ. ಬರುವ ನಾಲ್ಕನೇ ದಿವಸದಲ್ಲಿ ಪುತ್ರಪಿಂಡಪಾಲನವೆಂಬ ಉಪವಾಸ ವ್ರತವು ನಡೆಯುವದು ; ಆ ವ್ರತಕ್ಕೆ ದೀರ್ಘಾಯುವಾದ ನೀವು ಬಳಸೇರಿ ತಮ್ಮನ್ನು ಆದರಿಸಬೇಕೆಂದು ದೇವಿಯರು ಆಜ್ಞಾಪಿಸುವರು.

ರಾಜಂ.—ಈ ಕಡೆ ತಪಸ್ವಿಗಳ ಕಾರ್ಯ, ಆ ಕಡೆ ಗುರುಜನದಾಜ್ಞೆ, ಎರಡೂ ಮೀರತಕ್ಕದ್ದಲ್ಲ ; ಈ ವಿಷಯದಲ್ಲಿ ಏನು ಮಾಡಬೇಕು.

ವಿದೂ.—ತ್ರಿಶಂಕುವಿನಂತೆ ಅಂತರಾಳದಲ್ಲಿ ನಿಲ್ಲಬೇಕು !

ರಾಜಂ.—ನಿಜವಾಗಿ ವ್ಯಾಕುಲನಾಗಿರುವೆನು.

ಕಂದ ॥ ಹೃದಯಮಿದಿರ್ತೆರನಾಯ್ತೆನ ।
ಗೊದವಿದ ಕಾರ್ಯಗಳ ಭಿನ್ನದೇಶತೆ ಯಿಂದಂ ॥
ಇದಿರೊಳ್ಸಂಗಡಿಸಿದಶೈ ।
ಲದೆ ತಾಗಿದ ಪೊಳೆಯ ಪೊನಲಮಾಳ್ಕೆಯಿನೀಗಳ್ ॥ ೫೨

(ಆಲೋಚಿಸಿ) ಎಲೈ ಮಿತ್ರನೆ ಮಾತುಶ್ರೀಯವರಿಗೆ ನಿನ್ನಲ್ಲಿ ಪುತ್ರವಾತ್ಸಲ್ಯವಿರುವದು ; ಆದ್ದರಿಂದ ಪೂಜ್ಯನಾದ ನೀನು ಇಲ್ಲಿಂದ ಹಿಂತಿರುಗಿ ತಪಸ್ವಿ

ಕಾರ್ಯದಲ್ಲಿ ನನಗಿರುವ ತತ್ಪರತೆಯನ್ನು ತಿಳಿಸಿ ಅವರ ಪುತ್ರಕೃತ್ಯವನ್ನು ನೆರವೇರಿಸತಕ್ಕವನಾಗು.

ವಿದೂ.—ನನ್ನನ್ನು ರಾಕ್ಷಸರಿಗೆ ಭಯಪಡತಕ್ಕವನೆಂದು ಭಾವಿಸುವದಿಲ್ಲವಷ್ಟೆ?

ರಾಜಂ.—ಎಲೈ ಮಹಾ ಬ್ರಾಹ್ಮಣನೆ ನಿನ್ನಲ್ಲಿದು ಹ್ಯಾಗೆ ಭಾವಿಸುವದಕ್ಕಾದೀತು ?

ವಿದೂ.—ಹಾಗಾದರೆ, ರಾಜ ಸಹೋದರನು ಹ್ಯಾಗೆ ಹೋಗತಕ್ಕದ್ದೋ ಹಾಗೆ ಹೋಗುವೆನು.

ರಾಜಂ.—ಆಗಲಿ ತಪೋವನಕ್ಕೆ ಬಾಧೆಯುಂಟಾಗಬಾರದೆಂದು ನನ್ನ ಅನುಚರರನ್ನೆಲ್ಲಾ ನಿನ್ನೊಡನೆ ಕಳುಹಿಸುವೆನು.

ವಿದೂ.—ಹಾಗಾದರೆ ಈಗ ನಾನು ಯುವರಾಜನಾದೆನು.

ರಾಜಂ.—(ತನ್ನಲ್ಲಿ ತಾನು) ಈ ವಟು ಚಪಲನು, ನನ್ನ ಅಭಿಲಾಷೆಯನ್ನು ರಾಣಿವಾಸದ ಜನಕ್ಕೆ ಬಂದು ಹೇಳಿ ಹೇಳ್ಯಾನು ! ಬಳ್ಳೇದು, ಇವನಿಗೆ ಹೀಗೆ ಹೇಳುವೆನು. (ವಿದೂಷಕನ ಕೈಯನ್ನು ಹಿಡಿದುಕೊಂಡು) (ಪ್ರಕಾಶವಾಗಿ) ಎಲೈ ಮಿತ್ರನೆ ಋಷಿಗಳ ಗೌರವದಿಂದ ಆಶ್ರಮಕ್ಕೆ ಹೋಗುವೆನು, ತಪಸ್ವಿಕನ್ಯೆಯಾದ ಶಕುಂತಳೆಯಲ್ಲಿ ನಿಜವಾಗಿ ನನಗೆ ಅನುರಾಗವಿಲ್ಲ.

ಕಂದ ॥ ಹರಿಣಂಗಳೊಡನೆ ಕಾಮನ ।
ಪರಿಯರಿಯದೆ ಬಳೆದಳಲ್ಲಿ ನಾವೆಲ್ಲಿಕರಂ ॥
ಪರಿಹಾಸ ಕುಸಿದುರ್ದಂ ನೀಂ ।
ಪರಮಾರ್ಥಮಿದೆಂದು ಬಗೆಯ ಬೇಡೈ ಮಿತ್ರಾ ॥ ೫೩

ವಿದೂ.—ಹೌದು ! ಹೌದು !

(ಎಂದು ಎಲ್ಲರೂ ಹೊರಟು ಹೋಗುವರು.)

ತೃತೀಯಾಂಕಂ.

(ಅನಂತರ ಯಜಮಾನ ಶಿಷ್ಯನು ಕೈಯಲ್ಲಿ ದರ್ಭೆಯನ್ನು ಹಿಡಿದುಕೊಂಡು ಬರುವನು)

ಶಿಷ್ಯ.—ಆಹ! ಮಹಾನುಭಾವನಲ್ಲವೆ ದುಷ್ಯಂತಮಹಾರಾಜನು! ಆತನು ನಮ್ಮಾಶ್ರಮವನ್ನು ಪ್ರವೇಶಮಾಡಿದ ಮಾತ್ರಕ್ಕೇ, ನಮ್ಮ ಕರ್ಮಗಳೆಲ್ಲಾ ನಿರ್ವಿಘ್ನಗಳಾಗಾದವು.

ಕಂದ ॥ ಆನರನಾಥನ ಶರಸಂ।
ಧಾನದೊಳೇಂ ಕಥೆಯೋ ಚಾಪಹುಂಕಾರನಿಭ॥
ಜ್ಯಾನಾದ ಮಾತ್ರದಿಂದವ।
ನೇನೆಂಬೇಂ ವಿಘ್ನವೆಲ್ಲವಂ ಪರಿಹರಿಕುಂ॥ ೫೪

ವೇದಿಸಂಸ್ತರಣಾರ್ಥವಾಗಿ ಈ ದರ್ಭೆಗಳನ್ನು, ಋತ್ವಿಜರಿಗೋಸ್ಕರ ತೆಗೆದುಕೊಂಡು ಹೋಗಿಕೊಡುವೆನು. (ಎಂದು ಸ್ವಲ್ಪ ನಡೆದು, ಆಕಾಶವನ್ನು ನೋಡಿ) ಪ್ರಿಯಂವದೆ, ಈ ಲಾಮಂಚದ ಅನುಲೇಪನವನ್ನೂ, ದಂಟುಗಳೊಡನೆ ಕೂಡಿದ ತಾವರೆಯೆಲೆಗಳನ್ನೂ, ಯಾರಿಗೋಸ್ಕರ ತೆಗೆದು ಕೊಂಡು ಹೋಗುವೆ? (ಕಿವಿಗೊಟ್ಟು) ಏನುಹೇಳುವೆ? ಶಕುಂತಳೆ, ಬಿಸಿಲಬೇಗೆಯಿಂದ ಬಹಳವಾಗಿ ಬಳಲಿರುವಳು; ಆಕೆಯ ಶರೀರಸಂತಾಪವನ್ನು ಪರಿಹರಿಸುವದಕ್ಕೆಂದೊ? ಹಾಗಾದರೆ ಎಚ್ಚರದಿಂದ ಉಪಚರಿಸು; ಆಕೆಯಾದರೋ, ಪೂಜ್ಯರಾದ ಕುಲಪತಿಗಳಿಗೆ ಪ್ರಾಣಪ್ರಾಯಳು; ನಾನು ಕೂಡ ಶಕುಂತಳೆಗೋಸ್ಕರ ಯಾಗ ಸಂಬಂಧಿಯಾದ ಶಾಂತ್ಯುದಕವನ್ನು ಗೌತಮೀ ಕರದಲ್ಲಿ ಕಳುಹಿಸಿ ಕೊಡುವೆನು. (ಎಂದು ಹೊರಟುಹೋದನು.)

ಇದು ಶುದ್ಧ ವಿಷ್ಕಂಭ.

(ಅನಂತರ ವಿರಹಾವಸ್ಥೆಯುಳ್ಳ ರಾಜನು ಬರುವನು.)

ರಾಜಂ.—ಕಂದ ॥ ತಿಳಿವೆಂ ಮುನಿಶಕ್ತಿಯನಾ।
ಯೆಳೆಯಳ್ಪರವತಿಯೆನಿಪ್ಪುದುಮನಾದೊಡಮಾಂ॥
ಸೆಳೆಯಲ್ಕಾರೆಂ ಮಲವಾ।
ನಳಿನಾಂಬಕಿ ಯತ್ತಣಿಂದಮೆನ್ನೀಮನಮಂ॥ ೫೫

(ಮದನ ಬಾಧೆಯನ್ನು ಅಭಿನಯಿಸಿ) ಎಲೈ ಪೂಜ್ಯನಾದ ಪುಷ್ಪಾಯುಧನೇ, ನಿನ್ನನ್ನೂ ಚಂದ್ರನನ್ನೂ ವಿಶ್ವಾಸಕ್ಕೆ ಯೋಗ್ಯರೆಂದು ಭಾವಿಸುವ ಕಾಮಿ ಜನರನ್ನು ನೀವು ಚೆನ್ನಾಗಿ ವಂಚಿಸುವಿರಿ ! ಏತಕೆಂದರೆ—

*ವೃತ್ತ॥ ನಿಂನಯ ಪುಷ್ಪಬಾಣತೆಯುಮಿಂದುವ ಶೀತಕರತ್ವಮುಂದಲೆ ।
ನ್ನಂನರೊಳಾರಯಲ್ಕನೃತಮೆಂದೆನೆತೋರ್ಪುದದೇತಕೆಂದೊಡೀ ॥
ಜೊಂನೊಡಲಂ ನಿಮರ್ಚಿದಪನಗ್ನಿಯ ತಣ್ಗದಿರಿಂದಮೋಹೊನೀ ।
ನುಂನನೆಗೊಲ್ಗಳಂಸಿಡಿಲ್ಗೆಸಾಟೆಯನಾಗಿಪೆ ಪಂಚಸಾಯಕಾ ॥ ೫೬

(ವ್ಯಸನದೊಡನೆ ಕೂಡಿ, ಸ್ವಲ್ಪ ನಡೆದು) ಯಾಗಕರ್ಮ ಮುಗಿಯಲು, ಋತ್ವಿಜರಿಂದ ಅಪ್ಪಣೆಯನ್ನು ಹೊಂದಿದ ನಾನು ಕಾಂತೆಯ ವಿರಹದಿಂದ ಕಳವಳಪಡುವ ಮನಸ್ಸನ್ನು ಎಲ್ಲಿ ವಿನೋದಪಡಿಸಲಿ ! (ಎಂದು ನಿಟ್ಟುಸಿರನ್ನು ಬಿಟ್ಟು) ಪ್ರಿಯೆಯಾದ ಶಕುಂತಳೆಯನ್ನು ಕಾಣದೆ ನಾನು ಬದುಕುವ ಬಗೆಹ್ಯಾಗೆ ! ಬಳ್ಳೇದು, ಆಕೆಯನ್ನು ಹುಡುಕುವೆನು. (ಸೂರ್ಯನನ್ನು ನೋಡಿ) ಈ ಮಧ್ಯಾಹ್ನ ಸಮಯವನ್ನು ಶಕುಂತಳೆ ಲತಾಗೃಹಗಳಿಂದ ಮನೋಹರವಾದ ಮಾಲಿನೀತೀರದಲ್ಲಿ ಸಖಿಯರೊಡನೆ ಸೇರಿ ಕಳೆಯುತ್ತಿರಬಹುದು ; ಅಲ್ಲಿಗೆ ಹೋಗುವೆನು. (ಎಂದು ಸ್ವಲ್ಪ ನಡೆದು ನೋಡಿ) ಶೋಭನಾಂಗಿಯಾದ ಆ

---

* ಕಂದ ॥ ಕುಸುಮಶರನೆಂದು ನಿನಗಾರ್ ।
ಪೆಸರಿಟ್ಟರೊ ಕಾಣೆನಕಟ ಸುಮಬಾಣಮುಮಂ ॥
ಪೊಸತೆನೆ ಸಿಡಿಲ್ಗೆ ಸಾಟಿಯ ।
ನೆಸಗುತೆ ಸುಡುತಿರ್ಪೆ ಯೆಂತುಸಹಿ೯ಂ ಕಂತೂ ॥

* ಕಂದ । ಜಗಕೆಲ್ಲ ತಂಪನೆಸಗುವ ।
ಮೃಗಲಾಂಛನನಕಟ ತನ್ನ ಹಿಮರಶ್ಮಿಗಳಿಂ ॥
ಮಿಗೆ ಕಿಡಿಯನುಗುಳುತೆಂ ಪ್ರಿಯೆ ॥
ಯುಗಲಿಕೆಯಾಂತೆನ್ನ ಸುಡುವನೇ ಗೈದಪೆನಾಂ ॥

* ॥ ರಾಗ—ತೋಡಿ ॥ ॥ ಆದಿತಾಳ.

ನಿಂದಿಪುದೇತಕೆ ಕಂದರ್ಪನಿನ್ನನಾಂ ॥ ಪ ॥ ಹರ ಕೋಪ ಶಿಖಿ ನಿನ್ನೊ । ಳುರಿವುದೀಗಳು ಮಲ್ಲ । ದಿರೆ ಭೂಶಿಶೇಷನಾ । ದರುತೀಕ್ಷ್ಣನಹೆ ಯೆಂತು ॥ ೧ ॥ ಆ ಶಶಿಮುಖಿಯನು । ದ್ದೇಶಿಸಿ ಹೊಡೆವೆಯೆಂ । ಬಾಶಯದಿಂ ದಲಾ । ಕ್ರೋಶಮಿಲ್ಲೆನಗಿನ್ನು ॥ ೨ ॥ ಬೀದೆನ್ನಹಂಬಲಿಂ । ನೆರೆಬಳಿದೆನ್ನೊಳೆ । ಶರಗಳಬಿಡುವುದು । ಸ್ಮರನಿನಗುಚಿತವೆ ॥ ೩ ॥

ಶಕುಂತಳೆ ಎಳೆದಾದ ಈ ಸಾಲ ಮರಗಳ ಮಾರ್ಗವಾಗಿ ಈಗ ತಾನೆ ಹೋಗಿರುವಳೆಂದು ಊಹಿಸುವೆನು. ಏತಕ್ಕೆಂದರೆ—

ಕಂದ ॥ ಪೂಗೊಯ್ದು ಸರಸಿಜಾನನೆ ।
ಪೋಗಲ್ ನೆರೆಮುಗಿದುದಿಲ್ಲ ಬಂಧನಕೋಶಂ ॥
ಕೈಗಳನುಡಿದೀ ತಳಿರ್ಗಳ ।
ಪೂಗಂ ಪಾಲಿಡಿದು ನಾಡೆಕಾಣಿಪ್ಪುದಿನ್ನುಂ ॥ ೫೮

(ಸ್ವಲ್ಪ ನಡೆದು ಸ್ಪರ್ಶ ಸುಖವನ್ನು ಅಭಿನಯಿಸಿ)

ಆಹ! ತಂಪಾದ ಗಾಳಿಯಿಂದ, ಈ ಪ್ರದೇಶವು ಮನೋಹರವಾಗಿರುವದು.

ಕಂದ ॥ ಮಾಲಿನಿಯ ತೆರೆಯತುಂತುರ ।
ತಾಳುತ್ತಂಬರ್ಪ್ಪ ಪದ್ಮಸುರಭಿ ಸಮೀರಂ ॥
ಆಲಿಂಗಿಸೆ ಯೋಗ್ಯಂಸ್ಮರ ।
ಕಾಲಾನಲ ತಪ್ತಮೆನಿಸಿದೆನ್ನಂಗಗಳಂ ॥ ೫೯

ಸ್ವಲ್ಪ ನಡೆದು ನೋಡಿ ನಿಜವಾಗಿ ಈ ನೀರುಹಬ್ಬೆ ಬಳ್ಳಿಯನ್ನು ಹೊದ್ದಿಸಿರುವ ಲತಾ ಮಂಟಪದಲ್ಲಿ, ಶಕುಂತಳೆ ಇರಬಹುದು ; ಹಾಗೆಯೇಸರಿ.

ಕಂದ ॥ ಮುಂಗಡೆಯುಬ್ಬಾಗಿ ನಿತಂ ।
ಬಂಗಳಗೌರವದೆಪಿಂತೆತಗ್ಗಾಗಿ ಕರಂ ॥
ಕಂಗೊಳಿಪುದು ಪೊಸಪಜ್ಜೆ ಕು ।
ರಂಗಾಕ್ಷಿಯ ಬಿಳಿಯ ಮಳಲ ಬಾಗಿಲೊಳದರಾ ॥ ೬೦

ಆಗಲಿ, ಈ ಮರದ ಮರೆಯಲ್ಲಿ ನಿಂತು ನೋಡುವೆನು. (ಎಂದು ಸ್ವಲ್ಪ ನಡೆದು ಮರೆಯಾಗಿ ನಿಂತು ನೋಡಿ) *ಆಹ ! ನೇತ್ರಾನಂದವನ್ನು ಹೊಂದಿದೆನು. ಇದೋ ನನ್ನ ಮನೋರಥಕ್ಕೆ ಪ್ರಿಯತಮೆಯಾದ ಶಕುಂತಳೆಯು, ಕು

---

*॥ ರಾಗ—ಪೇಹಾಗ್ ॥ ॥ ರೂಪಕತಾಳ ॥

ಕಂಡೆನೆನ್ನ ಕಾಮಿತಾರ್ಥ ಕಲ್ಪವಲ್ಲಿಯಾ । ಸ್ತ್ರೀಮಂಡಲಮಣಿಯಾ ॥ ಪ ॥ ಪಾಸಿದಪೂ । ವಾಸಿನೊಳುಸ್ಮ । ರಾಸಿಯುಂಪದಿ । ಮಲಗಿಹಳೀ ಮಡದಿ ॥ ೧ ॥ ಬಳಸಿಚಿತ್ತ ವೆಳಸಿದಂತೆ । ಕೆಳದಿಯಕ್ಕರ್ಗಳೂ । ಬಳಿಯೊಳು ಸೇವಿಪರು ॥ ೨ ॥ ಕೇಳುತಿರ್ಪ್ಪೆನಿಲ್ಲಿ ಮುದದಿ । ಪೇಳುವಿವರ್ಗಳ । ಸ್ವೇ । ಚ್ಛಾಲಾಪಗಳ ॥ ೩ ॥

ಸುಮಾಸ್ತರಣದಿಂದ ಕೂಡಿದ ಶಿಲಾಫಲಕದಲ್ಲಿ ಮಲಗಿ, ಸಖಿಯರೊಡನೆ ಸಂತೈಸಲ್ಪಡುತ್ತಿರುವಳು. ಒಳ್ಳೇದು ಇವರ ಸ್ವೇಛ್ಛಾಲಾಪಗಳನ್ನು ಕೇಳುವೆನು. (ಎಂದು ನೋಡುತ್ತ ನಿಂತಿರುವನು) (ಅನಂತರ ಪೂರ್ವೋಕ್ತವ್ಯಾಪಾರವುಳ್ಳ ಶಕುಂತಳೆ ಸಖಿಯರೊಡನೆಪ್ರವೇಶಿಸುವಳು.)

ಸಖಿಯರು.—(ವೀಸುತ್ತ ಸ್ನೇಹದಿಂದ ಕೂಡಿ) ಎಲೆ ಸಖಿ ಶಕುಂತಳೆ, ತಾವರೆಯೆಲೆಯ ಗಾಳಿಯು ನಿನಗೆ ಹಿತವಾಗಿರುವದೆ ?

ಶಕುಂ.—ಎಲೌ ಸಖಿಯರೆ ತಾವರೆಯೆಲೆಯಿಂದ ನನ್ನನ್ನು ಏತಕ್ಕೆ ಬೀಸುವಿರಿ ?

(ಸಖಿಯರು ದುಃಖವನ್ನು ಅಭಿನಯಿಸಿ ಒಬ್ಬರನ್ನೊಬ್ಬರು ನೋಡುವರು.)

ರಾಜಂ.—ಅಯ್ಯೋ ! ಶಕುಂತಳೆ ಬಹಳ ಬಳಲಿರುವಂತೆ ಕಾಣುವಳು (ಆಲೋಚಿಸಿ) ಇದೇನು

ಆತಪದೋಷವಾಗಿರಬಹುದೆ ? ಅಲ್ಲದಿದ್ದರೆ ನನ್ನ ಮನಸ್ಸಿನಲ್ಲಿರುವಂತೆ ಇದ್ದೀತೆ ? (ಅಭಿಲಾಷೆಯಿಂದ ನೋಡಿ) ಅಥವಾ ಸಂಶಯವೇತಕ್ಕೆ ?

ವೃತ್ತ॥ ಕರವಿಸ್ರಂಸಿ ಮೃಣಾಳಕಂಕಣದೆ ವಕ್ಷೋಜಾರ್ಪಿತೋಶೀರದಿಂ।
ಬೆರೆದೀ ಮತ್ಪ್ರಿಯೆ ಯಂಗ ಮಿಂತು ಮಳಲಾಂತುಂ ನೋಡೆ ಕಣ್ಗೊಪ್ಪುಗುಂ ॥
ಪರಿತಾಪಂ ಸಮ ಮಾದೊಡಂ ಮನಸಿಜ ಗ್ರೀಷ್ಮಪ್ರಸಾರಂಗಳೊಳ್
ತರುಣೀ ಸಂಕುಲದೊಳ್ನಿದಾಘ ಪರಿತಾಪಂ ರಮ್ಯಮಲ್ತೀತೆರಂ ॥ ೬೧

ಪ್ರಿಯಂ.—(ಶಕುಂತಳೆಗೆ ಮರೆಯಾಗಿ) ಎಲೆ ಅನಸೂಯೆ ಆ ರಾಜಋಷಿಯನ್ನು ನೋಡಿದ್ದು ಮೊದಲಾಗಿ ಶಕುಂತಳೆ ಪರ್ಯುತ್ಸುಕಳಾಗಿರುವಂತಿದೆ ಈಕೆಯ ಆತಂಕಕ್ಕೆ ಆತನೇ ನಿಮಿತ್ತವಾಗಿರಬಹುದೋ ಏನೊ ?

ಅನ.—ಎಲೆ ಸಖಿ ನನ್ನ ಮನಸ್ಸಿಗೂ ಹೀಗೆ ತೋರುವದು. ಒಳ್ಳೆದು, ಇವಳನ್ನು ಕೇಳುವೆನು. (ಪ್ರಕಾಶವಾಗಿ) ಸಖಿ ಶಕುಂತಳೆ ಒಂದು ವಿಷಯವನ್ನು ಕುರಿತು ನಿನ್ನನ್ನು ಕೇಳಬೇಕಾಗಿದೆ, ನಿನ್ನ ಸಂತಾಪವಾದರೊ ಹೆಚ್ಚಾಗಿರುವದು.

ಶಕುಂ.—(ಮಲಗಿದ್ದಹಾಗೆ ಅರ್ಧ ಎದ್ದು) ಎಲೆ ಸಖಿ ಏನನ್ನು ಕೇಳಬಿಚ್ಛೈ ಸುವೆ?

ಅನ.—ಎಲೆ ಸಖಿ, ಮನ್ಮಥ ವೃತ್ತಾಂತವನ್ನಾದರೊ, ನಾವು ಅರಿದವರೇ ಅಲ್ಲ. ಆದರೆ, ಇತಿಹಾಸಗಳಲ್ಲಿ ಪುರುಷರಲ್ಲಿ ಅನುರಕ್ತೆಯರಾದವರ ಅವಸ್ಥೆಯನ್ನು, ಕೇಳಬಲ್ಲೆವು. ನಿನ್ನ ಅವಸ್ಥೆಯೂ ಹಾಗೆಯೇ ಇರುವದು. ಹೇಳು, ನಿನ್ನ ಸಂತಾಪಕ್ಕೆ ನಿಮಿತ್ತವೇನು? ತಾಪಕ್ಕೆ ನಿಮಿತ್ತವನ್ನು ನಿಜವಾಗಿ ತಿಳಿಯದೆ ಪರಿಹರಿಸಲು ಪ್ರಾರಂಭಿಸಕೂಡದಷ್ಟೆ?

ರಾಜಂ.—ನನ್ನ ಮನಸ್ಸಿನಲ್ಲಿ ಉಂಟಾದ ವಿಚಾರವು ಅನಸೂಯೆಯಲ್ಲಿಯೂ, ಸಂಭವಿಸಿತು.

ಶಕುಂ.—(ತನ್ನಲ್ಲಿ ತಾನು) ನನ್ನ ಅಭಿಲಾಷೆಯಾದರೊ, ಬಲೀಯುವಾಗಿದೆ. ಅದನ್ನು ಶೀಘ್ರವಾಗಿ ಇವರಿಗೂ ತಿಳಿಸಲಾರೆನು.

ಪ್ರಿಯಂ.—ಸಖಿ ಶಕುಂತಳೆ, ಈಕೆ ಚೆನ್ನಾಗಿ ಹೇಳಿದಳು. ಏತಕ್ಕೆ ನಿನ್ನ ಆತಂಕವನ್ನು ನೀನೇ ಉಪೇಕ್ಷಿಸುವೆ? ದಿನೇದಿನೇ, ಬಡವಾಗುತ್ತಿರುವೆ; ಆದರೂ ನಿನ್ನ ಶರೀರದ ಕಾಂತಿ ಕುಂದದಿರುವದು.

ರಾಜಂ.—ಪ್ರಿಯಂವದೆ ಹೇಳಿದ್ದು ನಿಜ; ಹಾಗೆಯೆಸರಿ.

ವೃತ್ತ॥ ಇಳಿದತ್ತಂಸಂಕಪೋಲಂ ಕಡುಬಡವೆನಿಕುಂ ಬಿಣ್ಪನೀಗಿತ್ತುರೋಜಂ
ಬೆಳರ್ವಣ್ಣಂ ಮೆಯ್ಗೆತೀವಿತ್ತಸಿಯುನಡು ಬಳಲ್ದಿರ್ಪ್ಪದಿಂತಿರ್ದ್ದವಿಾ
ಕೆಯೋ॥
ಮಳೆ ಕಾಮಕ್ಲಿಷ್ಟೆ ಚಿತ್ತಕ್ಕಳಲನೊಲವುಮಂ ಪುಟ್ಟಿಪಳ್ನೋಡೆ
ಪತ್ರಾ।
ವಳಿ ಶೋಷಂ ಬೆತ್ತಚೈತ್ರಾಗಮ ಪವನಪರಿಸ್ಪೃಷ್ಟವಾಸಂತಿಯಾ
ವೊಲ್॥ ೬೦

ಶಕುಂ.—ಎಲೆ ಸಖಿ ಇನ್ಯಾರಿಗೆ ಹೇಳಲಿ? ಆದರೆ ನಿಮ್ಮನ್ನು ಆಯಾಸಪಡಿಸುವವಳಾಗುವೆನು.

ಇಬ್ಬರೂ.—ಆದ್ದರಿಂದಲೇ ಇಷ್ಟು ನಿರ್ಬಂಧವು. ಆಪ್ತರಲ್ಲಿ ಹೇಳಿಕೊಂಡ ದುಃಖವು ಸ್ವಲ್ಪ ಕಡಮೆಯಾಗುವದಿಲ್ಲವೆ?

ರಾಜಂ.—ವೃತ್ತ॥ ಸಮಸುಖದುಃಖವಾದ ಜನವೀಕೆಯು ನೀಪರಿಯಿಂದ
ಕೇಳಲೀ ।
ರಮಣಿ ಇವರ್ಗ್ಗೆ ಪೇಳದಿರಲಾರ್ಪಳೆ ಮಾನಸದಾಧಿಹೇತುವಂ ॥
ಗಮಿಸುತೆ ಪಿಂದಿರುಂಗಿದಿವಳೊಲ್ಮೆಯು ನೋಟದೆ ಕೂರ್ತ್ತಳೆಂಬ
ಭಾ ।
ವಮ ಸರಿದಿದ್ರೊಡಂಕಳವಳಂಬಡುಗುಂಮನವಾಲಿಪನ್ನೆಗಂ ॥೬೩

ಶಕುಂ.—*ಎಲೆ ಸಖಿ, ತಪೋವನ ರಕ್ಷಕನಾಗಿಬಂದ ಆರಾಜಋಷಿಯು ನ್ನು ನೋಡಿದ್ದು ಮೊದಲಾಗಿ—(ಎಂದೊಡನೆ ಲಜ್ಜೆಯಂ ನಟಿಸುವಳು)

ಇಬ್ಬರೂ.—ಎಲೆ ಪ್ರಿಯಸಖಿ ಹೇಳು ಲಜ್ಜೆಯೇತಕ್ಕೆ?

ಶಕುಂ.—ಆತನಲ್ಲಿ ಉಂಟಾದ ಅಭಿಲಾಷೆಯಿಂದ ಈ ಅವಸ್ಥೆಯನ್ನು ಹೊಂದಿದೆನು.

(ರಾಜಂ.—ಸಂತೋಷದಿಂದ ಕೂಡಿ) ಕೇಳತಕ್ಕದ್ದನ್ನು ಕೇಳಿದೆನು!

ಕಂದ॥ ಮನಸಿಜನೆ ತಾಪಕಾರಣ ।
ನೆನಿಸಿದ ನೆನಗವನೆ ಸೌಖ್ಯಕಾರಕನಾದಂ ॥
ಘನ ನೀಲವಾದ ದಿವಸಂ ।
ಜನವುಂ ಸಂತೋಷಿಪಂತೆ ಬೇಸಗೆ ಪೋಗಲ್ ॥ ೬೪

---

*ರಾಗ—ಕಾಪಿ. ॥ ಆದಿತಾಳ ॥

ಎಂತು ಸೈರಿಪೆಸಖೀ । ಚಿಂತೆಯರಾಕೇಂದುಮುಖೀ ॥ ಪ ॥ ಎಂದಾರಾಯನನಗೆ ಮೊಗ । ದಂದವನಾನೀಕ್ಷಿಸಿದೆನೊ । ಅಂದುಮೊದಲೀಕಾಮನ । ದಂದುಗಕೊಳಗಾದೆನಾ ॥೧॥ ತಾಪವನಾರಿಸಲಾಪುರು । ಭೂಪನ ಕಾರುಣ್ಯಾಮೃತ ॥ ಲೇಪವದೊಂದಲ್ಲದೆಬೇ । ರೇಪರಿಯಿಂದಪ್ಪುದೌ ॥ ೨ ॥ ಅಭಿಮತವಾದೊಡೆ ನಿಮಗಾ । ವಿಭುವನುಕ್ಕೈಗೂಡಿಪೆವೆಂ ॥ ದಭಯುವ ಕೊಡಿಯಲ್ಲದೊಡೆ । ನ್ನಭಿಲಾಷೆಯನೇ ಬಿಡಿ ॥ ೩ ॥

ಶಕುಂ.—ಅದು ನಿಮಗೆ ಸಮ್ಮತವಾದರೆ, ನನ್ನಲ್ಲಿ ಆ ರಾಜಋಷಿಗೆ ದಯೆ ಉಂಟಾಗುವಂತೆ ಯತ್ನಿಸಿ; ಇಲ್ಲದಪಕ್ಷದಲ್ಲಿ, ಅವಶ್ಯವಾಗಿ ನನಗೆ ತಿಲೋದಕವನ್ನು ಬಿಡಿ.

ರಾಜಂ.—ಇದೀಗ ಸಂದೇಹ ಪರಿಹಾರಕವಾದ ಮಾತು.

ಪ್ರಿಯಂ.—(ಶಕುಂತಳೆಗೆ ಮರೆಯಾಗಿ) ಎಲೆ ಅನಸೂಯೆ, ಇವಳ ಮನ್ಮಥಾವಸ್ಥೆ ಮೀರುತ್ತಾ ಬಂತು; ಇನ್ನು ಕಾಲಹರಣ ಮಾಡಿದರೆ ಇವಳು ಸೈರಿಸಲಾರಳು. ಈಕೆ ಯಾವ ಪುರುಷನಲ್ಲಿ ಅನುರಕ್ತೆಯಾಗಿರುವಳೋ ಆತನು ಪುರುಕುಲಕ್ಕೆ ಅಲಂಕಾರಭೂತನು; ಆದ್ದರಿಂದ ಇವಳ ಅಭಿಲಾಷೆ ಶ್ಲಾಘ್ಯವಾದದ್ದು.

ಅನ.—ಹೌದು ನೀನು ಹೇಳಿದ್ದು ಸರಿ.

ಪ್ರಿಯಂ.—(ಪ್ರಕಾಶವಾಗಿ) ಎಲೆ ಸಖಿ, ಇವಳ ಅಭಿಲಾಷೆ ದೈವಯೋಗದಿಂದ ಅನುರೂಪ ವಸ್ತುವನ್ನೇ ಸೇರಿತು. ಮಹಾನದಿಯು ಸಮುದ್ರವನ್ನು ಬಿಟ್ಟು ಇನ್ನೆಲ್ಲಿತಾನೆ ಸೇರುವದು? ಮಾವಿನಮರವಲ್ಲದೆ ಪಲ್ಲವಿಸಿದ ಮಲ್ಲಿಕಾಲತೆಗೆ ಇನ್ನಾವ ಮರತಾನೆ ಆಶ್ರಯವಾದೀತು?

ರಾಜಂ.—ವಿಶಾಖಾ ನಕ್ಷತ್ರಗಳು ಚಂದ್ರಕಳೆಯನ್ನು ಅನುಸರಿಸಿ ಹೋಗುವ ವಿಷಯದಲ್ಲಿ ಆಶ್ಚರ್ಯವೇನು?

ಅನ.—ಎಲೆ ಪ್ರಿಯಂವದೆ, ನಮ್ಮ ಸಖಿಯ ಮನೋರಥವನ್ನು ಶೀಘ್ರವಾಗಿಯೂ, ಗುಟ್ಟಾಗಿಯೂ, ನೆರವೇರಿಸುವದಕ್ಕೆ ತಕ್ಕ ಉಪಾಯ ಯಾವದು?

ಪ್ರಿಯಂ.—ಗುಟ್ಟಾಗಿ ನೆರವೇರಿಸುವದು ತಾನೇ ಯೋಚಿಸತಕ್ಕದ್ದಾಗಿದೆ; ಶೀಘ್ರವಾಗಿ ನೆರವೇರಿಸುವದೇನೂ ಕಷ್ಟವಲ್ಲ.

ಅನ.—ಅದು ಹ್ಯಾಗೆ ಹೇಳು?

ಪ್ರಿಯಂ.—ಕೇಳು, ಆರಾಜರ್ಷಿಯು ಇವಳಲ್ಲಿ ಸ್ನೇಹಯುಕ್ತವಾದ ದೃಷ್ಟಿಯಿಂದ ತನ್ನ ಅಭಿಲಾಷೆಯನ್ನು ಸೂಚಿಸಿರುವನು. ಆದ್ದರಿಂದ ಈ ದಿವಸಗಳಲ್ಲಿ ನಿದ್ರೆಯಿಲ್ಲದೆ ಕೃಶನಾಗಿರುವಹಾಗೆತೋರುತ್ತದೆ.

ರಾಜಂ.—(ತನ್ನ ಶರೀರವನ್ನು ನೋಡಿಕೊಂಡು) ನಿಜ, ಈಕೆ ಹೇಳಿದಹಾಗೆಯೇ ಇರುವೆನು. ಹ್ಯಾಗೆಂದರೆ:—

ವೃತ್ತ॥ ಇರುಳಿರುಳಲ್ಲಿ ಚಿತ್ತದನುತಾಪದೆ ತೋಳ್ತಲೆಗಿಟ್ಟಪಾಂಗದಿಂ।
ಸುರಿವಕದುಷ್ಣಬಾಷ್ಪದೆ ವಿವರ್ಣಮಣೀಕೃತವಾಗಿ ನಿಂದುಬಿ॥
ಲ್ದಿರುವಿನ ಘಾತಜಾತಕಿಣವೊತ್ತೆ ಸಡಿಲ್ದುಸಡಿಲ್ದು ಬರ್ಪರ।
ತ್ನರುಚಿರಹೇಮಕಂಕಣವನೇರಿಪೆನಾಂ ಮಣಿಬಂಧದತ್ತಣಿಂ॥ ೭೫

ಪ್ರಿಯಂ.—(ಆಲೋಚಿಸಿ) ಅನಸೂಯೆ, ಆತನಿಗೆ ಇವಳೊಂದು ಅನುರಾಗಪತ್ರಿಕೆಯನ್ನು ಬರೆಯಲಿ, ಅದನ್ನು ದೇವತಾಪ್ರಸಾದದ ನೆವದಿಂದ ಹೂವಿಂದ ಮುಚ್ಚಿ ಆ ರಾಜನ ಹಸ್ತವನ್ನು ಸೇರಿಸುವೆನು.

ಅನ.—ಈ ಸುಲಭೋಪಾಯವು ನನಗೆ ಒಪ್ಪಿತು. ಶಕುಂತಳೆ ಏನು ಹೇಳುವಳೊ?

ಶಕುಂ.—ಸಖಿಯರೆ, ನಿಮ್ಮಾಜ್ಞೆಯನ್ನು ನಾನು ಮೀರುವೆನೇ?

ಪ್ರಿಯಂ.—ಹಾಗಾದರೆ, ನಿನ್ನ ಅಭಿಪ್ರಾಯಾನುಸಾರವಾಗಿ ಲಲಿತವಾದೊಂದು ಪದ್ಯವನ್ನು ಯೋಚಿಸು.

ಶಕುಂ.—ಯೋಚಿಸುವೆನು ಆದರೆ, ನಾನು ಬರೆದದ್ದನ್ನು ಆ ಮಹಾರಾಜನು ತಿರಸ್ಕರಿಸುವನೇನೋ ಎಂದು ನನ್ನ ಮನಸ್ಸು ನಡುಗುವದು.

ರಾಜಂ.—(ಸಂತೋಷಯುಕ್ತನಾಗಿ.)

ಕಂದ। ಭೀರುವೆ ಚಿಂತಿಸುವೆ ತಿರ।
ಸ್ಕಾರವ ನೀನಾವನತ್ತಣಿಂದವನೀಗಳ್॥
ಪಾರುತ್ತಿರ್ಪಂ ನಿನ್ನನೆ।
ಸೇರಲ್ ಬರೆ ಭಾಗ್ಯಲಕ್ಷ್ಮಿ ಬಿಡುವನೆ ಬಡವಂ॥ ೭೬

ಸಖಿಯರು.—ಎಲೆ ಸ್ವಗುಣವನ್ನು ಅವಮಾನಿಸುವವಳೆ, ಶರೀರವನ್ನು ಸುಖಪಡಿಸುವ ಶರತ್ಕಾಲದ ಬೆಳದಿಂಗಳನ್ನು, ಯಾರುತಾನೆ ವಸ್ತ್ರದ ಶರಗಿನಿಂದ ನಿವಾರಿಸುವರು?

(ಶಕುಂ.—ನಸುನಗುತ) ಇನ್ನು ನಿಮ್ಮಾಜ್ಞೆಯನ್ನು ನೆರವೇರಿಸುವೆನು (ಎಂದು ಕುಳಿತು ಯೋಚಿಸುವಳು)

ರಾಜಂ.—ರೆಪ್ಪೆಹಾಕುವದನ್ನು ಮರೆದ ಕಣ್ಣುಗಳಿಂದ ನಾನು ಪ್ರಿಯೆಯನ್ನು ನೋಡುವದು ಯುಕ್ತವೇಸರಿ. ಏತಕ್ಕೆಂದರೆ—

ಕಂದ॥ ಮೃದುಪದ ಬಂಧನ ನೆಸಗುವ।
ಸುದತಿಯು ನಿಮಿರ್ದೆತ್ತಿದೊಂದು ಪುರ್ವಿಂ ಮೆರೆವೀ॥
ವದನಂ ಪುಲಕಂಗೂಡಿದ।
ಕದಪಿಂ ಕನ್ನಡಿಪುದೆನ್ನೊಳಿರ್ಪಭಿರತಿಯಂ॥ ೬೭

ಶಕುಂ.—ಎಲೌ ಸಖಿಯರೆ, ಬಂದು ಗೀತಿಯನ್ನು ಆಲೋಚಿಸಿರುವೆನು; ಲೇಖನ ಸಾಮಗ್ರಿ, ಸಮೀಪದಲ್ಲಿಲ್ಲವಲ್ಲ?

ಪ್ರಿಯಂ.—ಶುಕೋದರದಂತೆ ಕೋಮಲವಾದ ಈ ತಾವರೆಯೆಲೆಯಲ್ಲಿ, ಉಗುರುಗಳಿಂದ ಬರೆ.

ಶಕುಂ.—(ಹೇಳಿದಂತೆ ಬರದು) ಸಖಿಯರೆ, ಕೇಳಿ; ಇದೇನು ಅರ್ಥ ಸಂಗತವಾಗಿರುವದೋ ಇಲ್ಲವೊ?

ಇಬ್ಬರೂ.—ಹೇಳು, ಕೇಳುವದಕ್ಕೆ ಸಿದ್ಧರಾಗಿರುವೆವು.

ಶಕುಂ.—(ಓದುವಳು).

ಕಂದ॥ ನಾನರಿವಳಲ್ತು ನಿನ್ನಯ।
ಮಾನಸಮಂ ಮದನ ನಾಮೊಡಿರುಳುಂ ಪಗಲುಂ॥
ಹಾಸಿರ್ದಯುತ ಪಿಸುವನಕ।
ಟಾ ನಿನ್ನೊಳ್ಕೂಡಲೆಳಸಿದೆನ್ನಂಗಗಳಂ॥ ೬೮

ರಾಜಂ.—(ಬೇಗನೆ ಸವಿಾಪಕ್ಕೆ ಬಂದು)

*ಕಂದ॥ ತನುಗಾತ್ರಿ ನಿನ್ನ ತಪಿಪಂ ।
ಮನಸಿಜನಾವಗಮು ಮೆನ್ನನಾದೊಡೆದಹಿಪಂ ॥
ವನಜಾರಿಯು ಕಂದಿಪವ್ರೋಲ್ ।
ದಿನವುನುಕು ಮುದಿನಿಯುಪಿರಿದು ಕಂದಿಸಿದಪುದೇಂ ॥ ೬೯

ಸಖಿಯರು.—(ನೋಡಿ ಸಂತೋಷದೊಡನೆ ಎದ್ದು) ಸಾವಕಾಶವಿಲ್ಲದ ಮನೋರಥಕ್ಕೆ ಸುಖಾಗವುನವೆ.

ಶಕುಂ.—(ಏಳುವದಕ್ಕೆ ಇಚ್ಛೈಸುವಳು)

ರಾಜಂ.—†ಸಾಕು, ಸಾಕು, ಆಯಾಸವೇತಕ್ಕೆ ?

†ಕಂದ॥ ಪರಿತಾಪದಿನಲರ್ವಾಸೋಳ್ ।
ಪೊರಳ್ದುವೋಽ ಧೂಸರಾಂತ ಬಿಸಖಂಡಗಳಿಂ ॥
ಪರಿಮಳಿಪ ನಿನ್ನ ಮೆಲ್ಲೊಡ ।
ಲಿರದೇಳು ತ್ತಿಂತಿದೆನ್ನ ನಿಂದುಪಚರಿಕುಂ ॥ ೭೦

ಅನ.—ಎಲೈ ಮಿತ್ರನೆ ಈ ಶಿಲಾತಲದ ಒಂದು ಭಾಗವನ್ನು ಅಲಂಕರಿಸಬೇಕು.

---

*ರಾಗ—ತೋಡಿ. ॥ ರೂಪಕತಾಳ ॥

ಭಾವವನರಿಯದೆ ಕಾಮಿನಿ । ಪೇಳ । ಲೇ ವೇಳ್ವನು ಗಜಗಾಮಿನಿ । ಎನ್ನ ಭಾವ ॥ಪ॥ ಸ್ಮರನಿನ್ನ ತಪಿಸುತ । ಲಿರುತಿಹನೆನ್ನ ನಾ । ದರೆಸುಡುತಿಹನೆಲೆ ಸುಂದರಿ ॥ ೧ ॥ ಹಗಲುಚಂದ್ರಮನ ತಾಂ । ಹಗರಣಗೊಳಿಪಂತೆ । ಮುಗುದೆನ್ನೈದಿಲೆಯುನ್ನು ಕಾಡದು ॥ ೨ ॥ ಹಾ ನಿರ್ದಯನೆಂದು । ನೀನೆಂದಮಾತೆನ್ನ । ಮಾನಸವನು ಚುಚ್ಚುತಿರ್ಪುದು ॥ ೩ ॥

†ರಾಗ—ಮೋಹನಕಲ್ಯಾಣಿ. ॥ ಆದಿತಾಳ ॥

ಏಳಬೇಡವೇ ಪ್ರಿಯೆಸೀ ನೇಳಬೇಡವೆ ॥ ಪ ॥ ಬಾಲೆಯೆ ವೃದಿತ ಪ್ರ । ಣಾಳವೆನಿಪನಳಿ । ತೋಳನೂರಿನೀ । ನೇಳುವದೆಂತಕಟೇಳೆಬೇಡವೆ ॥ ೧ ॥ ಗುರುಪರಿತಾಪದೆ । ಕೊರಗಿದೊಡಲಿದುಪ । ಚರಿಸೆ ಶಕ್ಯವೇ ತರುಣೀಮಣಿಸೀನೇಳ ॥ ೨ ॥ ಆಯಸವೇಕಿನಿ । ತಾಯತಾಕ್ಷಿನೀಂ । ನೋಯದಿರಲುನನ । ಗಾಯಿತಖಿಲವಿರದೇಳಬೇಡವೆ ॥ ೩ ॥

(ರಾಜನು ಕುಳಿತುಕೊಳ್ಳುವನು. ಶಕುಂತಳೆ ಲಜ್ಜೆಯೊಡನೆ ನಿಂತಿರುವಳು).

ಪ್ರಿಯಂ.—ಎಲೈ ಮಿತ್ರನೆ ನಿಮ್ಮಿಬ್ಬರ ಅನುರಾಗವು ಪ್ರತ್ಯಕ್ಷವಾಗಿರುವದು, ಹಾಗಾದರೂ ಸಖೀ ಸ್ನೇಹವು ನನ್ನನ್ನು ಹೇಳಿದ್ದನ್ನೇ ಹೇಳುವಂತೆ ಮಾಡುವದು.

ರಾಜಂ.—ಎಲೌ ಮಂಗಳಾಂಗಿಯೆ, ಇದು ಹೇಳದೆ ಬಿಡತಕ್ಕದ್ದಲ್ಲ; ಹೇಳಬೇಕಾದ್ದನ್ನು ಹೇಳದಿದ್ದರೆ ಅನುತಾಪವನ್ನುಂಟುಮಾಡುವದು.

ಪ್ರಿಯಂ.—ರಾಜನಾದವನು ತನ್ನ ದೇಶದಲ್ಲಿ ವಿಪತ್ತನ್ನು ಹೊಂದಿದ ಜನದ ದುಃಖವನ್ನು ಹೋಗಲಾಡಿಸತಕ್ಕವನು; ಇದು ನಿಮಗೆ ಧರ್ಮವಲ್ಲವೆ?

ರಾಜಂ.—ಇದಕ್ಕಿಂತಲೂ ಬೇರೆ ಇನ್ನೊಂದಿಲ್ಲ.

ಪ್ರಿಯ.—*ಕೇಳು, ಈ ನಮ್ಮ ಪ್ರಿಯಸಖಿಯು ನಿನಗಾಗಿಯೇ ಪೂಜ್ಯನಾದ ಮನ್ಮಥನಿಂದ ಈ ಅವಸ್ಥೆಗೆ ಒಳಗಾದಳು. ಆದ್ದರಿಂದ ದಯವಿಟ್ಟು ನೀನು ಈಕೆಯ ಪ್ರಾಣವನ್ನು ಉಳಿಯಿಸತಕ್ಕದ್ದು.

ರಾಜಂ.—ಎಲೌ ಮಂಗಳಾಂಗಿಯೇ, ಈ ಪ್ರಾರ್ಥನೆ ಉಭಯ ಸಾಧಾರಣವಾದದ್ದು. ಸರ್ವ ಪ್ರಕಾರದಿಂದಲೂ ಅನುಗ್ರಹಿಸಲ್ಪಟ್ಟೆನು.

ಶಕುಂ.—(ಪ್ರಿಯಂವದೆಯನ್ನು ನೋಡಿ) ಎಲೆಸಖಿ, ರಾಣಿವಾಸವನ್ನಗಲಿ ಹಂಬಲಿಸುವ ರಾಜರ್ಷಿಯನ್ನು ಏತಕ್ಕೆ ನಿರ್ಬಂಧಪಡಿಸುವೆ?

---

*ರಾಗ—ಶಂಕರಾಭರಣ. ॥ ಆದಿತಾಳ ॥

ಚಿತ್ತವಿಪ್ಪುದು ಭೂಪನೆ । ಚಿತ್ತಜರೂಪನೆ ॥ ಪ ॥ ಈ ಶಶಿಮುಖಿಯು । ದ್ವೇಶಿಸಿನಿನ್ನನೆ । ಕ್ಲೇಶಪಡುವಳು ಕು । ಶೇಶಯಶರನಿಂ ॥ ೧ ॥ ಪೇಳಲೇನಿವಳ । ಬಾಳುವೆನಿನ್ನಕೃ । ಪಾಲೋಕದೊಳಿಹು । ದಾಲೋಚಿಸುನೀಂ ॥ ೨ ॥ ಅದರಿಂದೀಕೆಯ । ಮದುವೆಯಾಗಿನೀಂ । ಬದುಕಿಪುದೊಲವಿಂ । ಸದಯ ಹೃದಯನೆ ॥ ೩ ॥

ರಾಜಂ.—ಎಲೆ ಸುಂದರಿ—

ಕಂದ॥ ಮದಿರಾಕ್ಷಿ ನಿನ್ನೊಳಲ್ಲದೆ!
ಹೃದಯಂ ಪೆರಳಲ್ಲಿ ಸೇರದಿಪ್ಪುದನರಿದುಂ ॥
ಹೃದಯಗತೆಯೆನಿಸಿ ನೀನುಸು ।
ರಿದೊಡಿಂ ತಾಂ ಮಗುಳೆ ಮದನನಿಂ ಹತನಾದೆಂ ॥ ೩೧

ಅನ.—ಎಲೈ ಮಿತ್ರನೆ, "ರಾಜಾನೋ ಬಹುವಲ್ಲಭಾಃ" ಎಂದು ಕೇಳಿರುವೆವು. ನಮ್ಮಿ ಪ್ರಿಯಸಖಿಯ ವಿಷಯದಲ್ಲಿ ಬಂಧುಜನರು ವ್ಯಸನಪಡದಹಾಗೆ, ನೀನು ನಿರ್ವಹಿಸಿಕೊಳ್ಳಬೇಕು.

ರಾಜಂ.—ಎಲೌ ಮಂಗಳಾಂಗಿಯೆ, ಬಹಳ ಮಾತುಗಳಿಂದೇನು?

ಕಂದ॥ ಪಲವರಸಿಯರೆನಗಿರ್ದೊಡಂ ।
ಕುಲದುತ್ಕರ್ಷಾಸ್ಪದಂಗಳೆನಿಸುಗುಮಿರ್ವರ್ ॥
ಜಲನಿಧಿರಶನಾಂಚಿತೆಯಾ ।
ದಿಳೆಯುಂ ನಿಮ್ಮಿರ್ವರಿಷ್ಟಸಖಿಯಾದಿವಳುಂ ॥ ೩೦

ಸಖಿಯರಿಬ್ಬರೂ.—ನಿಶ್ಚಿಂತರಾದೆವು.

ಪ್ರಿಯಂ.—(ಕಣ್ಣು ಸನ್ನೆಯಿಂದ) ಎಲೆ ಅನಸೂಯೆ, ಈ ಜಿಂಕೆಮರಿಯು ತಾಯನ್ನು ಕಾಣದೆ, ಕಳವಳಗೊಂಡು ಇತ್ತತ್ತ ಹುಡುಕುತ್ತಿರುವದು: ನಡೆ, ಇದನ್ನು ಸೇರಿಸೋಣ, (ಎಂದು ಹೊರಡಲು).

ಶಕುಂ.—ಎಲೌ ಸಖಿಯರೆ, ನನಗೆ ರಕ್ಷಕರು ಯಾರು? ಇಬ್ಬರಲ್ಲಿ ಯಾರಾದರು ಒಬ್ಬರು ಬನ್ನಿ.

ಇಬ್ಬರೂ.—ಭೂಮಂಡಲಕ್ಕೆ ರಕ್ಷಕನಾದವನೇ ನಿನ್ನ ಸಮೀಪದಲ್ಲಿರುವನು. (ಎಂದು ಹೊರಟುಹೋದರು).

ಶಕುಂ.—ಇನ್ನೇನು ಗತಿ! ಹೊರಟೇ ಹೋದರು!

ರಾಜಂ.—ಸಾಕು, ಸಾಕು, ಏತಕ್ಕೆ ಭಯಪಡುವೆ? ಆರಾಧಿಸುವ ಜನವು ನಿನ್ನ ಸಮೀಪದಲ್ಲಿಯೇ ಇಲ್ಲವೆ?

ವೃತ್ತ॥ ಬಳಲಿಕೆಪಿಂಗುವಂತೆ ನಿನಗಾಂ ನಳಿನೀದಳತಾಳವೃಂತದಿಂ।
ಸುಳಿಯಿಪೆನೇಂಕುಳಿರ್ವಸಪತಂಬೆಲರಂಕರಭೋಪವೋರುವೋಣ್ ॥
ತಳೆದು ಮದಂಕದೊಳ್ಮಲರ್ದತಾವರೆಯಂತಿರೆ ಕೆಂಪನಾಂತುಕಂ ।
ಗೊಳಿಸುವ ನಿನ್ನ ಮೆಲ್ಲಡಿಯನೊತ್ತುವೆನೇಂ ಸುಖಮಪ್ಪವಾಳ್ಕೆಯಿಂ॥

ಶಕುಂ.—ಮಾನನೀಯರ ವಿಷಯದಲ್ಲಿ ಸ್ವಾತಂತ್ರ್ಯದಿಂದ ನಡೆದು ನಾನು ಅಪರಾಧಕ್ಕೆ ಗುರಿಯಾಗುವವಳಲ್ಲ. (ಎಂದು ಎದ್ದು ಹೋಗುವಳು),

ರಾಜಂ.—ಎಲೆ ಸುಂದರಿ, ಹಗಲಾದರೆ ಇನ್ನೂ ಕಳೆಯಲಿಲ್ಲ; ನಿನ್ನ ಅವಸ್ಥೆಯಾದರೆ ಈರೀತಿಯಾಗಿರುವದು.

*ಕಂದ॥ ಉಳಿದು ಸುಮಶಯನಮಂ ಮೋಣ್ ।
ನಳಿನೀದಳದಿಂದೆ ರಚಿಸಿದೆದೆ ಗುಪ್ಪಸಮಂ ॥
ಬಳಲಿಕೆಯಂತಳೆದಂಗದೆ ।
ನಳಿನಾಂಬಕೆ ನೀನದೆಂತು ಪೋದಪೆಬಿಸಿಲೊಳ್ ॥ ೭೪

(ಎಂದು ಬಲತ್ಕಾರದಿಂದ ಶಕುಂತಳೆಯನ್ನು ಹಿಂತಿರಿಗಿಸುವನು).

ಶಕುಂ.—ಪುರುಕುಲೋದ್ಭವನೆ, ನಿನ್ನ ಸುಶೀಲತೆಯನ್ನು ರಕ್ಷಿಸಿಕೊಂಬುವದು; ನಾನು ಮದನನ ಕೈಗೊಳಗಾಗಿದ್ದರೂ ಸ್ವಾತಂತ್ರ್ಯವನ್ನು ಅವಲಂಬಿಸುಳಲ್ಲ.

ರಾಜಂ.—†ಎಲೆ ಭೀರುವೆ, ಗುರುಜನಗಳದೆಸೆಯಿಂದ ಏತಕ್ಕೆ ಭಯ

---

*ರಾಗ—ನಾದನಾಮಕ್ರಿಯೆ. ॥ಆದಿತಾಳ॥

ಪೋಪೆಯದೇತಕೆ । ತಾಪಸಕನ್ಯಕೆ । ಈಪರಿಬಿಸಿಲೊಳು । ತಾಪವಾಂತೊಡಲೊಳು ॥೧॥ ಕುಸುಮದಶಯನವ । ಬಿಸಜಿನೀದಳಗಳಿಂ । ದೆಸಗಿದೆದೆಯುಕು । ಪ್ಪಸವನು ಬಿಸುಡುತ ॥೨॥ ಹೊತ್ತಿಳಿವನ್ನೆಗ । ವಿತ್ತಬಾಬಾರೆಲೆ । ಮತ್ತಕಾಶಿನಿಯೆ ಮಾ । ರುತ್ತರವೀಯದೆ ॥೩॥

†ರಾಗ—ಕಮಾಚ್. ॥ ಆದಿತಾಳ ॥

ಅಂಜುವೆಯೇತಕೆ । ಕಂಜಪತ್ರಾಂಬಕೆ ॥ ಪ ॥ ಗುರುಜನವರಿವರೆಂ । ಬುರುತರಭೀತಿಯ । ಧರಿಸುತೆ ಚಿತ್ತದಿ ॥ ೧॥ ನಮ್ಮಭಿಮತವನು । ನಿಮ್ಮವರರಿದರು । ಸಮ್ಮತಿಸುವರು ॥ ೨॥ ಪಾರ್ಥಿವನಾದೆನ್ನ । ಪ್ರಾರ್ಥನೆಯನು ನೀಂ । ಸಾರ್ಥಕವಾಗಿಸೆ ॥ ೩॥

ಪಡುವೆ? ಪೂಜ್ಯರಾದ ಕುಲಪತಿಗಳು ಈ ಸಂಗತಿಯನ್ನು ಕೇಳಿದಾಗ್ಯೂ ಧರ್ಮಜ್ಞರಾದ ಕಾರಣ ಈ ವಿಷಯದಲ್ಲಿ ದೋಷವನ್ನು ಗ್ರಹಿಸುವದಿಲ್ಲ. ಕೇಳು—

ಕಂದ॥ ಸುದತಿಯೆ ಗಾಂಧರ್ವವಿವಾ ।
ಹದೆ ಬಹು ರಾಜರ್ಷಿ ಕನ್ಯೆಯರ್ ಕೂರ್ತ್ತವರಂ ॥
ಪದಪಿಂದೆವರಿಸಿ ನಿಜ ಪಿತೃ ।
ಹೃದಯಕೆ ಮುದವಿತ್ತ ಕಥೆಯ ಕೇಳ್ದರಿಯೆಯನೀಂ ॥ ೨೫

ಶಕುಂ.—ಆರ್ಯನೆ, ಅದುವರಿಗು ನನನ್ನು ಬಿಡು, ಇನ್ನೊಂದುಸಾರಿ ಸಖೀ ಜನದ ಅನುಮತಿಯನ್ನು ಕೇಳುವೆನು.

ರಾಜಂ.—ಆಗಲಿ ಬಿಡುವೆನು.

ಶಕುಂ.—ಯಾವಾಗ ?

ರಾಜಂ.—ಕಂದ। ತುಂಬಿ ನವಾಂಬುಜದಲರೊಳ್ ।
ತುಂಬಿದ ಮಕರಂದ ಕೆಳಸುತಾಸ್ವಾದಿಪವೋಲ್ ॥
ಅಂಬುರುಹ ವದನೆ ನಿನ್ನಯ ।
ಬಿಂಬಾಧರ ಮಧುರ ರಸವನೀಂಟಿವಬಳಿಕಾಂ ॥ ೨೬

(ಎಂದು ಶಕುಂತಳೆಯ ಮುಖವನ್ನು ಮೇಲಕ್ಕೆತ್ತುವದಕ್ಕೆ ಇಚ್ಛೈಸುವನು.)

ಶಕುಂ.—(ನಾಟ್ಯದಿಂದ ಪರಿಹರಿಸುವಳು.)

ತೆರೆಯಲ್ಲಿ.—ಎಲೆ ಚಕ್ರವಾಕ ಸ್ತ್ರೀಯೆ, ನಿನ್ನ ಸಹಚರನನ್ನು ಕುರಿತು ಮಾತಾಡಿಕೊ ; ಸಂಜೆ ಸಮೀಪಿಸಿತು.

ಶಕುಂ.—(ಕಿವಿಗೊಟ್ಟು ತ್ವರೆಯಿಂಧ ಕೂಡಿ) ಪುರುಕುಲೋತ್ಪನ್ನನೆ. ನನ್ನ ಶರೀರದ ವೃತ್ತಾಂತವನ್ನು ತಿಳಿಯುವದಕ್ಕೋಸ್ಕರ ಆರ್ಯೆಯಾದ ಗೌತಮಿಯು ಇತ್ತಲೆ ಬರುವಳು ; ಆದ್ದರಿಂದ ಮರದಕೊಂಬೆಯಲ್ಲಿ ಮರೆಯಾಗು.

ರಾಜಂ.—(ಶಕುಂತಳೆ ಹೇಳಿದ ಹಾಗೆ ಮರದಕೊಂಬೆಯಲ್ಲಿ ಮರೆಯಾಗಿರುವನು.)

(ಅನಂತರ ಪಾತ್ರಹಸ್ತಳಾದ ತಾಪಸಿಯೂ, ಸಖಿಯರೂ ಕೂಡ ಬರುವರು.)

ಸಖಿಯರು.—ಎಲಾ ಗೌತಮಿಯೆ, ಹೀಗೆ ಬರಬೇಕು.

ಗೌತಮಿ.—(ಶಕುಂತಳೆಯ ಬಳಿಗೆ ಬಂದು) ಎಲೆ ಮಗಳೆ ನಿನ್ನ ಶರೀರದ ತಾಪ ಕಡಮೆಯಾಗಿರುವದೆ ಏನು ?

ಶಕುಂ.—ನನಗೆ ಸ್ವಲ್ಪ ಗುಣವಾಗಿದೆ.

ಗೌತಮಿ.—ಮಂತ್ರ ಪೂತವಾದ ಈ ದರ್ಭೋದಕದಿಂದ ನಿನ್ನ ಶರೀರದ ಬಾಧೆಯಲ್ಲಾ ಪರಿಹರವಾಗುವದು. (ಎಂದು ಶಕುಂತಳೆಯ ಶಿರಸ್ಸಿನಲ್ಲಿ ಪ್ರೋಕ್ಷಿಸಿ) ಮಗಳೆ, ಹಗಲು ಕಳೆಯಿತು ; ನಡೆ, ಪರ್ಣಶಾಲೆಗೆ ಹೋಗೋಣ. (ಎಂದು ಹೊರಟರು.)

ಶಕುಂ.—(ತನ್ನಲ್ಲಿತಾನು) ಎಲೆ ಮನಸ್ಸೆ ಸುಖದಿಂದ ಮನೋರಥ ಕೈಕೂಡಿದಾಗ ಕಳವಳವನ್ನು ಬಿಡದೆ ಹೋದೆ. ಈಗ ಅಗಲಿ ಹಂಬಲಿಸುವ ನಿನಗೇನು ಮಾಡಲಿ ? (ಎರಡನೆ ಹೆಜ್ಜೆಯಲ್ಲಿ ನಿಂತು ಪ್ರಕಾಶವಾಗಿ) ಅತನು ತಾಪಹರವಾದ ಲತಾವಲಯುವೆ ಪುನಶ್ಚ ಉಪಭೋಗಕ್ಕೋಸ್ಕರ ಪ್ರಸಂಗಿಸುವೆನು. (ಎಂದು ಅತಿ ದುಃಖದಿಂದ ಇತರರ ಸಂಗಡ ಹೋಗುವಳು.)

ರಾಜಂ.—(ಮೊದಲಿದ್ದ ಸ್ಥಾನವನ್ನು ಕುರಿತು ಬಂದು ನಿಟ್ಟುಸುರನ್ನು ಬಿಟ್ಟು) *ಆಃ ! ಕೋರಿದ ಕೋರಿಕೆಗಳು ನೆರವೇರುವವಕ್ಕೆ ಎಷ್ಟು ವಿಘ್ನಗಳು ಬರುವವು !

ವೃತ್ತ॥ ಅಡಿಗಡಿಗಂಗುಳೀದಳಗಳಿಂದಧರೋಷ್ಟಗಳಂಮುಸುಂಕುತಂ ।
ಬಿಡು ಬಿಡು ಬೇಡ ಬೇಡೆನಿಪ ನಲ್ನುಡಿಗಳ್ ಕಿವಿಗಳ್ಗೆ ಸೌಖ್ಯಮಂ ॥
ಕುಡೆಹರಿಣಾಕ್ಷಿ ತನ್ನ ಪೆಗಲೆತ್ತೆ ತಿರುಂಗಿಸಿದಾಸ್ಯಪದ್ಮಮಂ ।
ಪಿಡಿದತಿ ಕಷ್ಟದಿಂ ನೆಗಪಿಯುಂ ನೆರೆಚುಂಬಿಸದಾದೆನಾನದಂ ॥ ೨೨

---

* ರಾಗ—ಜಲಾಬ್. ॥ ಆದಿತಾಳ ॥

ಆಹನೋಡೆ ಬಹುವಿಘ್ನವತಿಗಳು । ಈ ಹಿತಾರ್ಥ ಸಂಸಿದ್ಧಿಗಳು ॥ ಪಲ್ಲ ॥ ನಂಬಿಸಿ ಪ್ರಿಯೆಯ ಮು । ಖಾಂಬುಜವನು ಚುಬು । ಕಂಬಿಡಿದೆತ್ತಿಯೂ । ಚುಂಬಿಸದಾದೆ ॥ ೧ ॥
ನಲ್ಲೆ ಭೋಗಿಸಿದೀ । ಬಳ್ಳಿಮಂಟಪದೊಳು । ನಿಲ್ಲುವೆನಕಟಾ ಇ । ನ್ನೆಲ್ಲಿಗೆಪೋಪೆ ॥ ೨ ॥
ಅಸತಿ ಮಲಗಿದ । ಕೌಸುಮಶಯನವಿ । ದೋಸರಿಪುದು ಬಗೆ । ಜೇಸರನಹಹಾ ॥ ೩ ॥
ತಾವರೆಯಲೆಯೊಳ । ಗಾವಧು ಬರೆದಿಹ । ಭಾವಜಪತ್ರವಿ । ದೋನ್ರೊಬಿದ್ದಿಹುದು ॥ ೪ ॥
ಆರಮಣಿಯು ಕರ । ವಾರಿಜದಿಂದಿ ದೊ । ಜಾರಿ ಬಿದ್ದಿಹ ಬಿಸ । ಚಾರು ಕಂಕಣವು ॥ ೫ ॥
ಬಳ್ಳಿಮಂಟಪಕೆ ತಾಂ । ಸೊಲ್ಲಿಸುವಂತಿರೆ । ವಲ್ಲಭೆಯೊಂದುದಕೆಲ್ಲಿ ಸ್ವೈರಣೆಯು ॥ ೬ ॥
ಸರಸಿಜನೇತ್ರೆಯಿಂ । ವಿರಹಿತವಾದೊಡೀ । ಬುರಲಮಂಟಪದಿನಾಂ । ಪೋರಮದಲಾರೆ ॥ ೭ ॥

ಇನ್ನೆಲ್ಲಿಗೆ ತಾನೇ ಹೋಗಲಿ ! ಬಂದುವೇಳೆ ನನ್ನ ಪ್ರಾಣಕಾಂತೆಯಿಂದ ಉಪಭೋಗಿಸಲ್ಪಟ್ಟ ಈ ಲತಾಮಂಟಪದಲ್ಲಿಯೇ, ಬಂದು ಮುಹೂರ್ತ ನಿಲ್ಲುವೆನು.

ವೃತ್ತ॥ ಇದುತಾನಾಕೆಪೊರಳ್ದ ಪುಷ್ಪಶಯನಂ ಕಂದಿರ್ಪ ಕಂಜಾತ ಪ।
ತ್ರದೆ ಸೂಕ್ಷ್ಮಾಗ್ರ ನಖಂಗಳಿಂ ಬರೆದನಂಗಾಲೇಖನಂತಾನಿದಿಂ ॥
ತಿದು ಹಸ್ತಾಬ್ಜದೆ ಜಾರಿದಾಕೆಯ ಮೃಣಾಳೀ ಕಂಕಣಂ ನೋಡಲೀ।
ಸದನಂ ಶೂನ್ಯಮೆನಿಪ್ಪೊಡಂ ಪೊರಮಡಲ್ಕಾನಾರೆನೀತಾಣದಿಂ ॥ ೨೮

ತೆರೆಯಲ್ಲಿ.—ಎಲೈ ಮಹಾರಾಜನೇ.

ಕಂದ॥ ಸಂಜೆಯು ಸವನದೆ ಶಿಖಿಯಿಂ ।
ರಂಜಿತಮಾಗಿರ್ಪ ಹೋಮವೇದಿಯ ಸುತ್ತಲ್ ॥
ಅಂಜಿಸುತಸುರಚ್ಛಾಯಾ ।
ಪುಂಜಂ ಸಂಧ್ಯಾಪಯೋದಕಪಿಶಂ ಚರಿಕುಂ ॥ ೨೯

ರಾಜಂ.—ಇದೊ ಬಂದೆ ಬಂದೆ—(ಎಂದೆಲ್ಲರೂ ಹೋಗುವರು.)

ರಾಗ—ಸುರಟಿ. ॥ ॥ ರೂಪಕತಾಳ ॥

ರಾಜಂ.—ನಾಗವೇಣಿ ನಗರಿಗೆ ನಾಂ । ಪೋಗಿಬರುವೆನೆ ॥ ಪ ॥ ಅರಸುತನದಕಾರ್ಯವೆನ್ನ। ತ್ವರಿತಗೊಳುಪುದು । ಹರುಸದಿಂದ ಕಳುಹಿಸುನೀಂ । ಮರುಗಲಾಗದು ॥ ೧॥

ಶಕುಂ.—ತಡೆಯಲಾರೆ ನಿನ್ನನು ನಾಂ । ಬಿಡಲು ಮಾರೆನು । ಪೊಡವಿಯೊಡೆಯಪೋಪರೆಸಂ । ಗಡಲೆ ಬರುವೆನು ॥ ೨ ॥

ರಾಜಂ.—ಅರಸಿ ನಿನ್ನನಗಲಿ ನಿಮಿಷ । ವಿರಲು ಬಲ್ಲೆನೆ । ಕರಸಿಕೊಂಬೆ ಬೇಗನೆನಾಂ । ಸರಸಿಜಾನನೆ ॥ ೩ ॥

ಶಕುಂ.—ಇಂತುಪೇಳಿಪೋಗಿ ಸೇರ । ಲಂತಪುರವನು । ಅಂತರಂಗವೆಂತಹುದೊಕಾಂತ ಕಾಣೆನು ॥ ೪ ॥

ರಾಜಂ.—ಕಂದ॥ ಅನುದಿನವೊಂದೊಂದಾಗೆಲೆ । ವನಿತಾಮಣಿಯೆಣಿಪುದೆನ್ನ ನಾಮಾಕ್ಷರಮಂ ॥ ಕೊನೆಮುಟ್ಟುವನಿತರೊಳ್ನಿ । ನ್ನನುಕರೆಯಿಪೆನೆನ್ನ ರಾಣಿವಾಸಕೆನಿಜದಿಂ ॥

(ಎಂದು ಶಕುಂತಳೆಯ ಬೆರಳಿಗೆ ಉಂಗುರವನ್ನು ತೊಡಿಸುವನು.)

ಚತುರ್ಥಾಂಕಂ.

(ಅನಂತರ ಪುಷ್ಪಗಳನ್ನು ಕೊಯ್ಯುವದನ್ನು ಅಭಿನಯಿಸುತ್ತ ಇಬ್ಬರು ಸಖಿಯರು ಬರುವರು.)

ಮೊದಲನೇ ಯುವಳು.—ಎಲೆ ಪ್ರಿಯಂವದೆ ಗಾಂಧರ್ವವಿವಾಹ ವಿಧಿಯಿಂದ ಮದುವೆಯಾದ ಶಕುಂತಳೆಯು, ಅನುರೂಪನಾದ ಪತಿಯನ್ನು ಸೇರಿ ಕೃತಕೃತ್ಯಳಾದಳೆಂದು ನನ್ನ ಮನಸ್ಸು ಸಂತೋಷಪಟ್ಟಿತು ; ಆದರೂ ಇದೊಂದು ಚಿಂತಿಸತಕ್ಕದ್ದಾಗಿರುವದು.

ಪ್ರಿಯಂ.—ಅದೇನು ?

ಅನ.—ಈಗ ಆ ರಾಜಋಷಿಯು ಯಾಗವನ್ನು ಮುಗಿಯಿಸಿ ಋಷಿಗಳ ಅಪ್ಪಣೆಯನ್ನು ಪಡೆದು ತನ್ನ ಪಟ್ಟಣಕ್ಕೆ ಹೋಗಿ ರಾಣಿವಾಸವನ್ನು ಸೇರಿದಮೇಲೆ ಇತ್ತಣ ವೃತ್ತಾಂತವನ್ನು ಸ್ಮರಿಸುವನೋ ಇಲ್ಲವೋ ಎಂಬುವದು.

ಪ್ರಿಯಂ.—ನಂಬು, ಆತನ ಆಕೃತಿವಿಶೇಷವು ಅಂಥಾದ್ದಾಗಿ ಕಾಣುವದಿಲ್ಲ ; ಆದರೆ ಈಗ ತಂದೆಗಳು ಈ ವೃತ್ತಾಂತವನ್ನು ಕೇಳಿ ಮನಸ್ಸಿನಲ್ಲಿ ಏನು ತಿಳಿಯುವರೋ ನಾನರಿಯೆನು.

ಅನ.—ನನ್ನ ಹಾಗೆಯೇ ಅವರೂ ಅಭಿಮತಿಸುವರೆಂದು ತಿಳಿಯುವೆನು.

ಪ್ರಿಯಂ.—ಅದು ಹ್ಯಾಗೆ ?

ಅನ.—ಗುಣವಂತನಾದವನಿಗೆ ಕನ್ನೆಯನ್ನು ಕೊಡಬೇಕೆಂಬುವದು ತಂದೆಗೆ ಮುಖ್ಯ ಸಂಕಲ್ಪವು ; ಅದನ್ನು ದೈವವೇ ನೆರವೇರಿಸಿದರೆ ವಿಶೇಷ ಆಯಾಸವಿಲ್ಲದೆ ಗುರುಜನವು ಕೃತಾರ್ಥವಾಗಲಿಲ್ಲವೆ ?

ಪ್ರಿಯಂ.—(ಪುಷ್ಪದ ಪಾತ್ರೆಯನ್ನು ನೋಡಿ) ಎಲೆ ಸಖಿ, ಪೂಜೆಗೆ ಸಾಕಾದಷ್ಟು ಕುಸುಮಗಳನ್ನು ಕೊಯ್ದಾಗಲಿಲ್ಲವೆ ?

ಅನ.—ಎಲೆ ಸಖೀ ಶಕುಂತಳೆಯ ಸೌಭಾಗ್ಯದೇವತೆಯು ಪೂಜಿಸತಕ್ಕದಾಗಿರುವದಷ್ಟೆ.

ಪ್ರಿಯಂ.—ಹೌದು ಹೌದು, (ಎಂದು ಆದೇಕಾರ್ಯವನ್ನು ಉಪಕ್ರಮಿಸುವಳು.

ತೆರೆಯಲ್ಲಿ.—ಇದೋ ನಾನು ಬಂದಿರುವೆನು !

ಅನ.—(ಕೇಳಿ) ಅತಿಥಿಗಳು ಧ್ವನಿಮಾಡುವಂತಿವೆ !

ಪ್ರಿಯಂ.—ಶಕುಂತಳೆ ಪರ್ಣಶಾಲೆಯಲ್ಲಿರುವಳಷ್ಟೆ (ತನ್ನಲ್ಲಿತಾನು) ಇದ್ದರೇನು? ಅವಳ ಮನಸ್ಸುಮಾತ್ರ ಅವಳಲ್ಲಿಲ್ಲ.

ಅನ.—ಆಗಲಿ ಪುಷ್ಪಗಳಷ್ಟೇಸಾಕು. (ಎಂದು ಹೊರಟರು).

ತೆರೆಯಲ್ಲಿ.—ಆಃ ! ಅತಿಥಿ ತಿರಸ್ಕಾರಿಣಿಯೆ !

ಕಂದ॥ ನೀನಾವನ ಚಿಂತಿಸುತೆ ತ।
ಪೋನಿಧಿಯಾದೆನ್ನ ನರಿಯದಾದೆಯೊ ನಿನ್ನಂ ॥
ಏನರುಪಿದೊಡಂ ಸ್ಮರಿಸಂ।
ತಾನಾತಂ ಮುನ್ನಗೈದುದಂ ಮರುಳನವೋಲ್ ॥ ೮೦

ಅನ.—ಹಾಹಾ ! ಚಿಂತಿಸುತ್ತಿದ್ದಹಾಗೆಯೇ ಆಯಿತಲ್ಲಾ ; ಪ್ರೈಮರೆತ ಶಕುಂತಳೆಯು, ಪೂಜ್ಯನಾದ ಯಾವನೋ ಒಬ್ಬನ ವಿಷಯದಲ್ಲಿ ಅಪರಾಧವನ್ನು ಮಾಡಿದಳು ; (ಪುನಃ ನೋಡಿ) ಯಾವನೋ ಒಬ್ಬನಲ್ಲ ! ಈತನು ಸುಲಭಕೋಪನಾದ ದೂರ್ವಾಸನು ; ಹಾಗೆ ಶಪಿಸಿ ತಡೆಯಲಶಕ್ಯವಾದ ಗಮನದಿಂದ ಹಿಂತಿರುಗಿದನು ; ಬೆಂಕಿಗಲ್ಲದೆ ಸುಡುವ ಶಕ್ತಿಯು ಇನ್ನಾರಿಗುಂಟು? ನಡೆ, ಪಾದಗಳಿಗೆ ನಮಸ್ಕರಿಸಿ ಆತನನ್ನು ಹಿಂತಿರುಗಿಸು ; ಅಷ್ಟರಲ್ಲೇ ಅರ್ಘ್ಯೋದಕವನ್ನು ತೆಗೆದುಕೊಂಡು ಬರುವೆನು.

ಪ್ರಿಯಂ.—ಹಾಗಾಗಲಿ (ಎಂದು ಹೋದಳು.)

ಅನ.—(ಎರಡು ಹೆಜ್ಜೆ ನಡೆದು ಎಡವಿದಂತೆ ಅಭಿನಯಿಸಿ) ಅಯ್ಯೋ ! ಅವಸರದಿಂದ ಹೋಗುತ್ತಾ ಎಡವಿ ಪುಷ್ಪಪಾತ್ರೆಯನ್ನು ಕೆಡಹಿದೆನಲ್ಲಾ ! (ಎಂದ ಪುಷ್ಪಗಳನ್ನು ಆರಿಸುವಂತೆ ಅಭಿನಯಿಸುವಳು.)

ಪ್ರಿಯಂ.—ಎಲೆ ಸಖಿ ದೂರ್ವಾಸನು ಸ್ವಭಾವದಿಂದ ವಕ್ರನಾದವನು

ಯಾರು ಹೇಳಿದ ವಿನಯವನ್ನು ತಾನೇ ಪ್ರತಿಗ್ರಹಿಸುವನು? ಆದರೂ ಅವನನ್ನು ಸ್ವಲ್ಪ ದಯಾರ್ದ್ರನನ್ನು ಮಾಡಿದೆನು.

ಅನ.—(ನಸುನಕ್ಕು) ಆತನಲ್ಲಿ ಇಷ್ಟಾದದ್ದೇ ಹೆಚ್ಚು. ಹೇಳು ಹೇಳು.

ಪ್ರಿಯಂ.—ಎಷ್ಟು ನಾನು ಬಡಂಬಡಿಸಿದರೂ ಹಿಂತಿರುಗಲಿಲ್ಲ; ಆಗ ಹೀಗೆ ಬೇಡಿಕೊಂಡೆನು.

ಅನ.—ಹ್ಯಾಗೆ ಹೇಳು.

ಪ್ರಿಯಂ.—ಪೂಜ್ಯರೆ, ತಮ್ಮ ತಪಃಪ್ರಭಾವವನ್ನು ತಿಳಿಯದ ಪುತ್ರಿಯ ಇದೊಂದು ಪ್ರಥಮಾಪರಾಧವನ್ನು ಕ್ಷಮಿಸಬೇಕೆಂದು.

ಅನ.—ಆಮೇಲೆ ಆಮೇಲೆ?

ಪ್ರಿಯಂ.—ಅನಂತರ ಅವರು "ನಮ್ಮ ವಚನವು ತಪ್ಪತಕ್ಕದ್ದಲ್ಲ; ಆದರೆ ಅಭಿಜ್ಞಾನಾಭರಣ ದರ್ಶನದಿಂದ ಶಾಪ ವಿಮೋಚನೆಯಾಗುವದು" ಎಂದು ಹೇಳಿ ಕೂಡಲೆ ಮಾಯವಾದರು.

ಅನ.—ಈಗ ನೆಮ್ಮದಿಯಾಯಿತು. ಆ ರಾಜಋಷಿಯು ಪಟ್ಟಣಕ್ಕೆ ಹೊರಡುವಾಗ ತನ್ನ ನಾಮಾಂಕಿತವಾದ ಮುದ್ರಿಕೆಯನ್ನು ಸ್ಮರಣೆಯನ್ನಿಂಟುಮಾಡತಕ್ಕದ್ದೆಂದು ತಾನೇ ಶಕುಂತಳೆಯ ಬೆರಳಿಗಿಟ್ಟು ಹೋದನು. ಅದರಿಂದ ಶಕುಂತಳೆಗೆ ಉಪಾಯವು ಸ್ವಾಧೀನವಾಗಿರುವದು. ನಡೆ, ಇನ್ನು ದೇವಕಾರ್ಯವನ್ನು ನೆರವೇರಿಸೋಣ (ಎಂದು ಹೋಗಿ)

ಪ್ರಿಯಂ.—(ಶಕುಂತಳೆಯನ್ನು ನೋಡಿ) ಎಲೆ ಅನಸೂಯೆ, ಎಡದ ಕೈಯ್ಯ ಮೇಲೆ ತನ್ನ ಮುಖವನ್ನಿಟ್ಟು, ಚಿತ್ರದಲ್ಲಿ ಬರೆದ ಪ್ರತಿಮೆಯಂತಿರುವ ಪ್ರಿಯಸಖಿಯನ್ನು ನೋಡಿದೆಯಾ? ಪತಿಯ ಚಿಂತೆಯಿಂದ ತನ್ನನ್ನೇ ತಾನು ಮರೆದಿರುವಳು; ಇನ್ನು ಬಂದ ಅತಿಥಿಯನ್ನು ಹ್ಯಾಗೆ ತಿಳಿದಾಳು?

ಅನ.—ಪ್ರಿಯಂವದೆ, ಈ ವೃತ್ತಾಂತ, ನಮ್ಮಿಬ್ಬರ ಮುಖದಲ್ಲೇ ಇರಲಿ ಕಂಡೆಯಾ ಸ್ವಭಾವಕೋಮಲೆಯಾದ ಸಖಿಯನ್ನು ರಕ್ಷಿಸಬೇಕಲ್ಲವೆ?

ಪ್ರಿಯಂ.—ಯಾರು ತಾನೆ ಮಲ್ಲಿಗೆ ಬಳ್ಳಿಗೆ ಬಿಸಿನೀರನ್ನೆರೆಯುವರು?

(ಎಂದು ಹೊರಟುಹೋಗುವರು)

ಇದು ವಿಷ್ಕಂಭಂ.

(ಅನಂತರ ಮಲಗಿದ್ದು ಎದ್ದ ಋಷಿಶಿಷ್ಯನು ಬರುವನು).

ಋಷಿಶಿಷ್ಯನು.—ವೇಳೆಯನ್ನು ತಿಳಿದುಬರುವಂತೆ ಸೋಮತೀರ್ಥದಿಂದ ಬಂದ ಪೂಜ್ಯರಾದ ಕಣ್ವರಿಂದ ಆಜ್ಞಪ್ತನಾಗಿರುವೆನು; ಆದ್ದರಿಂದ ಹೊರಕ್ಕೆ ಹೋಗಿ ರಾತ್ರಿಯೆಷ್ಟು ಉಳಿದಿರುವದೆಂದು ನೋಡುವೆನು. (ಎಂದು ಸ್ವಲ್ಪ ನಡೆದುನೋಡಿ) ಓಹೋ! ಬೆಳಗಾಯಿತು! ಹಾಗೆಯೇ ಸರಿ.

ಕಂದ|| ಸಸಿ ಮುಳುಗುವನೊಂದೆಡೆ ಯುದ |
ಯಿಸುವನದೊಂದೆಡೆದಿನೇಶನಿವರ್ಗಳ ಯುಗಪ ||
ದ್ವ್ಯಸನೋದಯಂಗಳಿವು ದುಃ |
ಖಸುಖಂಗಳೊಳಳೆಯ ನಿಯಮಿಪಂತಿರೆತೋರ್ಕುಂ || ೮೧

ಕಂದ|| ಪೆರೆ ಮರೆಯಾದೊಡೆ ಮುನ್ನಿನ |
ಸಿರಿಯುಳಿದಾನ್ಯೆದಿಲೀಯದಕ್ಷಿಗೆ ಮುದಮಂ ||
ತೆರಳಲ್ಕಿಷ್ಟರ್ ದೇಶಾಂ |
ತರಕಬಲಾಜನದ ಚಿಂತೆ ದುಸ್ಸಹಮಲ್ತೇ || ೮೨

(ತೆರೆಯನ್ನು ಹಾರಿಸಿಕೊಂಡು ಅನಸೂಯೆ ಪ್ರವೇಶಿಸುವಳು).

ಅನ.—ಹೀಗೆ ವಿಷಯ ಪರಾಙ್ಮುಖವಾದ ಜನಕ್ಕೂ ಇದು ತಿಳಿಯದೇ ಬೇರೆಯಿಲ್ಲ; ಹೀಗಿರುವಲ್ಲಿ ಅಂತಪ್ಪ ರಾಜನಾದ ದುಷ್ಯಂತನೂ ನಮ್ಮ ಶಕುಂತಳೆಯ ವಿಷಯದಲ್ಲಿ ಅನ್ಯಾಯ್ಯವನ್ನು ಮಾಡಿದನು.

ಯಜಮಾನ ಶಿಷ್ಯ.—ಸಮೀಪಿಸಿದ ಹೋಮ ಕಾಲವನ್ನು ಗುರುಗಳಿಗೆ ತಿಳಿಸುವೆನು. (ಎಂದು ಹೋಗುವನು).

ಅನ.—ಅಥವಾ ತಿಳಿದಾಗ್ಯೂ ನಾನೇನು ಮಾಡುವೆನು? ಮಾಡತಕ್ಕ ಕಾರ್ಯಗಳಲ್ಲಿಯೂ ನನಗೆ ಕೈಕಾಲುಗಳು ಆಡುವದಿಲ್ಲ; ಆಃ ಸತ್ಯಸಂಧನಲ್ಲದ ದುಷ್ಯಂತನಲ್ಲಿ ಕಪಟವನ್ನರಿಯದ ಶಕುಂತಳೆಯನ್ನು ಸೇರಿಸಿದಕಾಮನು ಈಗ ತನ್ನ ಇಷ್ಟಾರ್ಥವನ್ನು ಪಡೆಯಲಿ; ಒಂದುವೇಳೆ

ದೂರ್ವಾಸನ ಶಾಪವು ಹೀಗೆ ಮಾಡಿದ್ದೀತು; ಹಾಗಲ್ಲದಿದ್ದರೆ ಆ ರಾಜ ಋಷಿಯು ಆ ರೀತಿಯಲ್ಲಿ ಹೇಳಿ ಹೋಗಿ, ಇಷ್ಟು ದಿವಸಗಳಾದಾಗ್ಯೂ ಒಂದು ಪತ್ರಿಕೆಯನ್ನಾದರೂ ಕಳುಹಿಸದಿರುವನೆ? ಆದ್ದರಿಂದ ಸ್ಮೃತಿಯನ್ನು ಕೊಡುವದಕ್ಕೆ ಇಲ್ಲಿಂದ ಉಂಗುರವನ್ನು ಕಳುಹಿಸಿ ಕೊಡುವೆನು; ದುಃಖಶೀಲವಾದ ತಪಸ್ವಿಜನರನ್ನು ಯಾರುತಾನೇ ಪ್ರಾರ್ಥಿಸುವರು; ಸಖಿಯನ್ನು ಹೊಂದುವ ತಪ್ಪೆಂದು ನಿರ್ಣಯಿಸಿದ್ದರೂ ಸೋಮ ತೀರ್ಥದಿಂದ ಬಂದ ತಂದೆಯಾದ ಕಣ್ವರಿಗೆ ದುಷ್ಯಂತನನ್ನು ವರಿಸಿ ಶಕುಂತಳೆ ಗರ್ಭಿಣಿಯಾಗಿರುವಳೆಂದು ಹ್ಯಾಗೆ ತಿಳಿಸಲಿ? ತಿಳಿಸಲಾರೆ ಹೀಗಿರುವಲ್ಲಿ ಇನ್ನು ನಾನು ಮಾಡತಕ್ಕದ್ದೇನು?

(ಪ್ರಿಯಂವದೆ ಪ್ರವೇಶಿಸಿ ಹರ್ಷದಿಂದ)

ಪ್ರಿಯಂ.—ಎಲೆ ಸಖಿ, ಏಳು ಏಳು! ಶಕುಂತಳೆಯ ಪ್ರಸ್ಥಾನ ಮಂಗಳವನ್ನು ನೆರವೇರಿಸೋಣ.

ಅನ.—ಇದೇನು!

ಪ್ರಿಯಂ.—ಕೇಳು, ಈಗ ನಾನು ಸುಖನಿದ್ರೆಯನ್ನು ಕೇಳುವದಕ್ಕೆ ಶಕುಂತಳೆಯ ಸಮೀಪಕ್ಕೆ ಹೋಗಿದ್ದೆನು.

ಅನ.—ಆಮೇಲಾಮೇಲೆ!

ಪ್ರಿಯಂ.—ಆಗ ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡು ನಿಂತಿದ್ದ ಶಕುಂತಳೆಯನ್ನು ಆಲಿಂಗಿಸಿಕೊಂಡು ತಂದೆಗಳು ಹೀಗೆ ಕೊಂಡಾಡಿದರು; ಹೊಗೆಯಿಂದ ಕಣ್ಣುಗಳನ್ನು ತೆರೆಯದಿದ್ದರೂ ಯಜಮಾನನ ಕೈಯಿಂದ ಆಹುತಿಯು ದೈವಯೋಗದಿಂದ ಅಗ್ನಿಯಲ್ಲೇ ಬಿತ್ತು. ಎಲೆ ಮಗಳೆ, ಸಚ್ಛಿಷ್ಯನಿಗೆ ಕೊಟ್ಟ ವಿದ್ಯೆಯಂತೆ ನನಗೆ ಸಂತೋಷವನ್ನುಂಟುಮಾಡುವಳಾದೆ; ಋಷಿಯ ಪ್ರೋಷಣೆಯಲ್ಲಿದ್ದ ನಿನ್ನನ್ನು ಈಗಲೇ ನಿನ್ನ ಪತಿಯ ಸಮೀಪಕ್ಕೆ ಕಳುಹಿಸುವೆನೆಂದು,

ಅನ.—ತಂದೆಯಾದ ಕಣ್ವರಿಗೆ ಈ ವೃತ್ತಾಂತವನ್ನು ಸೂಚಿಸಿದವರು ಯಾರು?

ಪ್ರಿಯಂ.—ಹೋಮಶಾಲೆಯನ್ನು ಪ್ರವೇಶಿಸಿದ ತಂದೆಗೆ ಛಂದೋಮಯವಾದ ಅಶರೀರವಾಣಿಯು.

ಅನ.—(ನಸುನಕ್ಕು) ಹೇಳು ಹೇಳು.

ಪ್ರಿಯಂ.—ಕಂದ॥ ಶಾಂತಾತ್ಮ ನಿನ್ನ ಸುತೆ ದು ।
ಷ್ಯಂತನ ಕೈವಿಡಿದು ಧರಿಸಿ ಗರ್ಭವನುರ್ವೀ ॥
ಸಂತೋಷಾರ್ಥಂ ಮೆರೆದಪ ।
ಳಂತಶ್ಶಿಖಿಯಾದ ಶಮಿಯವೋಲರಿಯನುತಂ ॥ ೮೨

ಅನ.—(ಪ್ರಿಯಂವದೆಯನ್ನು ಆಲಿಂಗಿಸಿ) ಸಖಿ ಇದೇ ನನಗೆ ಬೇಕಾಗಿದ್ದದ್ದು, ಆದರೆ ಶಕುಂತಳೆ ಈಗಲೆ ಪತಿಗೃಹಕ್ಕೆ ಹೋಗುವಳೆಂಬ ಕಳವಳದಿಂದ ನನಗೆ ಸಾಧಾರಣವಾದ ಸಂತೋಷ ವುಂಟಾಗಿರುವದು.

ಪ್ರಿಯಂ.—ಎಲೆ ಸಖಿ, ನಮ್ಮ ಕಳವಳವನ್ನು ಹ್ಯಾಗಾದರೂ ಪರಿಹರಿಸಿಕೊಳ್ಳೋಣ, ದುಃಖಿತೆಯಾದ ಶಕುಂತಳೆ ಸುಖವನ್ನು ಪಡೆದಿದ್ದರೆ ಸಾಕು.

ಅನ.—ಹಾಗಾದರೆ ಇದಕ್ಕಾಗಿ ಈ ಮಾವಿನಮರದ ಕೊಂಬೆಗೆ ತಗಲಿಸಿದ ತೆಂಗಿನಗರಿಯ ಪುಟ್ಟಿಯಲ್ಲಿ ಇದುವರಿಗೂ ಕಂದದಹಾಗೆ ಇಟ್ಟಿದ್ದ ಕೇಸರ ಮಾಲಿಕೆಯನ್ನು ನಿನ್ನ ಕೈಗೆ ತೆಗೆದುಕೊ, ಅಷ್ಟರಲ್ಲಿ ನಾನುಕೂಡ ಶಕುಂತಳೆಗೋಸ್ಕರ ಗೋರೋಚನ, ತೀರ್ಥ ಮೃತ್ತಿಕೆ, ದೂರ್ವಾಕಿಸಲಯಗಳೆಂಬ ಮಂಗಳಾನುಲೇಪನಗಳನ್ನು ಮಾಡುವೆನು.

ಪ್ರಿಯಂ.—ಹಾಗೆ ಮಾಡು.

(ಅನಸೂಯೆ ಹೊರಟು ಹೊದಳು.)

ಪ್ರಿಯಂ.—(ಪುಷ್ಪಪಾತ್ರೆಯನ್ನು ಗ್ರಹಿಸುವಂತೆ ನಟಿಸುವಳು.)

ತೆರೆಯಲ್ಲಿ.—ಎಲೆ ಗೌತಮಿ, ಶಕುಂತಳೆಯನ್ನು ಕರೆದುಕೊಂಡು ಹೋಗುವದಕ್ಕೆ ಯೋಗ್ಯರಾದ ಶಾರ್ಙರವ ಶಾರದ್ವತರನ್ನು ನೇಮಿಸು.

ಪ್ರಿಯಂ.—(ಕಿವಿಗೊಟ್ಟು) ಎಲೆ ಅನಸೂಯೆ ಬೇಗ ಬಾ, ಹಸ್ತಿನಗರಕ್ಕೆ ಹೊರಡುವ ಋಷಿಗಳ ಸದ್ದು ಕೇಳಬರುವದು.

(ಅನುಲೇಪನದ ಪಾತ್ರೆಯನ್ನು ಹಿಡಿದುಕೊಂಡು ಅನಸೂಯೆ ಪ್ರವೇಶಿಸುವಳು.)

ಅನ.—ಸಖಿ ಬಾ! ಬಾ! ಹೋಗೋಣ (ಎಂದು ನಡೆದು)

ಪ್ರಿಯಂ.—(ಶಕುಂತಳೆಯನ್ನು ನೋಡಿ) ಇದೊ ಸೂರ್ಯೋದಯದಲ್ಲಿ ಮಂಗಳ ಮಜ್ಜನವನ್ನು ಮಾಡಿ ನೀವಾರಾಕ್ಷತ ಹಸ್ತೆಯರಾಗಿ ಸ್ವಸ್ತಿಯನ್ನು ಹೇಳುವ ತಾಪಸಿಯರಿಂದ ಅಭಿನಂದಿಸಲ್ಪಡುತ್ತ ಶಕುಂತಳೆ ನಿಂದಿರುವಳು, ಇವಳ ಸಮೀಪಕ್ಕೆ ಹೋಗುವೆವು (ಎಂದು ಸಮೀಪಕ್ಕೆ ಬರುವರು.)

(ಅನಂತರ ಪೂರ್ವೋಕ್ತವ್ಯಾಪಾರವುಳ್ಳ ಶಕುಂತಳೆ ಪೀಠಗತೆಯಾಗಿ ಪ್ರವೇಶಿಸುವಳು.)

ಒಬ್ಬಳುತಾಪಸಿಯು.—(ಶಕುಂತಳೆಯನ್ನು ಕುರಿತು) ಮಗಳೆ ಪತಿಯ ಬಹುಮಾನ ಸೂಚಕವಾದ ಮಹಾದೇವೀ ಶಬ್ದವನ್ನು ಹೊಂದು.

ಮತ್ತೊಬ್ಬಳು.—ಎಲೆ ವತ್ಸೆ, ವೀರನಾದ ಮಗನನ್ನು ಪಡೆ

ಇನ್ನೊಬ್ಬಳು.—ಜಾತೆ, ಪತಿಗೆ ಪ್ರೀತಿಪಾತ್ರಳಾಗು. (ಹೀಗೆ ಹರಸಿ ಗೌತಮಿಯನ್ನು ಬಿಟ್ಟು ತಾಪಸಿಯರು ಹೋದರು.)

ಸಖಿಯರು.—(ಸಮೀಪಕ್ಕೆ ಬಂದು) ಎಲೆ ಸಖಿ, ನಿನಗೆ ಸುಖಮಜ್ಜನ ಬಳಿಯಿತೆ ?

ಶಕುಂ.—ನನ್ನ ಪ್ರಿಯ ಸಖಿಯರಿಗೆ ಸುಖಾಗಮನವೆ ? ಇಲ್ಲಿ ಕುಳಿತುಕೊಳ್ಳಿ.

ಇಬ್ಬರು.—(ಮಂಗಳ ಪಾತ್ರೆಗಳನ್ನು ತೆಗದುಕೊಂಡು ಕುಳಿತು) ಎಲೆ ಶಕುಂತಳೆ, ಸಿದ್ಧಳಾಗು, ನಿನಗೆ ನಾವು ಚೆನ್ನಾಗಿ ಮಂಗಳಾನು ಲೇಪವನ್ನು ಮಾಡುವೆವು.

ಶಕುಂ.—ಇದನ್ನು ವಿಶೇಷವಾಗಿ ಎಣಿಸುವೆನು, ಮುಂದಕ್ಕಿದು ನನಗೆ ದುರ್ಲಭವಾಗುವದಲ್ಲವೆ ? (ಎಂದು ಕಣ್ಣೀರನ್ನು ಮಿಡಿಯುವಳು.)

ಸಖಿಯರು.—ಎಲೆ ಸಖಿ, ಮಂಗಳ ಕಾಲದಲ್ಲಿ ನೀ ನಿಂತು ರೋದನ ಮಾಡುವದು ಉಚಿತವಲ್ಲ.

(ಎಂದು ಕಣ್ಣೀರನ್ನು ಒರಸಿ, ಅಲಂಕರಿಸುವಂತೆ ಅಭಿನಯಿಸುವರು.)

ಪ್ರಿಯಂ.—ಎಲೆ ಸಖಿ, ಆಭರಣವನ್ನು ಇಟ್ಟುಕೊಳ್ಳುವದಕ್ಕೆ ಯೋಗ್ಯವಾದ ನಿನ್ನ ರೂಪು, ಆಶ್ರಮ ಸುಲಭವಾದ ಅಲಂಕಾರದಿಂದ ವಿಕಾರವನ್ನು ಪಡೆಯುದು.

(ಅನಂತರ ಆಭರಣಾದಿಗಳನ್ನು ತೆಗದುಕೊಂಡು ಋಷಿಕುಮಾರಕರು ಬರುವರು.)

ಋಷಿಕುಮಾರರು.—ಇದೊ, ಅಲಂಕಾರವಸ್ತುಗಳು, ಇವುಗಳಿಂದ ಈ ಪೂಜ್ಯೆಯನ್ನು ಅಲಂಕರಿಸಿ.

(ಎಲ್ಲರು ನೋಡಿ ವಿಸ್ಮಯವನ್ನು ಹೊಂದುವರು.)

ಗೌತಮಿ.—ವತ್ಸನಾರದನೆ, ಇದೆಲ್ಲಿಂದ ಬಂತು ?

ಮೊದಲನೆಯವನು.—ತಾತ ಕಣ್ವರ ಪ್ರಭಾವದಿಂದ.

ಗೌತಮಿ.—ಇದೇನು ಮಾನಸ ಸೃಷ್ಟಿಯೊ ?

ಎರಡನೇಯವನು.—ಅಲ್ಲ, ಕೇಳಬೇಕು ; ಪೂಜ್ಯರಾದ ಕಣ್ವರು ಶಕುಂತೆಳೆಯ ನಿಮಿತ್ತವಾಗಿ ವನಸ್ಪತಿಗಳಿಂದ ಪುಷ್ಪಗಳನ್ನು ಕೊಯ್ದುಕೊಂಡು ಬರುವದೆಂದು ನಮ್ಮನ್ನು ಆಜ್ಞಾಪಿಸಿದರು ; ಅನಂತರದಲ್ಲಿ ನಾವು ವನಸ್ಪತಿಗಳ ಬಳಿಗೆ ಹೋದೆವು—ಬಳಿಕ

ವೃತ್ತ॥ ಇತ್ತುದದೊಂದು ಶಾಖಿ ಶುಭಕಾಗೊಲವಿಂಶಶಿ ಪಾಂಡುವಸ್ತ್ರಮಂ।
ಮತ್ತಮದೊಂದು ವೃಕ್ಷಮಿರದಿತ್ತುದು ತಾನಡಿಯೂಡೆ ಲಾಕ್ಷೆಯಂ ॥
ಎತ್ತಿದಪಲ್ಲವಪ್ರತಿಮಪಾಣಿಗಳಿಂ ವನದೇವಿಯರ್ ಮುದಂ ।
ಬೆತ್ತೊಡನಿತ್ತರೀತೊಡವನೆಲ್ಲಮನನ್ಯಕುಜಂಗಳತ್ತಣಿಂ ॥ ೪-೪

ಪ್ರಿಯಂ.—(ಶಂಕುತಳೆಯನ್ನು ನೋಡಿ)ಎಲೆ ಸಖಿ ಶಕುಂತಳೆ, ಇವರ ಈ ಅನುಗ್ರಹವು, ನೀನು ಪತಿಗೃಹದಲ್ಲಿ ಅನುಭವಿಸತಕ್ಕ ರಾಜ್ಯ ಲಕ್ಷ್ಮಿಗೆ ಸೂಚಕವಾಗಿರುವದು.

ಶಕುಂ.—(ಲಜ್ಜೆಯನ್ನು ನಟಿಸುವಳು.)

ಮೊದಲನೇಯವನು.—ಎಲೈ ಗೌತಮನೆ, ನಡೆನಡೆ, ಸ್ನಾನಾರ್ಥವಾಗಿ ಇಳಿದ ಕಣ್ವರಿಗೆ ವನಸ್ಪತಿಗಳ ಸೇವೆಯನ್ನು ಅರಿಕೆ ಮಾಡೋಣ.

ಎರಡನೇಯವನು.—ಹಾಗಾಗಲಿ. (ಎಂದು ಹೋದರು.)

ಅನ.—ಎಲೆ ಸಖಿ, ನಮಗೆ ಆಭರಣಗಳನ್ನಿಟ್ಟ ಅನುಭವವಿಲ್ಲ, ಆದರೂ ಚಿತ್ರವನ್ನು ನೋಡಿದ ಪರಿಚಯದಿಂದ ನಿನ್ನ ಅಂಗಗಳಲ್ಲಿ ಆಭರಣಗಳನ್ನಿಡುವೆವು.

ಶಕುಂ.—ನಿಮ್ಮ ಜಾಣ್ಮೆಯನ್ನು ಬಲ್ಲೆನು.

ಸಖಿಯರು.—(ಅಲಂಕರಿಸುವವನ್ನು ಅಭಿನಯಿಸುವರು.)

(ಅನಂತರ ಸ್ನಾನದಿಂದೆದ್ದ ಕಣ್ವರು ಪ್ರವೇಶಿಸುವರು)

ಕಣ್ವರು.—*ವೃತ್ತ॥ ಕಳವಳವಾಂತುದೆನ್ನೆರ್ದೆ ಶಕುಂತಳೆ ಪೋದಪಳೆಂ
ದುಕಂಠವುಂ ।
ಮುಳಿಸುವುದೊತ್ತಿವಶ್ರುಭರದಿಂಜಡಮಾದುದು ದೃಷ್ಟಿಚಿಂತೆಯಿಂ॥
ದಳಲಿನಿ ತಾಗೆ ಕಾಡಮನುಜಂಗೆನಗುಂ ಕಡುನೇಹದಿಂದ ಮಿ ।
ನ್ನಳಿದ ಗೃಹಸ್ಥರಾತ್ಮಭವೆಯುಂ ಕಳುಪುತ್ತ ಕಟಿಂತಳಲ್ವರೋ ॥

(ಎಂದು ಬರುವರು)

ಸಖಿಯರು.—ಎಲೆ ಶಕುಂತಳೆ, ಅಲಂಕಾರವೆಲ್ಲ ನೆರವೇರಿತು, ಇನ್ನು ದುಕೂಲವನ್ನು ಧರಿಸಿಕೊ.

(ಶಕುಂತಳೆ ಎದ್ದು ಧರಿಸಿಕೊಳ್ಳುವಳು.)

ಗೌತಮಿ—ಎಲೆ ಮಗಳೆ, ಇದೋ ತಂದೆಗಳಾದ ಕಣ್ವರು ಆನಂದಬಾಷ್ಪಪ್ರವಾಹದಿಂದ ತುಂಬಿದ ಕಣ್ಣುಗಳಿಂದ ಆಲಿಂಗಿಸಿಕೊಳ್ಳುವಂತೆ ನಿನ್ನನ್ನು ನೋಡುತ್ತ ಸಮೀಪದಲ್ಲಿ ನಿಂತಿರುವರು, ಇವರಿಗೆ ನಮಸ್ಕರಿಸು.

---

*ರಾಗ—ಭೈರವಿ. ॥ ರೂಪಕತಾಳ ॥

ಎಂತು ಕಳುಹುವೇ ಸುತೆಯು । ನೆಂತು ಕಳುಸುವೇ । ಚಿಂತೆ ಚಿತ್ತಕೆ । ಪಿರಿದು ಕಾಂತ ಸದ್ಮಕೆ ॥ ೧ ॥ ತಡೆವದುಃಖದೆ ನುಡಿಯು । ತಡಬಡಿಸುತಿದೆ ॥ ಇಡಿದ ಬಾಷ್ಪದೆಕಣ್ಗಡೆಯು ತುಂಬಿದೆ ॥ ೨ ॥ ಅಹಹ ಮುನಿಗಳಾದೆಮಗು । ದುಃಖವಿಂತಿರೆ ॥ ಗೃಹಿಗಳಣುಗಿಯೂ ಕಳುಹಿ । ಸಹಿಸಬಲ್ಲರೆ ॥ ೩ ॥

ಶಕುಂ.—(ಭಕ್ತಿ ಪೂರ್ವಕವಾಗಿ) ತಂದೆಯೇ, ವಂದಿಸುವೆನು.

ಕಣ್ವರು.—ಕಂದ॥ ಜಾತೆ ನಿಜಗುಣಗಳಿಂದೆ ಯ।
ಯಾತಿಗೆ ಶರ್ಮಿಷ್ಠೆಯಂತೆ ಪತಿಹಿತೆಯಾಗು॥
ತ್ತಾ ತರುಣಿ ಪೂರುವಂ ಪಡೆ।
ದಾತೆರದಿಂ ಚಕ್ರವರ್ತಿಪುತ್ರನ ಪಡೆ ನೀಂ॥ ೪೬

ಗೌತಮಿ.—ಪೂಜ್ಯರೆ, ಇವು ವರಗಳಲ್ಲದೆ ಕೇವಲ ಆಶೀರ್ವಾದಗಳಲ್ಲ.

ಕಣ್ವರು.—ವತ್ಸೆ, ಇತ್ತಬಾ, ಈಗಲೇ ಹವಿಸ್ಸನ್ನು ಕೈಕೊಂಡಿರುವ ಅಗ್ನಿಗಳನ್ನು ಪ್ರದಕ್ಷಿಣೆಮಾಡು.

(ಎಲ್ಲರೂ ಬರುವರು)

ಕಣ್ವರು.—(ಋಕ್ಛಂದಸ್ಸಿನಿಂದ ಹರಸುವರು)ಎಲೆ ವತ್ಸೆ—

ಕಂದ॥ ವೇದಿಯ ಸುತ್ತಲ್ನೆಲೆ ಗೊಂ।
ಡಾದಂ ಸಮಿಧೆಗಳನಾಂತು ಪೊಣ್ಮುವ ಹವ್ಯಾ॥
ಮೋದದೊಳಘಪರಿಹಾರಕ।
ಮಾದೀ ವೈತಾನವಹ್ನಿ ಸಲಹುಗೆ ನಿನ್ನಂ॥ ೪೭

ಇನ್ನು ಪ್ರಯಾಣಮಾಡು (ಕಣ್ಣು ಸಂನೆಯಿಂದ) ಎಲ್ಲಿ? ಶಾರ್ಙ್ಗರವ ಶಾರದ್ವತರು.

(ಶಿಷ್ಯರು ಬಂದು)

ಶಿಷ್ಯರು.—ಪೂಜ್ಯರೆ, ಇದೋ ಸಿದ್ಧರಾಗಿರುವೆವು.

ಕಣ್ವರು.—ಎಲೈ ಶಾರ್ಙ್ಗರವನೆ ನಿನ್ನ ಸಹೋದರಿಗೆ ಮಾರ್ಗವನ್ನು ತೋರಿಸು.

ಶಾರ್ಙ್ಗರವ.—ಎಲೌ ಪೂಜ್ಯಳೆ, ಹೀಗೆ ಬರತಕ್ಕದ್ದು.

(ಶಕುಂತಳೆ ಆ ಮಾರ್ಗವಾಗಿ ಹೋಗುವಳು.)

*ಕಣ್ವರು.—ಎಲೆ ಎಲೆ, ಸನ್ನಿಹಿತದೇವತೆಗಳಾದ ತಪೋವನ ತರುಗಳಿರಾ ಕೇಳಿ.

ವೃತ್ತ॥ ಜಲವ ನದಾವಳೀಂಟ ಳಿರೆದಲ್ಲದೆ ನಿಮ್ಮಯ ಪಾತೆಗಂಬುವಂ ।
ತಳಿರ್ಗಳ ಕೊಯ್ಯಳಾವಳೊಲವಿಂಮಿಗೆಸಿಂಗರದಾಸೆಯುಳ್ಳೊಡಂ ।
ಅಲರ್ಗಳ ತಾಳೆ ನೀವು ಮೊದಲುತ್ಸವಮಾಂತಪಳಾವಳಾಶಕುಂ ।
ತಳೆ ಪತಿಸದ್ಮಕೈದಿದಪಳಾಕೆಗನುಜ್ಞೆಯು ನೀವುದೆಲ್ಲರುಂ ॥ ೮೮

(ಕೋಕಿಲಧ್ವನಿಯನ್ನು ತೋರಿಸಿ)

ಕಂದ॥ ಬಾಲೆ ಪತಿಗೃಹಕೆ ಪೋಪುದ ।
ಪೇಳ್ ಲ್ವನವಾಸಬಂಧು ವೀತರುವೃಂದಂ ।
ಕೇಳುತನುಮತಿಸಿ ಕಲ ಕಂ ।
ಠಾಲಾಪದತೆರದೆನುಡಿವುದಿದೊ ಪಡಿವಾತಂ ॥ ೮೯

(ಆಕಾಶದಲ್ಲಿ)

ವೃತ್ತ॥ ತಾವರೆತೀವಿತೋರುವ ಸರೋವರದಿಂ ರಮಣೀಯಮಾಗಿ ತ ।
ಳ್ತ್ತುವರಿಸಿರ್ದ ಸಾಲ್ಮರಗಳಿಂದೆ ಹೃತಾತಪ ತಾಪಮಾಗಿ ರಾ ॥
ಜೀವಗಳದ್ರಜೋಮೃದುಲ ರೇಣುಗಳಿಂದತಿಸಾಂದ್ರಮಾಗಿ ಸಾ ।
ಖ್ಯಾವಹ ಮಿಾಕೆಗಕ್ಕೆಯನುಕೂಲ ಸಮಿಾರಣಮಾಗಿಮೋಕ್ಷಪಥಂ ॥

(ಎಲ್ಲರೂ ವಿಸ್ಮಯಪಟ್ಟು ಕೇಳುವರು)

ಗೌತಮಿ.—ಎಲೆ ಮಗಳೆ, ಪ್ರಿಯಬಂಧುಗಳಂತಿರುವ ಈ ತಪೋವನ ದೇವತೆಗಳು ಅನುಜ್ಞೆಯನ್ನು ಕೊಟ್ಟರು. ಇನ್ನು ಇವರಿಗೆ ನಮಸ್ಕರಿಸಿನಡೆ.

(ಶಕುಂತಳೆ ನಮಸ್ಕರಿಸಿ ಹೋಗುತ್ತಾ)

---

*ರಾಗ—ಕಮಾಚ್. ॥ ಆದಿತಾಳ ॥

ನಂದನೆಪತಿ । ಮಂದಿರಕೆಪೋಪಳು ॥ ಪಲ್ಲ ॥ ನೀವೀಂಟದಿರೆನೀರ । ನೀವೆಳ್ವೆನಂಬುವ । ಸೇವಿಸದಿಹಳಾವ । ಳಾನಂದನೆ ॥ ೧ ॥ ಬಗೆಗೆ ಸಿಂಗರಸೆ । ಯೊಗೆದಾದೊಡು ನಿಮ್ಮಯ । ಚಿಗುರಮುರಿಯಳಾವ । ಳಾನಂದನೆ ॥ ೨ ॥ ಉದಿಸೆ ನಿಮ್ಮೊಳುಪುಷ್ಪ । ಮೊದಲು ಮನೋಹರ್ಷ । ಮೊದಗುವದಾವಳಿ । ಗಾನಂದನೆ ॥ ೩ ॥

ಶಕುಂ.—ಎಲೆ ಪ್ರಿಯಂವದೆ, ಪತಿಯನ್ನು ನೋಡುವ ಕುತೂಹಲ ನನಗೆ ಬಹಳವಾಗಿದ್ದಾಗ್ಯೂ ಆಶ್ರಮವನ್ನು ಬಿಟ್ಟುಹೋಗುವ ನನ್ನ ಕಾಲುಗಳು ಅತಿದುಃಖದಿಂದ ಮುಂದಕ್ಕೆ ಸಾಗುವವು.

ಪ್ರಿಯಂ.—ಎಲೆ ಸಖಿ, ತಪೋವನವನ್ನು ಬಿಟ್ಟು ಹೋಗಲಾರದ ದುಃಖ ನಿನ್ನೊಬ್ಬಳಿಗೇ ಅಲ್ಲ. ನಿನ್ನ ವಿಯೋಗದಿಂದ ತಪೋವನಕ್ಕಾದ ಅವಸ್ಥೆಯನ್ನು ನೋಡು.

ಕಂದ॥ ಕುಣಿವುದನುಳಿದುವು ನವಿಲ್ಗಳ್ ।
ತೃಣಕಬಳಂಜಗುಳೆ ಬಾಯಿನರಿಯದು ಹರಿಣೀ ॥
ಗಣಮುದುರ್ವೆಲೆಯಿಂ ರಮಣೀ ।
ಮಣಿ ಕಣ್ಣೀರ್ವಿಡುವತೆರದೆತೋಪ್ಪುವು ಲತೆಗಳ್ ॥ ೯೧

(ಶಕುಂತಳೆ ಸ್ಮರಿಸಿಕೊಂಡು)

ಶಕುಂ.—ತಂದೆಯೆ, ಲತಾಭಗಿನಿಯಾದ ವನಜ್ಯೋತ್ಸ್ನೆಗೆ ಹೇಳಬರುವೆನು.

ಕಣ್ವರು.—ಬಲ್ಲೆನು, ನಿನಗದರಲ್ಲಿ ಒಡಹುಟ್ಟಿದ ಸ್ನೇಹವಿರುವದಷ್ಟೆ, ಇದೋ, ಬಲಗಡೆ ಇರುವದು.

(ಶಕುಂತಳೆ ಲತೆಯ ಬಳಿಗೆ ಬಂದು)

ಶಕುಂ.—ಎಲೆ ವನಜ್ಯೋತ್ಸ್ನೆಯೆ, ಸಹಕಾರ ಸಂಗತೆಯಾಗಿದ್ದಾಗ್ಯೂ ಈ ಕಡೆಯ ಶಾಖಾಭುಜಗಳಿಂದ ನನ್ನನ್ನು ಆಲಿಂಗಿಸು; ಇನ್ನುಮೇಲೆ ನಿನಗೆ ನಾನು ದೂರಗತೆಯಾಗುವೆನಲ್ಲವೆ ?

ಕಣ್ವರು.—ಕಂದ ನಂದನೆನಾಂ ಸಂಕಲ್ಪಿಸಿ ।
ದಂಡದೊಳನುರೂಪಪತಿಯ ಸೇರಿದೆನೀಂ ಸೈ ॥
ಪಿಂದೀಮಾಲತಿಯುಂ ಮಾ ।
ಕಂದವನೊಂದಿತ್ತು ನಿಮ್ಮೊಳಾಂ ನಿಶ್ಚಿಂತಂ ॥ ೯೨

ಇತ್ತಲೀ ಮಾರ್ಗವಾಗಿ ನಡೆ.

ಶಕುಂ.—ಎಲೌ ಸಖಿಯರೆ, ಈ ವನಜ್ಯೋತ್ಸ್ನೆಯನ್ನು ನಿಮ್ಮಿಬ್ಬರ ಕಯ್ಗೆ ಕೊಟ್ಟಿರುವೆನು.

ಸಖಿಯರು.—ಇದನಂತು ನಮ್ಮ ಕಯ್ಗೆ ಕೊಟ್ಟೆ, ನಮ್ಮನ್ನು ನೀನು ಈಗ ಯಾರಕಯ್ಗೆ ಕೊಟ್ಟೆ (ಎಂದು ಕಣ್ಣೀರನ್ನು ಮಿಡಿಯುವರು.)

ಕಣ್ವರು.—ಎಲೆ ಅನಸೂಯೆ, ಎಲೆ ಪ್ರಿಯಂವದೆ, ಇದೇನು! ನೀವೇ ಹೀಗೆ ರೋದಿಸುವದಕ್ಕೆ ಉಪಕ್ರಮಿಸಿದರೆ ಇನ್ನು ಶಕುಂತಳೆಯನ್ನು ಸಮಾಧಾನಪಡಿಸುವರು ಯಾರು ? ಸಾಕು ಸಾಕು ಸುಮ್ಮನಿರಿ (ಎಲ್ಲರೂ ನಡೆಯುವರು.)

ಶಕುಂ.—ಎಲೈ ತಂದೆಯೆ, ಪರ್ಣಶಾಲೆಯಬಳಿ ತಿರುಗುವ ಪೂರ್ಣಗರ್ಭಿಣಿಯಾದೀ ಹುಲ್ಲೆಗೆ ಯಾವಾಗ ಸುಖಪ್ರಸವವಾಗುವದೋ ಆಗ ನನಗೆ ಕುಶಲಪತ್ರಿಕೆಯನ್ನು ಕಳುಹಿಸಬೇಕು.

ಕಣ್ವರು.—ಆಗಲಿ ಇದನ್ನು ಮರೆಯದಿರುವೆವು.

(ಶಕುಂತಳೆ ಗಮನಭಂಗವನ್ನು ಅಭಿನಯಿಸಿ).

ಶಕುಂ.—ಇದು ಯಾವದು ? ಮರಳಿ ಮರಳಿ ನನ್ನ ಸೀರೆಯ ಸೆರಗನ್ನು ಹಿಡಿದು ಸೆಳೆಯುವದು (ಎಂದು ಹಿಂತಿರುಗುವಳು)

ಕಣ್ವರು.—ಕಂದ॥ ಮಗಳೆ ಕುಶಸೂಚಿಕಾಗಿದ।
ಮೊಗದೊಳ್ ವ್ರಣಹರಣ ತೈಲವೆರೆಯುತೆನೀವಾ॥
ರಗಳೆ ಹಿಡಿಯಿತ್ತು ಪೊರೆದೀ।
ಮೃಗಾರ್ಭಕಂ ನಿನ್ನ ಮಾರ್ಗಮಂ ಬಿಟ್ಟಪುದೇ॥ ೯೩

ಶಕುಂ.—ಎಲೆ ವತ್ಸ, ಸಹವಾಸವನ್ನು ಬಿಟ್ಟು ಹೋಗುವ ನನ್ನನ್ನು ಏತಕ್ಕೆ ಅನುಸರಿಸುವೆ ? ಹುಟ್ಟಿದಕೂಡಲೇ ತಾಯನಗಲಿದ ನಿನ್ನನ್ನು ಬೆಳಸಿದೆನು ; ಈಗಲೂ ನನ್ನನ್ನು ಅಗಲಿದ ನಿನ್ನ ಪೋಷಣೆಯ ವಿಷಯದಲ್ಲಿ ತಂದೆಗಳು ಚಿಂತಿಸುವರು ಇನ್ನು ಹಿಂತಿರಿಗಿಹೋಗು.

(ಎಂದು ರೋದಿಸುತ್ತಾ ಹೋಗುವಳು.)

ಕಣ್ವರು.—ಕಂದ॥ ತಡೆ ಮಗಳೆ ಬರ್ಪ್ಪ ಕಂಬನಿ।
ಗಡಣಮನೆನ್ನಾಣೆ ಕಾಣದಿರ್ಪ್ಪೀ ನೆಲದೊಳ್ ॥
ಅಡಿಯಿಡೆ ನಿಮ್ನೋನ್ನತಮಾ ।
ದೆಡೆಯೊಳ್ ಪಲ್ಲಟಿಪವಲ್ತೆ ನಿನ್ನ ಪದಂಗಳ್ ॥ ೯೪

ಶಾರ್ಙ್ಗರವಂ.—ಪೂಜ್ಯರೆ ಬಂಧುಜನಗಳು ಜಲಾಶಯದವರೆಗೆ ಸಂಗಡ ಬರತಕ್ಕದ್ದೆಂಬ ಸಂಪ್ರದಾಯವನ್ನು ಕೇಳಿಲ್ಲವೆ? ಅದ್ದರಿಂದ ಇದೋ, ಸರೋವರತೀರವು, ಇಲ್ಲಿ ನಮಗೆ ಆಜ್ಞಾಪಿಸುವದನ್ನು ಆಜ್ಞಾಪಿಸಿ ಹಿಂದಕ್ಕೆ ದಯಮಾಡಬೇಕು.

ಕಣ್ವರು.—ಆದರೆ ಈ ಕ್ಷೀರ ವೃಕ್ಷದ ನೆಳಲಲ್ಲಿ ಕುಳಿತುಕೊಳ್ಳೋಣ ಬನ್ನಿ. (ಎಲ್ಲರೂ ಬಂದು ಕುಳಿತುಕೊಳ್ಳುವರು).

ಕಣ್ವರು.—(ತಮ್ಮಲ್ಲಿ ತಾವು) ಪೂಜ್ಯನಾದ ಆ ದುಷ್ಯಂತನ ಯೋಗ್ಯತಾನುಸಾರವಾಗಿ ಏನು ಹೇಳಿಕಳುಹಿಸೋಣ? (ಎಂದು ಚಿಂತಿಸುವರು).

ಶಕುಂ.—(ಮರೆಯಲ್ಲಿ) ಎಲೆ ಅನಸೂಯೆ, ಇದೋ ನೋಡು, ತಾವರೆಯಲ್ಲಿ ಮರೆಯಾದ ಮಾತ್ರಕ್ಕೇ ತನ್ನ ಸಹಚರನನ್ನು ಕಾಣದೆ ಈ ಚಕ್ರವಾಕಸ್ತ್ರೀಯು ಕಳವಳಗೊಂಡು ಎಷ್ಟು ಕೂಗಿಕೊಳ್ಳುವದು! ನಾನಲ್ಲವೆ ಅತಿದುಷ್ಕರವಾದದ್ದನ್ನು ಮಾಡುವಳು.

ಅನ.—ಎಲೆ ಸಖಿ ಹೀಗೆ ನೀನು ಆಲೋಚಿಸಬೇಡ.

ಕಂದ॥ ಉಳಿದಿನಿಯನ ನಿದುಮ್ರಂಮನ।
ದಳಲಿಂ ಪಿರಿದೆನಿಸಿದಿರುಳಕಳೆವುದು ಬಲು ವೆ ॥
ಗ್ಗಳಿಸಿದ ವಿರಹ ವ್ಯಥೆಯುಂ ।
ಕೆಳದೀ ಸಹಿಪಂತೆ ಮಾಳ್ಪ ದಾಶಾಬಂಧಂ ॥ ೯೫

ಕಣ್ವರು.—ಎಲೈ ಶಾರ್ಙ್ಗರವನೆ, ಶಕುಂತಳೆಯ ಎದುರಿಗೆ ಆ ರಾಜನನ್ನು ಕುರಿತು, ನಾನು ಹೇಳಿದೆನೆಂದು ಹೇಳತಕ್ಕದ್ದು.

ಶಾರ್ಙ್ಗರವಂ.—ಪೂಜ್ಯರೆ ಆಜ್ಞಾಪಿಸಬೇಕು.

ಕಣ್ವರು.—*ವೃತ್ತ॥ ಪಿರಿದುಂ ಚಿಂತಿಸಿಪಂಯುವರಾರ್ಥರೆನಿಪೆವೆಮ್ಮಂ ವೋಣ್
ಭವದ್ವಂಶದೇ ।
ಳ್ತ್ರಮುಂನಿನ್ನೊಳಗೀಕೆತಾನೆಯೊಲವೆತ್ತಾ ಪೊಂಗುಮಂಪೆಂಡಿರೊಳ್
ಸರಿಗಂಡೀಕೆಯನೀಂ ಬರ್ದುಂಕಿಪುದುಭಾಗ್ಯಾಧೀನಮಿನ್ನಿಂತರಿಂ ।
ಪೆರ್ತೆಲ್ಲಂ ಬಗೆಯಲ್ಕದಂ ನುಡಿವುದಲ್ಲಂ ದಲ್ವಧೂಬಂಧುಗಳ್ ॥ ೯೬

ಶಾರ್ಙ್ಗರವಂ.—ಅಪ್ಪಣೆಯಾದದ್ದನ್ನು ಗ್ರಹಿಸಿದೆನು.

ಕಣ್ವರು.—ವತ್ಸೆ, ಈಗ ನಿನಗೆ ಬುದ್ಧಿವಾದವನ್ನು ಹೇಳಬೇಕಾಗಿರುವದು ಕೇಳು; ನಾವು ವನವಾಸಿಗಳಾದರೂ ಲೋಕತಂತ್ರವನ್ನೆಲ್ಲಾ ಬಲ್ಲೆವು.

ಶಾರ್ಙ್ಗರವಂ.—ಬುದ್ಧಿಶಾಲಿಗಳಿಗೆ ಯಾವದುತಾನೆ ಅಗೋಚರವಾಗಿ ಇದ್ದೀತು.

ಕಣ್ವರು.—ಎಲೆ ಮಗಳೆ, ಇನ್ನು ನೀನು ಗಂಡನ ಮನೆಯನ್ನು ಸೇರಿ—
*ವೃತ್ತ॥ ಪಿರಿಯರ ಸೇವೆಗೆಯ್ಸವತಿಯರ್ಕಳೊಳಿಷ್ಟನಯಸ್ಯೆಯಂದದಿಂ ।
ದಿರುಪತಿಯೊರ್ಮೆ ಹೇವ ಗೊಳಿಸಲ್ಮುಳಿಸಿಂಪ್ರತಿಕೂಲೆಯಾಗದಿರ್ ॥
ಪರಿಜನಮಂ ಕರಂ ಸಲಹು ಭಾಗ್ಯದೆ ಬಾಗಿರು ಪೆಣ್ಗಳಿಂತಿರ ।
ಲ್ಗರತಿಯರಪ್ಪ ರಿಂತಿರದರನ್ವಯಕಾಧಿಯುನಂಟು ಮಾಡುವರ್ ॥ ೯೭

ಇದುಹೊರತು ಗೌತಮಿ ಇನ್ನೇನು ತಿಳಿದಿರುವಳೊ ಕೇಳು.

ಗೌತಮಿ.—ವಧೂಜನಕ್ಕೆ ಹೇಳತಕ್ಕ ಉಪದೇಶವು ಇಷ್ಟುತಾನೆ; ಇದರ ಮೇಲೇನಿರುವದು, ಎಲೆ ವತ್ಸೆ, ಇದನ್ನೆಲ್ಲಾ ಗ್ರಹಿಸಿಕೊಂಡಿರು ಕಂಡೆಯಾ?

---

*ರಾಗ—ಕಾನಡ. ॥ ಆದಿತಾಳ ॥

ಆಲಿಸು ಕುವರೀ । ಪೇಳುವುದನೀ । ನಾಲಿಸುಕುವರೀ ॥ ಪ ॥ ಗುರುಜನಗಳನು । ಭಕ್ತಿಯೊಳುಪ । ಚರಿಪುದುನೀನು ॥ ಹರುಸದಿ ಸವತಿಯಾ । ದರೊಳಾಪ್ತಸಖಿಯಳ । ಪರಿಯಿಂದ ವರ್ತಿಸು । ತಿರುಗುಣವತಿಯೆನೀ ॥ ನಾಲಿಸು ॥ ೧ ॥ ಬಮ್ಮನಿನ್ನೊಳಗೆ । ಪತಿಗೆ ಬಗೆ । ದುಮ್ಮಾನವಾಗೆ ॥ ಸಮ್ಮತಿಸುತಮೊದಲ । ಸುಮ್ಮಾನವಳಿಯದೆ । ಸುಮ್ಮನಿಹುದು ಗುಣ । ವಮ್ಮಕುಲವಧುಗಿದ ॥ ನಾಲಿಸು ॥ ೨ ॥ ಪೊರೆಪರಿಜನವ । ಬಾಗಿಸಿನಡೆ । ಸಿರಿಯೊಳುಸಿರವ ॥ ಧರೆಯೊಳಗಿಂತುಸ । ಚ್ಚರಿತವುಳ್ಳಸಿಯರೆ । ಗರತಿಯರುಳಿದಸ್ತ್ರೀ । ಯರೆಕುಲಕಾಧಿಗ । ಳಾಲಿಸು ॥ ೩ ॥

ಕಣ್ವರು.—ಎಲೆ ವತ್ಸೆ, ನನ್ನನ್ನೂ ನಿನ್ನ ಸಖೀಜನವನ್ನೂ ಆಲಿಂಗಿಸು.

ಶಕುಂ.—ತಂದೆಯೆ, ಪ್ರಿಯಂವದೆ ಮೊದಲಾದ ಸಖಿಯರು ಇಲ್ಲಿಂದಲೇ ಹಿಂತಿರುಗುವರೆ ?

ಕಣ್ವರು.—ಎಲೆ ಮಗಳೆ, ಇವರೂ ಮದುವೆಯಾಗತಕ್ಕವರು ಆದ್ದರಿಂದ ಇವರು ಅಲ್ಲಿಗೆ ಬರತಕ್ಕದ್ದು ಯುಕ್ತವಲ್ಲ, ನಿನ್ನೊಡನೆ ಗೌತಮಿ ಬರುವಳು.

ಶಕುಂ.—(ತಂದೆಯನ್ನು ಆಲಿಂಗಿಸಿಕೊಂಡು) ಈಗ ತಂದೆಯ ತೊಡೆಯನ್ನು ಬಿಟ್ಟು ಮಲಯಪರ್ವತದ ತಟದಿಂದ ಕಿತ್ತುಹಾಕಿದ ಚಂದನಲತೆಯಂತೆ ದೇಶಾಂತರದಲ್ಲಿ ನಾನೆಂತು ಜೀವವನ್ನು ಧರಿಸುವೆನು ?

ಕಣ್ವರು.—ಎಲೆ ಮಗಳೆ, ಹೀಗೇತಕ್ಕೆ ಕಳವಳಪಡುವೆ ?

ವೃತ್ತ॥ ಕುವರಿ ಕುಲೀನನಾದ ಪತಿಗೊಪ್ಪುವ ಪಟ್ಟದ ರಾಣಿಯಾಗಿ ವೈ ।
ಭವಗಳನೇಳ್ಗೆವೆತ್ತಿ ನನಕೃತ್ಯದೊಳಾಕುಲೆಯಾಗುತಾವಗಂ ॥
ರವಿಯ ನಮರ್ತ್ಯನಾಥದಿಶೆತಾಂ ಪಡೆವಂತೆಸುಗಾತ್ರ ಪುತ್ರನಂ ।
ತವಕದೆ ಪೆತ್ತು ನೀನೆಣಿಸದಿರ್ಪೆ ಮದೀಯ ವಿಯೋಗದುಃಖಮಂ ॥

(ಶಕುಂತಳೆಯು ತಂದೆಯ ಪಾದಗಳಿಗೆ ನಮಸ್ಕರಿಸುವಳು)

ಕಣ್ವರು.—ನೀನು ಕೋರಿದ ಕೋರಿಕೆ ಸಿದ್ಧಿಸಲಿ.

ಶಕುಂ.—(ಸಖಿಯರ ಸಮೀಪಕ್ಕೆ ಬಂದು) ಎಲೌ ಸಖಿಯರೆ ನೀವಿಬ್ಬರೂ ನನ್ನನ್ನು ಸಮವಾಗಿ ಆಲಿಂಗಿಸಿ.

ಸಖಿಯರು.—(ಹಾಗೆಯೇ ಆಲಿಂಗಿಸಿಕೊಂಡು) ಎಲೇಸಖಿ ಆ ರಾಜನು ನಿನ್ನನ್ನು ಮರೆದದ್ದೇ ಆದರೆ ಆಗ ಆತನಿಗೆ ಅವನ ನಾಮಾಂಕಿತವಾದ ಈ ಉಂಗುರವನ್ನು ತೋರಿಸು.

ಶಕುಂ.—ಎಲೌ ಸಖಿಯರೆ ನಿಮ್ಮ ಸಂದೇಹದಿಂದ ಕಂಪಿತೆಯಾದೆನು !

ಸಖಿಯರು.—ಅಂಜಬೇಡ ಅತಿಸ್ನೇಹವು ಪಾಪಶಂಕಿಯಾದದ್ದು.

ಶಾರ್ಙ್ಗರವ.—ಎಲೌ ಪೂಜ್ಯಳೆ ಸೂರ್ಯನಾದರೆ ನೋಗದಮಧ್ಯಕ್ಕೆ ಹತ್ತಿದನು, ಬೇಗ ನಡೆ.

ಶಕುಂ.—(ಆಶ್ರಮಕ್ಕೆ ಎದುರಾಗಿ ನಿಂತು) ತಂದೆಯೆ ತಪೋವನವನ್ನು ಇನ್ನು ಯಾವಾಗ ನೋಡುವೆನು ?

ಕಣ್ವರು.—ಕೇಳು ಕಂದ॥ ಕ್ಷಿತಿಸತಿಗೆ ಸವತಿಯಾಗ ।
ಪ್ರತಿರಥನಂ ಸುತನ ಪೆತ್ತು ಸುತೆ ನೀಂತನಯಾ ॥
ರ್ಪಿತರಾಜ್ಯನಪ್ಪ ನಿನ್ನಯ ।
ಪತಿಯೊಡನೀಕ್ಷಿಸುವೆ ಮಗುಳ್ದು ಮಿಾಯಾಶ್ರಮಮಂ ॥ ೯೯

ಗೌತಮಿಯು.—ಮಗಳಿಗೆ ಗಮನವೇಳೆ ಕಳೆಯುತ್ತಾ ಬಂತು, ತಂದೆಯನ್ನು ಹಿಂದಕ್ಕೆ ಕಳುಹಿಸು ; ಅಥವಾ ನೀವಾದರೂ ಹಿಂತಿರುಗಬೇಕು, ಈಕೆ ಪದೇ ಪದೇ ಹೀಗೆಯೇ ನುಡಿಯುತ್ತಿರುವಳು.

ಕಣ್ವರು.—ಎಲೆ ವತ್ಸೆ, ತಪೋನುಷ್ಠಾನವು ನನ್ನನ್ನು ತಡೆಯುವದು.

ಶಕುಂ.—(ತಂದೆಯನ್ನು ಮತ್ತೂ ಆಲಿಂಗಿಸಿಕೊಂಡು) ಮೊದಲೇ ತಪಶ್ಚರ್ಯೆಯಿಂದ ಪೀಡಿತವಾದ ತಂದೆಯ ಶರೀರವು ಮತ್ತೂ ನನಗೋಸ್ಕರ ಬಹಳವಾಗಿ ಕಳವಳಪಡುವದು.

ಕಣ್ವರು.—(ನಿಟ್ಟುಸುರಿಂದಕೂಡಿ)
*ಕಂದ॥ ಸಾರುತಮಾನುಟಜವನಾ ।
ದ್ವಾರದಬಳಿಯಲ್ಲಿ ಮೊದಲೆನೀನಿರಿಸಿದ ನೀ ॥
ವಾರಬಲಿಯಂ ವಿಲೋಕಿಸಿ ।
ಮಿೀರುವ ಮನದಳಲನೆಂತು ತಡೆವೆಂ ಮಗಳೇ ॥ ೧೦೦

---

*ರಾಗ—ಕುರಂಜಿ. ॥ ರೂಪಕತಾಳ ॥

ಎಂತುಸೈರಿಪೇ ಸುತೇ । ಎಂತುಸೈರಿಪೆ ॥ಪಲ್ಲ॥ ಸೇರಿನೀನು ಮುಂನಮುಟಜ । ದ್ವಾರದಲ್ಲಿ ರಚಿಸಿದನೀ। ವಾರಬಲಿಯು ನೀಕ್ಷಿಸಿಮಿತಿ । ಮಿಾರುವಳಲನಾಂ ॥ಸುತೇ ॥೧॥ ನೀನು ಕುಶಿತ ತಾಣಗಳನು । ನೀನುಪೊರೆದ ಸುಮವನವನು ॥ ನಾನಭೀಕ್ಷಿಸಲ್ಕೆ ತೊಳಲ್ವ । ಮಾನಸವನು ನಾಂಸುತೇ ॥ ೨ ॥ ಪೊಡವಿಯೊಳಗೆ ಹೆಣ್ಣುಮಗುವ । ಪಡೆವುದೇ ಕಡುಕಷ್ಟವೈಸೆ ॥ ಕಡುರಾಗದೆ ಸಾಕುತೆಹೊರವಡಿಪ । ದುಃಖವ ॥ ಸುತೇ ॥ ೩ ॥

ನಡೆ, ನಿನಗೆ ಮಾರ್ಗವೆಲ್ಲಾ ಮಂಗಳಕರವಾಗಲಿ.

(ಶಕುಂತಳೆಯೂ ಸಂಗಡ ಹೋಗತಕ್ಕವರೂ ಹೊರಟರು.)

ಸಖಿಯರು.—* (ಶಕುಂತಳೆಯನ್ನು ನೋಡಿ) ಹಾ ಹಾ ನಮ್ಮ ಪ್ರಿಯಸಖಿಯಾದ ಶಕುಂತಳೆಯು ವನಪಙ್ತಿಯಿಂದ ಮರೆಯಾದಳಲ್ಲಾ !

ಕಣ್ವರು.—(ನಿಟ್ಟುಸುರನ್ನು ಬಿಟ್ಟು) ಎಲೆ ಅನಸೂಯೆ ನಿಮ್ಮ ಒಡನಾಡಿಯಾದ ಶಕುಂತಳೆಯು ಹೊರಟು ಹೋದಳು; ಶೋಕವನ್ನು ತಡೆದು ನನ್ನೊಡನೆ ಬನ್ನಿ, ಹೊಗೋಣ.

ಇಬ್ಬರು ಸಖಿಯರು.—†ತಂದೆಯೆ, ಶಕುಂತಳೆ ಇಲ್ಲದ್ದರಿಂದ ಶೂನ್ಯವಾದಂತಿರುವ ತಪೋವನವನ್ನು ಹ್ಯಾಗೆ ಹೊಗುವೆವು?

ಕಣ್ವರು.—ಸ್ನೇಹವು ಹೀಗೆ ತೋರ್ಪಡಿಸುವದು (ವಿಚಾರಯುಕ್ತರಾಗಿ ಸ್ವಲ್ಪ ನಡೆದು) ಆಹ! ಶಕುಂತಳೆಯನ್ನು ಪತಿಗೃಹಕ್ಕೆ ಕಳುಹಿಸಿ ಈಗ ನೆಮ್ಮದಿಯನ್ನು ಪಡೆದೆನು.

ಕಂದ॥ ಕನ್ನೆ ಪೆರನೊಡವೆಗಡಪತಿ।
ಸನ್ನಿಧಿಗಿಂದವಳ ಕಳುಹಿನಿರ್ಮಲವಾದ॥
ತ್ತೆನ್ನಯ ಮಾನಸವಾದಂ।
ತನ್ನಯ ಬಳಯಿಟ್ಟೊಡೆವೆಯುಮಗುಳತ್ತನವ್ರೊಲ್॥ ೧೦೧

(ಇಂತೆಲ್ಲರೂ ಹೊರಟು ಹೋದರು).

---

*ರಾಗ—ಧನಾಸರಿ.

ಮರೆಯಾದಳಯ್ಯೋಸಖಿ। ಶರದಿಂದುನಿಭಮುಖಿ॥ ತೆರನೇನು ಪರ್ವಿದೀ। ತರುಸಂಕುಲದಿ॥೧॥ ಕರಿವರಗಾಮಿನಿ। ಕಾಳಾಹಿವೇಣಿ॥ ಕರೆಯದೆ ಸಹಚರಿ। ಕಣ್ವಕುಮಾರಿ॥೨॥

†ಕೆಳದಿಯ ಬಿಟ್ಟುನಾ। ವೆಲೆಮನೆಗೆಂತು॥ ತಳರ್ವೆವು ತಾತಪೇ। ಳಳಲಿನಿತಾಂತು॥೩॥

ಪಂಚಮಾಂಕಂ.

(ಅನಂತರ ಪೀಠಗತನಾದ ರಾಜನೂ ವಿದೂಷಕನೂ ಪ್ರವೇಶಿಸುವರು.)

ವಿದೂ.—(ಕಿವಿಗೊಟ್ಟು) ಎಲೈ ಮಿತ್ರನೆ, ಸಂಗೀತಶಾಲೆಯಕಡೆಗೆ ಚಿತ್ತ ವಿಡು; ಅವ್ಯಕ್ತಮಧುರವಾಗಿಯೂ ವಿಶುದ್ಧವಾಗಿಯೂ ಇರುವ ಗೀತಿಯಲ್ಲಿ ಸ್ವರಯೋಗ ಕೇಳಬರುವದು; ಅಲ್ಲಿ ಪೂಜ್ಯಳಾದ ಹಂಸಪದಿಕೆಯು ವರ್ಣ ವನ್ನು ಅಭ್ಯಾಸಮಾಡುವಳೆಂದು ತಿಳಿಯುವೆನು.

ರಾಜಂ.—ನಾನು ಕೇಳುವವರಿಗೂ ಸುಮ್ಮನಿರು.

(ಆಕಾಶದಲ್ಲಿ ಗಾನಮಾಡಲ್ಪಡುವದು.)

*ಕಂದ ಪೊಸತಪ್ಪ ಮಧುವಬಯಸುತೆ ।
ರಸಾಲಮಂಜರಿಯ ನಂತು ಚುಂಬಿಸಿನೀಂ ಸಾ ॥
ರಸವಾಸಮಾತ್ರದಿಂ ಸಂ ।
ತಸವಾಂತದನೆಂತು ಮರೆದೆ ಯೆಲೆ ಮಧುಕರನೇ ॥ ೧೦೨

ರಾಜಂ.—ಆಃ! ಈ ಗೀತಿಯು ರಾಗವನ್ನು ಉಕ್ಕಿಸುತ್ತಿರುವದು.

ವಿದೂ.—ಏನು ಈ ಗೀತಿಯ ಅಕ್ಷರಾರ್ಥವು ನಿನಗೆ ತಿಳಿಯಿತೆ?

ರಾಜಂ.—(ನಕ್ಕು) ಒಂದಾವರ್ತಿ ಪ್ರೀತಿಸಿದವಳೀಕೆ ಅದರಿಂ ವಸುಮತೀ ದೇವಿಯು ಹೊರತಾಗೂ ವಿಳಿಲವನಾಂತೆನೆಂದು ತಿಳಿಬೆನು ಎಲೈ ಮಿತ್ರ ನಾದ ಮಾಢವ್ಯನೆ, ಜಾಣ್ಮೆಯಿಂದ ವಿಳಿಸಿದೆಯೆಂದು ಹಂಸಪದಿಕೆಗೆ ನಾನು ಹೇಳಿದೆನೆಂದು ಹೇಳು.

ವಿದೂ.—ಆಜ್ಞೆಯಾದಂತಾಗಲಿ (ಎಂದು ಎದ್ದು) ಆಕೆಯು ಪರಹಸ್ತಗಳಿಂದ ನನ್ನ ಜುಟ್ಟನ್ನು ಹಿಡಿಸಿ ಹೊಡಿಸುವಾಗ ಅಪ್ಸರಸ್ತ್ರೀಯು ಕಯ್ಗೆ ಸಿಕ್ಕಿದ ಋಷಿಯಂತೆ ನನಗೆ ಬೇರೇ ಮೋಕ್ಷವಿಲ್ಲ.

---

*ರಾಗ—ಶಂಕರಾಭರಣ (ನೋಟು).

ತುಂಬಿದ ನವಮಕರಂದಕೆ । ನೀಂಬಿಡುತಲಿಬಾಯಾ । ಚುಂಬಿಸಿ ಹೊಸಮಾವಿನಬಗೆ। ಗೊಂಬುವ ಮಂಜರಿಯಾ ॥ ಅಂಬುರುಹಾಶ್ರಯ ಮಾತ್ರದೆ । ನೀಂಬಲುಸುಖಿಸುತ್ತಂ ॥ ತುಂಬಿಯೆ ಯೆಂತದರೊಳಗಣ । ಹಂಬಲವನು ತೊರೆದೈ ॥ ೧ ॥

ರಾಜಂ.—ನಡೆ, ಜಾಣತನದಿಂದ ಆಕೆಗೆ ತಿಳಿಸು.

ವಿದೂ.—ಇನ್ನೇನು ಗತಿ (ಎಂದು ಹೊರಟುಹೋದನು.)

ರಾಜಂ.—(ತನ್ನಲ್ಲಿ ತಾನು) ಇದೇನು ! ಗೀತಿಯ ಅರ್ಥವನ್ನು ಕೇಳಿ ಇಷ್ಟ ಜನದ ಗಲಿಕೆ ಯಾವದೂ ಇಲ್ಲದಿದ್ದರೂ ನನ್ನ ಮನಸ್ಸು ಬಹಳವಾಗಿ ಕಳವಳಪಡುವದು ! ಬಂದುವೇಳೆ—

ವೃತ್ತ॥ ಯಿನಿದೆನಿಸಿಪ್ಪರ್ಶಬ್ದಮನೆಕೇಳಿ ವಿಲೋಕಿಸಿ ರಮ್ಯವಸ್ತುವಂ ।
ಜನಮಿಳೆಯಲ್ಲಿ ನೆಮ್ಮದಿಯನಾಂತಿರುತಿರ್ದೊಡಮುಮ್ಮಳಿಪ್ಪುದೇ ॥
ನೆನಲದುನಿಕ್ಕುವಂ ಪರಿಕಿಸಲ್ಬಗೆಯಿಂದಮಬೋಧಪೂರ್ವಕಂ ।
ನೆನೆದಪನಂತುಭಾವದೊಳೆನಟ್ಟ ಪುರಾಭವ ಸೌಹೃದಂಗಳಂ ॥ ೧೦೩

(ಹೀಗೆ ಪರ್ಯಾಕುಲನಾಗಿ ನಿಲ್ಲುವನು.)

(ಅನಂತರ ಕಂಚುಕಿ ಪ್ರವೇಶಿಸುವನು)

ಕಂಚುಕಿ.—ಅಃ ಇಂಥಾಅವಸ್ಥೆಯನ್ನು ಬಂದಿರುವೆನಲ್ಲಾ !

*ಕಂದ॥ ಧರಣೀಶನಂತಪುರದೊಳ್ ।
ಕರದಿಂಪದ್ಧತಿಗೆ ಪಿಡಿದಬೆತ್ತವೆ ಕಳೆಯಲ್ ॥
ಚಿರಕಾಲಂ ನಡೆವೆಡೆತ ।
ತ್ತರಿಪೆನಗದುಕರದೊಳೂರಿಕೊಳ್ವುದಕಾಯ್ತು ॥ ೧೦೪

ನಮ್ಮ ರಾಯನಿಗೆ ಧರ್ಮಕಾರ್ಯವು ಉಲ್ಲಂಘಿಸತಕ್ಕದ್ದಲ್ಲ ಆದರೂ ಈಗ ತಾನೇ ಧರ್ಮಾಸನದಿಂದ ಎದ್ದ ಈತನಿಗೆ ಪುನಃ ಉಪರೋಧಕಾರಿಗಳಾದ ಕಣ್ವ ಶಿಷ್ಯರ ಆಗಮನವನ್ನು ತಿಳಿಸುವದಕ್ಕೆ ನನಗೆ ಮನಸ್ಸು ಬಾರದು ; ಅಥವಾ ಲೋಕಸಂರಕ್ಷಣಾಧಿಕಾರವು ವಿಶ್ರಾಂತಿ ಇಲ್ಲದ್ದು.

---

*ರಾಗ.—ಕಲಹರಪ್ರಿಯ. ॥ ಚಾಪು ॥

ಯಾರಿಗಿನ್ನಿದನಾನು । ದೂರುವೆನರರೆ । ಮೀರಿದದುಃಖವ ಸೈರಿಸಲಾರೆ ॥ ಪಲ್ಲ ॥
ಹುಟ್ಟಿದು ಮೊದಲ್ಲಾಗಿ । ಕಟ್ಟಿಗೆಕೈಗೆ । ಬಿಟ್ಟದ್ದಲ್ಲವುಸುಖ । ಪಟ್ಟದ್ದೆಹೀಗೆ ॥ ೧ ॥
ಲೆಕ್ಕವಿಲ್ಲದದಿನ ಕಳೆದವುಹಿಂದೆ । ದುಕ್ಕಪಡುವದು ನಾಂ ಹೀಗೆಯೆಮುಂದೆ ॥ ೨ ॥
ಪದ್ಧತಿಯೆಂದು ಕಯ್ಯೊಳಗಾಂತಪೆತ್ತ । ವೃದ್ಧತೆಯೊಳಗೆ ತಪ್ಪಿಸಿತು ವಿಪತ್ತ ॥ ೩ ॥

ವೃತ್ತ॥ ಕಟ್ಟಿದುದಲ್ಲದೊಮ್ಮೆರ್ಗೆಯಿವರೂಥಕೆ ವಾಜಿಯುನಬ್ಜಿನೀಪ್ರಿಯಂ।
ಬಿಟ್ಟುದನೆಂದುಕಾಣನಿರುಳುಂ ಪಗಲುಂಚರಿಪಂಸಮೀರಣಂ॥
ಕೊಟ್ಟನಹೀಂದ್ರನಾತ್ಮಶಿರಮಂ ಸಲೆಭೂಮಿಯಭಾರಕಿಂತಿವಂ।
ನಿಟ್ಟೆಸೆಷಷ್ಠಭಾಗದೊಳೆ ಬಾಳ್ವರಸಂಗಮಿದಲ್ತೆಬೇಹರಂ॥ ೧೦೩

ಇನ್ನು ನಾನು ನನ್ನ ಕಾರ್ಯವನ್ನು ನೋಡುವೆನು (ನಡೆದು ನೋಡಿ) ಇದೋ ಮಹಾರಾಜನು.

ವೃತ್ತ॥ ನಡುವಗಲಲ್ಲಿತಾಂ ನಡಪಿದಂತಿಗಳಂ ರವಿತಪ್ತಯೂಥಪಂ।
ಬಿಡದತಿ ಶೀತಲಸ್ಥಳವಸೇವಿಸುವಂತೆವೊಲೀನರೇಶ್ವರಂ॥
ಇಡಿದನುರಾಗದಿಂ ಪ್ರಜೆಗಳಂ ನಿಜಪುತ್ರರಪೋಷಿಪಂದದಿಂ।
ನಡಪಿವಿವಿಕ್ತಮಾದೆಡೆಯ ಸೇವಿಸುವಂ ಸಲೆಶಾಂತಮಾನಸಂ॥ ೧೦೪

(ಸಮೀಪಕ್ಕೆ ಬಂದು).

ಮಹಾರಾಜನಿಗೆ ವಿಜಯುವಾಗಲಿ! ಹಿಮಾಚಲದ ತಪ್ಪಲಲ್ಲಿ ವಾಸಮಾಡುವ ತಪಸ್ವಿಗಳು ಕಣ್ವರಿಂದ ಸಂದೇಶವನ್ನು ತೆಗೆದುಕೊಂಡು ಸ್ತ್ರೀಸಮೇತರಾಗಿ ಬಂದಿರುವರು; ಅದನ್ನು ಕೇಳಿ ಮಾಡತಕ್ಕ ಕಾರ್ಯವನ್ನು ನಡಸಬೇಕು.

ರಾಜಂ.—(ವಿಶ್ವಾಸ ಪೂರ್ವಕವಾಗಿ) ಏನು, ಕಣ್ವರಿಂದ ಸಂದೇವಶನ್ನು ತಂದಿರತಕ್ಕವರೆ?

ಕಂಚುಕಿ.—ಹೌದು.

ರಾಜಂ.—ಹಾಗಾದರೆ ಆಶ್ರಮವಾಸಿಗಳಾದ ಅವರನ್ನು ವೇದೋಕ್ತವಿಧಿಯಿಂದ ಸತ್ಕರಿಸಿ ಕರೆದುಕೊಂಡು ಬರುವಂತೆ ಉಪಾಧ್ಯಾಯರಾದ ಸೋಮರಾತರಿಗೆ ನಾನು ಹೇಳಿದೆನೆಂದು ಹೇಳು; ನಾನು ಕೂಡ ತಪಸ್ವಿಗಳನ್ನು ಕಾಣುವದಕ್ಕೆ ಯೋಗ್ಯವಾದ ಸ್ಥಳದಲ್ಲಿ ಅವರನ್ನು ನಿರೀಕ್ಷಿಸುತ್ತಿರುವೆನು.

ಕಂಚುಕಿ.—ಆಜ್ಞೆಯಾದಂತಾಗಲಿ (ಎಂದು ಹೊರಟುಹೋದನು).

ರಾಜಂ.—(ಎದ್ದು) ಯಾರು ಹೊರಗೆ?

(ಪ್ರತಿಹಾರಿ ಬರುವಳು.)

ಪ್ರತಿಹಾರಿ.—ಮಹಾರಾಜನೆ ಆಜ್ಞಾಪಿಸಬೇಕು.

ರಾಜಂ.—ವೇತ್ರವತಿ—ಹೋಮಶಾಲೆಯು ಮಾರ್ಗವನ್ನು ತೋರಿಸು.

ವೇತ್ರವತಿ.—ಮಹಾರಾಜನೆ, ಹೀಗೆ ದಯಮಾಡಬೇಕು.

ರಾಜಂ.—(ನಡೆದು ಅಧಿಕಾರದ ಕಷ್ಟವನ್ನು ತೋರ್ಪಡಿಸಿ) ಪ್ರಾಣಿಗಳೆಲ್ಲಾ ತಮ್ಮ ತಮ್ಮ ಇಷ್ಟಾರ್ಥವನ್ನು ಹೊಂದಿ ಸುಖಿಗಳಾಗುವರು. ಅರಸುಗಳಿಗಾದರೋ—ಇಷ್ಟಾರ್ಥಸಿದ್ಧಿಯು ಸಂಗಡಲೇ ದುಃಖ ತೊಡಗಿರುವದು.

ವೃತ್ತ॥ ದೊರೆತನವೈತರಲ್ ಬಯಕೆಹಿಂಗಿದುದೆಂಬುದದೊಂದೆ ಸಂತಸಂ ।
ದೊರೆದುರುರಾಜ್ಯಮಂಸಲಹಿಕೊಂಬುದುಕಷ್ಟವನುಂಟುಮಾಳ್ಪುದೀ
ಪರಿಯೊಳತಿಶ್ರಮಾಪಹರಮುಂ ಶ್ರಮಕಾರಿಯುಮಲ್ಲದಿರ್ಪ್ಪ ಕ ।
ಟ್ಟರಸುತನಂ ಸ್ವಹಸ್ತಧೃತದಂಡಮಹಾತಪವಾರಣೋಪಮಂ ॥ ೧೦೬

(ತೆರೆಯಲ್ಲಿ ವೈತಾಳಿಕನು) ಮಹಾರಾಜನಿಗೆ ವಿಜಯವಾಗಲಿ.

ಮೊದಲವನೇಯವನು.—

ಕಂದ॥ ಸ್ವಸುಖದೊಳಾಸೆಯು ತೊರೆದೀ ।
ವಸುಧೆಯು ಪೊರೆಯಲ್ಕೆನೀಂಬಳಲ್ವುದೆಸಾಜಂ ॥
ಬಿಸಿಲಿನ ಬೇಗೆಗೆ ತಲೆಯಾ ।
ನಿಸಿತರುವುಂಶ್ರಿತರತಂಪಿಸುವುದಲೆನೆಳಲಿಂ ॥ ೧೦೭

ವೃತ್ತ॥ ತಡೆದಪೆನೀಂ ವಿಮಾರ್ಗದೊಳೆ ಪೋಪರ ದಂಡಿಸಿಮೋಣವಿವಾದಮಂ ।
ಬಿಡಿಪೆ ಜನಂಗಳಂಪೊರೆವ ಕಾರ್ಯದೆ ಬಲ್ಲಿದನಪ್ಪೆ ವೈಭವಂ ॥
ಬಡೆದಿರೆ ಬಂದುಸಂದಣಿಪ ಬಂಧುಗಳರ್ಕೆಸಮಂತು ನಿನ್ನೊಳಾ ।
ದೊಡೆ ಕೊನೆಗಂಡುದೈ ಪ್ರಜೆಯ ಬಾಂಧವಕೃತ್ಯಮಿಳಾತಳಾಧಿಪಾ ॥ ೧೦೮

ರಾಜಂ.—ರಾಜ್ಯಭಾರದಿಂದ ಕ್ಲೇಶಪಟ್ಟ ಮನಸ್ಸುಳ್ಳ ನಾವು ಹೊಸಬರಾಗಿ ಮಾಡಲ್ಪಟ್ಟೆವು (ಎಂದು ನಡೆಯುತ್ತಿರುವನು).

ಪ್ರತಿಹಾರಿ.—ಇದೋ, ಹೋಮಧೇನುವಿನೊಡನೆ ಕೂಡಿದ ಹೋಮ ಶಾಲೆಯ ಹೊಸಲು, ಹೊಸದಾಗಿ ಮಾಡಿರುವ ಸಮ್ಮಾರ್ಜನೆಯಿಂದ ಶೋಭಿಸುತ್ತಿರುವದು. ಇದನ್ನು ಆರೋಹಿಸಬೇಕು.

ರಾಜಂ.—(ಅದನ್ನು ಹತ್ತಿ ಪರಿಜನದ ಹೆಗಲಲ್ಲಿ ತನ್ನ ಕಯ್ಯನಿಟ್ಟುನಿಂತು) ಎಲೆ ವೇತ್ರವತಿ, ಏತಕ್ಕೋಸ್ಕರ ಪೂಜ್ಯರಾದ ಕಣ್ವರು ನನ್ನ ಸಮೀಪಕ್ಕೆ ಋಷಿಗಳನ್ನು ಕಳುಹಿಸಿರುವರು ?

ವೃತ್ತ॥ ವ್ರತಿಗಳ್ಮಾಳ್ಪ ತಪಕ್ಕೆಡರ್ ಜನಿಸಿತೋ ಮೇಣಾವನಿಂದಾದೊಡಂ।
ಹತಿತಾಂ ಸಂಭವಿಸಿತ್ತೊ ಧರ್ಮವನಚಾರಿ ಪ್ರಾಣಿವರ್ಗಕ್ಕೆಮೇಣ್ ॥
ಲತೆಗಳ್ ಪುಷ್ಪಫಲಂಗಳಂ ತಳೆವುದಂ ಮಾಣ್ದಿರ್ಪ್ಪವೋಮದ್ದುರಾ।
ಕೃತದಿಂದೆಂಬುತೊಳಲ್ವುದೆನ್ನ ಮನಮಂನಿರ್ಣೈಸದೇನೊಂದುಮಂ॥

ಪ್ರತಿಹಾರಿ.—ಎಲೈ ಮಹಾರಾಜನೆ ಸಚ್ಚರಿತ್ರವನ್ನು ಕೊಂಡಾಡತಕ್ಕವರಾದ ಋಷಿಗಳು ಪೂಜ್ಯರಾದ ತಮ್ಮನ್ನು ಸಂಭಾವಿಸುವದಕ್ಕೆ ಬಂದರೆಂದು ಊಹಿಸುವೆನು.

(ಅನಂತರ ಗೌತಮಿಯೊಡಗೂಡಿದ ಶಕುಂತಳೆಯನ್ನು ಮುಂದಿಟ್ಟು ಮುನಿಗಳು ಪ್ರವೇಶಿಸುವರು ಇವರ ಮುಂದುಗಡೆ ಪುರೋಹಿತನೂ ಕಂಚುಕಿಯೂ ಬರುವರು).

ಕಂಚುಕಿ.—ಪೂಜ್ಯರೆ, ಇತ್ತಿತ್ತ ದಯಮಾಡಬೇಕು.

ಶಾರ್ಙರವ.—ಎಲೈ ಶಾರದ್ವತನೆ ?

ವೃತ್ತ॥ ಬಹುಭಾಗ್ಯಂ ಪಡೆದಿರ್ದಮೀ ನೃಪವರಂ ಮರ್ಯ್ಯಾದೆಯಂ ಮೀರನಿ।
ಮಹಿಯೊಳ್ ಕೇವಳನುಂ ಕರಂ ಕುಪಥದೊಳ್ ಕಾಲಿಕ್ಕನಿಂತಿ
ರ್ದ್ದೊಡಂ॥
ಅಹಹಾ ನೋಡೆ ರಹಸ್ಯದೊಳ್ ಬಳಕೆವೆತ್ತೀಚಿತ್ತದಭ್ಯಾಸದಿಂ।
ದಹನಾಕ್ರಾಂತ ಮೆನಿಪ್ಪ ಮಂದಿರದವೋಲ್ ಕಾಣ್ಬೆಂಜನಾಕೀರ್ಣ
ಮಂ ॥ ೧೧೦

ಶಾರದ್ವತಂ.—ಎಲೈ ಶಾರ್ಙರವನೆ, ಪುರಪ್ರವೇಶದಿಂದ ನೀನು ಹೀಗಾದದ್ದು ಸರಿಯೇ ನಾನುಕೂಡ.

ಕಂದ॥ ವಿಂದಂ ವಿಾಯದನಂ ಗುಣಿ ।
ನಿಂದಿತನಂ ಪವಡಿಸಿದನ ನೇಳ್ದಾತಂ ಸ್ವ ॥
ಚ್ಛಂದಚರಂ ಬದ್ಧನಕಾ ।
ಣ್ಬಂವದೆಸುಖಸಂಗಿಯಾದಜನವಿದನರಿವೆಂ ॥ ೧೧೨

ಶಕುಂ.—(ಅವಶಕುನವನ್ನು ಸೂಚನೆಮಾಡಿ) ಆಹ! ಇದೇನು ನನ್ನ ಬಲಗಣ್ಣು ಹಾರುತ್ತಿದೆ.

ಗೌತಮಿ.—ಎಲೆ ಮಗಳೆ ಅಮಂಗಳವನ್ನು ಹೋಗಲಾಡಿಸಿ ಪತಿಕುಲದೇವತೆಗಳು ನಿನಗೆ ಮಂಗಳವನ್ನುಂಟುಮಾಡಲಿ.

(ಎಂದು ನಡೆಯುವಳು).

ಪುರೋಹಿತ.—(ರಾಜನನ್ನು ತೋರಿಸಿ). ಎಲೈ ತಪಸ್ವಿಗಳಿರಾ ವರ್ಣಾಶ್ರಮರಕ್ಷಕನಾಗಿ ಪೂಜ್ಯನಾದ ಈ ರಾಜನು ಮೊದಲೇ ಪೀಠವನ್ನು ಬಿಟ್ಟು ನಿಮ್ಮನ್ನು ಕಾದಿರುವನು ಈತನನ್ನು ನೋಡಿ.

ಶಾರ್ಙ್ಗರವ.—ಎಲೈ ಬ್ರಾಹ್ಮಣೋತ್ತಮನೆ ಇದು ಬಹಳವಾಗಿ ಕೊಂಡಾಡತಕ್ಕದ್ದೇಸರಿ, ಆದರೂ ಈ ವಿಷಯದಲ್ಲಿ ಪಕ್ಷಪಾತವಿಲ್ಲದೆ ಹೇಳುವೆವು ಕೇಳು.

ಕಂದ॥ ಫಲಭರದೆತಗ್ಗಿರ್ಗುಂತರು ।
ಜಲಂಗಳಿಂ ಜೋಲ್ದಪವು ಘನಂಗಳ್ ಸಿರಿಯಿಂ ॥
ತಲೆವಾಗಿ ನಡೆವರುತ್ತಮ ।
ರಿಳೆಯಲ್ಲಿ ಪರೋಪಕಾರಿಗಳ್ಗಿದು ಸಹಜಂ ॥ ೧೧೩

ಪ್ರತಿಹಾರಿ.—ಎಲೈ ಮಹಾರಾಜನೆ ಋಷಿಗಳನ್ನು ನೋಡಿದರೆ ಪ್ರಸನ್ನಮುಖರಾಗಿರುವಹಾಗೆ ಕಾಣುವರು ಆದ್ದರಿಂದ ಏನೋ ವಿಶ್ವಾಸವಡೆದ ಕಾರ್ಯವುಳ್ಳವರೆಂದು ತಿಳಿಯುವೆನು.

ರಾಜಂ.—(ಶಕುಂತಳೆಯನ್ನು ನೋಡಿ).

ಕಂದ॥ ಮುಸುಕಿಟ್ಟು ತಲೆಗೆ ಸೆರಗಂ ।
ನಸುತೋರ್ಪ ಶರೀರ ಕಾಂತಿಯಿಂ ಬಳಸಿರೆ ತಾ ॥

ಪಸರ್ಗಳ್ ಪಣ್ಣೆಲೆನಡುವಣ ।
ಕಿಸಲಯಮೆನೆ ರಂಜಿಪೀಸುಶೀಲೆಯದಾವಳ್ ॥ ೧೧೪

ಪ್ರತಿಹಾರಿ.—ಮಹಾರಾಜನೆ ನನಗೇನೋ ಬಂದು ವಿಚಿತ್ರವಾದ ವಿಚಾರ ತಲೆದೋರುವದು ಈಕೆಯ ಆಕೃತಿಯಾದರೋ ನೋಡತಕ್ಕದ್ದಾಗಿರುವದು!

ರಾಜಂ.—ಇದ್ದರಿರಲಿ ಪರಪತ್ನಿಯನ್ನು ಬಣ್ಣಿತಕ್ಕದ್ದಲ್ಲ.

ಶಕುಂ.—(ಎದೆಯಲ್ಲಿ ಕಯ್ಯಿಟ್ಟು ತನ್ನಲ್ಲಿ ತಾನು). ಎಲೆ ಮನಸ್ಸೆ ಆರ್ಯಪುತ್ರನ ಭಾವವನ್ನು ನಿರ್ಣಯಿಸದೆ ಏತಕ್ಕೆ ಹೀಗೆ ನಡುಗುವೆ ? ಆ ವರಿಗೂ ಧೈರ್ಯದಿಂದಿರು.

ಪುರೋಹಿತ.—(ಮುಂದಕ್ಕೆ ಬಂದು) ಎಲೈ ಮಹಾರಾಜನೆ ಇದೊ ಋಷಿಗಳನ್ನು ಸತ್ಕರಿಸಿ ಕರೆತಂದಿರುವೆನು ತಮ್ಮ ಗುರುಗಳಿಂದ ಬಂದು ಸಂದೇಶವನ್ನು ತಂದಿರುವರು ; ಅದನ್ನು ನೀನು ಕೇಳಬೇಕು.

ರಾಜಂ.—ಸಿದ್ಧನಾಗಿರುವೆನು.

ಋಷಿಗಳು.—(ಕಯ್ಗಳನ್ನೆತ್ತಿ) ಎಲೈ ಮಹಾರಾಜನೆ, ಜಯಶೀಲನಾಗು.

ರಾಜಂ.—ಎಲ್ಲರಿಗೂ ನಮಸ್ಕರಿಸುವೆನು.

ಋಷಿಗಳು.—ನಿನ್ನ ಕೋರಿಕೆ ಕಯ್ಗೂಡಲಿ.

ರಾಜಂ.—ಮುನಿಗಳ ತಪಸ್ಸು ನಿರ್ವಿಘ್ನವಾಗಿ ನಡೆಯುವದೆ ?

ಋಷಿಗಳು.—

ಕಂದ॥ ನೃಪನೀಂ ರಕ್ಷಕನಾಗಿರೆ ।
ಸುಪುರುಷರ ತಪಕ್ಕೆ ವಿಘ್ನಮೆತ್ತಣಿನಕ್ಕುಂ ॥
ತಪನಂ ಪ್ರಜ್ವಲಿಸುತ್ತಿರೆ ।
ವಿಪುಲಾಮಂಡಲದೆ ತಿಮಿರಮೆಂತುದ್ಭವಿಕುಂ ॥ ೧೧೫

ರಾಜಂ.—ಹಾಗಾದರೆ ನನ್ನ ರಾಜಶಬ್ದವು ಸಾರ್ಥಕವಾದದ್ದು ; ಆದರೆ ಪೂಜ್ಯರಾದ ಕಣ್ವರು ಲೋಕಾನುಗ್ರಹಾರ್ಥವಾಗಿ ಕ್ಷೇಮದಿಂದಿರುವರೆ ?

ಋಷಿಗಳು.—ಸಿದ್ಧಪುರುಷರಿಗೆ ಕ್ಷೇಮವೆಂಬುವದು ಸ್ವಾಧೀನವಾಗಿರುವದು

11970

ಆ ಕುಲಪತಿಗಳಾದ ಕಣ್ವರು ಕುಶಲ ಪ್ರಶ್ನ ಪೂರ್ವಕವಾಗಿ ನಿನಗೆ ಈ ಮಾತನ್ನು ಹೇಳಿರುವರು.

ರಾಜಂ.—ಪೂಜ್ಯರಾದ ಕಣ್ವರು ಏನಾಜ್ಞಾಪಿಸುವರು?

ಶಾರ್ಙರವ.—ಪೂಜ್ಯನಾದ ನೀನು ನಮ್ಮ ಪುತ್ರಿಯನ್ನು ಪರಸ್ಪರ ನಿಬಂಧನೆಯಿಂದ ವರಿಸಿದ ಕಾರಣ ಪ್ರೀತರಾಗಿ ನಾವು ನಿಮ್ಮಿಬ್ಬರಿಗೆ ಅಣತಿಸುವೆವು. ಏತಕ್ಕೆಂದರೆ :—

ವೃತ್ತ॥ ತಿಳಿದೆವು ಪೂಜ್ಯರಾದವರೊಳಗ್ರಣಿ ಯೆನ್ನುತೆ ನಿನ್ನ ನೀ ಶಕುಂ।
ತಳೆಯುಂ ಮನಂಗವಂ ತಳೆದಸತ್ಕ್ರಿಯೆಯೆಂದು ಸಮಾನಸದ್ಗುಣಂ॥
ದಳೆದ ವಧೂವರರ್ಕಳನೆಯೋಜಿಸುತಿಂತು ಹಿರಣ್ಯಗರ್ಭನೀ।
ಗಳೆಕಳೆಕೊಂಡನಲ್ತೆ ಬಹುಕಾಲದೆ ಬಂದ ಜನಾಪವಾದವಂ॥ ೧೧೬

ಆದ್ದರಿಂದ ಈಗ ಗರ್ಭಿಣಿಯಾದ ಈಕೆಯನ್ನು ಧರ್ಮಾಚರಣಾರ್ಥವಾಗಿ ಪ್ರತಿಗ್ರಹಿಸುವದೆಂದು.

ಗೌತಮಿ.—ಎಲೈ ಆರ್ಯನೆ, ನಾನೊಂದು ಮಾತನ್ನು ಹೇಳಲಿಚ್ಛೈಸುವೆನು; ಆದರೆ ನಾನು ಮಾತಾಡುವದಕ್ಕೇ ಅವಕಾಶವಿಲ್ಲ; ಹ್ಯಾಗೆಂದರೆ :—

ಕಂದ॥ ಗುರುಜನವನಪೇಕ್ಷಿಸ ದಾ।
ದರದಿಂದಂ ಬಂಧುಜನವ ಕೇಳದೆ ನೀವೀ॥
ರ್ವರೆ ನೇಹದೊಳೊಡಗೂಡಿದ।
ಪರಿಯಂ ನೋಡಲ್ಕೆ ನಿಮ್ಮೊಳಾರ್ಗೆಂದೊರೆವೆಂ॥ ೧೧೭

ಶಕುಂ.—(ತನ್ನಲ್ಲಿ ತಾನು) ಆರ್ಯಪುತ್ರನು ಏನು ತಾನೇ ಹೇಳುವನೊ?

ರಾಜಂ.—ಇದೇನು! ಇವರು ಉಪನ್ಯಾಸಿಸಿದ್ದು?

ಶಕುಂ.—(ತನ್ನಲ್ಲಿ ತಾನು) ಈ ಮಾತಿನ ಉಪನ್ಯಾಸವಾದರೆ ಬಹು ಯೋಗ್ಯವಾದದ್ದು!

ಶಾರ್ಙ.—ಲೋಕವ್ಯವಹಾರವನ್ನು ಚೆನ್ನಾಗಿ ತಿಳಿದಿರುವನೀವೇ "ಇದೇನು ಉಪನ್ಯಾಸಿಸಿದ್ದು" ಎಂದು ಹೇಳಿದಮೇಲೆ ಇನ್ನು ನಾವು ಆಡತಕ್ಕದ್ದೇನು?

ಕಂದ॥ ಪಳಿವುದು ಲೋಕಂ ತಂದೆಯು।
ನಿಳಯದೆ ಪತಿಯುಳ್ಳ ಸತಿಯು ಮಿರೆವಲವುದರಿಂ॥
ಲಲನೆ ಪತಿಯೆಡೆಯೊಳಿರ್ಪುದ।
ನೆಳಪುದವಂಗಹಿತೆಯಾದೊಡಂ ಬಂಧುಜನಂ॥ ೧೧೬

ರಾಜಂ.—ಹಾಗಾದರೆ ಇವಳನ್ನು ನಾನು ಮದುವೆಯಾಗಿದ್ದೆನೆ?

ಶಕುಂ.—(ತನ್ನಲ್ಲಿತಾನು) ಎಲೆ ಮನಸ್ಸೆ ನೀನು ಕಳವಳಪಡುತ್ತಿದ್ದದ್ದು ಈಗ ಯುಕ್ತವಾಯಿತು.

ಶಾರ್ಙ.—ಕಂದ॥ ಕೃತಕಾರ್ಯದ್ವೇಷವೊ ವಿ।
ಶ್ರುತ ಧರ್ಮಪರಾಙ್ಮುಖತೆಯೊ ಅವಹೇಳನವೋ॥

ರಾಜಂ.—ಇದೇನು ಇಲ್ಲದ್ದನ್ನೂ ಪ್ರಶ್ನೆಮಾಡುವರು?

ಶಾರ್ಙ.—ಕಂದ॥ ಅತಿಶಯಮಾವರಿಸಿಕ್ಕುಗುಂ।
ಕ್ಷಿತಿಯೊಳಗೈಶ್ವರ್ಯಮತ್ತರೊಳಗೀದೋಷಂ॥ ೧೧೭

ರಾಜಂ.—ವಿಶೇಷವಾಗಿ ಧಿಕ್ಕರಿಸಲ್ಪಟ್ಟೆನು.

ಗೌತಮಿ.—ಎಲೆ ಮಗಳೆ ಒಂದು ಮುಹೂರ್ತ ಲಜ್ಜೆಪಡದಿರು; ನಿನ್ನ ಮೇಲುಮುಸುಗನ್ನು ತೆಗೆಯುವೆನು. ಇದರಿಂದ ನಿನ್ನ ಗಂಡನು ನಿನ್ನ ಗುರುತನ್ನು ಹಿಡಿಯುವನು. (ಎಂದು ಮುಸುಗನ್ನು ತೆಗೆಯುವಳು)

ರಾಜಂ.—(ಶಕುಂತಳೆಯನ್ನು ಚೆನ್ನಾಗಿ ನೋಡಿ)

*ವೃತ್ತ॥ ಕಡುಚೆಲುವೊಪ್ಪೆಸಾರ್ದಪೊಸವೆಣ್ಣಿದನಾರಯೆಮುನ್ನಮೇಂಕರಂ।
ಬಿಡಿದೆನೊಮೇಣ್ ಕರಂಬಿಡಿಯೆನೋ ಎನುತಂ ಮನದಲ್ಲಿನಿರ್ಣಯಂ

---

*ರಾಗ—ಮುಖಾರಿ (ನೋಟು).

ಪದ್ಯ॥ ರತಿಗೆಣೆಯಿಾಯಾ ಕೃತಿನೋಡಿದೊಡೀ ಸಖಿಮೊದಲೆನ್ನಿಂದಂ॥ ಕ್ಷಿತಿಯೊಳದೇಂ ಸ್ವೀಕೃತೆಯೋ ಮೇಣ್ ಸ್ವೀ। ಕೃತೆಯಲ್ಲವೊ ಎನುತಂ॥ ಮತಿಯೊಳ್ಸಂಶಯಿಸುತೆ ಹಿಮಕಣಸಂ। ಗತ ಕುಂದವನಳಿಯೋಲ್। ಹಿತವಾಗನುಭವಿಸಲು ಮಾಕೆಯಧಿ। ಕ್ಷಿತಿಗೈಯಲು ಮಾರೆಂ॥

ಬಡೆಯುದೆಕ್ಕ್ಯದೊಳ್ಕ್ಕಿರ್ಪಮಂಜೊಳಗೊಂದಿದವೊಲ್ಲೆ ಪೂವನಾ
ರಡಿಪ್ರೊಲೆ ಭೋಗಿಸಲ್ಕ ಮುಳಿಯಲ್ಕವಣಂ ಬಗೆದಪ್ಪೊಡಾರೆ
ನಾಂ ‖ ೧೨೮

(ಎಂದು ಆಲೋಚಿಸುವನು.)

ಪರಿಜನರು.—(ಮರೆಯಲ್ಲಿ) ಆಹ! ನಮ್ಮ ರಾಯನ ಧರ್ಮದೃಷ್ಟಿಯು ಆಶ್ಚರ್ಯಕರವಾದದ್ದು! ಅನಾಯಾಸವಾಗಿ ದೊರೆದ ಇಂಥಾ ರೂಪವತಿಯನ್ನು ನೋಡಿ ಯಾರುತಾನೇ ಯೋಚಿಸುವರು?

ಶಾರ್ಙ.—ಎಲೈ ರಾಯನೆ—ಇದೇನು ಸುಮ್ಮನಿರುವೆ?

ರಾಜಂ.—ಎಲೈ ತಪಸ್ವಿಯೆ ಎಷ್ಟು ಯೋಚಿಸಿದಾಗ್ಯೂ ಈಕೆಯನ್ನು ಸ್ವೀಕರಿಸಿದ ಸ್ಮರಣೆ ನನಗೆ ಬರುವದಿಲ್ಲ; ಗರ್ಭಚಿಹ್ನೆಯುಳ್ಳ ಈಕೆಯನ್ನು ನನ್ನ ಪತ್ನಿಯೆಂದು ಹ್ಯಾಗೆತಾನೇ ಪರಿಗ್ರಹಸಲಿ.

ಶಕುಂ.—(ಮರೆಯಲ್ಲಿ) ಮದುವೆಯಲ್ಲೇ ಸಂದೇಹವಾದಮೇಲೆ ಬಹುದೂರಕ್ಕೆ ಹತ್ತಿದ್ದ ನನ್ನ ಆಸೆ ಇನ್ನೆಲ್ಲಿ?

ಶಾರ್ಙ.—ಅದೆಲ್ಲಾ ಹಾಗಿರಲಿ,

ಕಂದ‖ ಧನಿಕಂ ಕದ್ದೊಡವೆಗೆ ಕ।
ಳ್ಳನಪಾತ್ರನಗೈದತೆರದೆನೀಂ ಮುಟ್ಟಿದನಂ ‖
ದನೆಯುಂ ಬಹುಮತಿಸುತನಿಂ।
ನ್ನನೆಪಾತ್ರೀಕರಿಸಿ ಬಿಟ್ಟಮುನಿಯೆ ವಿಮಾನ್ಯಂ ‖ ೧೨೯

ಶಾರದ್ವತ.—ಎಲೈ ಶಾರ್ಙರವನೆ, ಈಗ ನೀನು ಸುಮ್ಮನಿರು; ಎಲೌ ಶಕುಂತಳೆಯೆ ನಾವು ಹೇಳಬೇಕಾದನ್ನು ಹೇಳಿದೆವು; ನಿನ್ನನ್ನು ವರಿಸಿದ ಈ ಪೂಜ್ಯನು ಹೀಗೆ ಹೇಳುತ್ತಾನೆ; ಈತನಿಗೆ ನಂಬಿಕೆಯನ್ನುಂಟುಮಾಡುವ ಉತ್ತರವನ್ನು ಕೊಡು.

ಶಕುಂ.—(ಮರೆಯಲ್ಲಿ) ಅಂಥಾ ಅನುರಾಗವು ಈ ಅವಸ್ಥೆಯನ್ನು ಹೊಂದಿದಮೇಲೆ ಸ್ಮರಣೆಯನ್ನುಂಟುಮಾಡುವದರಿಂದೇನುಫಲ? ಮುಖ್ಯವಾಗಿ ಕೊನೆಗೆ ದುಃಖಕ್ಕೆ ಈಡಾದೆನು; (ರಾಜನಿಗೆ ಎದುರಾಗಿ) ಆರ್ಯಪುತ್ರನೆ

(ಎಂದು ಅರ್ಧೋಕ್ತಿಯಲ್ಲಿ) ಮದುವೆಯಾಗಿರುವದರಲ್ಲೇ ಸಂದೇಹ ಉಂಟಾದ ಮೇಲೆ ಇನ್ನು ಆರ್ಯಪುತ್ರನೆಂದು ಕರೆಯುವದು ಹ್ಯಾಗೆ? * ಎಲೈ ಪುರುಕುಲೋತ್ಪನ್ನನೆ ಮೊದಲು ಆಶ್ರಮದಲ್ಲಿ ಕಪಟವೆನ್ನುವದನ್ನೇ ಅರಿಯದ ಈ ಮುಗ್ಧಳನ್ನು ಹಾಗೆ ಶಪಥಪೂರ್ವಕವಾಗಿ ವಂಚಿಸಿ ಈಗ ಇಂಥಾ ಕಠಿನೋಕ್ತಿಗಳಿಂದ ತಿರಸ್ಕರಿಸುವದು ನಿನಗೆ ಯುಕ್ತವಲ್ಲವಲ್ಲಾ!

ರಾಜಂ.—(ಕಿವಿಗಳನ್ನು ಮುಚ್ಚಿಕೊಂಡು) ಶಾಂತಂಪಾಪಂ ಶಾಂತಂಪಾಪಂ (ಎಂದು)

† ಕಂದ॥ ಕುಲದನೆಗಳ್ತಿಯುಮಂ ನೀಂ।
ಕಲುಷಿತಮಂ ಮಾಡಲೆನ್ನುಮಂಕೆಡಪಲ್ಕೇ॥
ಕೆಳಸುವೆ ಕೂಲಂಕಷಶೈ।
ವಲಿನಿಯುವ್ರೋಲ್ ತಿಳಿದ ಜಲಮುಮಂ ತಟಜಮುಮಂ॥ ೧೨

ಶಕುಂ.—ಆಗಲಿ, ನನ್ನನ್ನು ಪರಸ್ತ್ರೀಯೆಂದು ತಿಳಿದ್ದರಿಂದ ನೀನು ಹೀಗಾಗಿರುವೆ, ಈ ಅಭಿಜ್ಞಾನಾಭರಣದಿಂದ ನಿನ್ನ ಸಂದೇಹವನ್ನು ಹೋಗಲಾಡಿಸುವೆನು.

ರಾಜಂ.—ಇದೀಗ ಒಪ್ಪತಕ್ಕದ್ದು.

---

*ರಾಗ—ಬೇಹಾಗು. ॥ ಛಾಪು ॥

ಸರಿಯೆಪೇಳ್ನಿನಗಿದುಭೂಪ। ಓಹೋ। ಪುರುವಂಶ ದೀಪ॥ ಪಲ್ಲ॥ ಆಗಳಾಪರಿಯನು। ರಾಗದಿಂವರಿಸಿನೀ॥ ನೀಗಳೀಪರಿಗೈಯ್ವುದಲ್ಲ। ಏ। ಗತಿಮುಂದೆನಲ್ಲ॥ ೧॥ ಶಪಥವಗೈದುದ। ನಪಲಾಪಿಸುವದಿದು॥ ನೃಪಧರ್ಮವೇನೊನರೇಂದ್ರಾ। ಕೃಪಾ। ಕರಗುಣಸಾಂದ್ರ॥ ೨॥ ಹರಿಗೋಲನೇರಿಸಿ। ಹರಿವಪ್ರವಾಹದೊ॥ ಳುರುಳಿಸುವದು ನಿನಗೊಪ್ಪೆ। ಕರ। ವಿಡಿದುದೆ ತಪ್ಪೆ॥ ೩॥

†ರಾಗ—ಕಮಾಚ್. ॥ ಛಾಪು ॥

(ಶಿವಶಿವಾ!) ಆಹಾ ಕೇಳಲಾರೆನೀಮಾತನೀರೆ ॥ಪಲ್ಲ॥ ಏತಕೆನ್ನಯವಂಶ। ಖ್ಯಾತಿಯ ಕೆಡಿಸೆನೀ। ನಾತುರಪಡುವೆಯ। ನೀತೆ। ಆಹಾಕೇಳ॥ ೧॥ ಎಂತುಯೋಚಿಸಿದೊಡೀ। ಸ್ವಾಂತದಿ ನಿನ್ನವೃ॥ ತ್ತಾಂತವೆಸ್ಫುರಿಸದು। ಕಾಂತೆ॥ ಆಹಾ॥ ೨॥ ದಡವನೊತ್ತುವನದಿ। ಕೆಡಪುವ್ರೋಲ್ತೀರದ॥ ಗಿಡವನೆನ್ನನದೇಕೆ। ಕೆಡಿಪೆಯಾಹಾ॥ ೩॥

ಶಕುಂ.—(ಬೆರಳನ್ನು ಸವರಿ) ಹಾ! ಹಾ! ನನ್ನ ಬೆರಳಿನ ಉಂಗುರ ಇಲ್ಲ ವಲ್ಲಾ! (ಎಂದು ದುಃಖದಿಂದ ಗೌತಮಿಯನ್ನು ನೋಡುವಳು.)

ಗೌತಮಿ.—ಎಲೆ ಮಗಳೆ, ನೀನು ಶಕ್ರಾವತಾರದಲ್ಲಿ ನಿಂದು ಶಚೀತೀರ್ಥ ವನ್ನು ವಂದಿಸುತ್ತಿರುವಾಗ ನಿನ್ನ ಉಂಗುರವು ಬೆರಳಿನಿಂದ ಜಾರಿ ಬಿದ್ದಿ ರಬಹುದು.

ರಾಜಂ.—(ನಕ್ಕು)ಸ್ತ್ರೀಯರು ಸಮಯಕ್ಕೆ ತಕ್ಕ ಬುದ್ಧಿಯುಳ್ಳವರೆಂಬು ವದು ಸುಳ್ಳಲ್ಲ.

ಶಕುಂ.—ಈ ವಿಷಯದಲ್ಲಿ ವಿಧಿಯು ತನ್ನ ಶಕ್ತಿಯನ್ನು ತೋರಿಸಿತು; ಮತ್ತೊಂದು ಗುರುತನ್ನು ಹೇಳುವೆನು.

ರಾಜಂ.—ನೋಡತಕ್ಕದ್ದಂತೂ ಆಯಿತು ಇನ್ನು ಕೇಳತಕ್ಕದ್ದು ಬಂತು.

ಶಕುಂ.—ಎಲೈ, ಒಂದುದಿವಸ ನವಮಾಲಿಕಾ ಮಂಟಪದಲ್ಲಿ ಕುಳಿತಿರು ವಾಗ ನೀರತುಂಬಿದ ಕಮಲಪತ್ರದ ಪಾತ್ರೆಯು ನಿನ್ನ ಕಯ್ಯಲ್ಲಿತ್ತು.

ರಾಜಂ.—ಆಮೇಲೆ ?

ಶಕುಂ.—ಆಗ ದೀರ್ಘಾಪಾಂಗವೆಂಬ ನನ್ನ ಜಿಂಕೆ ಮರಿಯು ಸಮೀಪಕ್ಕೆ ಬರಲು, ಆ ಬಳಿಕ ನೀನು ಕರುಣದಿಂದ "ಮೊದಲು ಇದು ಜಲಪಾನಮಾ ಡಲಿ" ಎಂದು ನೀರನ್ನು ತೋರಿಸಲಿಲ್ಲವೆ? ಅದು ನಿನ್ನಲ್ಲಿ ಅಪರಿಚಯದಿಂದ ನಿನ್ನ ಕಯ್ಯಸಮೀಪಕ್ಕೆ ಬರಲಿಲ್ಲ; ಆಮೇಲೆ ಆ ಜಲಪಾತ್ರೆಯನ್ನೇ ನಾನು ಕಯ್ಗೆ ತೆಗೆದುಕೊಂಡಾಗ ಬಂದು ಜಲಪಾನಮಾಡುವದನ್ನು ನೋಡಿ, ಎಲ್ಲ ವೂ ಸಮಾನಗಂಧವಸ್ತುವಿನಲ್ಲಿ ವಿಶ್ವಾಸಪಡುವದು, ನೀವಿಬ್ಬರೂ ಅರಣ್ಯ ವಾಸಿಗಳೆಂದು ನೀನು ನನ್ನನ್ನು ಹಾಸ್ಯಮಾಡಲಿಲ್ಲವೆ?

ರಾಜಂ.—ಹೀಗೆ ತಮ್ಮ ಕಾರ್ಯನೆರವೇರುವದಕ್ಕಾಗಿ ಸ್ತ್ರೀಯರು ಜೇನು ತುಪ್ಪದಂತಿರುವ ಸುಳ್ಳುಮಾತುಗಳಿಂದ ಕಾಮಿಗಳನ್ನು ಸೆಳೆಕೊಳ್ಳುವರು.

ಗೌತಮಿ.—ಎಲೈ ಮಹಾರಾಜನೆ ನೀನು ಹೀಗೆ ಹೇಳತಕ್ಕದ್ದಲ್ಲ; ತಪೋ ವನದಲ್ಲಿ ಬೆಳೆದ ಈಕೆಯು ಕಪಟವನ್ನು ಅರಿತವಳಲ್ಲ.

ರಾಜಂ.—ಎಲೌವೃದ್ಧ ತಾಪಸಿಯೆ.

ಕಂದ॥ ಕಲಿಸದೆಬರ್ಪ್ಪುದು ಕೌಶಲ।
ವಿಳೆಯೊಳಮಾನುಷಿಗಮರಿದ ಪೆಣ್ಗಳಮಾತೇಂ॥
ಸಲಹಿಂಪುದಲೆ ಮರಿಯಂ ಕೋ।
ಗಿಲೆವೆಣ್ ಕಾಕಂಗಳಿಂದೆ ಪಾರುವವರೆಗಂ॥ ೧೨೩

ಶಕುಂ.—*(ಕೋಪದಿಂದ ಕೂಡಿ) ಎಲೈ ಅನಾರ್ಯನೆ ನಿನ್ನ ಮನದನುಮಾನ ದಿಂದ ಎಲ್ಲವನ್ನೂ ಎಣಿಸಿ ಮಾತಾಡುವೆ; ಮೇಲೆ ಧರ್ಮಕಂಚುಕವನ್ನು ತೊಟ್ಟು ಹುಲ್ಲುಮುಸುಕಿದ ಬಾವಿಯಂತಿರುವ ನಿನಗೆ ಯಾವ ಮನುಷ್ಯ ತಾನೇ ಸಾಟಿಯಾಗುವನು.

ರಾಜಂ.—(ತನ್ನಲ್ಲಿತಾನು) ನನ್ನ ಬುದ್ಧಿಗೆ ಸಂದಿಗ್ಧತೆಯನ್ನುಂಟುಮಾಡುವ ಈ ಕೆಯ ಕೋಪವು ನಿಷ್ಕಪಟವಾಗಿರುವಂತೆ ತೋರುವದು; ಹಾಗೆಯೇಸರಿ ಈಕೆಯು,

ಕಂದ॥ ಬರೆದೇಕಾಂತ ಪ್ರಣಯದ।
ಪರಿಯಂ ವಿಸ್ಮರಣದಾರುಣಂ ತಿಳಿಯದೊಡಾಂ॥
ಅರುಣಾಕ್ಷಿ ಮುರಿದ ಪುರ್ವಿದು।
ಕರವೆಸೆವುದು ಮುಳಿದು ಮುರಿದ ಮದನನ ಧನುವೋಲ್॥೧೨೪

(ಪ್ರಕಾಶವಾಗಿ) ಎಲೌ ಮಂಗಳಾಂಗಿಯೆ ದುಷ್ಯಂತನ ಚರಿತ್ರೆಯು ಪ್ರಸಿ ದ್ಧವಾದದ್ದು ಆದರೂ ನಿನ್ನನ್ನು ಮದುವೆಯಾದದ್ದು ನನಗೆ ಕಾಣಬರುವ ದಿಲ್ಲ.

---

*ರಾಗ—ಕಲಹರಪ್ರಿಯ. ॥ ಆದಿತಾಳ ॥

ಏನನಾಡಿದೆ। ನೀ। ನೇನನಾಡಿದೆ॥ ಪಲ್ಲ॥ ಮಾನವೇಂದ್ರನಾಗೀಸೊಲ್ಲ। ನಾನು ಯದಾದೆನಲ್ಲ॥ ಅನು॥ ಏನು ತಿಳಿಯದಂಗನೆಯುನು। ನೀನುಪಾಯದಿಂದವರಿಸಿ॥ ಜ್ಞಾನ ಹೀನನಂತೆನಿನ್ನ। ಮಾನಸಕ್ಕೆ ಬಂದ ತೆರದೊ। ಳೇನ॥೧॥ ಮಾನವೇನೊ ಧೂರ್ತನಿನ್ನ। ಮಾನಸದನುಮಾನದಿಂದ॥ ನೀನೆಣಿಸುತಲೆಲ್ಲವ ನಾಂ। ಮೌನವಾಂತಿರಲ್ಕೆ ಗಣಿಸ। ದೇನ॥೨॥ ಭಾಪು ಭಾಪು ತೃಣಪರೀತ। ಕೂಪರೂಪ ಭೂಪನಿನ್ನ॥ ನಾ ಪುರುಕುಲ ದೀಪನೆಂದು ಕೈ ಪಿಡಿದುದಕಿದಲೆ ಫಲವ। ದೇನ॥೩॥

ಶಕುಂ.—* ಮುಖದಲ್ಲಿ ಮಧುವನ್ನೂ ಹೃದಯದಲ್ಲಿ ವಿಷವನ್ನೂ ಧರಿಸಿರುವ ಈತನ ಕಯ್ ಸೇರಿದ್ದಕ್ಕೆ ನಾನು ಚೆನ್ನಾಗಿ ಸ್ವಚ್ಛಂದ ಚಾರಿಣಿಯಾದೆನು. (ಎಂದು ಸೆರಗಿನಿಂದ ಮುಖವನ್ನು ಮುಚ್ಚಿಕೊಂಡು ರೋದಿಸುವಳು.)

ಶಾರ್ಙ.—ಹೀಗೆ ತಾನಾಗಿ ಮಾಡಿಕೊಂಡ ಚಾಪಲ್ಯವು ತನ್ನನ್ನು ಬಿಡದೆ ಸುಡುವದು.

ಕಂದ॥ ಅದರಿಂಮಿಗೆ ಪರಿಕಿಸಿ ಮಾ ।
ಳ್ಪುದು ತಾನೇಕಾಂತ ಸಂಗಮವ ನಲ್ಲದಿರಲ್ ॥
ಹೃದಯವನಣ ಮರಿಯದೆ ಮಾ ।
ಡಿದ ಸೌಹೃದಮಿಂತು ಜಗದೊಳಹಿತಮೆನಿಕ್ಕುಂ ॥ ೧೨೪

ರಾಜಂ.—ಎಲೈ ತಪಸ್ವಿಗಳೇ, ಈಕೆಯ ಮಾತಿನಲ್ಲೇ ನಂಬಿಕೆಯನ್ನಿಟ್ಟು ಕಠಿನೋಕ್ತಿಗಳಿಂದ ನಮ್ಮನ್ನು ಏತಕ್ಕೆ ಹೀಗೆ ಆಕ್ಷೇಪಿಸುವಿರಿ?

ಶಾರ್ಙ.—(ಕೋಪದಿಂದ) ಆಹ! ತಾವು ಬಹಳ ಹೆಚ್ಚು ಕಡಮೆ ಮಾತ ಕೇಳಿದಹಾಗಾಯಿತು!

ಕಂದ॥ ಜನಿಮೊದಲಾಗಿರೆ ಮೋಸವ ।
ನಿನಿಸುಂ ಕಾಣದರ ನುಡಿ ಯಸತ್ಯಂ ಪರವಂ ॥
ಚನೆ ವಿದ್ಯೆಯೆಂದು ಕಲ್ತಾ ।
ಜನಗಳ ನುಡಿಗಳ್ ಪ್ರಮಾಣಮಲ್ಲವೆ ಜಗದೊಳ್ ॥ ೧೨೫

ರಾಜಂ.—ಎಲೈ ಸತ್ಯವಾದಿಯಾದ ತಪಸ್ವಿಯೇ ನೀವಾಡಿದಂತೆ ನಾವು ವಂಚಕರೇ ಆಗಲಿ; ಈಕೆಯನ್ನು ವಂಚಿಸಿದ್ದರಿಂದ ನಮಗೆ ಬರತಕ್ಕದ್ದೇನು?

---

*ರಾಗ—ನಾದನಾಮಕ್ರಿಯ. ॥ ಆದಿತಾಳ ॥

ಆರಿಗೆ ಹೇಳುವೆ । ನೀ ರಾಜನ ಕಯ್ಯ । ಸೇರಿದುದಕೆ ನಾಂ । ಸ್ವೈರಿಣಿಯಾದೆನಾ ॥ ಪಲ್ಲ ॥ ವದನದಿ ಮಧುವನು । ಹೃದಯದಿ ವಿಷವನು ॥ ಹುದುಗಿಸಿ ದೀತನ । ಮದುವೆಯಾದವೋಲೆ ॥ ಮಾಡುವದೇನಿನ್ನು । ನೋಡದೆದುಡುಕಿನಿಂ ॥ ಮಾಡಿಕೊಂಡುದಕಿ । ನ್ನಾಡುವದಾರನು ॥ ೧ ॥ ಗುರುಜನ ವೆಸಗಿದ । ಪರಿಣಯವೇ ಸರಿ ॥ ಯೊರೆವುದಿನ್ನೆಂ ಸ್ವಯಂ । ವರವಿಧಿ ಈಪರಿ ॥ ೨ ॥ ಸ್ತ್ರೀ ಜನ್ಮವೇ ದುಃಖ । ಭಾಜನವಲೆ ಮಹಾ ॥ ರಾಜನ ವರಿಸಿ ನಿ । ರ್ವ್ಯಾಜಮಿಂತಾದಮೋ । ಆರಿಗೆ ॥ ೩ ॥

ಶಾರ್ಙ.—ನಿನಗೆ ಬರತಕ್ಕದ್ದೇನೇ? ದೋಷ!

ರಾಜಂ.—ದೋಷವನ್ನು ಪುರುಕುಲದರಸರು ಬಯಸುವರೆಂಬುದಿದು ನಂಬತಕ್ಕದ್ದಲ್ಲ.

ಶಾರದ್ವತ.—ಎಲೈ ರಾಯನೆ, ಉತ್ತರ ಪ್ರತ್ಯುತ್ತರಗಳಿಂದ ಏನು ಪ್ರಯೋಜನ? ಗುರುಗಳಾಜ್ಞೆಯಂತೂ ನಡಸಿದ್ದಾಯಿತು, ಇನ್ನು ನಾವು ಹೊರಟು ಹೋಗುವೆವು. ಆದ್ದರಿಂದ—

ಕಂದ ಮಡದಿ ನಿನಗೀಕೆ ಈಕೆಯ।
ಬಿಡುವೊಡೆ ಬಿಡು ಪತಿಕರಿಪೊಡೆ ನೀಂ ಪತಿ ಕರಿಸೈ॥
ಮಡದಿಯರೊಳ್ಣಿಸೆ ಪತಿಗೊಡ।
ಬಡುವುದು ಗಡ ಸರ್ವತೋಮುಖಂ ಸ್ವಾತಂತ್ರ್ಯಂ॥ ೧೨

ಗೌತಮಿ.—ನಡೆ ಮುಂದಕ್ಕೆ (ಎಂದೆಲ್ಲರೂ ಹೊರಟರು.)

ಶಕುಂ.—ಇನ್ನೇನುಗತಿ! ಈ ಧೂರ್ತನು ನನ್ನನ್ನು ವಂಚಿಸಿಬಿಟ್ಟನು; ದುಃಖಕ್ಕೆ ಗುರಿಯಾದ ನನ್ನನ್ನು ನೀವೂ ಬಿಟ್ಟು ಹೋಗುತ್ತೀರಾ (ಎಂದು ಅವರ ಸಂಗಡ ಹೊರಡುವಳು.)

ಗೌತಮಿ.—(ನಿಂತು) ಎಲೈ ವತ್ಸ ಶಾರ್ಙರವನೆ, ಇದೋಶೋಕಾಕುಲೆಯಾದ ಶಕುಂತಳೆ ನಮ್ಮ ಸಂಗಡ ಬರುವಳು; ಕೈಹಿಡಿದ ಗಂಡನೇ ಹೀಗೆ ಕ್ರೂರನಾಗಿ ತಿರಸ್ಕರಿಸಿದಮೇಲೆ ನನ್ನ ಮಗು ಇನ್ನೇನು ಮಾಡಬಲ್ಲದು.

ಶಾರ್ಙ.—(ಕೋಪಗೊಂಡು ಹಿಂದಕ್ಕೆ ತಿರುಗಿ) ದೋಷದಲ್ಲೇ ದೃಷ್ಟಿಯುಳ್ಳ ಎಲೆ ದುಷ್ಟೆ, ಇದೇನು! ಸ್ವಾತಂತ್ರ್ಯವನ್ನು ವಹಿಸಿದೆ? (ಶಕುಂತಳೆ ಭಯದಿಂದ ನಡುಗುವಳು.)

ಶಾರ್ಙ.—ಶಕುಂತಳೆ—

ಕಂದ॥ ಅರಸಾಡಿದಂತೆ ನೀನಾ।
ಗಿರೆ ನಿನ್ನಂ ತಂದೆಯೆಂತು ಮನೆಯಂ ಪುಗಿಪಂ॥

ಪರಿಶುದ್ಧೆಯಾನೆನುತ್ತಿರಿ ।
ದಿರೆ ನೀಂ ಪತಿಗೃಹದೆ ದಾಸಿಯಪ್ಪುದು ಮುಚಿತಂ ॥ ೧೦೪

ನಿಲ್ಲು ನಿಲ್ಲು ನಾವಿನ್ನು ಹೊರಟು ಹೋಗುವೆವು.

ರಾಜಂ.—ಎಲೈ ತಪಸ್ವಿಗಳೇ, ಇದೇತಕ್ಕೆ ಈಕೆಯನ್ನು ಬಿಟ್ಟು ಹೋಗುತ್ತೀರಿ ?

ಕಂದ॥ ಕುಮುದವನೆ ವಿಕಾಸಿಸುವಂ ।
ಹಿಮಕಿರಣಂ ತಾವರೆಯನೆ ರವಿ ಯರಲಿಸುವಂ ॥
ಯಮಿವರ ಪರಕಾಂತಾ ಸಂ ।
ಗಮದೊಳ್ ಮನವಿಕ್ಕರಲೆಜಿತೇಂದ್ರಿಯರಿಳೆಯೊಳ್ ॥ ೧೦೫

ಶಾರ್ಙ.—ಮತ್ತೊಬ್ಬಳ ಸಂಗದಿಂದ ಪೂರ್ವದಲ್ಲಿ ನಡೆದದ್ದನ್ನು ನೀನು ಮರೆದಿದ್ದದ್ದೇ ಆದರೆ ಅದೆಂತು ಅಧರ್ಮವೆಂದು ಭಯಪಡುವೆ ?

ರಾಜಂ.—ಈ ವಿಷಯದಲ್ಲಿ ಗುರುಲಾಘವವನ್ನು ತಮ್ಮನ್ನೇ ಕೇಳುವೆನು.

ಕಂದ॥ ಪಿರಿದಾಂ ಮೂಢನೊ ಮೋಹಿವ ।
ಳೊರೆದಪಳೋ ಪುಸಿಯನೆಂಬ ಸಂಶಯದೊಳ್ ಪೆಂ ॥
ಡಿರತೊರೆದನಾದಪೆಂಮೇಣ್ ।
ಪರವನಿತೆಯ ಕೂಡಿದಘಕೆ ಗುರಿಯಾದಪ್ಪೆಂ ॥ ೧೦೬

ಪುರೋಹಿತ.—(ವಿಚಾರಮಾಡಿ) ಹಾಗಿದ್ದ ಪಕ್ಷದಲ್ಲಿ ಹೀಗೆಮಾಡಬೇಕು.

ರಾಜಂ.—ಅದೇನು ? ಆಜ್ಞಾಪಿಸಬೇಕು.

ಪುರೋ.—ಪೂಜ್ಯೆಯಾದ ಈಕೆಯು ಹೆರುವವರಿಗೂ ನನ್ನ ಮನೆಯಲ್ಲಿ ಇರಲಿ ; ಹೀಗೇತಕ್ಕೆ ಹೇಳುವಿರೆಂದರೆ, ಮೊದಲಲ್ಲಿ ನಿನಗೆ ಚಕ್ರವರ್ತಿ ಲಕ್ಷಣವುಳ್ಳ ಪುತ್ರನು ಉದಿಸುವನೆಂದು ಋಷಿಗಳು ಹೇಳೇ ಇರುವರು ; ಹಾಗೆ ಈ ಮುನಿಪುತ್ರಿಯಲ್ಲಿ ಹುಟ್ಟುವ ಮಗನು ಚಕ್ರವರ್ತಿ ಲಕ್ಷಣದಿಂದ ಕೂಡಿರುವನಾದರೆ ಆಮೇಲೆ ಅಭಿನಂದಿಸಿ ಈಕೆಯನ್ನು ನಿನ್ನ ರಾಣಿವಾಸಕ್ಕೆ ಸೇರಿಸು ; ಹಾಗೆ ಆಗದೆ ಇರುವ ಪಕ್ಷಕ್ಕೆ ಈಕೆಯನ್ನು ತಂದೆಯಬಳಿಗೆ ಕಳುಹಿಸತಕ್ಕದ್ದು ಸಿದ್ಧವಾಗಿರುವದು.

ರಾಜಂ.—ಗುರುಗಳು ಒಪ್ಪಿದಂತಾಗಲಿ.

ಪುರೋ.—ಎಲೌ ವತ್ಸೆ ನನ್ನ ಸಂಗಡ ಬಾ.

ಶಕುಂ.—* ಎಲೌ ಪೂಜ್ಯಳಾದ ಭೂದೇವಿಯೆ ನನಗೋಸ್ಕರ ಬಾಯನ್ನು ತೆರೆ(ಎಂದು ಅಳುತ್ತಾ ಪುರೋಹಿತನ ಮತ್ತು ತಪಸ್ವಿಗಳ ಸಂಗಡ ಹೊರಟು ಹೋದಳು) (ರಾಜನು ಶಾಪದಿಂದ ಮರವೆಯುಳ್ಳವನಾಗಿ ಶಕುಂತಳೆಯ ಸಂಗತಿಯನ್ನೇ ಚಿಂತಿಸುತ್ತಿರುವನು.)

ತೆರೆಯಲ್ಲಿ.—ಆಶ್ಚರ್ಯ ! ಆಶ್ಚರ್ಯ !

ರಾಜಂ.—(ಕೇಳಿ) ಇದೇನಾಗಿರಬಹುದು !

(ಪುರೋಹಿತನು ಪ್ರವೇಶಿಸಿ).

ಪುರೋ.—(ಆಶ್ಚರ್ಯದೊಡನೆ ಕೂಡಿ) ಎಲೈ ಮಹಾರಾಜನೆ ಒಂದು ಆಶ್ಚರ್ಯ ನಡೆಯಿತಲ್ಲಾ !

ರಾಜಂ.—ಅದೇನು ?

ಪುರೋ.—ಎಲೈ ರಾಜನೆ ಕಣ್ವಶಿಷ್ಯರು ಹೊರಟುಹೋದಮೇಲೆ—

ಕಂದ ಪಳಿಯುತೆ ನಿಜಭಾಗ್ಯವನಾ |
ಯೆಳೆಯಳ್ ತೋಳೆತ್ತಿ ಗೋಳಿಡಲ್ಕುಜ್ಜುಗಿಸಲ್ ||

ರಾಜಂ.—ಆಯಿತು ಆಮೇಲೆ ?

ಪುರೋ.—ಬೆಳಗೊಂದು ಪೆಣ್ಣುರೂಪಿಂ |
ಸೆಳೆದೊಯ್ದುತ್ತವಳನಪ್ಸರಸ್ಸದೆಡೆಯೊಳ್ || ೧೩೯

(ಎಲ್ಲರೂ ಆಶ್ಚರ್ಯಪಡುವರು).

---

*ರಾಗ—ಶಹನ. || ಆದಿತಾಳ ||

ಪಾಪಿ ಪಾಪಿ ವಿಧಿಬಲ್ಲಿದನಲೆನೀ | ನೀಪರಿಯೆನ್ನ ಸಂತಾಪಿಸರಾರು || ಪಲ್ಲ || ಆರಿಗೆದೂರುವೆ | ನಾರೊಳು ಹೋರುವೆ || ಭೂರಮಣನ ನೀತಿ | ದೂರನೆಂದೆನಿಸೆ || ೧ || ಏತಕೀ ಭಾಗ್ಯವಿ | ನ್ನೇತಕೆ ಜನ್ಮತಾ || ನಾತನ ಕೃಪೆ ಈ | ರೀತಿಯೊಳಾಗೆ || ೨ || ಓಪ್ರೊತಾಯೆ ಭೂ | ದೇವಿ ಬಾಯ್ದೆರೆಯಾ || ಜೀವಿತೇಶನ ಬಿಟ್ಟು | ಜೀವವಿದೇಕೆ || ೩ ||

ರಾಜಂ.—ಎಲೈ ಪೂಜ್ಯರೆ ಆ ವಸ್ತುವು ನಮ್ಮಿಂದ ಮೊದಲೇ ತಿರಸ್ಕರಿಸಲ್ಪಟ್ಟಿರುವುದು ; ವ್ಯರ್ಥವಾದ ತರ್ಕದಿಂದ ಇನ್ನುಬರುವದೇನು ತಾವು ವಿಶ್ರಾಂತಿಗೊಳ್ಳಬೇಕು.

ಪುರೋ.—(ನೋಡಿ) ಜಯಶೀಲನಾಗು (ಎಂದು ಹೊರಟುಹೋದನು).

ರಾಜಂ.—ಎಲೆ ವೇತ್ರವತಿ ನನ್ನ ಮನಸ್ಸು ಕಳವಳಗೊಂಡಿರುವದು, ಶಯ್ಯಾಗೃಹದ ಮಾರ್ಗವನ್ನು ತೋರಿಸು.

ಪ್ರತಿಹಾರಿ.—ಎಲೈ ಮಹಾರಾಜನೆ ಇತ್ತಿತ್ತ ದಯಮಾಡಬೇಕು.

(ಎಂದು ನಡೆಯುವಳು).

ರಾಜಂ.—(ತನ್ನಲ್ಲಿ ತಾನು)

* ಕಂದ॥ ನೆನೆಯೆನದೆಂತುಂ ತೊರೆದಾ ।
ಮುನಿಪುತ್ರಿಯನೆನ್ನ ಪತ್ನಿಯೆಂದಾದೊಡಮಾ ॥
ವನಿತೆಯ ನೆನೆನೆನೆದಳಲುವ ।
ಮನವಿದು ನಂಬುಗೆಯನೆನಗೆ ಜನಿಪವೊಲಿರ್ಕುಂ ॥ ೧೩೭

(ಎಂದೆಲ್ಲರೂ ಹೊರಟು ಹೋದರು)

---

*ರಾಗ—ಕಲಹರಪ್ರಿಯ. ॥ ಆದಿತಾಳ ॥

ಅನುತಾಪವೇನಿದು । ಅನಿಮಿತ್ತವಾಗಿ ॥ ಮನದೊಳುದಿಪುದಿದ । ರನುವನರಿಯೆನಾಂ ॥ ೧ ॥ ಮುನಿಸುತೆಯನು ನಿಜ । ವನಿತೆಯನ್ನು ತಲೀ ॥ ಮನದೊಳಗೆಂತುನಾಂ । ನೆನೆಯದಿದ್ದರು ಮಾ ॥ ೨ ॥ ಅಂಬುರುಹಾಕ್ಷಿಯ । ಹಂಬಲಿಸುವ ಬಗೆ ॥ ನಂಬುಗೆ ಗೊಳಿಪುದೇ । ನೆಂಬೆನಿದಕೆನಾಂ ॥ ೩ ॥

ಪಂಚಮ ಷಷ್ಠಾಂಕಗಳ ಮಧ್ಯದಲ್ಲಿ ಪ್ರವೇಶಕಂ.

(ಅನಂತರದಲ್ಲಿ ನಗರಾಧಿಕಾರಿಯ ಭಾವನೂ, ಆತನಹಿಂದೆ ಹಿಂಗಟ್ಟುಮುರಿವುಳ್ಳ ಪುರುಷನನ್ನು ಹಿಡಿದುಕೊಂಡು ಇಬ್ಬರು ಕಾವಲುಗಾರರು ಬರುವರು.)

ಕಾವಲುಗಾರರು.—(ಹೊಡೆದು) ಎಲಾ ಕುಂಭೀಲಕನೆ, ಹೇಳು ಹೇಳು, ರತ್ನಮಯವಾಗಿ ಹೆಸರನ್ನು ಕೆತ್ತಿರುವ ರಾಜಕೀಯವಾದ ಈ ಉಂಗುರವನ್ನು ಎಲ್ಲಿ ಕದ್ದೆ ?

ಪುರುಷ.—(ಭಯವನ್ನು ಅಭಿನಯಿಸಿ) ಎಲೈ ಭಾವಮಿಶ್ರರೆ, ಪ್ರಸನ್ನರಾಗಬೇಕು; ನಾನು ಅಂಥಾ ಅಕಾರ್ಯವನ್ನು ಮಾಡತಕ್ಕವನಲ್ಲ.

೧ನೇ ಕಾವಲುಗಾರ.—ಯೋಗ್ಯನಾದ ಬ್ರಾಹ್ಮಣನೆಂದು ರಾಜನು ನಿನಗೆ ತನ್ನ ಉಂಗುರವನ್ನು ಕೊಟ್ಟನೇನೋ ?

ಪುರುಷ.—ಈಗ ಕೇಳಬೇಕು, ನಾನು ಶಕ್ರಾವತಾರ ತೀರ್ಥದಲ್ಲಿ ವಾಸ ಮಾಡತಕ್ಕ ಅಂಬಿಗನು.

೨ನೇ ಯುವನು.—ಎಲ ಕಳ್ಳ ! ನಾವು ನಿನ್ನ ಜಾತಿಯನ್ನು ಕೇಳಿದೆವೇನೊ?

ಭಾವನು.—ಎಲೈ ಸೂಚಕನೆ ಎಲ್ಲವನ್ನೂ ಕ್ರಮವಾಗಿ ಹೇಳಲಿ ; ಅಷ್ಟರೊಳಗೆ ಇವನನ್ನು ಪ್ರತಿಬಂಧ ಪಡಿಸಬೇಡ.

ಕಾವಲುಗಾರರು.—ಭಾವನ ಆಜ್ಞೆಯಾದಂತಾಗಲಿ.

ರಾಗ.—ಶಂಕರಾಭರಣ—(ನೋಟು).

ಸಿಕ್ಕಿತು ಸಿಕ್ಕಿತು ಸಿಕ್ಕಿತಾಹ । ದಕ್ಕಿತು ದಕ್ಕಿತು ದಕ್ಕಿತಾಹ ॥ ಪ ॥ ಪೋಗಿನಾ ಮಿನ್ಗಳನೆಲ್ಲಮಾರೆ । ಹಾಗವನಲ್ಲದೆ ಕಾಣಲಾರೆ ॥ ಈಗಲೀ ಮುದ್ರಿಕೆ ಕಯ್ಯಸೇರೆ । ಭೋಗದೇವೇಂದ್ರನು ನಾನು ಬೇರೆ ॥ ಸಿಕ್ಕಿತು ॥ ೧ ॥ ಕ್ಕಿತ್ತು ಕಿತ್ತು ದರಲಿ ಬಲೆಗಳೆಲ್ಲಾ । ನೆತ್ತಿಯೊಳ್ ಹೊತ್ತು ಸಾಕಾದೆನಲ್ಲಾ ॥ ಬತ್ತಿದಾ ಕೆರೆಗಳ ಹಂಬಲಿಲ್ಲಾ । ಸುತ್ತಿದಾ ಕಷ್ಟವ ದೇವಬಲ್ಲ ॥ ಸಿಕ್ಕಿತು ॥ ೨ ॥ ಅಂಗಡಿ ಬೀದಿಯ ನಾನು ಸೇರಿ । ಉಂಗುರವನ್ನು ಲೇಸಾಗಿಮಾರಿ ॥ ಪೊಂಗಿಪೇರ್ಮಾಳಿಗೆ ಕಟ್ಟುತೇರಿ । ಅಂಗನೆಗೂಡಿ ಭೋಗಿಪೆನು ಮಿರಿ ॥ ಸಿಕ್ಕಿತು ॥ ೩ ॥

ಭಾವನು.—ಹೇಳು ಹೇಳು.

ಪುರುಷನು.—ನಾನು ಬಲೆ, ಗಾಳ, ಮೊದಲಾದವುಗಳಿಂದ ಮೀನುಗಳನ್ನು ಹಿಡಿದು ಹೆಂಡರು ಮಕ್ಕಳನ್ನು ಸಾಕುವೆನು.

ಭಾವನು.—(ನಕ್ಕು) ಆಹ! ನಿನ್ನ ಜೀವನವು ಬಹು ಪರಿಶುದ್ಧವಾದದ್ದು

ಪುರುಷನು.—ಸ್ವಾಮಿ, ಕೇಳಬೇಕು.

ಕಂದ ॥ ಕ್ಷಿತಿಯೊಳ್ ಕುಲಧರ್ಮಂ ನಿಂ ।
ದಿತವಾದೊಡಮುಳಿವುದಲ್ಲದಂ ಪಶುವಂ ತಾಂ ॥
ಹತಿಗೆಯ್ವುದರೊಳ್ ಶ್ರೋತ್ರಿಯ ।
ನತಿಕರ್ಕಶನಾದೊಡೇಂ ಕೃಪಾನ್ವಿತನಲ್ತೆ ॥ ೧೩೭

ಭಾವನು.—ಆಮೇಲಾಮೇಲೆ ?

ಪುರುಷನು.—ಆಮೇಲೆ ಒಂದು ದಿನ ಕೆಂಪು ಮೀನನ್ನು ತುಡುತುಂಡಾಗಿ ಕತ್ತರಿಸಿದೆನು ಕೂಡಲೆ ಅದರ ಹೊಟ್ಟೆಯಲ್ಲಿ ರತ್ನಗಳಿಂದ ಹೊಳೆಯುವ ಈ ವುಂಗುರವನ್ನು ಕಂಡು; ಆಮೇಲೆ ಇದನ್ನು ಮಾರುವದಕ್ಕಾಗಿ ತೋರಿಸುತ್ತಿದ್ದ ನಾನು ಭಾವಮಿಶ್ರರಿಂದ ಹಿಡಿಯಲ್ಪಟ್ಟೆನು. ಹೊಡೆದರೂ ಹೊಡೆಯಿರಿ ಬಿಟ್ಟರೂ ಬಿಡಿ. ಉಂಗುರ ಸೇರಿದ ಸಂಗತಿಯಂತೂ ಇದು.

ಭಾವನು.—ಜಾನುಕನೆ—ಇದರ ದುರ್ಗಂಧವನ್ನೂ ಘೋರವಾದ ಆಕೃತಿಯನ್ನು ನೋಡಿದರೆ, ಮೀನಿನ ಹೊಟ್ಟೆಯಲ್ಲಿದ್ದದ್ದು ನಿಜ; ಸಂದೇಹವಿಲ್ಲವೆಂದು ಇವನು ಉಂಗುರವನ್ನು ಕಂಡಸಂಗತಿ ವಿಮರ್ಶೆ ಮಾಡತಕ್ಕದ್ದಾಗಿದೆ, ಆದ್ದರಿಂದ ರಾಜಸದನಕ್ಕೆ ಹೋಗುವೆನು.

ಕಾವಲುಗಾರರು.—ಹಾಗಾದರೆ, ಎಲಾ ಗಂಟು ಕತ್ತರಿಸುವನೆ ನಡೆ (ಎಂದು ಎಲ್ಲರೂ ಹೊರಡುವರು.)

ಭಾವನು.—ಎಲೈ ಸೂಚಕನೆ, ಇವನನ್ನು ಊರಬಾಗಿಲಲ್ಲಿ ಎಚ್ಚರದಿಂದ ಕಾದಿರಿ ನಾನು ಈ ಉಂಗುರದ ಸಂಗತಿಯನ್ನು ಮಹಾರಾಜನಿಗೆ ತಿಳಿಸಿ ಇವನಿಗೆ ಮಾಡತಕ್ಕ ಶಿಕ್ಷೆಯನ್ನು ಪ್ರತೀಕ್ಷಿಸಿಕೊಂಡಿದ್ದು ಬರುವೆನು.

ಇಬ್ಬರೂ.—ಭಾವನೆ ಮಹಾರಾಜನ ಅನುಗ್ರಹಾರ್ಥವಾಗಿ ಹೋಗಿ ಬರಬೇಕು.

(ಭಾವನು ಹೊರಟು ಹೋಗುವನು.)

ಮೊದಲನೆಯುವನು.—ಎಲೈ ಜಾನುಕನೆ ಭಾವನು ಹೋಗಿ ಬಹಳ ಹೊತ್ತಾಯಿತು, ಇನ್ನೂ ಬರಲಿಲ್ಲವಲ್ಲ ?

೨ನೇ ಯುವನು.—ಸಮಯವನ್ನು ಕಾದಲ್ಲವೆ ? ರಾಜರನ್ನು ಕಾಣುವದು

೧ನೇ ಯುವನು.—ಎಲೈ ಜಾನುಕನೆ ? ಕೊಲೆಗೆ ಗುರಿಯಾದಿವನ ಕುತ್ತಿಗೆಗೆ ಹುವ್ವಿನ ಮಾಲೆಯನ್ನು ಹಾಕುವದಕ್ಕೆ ನನ್ನ ಕೈಗಳು ಕುಣಿಯುತ್ತಿವೆ (ಎಂದು ಕಳ್ಳನನ್ನು ತೋರಿಸುವನು.)

ಪುರಷನು.—ಮಾನ್ಯರು ಎಂದಿಗೂ ನಿಷ್ಕಾರಣವಾಗಿ ಕೊಲ್ಲಲಾರರು.

೨ನೇ ಯುವನು.—(ನೋಡಿ) ಇದೊ ನಮ್ಮ ಯಜಮಾನನು ರಾಜಾಜ್ಞೆಯನ್ನು ಪಡೆದು ಈ ಕಡೆಯೇ ನೋಡುತ್ತಿರುವನು, ಆದ್ದರಿಂದ ನೀನು ಹದ್ದಿನಪಾಲಾಗುವೆ, ಅಲ್ಲದಿದ್ದರೆ ನಾಯಿ ಮೋರೆಯನ್ನು ನೋಡುವೆ.

(ಭಾವನು ಪ್ರವೇಶಿಸಿ).

ಭಾವನು.—ಸೂಚಕನೆ ಈ ಬಲೆಗಾರನನ್ನು ಬಿಡು, ಉಂಗುರ ಬಂದ ಸಂಗತಿ ಸರಿಯಾದದ್ದು.

೧ನೇ ಯುವನು.—ಅಜ್ಞೆಯಾದಂತಾಗಲಿ.

೨ನೇ ಯುವನು.—ಇವನು ಯಮನಪಟ್ಟಣವನ್ನು ಹೊಕ್ಕು ಹಿಂತಿರುಗಿದನು. (ಎಂದು ಕಟ್ಟನ್ನು ಬಿಚ್ಚುವನು.)

ಪುರುಷನು.—(ಭಾವನಿಗೆ ನಮಸ್ಕರಿಸಿ) ಸ್ವಾಮಿ ನನ್ನ ಜೀವ ನಿಮ್ಮದು.

ಭಾವನು.—ಇದೋ, ಮಹಾರಾಜನು ಉಂಗುರದ ಬೆಲೆಗೆ ತಕ್ಕ ದ್ರವ್ಯವನ್ನು ಪಾರಿತೋಷಿಕವಾಗಿ ಕೊಟ್ಟಿರುವನು. (ಎಂದು ಪುರುಷನಿಗೆ ದ್ರವ್ಯವನ್ನು ಕೊಡುವನು.)

ಪುರುಷನು.—(ನಮಸ್ಕಾರ ಪೂರ್ವಕವಾಗಿ ತೆಗೆದುಕೊಂಡು) ಸ್ವಾಮಿ ನಿಮ್ಮಿಂದ ನಾನು ಅನುಗ್ರಹಿಸಲ್ಪಟ್ಟೆನು.

ಸೂಚಕನು.—ಶೂಲದಿಂದ ಇಳಿದು ಆನೆಯ ಹೆಗಲಲ್ಲಿ ಕುಳ್ಳಿರಿಸಲ್ಪಟ್ಟ ಇವನು ತಾನೇ ಅನುಗ್ರಹಿಸಲ್ಪಟ್ಟವನು.

ಜಾನುಕನು.—ಎಲೈ ಭಾವನೆ, ಆ ಉಂಗುರವನ್ನು ನೋಡಿದ್ದರಿಂದ ಮಹಾರಾಜನಿಗೆ ಬಹಳ ಪ್ರೀತಿಯುಂಟಾಗಿರುವದೆಂದು ಈ ಪಾರಿತೋಷಕವೇ ಹೇಳುವದು.

ಭಾವನು.—ಆ ಉಂಗರವು ರತ್ನಮಯವಾದದ್ದೆಂದು ಮಹಾರಾಜನಿಗೆ ಪ್ರೀತಿಯುಂಟಾಗಲಿಲ್ಲ ಆತನು ಸ್ವಭಾವಗಂಭೀರನಾದರೂ ಅದನ್ನು ನೋಡಿ ಸ್ವಲ್ಪಹೊತ್ತು ಕಣ್ಣಲ್ಲಿ ನೀರುತಂದನು, ಅದರಿಂದ ಆತನಿಗೆ ಯಾವದೋ ಒಂದು ಇಷ್ಟಜನದ ನೆನಪು ಉಂಟಾಯಿತೆಂದೆಣಿಸುವೆನು.

ಸೂಚಕನು.—ಭಾವನಿಗಲ್ಲವೆ ರಾಜ ಸೇವೆ ಫಲಿಸಿದ್ದು ?

ಜಾನುಕನು.—ಹಾಗೆನ್ನಬೇಡ, ಈ ಮೀಂಗುಲಿಯಾದ ಅಂಬಿಗನಿಗೆ ಫಲಿಸಿತೆಂದು ಹೇಳು. (ಎಂದು ಪುರುಷನನ್ನು ಕೋಪದಿಂದ ನೋಡುವನು).

ಪುರುಷನು.—ಸ್ವಾಮಿ, ಈ ಹಣದಲ್ಲಿ ಅರ್ಧ ತಮ್ಮ ಹುವ್ವಿನ ಬೆಲೆಗಾಗಲಿ.

ಜಾನುಕನು.—ಇದೀಗ ಒಪ್ಪತಕ್ಕದ್ದು.

ಭಾವನು.—ಎಲೈ ಅಂಬಿಗನೆ, ಈಗಲೀಗ ನೀನು ನನಗೆ ಪರಮಮಿತ್ರನಾದೆ—ಮದ್ಯಸಾಕ್ಷಿಕವಾಗಿ ನಾವು ಕೆಳೆತನಕ್ಕೆ ಮೊದಲು ಮಾಡಬೇಕು, ಆದ್ದರಿಂದ ನಡೆ, ಮಧ್ಯದ ಅಂಗಡಿಗೆ ಹೋಗೋಣ.

(ಎಂದೆಲ್ಲರೂ ಹೊರಟು ಹೋದರು).

ಷಷ್ಠಾಂಕಂ.

(ಸಾನುಮತಿಯೆಂಬ ಅಪ್ಸರ ಸ್ತ್ರೀಯು ವಿಮಾನದಿಂದ ಪ್ರವೇಶಿಸುವಳು).

ಸಾನುಮತಿ.—ಸಾಧುಜನದ ಸ್ನಾನಕಾಲವೆಂದು ಒಬ್ಬೊಬ್ಬರಾಗಿ ಹೋಗಿ ಬರತಕ್ಕ ಅಪ್ಸರಸ್ತೀರ್ಥಸಾನ್ನಿಧ್ಯವನ್ನು ನಾನೂ ಹೊಕ್ಕು ಬಂದದ್ದಾಯಿತು. ಈಗ ಈ ರಾಜ ಋಷಿಯ ಸಂಗತಿಯನ್ನು ನನ್ನ ಕಣ್ಣಾರೆ ನೋಡುವೆನು; ಮೇನಕಾ ಸಂಬಂಧದಿಂದ ಶಕುಂತಳೆ ನನಗೆ ಶರೀರಪ್ರಾಯಳು; ಆ ಮೇನಕೆಯು ತನ್ನ ಮಗಳಿಗಾಗಿ ಮೊದಲೇ ನನಗೆ ಹೇಳಿರುವಳು. (ಎಂದು ಎಲ್ಲಾ ಕಡೆಯಲ್ಲಿಯೂ ನೋಡಿ) ಇದೇನು! ಉತ್ಸವ ಕಾಲದಲ್ಲಿಯೂ ಅರಮನೆಯಲ್ಲಿ ಉತ್ಸವಾ ರಂಭವಿಲ್ಲದಂತಿರುವದು? ಧ್ಯಾನವಿಶೇಷದಿಂದ ಎಲ್ಲವನ್ನೂ ತಿಳಿಯುವ ಶಕ್ತಿ ನನಗುಂಟು; ಆದರೂ ಸಖಿಯ ವಿಶ್ವಾಸವು ಬಹುಮಾನ ಪಡಿಸತಕ್ಕದ್ದು; ಆಗಲಿ, ಈ ಉದ್ಯಾನ ಪಾಲಿನಿಯರ ಪಾರ್ಶ್ವದಲ್ಲಿ ತಿರಸ್ಕರಣೀ ವಿದ್ಯೆಯಿಂದ ಒಬ್ಬರಿಗೂ ಕಾಣಿಸದಂತೆ ಇದ್ದು ಕೊಂಡು ನೋಡುವೆನು. (ಎಂದು ವಿಮಾನದಿಂದಿಳಿದು ಮರೆಯಾಗಿ ನಿಲ್ಲುವಳು).

(ಆ ಮೇಲೆ ಮಾವಿನ ಚಿಗುರನ್ನು ನೋಡುತ್ತಾ ಒಬ್ಬಳು ಚೇಟಿಯು ಬರುವಳು, ಮತ್ತೊಬ್ಬಳು ಅವಳ ಹಿಂದೆ ಬರುವಳು).

ಮೊದಲನೇ ಯುವಳು.—

*ಕಂದ ‖ ಜೀವಂಮಧುಮಾಸಕೆತೋ ।
ಷಾವಹ ಮಿದುಕೋಕಿಲಕ್ಕೆ ಮೊರೆದೆರಗುವ ಭೃಂ ‖
ಗಾವಳಿಯಡಿಯಿಂ ನೆಗ್ಗಿದ ।
ಮಾವಿನಕೊನರಿದನೆಋತುಗೆಮಂಗಳಮೆಂಬೆಂ ‖ ೧೩೩

---

*ರಾಗ.—ಮೋಹನ (ನೋಟು). ‖ ಝಾಪುತಾಳ ‖

ಮಾವಿನ ತಳಿರದುನೋಡಲ್ಕೆ । ಜೀವಿತವಲೆಮಧುಮಾಸಕ್ಕೆ । ಏಮೇಳುವೆನಾಂ ಕೋಗಿಲೆಗೆ । ತೀವಿದರಸವಾರೋಗಣೆಗೆ ‖ ೧ ‖ ಏನಿದುನೀನೋರ್ವಳೆನಿಂದು । ಮಾನಿನಿ ಮಾತಾಡುವೆಯಿಂದು । ನೀನರಿಮಾವನು ಪರಭೃತಿಕೆ । ತಾನೀಕ್ಷಿಸೆಮದವಲೆಮನಕೆ ‖ ೨ ‖ ಅಮಮಾ ಬಂದುದು ಮಧುಮಾಸಂ । ರಮಣಿಯೆ ಕೃತಹೃದಯೋಲ್ಲಾಸಂ ‖ ಸಮಯವಿದಲೆಕೇಳ್ ಮಧುಕರಿಕೆ । ಕ್ರಮದಿಂಗಾನವಮಾಳ್ಪುದಕೆ ‖ ೩ ‖

ಎರಡನೇಯವಳು.—ಎಲೆ ಸಖಿ ಪರಭೃತಿಕೆ ಇದೇನು? ಒಬ್ಬಳೇನಾ ತಾಡಿಕೊಳ್ಳುವೆ?

ಮೊದಲನೇಯವಳು.—ಎಲೆ ಮಧುಕರಿಕೆ, ಮಾವಿನ ಚಿಗುರನ್ನು ನೋಡಿ ಪರಭೃತಿಕೆಯು ಉನ್ಮತ್ತೆಯಾಗುವದಿಲ್ಲವೆ?

ಎರಡನೇಯವಳು.—(ಸಂತೋಷದೊಡನೆ ಬೇಗನೆ ಸಮೀಪಕ್ಕೆ ಬಂದು) ಆಹ! ವಸಂತಮಾಸ ಬಂತೇ.

ಮೊದಲನೇಯವಳು.—ಎಲೆ ಮಧುಕರಿಕೆ ಈಗ ನಿನ್ನ ಮದಕರವಾದ ವಿಲಾಸಗಾನಕ್ಕೆ ಇದು ಕಾಲವು.

ಎರಡನೇಯವಳು.—ಎಲೆಸಖಿ ಕಾಮದೇವನ ಪೂಜೆಗಾಗಿ ತುದಿಗಾಲಲ್ಲಿ ನಿಂತು ಚೂತಾಂಕುರವನ್ನು ಕೊಯ್ಯುವೆನು, ಅದುವರಿಗೂ ನನ್ನನ್ನು ಹಿಡಿದುಕೊಂಡಿರು.

ಮೊದಲನೇಯವಳು.—ಹಾಗಾದರೆ ಪೂಜಾಫಲದಲ್ಲಿ ನನಗೂ ಅರ್ಧ.

ಎರಡನೇಯವಳು.—ಹೇಳದಿದ್ದರೂ ಬಂದೇಬರುವದು; ನಮಗೆ ಪ್ರಾಣ ಒಂದು ಶರೀರಗಳೆರಡು (ಎಂದು ಸಖಿಯಿಂದ ಅವಲಂಬಿತಳಾಗಿ ಚೂತಾಂಕುರವನ್ನು ಕೊಯ್ಯುವಳು) ಓಹೊ! ಈ ಮಾವಿನ ಮೊಗ್ಗು ಅರಳದಿದ್ದರೂ ತೊಟ್ಟನ್ನು ಮುರಿದುದರಿಂದ ಎಷ್ಟು ಮಗಮಗಿಸುತ್ತಿರುವದು? (ಕಪೋತಹಸ್ತದಿಂದಕೂಡಿ)

ಕಂದ॥ ಎಲೆಚೂತಾಂಕುರನಿನ್ನಂ।
ಮಲರ್ವಿಲ್ಲಂ ತಳೆದ ಕಾಮದೇವಂಗಿತ್ತೆಂ॥
ಸಲೆಮುಳಿದಸಿಯುರಗುರಿಗೊಂ।
ಡಲರಂಬುಗಳೈದರಿಂದೆ ವೆಗ್ಗಳನೆನಿಸಾ॥ ೧೩೪

(ಎಂದು ಮಾವಿನ ಮೊಗ್ಗನ್ನು ಎಸೆಯುವಳು).

(ಆನಂತರ ಕೋಪದಿಂದ ತೆರೆಯನ್ನು ಹಾರಿಸಿಕೊಂಡು ಕಂಚುಕಿ ಬರುವನು).

ಕಂಚುಕಿ.—ಬೇಡಬೇಡ ಎಲೆ ಮುಗ್ಧೆ ಮಹಾರಾಜನು ವಸಂತೋತ್ಸವವನ್ನು ನಿಲ್ಲಿಸಿರುವಾಗ ಏತಕ್ಕೆ ಈ ಮಾವಿನ ಮೊಗ್ಗನ್ನು ಕೊಯ್ಯುವದಕ್ಕೆ ಉಪಕ್ರಮಿಸುವೆ?

ಇಬ್ಬರು.—(ಭಯಪಟ್ಟು) ಎಲೈ ಆರ್ಯನೆ—ಪ್ರಸನ್ನನಾಗಬೇಕು; ನಾವು ಈ ಸಂಗತಿಯನ್ನರಿತವರಲ್ಲ.

ಕಂಚುಕಿ.—ವಸಂತಕಾಲದ ವೃಕ್ಷಗಳೂ ಅವುಗಳನ್ನು ಆಶ್ರಯಿಸಿದ ಪಕ್ಷಿಗಳೂ ಕೂಡ ರಾಜಾಜ್ಞೆಯನ್ನು ಮೀರದಿರುವವು; ಹಾಗೆಯೇಸರಿ—

ವೃ॥ ಬೆರೆಯದು ಬಂಡಿನಿಂದೆ ಚಿರನಿರ್ಗತಮಾದೊಡ ಮಾವುಕೋರಕಂ ।
ಕುರವಕ ಮಿರ್ಪುದಂತೆ ಮುಕುಳಸ್ಥಿತಿಯಲ್ಲಿ ವಿಕಾಸಕಾಂತೊಡಂ॥
ಬರೆಮಧುವುಂ ಸರಂದೆಗೆಯದಿರ್ಪುವು ಕೋಗಿಲೆಗಳ್ನಿಷಂಗದಿಂ ।
ದರೆಯುಗಿನಂಬನಂಜುತುಪಸಂಹರಿಪಂ ಸ್ಮರನೆಂದುಶಂಕಿಪೆಂ॥ ೧೩೩

ಸಾನುಮತಿ.—ಈ ವಿಷಯದಲ್ಲಿ ಸಂದೇಹವಿಲ್ಲ, ಮಹಾ ಪ್ರಭಾವವುಳ್ಳವ ನಲ್ಲವೆ ರಾಜಋಷಿಯು ?

ಮೊದಲನೇಯವನು.—ಎಲೈ ಆರ್ಯನೆ ರಾಷ್ಟ್ರಿಯನಾದ ಮಿತ್ರಾವಸುವು ಮಹಾರಾಜನ ಸನ್ನಿಧಿಯಿಂದ ಇಲ್ಲಿಗೆ ನಮ್ಮನ್ನು ಕಳುಹಿಸಿ ಕೆಲವು ದಿವಸಗ ಳಾದವು. ಇದೋ ಈ ಪ್ರಮದವನವನ್ನೆಲ್ಲಾ ಸಿಂಗರಿಸುತ್ತಿದ್ದೆವು ಅದ ರಿಂದ ಈ ವೃತ್ತಾಂತವು ನಮಗೆ ತಿಳಿಯದು.

ಕಂಚುಕಿ.—ಆಗಲಿ ಇನ್ನುಮೇಲಾದರು ಈ ಕಾರ್ಯಕ್ಕೆ ಪ್ರವರ್ತಿಸಬೇಡಿ.

ಇಬ್ಬರೂ.—ಎಲೈ ಆರ್ಯನೆ, ನಮಗೊಂದು ಕುತೂಹಲ ಉಂಟು; ನಾವು ಕೇಳತಕ್ಕದ್ದಾಗಿದ್ದರೆ ಹೇಳಬೇಕು; ಯಾತಕ್ಕೋಸ್ಕರ ಮಹಾರಾಜನು ವಸಂತೋತ್ಸವವನ್ನು ನಿಲ್ಲಿಸಿರುವನು ?

ಸಾನುಮತಿ.—ಉತ್ಸವಪ್ರಿಯರಲ್ಲವೆ ಮನುಷ್ಯರು ? ಇದಕ್ಕೇನೋಪ್ರ ಬಲಕಾರಣ ಇರಬಹುದು.

ಕಂಚುಕಿ.—ಎಲ್ಲರೂ ತಿಳಿದಿರುವದನ್ನು ನಿಮಗೇತಕ್ಕೆ ಹೇಳಬಾರದು ? ಶಕುಂತಳೆಯನ್ನು ನಿರಾಕರಿಸಿದ್ದರಿಂದ ಉಂಟಾದ ಅಪವಾದ ನಿಮ್ಮಕಿವಿಗೆ ಬೀಳಲಿಲ್ಲವೇ ?

ಇಬ್ಬರೂ.—ರಾಷ್ಟ್ರಿಯನ ಮೂಲಕವಾಗಿ ಮಹಾರಾಜನು ತನ್ನ ಉಂಗು ರವನ್ನು ನೋಡಿದ್ದನ್ನು ಮಾತ್ರ ಕೇಳಬಲ್ಲೆವು.

ಕಂಚುಕಿ.—ಹಾಗಾದರೆ ಇನ್ನು ಸ್ವಲ್ಪವೇ ನಿಮಗೆ ಹೇಳತಕ್ಕದ್ದು ; ಆ ಮಹಾರಾಜನು ಉಂಗುರವನ್ನು ನೋಡಿದ್ದು ಮೊದಲಾಗಿ ಏಕಾಂತದಲ್ಲಿ ಶಕುಂತಳೆಯನ್ನು ವರಿಸಿದ ವಿಷಯ ಸ್ಮೃತಿಗೆ ಬಂದು, "ಅಯ್ಯೋ ಅಜ್ಞಾನದಿಂದ ಧರ್ಮಪತ್ನಿಯನ್ನು ನಿರಾಕರಿಸಿದೆನಲ್ಲಾ" ಎಂದು ಪಶ್ಚಾತ್ತಾಪವನ್ನು ಹೊಂದಿರುವನು.

ಹಾಗೆಯೇಸರಿ.—

ವೃತ್ತ॥ ಎಳಸಂ ರಮ್ಯಪದಾರ್ಥಮಂ ಪ್ರಜೆಗಳಂ ಸಂಭಾವಿಸಂ ಮುನ್ನಿನಂ ।
ತಳಲಿಂ ರಾತ್ರಿಯನೂಂಕುವಂಪೊರಳುತಂಶಯ್ಯಾಂತದೋಳೇಕ್ಷರಿಂ ॥
ದಳಪಿಂತನ್ನಯ ರಾಣಿವಾಸದವರೊಳ್ ಮಾತಾಡುವಾಗಳ್ ಪೆಸರ್ ।
ತಳೆಯಲ್ಪಲ್ಲಟಮಂಸಮಂತೊಗೆದನಾಣಿಂ ಸುಮ್ಮನಿರ್ಪಂನೃಪಂ ॥

ಸಾನುಮತಿ.—ನನಗಿದು ಪ್ರಿಯವಾದದ್ದು.

ಕಂಚುಕಿ.—ಮಹಾರಾಜನ ಈ ಮನೋವ್ಯಾಕುಲತೆಯಿಂದ ಉತ್ಸವವು ನಿರಾಕರಿಸಲ್ಪಟ್ಟಿರುವದು.

ಇಬ್ಬರೂ.—ಯುಕ್ತವು.

(ತೆರೆಯಲ್ಲಿ) ಎಲೈ ಮಹಾರಾಜನೆ ದಯಮಾಡಬೇಕು, ದಯಮಾಡಬೇಕು.

ಕಂಚುಕಿ.—(ಕಿವಿಗೊಟ್ಟು) ಓಹೋ ! ಮಹಾರಾಜನು ಈ ಕಡೆಯೇ ಬರುತ್ತಿರುವನು, ನಿಮ್ಮ ಕೆಲಸಕ್ಕೆ ಹೋಗಿ.

ಇಬ್ಬರೊ.—ಹಾಗಾಗಲಿ (ಎಂದು ಹೊರಟು ಹೋದರು).

(ಆಮೇಲೆ ಪಶ್ಚಾತ್ತಾಪಕ್ಕೆ ತಕ್ಕ ಉಡಿಗೆ ತೊಡಿಗೆಗಳುಳ್ಳ ರಾಜನು ಪ್ರತಿಹಾರಿ ವಿದೂಷಕರೊಡನೆ ಬರುವನು.)

ವಿದೂ.—ಎಲೈ ಮಹಾರಾಜನೆ ದಯಮಾಡಬೇಕು ದಯಮಾಡಬೇಕು.

ಕಂಚುಕಿ.—(ರಾಜನನ್ನು ನೋಡಿ) ಆಹ ! ಎಲ್ಲಾ ಅವಸ್ಥೆಗಳಲ್ಲಿಯೂ ಸೌಂದರ್ಯಶಾಲಿಗಳ ಆಕೃತಿಯು ರಮಣೀಯವಾದದ್ದು; ಹಾಗೆಯೇ ಸರಿ.

ವೃತ್ತ ॥ ನಿಡುಸುಯ್ಗಳ್ ತುಟಿಗೆಂಪನಿಲ್ಲೆನಿಸೆ ಚಿಂತಾಜಾಗರಂಬೆತ್ತುಕ ।
ಣ್ಗಡೆಬೆಂಡೇಳ್ದಿರೆ ಮೆಯ್ಯೊಳಾ ನದಧಿಕಾಲಂಕಾರವಂ ಬೇಸರಿಂ ॥
ದೆಡಗಯ್ಯೊಳ್ಪಿಡಿದಾಂತುಪೊಂಗಡಗವೊಂದಂಕಾರ್ಶ್ಯವೊಂದಿದ್ದೊರ್
ಡಂ ।
ಕಡೆದೊಳ್ಮಾಣಿಕವಂತೆಕಂಗೊಳಿಪನೀತೇಜೋನ್ವಿತಂಭೂಮಿಪಂ ॥

ಸಾನು.—(ರಾಜನನ್ನು ನೋಡಿ) ಶಕುಂತಳೆಯು ತಿರಸ್ಕಾರದಿಂದ ಅವಮಾನಿತಳಾಗಿದ್ದರೂ ಈತನನ್ನು ಹಂಬಲಿಸುತ್ತ ಅಳಲುವದು ಯುಕ್ತವೇಸರಿ.

ರಾಜಂ.—(ಶಕುಂತಳೆಯ ನೆನಪಿಂದ ಜಡನಾಗಿ ನಡೆದು)

*ಕಂದ ॥ ಹರಿಣಾಂಬಕೆ ಮತ್ಪ್ರಿಯೆ ಪರಿ ।
ಪರಿಯಿಂ ಬೋಧಿಸಿದೊಡಂ ಮಲಂಗಿದುದಾಗಳ್ ॥
ಒರೆದಪೆನೇಂ ಹತಹೃದಯಂ ।
ಪಿರಿದುಂ ಸಂಬಲಿಸಿ ಮರುಗಲೇಳ್ದತ್ತೀಗಳ್ ॥ ೧೪೧ ॥

ಸಾನು.—ಈತನು ಹೀಗೆ ಹಂಬಲಿಸುವದು ದುಃಖಿತೆಯಾದ ಶಕುಂತಳೆಯ ಪುಣ್ಯವಲ್ಲವೆ ?

ವಿದೂಷಕ.—(ಮರೆಯಲ್ಲಿ) ಪುನಃ ಶಕುಂತಳೆಯೆಂಬ ವ್ಯಾಧಿಯು ನಮ್ಮ ರಾಯನನ್ನು ಆಕ್ರಮಿಸಿತು ; ಇವನಿಗೆ ಏನು ಚಿಕಿತ್ಸೆ ಮಾಡಬೇಕೋ ನಾನು ಕಾಣೆ.

ಕುಂಚುಕಿ.—(ಸಮೀಪಕ್ಕೆ ಬಂದು) ಮಹಾರಾಜನಿಗೆ ವಿಜಯವಾಗಲಿ ಉಪವನ ಪ್ರದೇಶಗಳು ನಿರುಕಿಸಲ್ಪಟ್ಟವು ; ಮಹಾರಾಜನು ಇಷ್ಟಾನುಸಾರವಾಗಿ ವಿನೋದ ಸ್ಥಾನದಲ್ಲಿ ಕುಳಿತುಕೊಳ್ಳಬೇಕು.

---

* ರಾಗ.—ಜಹಾಗ್. ॥ ಆದಿತಾಳ ॥

ಸೈರಿಸಲಾರೆ । ಮೀರಿದತಾಪವ ॥ ಪ ॥ ತರುಣಿಯುತನ್ನನು । ವರಿಸಿದಗುರುತನು। ಒರೆದರುಕೇಳುತ । ಸ್ಮರಿಸದೆಪೋದೆನು ॥ ೧ ॥ ಕರವಿಡಿದರಸಿಯು । ತೊರೆದನುಪುರುಕುಲ । ದರಸನೆಂಬುದಕೆನಾಂ । ಗುರಿಯಾದೆನಕ್ಕಟಾ ॥ ೨ ॥ ಅಳಿಮನವಿದು । ಪ್ರಿಯೆ । ತಿಳಿಸುವಕಾಲದಿ । ಮಲಗಿದುದೀಗತಾ । ನಳಲ್ವುದಕೇಳ್ವುದು ॥ ೩ ॥

ರಾಜಂ.—ಎಲೆ ವೇತ್ರವತಿ—ಬಹು ದಿವಸಗಳಿಂದ ನಿದ್ರೆಯಿಲ್ಲದಕಾರಣ ಧರ್ಮಾಸನದಲ್ಲಿ ಕುಳಿತುಕೊಳ್ಳತಕ್ಕದ್ದಲ್ಲ ; ನಡಸಿದ ಪೌರಕಾರ್ಯವನ್ನು ಪತ್ರಿಕಾ ಮುಖದಿಂದ ತಿಳಿಸುವಂತೆ ನಾವು ಹೇಳಿದೆವೆಂದು ಮಂತ್ರಿಗೆ ತಿಳಿಸು.

ಪ್ರತಿಹಾರಿ.—ಮಹಾರಾಜನ ಆಜ್ಞೆಯಾದಂತಾಗಲಿ (ಎಂದು ಹೊರಟು ಹೋದಳು.)

ರಾಜಂ.—ಎಲೈ ವಾತಾಯನನೆ, ನೀನೂ ನಿನ್ನ ಕಾರ್ಯವನ್ನು ನೋಡು.

ಕಂಚುಕಿ.—ಹಾಗಾಗಲಿ, (ಎಂದು ಹೊರಟು ಹೋದನು.)

ವಿದೂ.—ಈಗ ನೀನು ಬಂದು ನೊಣವೂ ಇಲ್ಲದಂತೆ ಮಾಡಿದೆ, ಇನ್ನು ಶೀತಲವಾಗಿಯೂ ತಾಪಹರವಾಗಿಯೂ ರಮಣೀಯವಾಗಿಯೂ ಇರುವ ಈ ಉಪವನಪ್ರದೇಶದಲ್ಲಿ ಕುಳಿತು ನಿನ್ನ ಮನಸ್ಸನ್ನು ಸಂತೋಷ ಪಡಿಸುವನಾಗು.

ರಾಜಂ.—ಎಲೈ ಸ್ನೇಹಿತನೆ, ರಂಧ್ರೋಪನಿಪಾತಿನೋऽನರ್ಥಾಃ ಎಂಬ ಮಾತು ತಪ್ಪತಕ್ಕದಲ್ಲ. ಏತಕ್ಕೆಂದರೆ—

ಕಂದ ॥ ಅಂದು ಮುನಿಪುತ್ರಿಯಂ ನಲ ।
ವಿಂದಾನೇಕಾಂತದಲ್ಲಿ ವರಿಸಿದನೆನಪುಂ ॥
ಬಂದುದು ಮನಕೊಡನಿಸುವಾ ।
ಕಂದರ್ಪನಕರಕೆ ಚೂತಪಲ್ಲವಶರಮುಂ ॥ ೧೪೮

ವಿದೂ.—ತಾಳು, ಈ ದಂಡಕಾಷ್ಟದಿಂದ ಮನ್ಮಥವ್ಯಾಧನನ್ನು ನಾಶ ಮಾಡುವೆನು. (ಎಂದು ದಂಡವನ್ನು ಎತ್ತಿ ಮಾವಿನ ಚಿಗುರನ್ನು ಕೆಡಹುವದಕ್ಕೆ ಹೊಗುವನು.)

ರಾಜಂ.—(ನಕ್ಕು) ಆಗಲಿ ಬ್ರಾಹ್ಮಣರ ಪರಾಕ್ರಮವನ್ನು ನೋಡಿದ್ದಾಯಿತು. ಎಲೈ ಮಿತ್ರನೆ, ಎಲ್ಲಿ ಕುಳಿತು ನನ್ನ ಪ್ರಿಯೆಯನ್ನು ಸ್ವಲ್ಪ ಹೋಲುತ್ತಿರುವ ಲತೆಗಳಲ್ಲಿ ದೃಷ್ಟಿಯನ್ನಿಟ್ಟು ವಿನೋದಪಡಿಸಲಿ ?

ವಿದೂ.—“ ಮಾಧವೀ ಮಂಟಪದಲ್ಲಿ ಈ ವೇಳೆಯನ್ನು ಕಳೆಯುವೆನು

ಅಲ್ಲಿಗೆ ನನ್ನ ಕಯ್ಯಿಂದ ಬರೆದ ಪೂಜ್ಯಳಾದ ಶಕುಂತಳೆಯ ಭಾವಚಿತ್ರವನ್ನು ತೆಗೆದು ಕೊಂಡುಬಾ" ಎಂದು ಸಮ್ಮುಖದ ಪರಿಚಾರಿಣಿಯಾದ ಚತುರಿಕೆಗೆ ನೀನು ಆಜ್ಞಾಪಿಸಿ ಇರುವೆಯಷ್ಟೆ.

ರಾಜಂ.—ಅದೇಯೆ ಈಗ ಮನಸ್ಸನ್ನು ವಿನೋದ ಪಡಿಸತಕ್ಕದ್ದು; ಆದ್ದರಿಂದ ಆ ಮಾಧವೀ ಮಂಟಪದ ಮಾರ್ಗವನ್ನು ತೋರಿಸು.

ವಿದೂ.—ಎಲೈ ಪೂಜ್ಯನೆ ಇತ್ತಿತ್ತ ಬರಬೇಕು.

(ಇಬ್ಬರೂ ಹೋಗುವರು, ಸಾನುಮತಿಯೂ ಸಂಗಡ ಹೋಗುವಳು.)

ಇದೋ—ರತ್ನದ ಹಾಸರೆಯಿಂದ ಕೂಡಿದ ಮಾಧವೀ ಮಂಟಪವು ಭೋಗ್ಯವಸ್ತುಗಳಿಂದ ಮನೋಹರವಾಗಿರುವ ಕಾರಣ ನಿಜವಾಗಿ ಕುಶಲಪ್ರಶ್ನಪೂರ್ವಕವಾಗಿ ನಮ್ಮನ್ನು ಪತಿಕರಿಸುವಂತಿದೆ, ಆದಕಾರಣ ಅಲ್ಲಿಗೆಹೋಗಿ ಕುಳಿತುಕೊಳ್ಳೋಣ ನಡೆ.

ಇಬ್ಬರು.—(ಪ್ರವೇಶವನ್ನು ಅಭಿನೈಸಿ ಕುಳಿತುಕೊಳ್ಳುವರು.)

ಸಾನು.—ಈ ಲತೆಯ ಸಮೀಪದಲ್ಲಿ ಇದ್ದು ಸಖಿಯ ಭಾವಚಿತ್ರವನ್ನು ನೋಡುವೆನು, ಆಮೇಲೆ ತನ್ನ ಪತಿಗಿರುವ ಬಹಳವಾದ ಅನುರಾಗವನ್ನು ಆಕೆಗೆ ತಿಳಿಸುವೆನು, (ಎಂದು ಲತೆಯ ಸಮೀಪದಲ್ಲಿ ನಿಲ್ಲುವಳು.)

ರಾಜಂ.—ಎಲೈ ಮಿತ್ರನೆ, ಶಕುಂತಳೆಯ ಪೂರ್ವ ವೃತ್ತಾಂತವನ್ನೆಲ್ಲಾ ಈಗ ಸ್ಮರಿಸುವೆನು ; ನಿನಗೂ ಹೇಳಿದ್ದೆನು , ತಿಳಿದಿದ್ದ ನೀನು ಆಕೆಯನ್ನು ನಾನು ನಿರಾಕರಿಸುವ ಕಾಲದಲ್ಲಿ ನನ್ನ ಸಮೀಪಕ್ಕೂ ಬರ ದೆಹೋದೆ; ಮೊದಲು ಯಾವಾಗಲೂ ಪೂಜ್ಯಳಾದ ಆ ಶಕುಂತಳೆಯ ಹೆಸರನ್ನೂ ನೀನು ಕೊಂಡಾಡಲಿಲ್ಲ ? ಇದೇನು ? ನನ್ನ ಹಾಗೆಯೇ ನೀನೂ ಮರೆದೆಯಲ್ಲಾ !

ವಿದೂ.—ನಾನು ಮರೆಯಲ್ಲಿಲ್ಲ, ಆದರೆ ಎಲ್ಲವನ್ನೂ ಹೇಳಿ ಕೊನೆಗೆ "ಇದು ಪರಿಹಾಸೋಕ್ತಿಯೇ ಹೊರತು ನಿಜವಲ್ಲವೆಂದು" ನೀನು ಹೇಳಿದ್ದರಿಂದ ಮಣ್ಣಿನ ಮುದ್ದೆಯಂತೆ ಬುದ್ಧಿಯುಳ್ಳ ನಾನು ಹಾಗೆಯೇಗ್ರಹಿಸಿದೆನು ; ಬರುವ ಕಷ್ಟಸುಖಗಳನ್ನು ಯಾರು ತಾನೆ ಮಾರಬಲ್ಲರು ?

ಸಾನು.—ಹಾಗೆಯೇ ಸರಿ.

ರಾಜಂ.—(ನೆನದು) ಎಲೈ ಮಿತ್ರನೇ ನನ್ನನ್ನು ರಕ್ಷಿಸು.

ವಿದೂ.—ಎಲೈ ಇದೇನು? ಹೀಗೆ ದುಃಖಿಸುವದು ನಿನಗೆ ತಕ್ಕದ್ದಲ್ಲ; ಸತ್ಪುರುಷರು ಎಂದಿಗೂ ದುಃಖಕ್ಕೆ ಈಡಾಗುವದಿಲ್ಲ ; ಬಿರುಗಾಳಿ ಬೀಸಿದರೂ ಪರ್ವತಗಳು ಅಲ್ಲಾಡದಿರುವವಲ್ಲವೆ ?

ರಾಜಂ.—ಎಲೈ ಮಿತ್ರನೆ, ನಿಷ್ಕಾರಣವಾಗಿ ನಾನು ನಿರಾಕರಿಸಿದ್ದರಿಂದ ದುಃಖಿತೆಯಾದ ಪ್ರಿಯೆಯ ಅವಸ್ಥೆಯನ್ನು ನೆನೆದು ರಕ್ಷಕರಿಲ್ಲವೆಂದು ಕಳವಳಿಸಿದೆನು.

*ವೃತ್ತ॥ ಎಂನಿಂಧಿಕ್ಕೃತೆಯಾಗಿ ತನ್ನ ಜನಮಂಬೆನ್ನಂಟಲುದ್ಯುಕ್ತೆಯು ।
ಪ್ಪಂನಂನಿಲ್ಲೆಲೆಗೇಯೆನುತ್ತೆ ಗುರುಶಿಷ್ಯಂ ಕೋಪದಿಂಗರ್ಜಿಸಲ್ ॥
ಬಂನಂಬೊಂದುತೆಮತ್ತವಳ್ಕವಿಯೆಬಾಷ್ಪಂಕಣ್ಗಳೊಳ್ಕ್ರೂರನಾ।
ದೆಂನಲ್ಲಿಟ್ಟವಲೋಕನಂ ವಿಷದಮುಳ್ಳಂತೆನ್ನನಾ ಚುಚ್ಚುಗುಂ ॥

ಸಾನು —ಆಹ ! ಸ್ವಕಾರ್ಯ ಪರತ್ವವೆಂಬುವದು ಹೀಗೆತಾನೆ, ಈತನ ಸಂತಾಪದಿಂದ ನಾನು ಸಂತಸಪಡುವೆನು.

ವಿದೂ.—ಎಲೈ ಯಾರೋ ಒಬ್ಬ ಖೇಚರನು ಪೂಜ್ಯಳಾದ ಆಕೆಯನ್ನು ತೆಗೆದುಕೊಂಡೊಯ್ದನೆಂದು ಊಹಿಸುವೆನು.

ರಾಜಂ.—ಪತಿವ್ರತೆಯನ್ನು ಮುಟ್ಟುವದಕ್ಕೆ ಯಾವನುತಾನೇ ಶಕ್ತನಾದಾನು? ನಿನ್ನ ಸಖಿಗೆ ಮೇನಕೆಯು ಜನನಿಯೆಂದು ಕೇಳಿ ಬಲ್ಲೆನು, ಯಾರೋ ಆಕೆಯ ಸಹಚಾರಿಣಿಯರು ಅವಳನ್ನು ಕೊಂಡೊಯ್ದರೆಂದು ನನ್ನ ಮನಸ್ಸು ಶಂಕಿಸುವದು.

ಸಾ.—ಜ್ಞಾನಕ್ಕಿಂತಲೂಅಜ್ಞಾನವೂಆಶ್ಚರ್ಯವನ್ನುಂಟುಮಾಡತಕ್ಕದ್ದಾಗಿದೆ.

---

*ರಾಗ—ಭೈರವಿ. ॥ ರೂಪಕತಾಳ ॥

ಎಂತು ಮರೆಯುವೆನು ಕಾಂತೆಯನು ನಾ । ನೆಂತುಮರೆಯುವೆನು ॥ ಪ ॥ ಅಂತಾಕೆದುಃಖವ । ನಾಂತು ಪೋದುದನುನಾ । ನೆಂತುಮರೆಯುವೆನು ॥ ಅ ॥ ಧಿಕ್ಕರಿಸಿದರೆ । ಋಷಿಶಿಷ್ಯನ । ಪಕ್ಕವಸೇರೆ । ಅವಹುಬ್ಬುಗಂ । ಟಿಕ್ಕುತಗಜರೆ । ಮನದಲ್ಲಿತಾಂ । ದುಕ್ಕಿಸುತರರೆ । ಅಕ್ಕಟಕಣ್ಣನೀ । ರ್ಮಿಕ್ಕುಳಿಸುತಲೆನ್ನ । ದಿಕ್ಕಿಲ್ಲದವಳಂತೆ । ದಿಟ್ಟಿಸಿದುದನುನಾ । ನೆಂತುಮರೆಯುವೆನು ॥ ೧ ॥

ವಿದೂ.—ನೀನು ಹೇಳಿದಂತೆ ಆಗಿದ್ದರೆ ಆಕೆಯ ಸಮಾಗಮವು ನಿನಗೆ ಕಾಲದಲ್ಲೇಸಿದ್ಧಿಸುವದು.

ರಾಜಂ.—ಅದು ಹ್ಯಾಗೆ?

ವಿದೂ.—ತಂದೆತಾಯಿಗಳು ಪತಿಯನ್ನು ಅಗಲಿ ದುಃಖಿಸುವ ಮಗಳನ್ನು ಬಹುಕಾಲ ನೋಡಿ ಸೈರಿಸುವರೆ?

ರಾಜಂ.—ಎಲೈ ಸ್ನೇಹಿತನೆ—

ಕಂದ॥ ಕನಸೋ ಭ್ರಮೆಯೋ ಮಾಯೆಯೊ।
ಕೊನೆಗಂಡುದೊ ಪುಣ್ಯಮನಿತೆ ಫಲದಿಂಮೇಣಿ॥
ನ್ನನುಗೊಳಲದೆಸಂದುದುಮು।
ನ್ಮನೋರಥಂ ಗಳಪೊನಲ್ಗೆತೀರಮೆ ಇಲ್ಲಂ॥ ೧೪೨

ವಿದೂ.—ಹೀಗೆನ್ನಬೇಡ, ಮುಂದೆ ಆಕೆಯ ಸಮಾಗವು ತಪ್ಪದೇ ಆಗುವದೆಂಬುವದಕ್ಕೆ ಈ ಉಂಗುರವೇ ನಿದರ್ಶನವಲ್ಲವೆ?

ರಾಜಂ.—(ಉಂಗುರವನ್ನು ನೋಡಿ) ಅಯ್ಯೋ ಸುಲಭವಲ್ಲದ ಸ್ಥಾನವನ್ನು ಹೊಂದಿ ಜಾರಿದ್ದರಿಂದ ಈ ಉಂಗುರವು ದುಃಖಪಡಿಸತಕ್ಕದ್ದಾಗಿದೆ.

* ಕಂದ॥ ಪರಿಭಾವಿಪೆನೆನ್ನವೊಲುಂ।
ಗುರನಿನ್ನಂ ಫಲದಿನಲ್ಪ ಪುಣ್ಯಮೆನುತ್ತಂ॥
ಹರಿಣಾಕ್ಷಿಯರುಣನಖಭಾ।
ಸುರಮಾದಂಗುಳಿಯ ಸೇರಿಜಾರಿದ ಕತದಿಂ॥ ೧೪೩

ಸಾನು.—ನಿಜ ಇದು ಪರಹಸ್ತವನ್ನು ಸೇರಿದ್ದರೆ ದುಃಖಪಡಿಸತಕ್ಕದ್ದಾಗುತಿತ್ತು.

---

*ರಾಗ—ಕಮಾಚು (ಹಿಂದೂಸ್ತಾನಿ). ॥ ಚಾಪುತಾಳ ॥

ಉಂಗುರವೇ ಉಳಿವರೆಪ್ರಿಯೆ । ಯಂಗುಲಿಯನು ನೀ । ನುಂಗುರವೆ ॥ಪ॥ ಆಳಿಕುಂತಳೆಯಾದ ಶಕುಂ । ತಳೆಯ ಸೇರ್ದರೂ ॥ ಉಳಿದೆವಲ್ಪ ಪುಣ್ಯರು ನಾ । ವಿಳೆಯೊಳೀರ್ವರು ॥ ೧ ॥ ನೀರೆಯನುಣ್ಬೆರಳೆಡೆಯನು । ಸೇರಿಪುಣ್ಯದಿ ॥ ಜಾರುತೆಂತುಮುಳುಗಿದೆನೀಂ ನೀರೊಳಕ್ಕಟಾ ॥ ಉಂಗು ॥ ೨ ॥ ಏಕಿನ್ನಾಡಲಿ ನಿನ್ನ ವಿ । ವೇಕಿಯಾಗಿನಾಂ । ಸ್ವೀಕರಿಸಿದರ್ಶಕೆಯನು ನಿ ॥ ರಾಕರಿಸಿದಮೇ ॥ ಉಂಗುರವೆ ॥ ೩ ॥

ವಿದೂ—ಎಲೈ ಮಹಾರಾಜನೆ, ಯಾವ ಉದ್ದೇಶದಿಂದ ಈ ಉಂಗುರವು ಆಕೆಯ ಹಸ್ತವನ್ನು ಹೊಂದಿಸಲ್ಪಟ್ಟಿತ್ತು ?

ಸಾನುಮತಿ.—ನನಗೂ ಇದನ್ನು ತಿಳಿಯಬೇಕೆಂಬ ಕುತೂಹಲವುಂಟು.

ರಾಜಂ.—ಕೇಳು, ಇನ್ನೆಷ್ಟು ಕಾಲವಿಳಂಬವಾಗಿ ನಿನ್ನ ಪ್ರಾಪ್ತಿಯನ್ನುಂಟುಮಾಡುವೆಯೆಂದು ನಾನು ಪಟ್ಟಣಕ್ಕೆ ಹೊರಟಕಾಲದಲ್ಲಿ ಪ್ರಿಯೆಯು ಕಣ್ಣೀರಿಂದ ಕೂಡಿ ಹೇಳಿದಳು.

ವಿದೂ.—ಆಮೇಲಾಮೇಲೆ ?

ರಾಜಂ.—ಆಮೇಲೆ ಈ ಮುದ್ರಿಕೆಯನ್ನು ನಾನು ಆಕೆಯ ಬೆರಳಲ್ಲಿಟ್ಟು ಹೀಗೆ ಹೇಳಿದೆನು.

ಕಂದ ‖ ಅನುದಿನ ಮೊಂದೊಂದಾಗೆಣಿ ।
ಸಿನಿಯಳೆಮನ್ನಾಮದಕ್ಷರಂಗಳ ಕೊನೆಸಾ ‖
ರ್ದನಿತರೊಳಕ್ಕರ್ಗಂ ನಿನ್ನಯ ।
ಸನಿಯ ದೊಳೆನ್ನಂತವುರವ ನೊಂದಿಪ್ಪ ಜನಂ ‖ ೧೪೩

ಹೇಳಿದ್ದನ್ನು ಕ್ರೂರನಾದ ನಾನು ಅಜ್ಞಾನದಿಂದ ನಡೆಸದೇ ಹೋದೆನು.

ಸಾನು.—ಗಡಬವಾದರೊ ರಮಣೀಯವಾದದ್ದು. ಅದನ್ನು ವಿಧಿಯು ತಪ್ಪಿಸಿತು.

ವಿದೂ.—ಈ ಉಂಗುರ ಅಂಬಿಗನು ಕತ್ತರಿಸಿದ ಕೆಂಪುಮೀನಿನ ಹೊಟ್ಟೆಯಲ್ಲಿದ್ದದ್ದು ಹ್ಯಾಗೆ?

ರಾಜಂ.—ನಿನ್ನ ಸಖಿಯು ಶಚೀತೀರ್ಥವನ್ನು ವಂದಿಸುವಾಗ ಬೆರಳಿಂದ ಜಾರಿ ಗಂಗಾಪ್ರವಾಹದಲ್ಲಿ ಬಿತ್ತು.

ವಿದೂ.—ಯುಕ್ತವು.

ಸಾನು.—ಆದ್ದರಿಂದ ದುಃಖಿತೆಯಾದ ಶಕುಂತಳೆಯಲ್ಲಿ ಅಧರ್ಮಭೀರುವಾದ ಈ ರಾಜಋಷಿಗೆ ಮದುವೆಯಲ್ಲಿ ಸಂದೇಹವುಂಟಾಯಿತು ; ಅಥವಾ ಇಂಥಾ ಅನುರಾಗಕ್ಕೆ ಗುರುತನ್ನು ಅಪೇಕ್ಷಿಸುವ ನಿಮಿತ್ತವೇನು ? ಹ್ಯಾಗಿರುವದೋ ?

ರಾಜಂ.—ನಾನು ಈ ಉಂಗುರವನ್ನಾದರೋ, ನಿಂದಿಸುವೆನು.

ವಿದೂ.—(ತನ್ನಲ್ಲಿತಾನು) ಈತನು ಉನ್ಮತ್ತನ ದಾರಿಯನ್ನು ಹಿಡಿದನು.

ರಾಜಂ.—ಕಂದ॥ ನಳನಳಿಪ ಬೆರಳ್ಗಳಿಂದಂ।

ತೊಳಪಾ ಕಯ್ಯುಳಿದದೆಂತು ಮುಳುಗಿದೆ ನೀರೊಳ್॥ ಅಥವಾ

ಪಳಿಯೆನಚೇತನವೆಂದಿದ।

ನೆಳೆಯುಳಕೈವಿಡಿದು ನಾನೆತೊರೆದುದರಿಂದಂ॥ ೧೪೫

ವಿದೂ.—(ತನ್ನಲ್ಲಿತಾನು) ನನ್ನನಾದರೊ ಹಸಿವು ಕಿತ್ತುಕೊಂಡು ತಿನ್ನುವದು.

ರಾಜಂ.—ನಿಷ್ಕಾರಣವಾಗಿ ಬಿಟ್ಟೆನಲ್ಲಾ ಎಂದು ಪ್ರಿಯೆಯಲ್ಲಿ ಪಶ್ಚಾತ್ತಾಪದಿಂದ ತಪ್ತನಾದ ನನ್ನ ವಿಷಯದಲ್ಲಿ ದಯವಿಟ್ಟು ಪುನಶ್ಚ ದರ್ಶನವನ್ನು ಕೊಡು.

(ಚತುರಿಕೆ ಚಿತ್ರಪಟವನ್ನು ತೆಗೆದುಕೊಂಡು ತೆರೆಯನ್ನು ಹಾರಿಸಿಕೊಂಡು ಬರುವಳು)

ಚತುರಿಕೆ.—ಎಲೈ ಮಹಾರಾಜನೆ ಇದೊ ಶಕುಂತಳೆಯ ಭಾವಚಿತ್ರವು.

(ಎಂದು ಚಿತ್ರಪಟವನ್ನು ತೋರಿಸುವಳು)

ವಿದೂ.—ಭಾಪು ಮಿತ್ರನೆ ಭಾಪು ಈ ಭಾವಚಿತ್ರವು ಮಧುರಸ್ಥಿತಿಯಿಂದ ನೋಡತಕ್ಕದ್ದಾಗಿದೆ. ಇದರ ಹಳ್ಳತಿಟ್ಟಾದ ಪ್ರದೇಶಗಳಲ್ಲಿ ನನ್ನ ದೃಷ್ಟಿಯು ಎಡಹುವಹಾಗಿದೆ.

ಸಾನುಮತಿ.—ಆಹ! ಈ ರಾಜಋಷಿಯ ಚಿತ್ರಕಳಾಕುಶಲತೆಯು ಆಶ್ಚರ್ಯಕರವಾದದ್ದು ನನ್ನ ಸಖಿಯನ್ನು ನನ್ನ ಮುಂದೆಯೇ ಇರುವಂತೆ ಭಾವಿಸುವೆನು.

ರಾಜಂ.—ಕಂದ॥ ಎಂತೆಂತು ತಿದ್ದವೇಳ್ಕುಮ।

ದಂತಂತುಟು ಚಿತ್ರದಲ್ಲಿ ತಿದ್ದಲ್ಬರ್ಕ್ಕುಂ॥

ಅಂತಾದೊಡವಿಾಚಿತ್ರದೆ।

ಕಾಂತೆಯ ಲಾವಣ್ಯಮಿನಿಸೆ ಸಂಗಡಿಸಿರ್ಕ್ಕುಂ॥ ೧೪೬

ಸಾನು.—ಪಶ್ಚಾತ್ತಾಪದಿಂದ ಹೆಚ್ಚಾಗಿರುವ ಇವನ ಸ್ನೇಹಕ್ಕೂ ನಿರಹಂಕಾರಕ್ಕೂ ಇವನು ಆಡಿದ್ದು ಸರಿಯಾದದ್ದು.

ವಿದೂ.—ಎಲೈ ಮಿತ್ರನೆ, ಇಲ್ಲಿ ಮೂವರು ಉತ್ತಮ ಸ್ತ್ರೀಯರು ಕಾಣುವರು ; ಇವರೆಲ್ಲರೂ ನೋಡುವದಕ್ಕೆ ಚೆನ್ನಾಗಿರುವರು ; ಇವರಲ್ಲಿ ಪೂಜ್ಯಳಾದ ಶಕುಂತಳೆಯಾರು ?

ಸಾನು.—ನನ್ನ ಸಖಿಯ ರೂಪವನ್ನು ಇವನು ಅರಿದವನೇ ಅಲ್ಲಇವನ ಕಣ್ಣುಗಳು ಹುಟ್ಟಿದ್ದು ವ್ಯರ್ಥವು.

ರಾಜಂ.—ಇವರಲ್ಲಿ ಶಕುಂತಳೆಯಾರು ? ನೀನೇ ಹೇಳು.

ವಿದೂ.—ಇದೋ ಸಡಿಲಿದ ಎಸೆಗೆಂಟಿನ ದೆಸೆಯಿಂ ಜಾರಿದ ಕುಸುಮಗಳುಳ್ಳ ಮುಡಿಯಿಂದಲೂ, ಹೊಮ್ಮಿದ ಬೆಮರಿನ ಹನಿಗಳುಳ್ಳ ಮುಖದಿಂದಲೂ, ಆಯಾಸದಿಂದ ನೀಡಿರುವ ಬಾಹುಗಳಿಂದಲೂ ಕೂಡಿ ಜಲಸೇಚನೆಯಿಂದ ಮನೋಹರವಾದ ಎಳೆ ಚಿಗುರುಗಳುಳ್ಳ ಮಾವಿನಮರದ ಪಕ್ಕದಲ್ಲಿ ಸ್ವಲ್ಪ ಬಳಲಿದವಳಂತೆ ಬರೆಯಲ್ಪಟ್ಟಿರುವ ಈಕೆಯು ಪೂಜ್ಯಳಾದ ಶಕುಂತಳೆಯು. ಉಳಿದವರು ಸಖಿಯರೆಂದು ಊಹಿಸುವೆನು.

ರಾಜಂ.—ನೀನು ನಿಪುಣನು; ಇಲ್ಲಿ ನನ್ನ ಭಾವಚಿಹ್ನೆ ಇರುವದುನೋಡು.

* ಕಂದ॥ ಬರೆದೀ ಚಿತ್ರದೆಬೆಮರಿದ ।
ಬೆರಳಟ್ಟೆಡೆ ಮಲಿನವಾಗಿ ಕಾಣ್ಬುದು ಕದಪಿಂ ॥
ದುರುಳಿದ ಕಂಬನಿ ಬಣ್ಣಂ ।
ಪರೆದಿರ್ಪ್ಪುದರಿಂ ವಿಭಾವಿಸಲ್ಕೆಡೆಯೆನಿಕುಂ ॥ ೧೪೭

ಎಲೆ ಚತುರಿಕೆ, ವಿನೋದಾಸ್ಪದವಾದ ಈ ಚಿತ್ರವು ಅರ್ಧಬರೆಯಲ್ಪಟ್ಟಿದೆ. ಆದ್ದರಿಂದ ನಡೆ, ಬಣ್ಣಿಗೆಯನ್ನು ತೆಗೆದುಕೊಂಡು ಬಾ.

---

*ರಾಗ—ಫರ್ಜ್. ॥ ಆದಿತಾಳ ॥

ಪರಿಕಿಸಿನೋಡೈ ನಿಜಸಖಿಯಾ ॥ ಪ ॥ ಕರದಿ ನಾನೇ ಬರೆ ದಿಹಶಿಃ ಮುಖಿಯಾ । ಸಖಿಯಾ ॥ ಅನು ॥ ಕರೆಯಿದು ಬೆವರಿದ । ಬೆರಳನು ನಾನಿ । ಟ್ಟಿರಿಸಿದಕಾರಣ । ಮೆರೆವುದು ತಿಳಿಯಾ ಸಖಿಯಾ ॥ ಪರಿಕಿಸಿ ॥ ೧ ॥ ಬರೆಪದೆಬಣ್ಣವುಪರೆಯೆ ಕಪೋಲದಿಂ । ದುರುಳಿದಕಂಬನಿ । ಗುರುತಿದೊ ತಿಳಿಯಾ । ಸಖಿಯಾ । ಪರಿಕಿಸಿ ॥ ೨ ॥ ಬರೆವಾಗೆನ್ನಯ । ಕರಕಂಪನದಿಂ । ಗೆರೆಯಿದು ವಕ್ರವಾ । ಗಿರುವದು ತಿಳಿಯಾ । ಸಖಿಯಾ । ಪರಿಕಿಸಿ ॥ ೩ ॥

ಚತುರಿಕೆ.—ಎಲೈ ಪೂಜ್ಯನಾದ ಮಾಢವ್ಯನೆ ನಾನು ಬಣ್ಣದ ಪೆಟ್ಟಿಗೆಯ ನ್ನು ತರುವವರಿಗೂ ಈ ಚಿತ್ರಪಟವನ್ನು ಹಿಡಿದಿರು.

ರಾಜಂ.—ನಾನೇ ಇದನ್ನು ಹಿಡಿದಿರುವೆನು (ಎಂದು ಚಿತ್ರಪಟವನ್ನು ತೆಗೆದು ಕೊಳ್ಳುವನು.)

(ಚತುರಿಕೆ ಹೊರಟು ಹೋದಳು.)

ಕಂದ॥ ಬಳಿಗೈತಂದಿನಿಯಳನಂ।
ದುಳದೀಬರೆಪದಳನಿಂದುಬಹುಮತಿಸುವನಾಂ।
ಪೊಳೆಯಂದಾಂಟ ಬಳಕ್ಕಂ।
ಕೆಳೆಯನೆ ಬಯಸಿದಪೆನಕಟ ಮೃಗತೃಷ್ಣಿಕೆಯಂ॥ ೧೪

ವಿದೂ.—(ತನ್ನಲ್ಲಿತಾನು) ನಿಜ, ಈತನು ಹೊಳೆಯನ್ನು ದಾಟಿ ಮೃಗತೃ ಷ್ಣಿಕೆಯನ್ನು ಬಯಸಿದನು. (ಪ್ರಕಾಶವಾಗಿ) ಎಲೈ ಮಿತ್ರನೆ ಇಲ್ಲಿ ಬರೆ ಯತಕ್ಕದ್ದು ಇನ್ನು ಬೇರೆಯೇನಿರುವದು?

ಸಾನು.—ಯಾವ ಯಾವ ಸ್ಥಾನವು ನನ್ನ ಸಖಿಗೆ ಬೇಕಾದದ್ದೊ ಆಯಾ ಸ್ಥಾನವನ್ನು ಬರೆಯುವದಕ್ಕೆ ಬಯಸಿರಬಹುದು.

ವೃತ್ತ॥ ಮರಲೊಳಗಾಡುವಂಚೆಗಳನೊಪ್ಪುವಮಾಲಿನಿಯುಂಮೃಗಾಳಿಪ।
ಟ್ಟಿರೆಕರವೊಪ್ಪುತಿಪ್ಪ೯ತುಹಿನಾದ್ರಿಯುತಪ್ಪಲನಾದ್ರ೯ವಲ್ಕಬಂ॥
ಧುರತರುಮೂಲದೊಳ್ ಹರಿಣಶೃಂಗದೆತನ್ನಯವಾಮನೇತ್ರಮಂ।
ತುರಿಸುತಮಿಪ್ಪ೯ಪೆಣ್ಮೃಗಮುಮಂ ಬರೆಯಲ್ಕಿದರಲ್ಲಿ ವಾಂಛಿಪೆಂ॥

ವಿದೂ.—(ತನ್ನಲ್ಲಿತಾನು) ಹಾಗಾದರೆ ಈತನು ಈ ಚಿತ್ರಪಟದಲ್ಲಿ ಜೋಲು ಗಡ್ಡದ ಋಷಿಗಳ ಗುಂಪನ್ನು ಬರೆದು ಮುಗಿಯಿಸಬೇಕು.

ರಾಜಂ.—ಎಲೈ ಮಿತ್ರನೆ, ನಾನು ಶಕುಂತಳೆಯ ಮತ್ತೊಂದು ಅಲಂಕಾ ರವನ್ನು ಬರೆಯಬೇಕೆಂದಿದ್ದು ಮರೆದೆನು.

ವಿದೂ.—ಅದೇನು?

ಸಾನು.—ವನವಾಸಕ್ಕೂಕೋಮಲತ್ವಕ್ಕೂ ಯಾವದು ತಕ್ಕದ್ದೋ ಅದು.

ರಾಜಂ.—

ವೃತ್ತ ॥ ತೊಳಪಕ ದಂಪಿನೊಳ್ಳಳಲುತೊಪ್ಪಿರೆ ಕೇಸರವುಳ್ಳರಲ್ದುಕಂ ।
ಗೊಳಿಪಶಿರೀಷವೃಂತಮನೊಡರ್ಚ್ಚಿದುದಿಲ್ಲ ಕೊಡಂಕೆಯಲ್ಲಿ ಮೇಣ್ ॥
ವಿಳಸಿತಶಾರದೇಂದುರುಚಿಕೋಮಳಬಾಳಮೃಣಾಳಸೂತ್ರಮಂ ।
ಕಳಶಕುಚಾಂತರಸ್ಥಲದೊಳಾಗಿಸಲಿಲ್ಲ ಕುರಂಗನೇತ್ರೆಯಾ ॥ ೧೪೯

ವಿದೂ.—ಎಲೈ, ಇದೇನು ? ಪೂಜ್ಯಳಾದ ಶಕುಂತಳೆಯು ಕೆಂದಾವರೆಯ ಎಸಳಂತೆ ಶೋಭಿಸುವ ತನ್ನ ಹಸ್ತಾಗ್ರದಿಂದ ಮುಖವನ್ನು ಮುಚ್ಚಿಕೊಂಡು ಅತಿಭೀತಳಾದಂತಿರುವಳು ? (ಚೆನ್ನಾಗಿ ನೋಡಿ) ಆಹ! ಪುಷ್ಪಾಸವವನ್ನು ಕಳುವ ತೊತ್ತಿನ ಕೂಸಾದ ಈ ಪುರದುಂಬಿ ತುಂಬಿಯು ಪೂಜ್ಯಳಾದ ಈಕೆಯ ಮುಖಕ್ಕೆ ಎರಗುವದು.

ರಾಜಂ.—ಈ ದುಷ್ಟಭೃಂಗವನ್ನು ಅಟ್ಟು.

ವಿದೂ.—ದುಷ್ಟಶಿಕ್ಷಕನಾದ ನೀನು ತಾನೇ ಇದನ್ನು ಅಟ್ಟುವದಕ್ಕೆ ಸಮರ್ಥನು.

ರಾಜಂ.—ಯುಕ್ತ, ಎಲೈ ಕುಸುಮಲತೆಗಳಿಗೆ ಪ್ರಿಯವಾದ ಅತಿಥಿಯೆ ಏತಕ್ಕೋಸ್ಕರ ಇಲ್ಲಿ ಬಿದ್ದು ದುಃಖವನ್ನು ಅನುಭವಿಸುವೆ ?

ಕಂದ ॥ ಕುಸುಮದೊಳಪ್ಪೀರ್ಣಮಧುಕರಿ ।
ಪಸಿದುಂಪಾರ್ದಪುದು ನಿನ್ನನನುರಕ್ತೆಯಿಂ ॥
ದೆಸಕಮಿಗೆಮಧುರತರಮಧು ।
ರಸವಂಪೋನಿನ್ನನುಳಿದು ಸೇವಿಸದಲ್ತೇ ॥ ೧೫೦

ಸಾನು.—ಈಗ ಇದು ವಿನಯದೊಡನೆ ನಿವಾರಿಸಲ್ಪಟ್ಟಿತಲ್ಲವೆ ?

ವಿದೂ.—ಈ ಜಾತಿ ಎಷ್ಟು ಅಟ್ಟಿದರೂ ಹೋಗತಕ್ಕದಲ್ಲ ಬಹುಕೆಟ್ಟದ್ದು.

ರಾಜಂ.—ಹಾಗೋ, ಎಲೆ ತುಂಬಿಯೆ, ನನ್ನಾಜ್ಞೆಯಂತೆ ನೀನು ನಡೆಯುವದಿಲ್ಲವೆ ? ಹಾಗಾದರೆ ಕೇಳು.

ವೃತ್ತ॥ ನೋಯಿಸದಿರ್ಪ ಬಾಲತರುಪಲ್ಲವದಂತೆ ಮನೋಜ್ಞಮಾದ ಮ।
ತ್ಪ್ರೇಯಸಿಯಿಂಪುವೆತ್ತತುಟಿಯಂದಯೆಯಿಂದಮೆಪೀರ್ದನಲ್ತೆಪು॥
ಷ್ಪಾಯುಧಕೇಳಿಯೊಳ್ ಅಲೆ ಮಧುವ್ರತ ನೀನದ ಸೋಂಕೆನಿನ್ನಕೇ।
ಳ್ಗೊ ಯುಜಗರ್ಭವೆಂದೆನಿಪಬಂಧನಮಂದಿರಕಿಂದುಸೇರಿಪೆಂ॥ ೧೫೧

ವಿದೂ.—ಇಂಥಾ ಕ್ರೂರಶಿಕ್ಷೆಗೆ ಭಯಪಡದೇ ಇದ್ದೀತೆ? ನಕ್ಕು (ತನ್ನ ಲ್ಲಿತಾನು) ಈತನು ಈಗ ಉನ್ಮತ್ತನಾದನು; ನಾನು ಕೂಡಾ ಈತನ ಸಹ ವಾಸದಿಂದ ಈತೆರನಾದೆನು; (ಪ್ರಕಾಶವಾಗಿ) ಎಲೈ, ಇದು ಚಿತ್ರವಲ್ಲವೆ,

ರಾಜಂ.—ಏನು?

ಸಾನು.—ನಾನು ಕೂಡಾ ಈ ವರಿಗೂ ಚಿತ್ರವೆಂದು ತಿಳಿದಿರಲಿಲ್ಲ, ಇನ್ನು ಬರೆದುದನ್ನು ಸಾಕ್ಷಾತ್ತಾಗಿ ಅನುಭವಿಸತಕ್ಕ ಈತನನ್ನು ಹೇಳ ತಕ್ಕದ್ದೇನು?

ರಾಜಂ.—ಇದೇನು? ತಪ್ಪು ಹಿಡಿಯುವ ನಿನ್ನಗುಣವನ್ನು ತೋರಿಸಿದೆ?

ಕಂದ॥ ಇನಿಯಳೆಸಿಜವೆನ್ನುತೆ ದ।
ರ್ಶನಸುಖಮಂ ತನ್ಮಯತೆಯನೊಂದಿದಮನದಿಂ॥
ದನುಭವಿಪೆನಗವಳಂ ನೀಂ।
ನೆನಪಿತ್ತೀಂ ಮಗುಳ್ದು ಚಿತ್ರಗತೆಯಂಗೈದೈ॥ ೧೫೨

(ಎಂದು ಕಂಣೀರನ್ನು ಬಿಡುವನು)

ಸಾನು.—ಪೂರ್ವಾಪರವಿರೋಧಿಯಾದ ಈ ವಿಧಾನ ಮಾರ್ಗವು ಅಪೂರ್ವ ವಾದದ್ದು!

ರಾಜಂ.—ಎಲೈ ಮಿತ್ರನೆ, ವಿಶ್ರಾಂತಿಯಿಲ್ಲದ ದುಃಖವನ್ನು ಹ್ಯಾಗೆ ಅನು ಭವಿಸಲಿ?

ಕಂಧ॥ ಕನಸಿನೊಳವಳಂ ಕೂಡುವೆ।
ನೆನೆ ಬಾರದು ನಿದ್ರೆ, ಚಿತ್ರಗತೆಯಾದಳುಮಂ॥
ಮನವಾರೆನೋಳ್ಪೆನೆನೆ ಕಂ।
ಬನಿಯೆಡೆಗುಡದಿರ್ಪುದಿನ್ನದೇಗೈದಪೆನಾಂ॥ ೧೫೩

ಸಾನು.—ಎಲೈ ಮಿತ್ರನೆ, ಶಕುಂತಳೆಯ ನಿರಾಕರಣೆಯಿಂದ ಉಂಟಾಗಿದ್ದ ದುಃಖವನ್ನು ಸರ್ವಪ್ರಕಾರದಿಂದಲೂ ಹೋಗಲಾಡಿಸಿದೆ.

(ಚತುರಿಕೆ ಪ್ರವೇಶಿಸಿ)

ಚತುರಿಕೆ.—ಎಲೈ ಮಹಾರಾಜನೆ ಜಯಶೀಲನಾಗು ಜಯಶೀಲನಾಗು; ಬಣ್ಣದ ಪೆಟ್ಟಿಗೆಯನ್ನು ತೆಗೆದುಕೊಂಡು ಈ ಕಡೆಗೆ ಹೊರಟಿದ್ದೆನು.

ರಾಜಂ.—ಆಮೇಲೆ ?

ಚತುರಿಕೆ.—ತರಳಿಕೆಯೊಡನೆ ಬರುತ್ತಿದ್ದ ವಸುಮತೀದೇವಿಯು ಅದನ್ನು ನಾನೇ ಆರ್ಯಪುತ್ರನ ಸಮೀಪಕ್ಕೆ ತೆಗೆದುಕೊಂಡು ಹೋಗುವೆನೆಂದು ಮಧ್ಯಮಾರ್ಗದಲ್ಲಿ ನನ್ನ ಕಯ್ಯಿಂದ ತೆಗೆದುಕೊಂಡಳು.

ವಿದೂ.—ದೈವಯೋಗದಿಂದ ನೀನು ತಪ್ಪಿಸಿಕೊಂಡು ಬಂದೆ !

ಚತುರಿಕೆ.—ಮರದ ಕೊಂಬೆಗೆ ತಗಲಿದ ದೇವಿಯ ಮೇಲುಮುಸುಕನ್ನು ತರಳಿಕೆಯು ಬಿಡಿಸುವದರೊಳಗೆ ನಾನು ತಪ್ಪಿಸಿಕೊಂಡು ಬಂದೆನು.

ರಾಜಂ.—ದೇವಿಬರುವಳು ! ಆಕೆಯು ಬಹುಮಾನಗರ್ವಿತೆಯು, ನೀನು ಈ ಚಿತ್ರಪಟವನ್ನು ರಕ್ಷಿಸಿಕೊ.

ವಿದೂ.—ಚಿತ್ರಪಟವನ್ನು ರಕ್ಷಿಸಿಕೋಎನ್ನುವದಿರಲಿ ನಿನ್ನನ್ನು ರಕ್ಷಿಸಿಕೋ ಎನ್ನು (ಎಂದು ಚಿತ್ರಪಟವನ್ನು ತೆಗೆದುಕೊಂಡು ಎದ್ದು) ನೀನು ದೇವಿಯ ಕಲಹದಿಂದ ಬಿಡುಗಡೆಯನ್ನು ಹೊಂದಿದರೆಆ ಮೇಲೆ ಮೇಘಪ್ರತಿಛಂದವೆಂಬ ಉಪ್ಪರಿಕೆಯಲ್ಲಿರುವ ನನ್ನನ್ನು ಕೂಗು. (ಎಂದು ಓಡಿ ಹೋಗುವನು).

ಸಾನು.—ಈತನು ಮತ್ತೊಬ್ಬಳಲ್ಲಿ ಮನಸ್ಸುಳ್ಳವನಾದರೂ ಮೊದಲನೆಯವಳ ಪುರಸ್ಕಾರವನ್ನು ಇಚ್ಛೈಸುವನು ಆದ್ದರಿಂದ ಇವನ ಮೈತ್ರಿಯು ಸ್ಥಿರವಾದದ್ದು.

(ಕಯ್ಯಲ್ಲಿ ಕಾಗದವನ್ನು ಹಿಡಿದುಕೊಂಡು ಪ್ರತಿಹಾರಿ ಬರುವಳು.)

ಪ್ರತಿಹಾರಿ—ಮಹಾರಾಜನೆ, ಜಯಶೀಲನಾಗು ಜಯಶೀಲನಾಗು.

ರಾಜಂ.—ಎಲೆ ವೇತ್ರವತಿ, ನೀನು ಬರುವಾಗ ಮಧ್ಯಮಾರ್ಗದಲ್ಲಿ ದೇವಿಯನ್ನು ಕಾಣಲಿಲ್ಲವೆ?

ಪ್ರತಿಹಾರಿ.—ಕಂಡೆನು, ರಾಣಿಯು ಕಾಗದವನ್ನು ಹಿಡಿದಿದ್ದ ನನ್ನನ್ನು ನೋಡಿ ಹಿಂತಿರುಗಿದಳು.

ರಾಜಂ.—ಕಾರ್ಯಜ್ಞಳು ನನ್ನ ಕಾರ್ಯಕ್ಕೆ ತಡೆಯನ್ನು ಮಾಡಳು.

ಪ್ರತಿಹಾರಿ.—ಎಲೈ ಮಹಾರಾಜನೆ, ದ್ರವ್ಯಸಮೂಹದ ಗಣನಾ ಬಾಹುಳ್ಯದಿಂದ ನಾಗರಿಕನ ಒಂದೇ ಕಾರ್ಯವನ್ನು ನೋಡಿದೆನು, ಕಾಗದದಲ್ಲಿ ಬರೆದಿರುವ ಆ ವಿಷಯವನ್ನು ಮಹಾರಾಜನು ಅವಲೋಕಿಸಬೇಕೆಂದು ಮಂತ್ರಿಯು ವಿಜ್ಞಾಪಿಸುತ್ತಾನೆ.

ರಾಜಂ.—ಪತ್ರಿಕೆಯನ್ನು ಈಕಡೆ ತೋರಿಸು. (ಪ್ರತಿಹಾರಿ ತೋರಿಸುವಳು) (ಓದಿಕೊಂಡು) ಏನು, ಸಮುದ್ರ ವ್ಯವಹಾರಿಯಾದ ಧನಮಿತ್ರನೆಂಬ ವಣಿಜನು ಹಡಗು ಮುಳುಗಿ ಏಪತ್ತನ್ನು ಹೊಂದಿದನು; ಈತನುಪುತ್ರವಂತನಲ್ಲ; ಮತ್ತು ದುಃಖಿತನು. ಅವನ ದ್ರವ್ಯವೆಲ್ಲಾ ಅರಸನಿಗೆ ಸೇರತಕ್ಕದೆಂದು ಮಂತ್ರಿಯು ಬರೆದಿರುವನು; ಮಕ್ಕಳಿಲ್ಲದ್ದು ಕಷ್ಟವಲ್ಲವೆ? ಎಲೆ ವೇತ್ರವತಿ, ಆ ವಣಿಜನು ಧನಿಕನಾದಕಾರಣ ಬಹುಮಂದಿ ಪತ್ನಿಯರಿರಬೇಕು; ಆತನ ಪತ್ನಿಯರಲ್ಲಿ ಯಾವಳಾದರೂ ಒಬ್ಬಳು ಗರ್ಭಿಣಿಯಾಗಿದ್ದರೆ ವಿಚಾರಿಸು.

ಪ್ರತಿ.—ಎಲೈ ಮಹಾರಾಜನೆ, ಸಾಕೇತ ಸೆಟ್ಟಿಯಮಗಳಾದ ಅವನ ಹೆಂಡತಿಗೆ ಈಗ ಪುಂಸವನ ಕರ್ಮ ನಡೆದಿರುವದೆಂದು ಕೇಳಿರುವೆನು.

ರಾಜಂ.—ತಂದೆಯ ದ್ರವ್ಯಕ್ಕೆ ಗರ್ಭಕ್ಕೂ ಬಾಧ್ಯತೆಯುಂಟಲ್ಲವೆ? ನಡೆ, ಈ ಮಾತನ್ನು ಅಮಾತ್ಯನಿಗೆ ಹೇಳು.

ಪ್ರತಿ.—ಮಹಾರಾಜನ ಆಜ್ಞೆಯಾದಂತೆ (ಎಂದು ಹೊರಟಳು.)

ರಾಜಂ.—ಎಲೆ ವೇತ್ರವತಿ ಇಲ್ಲಿ ಬಾ.

ಪ್ರತಿ.—ಇದೊ ಬಂದೆನು.

ರಾಜಂ.—ಸಂತತಿಯುಂಟು, ಇಲ್ಲ, ಎಂಬುವದರಿಂದೇನು ?

ಕಂದ ॥ ಜನರಾಪಾಪಸುಬಾಂಧವ ।
ಜನಮನಗಲ್ದುಪುದವರ್ಗೆ ಪಾಪಂಪೆರಗೆಂ ॥
ದೆನಿಸಿರಲಾಯರಾಬಾಂಧವ ।
ನೆನಿಪಂ ದುಷ್ಯಂತನೆಂದು ಸಾರುಗೆ ಪುರದೊಳ್ ॥ ೧೫೪

ಪ್ರತಿ.—ಹೀಗೆ ತಾನೆಸಾರತಕ್ಕದ್ದು? (ಎಂದು ಹೊರಟುಹೋಗಿ ಪುನಃ ಪ್ರವೇಶಿಸಿ) ಕಾಲದಲ್ಲಿ ಬಂದ ಮಳೆಯಂತೆ ಸ್ವಾಮಿಯ ಆಜ್ಞೆಯನ್ನು ಅಮಾತ್ಯನು ಕೊಂಡಾಡಿದನು.

ರಾಜಂ.—(ನಿಟ್ಟುಸುರನ್ನು ಬಿಟ್ಟು) ಎಲಾ ಹೀಗೆ ಸಂತತಿಯಿಲ್ಲದ ಕುಲಗಳ ಸಂಪತ್ತುಗಳು ಮೂಲಪುರುಷರ ಅವಸಾನದಲ್ಲಿ ಅನ್ಯರನ್ನು ಸೇರುವವು ! ನನ್ನ ಪುರುವಂಶದ ಸಂಪತ್ತಿಗೂ ಕೊನೆಗೆ ಇದೇಗತಿ ತಾನೆ ?

ಪ್ರತಿ.—ಅಮಂಗಳ ಪರಿಹರವಾಗಲಿ.

ರಾಜಂ.—ಕೈಸೇರಿದ ಶ್ರೇಯಸ್ಸನ್ನು ತಿರಸ್ಕರಿಸಿದ ನನ್ನನ್ನು ನಿಂದಿಸು.

ಸಾನು.—ಸಂಶಯವಿಲ್ಲ, ಶಕುಂತಳೆಯನ್ನೇ ಮನಸ್ಸಿನಲ್ಲಿ ಇಟ್ಟುಕೊಂಡು ಈತನು ತನ್ನನ್ನು ನಿಂದಿಸಿಕೊಂಡನು.

ರಾಜಂ.—

*ಕಂದ ॥ ಸಮಯದೊಳ್ ಬಿತ್ತಿಬೀಜವ ।
ನಮಿತಫಲಂಗುಡುವ ಪೊಲನನುಳಿಯುವತೆರದಿಂ ॥
ದಮಮ ಬಸಿರಾಂತ ಮತ್ಕುಲ ।
ಸಮೃದ್ಧಿಕಾರಣೆಯ ಧರ್ಮಪತ್ನಿಯನುಳಿದೆಂ ॥ ೧೫೫

*ರಾಗ—ಆನಂದಭೈರವಿ. ॥ ರೂಪಕತಾಳ ॥

ಫಲವೇನಿನ್ನು । ಹಲುಬಿದರಕಟನಾಂ ಬರಿದೇಚಿತ್ತದೊಳು ॥ ಪ ॥ ಬಳಿಗೆತಾನೈತಂದ । ಕುಲವೃದ್ಧಿಹೇತುವಾ । ದಳಿಕುಂತಳೆಯನುನಾಂ । ತಿಳಿಯದುಳಿದಮೇಲೆ ॥ಅ॥ ಬಿತ್ತಿಬೀಜವಕಾಲದಿಫಲವೀವ । ಹೊಲನನಿರದುಳಿವ । ಮತ್ತನಂದದಿಮುದ । ವೆತ್ತುಕೂಡಿದಸತಿ । ಹೊತ್ತುಗರ್ಭವಬರೆ । ಗೊತ್ತರಿಯದಮೇಲೆ ॥ ೧ ॥

ಸಾನು.—ನಿನ್ನ ಸಂತತಿಯು ಈಗ ಅವಿಚ್ಛಿನ್ನವಾಗುವದು.

ಚತುರಿಕೆ.—(ಮರೆಯಲ್ಲಿ) ಅಯ್ಯೋ ! ಈ ವಣಿಜನ ವೃತ್ತಾಂತದಿಂದ ನಮ್ಮ ಮಹಾರಾಜನ ದುಃಖವು ದ್ವಿಗುಣಿತವಾಯಿತು. ಈತನನ್ನು ಸಂತೈಸುವದಕ್ಕೆ ಮೇಘ ಛಂದವೆಂಬ ಉಪ್ಪರಿಕೆಯಿಂದ ಆರ್ಯನಾದ ಮಾಢವ್ಯನನ್ನು ಕರೆದುಕೊಂಡು ಬಾ.

ಪ್ರತಿ.—ಚೆನ್ನಾಗಿ ಹೇಳಿದೆ. (ಎಂದು ಹೊರಟು ಹೋದಳು.)

ರಾಜಂ.—ಆಹ ! ದುಷ್ಯಂತನ ಪಿತೃಗಳು ಸಂದೇಹಗ್ರಸ್ತರಾದರು: ಏಕೆಂದರೆ—

ಕಂದ ॥ ಕುಂಬಿನಿಯೊಳೆಮ್ಮ ಕುಲದೆ ತಿ ।
ಲಾಂಬುವ ಮುಂಪಕಟ ಕುಡುವನಾವನೆನುತ್ತಂ ॥
ನಾಂಬಿಡೆ ಪುತ್ರವಿಹೀನಂ ।
ಕಂಬನಿದೊಳೆದುಳಿದ ಜಲವ ಪಿತೃಗಳ್ಪೀರ್ವರ್ ॥ ೧೫೬

(ಹೀಗೆಂದು ಮೂರ್ಛೆಯನ್ನು ಹೊಂದುವನು.)

ಚತು.—(ತ್ವರೆಯಿಂದ ಹಿಡಿದುಕೊಂಡು) ಎಲೈ ಮಹಾರಾಜನೆ ? ಸಂತೈಸಿಕೊಳ್ಳಬೇಕು ಸಂತೈಸಿಕೊಳ್ಳಬೇಕು.

ಸಾನು.—ಹಾಹಾ ! ತೆಗೆತೆಗೆ ! ದೀಪವಿದ್ದರೂ ಮರೆಯ ದೋಷದಿಂದ ಅಂಧಕಾರವನ್ನು ಅನುಭವಿಸುವನು ; ನಾನು ಈಗಲೇ ಇವನನ್ನು ಸಂತುಷ್ಟನನ್ನಾಗಿ ಮಾಡುವೆನು ; ಅಥವಾ ಹವಿರ್ಭಾಗದಲ್ಲಿ ಆಸಕ್ತರಾದ ದೇವತೆಗಳು ಶೀಘ್ರವಾಗಿ ಧರ್ಮಪತ್ನಿಯಾದ ನಿನ್ನನ್ನು ನಿನ್ನ ಗಂಡನು ಸಂತೋಷಪಡಿಸುವಂತೆ ಮಾಡುವರೆಂದು ಶಕುಂತಳೆಯನ್ನು ಸಂತೈಸುತ್ತಿರುವ ಇಂದ್ರ ಜನನಿಯಮುಖದಿಂದ ಕೇಳಿರುವೆನು. ಆದ್ದರಿಂದ ಆವರಿಗೂ ಸುಮ್ಮನಿರುವದೇ ಯುಕ್ತವು. ಈ ಮಹಾರಾಜನ ವೃತ್ತಾಂತವನ್ನು ತಿಳಿಸಿ ಪ್ರಿಯಸಖಿಯಾದ ಶಕುಂತಳೆಯನ್ನು ಸಂತೈಸುವೆನು.

(ಎಂದು ವ್ಯೋಮಯಾನದಿಂದ ಹೊರಟು ಹೋದಳು.)

(ತೆರೆಯಲ್ಲಿ)

ಬದುಕಿಸು ! ಬದುಕಿಸು !

ರಾಜಂ.—(ಮೂರ್ಛೆಯನ್ನು ತಿಳಿದು ಕಿವಿಗೊಟ್ಟು) ಓಹೋ ! ಮಾಢವ್ಯನ ದೀನಧ್ವನಿಯಂತಿರುವದು ! ಯಾರಲ್ಲಿ ?

(ಪ್ರತಿಹಾರಿ ತ್ವರೆಯಿಂದಬಂದು)

ಪ್ರತಿಹಾರಿ.—ಉಳಿಯುವದರಲ್ಲಿ ಸಂಶಯಾಸ್ಪದನಾದ ಮಿತ್ರನನ್ನು ರಕ್ಷಿಸು, ರಕ್ಷಿಸು.

ರಾಜಂ.—ಮಾಣವಕನನ್ನು ಪರಾಭವಿಸಿದವರುಯಾರು ?

ಪ್ರತಿ.—ಕಾಣಿಸಿಕೊಳ್ಳದ ಯಾವದೋ ಒಂದು ಭೂತವು ಹಿಡಿದುಕೊಂಡು ಮೇಘಛಂದವೆಂಬ ಉಪ್ಪರಿಗೆಯ ಮೇಲಕ್ಕೆ ತೆಗೆದುಕೊಂಡು ಹೋಯಿತು.

ರಾಜಂ.—ಹೀಗೆನ್ನಬೇಡ, ನನ್ನ ಮನೆಯಲ್ಲಿಯೂ ಭೂತಗಳ ಕಾಟವುಂಟೆ ? ಅಥವಾ—

ಕಂದ॥ ತಿಳಿಯಲ್ನಿಜಪ್ರಮಾದ ।
ಸ್ಖಲಿತಮನೇಶಕ್ಯಮಲ್ಲಮನುದಿನಮೆನಲಿ ॥
ನ್ನುಳಿದವರ ದಾವಪಥದೊಳ್ ।
ಚಲಿಸುವರೆಂದೆಂಬುದರಿಯೆಶಕ್ತನದಾವಂ ॥ ೧೫೭

(ತೆರೆಯಲ್ಲಿ)

ಎಲೈ ಮಿತ್ರನೆ, ಬದುಕಿಸು ! ಬದುಕಿಸು !

ರಾಜಂ.—(ಥಟ್ಟನೆ ನಡೆದು) ಎಲೈ ಮಿತ್ರನೆ, ಭಯಪಡಬೇಡ ಭಯಪಡಬೇಡ.

(ತೆರೆಯಲ್ಲಿ)

ಹಾ ! ಮಿತ್ರನೆ ಬದುಕಿಸು ! ಬದುಕಿಸು ! ಹ್ಯಾಗೆತಾನೇ ಭಯಪಡದೆ ಇರಲಿ ! ಇವನಾವನೋ ಒಬ್ಬನು ನನ್ನ ಕತ್ತನ್ನು ಬಗ್ಗಿಸಿಕೊಂಡು ಕಬ್ಬಿನ ಕೋಲನ್ನು ಮುರಿಯುವಂತೆ ಮುರಿಯುವನು.

ರಾಜಂ.—(ಅತ್ತಿತ್ತನೋಡಿ) ಧನುಸ್ಸೆಲ್ಲಿ?

(ಯವನಿಕೆಯೆಂಬುವಳು ಧನುಸ್ಸನ್ನು ತೆಗೆದುಕೊಂಡು ಬಂದು)

ಯವನಿಕೆ.—ಎಲೈ ಮಹಾರಾಜನೆ, ಇದೊ, ಅಂಗುಲಿತ್ರಾಣದೊಡನೆ ಕೂಡಿದ ಧನುಸ್ಸನ್ನು ತಂದಿರುವೆನು.

(ರಾಜನು ಬಾಣ ಸಮೇತವಾದ ಧನುಸ್ಸನ್ನು ತೆಗೆದುಕೊಳ್ಳುವನು)

(ತೆರೆಯಲ್ಲಿ)

ಕಂದ ॥ ಗಳಶೋಣಿತ ಕೆಳಸಿದ ಪೆ ।

ಬ್ಬುಲಿ ಪಶುವಂ ಮುರಿಯುವಂತೆ ಮುರಿಯುವೆ ನಿನ್ನಂ ॥

ಸಲಹುಗೆಯಾರ್ತರಭಯಮಂ ।

ತೊಲಗಿಸೆಕಾರ್ಮುಕವನಾಂತದುಷ್ಯಂತನೃಪಂ ॥ ೧೩೪

ರಾಜಂ.—(ಕೋಪಗೊಂಡು) ಇದೇನು! ನನ್ನ ಹೆಸರನ್ನೆತ್ತಿ ಆಡುವನು. ರಾಕ್ಷಸಾಧಮನೆ? ನಿಲ್ಲು! ನಿಲ್ಲು! ಇನ್ನು ನಿನ್ನ ಕೊಬ್ಬನ್ನು ಮುರಿಯುವೆನು (ಎಂದು ಧನುಸ್ಸನ್ನು ಎತ್ತಿ) ಎಲೆ ವೇತ್ರವತಿ, ಸೋಪಾನ ಮಾರ್ಗವನ್ನು ತೋರಿಸು.

ವೇತ್ರವತಿ.—ಎಲೈ ಮಹಾರಾಜನೆ, ಇತ್ತಿತ್ತ ದಯಮಾಡಬೇಕು.

(ಎಲ್ಲರೂ ಬೇಗನೆ ಸಂಗಡ ಹೋಗುವರು)

ರಾಜಂ.—(ಎಲ್ಲಾ ಕಡೆಯನ್ನೂ ನೋಡಿ) ಈ ಉಪ್ಪರಿಗೆಯಲ್ಲಿ ಯಾರೂ ಇಲ್ಲವಲ್ಲಾ!

(ತೆರೆಯಲ್ಲಿ)

ಬದುಕಿಸು! ಬದುಕಿಸು! ನೀನು ನನಗೆ ಕಾಣಿಸುವೆ, ನನ್ನನ್ನು ನೀನು ಕಾಣೆ, ಬೆಕ್ಕಿನಬಾಯಿಗೆ ಸಿಕ್ಕಿದ ಇಲಿಯಂತೆ ನಾನು ಬದುಕುವದರಲ್ಲಿ ಆಶೆಯನ್ನು ತೊರೆದೆನು.

ರಾಜಂ.—ಎಲಾ! ತಿರಸ್ಕರಿಣೀ ಗರ್ವಿತನೆ, ನನ್ನ ಅಸ್ತ್ರವು ನಿನ್ನನ್ನು ಕಾಣುವದು, ಈಗ ನಿಲ್ಲು ಆ ಅಸ್ತ್ರವನ್ನು ತೊಡುವೆನು ಯಾವಅಸ್ತ್ರವು.

ಕಂದ ॥ ಕೊಲುವುದೊ ವಧ್ಯನ ನಿನ್ನಂ ।

ಸಲಹುವುದೋ ರಕ್ಷಣೀಯನಾದಾದ್ವಿಜನಂ ॥

ಕಲಹಂಸಂಪಾಲುಂಕೊಂ ।
ಡುಳಿವಂತಿರೆ ಪಾಲಿನಲ್ಲಿ ಸೇರಿದನೀರಂ ॥ ೧೫೯

(ಎಂದು ಅಸ್ತ್ರವನ್ನು ತೊಡುವನು)

(ಅನಂತರ ವಿದೂಷಕನನ್ನು ಬಿಟ್ಟು ಮಾತಲಿಯೂ ವಿದೂಷಕನೂ ಬರುವರು.)

ಮಾತಲಿಯು.—

*ಕಂದ ॥ ಸುರಪಂನಿಜ ಶರಕಸುರರ ।
ಗುರಿಗೈದಿರ್ಪ್ಪಂಗಡವರೆೊಳಿಳಿ ಯಿಾಥನುವಂ ॥
ನೆರೆಬೀಳ್ವ್ವವುಸಖರೊಳ್ಸಂ ।
ಶರಕರುಣಾದೃಷ್ಟಿಬೀಳವಲೆ ಕರ್ೂಣೆಗಳ್ ॥ ೧೬೦

ರಾಜಂ.—(ಬಾಣವನ್ನು ಇಳಿಸಿ) ಎಲೈ ಇಂದ್ರ ಸಾರಥಿಯಾದ ಮಾತಲಿಯೆ, ನಿನಗೆ ಸುಖಾಗಮನವೆ ?

ವಿದೂ.—ಯಾಗದ ಪಶುವನ್ನು ಹಿಂಸೆ ಮಾಡುವಂತೆ ನನ್ನನ್ನು ಹಿಂಸೆ ಮಾಡಿದವನನ್ನು ಈತನು ಕುಶಲವನ್ನು ಕೇಳಿದ್ದು ಚೆನ್ನಾಯಿತು !

ಮಾತ.—(ನಕ್ಕು) ಎಲೈ ಆಯುಷ್ಮಂತನೆ ಕೇಳು, ನನ್ನನ್ನು ಇಂದ್ರನು ಒಂದು ಕಾರಣಕ್ಕಾಗಿ ನಿನ್ನ ಸನ್ನಿಧಿಗೆ ಕಳುಹಿಸಿದನು.

ರಾಜಂ.—ಇದೊ, ಸಿದ್ಧನಾಗಿರುವೆನು.

ಮಾತ.—ಕಾಲನೇಮಿಗೆ ಮಕ್ಕಳಾಗಿಯೂ ದುರ್ಜಯರಾಗಿಯೂ ಇರುವ ರಾಕ್ಷಸರುಂಟಷ್ಟೆ ?

ರಾಜಂ.—ನಾರದರ ಮುಖದಿಂದ ನಾನು ಪೂರ್ವದಲ್ಲಿ ಕೇಳಿರುವೆನು.

ಮಾ.—ಕಂದ॥ ಸುರಪಂ ತಾಂ ಗೆಲಲಾರದ ।
ದುರುಳರ ಜೈಸಲ್ಕೆ ಶಕ್ತನೆನ್ನುತೆ ನಿನ್ನಂ ॥

---

*ರಾಗ.—ಜುಂಜೋಟಿ. ॥ ರೂಪಕತಾಳ. ॥

ಏನಿದೇನು ನಿನ್ನನಡತೆ । ಮಾನವೇಂದ್ರನೆ ॥ ದೀನರಕ್ಷಣಾದಿಗುಣವಿ । ತಾನಸಾಂದ್ರನೇ ॥ ೧ ॥ ಅರಸನೆ ಸುರಪತಿಯುನಿನ್ನ । ಶರಕೆದೈತ್ಯರ ॥ ಗುರಿಯುಗೈದಿರುವನವರ । ನುರುಹು ಪುರುವರಾ ॥ ೨ ॥ ಇಷ್ಟರೊಳ್ ಪ್ರಸಾದಸಾಮ್ಯ । ದೃಷ್ಟಿಯಲ್ಲದೆ ॥ ವಿಷ್ಟಪಪತಿಪೇಳು ಬಾಣ । ವೃಷ್ಟಿಬೀಳ್ವದೆ ॥ ೩ ॥

ಸ್ಮರಿಸಿದನಿರುಳಿನ ತಮುವಂ ।
ಪರಿಹರಿಸಲಶಕ್ತನರ್ಕನಿಂದುವೆ ಶಕ್ತಂ ॥ ೧೯೧

ಇಂದ್ರಮಿತ್ರನಾದ ನೀನು ಧನುರ್ಧಾರಿಯಾಗಿಯೇ ಇಂದ್ರರಥವನ್ನೇರಿ ಈಗಲೆ ವಿಜಯಾರ್ಥವಾಗಿ ಪ್ರಯಾಣಮಾಡಬೇಕು.

ರಾಜಂ.—ಇಂದ್ರನ ಈ ಸಂಭಾವನೆಯಿಂದ ನಾನು ಅನುಗ್ರಹಿಸಲ್ಪಟ್ಟೆನು; ಆಯಿತು, ಈ ಮಾಢವ್ಯನ ವಿಷಯದಲ್ಲಿ ಏತಕ್ಕಾಗಿ ಹೀಗೆ ನಡೆಸಿದೆ ?

ಮಾ.—ಅದನ್ನು ಹೇಳುವೆನು, ಕೇಳು ; ಯಾವ ನಿಮಿತ್ತದಿಂದಲೋ ಆಯುಷ್ಮಂತನಾದ ನೀನು ದುಃಖಿತನಾಗಿದ್ದದ್ದನ್ನು ನೋಡಿ, ನಿನಗೆ ಕೋಪವನ್ನುಂಟುಮಾಡುವದಕ್ಕಾಗಿ ಹಾಗೆ ಮಾಡಿದೆನು.

ಕಂದ॥ ಜ್ವಲಿಪುದು ಶಿಖಿ ಯಿಂಧನಗಳ ।
ನಲುಗಿಸೆ ಕೆಣಕಿದೊಡೆ ಹೆಡೆಯನೆತ್ತುವುದುರಗಂ ॥
ಸಲೆಕೋಪಮನಾಗಿಸಿದೊಡೆ ।
ಸಲುಗುಂ ನಿಜಧೈರ್ಯಗುಣಕೆ ಜನವಿದು ಸಾಜಂ ॥ ೧೯೨

ರಾಜಂ.—ನೀವು ಮಾಡಿದ್ದು ಯುಕ್ತವು (ಮರೆಯಲ್ಲಿ) ಎಲೈ ಮಿತ್ರನೆ, ಇಂದ್ರನಾಜ್ಞೆಯು ಮೀರತಕ್ಕದ್ದಲ್ಲ ; ಅಮಾತ್ಯನಿಗೆ ಈ ಸಂಗತಿಯನ್ನೆಲ್ಲಾ ತಿಳಿಸಿ ನಾನು ಹೇಳಿದೆನೆಂದು ಈ ಮಾತನ್ನು ಹೇಳು.

ಕಂದ॥ ಧರೆಯಂ ನಾಂಬಪ್ಪರ್ಣನಂ ।
ಪರಿಪಾಲಿಸುತಿರ್ಕೆನಿನ್ನಮತಿ ತಾನೆನ್ನೀ ॥
ತಿರುವೇರಿಸಿದ ಶರಾಸನ ।
ಮಿರದಾದತ್ತಿತರಕಾರ್ಯದೊಳಗಾಸಕ್ತಂ ॥ ೧೯೩

ವಿದೂ.—ಮಹಾರಾಜನಾಜ್ಞೆಯಾದಂತಾಗಲಿ (ಎಂದು ಹೊರಟು ಹೋದನು.)

ಮಾ.—ಎಲೈ ಆಯುಷ್ಮಂತನೆ, ರಥವನ್ನು ಹತ್ತು.

(ರಾಜನು ರಥಾರೋಹಣವನ್ನು ಅಭಿನಯಿಸುವನು.)

(ಎಲ್ಲರೂ ಹೊರಟು ಹೋಗುವರು.)

ಸಪ್ತಮಾಂಕಂ.

(ಅನಂತರದಲ್ಲಿ ಆಕಾಶಗಮನದಿಂದ ರಥಾಧಿರೂಢನಾಗಿ ರಾಜನೂ ಮಾತಲಿಯೂ ಬರುವರು)

ರಾಜಂ.—ಎಲೈ ಮಾತಲಿಯೆ, ಇಂದ್ರನ ಆಜ್ಞೆಯನ್ನು ನೆರವೇರಿಸಿದರೂ ಆತನು ನನಗೆ ಮಾಡಿದ ಅಂತಪ್ಪ ಸತ್ಕಾರಕ್ಕೆ ನಾನು ತಕ್ಕವನಲ್ಲವೆಂದು ಭಾವಿಸುವೆನು.

ಮಾ.—(ನಕ್ಕು) ಎಲೈ ಆಯುಷ್ಮಂತನೆ ಇಂದ್ರನೂ ನಿನ್ನಂತೇ ಭಾವಿಸುವನು.

ಕಂದ|| ಸುರಪನೊಳ್ ಭಕ್ತಿಯಿಂಮಂ ।
ವಿರಚಿಸಿದುಪಕೃತಿಯನಲ್ಪಮೆಂದೆಣಿಸುವೆ ನೀಂ ||
ಪರಿಗಣಿಸ ನವನು ಮಾನಿ ।
ನ್ನಿರುಶೌರ್ಯಕೆ ಮೆಚ್ಚಿಗೈದ ಬಲುಮನ್ನಣೆಯಂ || ೧೬೪

ರಾಜಂ.—ಎಲೈ ಮಾತಲಿಯೆ, ಹಾಗಲ್ಲ, ನನ್ನನ್ನು ಕಳುಹಿಸುವಕಾಲದಲ್ಲಿ ಮಾಡಿದ ಆಮನ್ನಣೆಯು ನನ್ನ ಮನೋರಥಗಳನ್ನು ಕೂಡ ಮೀರಿದ್ದಲ್ಲವೆ? ಹಾಗೆಯೇಸರಿ. ದೇವತೆಗಳಮುಂದೆ ನನ್ನನ್ನು ಅರ್ಧಾಸನದಲ್ಲಿಕುಳ್ಳಿರಿಸಿ—

ಕಂದ|| ಕೇಳಲೆಳಸುವ ಜಯಂತನ ।
ನಾಲೋಕಿಸಿ ನಗುತ ಮುರದ ಹರಿಚಂದನದಿಂ ||
ಮೇಳೈಸಿದ ಮಂದಾರದ ||
ಮಾಲೆಯು ನೆನ್ನಯ ಕೊರಲ್ಗೆ ಧರಿಸಿದ ನಿಂದ್ರಂ || ೧೬೫

ಮಾ.—ಎಲೈ ಆಯುಷ್ಮಂತನೆ, ಸುರೇಶ್ವರನ ಯಾವ ಮನ್ನಣೆಗೆತಾನೆ ನೀನು ಯೋಗ್ಯನಲ್ಲ ನೋಡು ?

ಕಂದ || ಸುರಪುರಕಂಟಕರೆನಿಸಿದ ।
ಸುರರಿಪುಗಳನಿರದೆ ತೂಳ್ದುವಿವೆರಡೆ ಧರಣೀ ||
ಶ್ವರ ನಿನ್ನ ಶಿಲೀಮುಖಮುಂ ।
ನರಸಿಹ್ಮನ ನಮಿತಪರ್ವಮೆನಿಸಿದ ನಖಮುಂ || ೧೬೬

ಮಾ.—ಈ ವಿಷಯದಲ್ಲಿ ಇಂದ್ರನ ಮಹಿಮೆಯೆ ಕೊಂಡಾಡತಕ್ಕದ್ದು.

ಕಂದ॥ ಘನಕಾರ್ಯದೊಳಂ ಸಾಧಕ ।
ರೆನಿಪರ್ ಭೃತ್ಯರ್ಕಳೆಂಬುದಾಳ್ದರಸಂಭಾ ॥
ವನೆಯು ಗುಣಂ ದಿನಮಣಿ ಯರು ।
ಣನ ಮುಂದಿಡದೊಡವನೆಂತು ತಮಮಂ ತೂಳ್ವಂ ॥ ೧೬೩

ಮಾ.—ನೀನು ಹೇಳಿದ್ದು ಸರಿಯೆ. (ಸ್ವಲ್ಪ ಮುಂದಕ್ಕೆ ಹೋಗಿ) ಎಲೆ ಆಯು ಷ್ಮಂತನೆ, ಇದೋ, ಸ್ವರ್ಗದ ಹಿಂಭಾಗವನ್ನು ಮುಟ್ಟಿರುವ ನಿನ್ನ ಕೀರ್ತಿ ಯ ಸೌಭಾಗ್ಯವನ್ನು ನೋಡು.

ಕಂದ॥ ಸುರಸುಂದರಿಯರ್ಕಳ್ ಸಿಂ ।
ಗರಗೊಂಡುಳಿಪಿರ್ದ ಬಣ್ಣದಿಂ ಕಲ್ಪಲತಾಂ ॥
ಬರದೊಳ್ ದಿವಿಜರ್ ನಿನ್ನಯ ।
ಚರಿತ್ರೆಯಂ ಗಾನಯೋಗ್ಯಮಾಗಿರೆ ಬರೆವರ್ ॥ ೧೬೪

ರಾಜಂ.—ಎಲೈ ಮಾತಲಿಯೆ, ರಾಕ್ಷಸರ ಯುದ್ಧದಲ್ಲಿ ಆಸಕ್ತನಾಗಿದ್ದ ನಾನು ನೆನ್ನೆ ದಿವಸ ಅಂತರಿಕ್ಷವನ್ನು ಹತ್ತುವಾಗ ಸ್ವರ್ಗದ ಮಾರ್ಗವನ್ನು ಚೆನ್ನಾಗಿ ನೋಡಲಿಲ್ಲ. ಈಗ ನಾವು ಸಪ್ತವಾಯುಗಳಲ್ಲಿ ಎಷ್ಟನೇ ವಾ ಯುವಿನ ಮಾರ್ಗದಲ್ಲಿ ಹೋಗುತ್ತಿರುವೆವು ?

ಮಾ.—ಕಂದ॥ ದಿವಿಜಾಪಗೆಯಂ ತಾಳು ।
ತ್ತಮೆ ದಿವದೆ ವಿಭಕ್ತರಶ್ಮಿಯಾಗಲ್ತಾರಾ ॥
ನಿವಹವನಡೆಯಿಪ ಪರಿವಹ ।
ಪವನನ ಮಾರ್ಗವಿದು ವಿಷ್ಣುವಿಕ್ರಮಪೂತಂ ॥ ೧೬೫

ರಾಜಂ.—ಅದರಿಂದಲ್ಲವೆ ನನ್ನ ಅಂತರಂಗವು ಬಾಹ್ಯೇಂದ್ರಿಯಗಳೊಡನೆ ಸಂತೋಷಪಟ್ಟಿತು. (ರಥಚಕ್ರವನ್ನು ನೋಡಿ) ಈಗ ನಾವು ಮೇಘಮಾರ್ಗ ಕ್ಕೆ ಇಳಿದೆವು.

ಮಾ.—ಅದನ್ನು ಹ್ಯಾಗೆ ತಿಳಿದೆ ?

ರಾಜಂ.—ವೃತ್ತ॥ ಅರವಿವರಂಗಳೊಳ್ನುಸುಳ್ವ ಚಾತಕಸಂಕುಲದಿಂ
ತಟತ್ಪ್ರಭಾ ।
ಪರಿವೃತವಾದ ವಾಜಿಗಳವಂಗಡದಿಂದಮು ಮಂಬುಪೂರಿತೋ ॥
ದರಮೆನಿಪಂಬುದಾವಳಿಯ ಮೇಗಡೆಯೈತರುತಿರ್ಪ್ಪಪಾಂಗೆ ಶೀ ।
ಕರದೊಳಿನಾಂದನೇಮಿಗಳನಾಂತಭವದ್ರಥಮಿಲ್ಲಿಸೂಚಿಕುಂ ॥ ೧೨೦

ಮಾ.—ಎಲೈ ಆಯುಷ್ಮಂತನೆ, ನಿಮಿಷವಾದಕೂಡಲೆ ನಿನ್ನ ಆಳಿಕೆಯ ಭೂಮಿಗೆ ಇಳಿಯುವೆ.

ರಾಜಂ.—(ಕೆಳಕ್ಕೆ ನೋಡಿ) ಎಲೈ ಮಾತಲಿಯೆ, ಅತಿವೇಗವಾಗಿ ಇಳಿಯುವದರಿಂದ ಮರ್ತ್ಯಲೋಕವು ನೋಡಲು ಆಶ್ಚರ್ಯಕರವಾಗಿ ಕಾಣುವದು; ಹಾಗೆಯೇಸರಿ.

ವೃತ್ತ॥ ಇಳೆಯೇಳ್ತ್ತಿರ್ಪ್ಪಗಶೃಂಗದಿಂದಿಳಿವವೋಲೊತ್ತೇಕ್ಕರ್ಗಂ ದಳಾಭ್ಯಂ
ತರಂ ।
ಗಳೊಳಾಳ್ದಂಗವ ಮಾಣ್ದವಲ್ತೆ ನೆಗೆದಾಸ್ಕಂಧಂಗಳಿಂ ವೃಕ್ಷಗಳ್॥
ತಳೆಗುಂತೊರ್ಕೆಯ ಬಿತ್ತರಂಬಡೆದು ಬತ್ತಿತೆಂಬವೋಲಿರ್ದ್ದಪೆ।
ಬೆರ್ಗಳೆಮತ್ಪಾರ್ಶ್ವವನೊಂದಿಪಂತಿರೆಸೆಗುಂ ಮರ್ತ್ಯೋರ್ವಿ ತಾ
ನೋರ್ವ್ವನಿಂ ॥ ೧೨೧

ಮಾತ.—ಚೆನ್ನಾಗಿ ಹೇಳಿದೆ! (ಎಂದು ಬಹುಮಾನದೊಡನೆ ನೋಡಿ) ಆಹ! ಭೂಮಿಯು ಬಹು ರಮಣೀಯವಾಗಿ ಕಾಣುವದು.

ರಾಜಂ.—ಎಲೈ ಮಾತಲಿಯೆ, ಪೂರ್ವ ಸಮುದ್ರದಿಂದ ಪಶ್ಚಿಮಸಮುದ್ರದವರಿಗೂ ವ್ಯಾಪಿಸಿ ಸಂಧ್ಯಾಕಾಲದ ಮೇಘಮಂಡಲದಂತೆ ಸುವರ್ಣರಸವನ್ನು ಸೂಸುವ ಈ ಪರ್ವತ ಯಾವದು?

ಮಾತ.—ಎಲೈ ಆಯುಷ್ಮಂತನೆ, ಇದು ತಪಸ್ಸಿದ್ಧಿಕರವಾದ ಹೇಮಕೂಟವೆಂಬ ಕಿಂಪುರುಷ ಪರ್ವತವಲ್ಲವೆ?

ಕಂದ॥ ಸರಸಿಜಭವನಿಂ ಪುಟ್ಟಿದ ।
ಮರೀಚಿಗಣುಗಂ ಪ್ರಜೇಶ್ವರಂ ಸಕಲ ಸುರಾ ॥

ಸುರಗುರುವೆನಿಪ ಮುನೀಂದ್ರಂ ।
ಚರಿಪಂ ಸತಿವೆರಸು ತಪವ ನೀ ಪರ್ವತದೊಳ್ ॥ ೧೭೦

ರಾಜಂ.—ಹಾಗಾದರೆ, ಶ್ರೇಯಸ್ಕರವಾದ ಇವರ ದರ್ಶನವನ್ನು ಮಾಡದೆ ಹೋಗಕೂಡದು. ಆದ್ದರಿಂದ ಪೂಜ್ಯರಾದ ಇವರನ್ನು ಪ್ರದಕ್ಷಿಣೆಮಾಡಿ ಹೋಗಲಿಚ್ಛೈಸುವೆನು.

ಮಾ.—ಮೊದಲು ಇದು ಮಾಡತಕ್ಕದ್ದು. ಇದೊ ನಾವು ಇಳಿದೆವು.

ರಾಜಂ.—(ನಕ್ಕು) ಎಲೈ ಮಾತಲಿಯೆ—

ಕಂದ॥ ಉಲಿಯುವು ರಥನೇಮಿಗಳುಂ ।
ವಿಲೋಕಿಸಲ್ಕೇಳ್ದ ಧೂಳಿ ಯಾದೊಡಮಿಲ್ಲಂ ॥
ನೆಲನಂ ಮುಟ್ಟದಕತದಿಂ ।
ನಿಲಿಸಿದ ತೇರಿಳಿದು ಮಿಳಿದಪರಿಯುಂತಲ್ಲಂ ॥ ೧೭೧

ಮಾ.—ಎಲೈ ಆಯುಷ್ಮಂತನೆ, ಇಂದ್ರಂಗೂ ನಿನಗೂ ಇಷ್ಟೇ ವಿಶೇಷವು.

ರಾಜಂ.—ಎಲೈ ಮಾತಲಿಯೆ, ಮಾರೀಚಾಶ್ರಮವು ಇರುವ ಸ್ಥಾನವು ಯಾವದು ?

ಮಾ.—(ಕಯ್ಯಿಂದ ತೋರಿಸಿ)

ವೃತ್ತ॥ ಅರೆಮೆಯ್ವಲ್ಮೀಕದೊಳ್ತಾಂ ಪುದುಗಿರೆಯುಲುರದಲ್ಲೊಪ್ಪೆ ಸರ್ಪತ್ವಚಂಗಳ್ ।
ಕೊರಲೊಳ್ ಜೀರ್ಣಂಲತಾಮಂಡಲಮುಲೆಯೆ ಕರಂ ಸ್ಕಂಧದೊಳ್ ಪಕ್ಷಿಗಳ್ಕ ॥
ಟ್ಟಿರೆ ಗೂಡಂ ನೀಳ್ದಬಲ್ಜಡೆ ನೆರೆ ಮೆರೆಯಲ್ ಸ್ಥಾಣುವೋಲ್ ನಿಶ್ಚಲತ್ವಂ ।
ಬೆರಸಾದಂ ಸೂರ್ಯಬಿಂಬಕ್ಕಭಿಮುಖನೆನಿಸೀ ಮೌನಿ ತಾನಿಪ್ಪ ತಾಣಂ ॥ ೧೭೪

ರಾಜಂ.—ಅತಿಕಷ್ಟದಿಂದ ತಪವನ್ನಾಚರಿಸುವ ಈತನಿಗೆ ನಮಸ್ಕಾರವು.

ಮಾ.—(ಕಡಿವಾಣವನ್ನು ಹಿಡಿದುಬಿಟ್ಟು) ಇದೊ, ಈಗ ಅದಿತಿ ಬೆಳಸಿದ ಮಂದಾರವೃಕ್ಷದಿಂದ ಕೂಡಿದ ಮಾರೀಚಮಹರ್ಷಿಯ ಆಶ್ರಮವನ್ನು ಹೊಕ್ಕೆವು.

ರಾಜಂ.—ಈಸ್ಥಾನವು ಸ್ವರ್ಗಕ್ಕಿಂತಲೂ ಅಧಿಕತರವಾದ ಸುಖವನ್ನುಂಟು ಮಾಡುವದು; ಅಮೃತದ ಮಡುವಿನಲ್ಲಿ ಮುಳುಗಿದಂತಾದೆನು.

ಮಾ.—(ರಥವನ್ನು ನಿಲ್ಲಿಸಿ) ಎಲೈ ಆಯುಷ್ಮಂತನೆ, ಇಳಿಯ ಬೇಕು.

ರಾಜಂ.—(ಇಳಿದು) ಎಲೈ ಮಾತಲಿಯೆ ನೀನೋ?

ಮಾ.—(ರಥವನ್ನು ನಿಲ್ಲಿಸಿ ನಾವು ಇಳಿಯುವೆವು ಎಂದು ರಥವನ್ನು ಇಳಿದು) ಎಲೈ ಆಯುಷ್ಮಂತನೆ ಇತ್ತ ಬಾ ಪೂಜ್ಯರಾದ ಋಷಿಗಳ ತಪೋವನ ಭೂಮಿಗಳನ್ನು ನೋಡು.

ರಾಜಂ.—ಎಲೈ ಇಂದ್ರಸಾರಥಿಯೆ ಆಶ್ಚರ್ಯದೊಡನೆ ನೋಡುವೆನು.

ವೃತ್ತ॥ ಆವರಿಸಿರ್ದ್ದ ಕಲ್ಪತರು ಕಾನನದೊಳ್ಪವನಾಶನಂ ಮಣಿ।
ಗ್ರಾವದೆಜಾನಮಂತೆ ಕನಕಾಬ್ಜ ಸರೋವರದಲ್ಲಿ ಮಜ್ಜನಂ॥
ದೇವವಧೂ ಸಮೀಪದೊಳೆ ಸಂಯಮವೊಪ್ಪೆ ಪೆರಮ್ಮುರ್ನೀಂದ್ರ
ರೊ।
ಲ್ದಾವುದಕಾಂಕ್ಷಿಪರ್ತ್ತಪಗಳಿಂ ತಪವಿರ್ದ್ದಪರಲ್ಲಿ ತಾವಿವರ್॥೧೩॥

ಮಾ.—ಮಹಾತ್ಮರ ಮನೋಭಿಲಾಷೆಯು ಮೇಲೆಮೇಲೆ ಏರತಕ್ಕದ್ದು. (ನಡೆದು ಆಕಾಶವನ್ನು ನೋಡಿ) ಎಲೈ ವೃದ್ಧಶಾಕಲ್ಯನೆ, ಪೂಜ್ಯರಾದ ಮಾರೀಚ ಮುನಿಗಳು ಏನು ಮಾಡುತ್ತಿರುವರು? (ಕಿವಿಗೊಟ್ಟು) ಏನು? ಋಷಿಪತ್ನಿಯರೊಡನೆ ಪ್ರಶ್ನೆಮಾಡಿದ ದಕ್ಷಪುತ್ರಿಯಾದ ಅದಿತೀದೇವಿಗೆ ಪತಿವ್ರತಾಧರ್ಮವನ್ನು ಉಪದೇಶಮಾಡುತ್ತಿರುವರೆಂದು ಹೇಳುತ್ತೀಯೊ?

ರಾಜಂ.—ಹಾಗಾದರೆ ಸಮಯವನ್ನು ನಾವು ಕಾದಿರಬೇಕಲ್ಲವೆ.

ಮಾ.—(ರಾಜನನ್ನು ನೋಡಿ) ಎಲೈ ಆಯುಷ್ಮಂತನೆ, ಗುರುಗಳಿಗೆ ತಿಳಿಸಿ ಬಂದು ನಿನ್ನನ್ನು ಕರೆದುಕೊಂಡು ಹೋಗುವೆನು ಅವರಿಗೂ ಈ ಅಶೋಕವೃಕ್ಷದಕೆಳಗೆ ಕುಳಿತಿರು.

ರಾಜಂ.—ನೀನು ಹೇಳಿದಂತಾಗಲಿ (ಎಂದು ಕುಳಿತುಕೊಳ್ಳುವನು)

(ಎಂದು ಮಾತಲಿಯು ಹೋದನು)

ರಾಜಂ.—(ನಿಮಿತ್ತವನ್ನು ಸೂಚಿಸಿ)

ಕಂದ ‖ ಎಲೆಭುಜವೆ ಸುಮ್ಮನೇತಕೆ ।
ಚಲಿಪೆ ಮನೋರಥಕೆನಾನಪೇಕ್ಷಿಪನಲ್ಲಂ ‖
ತಿಳಿವಣಮಿಲ್ಲದೆ ಪೂರ್ವದೊ ।
ಳುಳಿದ ಶುಭಂ ದುಃಖವಾಗಿ ಪರಿಣಮಿಪುದರಿಂ ‖ ೧೭೬

(ತೆರೆಯಲ್ಲಿ)

ಚಾಪಲ್ಯವನ್ನು ಮಾಡಬೇಡ ಮಾಡಬೇಡ. ಇನ್ನೇನು ತನ್ನ ಸ್ವಭಾವವನ್ನು ಪಡದೇಪಡೆದನು.

ರಾಜಂ.—(ಕಿವಿಗೊಟ್ಟು) ಇದು ಅವಿನಯಕ್ಕೆ ತಕ್ಕ ಸ್ಥಳವಲ್ಲ! ಚಾಪಲ್ಯವನ್ನು ಮಾಡಬೇಡವೆಂದು ಯಾರನ್ನು ಶಿಕ್ಷಿಸುವರು ?

(ಸದ್ದಾದಕಡೆಗೆ ತಿರುಗಿ ನೋಡಿ—ಆಶ್ಚರ್ಯದೊಡನೆ ಕೂಡಿ)

ಆಹ! ತಾಪಸಿಯರಿಂದ ಅನುಬಂಧಿಸಲ್ಪಟ್ಟ ಬಾಲ್ಯಕ್ಕೆ ಮಿಾರಿದ ಶಕ್ತಿಯುಳ್ಳ ಈಬಾಲನು ಯಾರು ?

ಕಂದ ‖ ಅರರೇ ಜನನಿಯ ಮೊಲೆಪಾ ।
ಲರೆಯುಂಡೀ ಸಿಹ್ಮಶಿಶುವ ನಿರದೊಡನಾಡಲ್ ‖
ಕರಮರ್ದನದಿಂದಂ ಕೇ ।
ಸರಂಗಳಲೆಯೊಂದೆ ಸೆಳೆಯುತಿರ್ಪ್ಪಂಬಲ್ಪಿಂ ‖ ೧೭೭

(ಸಿಹ್ಮದ ಮರಿಯನ್ನು ಎಳೆದಾಡುತ್ತಾ ಬಾಲಕನು ತಾಪಸಿಗಳೊಡನೆ ಬರುವನು)

*ಬಾಲಕನು.—ಎಲೆ ಸಿಹ್ಮದಮರಿಯೆ, ಆಕಳಿಸು ಆಕಳಿಸು ನಿನ್ನ ಹಲ್ಲುಗಳನ್ನು ಲೆಕ್ಕ ಮಾಡುವೆನು.

---

*ರಾಗ—ಹಿಂದುಸ್ಥಾನಿಕಾಪಿ. ‖ ಆದಿತಾಳ ‖

ಬಾಬಾ ಕೇಸರಿಶಾಬಾ । ಫಡ ಬಾಬಾ ‖ ಪ ‖ ಕುಣಿ ಕುಣಿ ನಿನಗಾ । ರೆಣೆ ಬಾಯ್ಬಿಡು ಬಿಡು । ಎಣಿಸುವೆ ನಿನ್ನೀಪಲ್ಲಾನೆಲ್ಲಾ ‖ ೧ ‖

ಮೊದಲನೆಯವಳು.—ಎಲೈ ದುರುಳನೆ, ನಮಗೆ ಮಕ್ಕಳಂತಿರುವ ಪ್ರಾಣಿಗಳನ್ನು ಏತಕ್ಕೆ ನೋಯಿಸುವೆ? ಇನ್ನೇನು ಗತಿ! ನಿನ್ನ ಚಲ ಹೆಚ್ಚೇ ಹೆಚ್ಚಿತು; ನಿನಗೆ ಋಷಿಗಳು ಸರ್ವದಮನನೆಂದು ಹೆಸರಿಟ್ಟದ್ದು ಯುಕ್ತವಾದದ್ದೆ.

ರಾಜಂ.—ಇದೇನು! ಹೊಟ್ಟೆಯಲ್ಲಿ ಹುಟ್ಟಿದ ಮಗನಲ್ಲಿ ಮನಸ್ಸು ಅನುರಾಗಿಸುವಂತೆ ಈ ಬಾಲಕನಲ್ಲಿ ಅನುರಾಗಪಡುವದು. ನಿಜ ಮಕ್ಕಳಿಲ್ಲದ್ದು ಹೀಗೆ ವಾತ್ಸಲ್ಯ ವನ್ನು ಉಂಟುಮಾಡಬಹುದು.

೨ನೇ ಯವಳು.—ಎಲೈ ಸರ್ವದಮನನೆ, ಇದರ ಮರಿಯನ್ನು ನೀನು ಬಿಡದಿದ್ದರೆ ಈ ಹೆಣ್ಣು ಸಿಹ್ಮವು ನಿನ್ನ ಮೇಲೆ ಬೀಳುವದು.

ಬಾಲ.—(ನಕ್ಕು) ಓಹೋ! ನನಗೆ ಬಹು ಭಯವುಂಟಾಯಿತು.

(ಎಂದು ತುಟಿಯನ್ನು ತೋರಿಸುವನು)

ರಾಜ.—ಕಂದ ॥ ಅಮವಾಸ್ಫುಲಿಂಗದಶೆಯೊಳ್ ।
ಸಮಿತ್ತುಗಳ ನೆಳಸುತಿರ್ಪವಹ್ನಿಯ ತೆರದಿಂ ॥
ಸುಮಹಾತೇಜೋಬೀಜಂ ।
ಕುಮಾರ ನಿವ ನೆನಗೆ ನೋಡೆ ಕಾಣುತ್ತಿರ್ಪಂ ॥ ೧೩೮

೧ನೇ ಯವಳು.—ಎಲೈ ವತ್ಸನೆ, ಈ ಸಿಹ್ಮದ ಮರಿಯನ್ನು ಬಿಡು ನಿನಗೆ ಆಡುವದಕ್ಕೆ ತಕ್ಕ ಇನ್ನೊಂದು ಪದಾರ್ಥವನ್ನು ಕೊಡುವೆನು.

ಬಾಲ.—ಎಲ್ಲಿ ಅದೇನು ಕೊಡು (ಎಂದು ಹಸ್ತವನ್ನು ನೀಡುವನು)

ರಾಜಂ.—(ನೋಡಿ ಆಶ್ಚರ್ಯದಿಂದ ಕೂಡಿ) ಇದೇನು! ಈ ಬಾಲಕನು ಚಕ್ರವರ್ತಿ ಲಕ್ಷಣದಿಂದಲೂ ಕೂಡಿರುವನು. ಹಾಗೆಯೇ ಸರಿ—

ಕಂದ ॥ ಬೇಡಲ್ಕಿ ಜೇಷ್ಟವಸ್ತುವ ।
ನೀಡಿದಕೈತೆರಪನುಳದ ಬೆರಳ್ಗಳ ನೆಸೆಗುಂ ॥
ಮೂಡಣ ಕೆಂಪಿಂದಲದೋಡ ।
ಗೂಡಿದ ದಳದಿಂದೆ ಮೆರೆವ ಸರಸಿರುಹಂಬೊಲ್ ॥ ೧೩೯

೨ನೇ ಯುವಳು.—ಎಲ್ಗೆ ಸುವ್ರತೆಯೇ, ವಾಙ್ಮಾತ್ರದಿಂದ ಇವನನ್ನು ಸುಮ್ಮನಿರಿಸಲಾರೆನು, ನಡೆ ನನ್ನ ಪರ್ಣಶಾಲೆಯಲ್ಲಿ ಋಷಿಪುತ್ರನಾದ ಮಾರ್ಕಂಡೇಯನಾಡುವ ಬಣ್ಣದ ಮಣ್ಣಿನ ನವಿಲಿರುವದು, ಅದನ್ನು ತೆಗೆದುಕೊಂಡು ಬಾ.

೧ನೇ ಯುವಳು.—ಹಾಗಾಗಲಿ ; (ಎಂದು ಹೋದಳು)

ಬಾಲ.—ಆವರಿಗೂ ಇದರ ಸಂಗಡಲೇ ಆಡುವೆನು. (ಎಂದು ತಾಪಸಿಯನ್ನು ನೋಡಿ ನಗುವನು)

ರಾಜ.—ದುರುಳತನವುಳ್ಳ ಈ ಬಾಲಕನಲ್ಲಿ ನನ್ನ ಮನಸ್ಸು ಆಸೆಪಡುವದು.

ವೃತ್ತ॥ ಮೊಳೆವಲ್ಶೋಭಿಸೆ ನಿರ್ನಿಮಿತ್ತಹಸಿತಂ ಚೆಲ್ವಾಗೆ ಲಾಲಾಜಲಂ ।
ತುಳುಕಲ್ಪರ್ಪ್ಪತೊದಳ್ನನಂಗೊಳಸಲಂಕಾ ರೋಹಕಿಚ್ಛೈಪ ಮ॥
ಕ್ಕಳ ನಿಕ್ಕೈರ್ಗಳನೆತ್ತಿಕೊಂಡು ನಲವಿಂ ತದ್ದೇಹಚಕಂಚದ್ರಜೋ ।
ಮಳನಾಂಗರ್ಕ್ಕಳೆನಿಪ್ಪಮಾನವರೆ ತಾಂಧನ್ಯರ್ವಲಂ ಧಾತ್ರಿಯೊಳ್ ॥

ತಾಪಸಿ.—ಒಳ್ಳೆದು, ಆಗಲಿ, ಇವನು ನನ್ನನ್ನು ಗಣನೆ ಮಾಡುವದಿಲ್ಲ. (ಎಂದು ಎಡಬಲವನ್ನು ನೋಡಿ) ಋಷಿಕುಮಾರರಲ್ಲಿ ಇಲ್ಲಿಯಾರೂ ಇಲ್ಲವೆ ! (ರಾಜನನ್ನು ನೋಡಿ) ಎಲೈ ಸೌಮ್ಯಮುಖನೆ, ಇತ್ತಬಾ, ಬಿಡಿಸುವದಕ್ಕೆ ಅಶಕ್ಯವಾದ ಮುಷ್ಟಿಯಿಂದ ಹಿಡಿದು ಹುಡುಗತನದಿಂದ ಇವನು ಬಾಧಿಸುವ ಸಿಹ್ಮದ ಮರಿಯನ್ನು ಬಿಡಿಸು.

ರಾಜಂ.—(ನಗೆಯಿಂದ ಕೂಡಿ ಸಮೀಪಕ್ಕೆ ಬಂದು)

ಕಂದ ॥ ಎನಸುಂ ನೀನೇಕಾಶ್ರಮ ।
ಕನುಚಿತವಹ ಗುಣದೆ ಜಂತುಗಳ ತಪಿಸದ ಪು
ಟ್ಟನಸಂಯಮಗುಣಮಂ ಚಂ ।
ದನತರುವಂ ಕೃಷ್ಣಸರ್ಪಶಿಶುವೋಲ್ಕೆಡಿಪೈ ॥ ೧೮೧

ತಾಪಸಿ.—ಎಲೈ ಸೌಮ್ಯಮುಖನೆ, ಈತನು ಋಷಿಕುಮಾರನಲ್ಲವಲ್ಲ.

ರಾಜಂ.—ಆಕಾರಕ್ಕೆ ತಕ್ಕ ಇವನ ನಡತೆಯೇ ಹೇಳುವದು, ಆಶ್ರಮದ ನಂಬಿಕೆಯಿಂದ ನಾವು ಹೀಗೆ ಊಹಿಸಿದೆವು (ತನ್ನ ಇಚ್ಛಾನುಸಾರವಾಗಿ ಬಾಲಕನನ್ನು ಆಲಿಂಗಿಸಿಕೊಂಡು ಸ್ಪರ್ಶ ಸುಖವನ್ನು ಹೊಂದಿ ತನ್ನಲ್ಲಿತಾನು)

ಕಂದ ॥ ಇವನಾವನಕುವರನೊ ನಾ ।
ನಿವನಂ ತಕ್ಕೈಸಲಿಂತು ಸುಖವೆನಗಾದ ॥
ತ್ತವನಿಯೊಳಗೆ ತನ್ನಂ ಪೆ ।
ತ್ತವಿಪುಲಪುಣ್ಯಂಗೆ ಸುಖವ ನೆನಿತಿತ್ತಪನೋ ॥ ೧೯೦

ತಾಪಸಿ.—(ಇಬ್ಬರನ್ನು ನೋಡಿ) ಆಶ್ಚರ್ಯ ! ಆಶ್ಚರ್ಯ !

ರಾಜಂ.—ಆಶ್ಚರ್ಯವೇನು !

ತಾಪಸಿ.—ಈ ಬಾಲಕನರೂಪು ನಿನ್ನ ಸಂಬಂಧವನ್ನು ಹೋಲುವದೆಂದೂ ನೀನು ಅಪರಿಚಿತನಾದರೂ ನಿನ್ನಲ್ಲಿ ಇವನು ಅನುಕೂಲನಾಗಿರುವನೆಂದೂ ವಿಸ್ಮಿತಳಾದೆನು.

ರಾಜಂ.—(ಬಾಲಕನನ್ನು ಮುದ್ದಿಸಿ) ಎಲೌ ಪೂಜ್ಯಳೆ, ಇವನು ಮುನಿಕುಮಾರನಲ್ಲದಿದ್ದರೆ ಯಾವ ಕುಲದಲ್ಲಿ ಹುಟ್ಟಿದವನು ?

ತಾಪಸಿ.—ಇವನು ಪುರು ಕುಲದಲ್ಲಿ ಹುಟ್ಟಿದವನು .

ರಾಜಂ.—(ತನ್ನಲ್ಲಿತಾನು) ಇವನು ನಮ್ಮ ಕುಲದವನೆ ? ಆದ್ದರಿಂದಲೇ ಪೂಜ್ಯೆಯಾದ ಈಕೆಯು ಇವನನ್ನು ನನ್ನ ಹೋಲಿಕೆಯುಳ್ಳವನೆಂದು ಹೇಳಿದಳು. ಪುರುವಂಶದವರಿಗೆ ಮುಪ್ಪಿನಲ್ಲಿ ವನ ನಿವಾಸವು ಕುಲವ್ರತವಾಗಿರುವದಷ್ಟೆ ?

ಕಂದ ॥ ಇಳೆಯಂ ಸಲಹಲ್ಮೊಂಮುಂ ।
ಜುಳಸೌಧಾವಾಸಕೆಳಸುವಾ ಪುರುಕುಲಜರ್ ।
ಬಳಿಕಂ ವಾನಪ್ರಸ್ಥ ।
ಕ್ಕೆಳವಡೆತಾಂ ವೃಕ್ಷಮೂಲಮುಂ ಮನೆಗೈವರ್ ॥ ೧೯೨

(ಪ್ರಕಾಶವಾಗಿ) ಈ ದೇವಭೂಮಿಯು ಮನುಷ್ಯರಿಗೆ ಗೋಚರವಾಗತಕ್ಕದ್ದಲ್ಲವಲ್ಲ.

ತಾಪಸಿ.—ಎಲೈ ಸಾರ್ವಭೌಮನೆ, ನೀನು ಹೇಳಿದ್ದು ಸರಿ, ಆದರೆ ಈತನ ತಾಯಿ ಅಪ್ಸರಸ್ತ್ರೀಗೆ ಮಗಳಾದ ಕಾರಣ ದೇವಗುರುವಾದ ಮಾರೀಚಮುನಿಗಳ ಈ ತಪೋವನದಲ್ಲಿ ಇವನನ್ನು ಹೆತ್ತಳು.

ರಾಜಂ.—(ಮರೆಯಾಗಿ) ಆಹ! ಆಶೆಯನ್ನು ಹುಟ್ಟಿಸುವದಕ್ಕೆ ಇದು ಎರಡನೆಯದು (ಪ್ರಕಾಶವಾಗಿ) ಆಕೆಗೆ ಪತಿಯಾದ ರಾಜಋಷಿಯ ಹೆಸರೇನು?

ತಾಪಸಿ.—ಧರ್ಮಪತ್ನಿಯನ್ನು ಬಿಟ್ಟವನ ಹೆಸರನ್ನು ಎತ್ತುವದಕ್ಕೆ ಯಾರಿಗೆತಾನೇ ಮನಸ್ಸು ಬಂದೀತು.

ರಾಜಂ.—(ತನ್ನಲ್ಲಿತಾನು) ಇದೇನು, ಈ ಕಥೆ ನನ್ನನ್ನೇ ಗುರಿಮಾಡುವದು? ಒಳ್ಳೇದು, ಈ ಬಾಲಕನ ತಾಯ ಹೆಸರನ್ನು ಕೇಳೋಣ; ಅಥವಾ ಪರಪತ್ನಿಯ ವಿಚಾರವು ಸರಿಯಾದ್ದಲ್ಲ.

(ಮಣ್ಣಿನ ನವಿಲನ್ನು ಹಿಡಿದುಕೊಂಡು ತಾಪಸಿ ಬರುವಳು.)

ತಾಪಸಿ.—ಎಲೈ ಸರ್ವದಮನನೆ, ಶಕುಂತ ಲಾವಣ್ಯವನ್ನು ನೋಡು.

ಬಾಲ.—(ಕಣ್ಣೆತ್ತಿನೋಡಿ) ಎಲ್ಲಿ? ನಮ್ಮ ಅಮ್ಮ!

ಇಬ್ಬರು.—(ನಕ್ಕು) ತಾಯ ಹಂಬಲವುಳ್ಳ ಈ ಬಾಲಕನು, ಶಕುಂತಲಾವಣ್ಯವೆಂದು ನಾವು ಆಡಿದ್ದನ್ನು ಕೇಳಿ ನಾಮಸಾದೃಶ್ಯದಿಂದ ಭ್ರಮಿಸಿದನು.

೨ನೇ ಯುವಳು.—ಎಲೈ ವತ್ಸನೆ, ಈ ಮಣ್ಣಿನ ನವಿಲ ಚಲುವಿಕೆಯನ್ನು ನೋಡೆಂದು ಹೇಳಿದೆನು.

ರಾಜಂ—(ತನ್ನಲ್ಲಿತಾನು) ಈ ಬಾಲಕನ ತಾಯ ಹೆಸರು ಶಕುಂತಳೆಯೆಂದೇ! ಒಂದೇ ಹೆಸರಿನವರು ಬಹಳವಾಗಿ ಉಂಟಷ್ಟೆ, ಆದರೂ ಈ ಹೆಸರು ಮಾತ್ರ, ಮೃಗತೃಷ್ಣಿಕೆಯಂತೆ ನನಗೆ ವಿಷಾದವನ್ನುಂಟುಮಾಡುವದು.

ಬಾಲ.—ಅಮ್ಮಾ, ಈ ಬಂಣದ ನವಿಲು ನನಗೆ ಬೇಕು (ಎಂದು ಆಟದನವಿಲನ್ನು ತೆಗೆದುಕೊಳ್ಳುವದಕ್ಕೆ ಕೈ ನೀಡುವನು.)

ಮೊದಲನೆ.—(ಭಯದಿಂದ ಕೂಡಿ) ಓಹೋ! ರಕ್ಷಾಯಂತ್ರವು ಈತನ ಮುಂಗೈಯಲ್ಲಿ ಕಾಣುವದಿಲ್ಲ!

ರಾಜಂ.—ಭಯಪಡಬೇಡಿ, ಸಿಹ್ಮದ ಮರಿಯನ್ನು ಮರ್ದಿಸುವಾಗ ಇದೋ ಜಾರಿ ಬಿದ್ದಿದೆ (ಎಂದು ತೆಗೆದುಕೊಳ್ಳುವನು.)

ಇಬ್ಬರು.—ಬೇಡಬೇಡ, ಇನ್ನೇನುಗತಿ ! ತೆಗೆದುಕೊಂಡನಲ್ಲ ; (ಎಂದು ಆಶ್ಚರ್ಯದಿಂದ ಎವೆಯಲ್ಲಿ ಕೈಗಳನ್ನು ಇಟ್ಟುಕೊಂಡು ಒಬ್ಬರನ್ನೊಬ್ಬರು ನೋಡುವರು.)

ರಾಜಂ.—ಏತಕ್ಕೋಸ್ಕರ ಮುಟ್ಟಬೇಡವೆಂದು ಹೇಳಿದಿರಿ ?

೧ನೇಯವಳು.—ಎಲೈ ಮಹಾರಾಜನೆ ಕೇಳು, ಇದು ಅಪರಾಜಿತೆಯೆಂಬ ಮೂಲಿಕೆಯು, ಇದನ್ನು ಇವನಿಗೆ ಜಾತಕರ್ಮಸಮಯದಲ್ಲಿ ಪೂಜ್ಯರಾದ ಮಾರೀಚರು ಕಟ್ಟಿದರು, ನೆಲಕ್ಕೆ ಬಿದ್ದರೆ ಇದನ್ನು ತಂದೆತಾಯಿಗಳೂ ಕಟ್ಟಿದವರೂ ಹೊರತಾಗಿ ಇತರರು ಮುಟ್ಟುವದಿಲ್ಲ.

ರಾಜಂ.—ಬಂದುವೇಳೆ ಮುಟ್ಟಿದರೆ ?

೧ನೇಯವಳು.—ಮುಟ್ಟಿದಕ್ಷಣವೆ ಸರ್ಪವಾಗಿ ಕಚ್ಚುವದು.

ರಾಜಂ.—ನೀವು ಹೇಳಿದಹಾಗೆ ಯಾವಾಗಲಾದರೂ ನಡೆದಿರುವದನ್ನು ನೋಡಿರುವಿರಾ ?

ಇಬ್ಬರು.—ಅನೇಕಾವರ್ತಿ.

ರಾಜಂ.—(ಸಂತೋಷದೊಡನೆ ಕೂಡಿ) ಈಗ ಪೂರ್ಣವಾದ ನನ್ನ ಮನೋರಥವನ್ನು ಇನ್ನು ಹ್ಯಾಗೆತಾನೇ ಕೊಂಡಾಡದಿರಲಿ. (ಎಂದು ಬಾಲನನ್ನು ಆಲಿಂಗಿಸುವನು).

೨ನೇಯವಳು.—ಎಲೌ ಸುವ್ರತೆ ನಡೆ, ನಿಯಮನಿರತೆಯಾಗಿರುವ ಶಕುಂತಳೆಗೆ ಈ ವೃತ್ತಾಂತವನ್ನು ತಿಳಿಸೋಣ (ಎಂದು ಹೊರಟರು).

ಬಾಲ.—ನನ್ನನ್ನು ಬಿಡು ನಾನು ತಾಯಬಳಿಗೆ ಹೋಗುವೆನು.

ರಾಜಂ.—ಎಲೈ ಪುತ್ರನೆ, ನನ್ನೊಡನೆಯೇ ನಿನ್ನ ತಾಯನ್ನು ಸಂತೋಷಪಡಿಸುವೆ, ತಾಳು.

ಬಾಲ.—ನನ್ನ ತಂದೆಯಾದರೊ, ದುಷ್ಯಂತನು, ನೀನು ಯಾರು ?

ರಾಜಂ.—(ನಗೆಯೊಡನೆ ಕೂಡಿ) ಈವಿವಾದವೆ ನನಗೆ ವಿಶ್ವಾಸವನ್ನುಂಟು ಮಾಡುವದು,

(ಅನಂತರ ಒಂದೇ ಜಡೆಗಟ್ಟಿದ ಮುಡಿಯುಳ್ಳ ಶಕುಂತಳೆ ಬರುವಳು)

ಶಕುಂ.—ಸರ್ವದಮನನ ಕಯ್ಯಲ್ಲಿದ್ದ ಮೂಲಿಕೆಯು ಸರ್ಪವಾಗದೇ ಇದ್ದ ಸಂಗತಿಯನ್ನು ಕೇಳಿದಾಗ್ಯೂ ನನ್ನ ಭಾಗ್ಯದಲ್ಲಿ ನನಗೇನು ಕೋರಿಕೆ ಯುಂಟಾಗಲಿಲ್ಲ; ಒಂದುಪಕ್ಷಕ್ಕೆ ಸಾನುಮತಿ ಹೇಳಿದಂತೆ ಸಂಭಾವಿಸಲ್ಪಡ ಬೇಕಾಗಿದೆ.

(ರಾಜಂ.—ಶಕುಂತಳೆಯನ್ನು ನೋಡಿ) ಆಹಾ! ಇದೊ ಪೂಜ್ಯಳಾದ ಶಕುಂ ತಳೆ!

*ಕಂದ॥ ಧರಿಸಿದ ಮಲಿನಾಂಬರದಿಂ।
ಕೊರಗಿದ ಮೊಗದಿಂದದೊಂದೆ ಜಡೆಯಿಂದಿದೊ ನಿ॥
ಷ್ಕರುಣನುಮಾದೆನ್ನಯ ಚಿರ।
ವಿರಹವ್ರತಮಂ ಸುಶೀಲೆ ತಾಂತಳೆದಿರ್ಪ್ಪಳ್॥ ೧೮೪

ಶಕುಂ.—(ಪಶ್ಚಾತ್ತಾಪದಿಂದ ಕಳೆಗುಂದಿದ ರಾಜನನ್ನು ನೋಡಿ) ಆರ್ಯಪುತ್ರನಹಾ ಗಿಲ್ಲವಲ್ಲಾ! ಇವನಾವನು? ಕಟ್ಟಿದ ರಕ್ಷೆಯಿಂದ ಮಂಗಳಾಂಗನಾದ ನನ್ನ ಮಗನನ್ನು ಮುಟ್ಟಿ ಅಪರಿಶುದ್ಧನನ್ನು ಮಾಡುವನು.

ಬಾಲ.—(ತಾಯಬಳಿಗೆ ಬಂದು) ಅಮ್ಮಾ ಪರಕೀಯನಾದ ಇವನಾವನು? ನನ್ನನ್ನು ಪುತ್ರನೆಂದು ಆಲಿಂಗಿಸುವನು.

ರಾಜಂ.—ಎಲೆ ಪ್ರಿಯೆ, ನಿನ್ನ ವಿಯೋಗದಿಂದ ಬಡವಾಗಿರುವ ನನ್ನ ಆಕೃ ತಿಯನ್ನು ನೋಡಿ ಆರ್ಯಪುತ್ರನ ಹಾಗಿಲ್ಲವೆಂದು ಆಡಿದಕಾರಣದಿಂದ ನಾನು

---

*ರಾಗ—ಶ್ರೀರಂಜಿನಿ. ॥ ಆದಿತಾಳ ॥

ಕಂಡೆನು ಕಾಂತಾಮಂಡಲಮಣಿಯಾ। ಪುಂಡರೀಕಾಕ್ಷಿಯ ಪುಣ್ಯಾಚರಿತೆಯಾ॥ ಪ॥ ಕಂಡೆನು ಮತ್ಕೃತಾ ಖಂಡಸುವ್ರತೆಯಾ॥ಅ॥ ಮಾಸಿದವಸ್ತ್ರವ ಧರಿಸುತೆ ಧೂಳೀ। ಧೂಸರ ವಾಗಿಹ ಕೇಶವತಾಳಿ। ವಾಸರಶಶಿವ್ಪೋಲು। ಭಾಸಿಪಸತಿಯಾ ॥೧॥ ಪರಿಕಿಸೆ ಕಠಿನಾತ್ಮನು ಮಾದೆನ್ನಾ। ವಿರಹವ್ರತವನುಧರಿಸುತೆಮುನ್ನ। ವರಗುಣವನುಬಿಡ। ದಿರುವಸುವ್ರತೆಯಾ॥

ನಿನ್ನಲ್ಲಿ ನಡೆಸಿದ ಕ್ರೂರತನವೂ ಅನುಕೂಲವಾಗಿ ಪರಿಣಮಿಸುವದಾಯಿತು. (ಎಂದು ತಿಳಿವೆನು.)

ಶಕುಂ.—(ತನ್ನಲ್ಲಿ ತಾನು) ಎಲೆ ಮನಸ್ಸೆ ಸಂತೈಸಿಕೊ, ಸಂತೈಸಿಕೊ, ಮತ್ಸರವನ್ನು ಬಿಟ್ಟ ಮಹರಾಜನ ಕರುಣಕ್ಕೆ ಪಾತ್ರಳಾದೆನು; ಈತನೇ ಆರ್ಯಪುತ್ರನು.

ರಾಜಂ.—ಕಂದ॥ ರಾಹು ತೊರೆದೊಡನೆ ಶಶಿಯಂ।
ರೋಹಿಣಿ ಬಳಿವೊರ್ದ್ದಿದಂತೆ ನೆನಪಿಂದಿರದಾ॥
ಮೋಹತಮ ಮಳಿಯೆ ಸುಕೃತದೆ।
ನೀಹಾರಕರಾಸ್ಯೆ ಸೇರ್ದ್ದೆಯೆನ್ನ ಯುಬಳಿಯಂ॥ ೧೮೫

ಶಕುಂ.—ಆರ್ಯಪುತ್ರನೆ, ಜಯಶೀಲನಾಗು (ಎಂದು ಅರ್ಧೋಕ್ತಿಯಲ್ಲಿ ಕಣ್ಣೀರು ಕುತ್ತಿಗೆಯನ್ನು ಹಿಡಿಯಲು ಸುಮ್ಮನಿರುವಳು.)

ರಾಜಂ.—ಕಂದ॥ ಸುದತಿಯೆ ಜಯಶಬ್ದಂ ಬಾ।
ಷ್ಪದೆತಾಂ ಪೊರಮಡದೊಡಂ ಜಯಾನ್ವಿತನಾದೆಂ॥
ಇದೆ ನಿನ್ನ ಪಾಟಲಾಧರ।
ವದನಾಬ್ಜವ ನಾಂ ವಿಲೋಕಿಸಿದ ಕತದಿಂದಂ॥ ೧೮೬

ಬಾಲ.—ಅಮ್ಮಾ, ಈತನ್ಯಾರು?

ಶಕುಂ.—ಎಲೆ ಮಗನೆ, ನಿನ್ನ ಭಾಗ್ಯಗಳನ್ನು ಕೇಳು.

ರಾಜಂ.—(ಶಕಂತಳೆಗೆ ಮಣಿದು)

*ವೃತ್ತ॥ ಬರಿದೆ ನಿಜೇಶ ನೆನ್ನ ತೊರೆದಂ ಗಡೆನುತ್ತಲೆ ಮಂಗಳಾಂಗಿ ಮ।
ತ್ಸರಿಸದಿರೇತರಿಂದವೊ ಮನಕ್ಕರಿವಿಲ್ಲದೆ ಪೋದುದಂದು ಕೇಳ್॥

---

*ರಾಗ—ತೋಡಿ. ॥ ಆದಿತಾಳ ॥

ಕ್ಷಮಿಸುನೀಂ ಪ್ರಾಣಸಖೀ। ರಮಣೀ ರಾಕೇಂದುಮುಖೀ। ಕ್ಷಮಿಸು॥ಪ॥ ಅಮ ಮ ಮನದಿನಾಂ। ಭ್ರಮಿಸಿದಕಾರಣ। ಮಮತೆಯುಳಿದುನಾಂ। ಮಾಡಿದತಪ್ಪ॥ ಕ್ಷಮಿಸು ॥ಅ॥ ಅಹ ಅಂಧೇನೆನಗೆ। ಮೋಹವಾಯ್ತಾಮತಿಗೆ॥ ಊಹಿಸಲರಿದಾ। ದ್ರೋಹವನೆಣಿಸದೆ। ಸ್ನೇಹವೆರಸು ಪತಿ। ಮೋಹಿಸುಶೀಲೆ॥ ೧॥

ಪಿರಿದುಶುಭಂಗಳೊಳ್ಮರವೆಯುಳ್ಳರೊಳೀ ಪರಿಯಲ್ತೆ ವರ್ತನಂ ।
ಶಿರದೆಡೆಗಿಟ್ಟ ಮಾಲೆಯುಮನಂಧನಹಿಭ್ರಮೆಯಿಂದೆ ನೂಂಕುವಂ ॥ ೧೮೭

*ಶಕುಂ—ಆರ್ಯಪುತ್ರನೆ, ಏಳು, ಏಳು, ನಿಜವಾಗಿ ನನ್ನ ಸುಕೃತ ಪ್ರತಿಬಂಧಕವಾದ ಪುರಾ ಕೃತಕರ್ಮವು ಆಗ ಪರಿಣಮಿಸತೊಡಗಿತು; ಅದ್ದರಿಂದಲೇ ದಯಾಳುವಾದ ನೀನೂ ನನ್ನ ವಿಷಯದಲ್ಲಿ ಆತೆರನಾದೆ. (ರಾಜನು ಏಳುವನು) ಆಯಿತು ಆರ್ಯಪುತ್ರನೆ ದುಃಖ ಭಾಜನೆಯಾದ ನನ್ನನ್ನು ಆಮೇಲೆ ಹ್ಯಾಗೆ ಸ್ಮರಿಸಿದೆ ?

ರಾಜಂ.—ನನ್ನ ದುಃಖ ಶಲ್ಯವನ್ನು ತೆಗೆದು ಹಾಕಿ ಬಳಿಕ ಹೇಳುವೆನು.

†ಕಂದ ॥ ಅರಸಿ ಮರವೆಯೊಳಗಾನಂ ।
ದೊರಸಲ ನಾದರಣೆಗೈದ ನಿನ್ನಯ ಪಕ್ಷ್ಮಂ ॥
ತರಲಗ್ನ ಬಾಷ್ಪಬಿಂದುವ ।
ನೊರಸುತಮಿಂದೆನ್ನ ದುಗುಡವಂ ಪರಿಹರಿಪೆಂ ॥ ೧೮೮

(ಎಂದು ಕಣ್ಣೀರನ್ನು ಒರಸುವನು.)

ಶಕುಂ.—(ರಾಜನಾಮಾಂಕಿತವಾದ ಉಂಗುರವನ್ನು ನೋಡಿ) ಆರ್ಯಪುತ್ರನೆ, ಇದು ಆ ಉಂಗುರವಲ್ಲವೆ ?

ರಾಜಂ.—ಹೌದು.

---

*ರಾಗ—ಕರಹರಪ್ರಿಯ, ॥ ಆದಿತಾಳ ॥

ತಾಳು ತಾಳವಸೀಪತಿ । ಶುಭಮತಿ ॥ ಪ ॥ ಬಾಲೆಯೊಳೇನೀ ಅನಾಚಿತಿ । ಪತೀ ॥ ಅ ॥ ಪತಿಯೆಕೇಳೆನ್ನದು । ಷ್ಕೃತಿನಿನಗಂದುವಿ । ಸ್ಮೃತಿಯನು ತಾನುಂಟು ಮಾಡಿತು ಪತೀ ॥ ೧ ॥ ದೈನ್ಯವಿದೇತಕೆ । ಮಾನ್ಯನೆ ನಿನಗೆ ನಾ । ನನ್ಯಳೆ ಕಾರುಣ್ಯವಾರಿಧೀಪತೀ ॥೨॥ ಇಂತುದಯಾಳುನೀ । ನಂತಾಗಲುನಾ । ನೋಂತುದನೇನೆಂದು ಬಣ್ಣಿಪೆಪತೀ ॥೩॥

†ರಾಗ—ಪಂತುವರಾಳಿ. ॥ ರೂಪಕತಾಳ ॥

ತರುಣೀ ತಾಳುತಾ । ಳೊರೆಯುವೆನೆನ್ನೀ । ಪರಿತಾಪವನು ಪರಿ । ಹರಿಸಿಕೊಂಡ ಮೇಲೆ ॥ ೧ ॥ ಮರವೆಯಿಂ ಮೊದಲು ನಾ । ನೊರಸದೀಕಣ್ಣೀರ । ನೊರಸೀಗಲಾದರು ಪರಿತಾಪಗಳೆವೆನು ॥ ೨ ॥

ಶಕುಂ.—ಆರ್ಯಪುತ್ರನಿಗೆ ನಂಬಿಕೆಯನುಂಟುಮಾಡುವ ಕಾಲದಲ್ಲಿ ಇದು ನನಗೆ ದೊರೆಯದೆ ಕೆಡಕುಮಾಡಿತು.

*ರಾಜಂ.—ಹಾಗಾದರೆ ಪುನಶ್ಚ ಋತುಸಂಬಂಧಕ್ಕೆ ಗುರುತಾಗಿ ಬಳ್ಳಿಯು ಕುಸುಮವನ್ನು ಪಡೆಯುವಂತೆ ನೀನು ಈ ಉಂಗರವನ್ನು ಧರಿಸಿಕೋ.

ಶಕುಂ.—ಇದರಲ್ಲಿ ನನಗೆ ವಿಶ್ವಾಸವಿಲ್ಲ ; ಆರ್ಯಪುತ್ರನೇ ಇದನ್ನು ಧರಿಸಿಕೊಳ್ಳಬೇಕು.

(ಮಾತಲಿ ಪ್ರವೇಶಿಸುವನು.)

ಮಾತಲಿ.—ಎಲೈ ಆಯುಷ್ಯಂತನೆ, ದೈವಯೋಗದಿಂದ ಧರ್ಮಪತ್ನಿಯನ್ನು ಕೂಡಿದ್ದರಿಂದಲೂ, ಪುತ್ರನ ಮುಖವನ್ನು ನೋಡಿದ್ದರಿಂದಲೂ, ಉಂಟಾದ ಸಂತೋಷದಿಂದ ನೀನು ವರ್ಧಿಸುವೆಯಾ ?

ರಾಜಂ.—ಸನ್ಮಿತ್ರನಾದ ನಿನ್ನ ದೆಸೆಯಿಂದ ನನ್ನ ಮನೋರಥವು ಸುರಸವಾಗಿ ಸಫಲವಾಯಿತು ಮಾತಲಿಯೆ ಈ ನನ್ನ ಪ್ರಯೋಜನವು ಇಂದ್ರನಿಗೆ ತಿಳಿಯಲಿಲ್ಲವಲ್ಲ.

ಮಾತಲಿ.—(ನಗೆಯಿಂದ ಕೂಡಿ) ದೇವತೆಗಳಿಗೆ ತಿಳಿಯದ್ದು ಯಾವುದುತಾನೇ ಉಂಟು ಎಲೈ ಆಯುಷ್ಮಂತನೆ ನಡೆ ನಡೆ, ಪೂಜ್ಯರಾದ ಮಾರೀಚ ಮುನಿಗಳು ನಿನಗೆ ದರ್ಶನವನ್ನು ಕೊಡುವರು.

ರಾಜಂ.—ಎಲೆ ಶಕುಂತಳೆ, ಪುತ್ರನನ್ನು ಎತ್ತಿಕೊ ನಿನ್ನೊಡನೆ ಪೂಜ್ಯರನ್ನು ನೋಡಲಿಚ್ಛೈಸುವೆನು.

ಶಕುಂ.—ಆರ್ಯಪುತ್ರನೊಡನೆ ಗುರುಸನ್ನಿಧಿಗೆ ಬರುವದಕ್ಕೆ ಲಜ್ಜೆಪಡುವೆನು.

---

*ರಾಗ—ಹಿಂದುಸ್ಥಾನಿ ಕಾಪಿ. ॥ ಝಾಪುತಾಳ ॥

ಬೇಸರಿಸಬೇಡವೆ ॥ಪ॥ ಕೈಸೇರಿದುದೆನಗೀ ಸುಖವಿದರಿಂ ॥ಅ॥ ಅಂಗನೆಕೇಳೀ । ಯುಂಗುರ ನಿನ್ನಯ । ಸಂಗತಿವೇಳ್ದುದು । ಮಂಗಳಮಯಿ ॥ ೧ ॥ ಪೊಸಸುಗ್ಗಿಗೆಲತೆ । ಕುಸುಮವ ತಳೆದವೊ । ಉಸುರುವದೇನಿದ ನೆಸಿಯುಳೆತಳೆ ॥ ೨ ॥ ಉಂಗುರವಿದನೀ । ನಂಗುಲಿಗಿಡುತಲಿ । ಸಿಂಗರಿಸುವದುಕು ॥ ರಂಗಾಂಬಿಕೆ ॥ ಬೇಸರಿಸ ॥ ೩ ॥

ರಾಜಂ.—ಶೋಕವು ನಾಚಿಕೊಳ್ಳುವದೇತಕ್ಕೆ ? ಅಭ್ಯುದಯ ಕಾಲದಲ್ಲಿ ಹೀಗೇ ನಡೆಕೊಳ್ಳಬೇಕು ? ಬಾಬಾ.

(ಎಲ್ಲರೂ ಹೋಗುವರೂ)

(ಅನಂತರದಲ್ಲಿ ಅದಿತಿಯೊಡನೆ ಪೀಠಗತರಾಗಿ ಮಾರೀಚಮುನಿಗಳು ಪ್ರವೇಶಿಸುವರು)

ಮಾರೀಚನು.—ಎಲೆ ದಾಕ್ಷಾಯಣಿಯೆ—

ಕಂದ ದನುಜರಗೆಲೆ ತನ್ನಯುಧನು ।
ಮೊನೆಮುರಿಯದ ಪವಿಯು ನಿಂದಿರನ ಕೈದೊಡವೆಂ ॥
ದೆನಿಸಿದ ದುಷ್ಯಂತನೃಪಾ ।
ಲನಿವಂ ನಿನ್ನಯ ಸುತಂಗೆ ಸಮರಸಹಾಯಂ ॥ ೧೮೯

ದಾಕ್ಷಾಯಣಿ.—ಇವನು ಮಹಾನುಭಾವನೆಂಬುವದು ಆಕೃತಿಯಿಂದಲೇ ಎಣಿಸತಕ್ಕದ್ದಾಗಿರುವದು.

ಮಾತಲಿ.—ಎಲೈ ಆಯುಷ್ಮಂತನೆ, ದೇವತೆಗಳಿಗೆತಾಯಿ ತಂದೆಗಳಾದ ಇವರು ಪುತ್ರವಾತ್ಸಲ್ಯವನ್ನು ಸೂಚಿಸುವ ಲೋಚನಗಳಿಂದ ನಿನ್ನನ್ನು ನೋಡುತ್ತಿರುವರು, ಆದ್ದರಿಂದ ಅವರ ಸಮೀಪವನ್ನು ಸೇರು.

ರಾಜಂ.—ಎಲೈ ಮಾತಲಿಯೆ—

ವೃತ್ತ॥ ಕ್ರಮದಿಂದಂ ಪಂನೆರಳ್ಭೇದಮನೆ ತಳೆದ ತೇಜಸ್ಸಿಗಂ ಯಜ್ಞಭಾ
ಗೋ ।
ತ್ತಮಭಾವಂಬೆತ್ತಲೋಕತ್ರಯದಧಿಪತಿಗಂ ಧಾತೃವಿಂಗಾದ್ಯನಪ್ಪಾ॥
ಕಮಲಾಕ್ಷಂಗಂ ತಮರ್ತಾಮೆನುತುಸಿರ್ವರದಾರಂ ಯಮೀಂದ್ರರ್ಕ್
ಳಾದ ।
ಕ್ಷಮರೀಚಿಪ್ರೋದ್ಭವರ್ದಂಪತಿಗಳಿವರ್ಗ್ಗವೋರಂತರಂ ವಾಗ್ವರಂಗಂ॥ ೧೯೦॥

ಮಾತಲಿ.—ಹೌದು.

ರಾಜಂ.—(ತಲೆಯನ್ನು ತಗ್ಗಿಸಿ) ಇಂದ್ರಭೃತ್ಯನಾದ ದುಷ್ಯಂತನು ಇಬ್ಬರಿಗೂ ನಮಸ್ಕರಿಸುವನು (ಎಂದು ನಮಸ್ಕಾರ ಮಾಡುವನು).

ಮಾರೀಚನು.—ಎಲೈ ವತ್ಸನೆ, ಬಹುಕಾಲ ಭೂಮಂಡಲವನ್ನು ಪಾಲಿಸು.

ದಾಕ್ಷಾಯಣಿ.—ಎಲೈ ವತ್ಸನೆ ಅಪ್ರತಿ ರಥನಾಗು.

ಶಕುಂ.—ಪುತ್ರನೊಡನೆ ನಾನು ನಿಮ್ಮ ಪಾದಗಳಿಗೆ ವಂದಿಸುವೆನು.

ಮಾರೀಚನು.—ಎಲೆ ವತ್ಸೆ.

ಕಂದ॥ ಪತಿಸುರಪತಿಗೆ ಸಮಾನಂ ।
ಸುತಂ ಜಯಂತಂಗೆ ಸದೃಶನೆನಿಪಂ ನಿನಗಿ ॥
ನ್ನಿತರಾಶೀರ್ವಾದಂ ಸಮು ।
ಚಿತಮಲ್ತು ಶಚಿಗೆ ಸಾಟಿಯೆನೆ ನೀಂಬಾಳ್ಗೆ ॥ ೧೯೧

ದಾಕ್ಷಾಯಣಿ.—ಎಲೆ ಮಗಳೆ, ಪತಿಗೆ ಬಹುಮತೆಯಾಗಿ ಬಾಳು; ದೀರ್ಘಾಯುವಾದ ನಿನ್ನ ಪುತ್ರನು ಉಭಯಕುಲಾ ನಂದಕನಾಗಲಿ; ಕುಳಿತುಕೊಳ್ಳು.

(ಎಲ್ಲರೂ ಮಾರೀಚ ಮುನಿಗಳ ಸಮೀಪದಲ್ಲಿ ಕುಳಿತುಕೊಳ್ಳುವರು.)

ಮಾರೀಚನು.—(ಒಬ್ಬೊಬ್ಬರನ್ನು ತೋರಿಸಿ.)

ಸತಿಯಾದ ಶಕುಂತಳೆಯುಂ ॥
ನುತಗುಣನೆಂದೆನಿಪ ಪುತ್ರನುಂ ನೀನುಂ ಭೂ ॥
ಪತಿ ಪುಣ್ಯದೆ ಕೂಡಿದುದ ।
ನ್ನಿತಮಾದಂತಾಯ್ತು ಭಕ್ತಿ ವಿತ್ತಂ ವಿಧಿಯುಂ ॥ ೧೯೨

ರಾಜಂ.—ಎಲೈ ಪೂಜ್ಯರೆ, ತಮ್ಮ ದರ್ಶನಕ್ಕೆ ಮೊದಲೇ ನನ್ನ ಕೋರಿಕೆ ಕೈಗೂಡಿತು, ಆದ್ದರಿಂದ ತಮ್ಮ ಅನುಗ್ರಹವು ಅಪೂರ್ವವಾದದ್ದು. ತಾವೇ ನೋಡಿ.

ಕಂದ॥ ಸುಮಮುದಯಿಕುಂ ಮೊದಲ್ಬಳಿ ।
ಕಮೆಫಲಮುದಯಿಸುಗುಮಿದಲೆ ಕಾರಣಕಾರ್ಯ ॥
ಕ್ರಮವಾರಯೆ ನಿಮ್ಮಯುಪದ ।
ಕಮಲಾನುಗ್ರಹಕೊಮುನ್ನಮೇ ಸಂಪದಗಳ್ ॥ ೧೯೩

ಮಾತಲಿ.—ಸೃಷ್ಟಿಕರ್ತರು ಹೀಗೆ ಪ್ರಸನ್ನರಾಗುವರು.

ರಾಜಂ.—ಎಲೈ ಪೂಜ್ಯರೆ, ನಿಮ್ಮ ಆಜ್ಞಾಕಾರಿಣಿಯಾದ ಈಕೆಯನ್ನು

ಗಾಂಧರ್ವ ವಿವಾಹದಿಂದ ಮದುವೆಯಾದೆನು. ಕೆಲವು ಕಾಲದ ಮೇಲೆ ಬಂಧುಗಳು ನನ್ನ ಸನ್ನಿಧಿಗೆ ಕರೆದುಕೊಂಡು ಬಂದಾಗ ಈಕೆಯನ್ನು ಮರವೆಯಿಂದ ತಿರಸ್ಕರಿಸಿ ತಮಗೆ ಸಗೋತ್ರರಾದ ಕಣ್ವರಿಗೆ ಅಪರಾಧವನ್ನು ಮಾಡಿದೆನು. ಉಂಗುರವನ್ನು ಕಂಡ ಮೇಲೆ ಈಕೆಯನ್ನು ಪೂರ್ವದಲ್ಲಿ ನಾನು ಮದುವೆಯಾಗಿದ್ದೆನೆಂದರಿದೆನು ; ಆದ್ದರಿಂದ ಇದು ನನಗೆ ಆಶ್ಚರ್ಯವಾಗಿ ಕಾಣುವದು.

ಕಂದ॥ ಕರಿ ಯಿದಿರೊಳಗಿಪ್ಪೆಂದದು ।
ಕರಿಯಲ್ಲೆಂದ್ಯೆದಿದಂದು ಸಂಶಯಿಸುತ್ತಂ ॥
ನಿರುಕಿಸಿಪಜ್ಜೆಯ ನಂಬುಗೆ ।
ವೆರೆದಂತಾಯ್ತೆನ್ನ ಮನದೊಳಾದ ವಿಕಾರಂ ॥ ೧೯೪

ಮಾರೀಚನು.—ಎಲೆ ವತ್ಸ, ಸಾಕು ಸಾಕು, ನಿನ್ನ ತಪ್ಪೆಂದೆಣಿಸಬೇಡ, ನಿನ್ನಲ್ಲಿ ಹಾಗೆ ಮರವೆಯುಂಟಾದದ್ದು ಸರಿಯಾದದ್ದೇ, ಕೇಳು—

ರಾಜಂ.—ಅಪ್ಪಣೆಯಾಗಬೇಕು.

ಮಾರೀಚನು.—ಅಪ್ಸರ ಸ್ತ್ರೀರ್ಥಾವತರಣದಿಂದ ನಿನ್ನ ಧಿಕ್ಕೃತಿಯಿಂದ ದುಃಖಿತೆಯಾದ ಶಕುಂತಳೆಯನ್ನು ಗ್ರಹಿಸಿಕೊಂಡು ಮೇನಕೆಯು ದಾಕ್ಷಾಯಣಿಯ ಸಮೀಪಕ್ಕೆ ಬಂದಾಗಲೇ ದೂರ್ವಾಸರ ಶಾಪದಿಂದ ಧರ್ಮಪತ್ನಿಯಾದ ಈ ತಪಸ್ವಿನಿಯನ್ನು ನೀನು ತಿರಸ್ಕರಿಸಿದೆಯೇ ಹೊರತು ಮತ್ತೆ ಬೇರೆ ಇಲ್ಲವೆಂತಲೂ, ಆ ಶಾಪವು ಉಂಗುರವನ್ನು ನೋಡಿದ ಕೂಡಲೇ ವಿಮೋಚನೆಯ ಹೊಂದುವದೆಂತಲೂ ಧ್ಯಾನದಿಂದ ತಿಳಿದೆವು.

ರಾಜಂ.—ನಿಟ್ಟುಸುರಿಂದಕೂಡಿ ಈಗ ನಾನು ಅಪವಾದದಿಂದ ಬಿಡುಗಡೆಯನ್ನು ಹೊಂದಿದೆನು.

ಶಕುಂ.—(ತನ್ನಲ್ಲಿ ತಾನು) ದೈವಯೋಗದಿಂದ ಆರ್ಯಪುತ್ರನು ನನ್ನನ್ನು ನಿಷ್ಕಾರಣವಾಗಿ ತೊರೆದವನಾಗಲಿಲ್ಲ ; ಆಗ ನನಗೆ ನನ್ನ ಸ್ಮೃತಿಯೇ ಇರಲಿಲ್ಲ. ಅಥವಾ ವಿರಹ ಪರವಶೆಯಾಗಿದ್ದ ನನಗೆ ಶಾಪಬಂದಿರಬಹುದು ಆದ್ದರಿಂದಲೇ ಸಖಿಯರು "ನಿನ್ನ ಪತಿಗೆ ಈ ಉಂಗುರವನ್ನು ತೋರಿಸಬೇಕೆಂದು" ಹೇಳಿದರು.

ಮಾರೀಚನು.— (ಶಕುಂತಳೆಯನ್ನು ನೋಡಿ) ಎಲೆ ವತ್ಸೆ, ಈಗ ನೀನು ಎಲ್ಲಾ ಅರ್ಥವನ್ನು ತಿಳಿದೆ ; ಇನ್ನು ನಿನ್ನ ಪತಿಯಲ್ಲಿ ಕೋಪಗೊಳ್ಳಬೇಡ, ನೋಡು—

ವೃತ್ತ॥ ಶಾಪದೊಳಾದ ಬಲ್ಮರವೆಯಿಂದತಿ ಕರ್ಕಶಚಿತ್ತನಾದನಿಂ ।
ನೋಪನಿನಾಂತೆ ಧಿಕ್ಕೃತಿಯನೀಗ ನೆನೆಪ್ಪೊಂದಿದವಂಗೆ ಪೇರ್ಮೆವೆ।
ತ್ತೊಪಳೆನಿಪ್ಪೆನನ್ನಿಯಿದು ನಂದನೆ ಕೇಳುಕಿಲುಂಬುಪತ್ತಿದಾ । ೧೯೫
ಕೈ ಪಿಡಿಛಾಯೆಯುಂ ಪಿಡಿಗುಮೇಂಪಿಡಿಗುಂ ಪರಿಶುದ್ಧಮಾಗೆತಾಂ ॥

ರಾಜಂ.—ಎಲೈ ಪೂಜ್ಯರೆ, ಈಕೆಯಲ್ಲಿಯಲ್ಲವೆ ನನ್ನ ವಂಶಸ್ಥಿತಿಯು ? (ಎಂದು ಪುತ್ರನ ಕೈಯ್ಯನ್ನು ಹಿಡಿದುಕೊಳ್ಳುವನು)

ಮಾರೀಚನು.—ಹಾಗೇಸರಿ ಈ ಬಾಲಕನು ಮುಂದೆ ಚಕ್ರವರ್ತಿಯಾಗುವನೆಂದು ತಿಳಿ—

ವೃತ್ತ॥ ಅಮರಾಧ್ವಂಬರೆಗಂಚರಿಪ್ಪರಥದಿಂ ದಂಭೋಧಿಯಂದಾಂಟಿ ವಿ ।
ಕ್ರಮದಿಂ ಮುಂತೆಜಯಿಪ್ಪನಪ್ರತಿರಥಂಸರ್ವೋರ್ವಿಯಂಸತ್ವಮಂ ॥
ದಮಿಸಿರ್ದ್ದಂತರಿನಿಲ್ಲಿ ಸರ್ವದಮನಂ ನಿನ್ನೀಕುಮಾರಂ ನೃಪೋ ।
ತ್ತಮ ಭೂರಕ್ಷಣದತ್ತಣಿಂ ಭರತನಾಮಂದಾಳ್ದುತಾಂ ಬಾಳುವಂ ॥ ೧೯೬

ರಾಜಂ.—ಎಲೈ ಪೂಜ್ಯರೆ, ತಮ್ಮಿಂದ ಜಾತಕರ್ಮಾದಿಗಳಿಂದ ಅನುಗ್ರಹಿಸಲ್ಪಟ್ಟ ಈ ಬಾಲಕನಲ್ಲಿ ತಾವು ಅಪ್ಪಣೆ ಕೊಡಿಸಿದ್ದನ್ನೆಲ್ಲಾ ಅಭಿನಂದಿಸುವೆನು.

ದಾಕ್ಷಾಯಣಿ.—ಪೂಜ್ಯರೆ, ಮಗಳ ಮನೋರಥ ಸಂಪತ್ತನ್ನು ಕಣ್ವರಿಗೆ ಪರಿಚಾರಕರ ಮುಖದಿಂದ ತಿಳಿಸಬೇಕು, ಮಗಳಲ್ಲಿ ವಾತ್ಸಲ್ಯವುಳ್ಳ ಮೇನಕೆಯಂತು ಇಲ್ಲಿಯೇ ನನ್ನ ಸೇವೆಯಲ್ಲಿರುವಳು.

ಶಕುಂ.—(ತನಲ್ಲಿ ತಾನು) ಪೂಜ್ಯೆಯಾದ ದಾಕ್ಷಾಯಣಿ ಹೇಳಿದ್ದು ನನ್ನ ಕೋರಿಕೆಯೇ ಅಲ್ಲವೆ ?

ಮಾರೀಚನು.—ಪೂಜ್ಯರಾದ ಕಣ್ವರು ತಪಃಪ್ರಭಾವದಿಂದ ಇದನ್ನೆಲ್ಲಾ ಬಲ್ಲರು.

ರಾಜಂ.—ಆದ್ದರಿಂದಲೇ ಕಣ್ವರು ನನ್ನ ವಿಷಯದಲ್ಲಿ ಅತಿಕೋಪಿಗಳಾಗಲಿಲ್ಲ.

ಮಾರೀಚನು.—ಆದರೂ ಈ ಪ್ರಿಯವಾರ್ತೆಯನ್ನು ನಾವು ತಿಳಿಸಲೇಬೇಕು—ಯಾರಲ್ಲಿ !

(ಶಿಷ್ಯನು ಪ್ರವೇಶಿಸಿ)

ಶಿಷ್ಯನು.—ಪೂಜ್ಯರೆ, ಇದೊ ಸಿದ್ಧನಾಗಿರುವೆನು.

ಮಾರೀಚನು.—ಎಲೈ ಗಾಲವನೆ, ಈಗಲೇಹೋಗಿ ಪುತ್ರವತಿಯಾದ ಶಕುಂತಳೆಯನ್ನು ಶಾಪವಿಮೋಚನೆಯಿಂದ ಸ್ಮರಣೆಯುಂನ್ನು ಹೊಂದಿದ ದುಷ್ಯಂತನು ಪರಿಗ್ರಹಿಸಿದನೆಂದು ನಾವು ಹೇಳಿದೆವೆಂದು ಹೇಳು.

ಶಿಷ್ಯನು.—ಪೂಜ್ಯರ ಆಜ್ಞೆಯಾದಂತಾಗಲಿ (ಎಂದು ಹೊರಟು ಹೋದನು).

ಮಾರೀಚನು.—ಎಲೈ ವತ್ಸನೇ, ನೀನು ಕೂಡ, ಪತ್ನೀಪುತ್ರ ಸಮೇತನಾಗಿ ಮಿತ್ರನಾದ ಇಂದ್ರನ ರಥವನ್ನೇರಿ ನಿನ್ನ ರಾಜಧಾನಿಗೆ ಹೊರಡುವನಾಗು.

ರಾಜಂ.—ಪೂಜ್ಯರ ಆಜ್ಞೆಯಾದಂತಾಗಲಿ.

ಮಾರೀಚನು.—(ರಾಜನನ್ನು ನೋಡಿ)

ವೃತ್ತ॥ ಧರಣೀನಾಥನೆ ನಿನ್ನ ದೇಶಗಳೊಳಿಂದ್ರಂಮಾಳ್ಕೆ ಸದ್ವೃಷ್ಟಿಯಂ
ಸುರರಂ ನೀನುಮುದಾರಯಾಗಮುಖದಿಂ ಸಂತರ್ಪಿಸಿಂತೀನರಾ ॥
ಮರಲೋಕಾವನ ಕೀರ್ತನೀಯಗಳೆನಿಪ್ಪನ್ಯೋನ್ಯ ಕೃತ್ಯಂಗಳಿಂ।
ಮರಳಲ್ ನೂರುಯುಗಂ ದಿನಂಗಳೆದು ನೀವಾನಂದದಿಂ ಬಾಳಿರೈ ॥

ರಾಜಂ.—ಎಲೈ ಪೂಜ್ಯರೆ, ಶ್ರೇಯಸ್ಸಿನ ವಿಷಯದಲ್ಲಿ ನನ್ನ ಶಕ್ತ್ಯನುಸಾರವಾಗಿ ಪ್ರಯತ್ನಿಸುವೆನು.

ಮಾರೀಚನು.—ಎಲೈ ವತ್ಸನೆ, ನಿನಗೆ ಇನ್ನೇನು ಪ್ರಿಯವನ್ನುಂಟುಮಾಡಲಿ.

ರಾಜಂ.—ಇದಕ್ಕಿಂತಲೂ ಅಧಿಕವಾದ ಪ್ರಿಯವು ಮತ್ತೊಂದುಂಟೆ ? ಪೂಜ್ಯರು ಅನುಗ್ರಹಿಸುವದಾದರೆ, ಈ ಭರತವಾಕ್ಯವು ನೆರವೇರಿಸಲ್ಪಡಲಿ.

ಕಂದ॥ ಪ್ರಕೃತಿಹಿತಾರ್ಥಂ ಕ್ಷಿತಿಪಾ ।
ಲಕರುದ್ಯೋಗಿಸುಗೆ ಪೂಜ್ಯಮೆನಿಸುಗೆ ಜಗದೊಳ್ ॥
ಸುಕವಿಗಳ ಸೂಕ್ತಿ ವಿಶ್ವಾ ।
ಧಿಕನಿಹಪರಸುಖವ ನೆಮಗವೀಗೆಮಹೇಶಂ ॥ ೧೯೮

(ಎಂದೆಲ್ಲರೂ ಹೊರಟು ಹೋದರು)

ಕಂದ॥ ನುತಗುಣಯುತ ಚಾಮಕ್ಷಿತಿ ।
ಪತಿಸನ್ನಿಧಿ ಸಚಿವವರನೃಸಿಂಹಾರ್ಯೋತ್ಸಾ ॥
ಹಿತಬಸವ ಶಾಸ್ತ್ರಿ ತಾಂ ಸಂ ।
ಸ್ಕೃತ ಶಾಕುಂತಳಮನಿಂತು ಕನ್ನಡಿಸಿರ್ಪ್ಪಂ ॥ ೧೯೯

ರಾಗ—ಜಲಾಬು. ॥ ಆದಿತಾಳ ॥

ಶ್ರೀಕರಾದ್ರಿತನ । ಯೈಕವಿಹಾರ । ಶ್ರೀಕಂಠೇಶ ಕೃಪಾಕೂಪಾರ ॥ ಪ ॥ ಖಂಡಿತ ಕಾಲಮೃ । ಕಂಡುಜಪಾಲಾ । ಖಂಡಲಬಾಲ । ಕಾಂಡದಲೀಲ ॥ ೧ ॥ ಧೃತಶಶಿಖಂಡ । ಜಿತಸುಮಕಾಂಡ । ವಿತರಣಶೌಂಡ । ಭೃತಜಗದಂಡ ॥ ೨ ॥ ಪಾಲಯುಚಾಮನೃ । ಪಾಲ ಕಮನುಕಂ । ಪಾಲಯುಸದವನ । ಶೀಲಮಹೇಶ ॥ ೩ ॥

ಸಂಪೂರ್ಣಂ.

KARNATAKA

VIKRAMÓRVASÍYA NÁTAKAM.

ಕರ್ನಾಟಕ

ವಿಕ್ರಮೋರ್ವಶೀಯ ನಾಟಕಂ.

ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನ ವಿದ್ವಾಂಸರಾದ
ಸೋಸಲೆ ಅಯ್ಯಾಶಾಸ್ತ್ರಿಗಳಿಂದ ರಚಿಸಲ್ಪಟ್ಟಿದು.

ಮೈಸೂರು:
ಸರಕಾರದ ಬ್ರ್ಯಾಂಚ್ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟಿತು,
೧೮೯೧.

ಪೀಠಿಕೆ.

ಕರ್ಣಾಟಕಭಾಷೆಯನ್ನು ಅಭಿವೃದ್ಧಿಪಡಿಸಬೇಕೆಂಬ ಶ್ರೀಮನ್ಮಹಾರಾಜರವರ ಅಭಿಪ್ರಾಯಾನುಸಾರವಾಗಿ ವಿದ್ಯಾಭಿಮಾನಿಗಳಾದ ದರ್ಬಾರ್ ಬಕ್ಷಿ ರಾಯಬಹದೂರ್ ಮಹಾರಾಜಶ್ರೀ ಎ. ನರಸಿಂಹಯ್ಯಂಗಾರ್ಯರವರಿಂದಲೂ, ಮತ್ತು ರಾಜಬಂಧುಗಳಾದ ಮಹಾರಾಜಶ್ರೀ ಬಕ್ಷೀಹೆಚ್. ಲಿಂಗರಾಜೇಅರಸಿನವರಿಂದಲೂ ಪ್ರೋತ್ಸಾಹಿಸಲ್ಪಟ್ಟು, ಕಾಳಿದಾಸ ಮಹಾಕವಿಯಿಂದ ವಿರಚಿತವಾದ ಸಂಸ್ಕೃತ ವಿಕ್ರಮೋರ್ವಶೀಯ ನಾಟಕವನ್ನು ೩ ಘಂಟೆಯಕಾಲದಲ್ಲಿ ಆಡುವದಕ್ಕೆ ಅನುಕೂಲವಾಗಿಯೂ ನಾಟಕಸಂವಿಧಾನಕೆಡದಂತೆಯೂ ಕೆಲವು ವರ್ಣನಾದಿಭಾಗಗಳನ್ನು ಬಿಟ್ಟು ಗಾನಯೋಗ್ಯವಾದ ಪದಗಳಿಂದ ಕೂಡಿ ಪಂಡಿತ ಪಾಮರ ರಂಜಕವಾಗಿರುವಂತೆ ಕರ್ಣಾಟಕಭಾಷೆಯಲ್ಲಿ ಮೊದಲು ಸಂಕ್ಷೇಪವಾಗಿ ರಚಿಸಿದ್ದೆನು. ಈಗ ಸಂಸ್ಕೃತನಾಟಕದಲ್ಲಿರುವ ಬಂದಂಶವನ್ನೂ ಬಿಡದೆ ಓದುವವರಿಗೂ ನಾಟಕದವರಿಗೂ ಅನುಕೂಲವಾಗಿರುವಂತೆ ರಚಿಸಿರುತ್ತೇನೆ. ಇದನ್ನು ಆಸ್ಥಾನಪಂಡಿತರಾದ ವೇದಮೂರ್ತಿ ಚಾಮರಾಜನಗರದ ರಾಮಶಾಸ್ತ್ರಿಗಳೂ ಮೈಸೂರು ಗೌರ್ನಮೆಂಟ್ ಕನ್ನಡಸ್ಕೂಲ್ ಹೆಡ್‌ಮಾಸ್ಟರ್ ಮಹಾರಾಜಶ್ರೀ ಬಿ. ಮಲ್ಲಪ್ಪನವರೂ ಆಮೂಲಾಗ್ರವಾಗಿ ಶೋಧಿಸಿನೋಡಿ ಸಮ್ಮತಿಸಿರುವದಕ್ಕಾಗಿ ಕೃತಜ್ಞನಾಗಿರುವೆನು. ಇನ್ನೇನಾದರೂ ಪ್ರಮಾದವಿದ್ದಲ್ಲಿ ಗುಣಪಕ್ಷಪಾತಿಗಳಾದ ವಿದ್ವಾಂಸರು ತಿಳಿಸಿದರೆ ಅದನ್ನು ಕೃತಜ್ಞತೆಯಿಂದ ಗ್ರಹಿಸಿ ಎರಡನೆಯ ಮುದ್ರಣದಲ್ಲಿ ಪರಿಷ್ಕರಿಸುತ್ತೇನೆ.

☞ ಓದುವವರು ಕೆಳಗಡೆ ಗೀಟು ಹಾಕಿರುವ ಸಣ್ಣಕ್ಷರದಲ್ಲಿ ಮುದ್ರಿತವಾಗಿರುವ ಪದಗಳನ್ನು ಬಿಟ್ಟು, ಓದಿಕೊಳ್ಳತಕ್ಕದ್ದು. ನಾಟಕದವರು (*) ಮೊದಲಾದ ಗುರುತುಗಳುಳ್ಳ ಪದ್ಯಗಳನ್ನೂ ವಾಕ್ಯಗಳನ್ನೂ ಬಿಟ್ಟು ಅವುಗಳಿಗೆ ಪ್ರತಿಯಾಗಿ ಕೆಳಗಡೆ ಸಣ್ಣಕ್ಷರದ ಅದೇ ಗುರುತಿನ ಪದಗಳನ್ನು ಉಪಯೋಗಿಸಿಕೊಳ್ಳತಕ್ಕದ್ದು.

ಸ್ಕ ೧೮೯೧ನೇ
ಜುಲೈ

ಸೋಸಲೆ ಅಯ್ಯಾಶಾಸ್ತ್ರಿ.

KARNATAKA

VIKRAMORVASIYA NATAKAM.

ಕರ್ಣಾಟಕ

ವಿಕ್ರಮೋರ್ವಶೀಯ ನಾಟಕಂ.

ಪ್ರಥಮಾಂಕಂ.

*ವೃತ್ತ॥ ಪುರುಷನದೊರ್ವನೆಲ್ಲಮುಮನಾವರಿಸಿರ್ದಪನೆಂದಪರ್ತ್ರಯೀ ।
ಶಿರದೊಳಭಿಜ್ಞರಾವನ ನನನ್ಯಗ ಮೀಶ್ವರಶಬ್ದ ಮರ್ಥವ ॥
ತ್ತರಮೆನಿಸಿರ್ಪ್ಪದಾವನೊಳೆ ಮೋಕ್ಷಕೆ ಮಾರ್ಗಿಪರಾವನಂಹೃದಂ ।
ತರದೆ ಯಮೀಂದ್ರರಾಶಿವನೊಡರ್ಚ್ಚುಗೆ ಭಕ್ತಿವಶಂಮುದಿಷ್ಟಮಂ ॥

ಸೂತ್ರಧಾರಂ.—(ತೆರೆಯುಕಡೆ ನೋಡಿ) ಎಲೈ ಪಾರಿಪಾರ್ಶ್ವಕನೆ ಇತ್ತಬಾ.

ಪಾರಿಪಾರ್ಶ್ವಕಂ.—(ಪ್ರವೇಶಿಸಿ) ಆರ್ಯನೆ ಇದೊ ಬಂದೆನು.

---

*ವೃತ್ತ॥ ಶ್ರೀಮಚ್ಚಂದ್ರಕಲಾವತಂಸಿತ ಜಟಾಖೇಲನ್ನಿಲಿಂಪಾಪಗಂ ।
ಭೂಮಿ ವ್ಯೋಮ ದಿಗಂತರ ಪ್ರಸೃಮರಂ ಗೌರೀಸಮಾಲಿಂಗಿತಂ ॥
ಸೀಮಾತೀತ ನಿಜಪ್ರಭಾವ ಮಖಿಲ ಶ್ರೇಯೋನಿದಾನಂ ಕೃಪಾ ।
ಧಾಮಂ ಧಾಮಮದೊಂದು ಪಾಲಿಕೆಕರಂ ಶ್ರೀಚಾಮರಾಜೇಂದ್ರನಾ ॥

॥ ರಾಗ — ಖರಹರಪ್ರಿಯ ॥ ॥ ರೂಪಕತಾಳ ॥

ಶ್ರೀಲಲಿತೆ ಪಾಲಯಮಾಂ । ಶೈಲರಾಜಜಾತೆ ॥ ಪ ॥ ತ್ರೈಲೋಕ್ಯಾವನಪಂಡಿತೆ । ನಾಳೀಕಭವಾರ್ಚಿತೆ ॥ ಅ ॥ ರಾಜರಾಜೇಶ್ವರಿ ಗೌರಿ । ರಾಜಮೌಳಿ ಸುಂದರಿ ॥ ಶ್ರೀಜನಾರ್ದನ ಸೋದರಿ ! ಶ್ರಿತಕಲ್ಪಕ ವಲ್ಲರಿ ॥ ೧ ॥ ಪರಮ ಪಾವನಾತ್ಮಚರಿತೆ । ವರಮುನೀಂದ್ರ ಲೋಕಗೀತೆ ॥ ತರುಣೇಂದು ಕಲಾಂಕಿತೆ । ಕರುಣಾರಸ ಪೂರಿತೆ ॥ ೨ ॥ ಶ್ಯಾಮಳೇ ಕೃಪಾಲವಾಲೆ । ಕಾಮಪೀಠ ವಾಸಲೋಲೆ ॥ ಚಾಮುಂಡೇಶ್ವರಿ ಮಂಗಳೆ । ಚಾಮರಾಜ ಪಾಲೆ ॥ ೩ ॥

ಸೂ.—ಪಾರಿಪಾರ್ಶ್ವಕನೆ ಈ ಸಭಾಜನರು ಪೂರ್ವ ಕವಿಗಳ ರಸವತ್ತಾದ ನಾಟಕಗಳನ್ನು ನೋಡಿರುವರು. ಈಗಲಾ ಕಾಳಿದಾಸ ಮಹಾಕವಿ ರಚಿತವಾದ ವಿಕ್ರಮೋರ್ವಶೀಯಮೆಂಬ ನಾಟಕವು ಕರ್ಣಾಟಕ ಭಾಷೆಯಲ್ಲಿ ಶ್ರೀಮತ್ಕರ್ಣಾಟಾಧೀಶ್ವರ ಚಾಮರಾಜೇಂದ್ರ ಒಡೆಯರವರ ಆಸ್ಥಾನವಿದ್ವಾಂಸನಾದ ಸೋಸಲೇ ಅಯ್ಯಾಶಾಸ್ತ್ರಿಯಿಂದ ರಚಿಸಲ್ಪಟ್ಟಿರುವದು. ಆ ನಾಟಕವನ್ನಾಡಿ ಇವರನ್ನು ಸಂತೋಷಪಡಿಸುತ್ತೇನೆ. ಆದ್ದರಿಂದ ನಮ್ಮ ಪಾತ್ರವರ್ಗವನ್ನು ಎಚ್ಚರಗೊಳಿಸು.

ಪಾ.—ಆರ್ಯನ ಅಪ್ಪಣೆ ಯಾದಂತಾಗಲಿ. (ಎಂದು ಹೊರಟು ಹೋದನು).

ಸೂ.—ಈ ಸಭಾಸದರಿಗೆ ನಾನು ವಿಜ್ಞಾಪಿಸಿಕೊಳ್ಳುವೆನು.

ಕಂದ ॥ ಕಿವಿಗುಡುವುದು ಸಖರೊಳಗಿ ।
ರ್ಪವಿರಳ ದಾಕ್ಷಿಣ್ಯದಿಂದೆ ಮೇಣ್ ಸತ್ಕಥೆಯೊಳ್ ॥
ತವೆಕುತುಕದಿನಯ್ಯಾ ಸುಧೀ ।
ಕವಿ ಕನ್ನಡಿಸಿರ್ಪ ಕಾಳಿದಾಸನ ಕೃತಿಯೊಳ್ ॥ ೧

ತೆರೆಯಲ್ಲಿ.—ಅಯ್ಯೋ! ನಮ್ಮನ್ನು ರಕ್ಷಿಸಿರಕ್ಷಿಸಿ!

ಸೂ.—(ಕೇಳಿ) ಇದೇನು! ಯಾರೋ ವಿಮಾನಚಾರಿಗಳು ದೈನ್ಯದಿಂದ ಮೊರೆಯಿಡುವಂತಿದೆ (ಯೋಚಿಸಿ) ಓಹೊ! ತಿಳಿಯಿತುತಿಳಿಯಿತು—

ಕಂ ॥ ಧನಪತಿಯಂ ಸೇವಿಸಿ ನ ।
ರ್ತನದಿಂದಂ ಮಗುಳ್ದು ಬರುತ ಮಿದರ್ಪೂರ್ವಶಿಯಂ ॥
ದನುಜರ್ ಸೆರೆವಿಡಿಯೆ ಸುರಾಂ ।
ಗನೆಯರಿವರ್ ದೀನರವದೆ ಮೊರೆಯಿಡುತಿರ್ಪರ್ ॥ ೨

(ಎಂದು ಹೊರಟು ಹೋದನು).

ಇಂತಿದು ಪ್ರಸ್ತಾವನೆ.

———

(ಆಬಳಿಕ ಅಪ್ಸರಸ್ತ್ರೀಯರು ಪ್ರವೇಶಿಸುವರು).

ಅಪ್ಸ.—ಅಯ್ಯೋ! ದೇವತೆಗಳಲ್ಲಿ ಪಕ್ಷಪಾತವೂ ಗಗನದಲ್ಲಿ ಸಂಚಾರ ಶಕ್ತಿಯೂ ಇರತಕ್ಕವರು ನಮ್ಮನ್ನು ರಕ್ಷಿಸಿರಕ್ಷಿಸಿ.

(ಮಹಾರಾಜನಾದ ಪುರೂರವನು ಸಾರಥಿಯೊಡನೆ ರಥವನ್ನೇರಿ ಪ್ರವೇಶಿಸುವನು).

ರಾಜಂ.—ಅಳಬೇಡಿ ಅಳಬೇಡಿ; ಇದೊ ನಾನು ಸೂರ್‍ಯೋಪಾಸನೆಯನ್ನು ನೆರವೇರಿಸಿಕೊಂಡು ಬಂದಿರುವೆನು. ನಾನು ಪುರೂರವನು. ಯಾತಕ್ಕೆ ಮೊರೆಯಿಡುತ್ತೀರಿ ಹೇಳಿ ಹೇಳಿ.

ರಂಭೆ.—ಆರ್‍ಯನೆ ದೈತ್ಯಬಾಧೆಯಿಂದ ಮೊರೆಯಿಟ್ಟೆವು.

ರಾಜಂ.—ನಿಮ್ಮ ವಿಷಯದಲ್ಲಿ ಯಾವ ದೈತ್ಯನು ಏನಪರಾಧವನ್ನು ಮಾಡಿರುವನು?

ಮೇನಕೆ.—ಮಹಾರಾಜನೆ ತಪೋವಿಶೇಷದಿಂದ ಭೀತನಾದ ಇಂದ್ರನಿಗೆ ತಪಸ್ವಿಗಳನ್ನು ಜಯಿಸುವ ವಿಷಯದಲ್ಲಿ ಸುಕುಮಾರಾಸ್ತ್ರದಂತೆಯೂ ಸ್ವರ್ಗಕ್ಕೆ ಅಲಂಕಾರ ಪ್ರಾಯಳಾಗಿಯೂ ಸೌಂದರ್‍ಯದಿಂದ ಲಕ್ಷ್ಮಿಯನ್ನೂ ತಿರಸ್ಕರಿಸತಕ್ಕವಳಾಗಿಯೂ ಇರುವ ನಮ್ಮ ಪ್ರಿಯಸಖಿಯಾದ ಊರ್ವಶಿಯು ಕುಬೇರ ಭವನದಿಂದ ಬರುತ್ತಿದ್ದಳು. ಆ ಸಮಯದಲ್ಲಿ ಹಿರಣ್ಯಪುರವಾಸಿಯಾದ ಕೇಶಿಯೆಂಬ ದೈತ್ಯನು ಕಂಡು ಆಕೆಯನ್ನೂ ಸಖಿಯಾದ ಚಿತ್ರಲೇಖೆಯನ್ನೂ ಹಿಡಿದುಕೊಂಡು ಹೋದನು.

ರಾಜಂ.—ಆ ದೈತ್ಯನು ಹೋದಮಾರ್ಗ ನಿಮಗೆ ಗೊತ್ತಿರುವದೆ?

ಸಹಜನ್ಯೆ.—ಈಶಾನ ದಿಕ್ಕಿಗೆ ಹೋದನು.

ರಾಜಂ.—ಹಾಗಾದರೆ ನಿಮ್ಮ ದುಃಖವನ್ನು ಬಿಡಿ ಈಗಲೇ ನಿಮ್ಮ ಸಖಿಯನ್ನು ಬಿಡಿಸಿಕೊಂಡು ಬರುವದಕ್ಕೆ ಯತ್ನಿಸುವೆನು.

ಅಪ್ಸ.—ಚಂದ್ರನಿಗೆ ಮೊಮ್ಮಗನಾದ ನಿನಗೆ ಇದು ಯೋಗ್ಯವು.

ರಾಜಂ.—ನನ್ನನ್ನು ನೀವೆಲ್ಲಿ ಕಾದಿರುತ್ತೀರಿ?

ಅಪ್ಸ —ಈ ಹೇಮಕೂಟ ಪರ್ವತದಲ್ಲಿ.

ರಾಜಂ.—ಎಲೈ ಸೂತನೆ ಈಶಾನದಿಕ್ಕಿಗೆ ವೇಗದಿಂದ ರಥವನ್ನು ನಡಸು ಬೇಗ ಹೋಗಬೇಕು.

ಸೂತಂ.—ಆಯುಷ್ಮಂತನ ಅಪ್ಪಣೆಯಾದಂತೆ (ಎಂದು ರಥವನ್ನು ನಡಸುವನು).

ರಾಜಂ.—(ರಥವೇಗವನ್ನು ನೋಡಿ) ಭಾಪುಭಾಪು! ಈ ರಥವೇಗದಿಂದ ನಾನು ನನಗಿಂತಲೂ ಮುಂಚೆ ಹೊರಟ ಗರುಡನನ್ನಾದರೂ ಹಿಡಿಯಬಲ್ಲೆನು. ಇಂದ್ರನಿಗೆ ಪರಮ ದ್ರೋಹಿಯಾದ ಆ ದೈತ್ಯನನ್ನು ಹಿಡಿಯುವದೊಂದಸಾಧ್ಯವೆ? ಆಹ!

ವೃ ॥ ಪರಿವುವು ಧೂಳಿಯಂತೆ ಮುಗಿಲಗ್ರದೆ ಚೂರ್ಣಿತವಾಗಿ ಚಿತ್ರದೊಳ್।
ಬರೆದವೊಲಾಡದಿರ್ಪ್ಪುದು ತುರಂಗಶಿರಸ್ಥಮುದಗ್ರಚಾಮರಂ ॥
ತಿರುಗುವ ಗಾಲಿಪ್ರಟ್ಟಿಕುಮರಾಂತರದೊಳ್ ಪೆರತೊಂದರಾಳಿಯಂ।
ನಿರುಕಿಸೆ ನಿಂದುದೀರಥದ ವೇಗದೆ ನೆಟ್ಟನೆ ಕೇತನಾಂಬರಂ ॥ ೪

(ಎಂದು ಸೂತನೊಡನೆ ಹೊರಟು ಹೋದನು).

ರಂಭೆ.—ಇನ್ನು ನಾವು ಗೊತ್ತುಮಾಡಿರುವ ಸ್ಥಳಕ್ಕೆ ಹೋಗೋಣ ನಡೆಯಿರಿ.

ಉಳಿದವರು.—ಒಳ್ಳೇದು (ಎಂದು ಎಲ್ಲರೂ ಪರ್ವತಾರೋಹಣವನ್ನು ನಟಿಸುವರು).

ರಂಭೆ.—ಎಲೌ ಸಖಿಯರೆ ಆ ರಾಜರ್ಷಿಯು ನಮ್ಮ ಮನೋವ್ಯಥೆಯನ್ನು ಹೋಗಲಾಡಿಸಬಲ್ಲನೆ?

ಮೇನಕೆ.—ನೀನು ಸಂಶಯಪಡಬೇಡ. ಇಂದ್ರನೂಕೂಡ ತನಗೆ ಶತ್ರುಬಾಧೆಯುಂಟಾದಾಗ ಭೂಲೋಕದಲ್ಲಿ ಅನೇಕ ರಾಜರಿದ್ದಾಗ್ಯೂ ಈ ಮಹಾರಾಜನನ್ನೇ ಕರೆಯಿಸಿ ಬಹುಮಾನದಿಂದ ತನ್ನ ಸೇನೆಗೆ ಅಧಿಪತಿಯನ್ನಾಗಿ ಮಾಡುವನು.

ರಂಭೆ.—ಹಾಗೆಯೇ ಆ ಮಹಾರಾಜನು ಈ ವಿಷಯದಲ್ಲೂ ಜಯಶೀಲನಾಗಲಿ.

ಸಹ.—(ಹಾಗೆಯೇ ಕ್ಷಣಕಾಲ ನಿಂತುನೋಡಿ) ಎಲೌ ಸಖಿಯರೆ ನಿಮ್ಮ ವ್ಯಸನವನ್ನು ಬಿಡಿ. ಹರಿಣಾಂಕಧ್ವಜದಿಂದೊಪ್ಪುತ್ತಿರುವ ಚಂದ್ರಪ್ರಸಾದದಿಂದ ಪ್ರಾಪ್ತವಾದ ಆ ಮಹಾರಾಜನರಥವು ಇದೋ ಕಾಣಿಸುತ್ತಿರುವದು. ಆತನೆಂದಿಗೂ ಜಯಶಾಲಿಯಾಗದೆ ಹಿಂ[illegible]ರುಗಿ ಬರತಕ್ಕವನಲ್ಲ.

(ಎಲ್ಲರೂ ಕತ್ತೆತ್ತಿ ನೋಡುತ್ತಿರಲು, ರಥಾರೂಢನಾಗಿ ರಾಜನೂ ಸೂತನೂ ಚಿತ್ರಲೇಖೆಯನ್ನೊರಗಿಕೊಂಡು ಭಯದಿಂದ ಕಣ್ಣುಮುಚ್ಚಿಕೊಂಡಿರುವ ಊರ್ವಶಿಯೂ ಸಹ ಪ್ರವೇಶಿಸುವರು).

ಚಿತ್ರ.—ಎಲೆ ಸಖಿ ಸಂತೈಸಿಕೊ ಸಂತೈಸಿಕೊ.

ರಾಜಂ.—*ಕಂ ॥ ಎಲೆ ಭೀರುವೆ ಮೂಜಗಮಂ ।
ಸಲಹುವ ಸುರಪತಿಯ ಮೈಮೆಯಿಂದಸುರಭಯಂ ॥
ತೊಲಗಿದುದಿನ್ನುಷದೆ ಮಹೊ ।
ತ್ಪಲಮಂ ಬಿಡುವಂತೆ ಬಿಸಿನಿ ಕಣ್ಣಂ ಬಿಡುನೀಂ ॥ ೫೯

ಚಿತ್ರ.—ಅಯ್ಯೋ ! ಉಸುರಾಡುವದರಿಂದ ಮಾತ್ರ ಬದುಕಿರುವಂತೆ ಕಾಣುವಳು. ಇನ್ನೂ ಮೂರ್ಛೆ ತಿಳಿಯಲಿಲ್ಲ.

ರಾಜಂ.—ಈಕೆ ಬಹಳವಾಗಿ ಭಯಪಟ್ಟಿರಬಹುದು. ಯಾತಕ್ಕೆಂದರೆ—

ಕಂ॥ ಈ ರಮಣಿಯೆದೆಯೊಳೊಪ್ಪುವ ।
ಸೌರಭಯುತಮಾದ ಕಲ್ಪಸುಮಮಾಲಿಕರಂ ॥
ಪಾರುತೆ ಸೂಚಿಸುಗುಂ ಸುರ ।
ವೈರಿಗಳಿಂದೊಗೆದ ಹೃದಯಭಯಕಂಪನಮಂ॥ ೬

---

*॥ ರಾಗ—ಮುಖಾರಿ ॥ ॥ ಆದಿತಾಳ ॥

ಏತಕಿಂತು ಮೂರ್ಛೆಯಾಂತೆ । ಭೀತಿಯೇನು ಕಾಂತೆ ॥ ಮಾತನಾಡು ಸುಂದರಿ । ಪ್ರೀತಿಯನ್ನು ತೋರಿ ॥ ೧॥ ಆ ಶಚೀಶಮೈಮೆಯಿಂದ । ಕೇಶಿನಿಮಿಷದಿಂದ ॥ ನಾಶವಾಗಿ ಪೋದನು । ಕ್ಲೇಶಪಡುವದೇನು ॥ ೨ ॥ ತಾವರೆಯ ಬಳ್ಳಿಯುಷದಿ । ಪೂವಬಿಡುವ ಚಂದದಿ ॥ ಈ ವಿಶಾಲನೇತ್ರವನ್ನು । ಭಾವಕೀಬಿಡಿನ್ನು ॥ ೩ ॥

ಚಿತ್ರ.—ಎಲೆ ಸಖಿ ಮನಸ್ಸನ್ನು ಸಮಾಧಾನಪಡಿಸು. ನನ್ನ ಮನಸ್ಸಿಗೆ ನೀನು ಅಪ್ಸರಸ್ತ್ರೀಯಂತೆ ಕಾಣಿಸುವದಿಲ್ಲ.

ರಾಜಂ.—ಕಂ ॥ ಸುಮುಕೋಮಲಮೆನಿಸಿಪ್ಪೀ ।
ರಮಣಿಯ ಹೃದಯಂ ಭಯಪ್ರಕಂಪಮನುಳಿದಿ ॥
ಲ್ಲ ಮೆನುತ್ತಂ ಸೂಚಿಸುವಂ ।
ತಮಮಾ ಸೀರೆಯ ಸೆರಂಗು ಪೊಡರ್ದಪುದಿನ್ನುಂ ॥ ೭

(ಊರ್ವಶಿಗೆ ಸ್ವಲ್ಪಸ್ವಲ್ಪ ಮೂರ್ಛೆ ತಿಳಿಯುತ್ತಾ ಬರುವದು.)

ರಾಜಂ.—ಚಿತ್ರಲೇಖೆ ಇದೊ ನೋಡು ನಿನ್ನ ಸಖಿಗೆ ಮೂರ್ಛೆ ತಿಳಿಯುತ್ತಾ ಬರುವದು.

*ವೃ॥ ಬಗೆಯೆ ಸುಧಾಮರೀಚಿತಮಮಂ ಬಿಡುತಿಪ್ಪಿರುಳಂದದಿಂದೆ ಕ ।
ಬ್ಬೊಗೆಗಳೆಯುತ್ತಮಿರ್ದಪ ನಿಶಾಗ್ನಿಯ ಪೇರುರಿಯಂದದಿಂತಟಂ
ಜಗುಳೆ ನಿತಾಂತಕಲ್ಮಷತೆಯಾಂತ ಮಲತ್ವಮನಾಂಪ ಗಂಗೆವೊಲ್ ।
ಮೃಗಶಿಶುನೇತ್ರೆ ತಾಂ ಕಳೆದಪಳ್ ತರದಿಂತಳೆದಿರ್ದ ಮೂರ್ಛೆಯಂ॥

ಚಿತ್ರ.—ಎಲೆ ಸಖಿ ಇನ್ನು ಭಯವನ್ನು ಬಿಡು ದುರಾಶೆಪಡುತ್ತಿದ್ದ ದೇವಶತ್ರುಗಳೆಲ್ಲಾ ಹತರಾದರು.

ಊರ್ವ.—(ಕಣ್ಣುಬಿಟ್ಟು ನೋಡಿ) ಎಲೆ ಚಿತ್ರಲೇಖೆ ನಮ್ಮನ್ನು ಬಿಡಿಸಿ ಕರೆದುಕೊಂಡು ಬಂದವನು ದಿವ್ಯದೃಷ್ಟಿಯುಳ್ಳ ದೇವೇಂದ್ರನೊ ?

ಚಿತ್ರ.—ದೇವೇಂದ್ರನಲ್ಲ, ದೇವೇಂದ್ರ ಸದೃಶನಾದ ಈ ರಾಜೇಂದ್ರ ಪುರೂರವನು.

---

*॥ ರಾಗ—ಹಿಂದುಸ್ಥಾನೀಕಾಪಿ । ॥ ಆದಿತಾಳ ॥

ತೋರುವಳೀಸುಂದರಿ ॥ ಪ ॥ ಮೀರಿದಮೂರ್ಛೆಯಕಳೆಯುತಲಿದೊ ॥ ಅ ॥ ಹಿಮಕರನುದಯಿಸೆ । ತಿಮಿರಾವರಣವ ॥ ಕ್ರಮದಿಂ ಬಿಡುತಿಹ ರಾತ್ರಿಯವೋಲ್ ॥ ೧ ॥ ಇರುಳೊಳುಭೂಯ । ಸ್ತರವಹಪೊಗೆಯನು ॥ ತೊರೆದಿರುವಗ್ನಿಯ ಶಿಖೆಯಂದದಿ ॥ ೨ ॥ ದಡಕುಸಿಯುತೆ ಬಿ । ದ್ದೊಡೆಕಲುಷತೆಯಾಂ ॥ ತೊಡನೆಯೆತಿಳಿಯುವಗಂಗೆಯವೋಲ್ ॥ ೩ ॥

ಊರ್ವ.—(ರಾಯನನ್ನು ನೋಡಿ ತನ್ನಲ್ಲಿತಾನು) ಆ ದೈತ್ಯನು ನನಗೆ ಮಾಡಿದ ಅಪಕಾರವೂ ಉಪಕಾರವಾಯಿತಲ್ಲವೆ?

ರಾಜಂ.—(ಊರ್ವಶಿಯನ್ನು ನೋಡಿ ತನ್ನಲ್ಲಿತಾನು) ಪೂರ್ವದಲ್ಲಿ ನಾರಾಯಣ ಮಹರ್ಷಿಯನ್ನು ಮೋಹಪಡಿಸುವದಕ್ಕೋಸ್ಕರ ಬಂದ ಅಪ್ಸರಸ್ಸ್ತ್ರೀಯರೆಲ್ಲರೂ ಈಕೆಯನ್ನು ನೋಡಿ ಲಜ್ಜಿತರಾದದ್ದು ಯುಕ್ತ; ಅಥವಾ ಈಕೆಯನ್ನು ನೋಡಿದರೆ ಋಷಿಯಿಂದ ಹುಟ್ಟಿದಂತೆ ಕಾಣುವದಿಲ್ಲ; ಯಾತಕ್ಕೆಂದರೆ—

ವೃ॥ ತಾರಗೆ ಯಾಣ್ಮನೀ ರಮಣಿಯಂ ನೆಗಳ್ದಿರ್ಕ್ಕು ಮುದಾರಕಾಂತಿಯಿಂ।
ದಾರಚಿಸಿರ್ಕ್ಕು ಮಲ್ಲದೊಡೆ ಚೈತ್ರನುದಗ್ರಸುಮಂಗಳಿಂದೆ ಶೃಂ॥
ಗಾರದೆ ಮೇಣ್ಮನೋಜನೆಸಗಿರ್ಕ್ಕುಗು ಮಲ್ಲದೆ ವೃದ್ಧತಾಪಸಂ।
ಕಾರಣನೆಂತೊ ವೇದಜಡನೀ ಸೊಬಗಂಸೃಜಿಸಲ್ಕೆ ನಿಸ್ಸ್ಪೃಹಂ॥ ೯

ಊರ್ವ.—ಚಿತ್ರಲೇಖೆ ನಮ್ಮ ಸಖೀಜನವೆಲ್ಲಿರುವದು?

ಚಿತ್ರ.—ಅದನ್ನು ಅಭಯಪ್ರದಾನಮಾಡಿದ ಮಹಾರಾಜನೇ ಬಲ್ಲನು.

ರಾಜಂ.—(ಊರ್ವಶಿಯನ್ನು ನೋಡಿ) ಆ ನಿನ್ನ ಸಖೀಜನವು ಅತ್ಯಂತದುಃಖದಲ್ಲಿರುವದು. ನೀನೇನೋಡು.

ಕಂ॥ ಮುನ್ನೊಮ್ಮೆ ರ್ಕಂಡಜನಮುಂ।
ನಿನ್ನಂ ಕ್ಷಣಕಾಲಮಾದೊಡಂ ಕಾಣದಿರಲ್॥
ಕೆನ್ನಂ ಕಳವಳಿಪುದೆನಲ್।
ನಿನ್ನೊಡನಾಡಿಗಳದೆಂತು ನಿನ್ನುಳಿದಿರ್ಕ್ಕುಂ॥ ೧೦

ಊರ್ವ.—(ಚಿತ್ರಲೇಖೆಯನ್ನು ನೋಡಿ) ಈತನಮಾತು ಶ್ಲಾಘ್ಯವಾದದ್ದು. ಚಂದ್ರನಿಂದ ಅಮೃತ ಹೊರಡುವದೇನಾಶ್ಚರ್ಯವೆ? (ಪ್ರಕಾಶವಾಗಿ) ಆದ್ದರಿಂದಲೇ ಅವರನ್ನು ನೋಡುವದಕ್ಕೆ ನನ್ನ ಮನಸ್ಸು ತ್ವರೆಪಡುತ್ತಿರುವದು.

ರಾಜಂ.—(ಕಯ್ಯಿಂದ ತೋರಿಸಿ) ಎಲೆ ಲತಾಂಗಿ—

*ಕಂ ॥ ರಾಹುವಿಮುಕ್ತ ಶರದ್ರಾ ।
ಕಾ ಹಿಮಕರನಂತೆ ತೋರ್ಪ್ಪ ನಿನ್ನಯ ಮೊಗಮಂ ॥
ಈ ಹೇಮಕೂಟಗಿರಿಯೊಳ್ ।
ನೇಹಂ ಮಿಗೆ ನೋಡುತಿರ್ಪ್ಪರಿದೊ ತವಸಖಿಯರ್ ॥ ೧೧

ಊರ್ವ.—(ರಾಜನನ್ನು ಅನುರಾಗದಿಂದ ನೋಡುವಳು).

ಚಿತ್ರ.—ಎಲೆ ಸಖಿ ನೀನು ನೋಡಲಿಲ್ಲವೆ ?

ಊರ್ವ.—ಯಾತಕ್ಕೆ ನೋಡದೆ ಇರುವೆನು ! ಸಮಾನವಾದ ಸುಖದುಃಖವುಳ್ಳ ಇಷ್ಟಜನವನ್ನು ನೋಡುತ್ತಲೇ ಇರುವೆನು.

ಚಿತ್ರ.—(ನಸುನಗುತ) ಯಾರನ್ನು ಹೇಳುಹೇಳು.

ಊರ್ವ.—ಸಖೀಜನವನ್ನು.

ರಂಭೆ.—(ನೋಡಿ ಸಂತೋಷದಿಂದ) ಎಲೌ ಸಖಿಯರೆ, ಇದೊ ನೋಡಿ ನೋಡಿ, ಆ ಮಹಾರಾಜನು ಚಿತ್ರಲೇಖೆಯೊಡನೆ ನಮ್ಮ ಪ್ರಿಯಸಖಿಯಾದ ಊರ್ವಶಿಯನ್ನು ಕರೆದುಕೊಂಡು ವಿಶಾಖಾನಕ್ಷತ್ರದಬಳಿ ಸೇರಿದ ಚಂದ್ರನಂತೆ ಪ್ರಕಾಶಿಸುತ್ತಿರುವನು.

ಮೇನಕೆ.—(ಹಾಗೆಯೇ ನೋಡಿ) ಈ ರಾಯನು ನಮ್ಮ ಪ್ರಿಯಸಖಿಯನ್ನು ಬಿಡಿಸಿ ತಂದದ್ದೂ ತಾನೂ ನೋಯದೆ ಬಂದದ್ದೂ ಇವೆರಡೂ ನಮಗೆ ಬಹಳ ಪ್ರಿಯವಾದದ್ದು.

ರಾಜಂ.—ಎಲೈ ಸೂತನೆ ಹೇಮಕೂಟಪರ್ವತದ ಸಮೀಪಕ್ಕೆ ಬಂದೆವು. ಮೆಲ್ಲನೆ ರಥವನ್ನು ಇಳಿಸು.

---

*॥ ರಾಗ—ಕನ್ನಡ ॥ ॥ ಆದಿತಾಳ ॥

ಸಖಿಯರ ನೋಡೆಲೆ ಸುಂದರೀ । ನಿನ್ನಾ ॥ ಪ ॥ ಪರಿಪರಿಯಿಂದಲಿ । ಮಾಗುತನಮ್ಮಯ ॥ ಬರುವಿಕೆಯನೆ ಹಾರೈಸುವಾ ॥ ೧ ॥ ತರುಣಿಯೆ ರಾಹುಬಿ । ಟ್ಟಿರುವ ಚಂದಿರನಂತೆ ॥ ಮೆರೆವ ನಿನ್ನಾಸ್ಯವ ನೀಕ್ಷಿಪಾ ॥ ೨ ॥ ಈಗಿರಿಶೃಂಗದಿ । ಭಾಗದೆ ಬಲುಸೊಗಸಾಗೊಗೆದ ಲತೆಗಳಂತಿಹಾ ॥ ೩ ॥

ಸೂತಂ.—ಆಯುಷ್ಮಂತನ ಅಪ್ಪಣೆಯಾದಂತೆ. (ಎಂದುರಥವನ್ನು ಇಳಿಸುವನು)

ರಾಜಂ.—(ಚಕ್ರದುಡುಗಿದ್ದನ್ನು ನೋಡಿ)

ಕಂ ॥ ಮನಸಿಜನಿಂದಮೆಪುಟ್ಟಿದ ।
ಘನ ರೋಮಾಂಚಪ್ರಪಂಚದಿಂ ಕರಮಳ್ದಿರ್ದೀ ॥
ವನಿತಾಮಣಿಯಭುಜಾಶಿರ ।
ಮೆನತ್ತು ಭುಜಶಿಖರದೊಳ್ ಪಳಂಚಿದುದಹಹಾ ॥ ೧೦

ಊರ್ವ.—ಎಲೆ ಸಖಿ ಸ್ವಲ್ಪ ಅತ್ತಸರಿ.

ಚಿತ್ರ.—ಇಲ್ಲಿ ಅವಕಾಶವಿಲ್ಲವಲ್ಲಾ !

ರಂಭೆ.—ಎಲೌ ಸಖಿಯರೆ, ನಮ್ಮ ಸಖಿಯನ್ನು ಬಿಡಿಸಿಕೊಂಡು ಬಂದ ಈ ರಾಜರ್ಷಿಯನ್ನು ಮರ್ಯಾದೆಯಿಂದ ಕಾಣೋಣ ಬನ್ನಿ ಬನ್ನಿ.

ಎಲ್ಲರೂ.—ಬಳ್ಳೇದು ಹಾಗಾಗಲಿ (ಎಂದು ಸಮೀಪಕ್ಕೆ ಬರುವರು.)

ರಾಜಂ.—ಕಂ ॥ ತಡೆರಥಮಂಸೂತನೆ ಸಂ ।
ಗಡಿಸುವವೋಲ್ ಚೈತ್ರಲಕ್ಷ್ಮಿವಲ್ಲಿಗಳಂತಾ ॥
ನೊಡಗೂಡುವನ್ನೆವರಮೀ ।
ಮಡದಿಕಡಂಗಿರ್ಪ್ಪ ತನ್ನ ಕೆಳದಿಯರಿಂದಂ ॥ ೧೩

ಸೂತಂ.—ಅಪ್ಪಣೆ. (ಎಂದು ರಥವನ್ನು ನಿಲ್ಲಿಸುವನು).

ಅಪ್ಸ.—ಎಲೈ ಮಹಾರಾಜನೆ ದೈವಯೋಗದಿಂದ ಜಯವನ್ನುಹೊಂದಿ ವರ್ಧಿಸುವೆಯ ?

ರಾಜಂ.—ನಿಮ್ಮ ಸಖಿಯ ಸಮಾಗಮದಿಂದ ನಿಮಗೂ ಅಭ್ಯುದಯವೆ ?

ಊರ್ವ.—(ಚಿತ್ರಲೇಖೆಯ ಹಸ್ತಾವಲಂಬನದಿಂದಿಳಿದು) ಎಲೌ ಸಖಿಯರೆ ನೀವೆಲ್ಲರೂ ನನ್ನನ್ನು ದೃಢವಾಗಿ ಬಂದೇಕಾಲದಲ್ಲಿ ಆಲಿಂಗಿಸಿ. ನನಗೆ ಪುನಃ ನಿಮ್ಮನ್ನು ನೋಡುತ್ತೇನೆಂಬ ಪ್ರತ್ಯಾಶೆ ಇರಲಿಲ್ಲ.

(ಸಖಿಯರು ಆಲಿಂಗಿಸುವರು).

*ಮೇನಕೆ.—ಈ ಮಹಾರಾಜನು ಬಹುಕಾಲ ಭೂಮಿಯನ್ನು ಪಾಲಿಸಲಿ.

ಸೂತಂ.—ಮಹಾರಾಜನೆ ಪೂರ್ವದಿಕ್ಕಿನಿಂದ ಯಾವದೋ ಬಂದು ರಥವು ಬರುವಂತೆ ಕಾಣುತ್ತೆ ; ಇದೋ ನೋಡು—

†ಕಂ ॥ ತಳೆದುಭುಜದಲ್ಲಿಮಿಸುನಿಯ ।
ತೊಳತೊಳಗುವಬಾಹುಪೂರವಂಪದಪಿಂದಂ ॥
ಸೆಳೆಮಿಂಚುವೆರೆದಮುಗಿಲಂ ।
ತಿಳದೀ ಶೈಲಾಗ್ರದಿಂದೆ ಬರ್ಪ್ಪನದೊರ್ವ್ವಂ ॥ ೧೪

ಅಪ್ಸ.—(ನೋಡಿ) ಓಹೊ ! ಇದೇನು ಚಿತ್ರರಥ ಬಂದ !

ಚಿತ್ರರಥಂ.—(ಪ್ರವೇಶಿಸಿ ರಾಜನಿದಿರಾಗಿನಿಂತು) ಎಲೈ ಮಹೇಂದ್ರನಿಗೂ ಉಪಕಾರಮಾಡತಕ್ಕ ಸಾಮರ್ಥ್ಯವುಳ್ಳ ಪುರೂರವನೆ ನಿನಗೆ ಕುಶಲವೆ ?

ರಾಜಂ.—ಓಹೊ ! ಇದೇನು ಗಂಧರ್ವರಾಜ ! (ಎಂದು ರಥದಿಂಬಿಳಿದು) ಪ್ರಿಯಮಿತ್ರನೆ ನಿನಗೆ ಸುಖಾಗಮನವೆ ?

(ಎಂದು ಪರಸ್ಪರ ಹಸ್ತಸ್ಪರ್ಶ ಮಾಡುವರು).

---

*॥ ರಾಗ—ಸಿಂಧುಮಂದಾರಿ ॥ ॥ ಆದಿತಾಳ ॥

ಬಹುಕಾಲಸೀನಿರು ಭೂಪತಿ । ಮಹನೀಯಶೌರ್ಯ ಮಹಾಮತಿ ॥ ಪ ॥ ತುಹಿನಾಂಶುಕುಲಾಂಬುಧಿಚಂದ್ರನೆ । ನಿಹತಾರಿಸದ್ಗುಣಸಾಂದ್ರನೆ ॥ ಅ ॥ ಸುರಲೋಕವೈರಿಯಕೇಶಿಯ । ಪರಿಹಾರಗೈದುಮಹಾಶಯ । ಕರುಣಾಶ್ರಯನಮ್ಮಯಮಿತ್ರೆಯ । ಕರತಂದೆನೀರಜನೇತ್ರೆಯ ॥ ೧ ॥ ಕುಸುಮಿಲ್ಲನಂತತಿರೂಪನಂ । ಪಡೆದಿಂತುಸದ್ಗುಣಪುತ್ರನಂ। ಒಡಗೂಡಿಚಿರಂನಿಜಪತ್ನಿಯಂ । ಕಡುರಾಗದಿಂಪೊರೆಭೂಮಿಯಂ ॥ ೨ ॥ ನತಲೋಕಪಾಲನಧೀರನೆ । ಶತಪತ್ರಬಾಂಧವತೇಜನೆ । ಕ್ಷಿತಿನಾಕರಸಾತಲವಂಮಿಗೆ । ನುತಕೀರ್ತ್ತಿನಿನ್ನದುಸಾರುಗೆ ॥ ೩ ॥

†॥ ರಾಗ—ಶಂಕರಾಭರಣ—ಸೋಟು॥ ॥ ಏಕತಾಳ ॥

ಆಗಸದಿಂದತಿ । ವೇಗದಿಮಣಿಮಯ । ವಾಗಿಹಮಕುಟದ ಕಾಂತಿಯೊಳು ॥ ಈಗಿರಿಶೃಂಗವಿ । ಭಾಗವಬೆಳಗುತ । ಲೀಗಬರುತ್ತಿಹನಿವನಾರೈ ॥ ೧ ॥ ಇಳೆಯಹಾಣ್ಮನೆಭುಜ । ದೊಳುಮಿಸುನಿಯ ಥಳ । ಥಳಿಸುವಭುಜಕೀರ್ತ್ತಿಯತಳೆದು ॥ ತೊಳಗುವಮಿಂಚನು । ತಳೆದಿಹಮೇಘವು । ಕೆಳಗಿಳಿದೈತರುವಂದದಲಿ ॥ ೨ ॥

ಚಿತ್ರ.—ಎಲೈ ಪ್ರಿಯಮಿತ್ರನೆ ಕೇಶಿಯೆಂಬ ದಾನವನು ಊರ್ವಶಿಯನ್ನು ಅಪಹರಿಸಿಕೊಂಡು ಹೋದ ಸಂಗತಿಯನ್ನು ಇಂದ್ರನು ನಾರದರ ಮುಖದಿಂದ ತಿಳಿದು ಆಕೆಯನ್ನು ಬಿಡಿಸಿಕೊಂಡು ಬರುವದಕ್ಕೋಸ್ಕರ ಗಂಧರ್ವಸೇನೆಗಾಜ್ಞಾಪಿಸಿದನು. ಬಳಿಕ ಸೇನಾಸಮೇತನಾಗಿ ಬರುತ್ತಿದ್ದನಾನು ಚಾರಣರ ಮುಖದಿಂದ ನಿನ್ನ ವಿಜಯವನ್ನು ಕೇಳಿ ಇಲ್ಲಿಗೆ ಬಂದೆನು.

ಇನ್ನು ಈಕೆಯನ್ನು ಕರದುಕೊಂಡು ನಮ್ಮೊಡನೆ ಬಾ ಮಹೇಂದ್ರ ದರ್ಶನಕ್ಕೆ ಹೋಗೋಣ. ನೀನು ನಮ್ಮ ಮಹೇಂದ್ರನ ವಿಷಯದಲ್ಲಿ ಅತ್ಯಂತ ಉಪಕಾರವನ್ನು ಮಾಡಿದೆ ; ನೋಡು—

ಕಂ ॥ ನಾರಾಯಣಮುನಿ ಮುಂಬಲ ।
ವೈರಿಗೆ ಸೃಜಿಸಿತ್ತ ನೀಮನೋಹಾರಿಣಿಯಂ ॥
ಸ್ವಾರಾಜಮಿತ್ರನೀಂದೇ ।
ವಾರಿಯಸೆರೆವಿಡಿಸಿತಂದು ಸಾಂಪ್ರತಮಿತ್ತಯ್ ॥ ೧೫

ರಾಜಂ.—ಎಲೈ ಚಿತ್ರರಥನೆ ನೀನು ಹಾಗೆನ್ನಕೂಡದು ;—

ಕಂ ॥ ಸುರನಾಥನಪಕ್ಷದೊಳಿ ।
ರ್ಪ್ಪರಸಕ್ಕರ್ಗಳವಿಜಯಮೆಂಬುದಿಂದ್ರನದಕ್ಕುಂ ॥
ಗಿರಿಗುಹೆಯೊಳ್ಮೊಳಗುವ ಕೇ ।
ಸರಿರವಮುಂಸೀಳ್ವುವದಲ್ತೆ ಸೊಕ್ಕಾನೆಗಳಂ ॥ ೧೬

ಚಿತ್ರ.—ನೀನು ಹೇಳಿದ್ದು ಸಹಜ, ಪರಾಕ್ರಮಕ್ಕೆ ಅಹಂಕಾರವಿಲ್ಲದಿರುವದೇ ಭೂಷಣ.

ರಾಜಂ.—ಮಿತ್ರನೆ ಮಹೇಂದ್ರನ ದರ್ಶನಕ್ಕೆ ಈಗ ನಾನು ಬರತಕ್ಕದ್ದಲ್ಲ. ಈಕೆಯನ್ನು ನೀನೇ ಆತನ ಸನ್ನಿಧಿಗೆ ಕರದುಕೊಂಡು ಹೋಗು.

ಚಿತ್ರ.—ನಿನ್ನಿಷ್ಟವಿದ್ದಂತಾಗಲಿ. ಎಲೌ ಮಂಗಳಾಂಗಿಯರೆ ಇನ್ನು ನೀವೆಲ್ಲರೂ ಹೊರಡತಕ್ಕದ್ದು.

(ಅಪ್ಸರಸ್ತ್ರೀಯರೆಲ್ಲರೂ ಹೊರಟರು).

ಊರ್ವ.—(ಚಿತ್ರಲೇಖೆಯೊಡನೆ) ಎಲೆ ಸಖಿ ನಮಗೆ ಮಹೋಪಕಾರ ಮಾಡಿದ ಈ ರಾಜರ್ಷಿಯನ್ನು ಮಾತನಾಡಿಸುವದಕ್ಕೆ ಲಜ್ಜೆಪಡುವೆನು. ಆದ್ದರಿಂದ ನನ್ನ ಮಾತನ್ನು ನೀನೇ ತಿಳಿಸು.

ಚಿತ್ರ.—(ರಾಯನಬಳಿಗೆ ಬಂದು) ಪ್ರಿಯಮಿತ್ರನೆ ಊರ್ವಶಿಯು ನೀನು ಸಮ್ಮತಿಸಿದರೆ ನಿನ್ನ ಕೀರ್ತಿಯೊಡನೆ ಮಹೇಂದ್ರಲೋಕಕ್ಕೆ ಹೋಗಿ ಬರುವೆನೆಂದು ಬಿನ್ನೈಸುವಳು.

ರಾಜಂ.—ಹೋಗಿ ಬರಲಿ; ಮತ್ತೊಂದುವೇಳೆ ನೋಡುವೆನು.

(ಅಪ್ಸರಸ್ತ್ರೀಯರೆಲ್ಲರೂ ಚಿತ್ರರಥನೊಡನೆ ಆಕಾಶಗಮನವನ್ನು ನಟಿಸುವರು).

ಊರ್ವ.—(ಮೇಲಕ್ಕೆ ಹೋಗುವಾಗ ಗತಿಭಂಗವನ್ನು ನಟಿಸಿ) ಓಹೊ! ಈ ಬಳ್ಳಿಯ ಕವಲಿಗೆ ನನ್ನ ಮುತ್ತಿನಮಾಲೆ ಸಿಕ್ಕಿಕೊಂಡಿತು.

(ಎಂದು ನೆವದಿಂದ ಸ್ವಲ್ಪ ತಿರುಗಿ ರಾಯನನ್ನು ನೋಡುತ್ತಾ)

ಚಿತ್ರಲೇಖೆ ಇದನ್ನು ಸ್ವಲ್ಪ ಬಿಡಿಸು.

ಚಿತ್ರ.—(ನೋಡಿನಕ್ಕು) ಬಲವಾಗಿ ಸಿಕ್ಕಿಕೊಂಡಿದೆ ಬಿಡಿಸುವದಕ್ಕಾಗುವದಿಲ್ಲ.

ಊರ್ವ.—ಹಾಸ್ಯ ಹಾಗಿರಲಿ; ಬಿಡಿಸು ಬಿಡಿಸು.

ಚಿತ್ರ.—ಆಗಲಿ ಬಿಡಿಸುವೆನು.

ಊರ್ವ.—(ರಾಯನನ್ನು ನೋಡಿ ಚಿತ್ರಲೇಖೆಯನ್ನು ಕುರಿತು) ಈಗ ನೀನು ಆಡಿದ ಮಾತನ್ನು ಮರೆಯದಿರು.

(ಚಿತ್ರಲೇಖೆ ಬಿಡಿಸುವದನ್ನು ನಟಿಸುವಳು).

ರಾಜಂ.—(ಲತೆಯನ್ನು ನೋಡಿ)

ಕಂ ॥ ಅಸಿಯಳ್ಕೊಂಕಿದದಿಟ್ಟಿಯ ।
ನಸುತಿರುಪಿದಮೊಗಮನಿನ್ನ ದೊಮ್ಮೆಯುಮಾನೀ ॥
ಕ್ಷಿಸಲೀಕೆಯಗಮನಕ್ಕೆಡ ।
ರೆಸಗುತೆನೀಂಬಳ್ಳಿಯೆನಗೊಡಚ್ಚಿದೆಹಿತಮಂ ॥ ೧೩

ಸೂತಂ.—ಆಯುಷ್ಮಂತನೆ—

ಕಂ ॥ ಕೆಡಪಿಸುರಗ್ಗಪರಾಧವ ।
ನೊಡಚ್ಚಿದಾರಕ್ಕಸರ್ಕಳಂ ಜಲನಿಧಿಯೊಳ್ ॥
ಅಡಗಿತುನಿನ್ನನಿಲಾಸ್ತ್ರವಿ ।
ದೊಡನೆಬಿಲಂಬೊಕ್ಕಪಾವಿನಂತಿರೆಡೊಣೆಯೊಳ್ ॥ ೧೮

ರಾಜಂ.—ಬಳಿಕ್ಕೇದು ಇನ್ನು ರಥವನ್ನು ಸಿದ್ಧಮಾಡು ; ಇದೋ ಬಂದೆನು.

ಸೂತಂ.—ಆಯುಷ್ಮಂತನಪ್ಪಣೆಯಾದಂತಾಗಲಿ.

(ಎಂದು ರಥವನ್ನು ಸಿದ್ಧಪಡಿಸುವನು).

ಊರ್ವ.—(ರಾಯನನ್ನು ನೋಡಿ ಬಿಸುಸುಯ್ಯುತ್ತ ಸಖಿಯರೊಡನೆ ಹೋಗುವಳು)

ರಾಜಂ.—(ಊರ್ವಶೀಮಾರ್ಗವನ್ನೇ ನೋಡುತ್ತ ತನ್ನಲ್ಲಿತಾನು) ನನ್ನ ಮನಸ್ಸು ದುರ್ಲಭವಾದ ವಸ್ತುವನ್ನು ಅಪೇಕ್ಷಿಸುತ್ತಿರುವದು.

*ಕಂ ॥ ತೆರಳುತೆ ಗಗನದೊಳೀಸುಂ ।
ದರಿ ಯೆನ್ನೊಡಲಿಂದೆಮನವನೆಳೆವಳ್ಮುರಿದಿ ॥
ಪ್ಪರವಿಂದಮೃಣಾಳಾಗ್ರದೆ ।
ನಿರುಕಿಸಲರಸಂಚೆಯೊಳಗಣೆಳೆಯಂಸೆಳೆವೋಲ್ ॥ ೧೯

(ಎಲ್ಲರೂ ಹೋಗುವರು).

---

*॥ ರಾಗ—ಬೆಹಾಗ್ ॥ ॥ ರೂಪಕತಾಳ ॥

ಎಂತುನಾನೈದುವೆ । ಕಾಂತೆಯನುಳಿದೆಂತಿರುವೆ ॥ ಪ ॥ ಕಂತುವಾಕ್ಯತಾಂತನಾಗೆ ಚಿಂತೆಯಧಿಕವಾಗೆ ॥ ಅ ॥ ಮುರಿದಕಮಲನಾಳದೆಳೆಯು । ನಿರದೆಸೆಳೆವಹಂಸಿವೋಲ್ । ಅರಸಿಮನವದೇಹದಿನಪ । ಹರಿಸಿಕೊಂಡುಪೋಪಳೀ । ಗೆಂತು ॥ ೧ ॥ ಮದನನಾರಾಚದಂತೆ । ಚದುರೆತನ್ನದಿಟ್ಟಿಯು । ಹೃದಯದಲ್ಲಿನೆಟ್ಟುಮನವ । ಚೆದರಿಸುತಲಿಪೋಪಳ । ನ್ನೆಂತು ॥ ೨ ॥ ರಾಜಸದೃಶವದನೆಪಂ । ಕೇಜನಯನೆಯೆನ್ನನು । ವ್ಯಾಜದಿಂದಲೀಕ್ಷಿಸಿಸುರ । ರಾಜಸಭೆಗೆಪೋದಮೋ ! ಲೆಂತು ॥ ೩ ।

ಪ್ರಥಮಾಂಕವು ಮುಗಿದುದು.

ದ್ವಿತೀಯಾಂಕಂ.

(ಬಳಿಕ ವಿದೂಷಕನು ಪ್ರವೇಶಿಸುವನು).

ವಿದೂಷಕ.—ಓಹೊ ! ಈಗೇನಮಾಡಲಿ ! ಬ್ರಾಹ್ಮಣಾರ್ಥಕ್ಕೆ ಒಪ್ಪಿಕೊಂಡು ಎಲೆಯಮುಂದೆ ಕೂತುಕೊಂಡ ಬ್ರಾಹ್ಮಣನು ಚಪಲಪಡದ ಹಾಗೆ ತನ್ನ ನಾಲಿಗೆಯನ್ನು ಹ್ಯಾಗೆ ತಡೆದುಕೊಳ್ಳಲಾರನೊ ಹಾಗೆ ಜನಸಂಘದಲ್ಲಿ ರಾಜರಹಸ್ಯವನ್ನು ಹೊರಪಡಸದಹಾಗೆ ನನ್ನ ನಾಲಿಗೆಯನ್ನು ನಾನು ತಡೆದುಕೊಳ್ಳಲಾರೆ. ಆದ್ದರಿಂದ ನಮ್ಮ ಮಹಾರಾಜನು ಧರ್ಮಾಸನವನ್ನು ಬಿಟ್ಟು ಬರುವಪರ್ಯಂತಕ್ಕೂ ನಿರ್ಜನವಾಗಿರುವ ವಿಮಾನಪ್ರತಿಚ್ಛಂದವೆಂಬ ಉಪ್ಪರಿಗೆಯಮೇಲಿರುವೆನು.

(ಎಂದು ಹೋಗಿ ನಿಲ್ಲುವನು).

ಚೇಟಿ.—(ಪ್ರವೇಶಿಸಿ) ಮಹಾರಾಜನು ಸೂರ್ಯೋಪಾಸನೆಯನ್ನು ಮಾಡಿಕೊಂಡು ಬಂದಾರಭ್ಯ ವ್ಯಾಕುಲನಾಗಿರುವನು. ಅದಕ್ಕೆ ಕಾರಣವನ್ನು ಆತನ ಮಿತ್ರನಾದ ಮಾಣವಕನಿಂದ ತಿಳಿದುಬರುವಂತೆ ಕಾಶೀರಾಜಪುತ್ರಿಯಾದ ಮಹಾದೇವಿಯು ನನಗಾಜ್ಞಾಪಿಸಿರುವಳು. ಈಗ ಆತನನ್ನು ಎಲ್ಲಿ ತಾನೇ ಕಾಣಲಿ ! ಹ್ಯಾಗೆತಾನೇ ಅವನನ್ನು ವಂಚಿಸಿ ಆವಿಷಯವನ್ನು ತಿಳಿಯಲಿ ! ಓಹೊ ! ಗರಿಕೆಯಮೇಲೆ ಬಿದ್ದ ಮಂಜಿನಂತೆ ಆತನಲ್ಲಿ ರಾಜರಹಸ್ಯವು ಬಹುಕಾಲ ನಿಲ್ಲುವದಿಲ್ಲ. ಒಳ್ಳೇದು ಆತನನ್ನು ಹುಡುಕುವೆನು. (ಎಂದು ಅತ್ತಿತ್ತ ನೋಡಿ).

॥ ರಾಗ—ಹಿಂದುಸ್ಥಾನಿಕಾಪಿ ॥ [ತಂಗಂಪಾಟು] ॥ ಏಕತಾಳ ॥

ಅರಸನ ಗುಟ್ಟನು । ನಮ್ಮಾ ಅರಸನ ಗುಟ್ಟನು । ಆರೊಳು ನಾಂಮೊದ । ಲೊರೆಯುವೆಮನದ । ಲ್ಲಿರಿಸಲು ಸೈರಿಸೆನು । ಮನದಲ್ಲಿರಿಸಲು ಸೈರಿಸೆನು ॥ ೧ ॥ ಎಡೆಯೊಳು ಮುಂಗಡೆ । ಬಡಿಸಿದ ಭಕ್ಷ್ಯವ । ತುಡುಕದೆ ಸಂಭ್ರಮ । ಪಡುತಿಹ ವಿಪ್ರನ । ಕುಡಿನಾಲಿಗೆಯಂತೆ । ಅದನಾಂ ನುಡಿಯದೆ ಸೈರಿಸೆನು ॥ ೨ ॥ ಕಡುಚಪಲದಬಾ । ಯ್ಬಿಡದಿಹುದೆಂತದ । ಒಡಕಿನಪಾತ್ರೆಯೊ । ಳಡಗುವದೇಜಲ । ತಡೆಯೆನು ಸಂಕಟವ । ನುಡಿಯದೆ ತಡೆಯೆನು ಸಂಕಟವ ॥ ೩ ॥

ಇದೊ ಈ ಉಪ್ಪರಿಗೆಯ ನಡುವೆ ಚಿತ್ರದಲ್ಲಿ ಬರೆದ ಕೋತಿಯಂತೆ ಅಲ್ಲಾಡದೆ ಸುಮ್ಮನೆ ನಿಂತಿರುವನು. ಒಳ್ಳೇದು ಈತನಸಮೀಪಕ್ಕೆ ಹೋಗುವೆನು. (ಎಂದು ಸಮೀಪಕ್ಕೆ ಬಂದು) ಆರ್ಯನೆ ನಮಸ್ಕರಿಸುವೆನು (ಎಂದು ನಮಸ್ಕರಿಸುವಳು).

ವಿದೂ.—ನಿನಗೆ ಮಂಗಳವಾಗಲಿ. (ತನ್ನಲ್ಲಿ ತಾನು) ಇದೇನು! ಈ ದುಷ್ಟಳಾದ ಚೇಟಿಯನ್ನು ನೋಡಿದ ಕೂಡಲೆ ನಮ್ಮ ರಾಯನ ರಹಸ್ಯವು ನನ್ನ ಮನಸ್ಸನ್ನು ಭೇದಿಸಿಕೊಂಡು ತಾನಾಗಿ ಹೊರಕ್ಕೆ ಬರುತ್ತಲಿದೆ. (ಪ್ರಕಾಶವಾಗಿ)

ಎಲೆ ನಿಪುಣಿಕೆ ಸಂಗೀತವ್ಯಾಸಂಗವನ್ನು ಬಿಟ್ಟು ಎಲ್ಲಿಗೆ ಹೊರಟೆ?

ಚೇಟಿ.—ಮಹಾದೇವಿಯ ಆಜ್ಞೆಯಿಂದ ನಿನ್ನನ್ನೇ ನೋಡುವದಕ್ಕೆ ಬಂದೆನು.

ವಿದೂ.—ಮಹಾದೇವಿ ಏನಾಜ್ಞಾಪಿಸಿರುವಳು?

ಚೇಟಿ.—ಯಾವಾಗಲೂ ಆಕೆಯಲ್ಲಿ ಅನುರಕ್ತನಾಗಿದ್ದ ಮಹಾರಾಜನು ಈಗ ಆಕೆಯನ್ನು ಲಕ್ಷ್ಯಮಾಡದೆ ಇರುವನಂತೆ.

ವಿದೂ.—ಎಲೆ ನಿಪುಣಿಕೆ ಮಹಾದೇವಿಯ ವಿಷಯದಲ್ಲಿ ನಮ್ಮ ಮಹಾರಾಜನು ಆಚರಿಸಿದ ಪ್ರತಿಕೂಲವೇನು?

ಚೇಟಿ.—ನಿಮ್ಮ ಮಹಾರಾಜನು ಯಾವಸ್ತ್ರೀಯಲ್ಲಿ ಅನುರಕ್ತನಾಗಿರುವನೋ ಆಕೆಯ ಹೆಸರು ಹಿಡಿದು ನಮ್ಮ ಮಹಾದೇವಿಯನ್ನು ಕರೆದನು.

ವಿದೂ.—(ತನ್ನಲ್ಲಿತಾನು) ಆತನೇ ತನ್ನ ರಹಸ್ಯವನ್ನು ಬಹಿರಂಗಪಡಿಸಿದ ಮೇಲೆ ನನ್ನ ನಾಲಿಗೆಯನ್ನು ನಾನೇಕೆ ತಡೆದುಕೊಂಡಿರಲಿ. (ಪ್ರಕಾಶ) ಊರ್ವಶಿಯೆಂದು ಕರೆದನೊ? ಆ ಅಪ್ಸರಸ್ತ್ರೀಯನ್ನು ನೋಡಿದಾರಭ್ಯ ಮಹಾದೇವಿಯನ್ನು ಹಾಗಿರಲಿ; ಹುಚ್ಚು ಹಿಡಿದವನಂತೆ ನನ್ನನ್ನೂ ಬಹಳವಾಗಿ ಪೀಡಿಸುತ್ತಿರುವನು.

ಚೇಟಿ.—(ತನ್ನಲ್ಲಿತಾನು) ರಾಯನ ಗುಟ್ಟನ್ನು ಒಳ್ಳೇ ಉಪಾಯದಿಂದ ಭೇದಿಸಿ ತಿಳಿದೆನು. (ಪ್ರಕಾಶ) ಮಹಾದೇವಿಗೆ ಏನರಿಕೆಮಾಡಲಿ?

ವಿದೂ.—ಈಗ ನಾನು ಮಹಾರಾಜನಿಗೆ ಈ ಭ್ರಾಂತಿಯನ್ನು ತಪ್ಪಿಸುವವಕ್ಕೆ ಯತ್ನಿಸಿರುವೆನು. ಆಮೇಲೆ ಮಹಾದೇವಿಯನ್ನು ಕಾಣುವೆನೆಂದು ಅರಿಕೆಮಾಡು.

ಚೇಟ.—ಹಾಗೇ ಆಗಲಿ. (ಎಂದು ತೆರಳಿದಳು).

ತೆರೆಯಲ್ಲಿ ಸ್ತುತಿಪಾಠಕರು.—ಮಹಾರಾಜನಿಗೆ ಜಯವಾಗಲಿ ಜಯವಾಗಲಿ.

*ವೃ॥ಆಲೋಕಾಂತಾವರುದ್ಧಪ್ರಚುರಜನತಮೋವೃತ್ತಿಗಳ್ದೇವನೀನುಂ।
ನಾಳೀಕಪ್ರೇಯಸುಂಸಂಮತವಿದೆಮಗೆನಿಮ್ಮೇಕರೂಪಾಧಿಕಾರಂ॥
ತಾಳುತ್ತಿರ್ಪಂಕ್ಷಣಂವಿಶ್ರಮಸುಖಮನಿನಂನಟ್ಟಿರಲ್ಲಾಟ್ಟಿಯೊಳ್ನೀಂ।
ಲೀಲಾಕ್ರಾಂತೇಳನಿನ್ನಿಚ್ಛೆಯೊಳಿದಿನದಷಷ್ಠಾಂಶದೊಳ್ವಿಶ್ರಮಿಪ್ಪಯ್॥

ವಿದೂ.—(ಕೇಳಿ)ಇದೋ ಮಹಾರಾಜನು ಧರ್ಮಾಸನದಿಂದೆದ್ದನು. ನಾನೂ ಆತನ ಪಕ್ಕವನ್ನು ಸೇರುವೆನು. (ಎಂದು ತೆರಳಿದನು)

(ಇಂತಿದು ಪ್ರವೇಶಕವು).

(ವಿರಹಪೀಡಿತನಾದ ರಾಯನು ವಿದೂಷಕನೊಡನೆ ಪ್ರವೇಶಿಸುವನು).

†ರಾಜಂ.—ಕಂ॥ ಆನಾಕಲೋಕಸುಂದರಿ।
ಮೀನಾಂಕನಮೋಘಬಾಣಮೆಸಗಿದಪಥದಿಂ॥
ದಾನೀಕ್ಷಿಸಿದಂದಿನಿಮಿಾ।
ಮಾನಸಮಂ ಪೊಕ್ಕಳಕ್ಕಟೇಗೆಯ್ದಪೆನಾಂ॥ ೧

*॥ ರಾಗ—ಶಂಕರಾಭರಣ—ನೋಟು॥ ॥ಆದಿತಾಳ॥

ಮಾನವೇಂದ್ರನೇನೀನು। ಆನೀರಜಸಖನು। ಜಾನಿಸಲುದ್ಯೋಗದೆಸ। ಮಾನರೀರ್ವರು॥ ಪ॥ ಧರಣೀತಲದೊಳ। ಗಿರುತಿಹತಮವನು॥ ೧ ಪರಿಹರಿಸುತ್ತಭ್ಯುದಯವ ಪಡೆಯುತ। ನಿರುಪಮತೇಜೋಮಯನೆನಿಪ್ಪೆ॥ ೧॥ ತರಣಿಯುಗಗನಾಂ ತರದೊಳು ನಿಲ್ಲುವ॥ ೨ ಪರಿಯಿಂಕ್ಷಣಕಾಲದೆವಿಶ್ರಾಂತಿಯ। ಧರಣಿಪಮಧ್ಯಾಹ್ನದೆಪಡೆವೈ॥ ೨॥

†॥ ರಾಗ—ವಸಂತ॥ ॥ಆದಿತಾಳ॥

ಸೈರಿಸಲಾರೆ। ಮಿಾರಿದತಾಪವ॥ ಸೇರುವೆನೆಂದಿಗೆ। ಸಾರಸಮುಖಿಯ॥ ೧॥ ಮಾರನಬಾಣವು। ಮಾಡಿದದಾರಿಯಿಂ॥ ದಾರಮಣಿಯುಮನವ। ಸೇರಿದಳಾಗೆ॥ ೨॥ ಎತ್ತನೋಡಿದರೂ। ಚಿತ್ತದೊಳಿರ್ಪಾ॥ ಮತ್ತಕಾಶಿನಿಯೆ ಕಾ। ಣುತ್ತಿಹಳಕ್ಕಟ॥ ೩॥

ವಿದೂ.—ಇನ್ನು ನಮ್ಮ ಕಾಶೀರಾಜಪುತ್ರಿಗೆ ಕಷ್ಟಬಂತು!

ರಾಜಂ.—ಎಲೈ ಮಾಣವಕನೆ, ನನ್ನ ರಹಸ್ಯನವನ್ನು ನಿನ್ನಲ್ಲಿಯೇ ಇಟ್ಟದ್ದೀಯಾ?

ವಿದೂ.—(ತನ್ನಲ್ಲಿ ತಾನು) ಅಯ್ಯೋ! ತೊತ್ತಿನಮಗಳಾದ ಆ ಚೇಟಿಯು ನನ್ನನ್ನು ವಂಚಿಸಿದಳು. ಇಲ್ಲದಿದ್ದರೆ ನಮ್ಮ ಮಹಾರಾಜನು ನನ್ನನ್ನು ಹೀಗೆ ಕೇಳುತ್ತಿರಲಿಲ್ಲ.

ರಾಜಂ.—ಇದೇನು ಯಾತಕ್ಕೋಸ್ಕರ ಸುಮ್ಮನಿದ್ದೀಯೆ?

ವಿದೂ.—ಅಯ್ಯಾ ಮಹಾರಾಜನೆ, ನಿನ್ನ ಮಾತಿಗೂಕೂಡ ಉತ್ತರವನ್ನು ಕೊಡದಂತೆ ನನ್ನ ನಾಲಗೆಯನ್ನು ಭದ್ರಪಡಿಸಿಕೊಂಡಿರುವೆನು.

ರಾಜಂ.—ಹಾಗೆ ನೀನು ನಾಲಗೆಯನ್ನು ತಡೆದುಕೊಂಡಿರುವದು ಯುಕ್ತ. ಈಗ ನನ್ನ ಮನಸ್ಸನ್ನು ಯಾವತೆರದಿಂದ ವಿನೋದಪಡಿಸಲಿ? ಹೇಳು.

ವಿದೂ.—ಹಾಗಾದರೆ ಅಡಿಗೇಮನೆಗೆ ಹೋಗೋಣ ನಡೆ.

ರಾಜಂ.—ಅಲ್ಲೇನು?

ವಿದೂ.—ಅಲ್ಲೇನೆ? ಬೇಕಾದ ಭಕ್ಷ್ಯಭೋಜ್ಯಗಳನ್ನು ತುಂಬಿರುವ ಪಾತ್ರೆಗಳನ್ನು ನೋಡುತ್ತ ಮನಸ್ಸನ್ನು ವಿನೋದಪಡಿಸಬಹುದು.

ರಾಜಂ.—(ನಕ್ಕು) ಅಲ್ಲಿ ನಿನಗೆ ಬೇಕಾದ ವಸ್ತುಗಳು ದೊರೆಯುವದರಿಂದ ನಿನ್ನ ಮನಸ್ಸು ವಿನೋದಪಡಬಹುದು. ದುರ್ಲಭವಾದ ವಸ್ತುವನ್ನು ಅಪೇಕ್ಷಿಸುತ್ತಿರುವ ನನ್ನ ಮನಸ್ಸು ಹ್ಯಾಗೆ ವಿನೋದಪಟ್ಟೀತು?

ವಿದೂ.—ಪೂಜ್ಯಳಾದ ಆ ಊರ್ವಶಿಯ ದೃಷ್ಟಿಗೆ ನೀನು ಬಿದ್ದೇ ಇದ್ದೀಯಷ್ಟೆ?

ರಾಜಂ.—ಅದರಿಂದೇನುಪ್ರಯೋಜನ?

ವಿದೂ.—ಅದೇಕೆ ಹಾಗೆ ಹೇಳುತ್ತೀಯೆ? ಅವಳು ನಿನಗೆ ದುರ್ಲಭಳೆಂದು ನಾನೆಣಿಸುವದಿಲ್ಲ.

ರಾಜಂ.—ನೀನು ಹೇಳಿದ್ದು ಪಕ್ಷಪಾತದ ಮಾತಾಗಿದೆ.

ವಿದೂ.—ನೀನು ಇಷ್ಟೆಲ್ಲಾ ಹೇಳುವದನ್ನು ನೋಡಿದರೆ ನನಗೂ ಕೇಳುವದಕ್ಕೆ ಕುತೂಹಲವುಂಟಾಗಿದೆ. ಹಾಗಾದರೇನು! ಅವಳ ರೂಪು ಅಂಥಾ ಸರ್ವೋತ್ತಮವಾದದ್ದೆ? ಅಥವಾ ನನ್ನ ರೂಪಿಗೆ ಸಮಾನ ವಾದದ್ದೊ?

ರಾಜಂ.—ಮಾಣವಕನೆ ಅವಳ ಅವಯವಗಳನ್ನು ಬಂದೊಂದಾಗಿ ವರ್ಣಿಸುವದು ಅಶಕ್ಯವು. ಆದ್ದರಿಂದ ಸಂಕ್ಷೇಪವಾಗಿ ಹೇಳುವೆನು ಕೇಳು.

*ಕಂ ॥ ಆಭರಣಕ್ಕಾಭರಣಂ ।
ಶೋಭಾವತಿ ಸಿಂಗರಕ್ಕೆ ಸಿಂಗರಮೆನಿಕುಂ ॥
ಈ ಭೂಮಿಯೊಳುಪಮಾನಕೆ ।
ಸೌಭಾಗ್ಯದಕಣಿ ಮನೋಜ್ಞಮಾದುಪಮಾನಂ ॥ ೩

ವಿದೂ.—ಆಹ! ಗಗನದಲ್ಲಿರುವ ಆ ಸ್ತ್ರೀಯನ್ನು ಅಪೇಕ್ಷಿಸುವ ನೀನೂ ಗಗನದಲ್ಲಿರುವ ಜಲಧಾರೆಯನ್ನೇ ಅಪೇಕ್ಷಿಸುವ ಚಾತಕಪಕ್ಷಿ ಯೂ ಇಬ್ಬರೂ ಬಂದೆ!

ರಾಜಂ.—ಮಿತ್ರನೆ ನಿರ್ಜನಸ್ಥಾನಹೊರತಾಗಿ ನನ್ನ ಮನಸ್ಸಿಗೆ ವಿನೋದಸ್ಥಾನವು ಬೇರೆ ಯಾವದೂ ಇಲ್ಲ. ಆದ್ದರಿಂದ ಪ್ರಮದವನಕ್ಕೆ ಹೋಗೋಣ ನಡೆ.

---

*ರಾಗ ॥ ಖರಹರಪ್ರಿಯ ॥ ॥ ರೂಪಕತಾಳ ॥

ಎಂತುವರ್ಣಿಪೆ । ನಾ ನೆಂತುವರ್ಣಿಪೆ ॥ ಪ ॥ ಕಂತುಸತಿಯ ನಿಂದಿಸುವಾ । ಕಾಂತೆಯ ರೂಪಾತಿಶಯವ ॥ ಅ ॥ ತೊಡಿಗೆಗಳಿಗೆ ತೊಡಿಗೆಯಾದ । ಕಡುಚೆಲುವಿಕೆಯನ್ನು ತಳೆದ ॥ ಬಡನಡುವಿನ ಚಂದ್ರಮುಖಿಯು । ಮಡದಿಮಣಿಯು ಮಂದಗತಿಯು ॥ ೧ ॥ ಸದುಪಮಾನ ವಸ್ತುಗಳಿಗೆ । ಸದುಪಮಾನ ವಸ್ತುವಾದ ॥ ಮದನಕರ ಕೃಪಾಣಿಯಾದ । ಮೃದುಳಮಧುರ ವಾಣಿಯನಾ ॥ ೨ ॥ ಸಿಂಗರಕ್ಕೆ ಸಿಂಗರವಹ । ಭೃಂಗಚಿಕುರೆಯಾದ ಸಾ ॥ ರಂಗದೀರ್ಘನಯನೆಯಾದ । ಮಂಗಳಾಂಗಿಯನ್ನು ನಾನ । ದೆಂತುವರ್ಣಿಪೆ ॥ ೩ ॥

ವಿದೂ.—(ತನ್ನಲ್ಲಿತಾನು) ಇನ್ನೇನುಗತಿ! ಇವನಸಂಗಡ ಅರಣ್ಯರೋದನವನ್ನೂ ಮಾಡಬೇಕಾಗಿಬಂತು. (ಪ್ರಕಾಶ) ಈಕಡೆ ದಯಮಾಡಿಸಬೇಕು. (ಎಂದಿಬ್ಬರೂ ನಡೆದು) ಮಹಾರಾಜನೆ ಪ್ರಮದವನದಿಂದ ಪ್ರೇರಿತವಾದ ದಕ್ಷಿಣವಾಯುವು ಇದೊ ನಿನ್ನನ್ನು ಎದುರುಗೊಳ್ಳುತ್ತಿರುವದು.

ರಾಜಂ.—ಈ ವಾಯುವಿಗೆ ಈ ವಿಶೇಷಣವೊಪ್ಪುವದು.

ಕಂ॥ ಕುಸುಮಿತ ಮಾಧವಿಯೊಳ್ ವಿಹ।
ರಿಸುತಂ ನೇಹದೊಳ್ ಕುಂದವಲ್ಲಿಯು ನಾಲಿಂ॥
ಗಿಸುತಂ ದಾಕ್ಷಿಣ್ಯದೊಳೀ।
ಶ್ವಸನಂನಿರುಕಿಪೊಡೆ ಕಾಮಿಯಂತಿರೆ ತೋರ್ಕುಂ॥ ೪

ವಿದೂ.—ನಿನ್ನ ಮನೋಭಾವವೂ ಹೀಗೆಯೇ ಇರತಕ್ಕದ್ದು. (ಎಂದು ನಡೆದು) ಮಹಾರಾಜನೆ ಇದೇ ಪ್ರಮದವನವು.

ರಾಜಂ.—ಮಿತ್ರನೆ ನೀನು ಮುಂದೆನಡೆ. (ಇಬ್ಬರೂ ಪ್ರವೇಶಿಸುವರು)

ರಾಜಂ.—(ನೋಡಿ) ಮಿತ್ರನೆ ವಿರಹತಾಪವನ್ನು ಪರಿಹರಿಸಿಕೊಳ್ಳುವದಕ್ಕೋಸ್ಕರ ನಾನಿಲ್ಲಿಗೆ ಬಂದದ್ದು ಇನ್ನೂ ವಿರಹತಾಪ ಹೆಚ್ಚುವದಕ್ಕೆ ಕಾರಣವಾಯಿತು.

ಕಂ॥ ಕಳೆಯಲ್ಕತನುಜ್ವರದುಪ।
ಟಳಮುಂ ಪ್ರಮದೋಪವನಕೆ ನಾಂ ಬಂದುದುಕೇಳ್॥
ಪೊಳೆಯಲ್ಲಿಬಿದ್ದಮನುಜಂ।
ಸೆಳವಿಗೆ ಮುಗುಳ್ದಿರೆ ವಪ್ಪರ್ತೆರನಾಯ್ತುಕಟಾ॥ ೫

ವಿದೂ.—ಅದು ಹ್ಯಾಗೆ?

ರಾಜಂ.—ಕಂ॥ ಸುಲಭಮದಲ್ಲದವಸ್ತುವ।
ನೆಳಸೆನ್ನಂ ಮೊದಲೆ ಪಂಚಬಾಣಂ ತವಿಸಂ॥
ಮಲಯಾನಿಲನಿಂದಂ ಪ।
ಲ್ಲೆಲೆ ಯುದುರಿ ತಳರ್ತ್ತಮಾವನೀಕ್ಷಿಸಲಿನ್ನೇಂ॥ ೬

ವಿದೂ.—ಮಹಾರಾಜನೆ ಯಾತಕ್ಕೋಸ್ಕರ ಹೀಗೆ ವ್ಯಸನಪಡುತ್ತೀಯೆ? ಹೀಗೆ ನಿನ್ನನ್ನು ಬಾಧಿಸುವ ಮನ್ಮಥನೇ ಶೀಘ್ರವಾಗಿ ನಿನ್ನಿಷ್ಟಾರ್ಥವನ್ನು ಕೈಗೂಡಿಸಿ ನಿನಗೆ ಸೌಖ್ಯವನ್ನುಂಟುಮಾಡುವನು.

ರಾಜಂ.—ಬ್ರಾಹ್ಮಣವಚನವನ್ನು ಪರಿಗ್ರಹಿಸಿದೆನು.

(ಎಂದಿಬ್ಬರೂ ತಿರುಗಾಡುತ್ತ)

ವಿದೂ.—ಮಹಾರಾಜನೆ ಈವುದ್ಯಾನವು ವಸಂತಋತು ಪ್ರಾಪ್ತವಾದ್ದರಿಂದ ಎಷ್ಟು ಮನೋಹರವಾಗಿದೆ ನೋಡು.

ರಾಜಂ.—ಪದೇಪದೇ ನೋಡುತ್ತಲೇ ಇರುವೆನಲ್ಲ.

*ವೃ ॥ ತುದಿಯೊಳ್ಕಾಂತಾನಖಂಬೊಲ್ಕುರವಕ ಮೊಳಗೆಂಪಂಸಮಂತಾಳ್ದು
ದಿರ್ಪ್ಪ ।
ಕ್ಕದೆ ಕಪ್ಪಂಕೆಂಪುಪತ್ತಿರ್ಪ್ಪಸುಗೆಬಿರಿಯುಲಾಂತಿಕ್ಕ್ಕವಾಲೋಕರ
ಮ್ಯಂ ॥
ಪುದಿಯುತ್ತಂಧೂಳಿಯಿಂಪೊಂಗದಿರನರಮೆಪತ್ತಿ ಕ್ಕ್ಕಮಾಚೂತಗುಚ್ಛಂ
ಪದಪಿಂದಂಬಾಲ್ಯತಾರುಣ್ಯದನಡುವೆಮಧುಶ್ರೀಕರಂನಿಂದುತೋಕ್ಕ್ಕಂ ॥

ವಿದೂ—ಇದೋ ರತ್ನಖಚಿತವಾದ ಆಸನದಿಂದ ಕೂಡಿರುವ ಮಲ್ಲಿಕಾ ಮಂಟಪವು ಕಂಗೊಳಿಸುತ್ತಿರುವದು. ಇದು ದುಂಬಿಗಳ ಪೆಟ್ಟಿನಿಂದುದುರುವ ಹುವ್ವುಗಳಿಂದ ನಿನಗೆ ಕೈಗಾಣಿಕೆಯನ್ನು ಕೊಡುವಂತೆ ಕಾಣು

---

*॥ ರಾಗ—ಬೆಹಾಗ್ ॥ ॥ ಆದಿತಾಳ ॥

ಆವನಚಿತ್ತವ । ನೀವನಲಕ್ಷ್ಮಿಯು । ಕಾವನಬಾಧೆಯಿಂ ಕಾಡಿಸದು ॥ ಪ । ಮಾರಕನಾಗಿಹ । ಪೂರಸಿಗೀಸಹ । ಕಾರದತರುಸಹಕಾರಕವು ॥ ಸಾರಸಪರಿಮಳಾ ॥ ಸಾರವಹಾನಿಲ । ಬಾರಕನೆನ್ನಸುದಾರಕನು ॥ ೧ ॥ ಬನಸಿರಿಯುನುಚ್ಚೈ । ತ್ರಸುತಾಸೀಶುಭ । ದಿನದೊಳುವರಿಸಿದನೆನುವದನು ॥ ಜನರಿಗೆಸೂಚಿಪು । ದೆನಿಶುಕಪಿಕಕಲ । ನಿನದವುಶಂಕೆಯಜನಿಯಿಪುದು ॥ ೨ ॥ ವಿರಹದಪೇಗೆಯು । ಪರಿಹರಿಸುವೆನೆಂ । ದರಿಯುತ್ತೀವನಕೈತರಲು ॥ ತೊರೆಯೊಳುಬಿದ್ದವಂ । ಪರಿವಹದೆದುರಿಗೆ । ಬರುವಂದವನನುಕರಿಸಿದೆನು ॥ ೩ ॥

ವದು. ಇಲ್ಲಿ ಸ್ವಲ್ಪಹೊತ್ತು ಕುಳಿತು, ಪುಷ್ಪಯುಕ್ತವಾದ ಲತೆಗಳನ್ನು ನೋಡುತ್ತ, ಊರ್ವಶೀ ವಿರಹದಿಂದುಂಟಾದ ತಾಪವನ್ನು ಸ್ವಲ್ಪ ಪರಿಹಾರಮಾಡಿಕೊ.

ರಾಜಂ.—ಹಾಗಾಗಲಿ. (ಎಂದು ವಿದೂಷಕನೊಡನೆ ಕೂತುಕೊಂಡು.) (ನಿಟ್ಟುಸುರುಬಿಟ್ಟು)

ಕಂ ॥ ಆಲಲಿತಾಂಗಿಯರೂಪವ ।
ನಾಲೋಕಿಸಿದೆನ್ನ ದೃಷ್ಟಿನುಣ್ಗವಲಿಡಿದು ॥
ನ್ಮೀಲಿತಸುಮಂಗಳಾದೊಡ ।
ವಿಾಲತೆಗಳನೋಡಿನಾಡೆನಲವಾಂತಪುದೇ ॥ ೮

ಆದ್ದರಿಂದ ನನ್ನ ಇಷ್ಟಸಿದ್ಧಿಯಾಗುವದಕ್ಕೆ ತಕ್ಕ ಉಪಾಯವನ್ನು ಯೋಚಿಸು.

ವಿದೂ.—(ನಕ್ಕು) ಸರಿಯೆ! ಅಹಲ್ಯಾ ಕಾಮುಕನಾದ ದೇವೇಂದ್ರನಿಗೂ ಊರ್ವಶೀಕಾಮುಕನಾದ ನಿನಗೂ ತಾಪಪರಿಹಾರೋಪಾಯವನ್ನು ಚಿಂತಿಸತಕ್ಕವರು ಹುಚ್ಚರೇ ಸರಿ!

ರಾಜಂ.—ಅತಿಸ್ನೇಹವೆಂಬುವದು ಅಸಾಧ್ಯವಾದ ಕಾರ್ಯಕ್ಕಾದರೂ ಮಾರ್ಗವನ್ನು ತೋರಿಸುವದಲ್ಲವೆ?

ವಿದೂ—ಆಗಲಿ, ಯೋಚಿಸುತ್ತೇನೆ. ಆದರೆ ನೀನು ಸುಮ್ಮನೆ ಗೋಳಾಡುತ್ತ ನನ್ನ ಮನಸ್ಸನ್ನು ಕಳವಳ ಪಡಿಸಬೇಡ.

ರಾಜಂ.—(ಸಂತೋಷಭಾವವನ್ನು ನಟಿಸಿ ತನ್ನಲ್ಲಿತಾನು)

ವೃ ॥ ಆ ಕಾಂತೆ ಚಂದ್ರಮುಖಿ ದುರ್ಲಭೆ ಯಾಗಿತೋರ್ಕ್ಕು ।
ಮಾಕಾಮಚೇಷ್ಟೆನುಡಿಯುಲ್ಕರಿದಾಗಿತೋರ್ಕ್ಕುಂ ॥
ಸ್ವಾಕಾಂಕ್ಷಿತಾರ್ಥನಿದಿರಿರ್ಪವೊಲೆನ್ನ ಚಿತ್ತ ।
ಮಾಕಸ್ಮಿಕಪ್ರಮದಮಂತಳೆಯುತ್ತಮಿರ್ಕ್ಕುಂ ॥ ೯

(ಎಂದು ಸಾಭಿಲಾಷನಾಗಿರಲು, ಆಕಾಶಯಾನದಿಂದ ಊರ್ವಶೀ ಚಿತ್ರಲೇಖೆಯರು ಪ್ರವೇಶಿಸುವರು.)

ಚಿತ್ರ.—*ಎಲೆ ಸಖಿ ಊರ್ವಶಿ ನೀನು ನಿರ್ನಿಮಿತ್ತವಾಗಿ ಎಲ್ಲಿಗೆ ಹೊರಟೆ?

ಊರ್ವ.—ಎಲೆ ಚಿತ್ರಲೇಖೆ ಹೇಮಕೂಟಶಿಖರದಲ್ಲಿ ಒಂದು ಬಳ್ಳಿಯಕ ವಲಿಗೆ ನನ್ನ ಮುತ್ತಿನಮಾಲಿಕೆ ಸಿಕ್ಕಿಕೊಂಡಿರಲು, ಇದನ್ನು ಸ್ವಲ್ಪ ಬಿಡಿಸೆಂದು ನಿನಗೆ ನಾನು ಹೇಳಿದಾಗ ನೀನು ನನ್ನನ್ನು ಹಾಸ್ಯಮಾಡಲಿಲ್ಲವೆ? ಈಗ ಯಾತಕ್ಕೆ ಹೀಗೆಕೇಳುವೆ?

ಚಿತ್ರ.—ಹಾಗಾದರೇನು ರಾಜರ್ಷಿಯಾದ ಆ ಪುರೂರವನ ಬಳಿಗೆ ಹೊರಟೆಯೊ?

ಊರ್ವ.—ಹೌದು, ಇದು ಅದೇ ಪ್ರಯತ್ನ; ಆದರೆ ಈವಿಷಯದಲ್ಲಿ ಲಜ್ಜೆಯನ್ನು ಮನ್ನಿಸಿರುವೆನು.

ಚಿತ್ರ.—ಒಳ್ಳೇದು, ಮೊದಲು ಅಲ್ಲಿಗೆ ಯಾರನ್ನು ಕಳುಹಿಸಿರುವೆ?

ಊರ್ವ.—ಮನಸ್ಸನ್ನು ಕಳುಹಿಸಿದೇನೆ.

ಚಿತ್ರ.—ಚೆನ್ನಾಗಿ ಯೋಚಿಸಿದೆ. ಅಲ್ಲಿಗೆ ಹೋಗುವದಕ್ಕೆ ನಿನಗೆ ಅಪ್ಪಣೆಯನ್ನು ಕೊಟ್ಟವರು ಯಾರು?

ಊರ್ವ.—ಪೂಜ್ಯನಾದ ಮನ್ಮಥನು.

ಚಿತ್ರ.—ಇದಕ್ಕೆ ಪ್ರತಿವಚನವಿಲ್ಲ.

---

*॥ ರಾಗ—ದೇವಗಾಂಧಾರಿ ॥ ॥ ಮಿಶ್ರಛಾಪು ॥

ಚಿತ್ರ.—ಓಸಖಿಮಂದಯಾನೆ । ಯಾಸಾಬ್ಜವದನೆ ॥ ಪ ॥ ಕಾರಣವಿಲ್ಲದೆ । ಸಾರುವೆಯೆಲ್ಲಿಗೆ । ನಾರಿಮಾಜದೆ ಪೇಳೆನಗೆ ॥ ೧ ॥

ಊರ್ವ.—ಹೇಮಕೂಟದಲತೆ । ಗೀಮಾಲೆಸಿಕ್ಕಿರೆ । ಏಮಾತನುಸುರ್ದೆ ಪೇಳದನು ॥ ೨ ॥

ಚಿತ್ರ.—ತಿಳಿದೆನಂತಾದೊಡೆ । ಕೆಳದಿಯಾಭೂಪನ । ಬಳಿಗೀಗಮುಧವಿನೀಂತಳರ್ವೆ ॥ ೩ ॥

ಊರ್ವ.—ಎಲೆಕೆಳದಿ ನಾವು ಯಾವಮಾರ್ಗದಲ್ಲಿ ಹೊರಟರೆ ದೈತ್ಯ ಬಾಧೆ ಮುಂತಾದ ಅಡ್ಡಿಯಿಲ್ಲದೆ ಅಲ್ಲಿಗೆ ತಲಪುವೆವು ?

ಚಿತ್ರ.—ಯಾತಕ್ಕೆ ಹೀಗೆ ಅಳುಕುತ್ತೀಯೆ ? ನಮಗೆ ದೇವಗುರುಗಳು ಉಪದೇಶಿಸಿರುವ ಅಪರಾಜಿತೆಯೆಂಬ ಕೇಶಬಂಧನ ವಿದ್ಯೆಯಿಂದ ನಾವೆಲ್ಲಿಹೋದಾಗ್ಯೂ ದೈತ್ಯರು ನಮ್ಮ ಗೋಜಿಗೆ ಬರಲಾರರಷ್ಟೆ ?

ಊರ್ವ.—ಓಹೊ! ಹೌದು ಹೌದು, ಈಗ ನನ್ನ ಸ್ಮರಣೆಗೆ ಬಂತು ನಡೆ ಹೋಗೋಣ. (ಎಂದು ಸಿದ್ಧಮಾರ್ಗದಲ್ಲಿ ಸಂಚಾರವನ್ನು ನಟಿಸುವರು.)

ಚಿತ್ರ.—ಎಲೆ ಸಖಿ ಇದೊ ನೋಡು, *ಯಮುನಾ ಸಂಗಮದಿಂದ ಪಾವನವಾದ ಗಂಗಾನದಿಯಲ್ಲಿ ತನ್ನ ಸೌಂದರ್ಯವನ್ನು ನೋಡಿಕೊಳ್ಳುತ್ತಿದೆಯೋ ಎಂಬಂತೆ ತೋರುತ್ತಿರುವ ಪ್ರತಿಷ್ಠಾನನಗರಕ್ಕೆ ಶಿಖಾಭರಣಪ್ರಾಯವಾದ ಆ ರಾಜರ್ಷಿಯ ಅರಮನೆಗೆ ಬಂದೆವು.

ಊರ್ವ.—(ಕುತೂಹಲದಿಂದ ನೋಡಿ) ಇದನ್ನು ಸ್ಥಾನಾಂತರವನ್ನು ಹೊಂದಿದ ಸ್ವರ್ಗವೆಂದೇ ಹೇಳಬೇಕು. (ಯೋಚಿಸಿ) ಸಖಿ ನನ್ನ ವಿಪತ್ತನ್ನು ಪರಿಹಾರಮಾಡಿದ ಆ ಮಹಾರಾಜನು ಈಗೆಲ್ಲಿರಬಹುದು ?

ಚಿತ್ರ.—ನಂದನವನಕ್ಕೆ ಸಮಾನವಾದ ಈ ಉಪವನದಲ್ಲಿ ಇಳಿದು ವಿಚಾರಿಸಿ ತಿಳಿಯೋಣ ನಡೆ. (ಇಳಿಯುವರು).

ಚಿತ್ರ.—(ರಾಜನನ್ನು ನೋಡಿಸಂತೋಷದಿಂದ) ಎಲೆ ಊರ್ವಶಿ ಇದೋ ನೋಡು, ಆ ಮಹಾರಾಜನು ನಿನ್ನೊಡನೆ ಸೇರದೆ ಚಂದ್ರಿಕೆಯೊಡನೆ ಕೂಡದೆ ಇರುವ ಶುಕ್ಲಪಕ್ಷದ ಪಾಡ್ಯಮಿ ಚಂದ್ರನಂತೆ ಕಾಣುತ್ತಿರುವನು. ಆದರೆ ಆಗ್ಯೆ ಈಗ್ಯೆ ರೂಪದಲ್ಲಿ ಏನೋ ಸ್ವಲ್ಪ ವಿಶೇಷ ತೋರುತ್ತಿರುವದು.

---

* ॥ ರಾಗ—ಜಂಝೋಟಿ ॥ ॥ ಆದಿತಾಳ ॥

ರಾರಾಜಿಸುವದು । ಆರಾಜಗೃಹವಿದು ॥ ಪ ॥ ಧರೆಗಿಳಿದೈತಂ । ದಿರುವಸಾಕ್ಷಾತ್ಸುರಂ । ದರನರಮನೆಯಾ । ತೆರದೊಳು ಮುಂಗಡೆ ॥ ೧ ॥ ತನ್ನಯರೂಪವಿ । ಯನ್ನದಿಯೆಂಬುವ । ಕನ್ನಡಿಯಲ್ಲಿತಾಂ ! ಚೆನ್ನಾಗಿ ನೋಳ್ಪವೋಲ್ ॥ ೨ ॥ ಭೂಪುಭೂಷಿಪ್ರತಿ । ಷ್ಠಾಪುರಶಿರೋಮಣಿ ! ರೂಪಮಾಡಿದನು ನಾ । ನೇಪೊಗಳುವೆನು ॥ ೩ ॥

ಚಿತ್ರ.—ನೀನು ಹೇಳಿದ್ದು ಯುಕ್ತ.

ಊರ್ವ.—ನಾವು ಮಾಯಾಪ್ರಭಾವದಿಂದ ಯಾರಿಗೂ ಕಾಣಿಸಿಕೊಳ್ಳದೆ ನಿಂತು ವಿಜನವಾದ ಈ ಪ್ರದೇಶದಲ್ಲಿ ಮಿತ್ರನೊಡನೆ ಆಡುವ ಈತನ ಮಾತುಗಳನ್ನು ಕೇಳೋಣ. (ಹಾಗೆ ನಿಲ್ಲುವರು).

ವಿದೂ.—ಮಹಾರಾಜನೆ, ದುರ್ಲಭಳಾದ ಆ ಸ್ತ್ರೀಯು ನಿನ್ನ ಕೈಸೇರು ವಂತೆ ಒಂದುಪಾಯವನ್ನು ಯೋಚಿಸಿರುವೆನು.

(ರಾಯನು ಸುಮ್ಮನಿರುವನು.)

ಊರ್ವ.—ಇವನು ಚಿಂತಿಸತಕ್ಕ ಧನ್ಯಳಾದ ಸ್ತ್ರೀಯಾರು ?

ಚಿತ್ರ.—ಯಾತಕ್ಕೋಸ್ಕರ ಮಾನವರಂತೆ ನಟಿಸುವೆ ? ಪ್ರಭಾವದಿಂದ ತಿಳಿಯುವ ಶಕ್ತಿ ನಿನಗಿಲ್ಲವೆ ?

ಊರ್ವ.—ವಿರಹದಿಂದ ಮೂಢಳಾದ ನನಗೆ ಈಗ ಜಾಗ್ರತೆಯಾಗಿ ಪ್ರಭಾವದಿಂದ ತಿಳಿಯುವ ಶಕ್ತಿಯೂ ಇಲ್ಲ.

ವಿದೂ.—ಮಹಾರಾಜನೆ ನಾನೊಂದುಪಾಯವನ್ನು ಯೋಚಿಸಿರುವೆನೆಂದು ಆಗಲೇ ಹೇಳಲಿಲ್ಲವೆ ? ಯಾತಕ್ಕೋಸ್ಕರ ಅದನ್ನು ಕೇಳದೆ ಸುಮ್ಮನಿರುವೆ ?

ರಾಜಂ.—ಅದೇನು ಹೇಳು.

ವಿದೂ.—ಅದೇನೆ ! ನಿದ್ರೆಮಾಡುತ ಆಕೆಯನ್ನು ಸ್ವಪ್ನದಲ್ಲಿ ಕಾಣುವದೊಂದು ; ಇಲ್ಲದೇಹೋದರೆ, ಆಕೆಯನ್ನು ಚಿತ್ರದಲ್ಲಿ ಬರದು ಪತ್ತರದಲ್ಲಿಟ್ಟುಕೊಂಡು ನೋಡುವದೊಂದು.

ಊರ್ವ.—ಎಲೆ ಮನಸ್ಸೆ ಸ್ವಲ್ಪ ಕಳವಳಪಡದಿರು.

ರಾಜಂ.—ನೀನು ಹೇಳಿದ್ದೆರಡೂ ಕೂಡುವದಿಲ್ಲ.

ವೃ॥ ಮನಸಿಜನುಗ್ರಬಾಣವೊಳಪೊಕ್ಕಿರೆಸಂತತಮೆನ್ನಚಿತ್ತಮಂ ।
ಕನಸಿನೊಳಾದೊಡಂಪ್ರಿಯೆಯನೀಕ್ಷಿಪೆನೆಂದೊಡೆನಿದ್ರೆಬಾರದಾ ॥
ಯಿನಿಯಳಭಾವಮಂಬರೆದುಚಿತ್ರದೊಳೀಕ್ಷಿಪೆನೆಂದೊಡೆನ್ನಲೋ ।
ಚನಮನೆಮೀರಿಬಪ್ಪ್ರಬಿಸುಗಂಬನಿತುಂಬದೆಮಾಣದಕ್ಕಟಾ ॥ ೧೦

ಚಿತ್ರ.—ಎಲೆ ಕೆಳದಿ ಈ ಮಾತನ್ನು ಕೇಳಿದೆಯಾ ?

ಊರ್ವ.—ಕೇಳಿದೆ; ಆದರೆ ನನ್ನ ಮನಸ್ಸಿಗೆ ಇನ್ನೂನಂಬಿಕೆ ಸಾಲದು.

ವಿದೂ.—ಇಷ್ಟೇ ನನ್ನ ಬುದ್ಧಿಶಕ್ತಿ.

ರಾಜಂ.—(ನಿಟ್ಟುಸುರುಬಿಟ್ಟು)

ವೃತ್ತ॥ ತಿಳಿದಿಲ್ಲಕ್ಕ್ಕುಗುಮೆನ್ನ ಚಿತ್ತದಳಲಂ ಸ್ತ್ರೀರತ್ನಮಾಕಾಂತೆಮೇಣ್ ।
ತಿಳಿದೆನ್ನೊಲ್ಮೆಯ ಮೈಮೆಯಿಂದೆಕಡೆಗಣ್ಬುತ್ತಿರ್ಪಳೋಕಾಣೆನಾಂ
ಫಲಮುಂ ತೋರದೆನೀರಸಂಗಳಹತಲ್ಲಾಭೋತ್ಸವಾಕಾಕ್ಷಿತಂ ।
ಗಳನಿಂತೆನ್ನೊಳಗಾಗಿಸಿರ್ಪವಿಷಮಾಸ್ತ್ರಂಪೊಂದುಗಾನಂದಮಂ ॥ ೧೧

ಚಿತ್ರ.—ಸಖಿ ಈಮಾತನ್ನು ಕೇಳಿದೆಯಾ ?

ಊರ್ವ.—ಅಯ್ಯೋ ! ನನ್ನನ್ನೂಹೀಗೆ ತಿಳಿದುಕೊಂಡನೆ ? ಎಲೆ ಚಿತ್ರಲೇಖೆ ಈಸಮಯದಲ್ಲಿ ಎದುರಿಗೆ ಹೋಗಿ ನಿಂತು ಉತ್ತರವನ್ನು ಹೇಳುವದಕ್ಕೆ ಲಜ್ಜೆಪಡುವೆನು. ಆಗಲಿ, ಪ್ರಭಾವದಿಂದ ಒಂದು ಭುಜಪತ್ರವನ್ನು ನಿರ್ಮಿಸಿ ಅದರಲ್ಲಿ ಆತನಿಗೆ ಉತ್ತರವನ್ನು ಕೊಡುವೆನು.

ಚಿತ್ರ.—ಇದು ನನಗೊಪ್ಪಿತು.

ಊರ್ವ.—(ಭುಜಪತ್ರವನ್ನುತೆಗೆದುಕೊಂಡು ಬರೆದು ರಾಯನಸಮೀಪದಲ್ಲಿ ಹಾಕುವಳು.)

ವಿದೂ.—(ನೋಡಿತ್ವರೆಯಿಂದ) ಅಯ್ಯೋ ! ಅಯ್ಯೋ ! ಇದೇನು ಹಾವಿನ ಪರೆಯಂತೆ ನಮ್ಮಮುಂದೆ ಬಿತ್ತು !

ರಜಂ.—(ಚನ್ನಾಗಿನೋಡಿ) ಭಯಪಡಬೇಡ ಇದು ಹಾವಿನಪರೆಯಲ್ಲ, ಏನೋ ಬರದಿರತಕ್ಕ ಭುಜಪತ್ರ.

॥ ರಾಗ—ತೋಡಿ ॥ ॥ ರೂಪಕತಾಳ ॥

ಎಂತು ಸೈಸುವೆ । ಕಂತುತಾಪವ ॥ ಪ ॥ ಅರಿಯಳಾಕೆ ನಾನು ಮನದಿ । ಮರುಗುವದನುಮೈಮೆಯಿಂದ । ಅರಿದದೊಮ್ಮೆನನ್ನೊಳನಾ । ದರವಗೈವಳೇನೊಕಾಣೆ ॥ ೧ ॥ ಎನುವದೇನುಸಖನೆ ವಿಫಲ । ಮೆನಸಿದಾಸೆಯನ್ನುನನ್ನ । ಮನದೊಳಾಗಿಸಿರ್ಪಪಾಪಿ । ಮದನನಿರಲಿಸೌಖ್ಯದಿಂದ ॥ ೨ ॥

ವಿದೂ.—ಅಯ್ಯೋ ! ಆ ಊರ್ವಶಿ ನಿನ್ನ ಗೋಳಾಟವನ್ನು ಕೇಳಲಾರದೆ ತನ್ನ ಅನುರಾಗವನ್ನು ಸೂಚಿಸುವದಕ್ಕೆ ಈ ಭುಜಪತ್ರವನ್ನು ಬರೆದು ಬಿಸಾಡಿದಳೋ ಏನೊ !

ರಾಜಂ.—ಕೆಟ್ಟಮನೋರಥವು ಯಾವ ಅಸಾಧ್ಯವಿಷಯದಲ್ಲಿತಾನೇ ಪ್ರವರ್ತಿಸಲಾರದು.

(ಭುಜಪತ್ರವನ್ನು ತೆಗೆದುಕೊಂಡು ಓದಿ ಸಂತೋಷದಿಂದ)

ಮಿತ್ರನೆ ನಿನ್ನ ಊಹೆ ಸರಿಯಾದದ್ದು.

ವಿದೂ.—ಬ್ರಾಹ್ಮಣವಚನ ತಪ್ಪೀತೆ? ಬಳ್ಳೇದು ಇದರಲ್ಲಿ ಬರೆದಿರುವದನ್ನು ದಯವಿಟ್ಟು ಸ್ವಲ್ಪ ಓದು ಕೇಳೋಣ.

ಊರ್ವ.—ಚನ್ನಾಗಿ ಹೇಳಿದನು, ಈತನೀಗೆ ಬಹುಜ್ಞಾನ.

ರಾಜಂ.—ಮಿತ್ರನೇ ಕೇಳು. (ಪತ್ರಿಕೆಯನ್ನು ನೋಡುತ್ತ)

*ಕಂ ॥ ಎಂತರಿದಪೆನಾಂ ನಿನ್ನಂ ।
ಕಾಂತನೆನೀನಂತುಟೆನ್ನನರಿಯದೆಮನದೋ ॥
ಳಂತುವಿಭಾವಿಸಿದೊಡೆ ಹಾ ।
ಚಿಂತಿಸಲರಿದೆನ್ನಮಂದಭಾಗ್ಯತೆಯೆನಿತೋ ॥ ೧೦ ॥

ಇಳೆಯಣ್ಮನೆ ನಂದನವನ ।
ದೊಳಗೆನ್ನೊಡಲಿಂದೆಕಂದಿದಲರ್ವಾಸುಂಪ್ರ ॥
ಜ್ವಳನನವೋಲ್‌ಚುಚ್ಚರ್ವಕೋ ।
ಮಳಪವನನುಮೆನ್ನತಾಪಮಂತಿಳಿದಿಕ್ಕರ್ಗಂ ॥ ೧೩ ॥

---

* ॥ ರಾಗ—ಜಂಗಲ ॥ ॥ ಏಕತಾಳ ॥

ಕಾಂತನೆನಿನ್ನೊಳದೆಂತನುರಾಗವ । ನಾಂತಳೆದಿಹೆನೀಗಳ್ ॥ ಅಂತೆನ್ನೊಳುನೀನಾಂತನುರಾಗವ । ನಾಂತಿರ್ಪೆಯೆನು ಮನದೊಳ್ ॥ ೧ ॥ ನಲ್ಲನೆದಿವಿಜರ ವಲ್ಲಭನುಪವನ । ದಲ್ಲಿಹಕಲ್ಪಲತಾ । ಪಲ್ಲವತಲ್ಪವು ಬಲ್ಲದದೆನ್ನಯ । ಫುಲ್ಲಶರಾರ್ತಿಯನು ॥ ೨ ॥

ಊರ್ವ.—ಈಗ ಏನು ಹೇಳುವನೊ ! ನೋಡಬೇಕು.

ಚಿತ್ರ.—ಎಲೆ ಸಖಿ ವಿರಹದಿಂದ ತಾವರೇದಂಟಿನಂತೆ ಬೆಳ್ಳಗಿರುವ ಈತನ ಅಂಗಗಳನ್ನು ನೋಡಿದಮೇಲೆ ಮುಂದೆ ಹೇಳತಕ್ಕದ್ದು ತಿಳಿದೇ ಇದೆ.

ವಿದೂ.—ಎಲೈ ಮಹಾರಾಜನೆ ಹಸಿದಿರತಕ್ಕ ನನಗೆ ಸ್ವಸ್ತಿವಾಚನೆ ಸಿಕ್ಕಿದಂತೆ ದೈವಯೋಗದಿಂದ ನಿನ್ನ ಮನಸ್ಸಿನ ಸಮಾಧಾನಕ್ಕೆ ಕಾರಣವಾದ ಈ ಭುಜಪತ್ರವು ನಿನಗೆ ಸಿಕ್ಕಿತು.

ರಾಜಂ.—ಇದು ಸಿಕ್ಕಿದ್ದರಿಂದ ನನ್ನ ಮನಸ್ಸಿಗೆ ಸಮಾಧಾನವೊಂದೇ ಅಲ್ಲ.

ಕಂ॥ ಇನಿಯಳಲಲಿತಾರ್ಥನಿಬಂ ।
ಧನಮಿಾಲೇಖಂಸಮಾನುರಾಗಕ್ಕೆನಿದ ॥
ರ್ಶನಮಿದನೆನಿಟ್ಟಪೆನ್ನಾ ।
ನನಕಾಮದಿರಾಕ್ಷಿಮುತ್ತನಿಟ್ಟಂತೆಣಿಪೆಂ ॥

ಊರ್ವ.—ಈಗಲೀಗ ನಮ್ಮಿಬ್ಬರ ಅನುರಾಗವೂ ಸಮಾನವಾದದ್ದೆಂದು ತಿಳಿಯಬಂತು.—

ರಾಜಂ.—ಮಿತ್ರನೆ ನನ್ನ ಕೈಬೆವರಿಂದ ಆಕೆಯ ಸ್ವಹಸ್ತಾಕ್ಷರಗಳು ಅಳಿಸಿ ಹೋದಾವು. ಈ ಪತ್ರಿಕೆ ನಿನ್ನ ಕೈಯಲ್ಲಿರಲಿ.

ವಿದೂ.—(ಪತ್ರಿಕೆಯನ್ನು ತೆಗೆದುಕೊಂಡು) ಮಹಾರಾಜನೆ ಆ ಮಾನ್ಯಳಾದ ಊರ್ವಶಿಯು ನಿನ್ನ ಮನೋರಥವೆಂಬ ವೃಕ್ಷಕ್ಕೆ ಪುಷ್ಪವನ್ನುಕಾಣಿಸಿ ಫಲವನ್ನುತೋರಿಸುವದಕ್ಕೆ ಯಾತಕ್ಕೋಸ್ಕರ ಸಾವಕಾಶ ಮಾಡುವಳು ?

ಊರ್ವ.—ಎಲೌ ಚಿತ್ರಲೇಖೆ ಈತನನ್ನು ಸೇರುವದಕ್ಕೆ ಕಾತರಪಡುತ್ತಿರುವ ನನ್ನ ಮನಸ್ಸನ್ನು ಸಮಾಧಾನ ಪಡಿಸುವಷ್ಟರಲ್ಲಿ ನೀನು ಈತನ ಸಮಿಾಪಕ್ಕೆ ಹೋಗಿ ನನ್ನ ವಿಷಯದಲ್ಲಿ ಉಚಿತವಾದ ಮಾತುಗಳನ್ನಾಡು.

ಚಿತ್ರ.—ಹಾಗೇ ಆಗಲಿ. (ಎಂದು ರಾಯನ ಸಮಿಾಪಕ್ಕೆ ಬಂದು) ಎಲೈ ಮಹಾರಾಜನೆ ಜಯಶೀಲನಾಗು.

ರಾಜಂ.—(ಆದರಾತಿಶಯದಿಂದ) ಎಲೆ ಮಂಗಳಾಂಗಿ ನಿನಗೆ ಸುಖಾಗಮ ನವೆ? (ಚಿತ್ರಲೇಖೆಯ ಪಾರ್ಶ್ವವನ್ನು ನೋಡಿ)—

ಕಂ ॥ ಸಂಗಮದೊಳ್ ಮುನ್ನೋಡಿದ ।
ಗಂಗೆಯನುಳದಿರ್ಪ್ಪಯಮುನೆಯಂತಿರೆ ನೀಂ ಸಾ ॥
ರಂಗಾಕ್ಷಿ ನಿನ್ನ ಕೆಳದಿಯ ।
ಸಂಗವನುಳದೆನ್ನನಂತು ತೋಷಿಪುದಿಲ್ಲಂ ॥ ೧೫ ॥

ಚಿತ್ರ.—ಮುಗಿಲನ್ನು ಕಂಡವೋಲಲ್ಲವೆ? ಮಿಂಚನ್ನು ಕಾಣುವದು.

ವಿದೂ.—(ಮರೆಯಲ್ಲಿ) ಇದೇನು ಈಕೆ ಊರ್ವಶಿಯಲ್ಲವೊ! ಊರ್ವಶಿಗಿ ಷ್ಟಳಾದ ಸಖಿಯೊ! ನಾನೀಕೆಯನ್ನೇ ಊರ್ವಶಿಯೆಂದು ತಿಳದಿದ್ದೆನಲ್ಲಾ!

ರಾಜಂ.—ಎಲೆ ಮಂಗಳಾಂಗಿ ಈ ಪೀಠದಲ್ಲಿ ಕುಳಿತುಕೊ.

ಚಿತ್ರ.—ಮಹಾರಾಜನೆ ಊರ್ವಶಿಯ ನಮಸ್ಕಾರಪೂರ್ವಕವಾದ ಒಂದು ವಿಜ್ಞಾಪನೆಯುಂಟು ಅದನ್ನು ಲಾಲಿಸಬೇಕು.

ರಾಜಂ.—ಏನಾಜ್ಞಾಪಿಸುವಳು?

ಚಿತ್ರ.—ಮೊದಲು ಆಕೆಗೆ ರಾಕ್ಷಸರಿಂದುಂಟಾದ ಬಾಧೆಯು ಮಹಾರಾಜ ನಾದ ನಿನ್ನಿಂದ ಪರಿಹಾರವಾಯಿತು. ನಿನ್ನನ್ನು ನೋಡಿದಾರಭ್ಯ ಆಕೆ ಮನ್ಮಥನಿಂದ ಅತ್ಯಂತ ಪೀಡಿತಳಾಗಿ ಈ ಬಾಧೆಯನ್ನೂ ಮಹಾರಾಜನೇ ದಯವಿಟ್ಟು ಪರಿಹರಿಸಬೇಕೆಂದು ವಿಜ್ಞಾಪಿಸುವಳು.

ರಾಜಂ.—ಎಲೆ ಸಖಿ,—

---

*॥ ರಾಗ—ಬೇಹಾಗು ॥ ॥ ರೂಪಕತಾಳ ॥

ಆಲಿಪುದೆಲೆ ರಮಣೀ ಕುಲಮಣಿಯೇ ॥ ಪ ॥ ಒರೆವೆನಿನ್ನ ಕೆಳದಿಗೆನ್ನೊ । ಳಿರ ವರಾಗವ । ನೀ । ನರಿಯೆನಾನವಳಸೇರೆ । ಮರುಗುತಿರುವುದ ॥೧॥ ಎಂತುಟೆನ್ನೊಳಿರ್ಪ ದಾ । ಕಾಂತೆಗಾಸೆಯು ॥ ನಾ । ನಂತುಟೀಗಳವಳೊಳಾಸೆ । ಯಾಂತಿರುತಿಹೆನು ॥ ೨ ॥ ಸ್ಮರಸಮರ್ಥನವ್ವಿ । ರ್ವರನುಘಟಿಸಲು ॥ ಕಾದಿರುವಲೋಹಗಳನುಕಂ । ಮರನುಘಟಿ ಪೊಲು ॥ ೩ ॥

ವೃತ್ತ॥ ಅರಮಣೀಶಿರೋಮಣಿಯಳುಬ್ಬೆಗವೊಂದನೆಪೇಳುತಿರ್ಪ್ಪೆ ತ।
ತ್ಕಾರಣಮಪ್ಪ ಮದ್ವಿಷಮತಾಪವನೀತಕೆನೋಡದಿರ್ಪ್ಪೆಸಾ ॥
ಧಾರಣಮಾದುದೆಮ್ಮುಭಯರೊಲ್ಮೆಯುಮುಜ್ಜುಗಿಸೆಮ್ಮನಿರ್ವ್ವರಂ।
ಸೇರಿಸೆತಪ್ತಲೋಹ ಮುಚಿತಂ ಘಟಿಸಲ್ಗಡತಪ್ತಲೋಹದೊಳ್ ॥ ೧೬ ॥

ಚಿತ್ರ.—(ಊರ್ವಶಿಯು ಸಮೀಪಕ್ಕೆ ಬಂದು) ಎಲೆ ಸಖಿ ಮನ್ಮಥನು ನಿನಗಿಂತಲೂ ನಿರ್ದಯನಾಗಿ ಈ ಮಹಾರಾಜನನ್ನು ಬಾಧಿಸುತ್ತಿರುವನು. ನಿನ್ನ ಪ್ರಿಯನಿಗೆ ನಾನು ದೂತಿಯಾಗಿರುವೆನು. ಬೇಗಬಾ.

ಊರ್ವ.—ಎಲೆ ಚಿತ್ರಲೇಖೆ ನೀನು ಸ್ವಲ್ಪವೂ ಯೋಚಿಸದೆ ಥಟ್ಟನೆ ನನ್ನನ್ನು ಬಿಟ್ಟು ಹೋಗಬಹುದೆ ?

ಚಿತ್ರ.—(ನಸುನಕ್ಕು) ಇನ್ನು ಸ್ವಲ್ಪಹೊತ್ತು ಹೋಗಲಿ, ಆಮೇಲೆ ಯಾರನ್ನು ಯಾರು ಬಿಡುವರೊ ತನಗೆತಾನೇ ಗೊತ್ತಾಗುವದು. ಆದರೆ ರಾಜಮರ್ಯಾದೆಯನ್ನು ಮೀರಿನಡದೀಯೆ.

ಊರ್ವ.—(ಲಜ್ಜೆಯಿಂದ ಬಂದು) ಮಹಾರಾಜನಿಗೆ ಜಯವಾಗಲಿ.

ರಾಜಂ.—(ಸಂತೋಷದಿಂದ)

ಕಂ॥ ಸುರಪತಿಗಲ್ಲದೆ ಮಿಕ್ಕಿನ।
ನರಪತಿಗಳ್ಗುಚಿತಮಲ್ಲದೀಜಯಪದಮಂ।
ತರುಣೀಮಣಿ ನೀನೆನಗು।
ಚ್ಚರಿಸಿದಕಾರಣದಿನಿಳೆಯೊಳಾಂಜಯಶಾಲೀ ॥ ೧೭ ॥

ಚಿತ್ರ.—(ಲಜ್ಜೆಯಿಂದ ತಲೆಬಾಗಿದ ಊರ್ವಶಿಯು ಮುಖವನ್ನೆತ್ತುವಳು.)

ವಿದೂ.—ಮಹಾರಾಜನಿಗೆ ಪ್ರಿಯಮಿತ್ರನಾದ ಬ್ರಾಹ್ಮಣನಿಗೆ ಸ್ವಲ್ಪ ನಮಸ್ಕಾರ ಮಾಡಕೂಡದೊ ?

ಊರ್ವ.—(ನಸುನಕ್ಕು ನಮಸ್ಕರಿಸುವಳು.)

ವಿದೂ.—ಕಲ್ಯಾಣಮಸ್ತು ಕಲ್ಯಾಣಮಸ್ತು.

ತೆರೆಯಲ್ಲಿ.—ಚಿತ್ರಲೇಖೆ ಊರ್ವಶಿಯನ್ನು ತ್ವರೆಗೊಳಿಸು ತ್ವರೆಗೊಳಿಸು.

ಕಂ ॥ ಭರತಮಹಾಮುನಿ ನಿಮಗ ।
ಷ್ಟ ರಸಾಶ್ರಯಮೆನಿಸಿದಾವ ರೂಪಕಮಂಬಂ ॥
ಧುರಮೆನೆ ಕಲಿಸಿರ್ಪನೊ ಇಂ ।
ದಿರನದನೀಕ್ಷಿಸೆ ದಿಗೀಶರೊಡನೆಳಸಿದಪಂ ॥ ೧೮ ॥

(ಎಲ್ಲರೂ ಕೇಳುವರು.)

ಊರ್ವ.—(ವಿಷಾದವನ್ನು ನಟಿಸುವಳು)

ಚಿತ್ರ.—ಎಲೆ ಸಖಿ ದೇವದೂತನ ಮಾತನ್ನು ಕೇಳಿದೆಯಾ ? ಇನ್ನು ಹೊರಡುವದಕ್ಕೆ ಮಹಾರಾಜನ ಸಂಮತಿಯನ್ನು ಕೇಳು.

ಊರ್ವ.—(ನಿಟ್ಟುಸುರು ಬಿಟ್ಟು) ಹ್ಯಾಗೆತಾನೇ ಕೇಳುವದಕ್ಕೆ ನನಗೆ ಬಾಯಿ ಬಂದೀತು.

ಚಿತ್ರ.—ಮಹಾರಾಜನೆ ಊರ್ವಶಿಯು ತಾನು ಪರಾಧೀನಳಾದ್ದರಿಂದ ಮಹೇಂದ್ರನ ಆಜ್ಞೆಯನ್ನು ಮೀರದೆ ಇರುವದಕ್ಕಾಗಿ ನಿನ್ನಪ್ಪಣೆಯಾದರೆ ಹೋಗಿಬರುವೆನೆಂದು ವಿಜ್ಞಾಪಿಸುವಳು.

*ರಾಜಂ.—(ಅತಿಪ್ರಯಾಸದಿಂದ ಮಾತನ್ನು ಸ್ವಾಧೀನಪಡಿಸಿಕೊಂಡು) ನೀವು ಸ್ವಾಮಿಯಾಜ್ಞೆಯನ್ನು ಅನುವರ್ತಿಸುವದಕ್ಕೆ ನಾನು ಅಡ್ಡಿ ಮಾಡತಕ್ಕದ್ದಲ್ಲ. ಆದರೆ ನನ್ನನ್ನು ಮರೆಯಕೂಡದು.

ಊರ್ವ.—(ವಿಯೋಗದುಃಖವನ್ನು ನಟಿಸುತ್ತ ರಾಯನನ್ನು ನೋಡುತ್ತ ಸಖಿಯೊಡನೆ ತೆರಳಿದಳು.)

---

*॥ ರಾಗ—ತೋಡಿ ॥ ॥ ರೂಪಕತಾಳ ॥

ಮನೋಹರಾಂಗಿಯಿಂತು ನೀನು ನುಡಿಯಲೇವೇಳ್ವೆಹಾಹಾ ॥ ಪ ॥ ವನೇಜನೇತ್ರಿ ಪಾಪಿಯಾದ ದೈವವೆನ್ನಯ ॥ ಮನೋರಥಕ್ಕೆ ಪೂವತೋರಿ ಫಲವತೋರದಾದುದು ॥ ೧ ॥ ಸುರಾಧಿರಾಜನಾಜ್ಞೆಯನ್ನು ಮೀರದಂದದಿ ॥ ತೆರಳ್ವುದೀಗನನ್ನ ಮರೆಯಲಾಗದು ನೀವಿರ್ವರು

ಕಂ ॥ ಉದಿಸಿದ ರಾಕಾಚಂದ್ರನ ।
ಮುದದಿಂಡೆಚಕೋರಿನೋಡುತಿಹಸಮಯದೆನೀ ॥
ರದವೇಳ್ತಂದದಮುಚ್ಚಿದ ।
ಕದನಾಯ್ತೇನೆಂಬೆನೆನ್ನವಸ್ಥೆಯನಕಟಾ ॥

ರಾಜಂ.—(ನಿಟ್ಟುಸುರುಬಿಟ್ಟು) ಮಿತ್ರನೆ ಈಗ ನನ್ನ ಕಣ್ಣುಗಳುವ್ಯರ್ಥ ವಾದವು.

ವಿದೂ.—(ಭುಜಪತ್ರವನ್ನು ತೋರಿಸುವದಕ್ಕೆ ಯತ್ನಿಸಿ) ಮಹಾರಾಜನೆ ಭುಜ (ಎಂದು ಅರ್ಧೋಕ್ತಿಯಲ್ಲಿ ತನ್ನಲ್ಲಿತಾನು) ಅಯ್ಯೋ! ನಾನು ಆ ಊರ್ವಶಿಯ ರೂಪಾತಿಶಯವನ್ನು ಆಶ್ಚರ್ಯಪಟ್ಟು ನೋಡುತ್ತಿದ್ದಾಗ ಆಭುಜಪತ್ರ ವೆಲ್ಲೋನನ್ನ ಕಯ್ಯಿಂದ ತಪ್ಪಿಸಿಕೊಂಡು ಹೋಯಿತು. ನನಗೆ ಗೊತ್ತೇ ಆಗಲಿಲ್ಲ. ಇನ್ನೇನುಗತಿ!

ರಾಜಂ.—ಏನಯ್ಯಾ! ಏನೋ ಮಾತನಾಡುವದಕ್ಕೆ ಉಪಕ್ರಮಿಸಿದ ಹಾಗಿತ್ತು.

ವಿದೂ.—ನಾನು ಮಾತನಾಡುವದಕ್ಕುಪಕ್ರಮಿಸಿದ್ದೆ? ನೀನೇತಕ್ಕೆ ಸುಮ್ಮನೆ ನಿನ್ನ ಅಂಗಗಳನ್ನು ನಿಂದಿಸಿಕೊಳ್ಳುವೆ ನಿನ್ನದುಃಖವನ್ನುಬಿಡು. ಆ ಊರ್ವಶಿ ನಿನ್ನಲ್ಲಿ ದೃಢವಾದ ಅನುರಾಗವುಳ್ಳವಳಾದ್ದರಿಂದ ಇಲ್ಲಿಂದ ಹೊರಟುಹೋದರೂ ಈ ಅನುಬಂಧವನ್ನು ಬಿಡತಕ್ಕವಳಲ್ಲವೆಂದು ಹೇಳು ವದಕ್ಕೆ ಉಪಕ್ರಮಿಸಿದೆ.

ರಾಜಂ.—ನನ್ನಭಿಪ್ರಾಯವೂ ಇದೇ; ಕೇಳು.—

ಕಂ॥ ತನುತನ್ನದಲ್ಲದುದರಿಂ।
ಪಸಿತಾಮಣಿಪ್ರೋಗುತ್ತಿತ್ತಣಿಂನಿಜಮನಮಂ॥
ಸ್ತನಕಂಪನದಿಂಸೂಚಿತ।
ಮೆನಿಸಿದನಿಟ್ಟುಸುರಿನೆನ್ನೊಳಿಟ್ಟಂತೆಣಿಪೆಂ॥ ೨೯॥

ವಿದೂ.—(ತನ್ನಲ್ಲಿತಾನು) ಇನ್ನು ಈ ಮಹರಾಯ ಭುಜಪತ್ರದ ಹೆಸರ ನ್ನೆಲ್ಲಿ ಎತ್ತುತಾನೋ ಎಂದು ನನಗೆ ದಿಗಿಲಾಗಿದೆ.

ರಾಜಂ.—ಮಿತ್ರನೆ ಈಗ ನನ್ನದೃಷ್ಟಿಯನ್ನು ಎಲ್ಲಿ ವಿನೋದ ಪಡಿಸಲಿ? (ಸ್ಮರಿಸಿಕೊಂಡು) ಆಹ! ಮರತಿದ್ದೆ; ಆ ಭುಜಪತ್ರವನ್ನಾದರೂ ತೋರಿಸು.

ವಿದೂ.—(ವ್ಯಸನವನ್ನು ನಟಿಸಿ) ಅಯ್ಯೋ! ಎಲ್ಲೋ ಕಾಣೆನಲ್ಲಾ! (ಅತ್ತಿತ್ತನೋಡಿ) ಮಹಾರಾಜನೆ ಆ ಭುಜಪತ್ರವು ದೇವಲೋಕದಿಂದ ಬಂದದ್ದಲ್ಲವೆ? ಆದ್ದರಿಂದ ಆ ವುರ್ವಶೀದಾರಿಯೆನ್ನೇ ಹಿಡಿದುಕೊಂಡು ಹೋಗಿರಬಹುದು.

ರಾಜಂ.—ಮೂರ್ಖ! ಎಲ್ಲಾ ಕೆಲಸಗಳಲ್ಲಿಯೂ ನೀನು ಅಜಾಗರೂಕನು, ಇತ್ತಲಾಗತ್ತಲಾಗಿ ಎಲ್ಲಿ ಬಿದ್ದಿರುವದೊ ಹುಡುಕೋಣ ನಡೆ.

(ಹುಡುಕುತ್ತ ಹೋಗುವರು)

(ಬಳಿಕ ಕಾಶೀರಾಜಪುತ್ರಿಯಾದ ಮಹಾರಾಣಿಯು ಪರಿಜನದೊಡನೆ ಪ್ರವೇಶಿಸುವಳು)

ರಾಣಿ.—ಎಲೆ ಚೇಟಿ ನಿಪುಣಿಕೆ ಆರ್ಯಪುತ್ರನು ಪೂಜ್ಯನಾದ ಮಾಣವಕನೊಡನೆ ಈ ಲತಾಮಂಟಪಕ್ಕೆ ಹೊರಟದ್ದ ಹಾಗೆ ಹೇಳಿದೆಯಷ್ಟೆ? ಆ ಮಾತು ನಿಜವೆ?

ನಿಪು.—ನಾನೆಂದಿಗಾದರೂ ಮಹಾರಾಣಿಗೆ ಸುಳ್ಳುಮಾತನ್ನು ತಿಳಿಸುವದುಂಟೆ?

ರಾಣಿ.—ಹಾಗಾದರೆ ಈ ಲತೆಯ ಮರೆಯಲ್ಲಿ ನಿಂತು ಆರ್ಯಪುತ್ರನು ಏನಾಲೋಚನೆ ಮಾಡುತ್ತಿರುವನೊ ಕೇಳೋಣ. ನೀನು ಹೇಳಿದ ಸಂಗತಿ ಹೌದೊ ಅಲ್ಲವೊ ಗೊತ್ತಾಗುವದು.

ನಿಪು.—ಮಹಾರಾಣಿಗೆ ತೋರಿದಂತಾಗಲಿ.

ರಾಣಿ—(ಸ್ವಲ್ಪನಡೆದು ಮುಂದೆನೋಡಿ) ನಿಪುಣಿಕೆ ಇದೇನು! ನೂತನವಾದ ನಾರುಮಡಿಯು ಚೂರಿನಂತೆ ದಕ್ಷಿಣದಿಕ್ಕಿನ ಗಾಳಿಯಿಂದ ತೂರಿಕೊಂಡು ಬರುತ್ತಿರುವದು.

ನಿಪು.—ಇದು ಭುಜಪತ್ರವು, ಗಾಳಿಮುಗುಚಿದಾಗ ಇದರಲ್ಲೇನೋ ಬರೆದಿರುವಹಾಗೆ ಕಾಣುವದು. ಓಹೋ! ಇದು ಮಹಾರಾಣಿಯ ಪಾದಾಭರಣಕ್ಕೆ ಬಂದು ತಗಲಿಕೊಂಡಿತು. (ಎಂದು ತೆಗೆದುಕೊಂಡು ಇದನ್ನು ಓದಬಹುದೆ?

ರಾಣಿ.—ಅದೇನು ಓದು ನೋಡೋಣ ವಿರೋಧವಿಲ್ಲದಪಕ್ಷದಲ್ಲಿ ಕೇಳು ವೆನು.

ನಿಪು.—(ತಾನೇ ಓದಿಕೊಂಡು) ಮಹಾರಾಣಿಯೆ ಇದು ಅದೇ ಸಂಗತಿಗೆ ಸಂಬಂಧಪಟ್ಟದ್ದು, ಊರ್ವಶಿಯು ಮಹಾರಾಜನಿಗೆ ಪದ್ಯರೂಪವಾಗಿ ಬರ ದು ಕಳುಹಿಸಿದ ಪತ್ರಿಕೆಯಂತೆ ಕಾಣುತ್ತೆ. ಮಾಣವಕನ ಪ್ರಮಾದ ದಿಂದ ಇದೆಲ್ಲೊ ತಪ್ಪಿಸಿಕೊಂಡುಬಂದು ನಮ್ಮ ಕೈ ಸೇರಿತು.

ರಾಣಿ.—ಹಾಗಾದರೆ ಓದು ಆಕೆಯೇನು ಬರದಿರುವಳೊ ನೋಡೋಣ.

ನಿಪು.—ಅಪ್ಪಣೆ. (ಎಂದು ಎರಡು ಪದ್ಯಗಳನ್ನು ಓದುವಳು).

ರಾಣಿ.—(ಕೇಳಿ) ನಿಪುಣಿಕೆ ಇದನ್ನೇ ಕೈಗಾಣಿಕೆಯಾಗಿ ತೆಗೆದುಕೊಂಡು ಹೋಗಿ ಅಪ್ಸರಸ್ತ್ರೀ ಕಾಮುಕನಾದ ಆರ್ಯಪುತ್ರನನ್ನು ನೋಡೋಣ ನಡೆ.

ನಿಪು.—ಮಹಾರಾಣಿಯ ಅಪ್ಪಣೆಯಾದಂತಾಗಲಿ.

(ಎಂದು ಆ ಲತಾಮಂಟಪವನ್ನು ಬಳಸುವರು).

ವಿದೂ.—ಮಹಾರಾಜನೆ ಈ ಪ್ರಮದವನದ ಮಂದಮಾರುತವು ಆ ಭೂ ಜಪತ್ರವನ್ನು ತೆಗೆದುಕೊಂಡು ಹೋಗಿ ಈ ಕ್ರೀಡಾಪರ್ವತವನ್ನು ಸೇರಿಸಿ ರಬಹುದು.

ರಾಜಂ.—ಎಲೈ ಪೂಜ್ಯನಾದ—

*ವೃತ್ತ॥ ಮಲಯಸಮೀರಚೈತ್ರಸಖನೀಂ ನರುಗಂಪಿಗೆಕೊಂಡುಪೋಗುಕೆ।
ಮ್ಮಲರ್ವಡಿಯಂಫಲಂನಿನಗದೇಂಮಮಕಾಂತೆಯರಾಗಲೇಖದಿಂ॥
ಪಲಬಿನದಂಗಳಿಂದಸುವನೀಪರಿರಕ್ಷಿಸಿಕೊಳ್ಳುತಿಪ್ಪ ಕಾ।
ದಲರ್ಗಳನಿಂತುಭಂಗಿಪುದುತಕ್ಕುದೆಪೇಳ್ನಿಸಗಂಜನಾಪ್ರಿಯಾ॥೧೦॥

---

*॥ ರಾಗ—ಬೆಹಾಗ್॥ ॥ಆದಿತಾಳ॥

ತೋರಿಸು ಕಾಂತಾಲೇಖವನ್ನು ॥ಪ॥ ಮಾರುತಪೋತನೆ ಸೈರಿಸೆತಾಪವ ॥ಅ॥ ನಿನಗದರಿಂದೇಂಫಲವಾಗುವದು । ನನಗದು ಸಂಜೀವನವಾಗಿಹುದು ॥೧॥ ವಾಸನೆಗಾಗಿ ಕೊಂಡುಪೋಗು । ಭಾಸುರವಾದ ಕೌಸುಮರಜವ ॥೨॥ ಅರಿದಿಹೆನೀನು ಅಂಜನೇಶ ವಿರಹಿಗಳಿಂತು ವಿ । ನೋದಿಪಪರಿಯ ॥೩॥

ನಿಪು.—ಮಹಾರಾಣಿಯೆ ಇದೊ ನೋಡು ಆ ಭುಜಪತ್ರವನ್ನು ಹುಡುಕುತ್ತಿರುವ ಸಂಭ್ರಮವೇ ಇದು.

ರಾಣಿ.—ಬಳ್ಳೇದು ನೋಡೋಣ ಸುಮ್ಮನಿರು.

ವಿದೂ.—(ಹರ್ಷದಿಂದ ಮುಂದಕ್ಕೆ ಬಂದು ಹಾಗೇ ಪೆಚ್ಚಾಗಿ ಹಿಂಚಕ್ಕೆ ಬಂದು) ಮಹಾರಾಜನೆ ಬಾಡಿದ ತಾವರೇಕುಸುರಿನಂತೆ ಸ್ವಲ್ಪ ನೀಲವರ್ಣವಾದ ಈ ನವಿಲುಗರಿಯನ್ನು ಕಂಡು ಇದೇ ಭುಜಪತ್ರವೆಂದು ತಿಳಿದು ಮೋಸ ಹೋದೆ.

ರಾಜಂ.—ಸರ್ವಪ್ರಕಾರದಿಂದಲೂ ಮಂದಭಾಗ್ಯನಾದ ನಾನು ಕೆಟ್ಟು ಹೋದೆ.

ರಾಣಿ.—(ಜಾಗ್ರತೆಯಾಗಿಬಂದು) ಸಾಕು ಸಾಕು ಇಷ್ಟುಕಾತರವೇತಕ್ಕೆ ಆರ್ಯಪುತ್ರನೆ ಇದೊ ಆ ಭುಜಪತ್ರವು; ಒಪ್ಪಿಸಿಕೊಳ್ಳಬೇಕು.

ವಿದೂ.—(ಸಂಭ್ರಾಂತನಾಗಿ) ಇದೇನು ಮಹಾರಾಣಿ!

ರಾಜಂ.—(ಬೆರಗಾಗಿನೋಡಿ) ದೇವಿಯೆ ನಿನಗೆ ಸುಖಾಗಮನವೆ ?

ವಿದೂ.—(ಮರೆಯಾಗಿ) ಈಗಲೀಗ ಬಹಳ ಕಷ್ಟಕ್ಕೆ ಬಂತು.

ರಾಜಂ.—(ಮರೆಯಲ್ಲಿ) ಮಿತ್ರನೆ ಈಗೇನುಮಾಡಬೇಕು ?

ವಿದೂ.—(ಮರೆಯಲ್ಲಿ) ಒಡವೆಸಹಿತ ಸಿಕ್ಕಿದಕಳ್ಳನಿಗೆ ಪ್ರತಿಯಾದ ಮಾತೇನುಂಟು ?

ರಾಜಂ.—(ಪ್ರಕಾಶ) ದೇವಿ ನಾನು ಇದನ್ನು ಹುಡುಕುತ್ತಿರಲಿಲ್ಲ, ಮತ್ತೊಂದು ರಾಜಕೀಯವಾದ ಪತ್ರಿಕೆಯನ್ನು ಹುಡುಕುತ್ತಿದ್ದೆ.

ರಾಣಿ.—ಸರಿಸರಿ! ನಿನ್ನ ಸೌಭಾಗ್ಯವನ್ನು ನೀನು ಮರಸಿಕೊಳ್ಳುವದು ಯುಕ್ತ.

ವಿದೂ.—ಅಮ್ಮಾ ಮಹಾರಾಜನಿಗೆ ಜಾಗ್ರತೆಯಾಗಿ ಪಿತ್ತೋಪಶಮನವಾಗುವಂತೆ ಭೋಜನವನ್ನು ಮಾಡಿಸುವದಕ್ಕೆ ಯತ್ನಿಸು.

ರಾಣಿ.—ನಿಪುಣಿಕೆ ಈ ಬ್ರಾಹ್ಮಣನು ತನ್ನ ಮಿತ್ರನಿಗೆ ಉಪಾಯದಿಂದ ತಪ್ಪಿಸಿಕೊಳ್ಳುವ ನೆವವನ್ನು ಚನ್ನಾಗಿ ಹೇಳಿಕೊಟ್ಟನು.

ವಿದೂ.—ಈಗತಾನೇ ಬಂದವರಿಗೆ ಈ ಮಹಾರಾಜನ ನಿಜಸ್ಥಿತಿಯಲ್ಲಿ ನಂಬಿಕೆ ಉಂಟಾಗುವದಿಲ್ಲ.

ರಾಜಂ.—ಮೂರ್ಖ ಇದೇನು ನನ್ನಮೇಲೇ ಬಲಾತ್ಕಾರವಾಗಿ ಅಪರಾಧವನ್ನು ಹೊರಿಸುವೆ ?

*ರಾಣಿ.—ಮಹಾರಾಜನೆ ನಿನ್ನಪರಾಧವೇನೂ ಇಲ್ಲ ನಿನ್ನಿಷ್ಟಕ್ಕೆ ಪ್ರತಿಕೂಲವಾಗಿ ನಿನ್ನೆದುರಿಗೆ ಬಂದು ನಿಂತುಕೊಂಡಿದ್ದು ನನ್ನಪರಾಧವೇ. ನಿಪುಣಿಕೆ ಇನ್ನುಮೇಲೆ, (ಎಂದು ಕೋಪದಿಂದ ಹೊರಟಳು).

ರಾಜಂ.—(ಉಪಸರ್ಪಣೆಮಾಡಿ) ಎಲೆ ಪ್ರಿಯೆ ಕೋಪವನ್ನು ಬಿಡು.

†ಕಂ ॥ ಮುನಿಸಿನಿತೇಕಾನಪರಾ ।
ಧಿ ನಿಜಂ ಪ್ರಿಯೆ ನೀಂಪ್ರಸನ್ನೆಯಪ್ಪುದು ಬೇಳ್ಪಿಂ ॥
ಮುನಿಸೊಳಗಳಿದಿರೊಳ್ತಾ ।
ನಿನಿ ಸೇವಕರೆಂತು ಸಿರಪರಾಧಿಗಳೆನಿಪರ್ ॥ ೨೧ ॥

(ಎಂದು ವಂದಿಸುವನು).

---

*॥ ರಾಗ—ಬೇಗಡೆ ॥ ॥ ಆದಿತಾಳ ॥

ಈಪರಿಯೊಳೇನಿದು ॥ ೦ ಭೂಪತಿಯೆನುಡಿಯುವದು ॥ ಪ ॥ ೦ ಕೋಪವೇಕೆ ನಿನಗೀತನನುಡಿಯೊಳು । ತಾಪವಿದೇನು ನಿಶಾಪತಿಕುಲಭವ ॥ ಅ ॥ ೦ ನೀನುಮಾಡಿದಪರಾಧವೇನು ಬಹು । ಮಾನನೀಯಗುಣಮಹಿತನುನೀಂ । ನಾನೆನಿನ್ನಮನದಂತೆನಡೆಯದಿರು । ವಾನಿಮಿತ್ತದೆ ಮಹಾಪರಾಧಿನಿಯು ॥ ೧ ॥

†॥ ರಾಗ—ಜುಂಝೋಟಿ ॥ ॥ ರೂಪಕತಾಳ ॥

ಮಂದಗಮನೆ ಕುಂದರದನೆ ಚಂದಿರಾನನೆ ॥ ಪ ॥ ಪೊಂದುತೆನ್ನೊಳಿನಿತುಮುನಿಸ । ನಿಂದುಪೋಪುದೇನೆ ॥ ಅ ॥ ಸಾಪರಾಧನಾನುಕಾಂತೆ । ಕೋಪವೇತಕಾಂತೆ ॥ ಸೈಪುದುಪ್ರಸನ್ನೆಯಾಗಿ । ತಾಪವಿದನು ನೀಗಿ ॥ ೧ ॥ ಕುಪಿತವಾಗೆ ಸೇವ್ಯಜನವು । ನಿಪುಣೆದಾಸಜನವು । ಅಪಗತಾಪರಾಧವೆಂದು । ಕೃಪೆಯಗೈವುದಿಂದು ॥ ೨ ॥ ಇಂತುಕೋಪದಿಂದನೀನು । ಕಾಂತೆಪೋಗೆನಾನು । ಎಂತುಪೇಳುನಿನ್ನನಗಲಿ । ಚಿಂತಿಸುತ್ತಲಿರಲಿ ॥ ೩ ॥

ರಾಣಿ.—ಬಿಡುಬಿಡು! ನಾನು ಅಲ್ಪಳು, ನಿನ್ನ ಅನುನಯಸಾಕು, ನಿನ್ನ ದಾಕ್ಷಿಣ್ಯದ ಪಶ್ಚಾತ್ತಾಪವನ್ನು ಕಂಡರೆ ಭಯವಾಗುತ್ತೆ.

(ಎಂದು ರಾಯನನ್ನು ಬಿಟ್ಟು ಚೇಟಿಯೊಡನೆ ತೆರಳಿದಳು).

ವಿದೂ.—ಮಹಾರಾಜನೆ ಮಹಾರಾಣಿಯು ವರ್ಷಾಕಾಲದ ನದಿಯಂತೆ ಪ್ರಸನ್ನೆಯಾಗದೆ ಹೊರಟೇ ಹೋದಳು ಇನ್ನೇಳು.

ರಾಜಂ.—ಮಿತ್ರನೆ ಇದೇನು ಅಸಂಗತವಲ್ಲ.

ಕಂ ॥ ಹೃದಯದೊಳಗಿನಿಸುವೊಲವಿ ।
ಲ್ಲದೆ ಬರಿದಿನಿಯರ್ಕ್ಕಳೆಸಗಿದನುನಯಮವರಾ ॥
ಹೃದಯಮನರಿದಂಗನೆಯರ ।
ಹೃದಯಂಗಮವಹುದೆ ಕಟ್ಟುಬಣ್ಣದಮಣಿವೋಲ್ ॥ ೨೦ ॥

ವಿದೂ.—ಮಹಾರಾಜನೆ ಮಹಾರಾಣಿಯು ಹೀಗೆ ಕೋಪಿಸಿಕೊಂಡು ಹೋದದ್ದೇ ನಿನಗೆ ಅನುಕೂಲವಲ್ಲವೆ? ಕಣ್ಣುಬೇನೆ ಬಂದವನು ದೀಪದ ಜ್ವಾಲೆ ಎದುರಿಗಿದ್ದರೆ ಸಹಿಸುವನೆ?

ರಾಜಂ.—ಹಾಗಲ್ಲ ಕೇಳು—ಊರ್ವಶಿಯಲ್ಲಿ ನನಗೆ ಅನುರಾಗವಿದ್ದಾಗ್ಯೂ ದೇವಿಯಲ್ಲಿ ಪೂರ್ವದಂತೆಯೇ ಅಭಿಮಾನವಿರುವದು. ಆದರೆ ವಂದನೆಯನ್ನು ಮಾಡಿದಾಗ್ಯೂ ಉಲ್ಲಂಘಿಸಿ ಹೊರಟು ಹೋದದ್ದರಿಂದ ನಾನೂ ಕೂಡ ದೇವಿಯ ವಿಷಯದಲ್ಲಿ ಧೈರ್ಯವನ್ನೇ ಅವಲಂಬಿಸುವೆನು.

ವಿದೂ.—ಈಗ ನೀನು ಧೈರ್ಯವನ್ನು ಅವಲಂಬಿಸುವದು ಹಾಗಿರಲಿ. ಹಸಿವಿನಿಂದ ಹೋಗುತ್ತಿರುವ ಈ ಬ್ರಾಹ್ಮಣನ ಪ್ರಾಣಕ್ಕೆ ಸ್ವಲ್ಪ ಅವಲಂಬನೆಯನ್ನುಂಟುಮಾಡು. ಇದು ಸ್ನಾನಭೋಜನಗಳಿಗೆ ಸಮಯವಲ್ಲವೆ?

ರಾಜಂ.—(ಮೇಲೆನೋಡಿ) ಓಹೋ ಆಗಲೇ ಹಗಲಿನಲ್ಲಿ ಅರ್ಧಭಾಗ ಕಳೆದು ಹೋಯಿತು. ಈವೇಳೆಯಲ್ಲಿ—

*ಕಂ ॥ ಬಿಸಿಲ ಕಡುಬೇಗೆಯುಂ ಸೈ ।
ರಿಸದೆ ನವಿಲ್ ತಣ್ಣಗಿರ್ಪ್ಪ ಮರದಡಿಯೊಳ್ವಾ ॥
ಸಿಸುವುದು ದೈನ್ಯದೆ ಗಿಳಿ ಯಾ ।
ಚಿಸುವುದು ಬಾಯಾರಿ ನೀರ ನೀಪಂಜರದೊಳ್ ॥ ೨೩ ॥

ಕುಳಿರಾಂತ ತಾವರೆಯ ಹೊದ ।
ರೊಳಡಂಗುಗುಮಂಚೆತೊರೆದುಬೆನ್ನೀರಂತಾಂ ॥
ಬಳಲುತೆ ಬಿಸಿಲಿಂದಾರಡಿ ।
ಯೊಳಪುಗುಗುಂ ಕೊರೆದು ಕರ್ಣಿಕಾರದಮುಗುಳಂ ॥ ೨೪ ॥

(ಇಬ್ಬರೂ ತೆರಳಿದರು).

---

* ॥ ರಾಗ—ಕಮಾಚು ॥ ॥ ಆದಿತಾಳ ॥

ನೋಡೈ ತೋರಿದುದು । ಮಧ್ಯಾಹ್ನವು ॥ ಪ ॥ ಸೋಗೆಯು ಬಿಸಿಲಿನ । ಬೇಗೆಯಿಂ ಬಳಲಿತಂ । ಪೂಗಿಹಪಾತೆಯ । ರಾಗದೆ ಸೇರಿದೆ ॥ ೧ ॥ ವಿರಿದತಾಪವ । ಸೈರಿಸದೇಕರ್ಣಿ । ಕಾರದ ಮೊಗ್ಗನು । ಸೇರಿತುತುಂಬಿಯು ॥ ೨ ॥ ಅರಗಿಳಿಗಳು ಪಂ । ಜರದೊಳು ಬಾಯನು ॥ ತೆರೆಯುತಪೇಡು । ತ್ತಿರುವವು ನೀರನು ॥ ೩ ॥ ಕಾದಂಬುವಬಿಟ್ಟು । ಕಾದಂಬವುಬೇ । ಕಾದಂಬುಜದೆವಿ । ನೋದದೆ ಮಲಗಿದೆ ॥ ೪ ॥

ದ್ವಿತೀಯಾಂಕವು ಮುಗಿದುದು.

ತ್ರಿತೀಯ ಅಂಕವು.

(ಅನಂತರದಲ್ಲಿ ಗಾಲವ ಪೈಲವರೆಂಬ ಭರತಮುನಿ ಶಿಷ್ಯರು ಪ್ರವೇಶಿಸುವರು)

ಗಾಲವಂ.—ಎಲೈ ಪೈಲವನೆ ನಮ್ಮುಪಾಧ್ಯಾಯರು ಇಂದ್ರಭವನಕ್ಕೆ ಹೋಗುವಾಗ ನಿನ್ನನ್ನು ಸಂಗಡ ಕರೆದುಕೊಂಡು ಹೋದರು. ನನ್ನನ್ನು ಅಗ್ನಿಶಾಲೆಯ ರಕ್ಷಣಾರ್ಥವಾಗಿ ಇಲ್ಲೇ ಇರಿಸಿದ್ದರು. ಆದ್ದರಿಂದ ಇಂದ್ರಲೋಕದ ಸಮಾಚಾರವೇನು ? ಹೇಳು.

ಪೈಲವಂ.—ಹಾಗಾದರೆ ಕೇಳು, ನಮ್ಮುಪಾಧ್ಯಾಯರು ದೇವಸಭೆಯಲ್ಲಿ ಸರಸ್ವತಿಯಿಂದ ವಿರಚಿತವಾದ ಲಕ್ಷ್ಮೀಸ್ವಯಂವರವೆಂಬ ನಾಟಕವನ್ನಾಡಿಸಿದರು. ಆಕಾಲದಲ್ಲೊಂದು ಆಶ್ಚರ್ಯ ನಡೀತು.

ಗಾ.—ಅದೇನು ! ಹೇಳು ಹೇಳು.

ಪೈ.—ಆ ನಾಟಕದಲ್ಲಿ ಮೇನಕೆ ವರುಣಪುತ್ರಿಯ ವೇಷವನ್ನು ಧರಿಸಿದ್ದಳು ಊರ್ವಶಿಯು ಲಕ್ಷ್ಮೀ ವೇಷವನ್ನು ಧರಿಸಿದ್ದಳು. ವರುಣಪುತ್ರೀವೇಷವನ್ನು ಧರಿಸಿದ್ದ ಮೇನಕೆಯು ಸ್ವಯಂವರಕಾಲದಲ್ಲಿ ಲಕ್ಷ್ಮೀವೇಷವನ್ನು ಧರಿಸಿದ್ದ ಊರ್ವಶಿಯನ್ನು ಕುರಿತು “ ಎಲೆ ಸಖಿ ಇಲ್ಲಿ ದೇವೇಂದ್ರಮೊದಲಾದ ಲೋಕಪಾಲಕರೂ ಪುರುಷೋತ್ತಮನಾದ ನಾರಾಯಣನೂ ಸಹ ಬಂದಿರುವರಷ್ಟೆ ? ಇವರೊಳಗೆ ನಿನಗೆ ಯಾರಲ್ಲಿ ಅನುರಾಗ ” ಎಂದು ಕೇಳಿದ್ದಕ್ಕೆ ಊರ್ವಶಿಯು ಪುರುಷೋತ್ತಮನಲ್ಲಿ ಎಂದು ಹೇಳುವದನ್ನು ಬಿಟ್ಟು ಪುರೂರವನಲ್ಲಿ ಎಂದು ಹೇಳಿಬಿಟ್ಟಳು.

ಗಾ.—ಬುದ್ಧಿಯೂ ಇಂದ್ರಿಯಗಳೂ ಕೂಡ ದೈವಾಯತ್ತಗಳಾಗಿರುವವು. ಆಗ ನಮ್ಮುಪಾಧ್ಯಾಯರಾದ ಭರತಮಹರ್ಷಿಗಳು ಆಕೆಯ ಮೇಲೆ ಕೋಪಿಸಿಕೊಳ್ಳಲಿಲ್ಲವೋ ?

ಪೈ.—ಅದಕ್ಕೆ ನಮ್ಮುಪಾಧ್ಯಾಯರು ಶಾಪವನ್ನು ಕೊಟ್ಟರು.

ಗಾ.—ಅದು ಹ್ಯಾಗೆ ?

ಪೈ.—ನಾನು ಹೇಳಿಕೊಟ್ಟದ್ದನ್ನು ನೀನು ತಪ್ಪಿದ್ದರಿಂದ ನಿನಗೆ ದೇವ ಲೋಕದಲ್ಲಿ ವಾಸತಪ್ಪಲಿ ಎಂದು ಉಪಾಧ್ಯಾಯರು ಶಾಪವನ್ನುಕೊಟ್ಟರು. ಆಮೇಲೆ ವ್ಯಸನಪಡುತ್ತನಿಂತಿದ್ದ ಊರ್ವಶಿಯನ್ನು ನೋಡಿ ಮಹೇಂದ್ರನು ಎಲೆ ಊರ್ವಶಿ ನನಗೆ ಯುದ್ಧದಲ್ಲಿ ಸಹಾಯನಾದ ಆ ಪುರೂರವನಿಗೆ ನಿನ್ನಲ್ಲಿ ಸಂತಾನ ದರ್ಶನವಾಗುವವರೆಗೂ ನೀನು ಭೂಲೋಕದಲ್ಲಿ ಆತನಿಗೆ ಪ್ರಿಯ ಳಾಗಿದ್ದು ಅನಂತರ ದೇವಲೋಕಕ್ಕೆ ಬರತಕ್ಕದ್ದೆಂದು ಶಾಪಾವಸಾನವನ್ನು ಕರುಣಿಸಿದನು.

ಗಾ.—ಪುರುಷರ ತಾರತಮ್ಯವನ್ನು ಬಲ್ಲ ಇಂದ್ರನಿಗೆ ಇದು ಯುಕ್ತ.

ಪೈ.—(ಸೂರ್ಯನನ್ನು ನೋಡಿ) ಈ ಕಥಾ ಪ್ರಸಕ್ತಿಯಿಂದ ನಮ್ಮುಪಾಧ್ಯಾ ಯರ ಸ್ನಾನಕಾಲ ಮೀರಿತು. ನಡೆ ಹೋಗೋಣ.

(ಎಂದು ತೆರಳಿದರು).

ಕಂಚುಕಿ.—(ಪ್ರವೇಶಿಸಿ)

ವೃತ್ತ॥ ಜನರುದ್ಯೋಗಿಪರೆಲ್ಲರುಂಹರೆಯದೊಳ್ಭೋಗ್ಯಂಗಳಂಭೋಗಿಸಲ್।
ತನಯರ್ಕಳ್ನಿಜಭಾರಮಂತಳೆವುದುಂವಿಶ್ರಾಂತಿಯಂಪೊಂದುವರ್॥
ತನುವಂತಳ್ಗ್ನೃಪಸೇವೆಯಿಂತೆಮಗೆನಿತ್ಯಂಬಂಧನಾವಾಸಮೆಂ।
ದೆನಿಸಿರ್ಕ್ಕಂತೆಗೆಕಷ್ಟಮೆಂದುಮುಬಲಾಲೋಕಾಧಿಕಾರಂಕರಂ॥

ಮಹಾರಾಣಿಯು ನನಗಾಜ್ಞಾಪಿಸಿರುವಳು. ಏನಂದರೆ, "ವ್ರತಾಚ ರಣೆಗೋಸ್ಕರ ನಾನು ಕೋಪವನ್ನು ಬಿಟ್ಟು ಮಹಾರಾಜನನ್ನು ಮೊದಲೇ ಕೇಳಿಕೊಂಡಿರುವೆನು. ಈಗ ನೀನು ಸಾಕ್ಷಾತ್ತಾಗಿ ಹೋಗಿ ಈ ವಿಷಯ ವನ್ನು ಮಹಾರಾಜನಿಗೆ ಅರಿಕೆ ಮಾಡಿಬಾ" ಎಂದು ಆಜ್ಞಾಪಿಸಿರುವಳು. ಸಾಯಂಕಾಲದ ನಿತ್ಯಕರ್ಮವನ್ನು ತೀರಿಸಿಕೊಂಡು ಬರುವ ಮಹಾರಾಜ ನನ್ನು ಇಲ್ಲಿ ಕಾದಿದ್ದು ಆವಿಷಯವನ್ನುತಿಳಿಸುವೆನು. (ಎಂದು ಅಲ್ಲೇ ತಿರುಗಾಡು ತ್ತಾ ನೋಡಿ) ಈ ಅರಮನೆಯಲ್ಲಿ ಸಂಧ್ಯಾಕಾಲದಲ್ಲಿ ನಡೆಯತಕ್ಕ ಕಾರ್ಯ ಗಳು ಬಹು ರಮಣೀಯವಾಗಿವೆ.

ವೃತ್ತ ॥ ಕೆತ್ತಿದುತಿರುಳಿಂನವಿಲ್ತವೆನಿದ್ರಿಕುಂನೆಲೆಗೋಲೆಗೊಳೀ ।
ಯುತ್ತೆ ಮತ್ತ ಕಪೋತಶಂಕೆಯುಜಾಲನಿಸ್ಸೃತಧೂಪಮುಂ ॥
ಸುತ್ತುತಿಪ್ಪುದುಮೇಲೆಮಾಡಗಳಲ್ಲಿ ವೃದ್ಧಜನಂಗಳೆ ।
ತ್ತೆತ್ತಮುಂಸಮರಿಟ್ಟಪೂವಲಿದಾಣದೊಳ್ ಸೊಡರಿಟ್ಟಪರ್ ॥ ೨ ॥

(ಹಾಗೇ ನೋಡಿ) ಓಹೊ ! ನಮ್ಮ ಮಹಾರಾಜನು ಇತ್ತಲಾಗಿಯೇ ಹೊರಟಿರುವನು. ಆಹ !

ಕಂ ॥ ನೆರೆದಿರೆಸುತ್ತುಂ ತೊಳ್ತರ ।
ಕರದೀಪಪ್ರಕರನೀನೃಪಂತಟದೊಳ್ಪೂ ॥
ತಿರೆಕರ್ಣಿಕಾರತರುಗಳ್ ।
ಕರಮೆಸೆವನೆರಂಕೆಯುಳ್ಳಚರಿಪದ್ರಿಯವೊಲ್ ॥ ೩ ॥

ನಾನಿತ್ತಲಾಗಿ ನಿಂತು ಮಹಾರಾಜನನ್ನು ಕಾಣುವೆನು.

(ಎಂದು ನಿಲ್ಲುವನು).

(ರಾಯನು ವಿದೂಷಕನೊಡನೆ ಪ್ರವೇಶಿಸುವನು).

*ರಾಜಂ.—ಕಂ ॥ ಕಳೆದೆಂಪಲತೆರದುಜ್ಜುಗ ।
ಗಳನಾವಲ್ಲಭೆಯುಹಂಬಲಿಲ್ಲದೆಪಗಲಂ ॥
ಕಳೆವೆಂವಿನೋದಮಿಲ್ಲದೆ ।
ಬಳೆಬಳೆದುಮಿಮಿಚ್ಛುವಿರುಳನೇಪರಿಯಿಂದಂ ॥ ೪ ॥

ಕಂ —(ಸಮೀಪಕ್ಕೆ ಬಂದು) ಮಹಾರಾಜನಿಗೆ ಜಯವಾಗಲಿ ಮಹಾರಾಜನೆ ರೋಹಿಣೀಸಹಿತನಾದ ಚಂದ್ರನು ಉದಯಿಸಿ ನನ್ನ ಪೂಜೆಯನ್ನು

---

*॥ ರಾಗ—ಭೈರವಿ ॥ । ರೂಪಕತಾಳ ॥

ಎಂದಿಗೆನಾಂನೋಡುವೆನು । ಸುಂದರಾಂಗಿಯನ್ನು ಹಾಹಾ ॥ ಪ ॥ ಯುಗಶತಕ್ಕೆ ಸದೃಶವಾದ । ಹಗಲು ರಾಜಕಾರ್ಯದಿಂದ ॥ ಮುಗಿದು ಪೋದುದಂತುಮಿಂತುಂ । ಸುಗುಣೆಯಾದಕಾಂತೆಯನ್ನು ॥ ೧ ॥ ಅಂತಹಾವಿನೋದವಿಲ್ಲ । ದಿಂತುದೀರ್ಘವಾದಿರುಳ ॥ ಎಂತುಮುಗಿಪೆನಕ್ಕಟಾಹಾ । ಕಂತುಜಯಪತಾಕೆಯನ್ನು ॥ ೨ ॥ ಈಸಮಯವನೋಡಿಹಾಹಾ । ಪೂಸರಳನುನನ್ನನೀಗ ॥ ಘಾಸಿಮಾಡುತ್ತಿಹನಿಂತು । ಭಾಸುರಾನನಾಂಗಿಯನ್ನು ॥

ಸ್ವೀಕರಿಸುವವರಿಗೆ ತಮ್ಮೊಡನೆ ನಾನು ಮಣಿಹರ್ಮ್ಯಪ್ರಾಸಾದದ ಮೇಲೆ ಇರಬೇಕಾಗಿದೆ ಯೆಂದು ಮಹಾರಾಣಿಯು ವಿಜ್ಞಾಪಿಸುವಳು.

ರಾಜಂ.—ಎಲೈ ಸತ್ಯಕೀರ್ತಿಯೆ ನಿನ್ನಿಚ್ಛೆಯಿದ್ದಂತಾಗಲಿ ಎಂದು ದೇವಿಗೆ ವಿಜ್ಞಾಪಿಸು.

ಕಂ.—ಅಪ್ಪಣೆ. (ಎಂದು ತೆರಳಿದನು.)

ರಾಜಂ.—ಮಿತ್ರನೆ ಈ ವ್ರತಾಚರಣೆಯು ನಿಜವಾಗಿದ್ದೀತೆ ?

ವಿದೂ.—ಮಹಾರಾಣಿಯು ಈಗ ಪಶ್ಚಾತ್ತಾಪ ಯುಕ್ತಳಾಗಿ ಮೊದಲು ಕೋಪದಿಂದ ನಿನ್ನ ವಂದನೆಯನ್ನು ಉಲ್ಲಂಘಿಸಿ ಹೋದ ಅಪರಾಧವನ್ನು ಪರಿಹರಿಸಿಕೊಳ್ಳುವದಕ್ಕೆ ಇದೊಂದು ನೆವವನ್ನು ತೆಗದಿರುವಂತೆ ನನಗೆ ತೋರುವದು.

ರಾಜಂ.—ಹೌದು ಸರಿಯಾಗಿ ಹೇಳಿದೆ.

ಕಂ॥ ಮಣಿದೊಡಮಡಿಗಡಿಗಂ ದ।
ಕ್ಷಿಣನಾಯಕರಂದು ಸಡ್ಡೆಗೆಯ್ಯದೆಮುಳಿಸಿಂ॥
ಪ್ರಣಯಿನಿಯರ್ತಪಿಪರ್ಮ್ಮಳಿ।
ಸಣಮಡಗಲ್ ನೆನೆದು ಮನದೊಳವರನುನಯಮಂ॥ ೫॥

ಬಳ್ಳೀದು ಮಣಿಹರ್ಮ್ಯದ ಮಾರ್ಗವನ್ನು ತೋರಿಸು, ಅಲ್ಲಿಗೆ ಹೋಗೋಣ.

ವಿದೂ.—ಮಹಾರಾಜನೆ ಈಕಡೆ ದಯಮಾಡಿಸಬೇಕು.

(ಎಂದು ನಡೆದು ನೋಡಿ) ಮಹಾರಾಜನೆ ಗಂಗಾನದಿಯ ತೆರೆಗಳಂತೆ ಕಂಗೊಳಿಸುತ್ತಿರುವ ಈ ಸ್ಫಟಿಕಮಯವಾದ ಸೋಪಾನಮಾರ್ಗದಿಂದ ರಮಣೀಯವಾದ ಮಣಿಹರ್ಮ್ಯವನ್ನು ಹತ್ತುವನಾಗು.

ರಾಜಂ.—ನೀನು ಮುಂದೆ ನಡೆ. (ಎಲ್ಲರೂ ಹತ್ತಿ ಹೋಗುವರು).

ವಿದೂ.—(ನೋಡಿ) ಮಹಾರಾಜನೆ ಸ್ವಲ್ಪಸ್ವಲ್ಪವಾಗಿ ಕತ್ತಲೆಯಿಂದ ಬಿಡಲ್ಪಡುತ್ತಿರುವ ಪೂರ್ವದಿಕ್ಕು ಕೆಂಪಾಗಿರುವದನ್ನು ನೋಡಿದರೆ ಚಂದ್ರನು ಉದಯಪರ್ವತದ ಸಮೀಪಕ್ಕೆ ಬಂದಿರುವಂತೆ ತೋರುತ್ತೆ.

ರಾಜಂ:—ನೀನು ಚೆನ್ನಾಗಿ ಹೇಳಿದೆ.—

ಕಂ ॥ ಉದಯಾದ್ರಿಯನಡರ್ವಿಂದುವ ।
ಕದಿರ್ಗಳ್ ಕಳ್ತಲೆಯನೊಯ್ಯನೊಯ್ಯನೆನೂಂಕಲ್ ॥
ಸುದತಿಯ ತಿದ್ದಿದಕುರುಳ್ಗಳ ।
ವದನದವೋಲ್ ಪೂರ್ವದಿಙ್ಮುಖಂ ಕರಮೆಸೆಗುಂ ॥ ೬ ॥

ವಿದೂ.—ಮಹಾರಾಜನೆ ಈ ಪೂರ್ವದಿಕ್ಕಿನಲ್ಲಿ ಮೂಡುತ್ತಿರುವ ಚಂದ್ರನನ್ನು ನೋಡು—ಆಹ! ಚೆಳ್ಳೇ ಮುರಿದ ಕಡಬಿನಂತೆ ಕಾಣುವನು.

ರಾಜಂ:—(ನಕ್ಕು) ಭೋಜನಪ್ರಿಯನಾದ ನಿನಗೆ ಎಲ್ಲಾ ವಿಷಯದಲ್ಲೂ ತಿಂಡಿಯ ಕಥೆಯೋ! (ಎಂದು ಕೈಮುಗಿದುಕೊಂಡು ನಮಸ್ಕರಿಸಿ) ಎಲೈ ಪೂಜ್ಯನಾದ ನಿಶಾಕಾಂತನೆ,

*ವೃತ್ತ ॥ ಮಾಡಿಸೆಪರ್ವದೊಳ್ವಿಹಿತಕರ್ಮವಸಜ್ಜನರಿಂದೆಸೂರ್ಯನೊಳ್ ।
ಕೂಡುವಸಾರಮಪ್ಪಮೃತದಿಂ ಪಿತೃಗಳ್ಗಸುರರ್ಗೆ ತೃಪ್ತಿಯಂ ।
ನೀಡುವರಾತ್ರಿಯೊಳ್‌ಕವಿವಕಳ್ತಲೆಯಂನಿಜಕಾಂತಿಯಿಂದಮು ।
ೞ್ಕಾಡುವಸೋಹಿಣೀರಮಣವಂದಿಪೆನಾಂ ನಿನಗೀಶಭೂಷಣಾ ॥ ೭ ॥

(ವಂದಿಸುವನು)

ವಿದೂ.—ಮಹಾರಾಜನೆ ಬ್ರಹ್ಮನು ನೀನು ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಈ ಬ್ರಾಹ್ಮಣನ ಮುಖದಿಂದ ಆಜ್ಞಾಪಿಸುತ್ತಾನೆ; ನೀನು ಆರೀತಿ ನಡೆಸಿದರೆ ನಾನೂ ಸುಖವಾಗಿ ಸ್ವಲ್ಪ ಕೂತುಕೊಳ್ಳುವೆನು.

(ಇಬ್ಬರೂ ಕೂತುಕೊಳ್ಳುವರು).

---

*॥ ರಾಗ—ಕಲ್ಯಾಣಿ ॥ ॥ ಆದಿತಾಳ ॥

ಕ್ಷೀರಪಯೋಧಿ ಕು । ಮಾರಶುಭಕರ ॥ ಪ ॥ ಆರ್ಯರಿಂದಲಿ ಸ । ತ್ಕಾರ್ಯವಮಾಡಿಸೆ । ಸೂರ್ಯನಸೇರುವೆ । ವರ್ಯಗುಣಾಕರ ॥ ೧ ॥ ಶಂಕರಚೂಡಾ । ಲಂಕೃತಿಯೆನಿತ । ಸಂಕುಲಹರಣ ಶ । ಶಾಂಕಸುಧಾಕರ ॥ ೨ ॥ ವಂದಿಪೆನಾಂ ಸುಧೆ । ಯಿಂದಮರರೆನಾ । ನಂದಿಪತೇಜೋ । ಮಂದಿರಚಂದಿರ ॥ ೩ ॥

ರಾಜಂ.—(ಪರಿಜನವನ್ನು ನೋಡಿ) ಬೆಳದಿಂಗಳು ಚೆನ್ನಾಗಿರುವಾಗ್ಯೆ ದೀಪಗಳು ಬೇಡಲೆ ಯಾತಕ್ಕೆ. ಆದ್ದರಿಂದ ನೀವೆಲ್ಲರೂ ವಿಶ್ರಮಿಸಿಕೊಳ್ಳಿ.

ಪರಿಜನರು.—ಮಹಾರಾಜನ ಅಪ್ಪಣೆಯಾದಂತೆ.

(ಎಂದೆಲ್ಲರೂ ತೆರಳಿದರು).

ರಾಜಂ.—(ಚಂದ್ರನನ್ನು ನೋಡಿ) ಇನ್ನೆ ಅಲ್ಲಾ ಬಂದು ಮುಹೂರ್ತದಲ್ಲಿ ದೇವಿ ಬರಬಹುದು; ವಿಜನವಾಗಿರುವ ಇದೇಸಮಯದಲ್ಲಿ ನನ್ನವಸ್ಥೆಯನ್ನು ಹೇಳುವೆನು ಕೇಳು.

ವಿದೂ.—ಅಯ್ಯಾ, ಆ ಊರ್ವಶಿಯು ಹೋದಮಾರ್ಗಕ್ಕೇ ಹೊರಟು ಹೋದಳು. ಆದರೆ ಆಕೆಯು ಅನುರಾಗವಿಶೇಷವನ್ನು ನೋಡಿದರೆ ಇನ್ನೂ ಪ್ರತ್ಯಾಶೆಯಿಂದ ಜೀವವನ್ನು ಧರಿಸಬಹುದಾಗಿ ತೋರುತ್ತೆ.

ರಾಜಂ.—ಹೌದು ನೀನು ಹೇಳಿದಹಾಗೇಸರಿ, ನನಗಾದರೆ ಮನ್ಮಥತಾಪವು ಬಹಳವಾಗಿದೆ.

ಕಂ ‖ ತಡೆಯಲತಿವಿಷಮಶಿಲೆಗಳ್ ।
ಕಡುವೇಗದೆಪರಿವತಟಿನಿನೂರ್ಮಿಯುಹವ್ಪೋಲ್ ‖
ತಡೆಯಾಗೆತ್ತಸಮಾಗಮ ।
ಕೊಡನ್ನೆಸರನೆನ್ನಮನದೆನೂರ್ಮಿಯಾದಂ ‖ ೮ ‖

ವಿದೂ.—ಮಹಾರಾಜನೆ ದಿನೇದಿನೇ ನಿನ್ನ ಶರೀರವು ಕೃಶವಾಗುತ್ತಾ ಬಂದಾಗ್ಯೂ ಕಾಂತಿಮಾತ್ರ ಹೆಚ್ಚುತ್ತಾ ಇರುವದು. ಈ ಒಳ್ಳೇ ಲಕ್ಷಣವನ್ನು ನೋಡಿದರೆ ಜಾಗ್ರತೆಯಾಗಿಯೇ ನಿನಗೆ ಆ ಅಪ್ಸರಸ್ತ್ರೀಪ್ರಾಪ್ತಿಯುಂಟಾದೀತೆಂದು ಭಾವಿಸುತ್ತೇನೆ.

ರಾಜಂ.—(ನಿಮಿತ್ತವನ್ನು ಸೂಚಿಸಿ)—

ಕಂ ‖ ಅಡಿಗಡಿಗಾಸೆಯುಪ್ರತ್ಯಪ ।
ನುಡಿಯಿಂಸಂಸ್ಥೈಸುತಿಪ್ಪನಿನ್ನಂತಿರೆವ್ಪೋಲ್ ‖
ಕಡುದುಗುಡಂವಳೆದೆನ್ನಂ ।
ಮಿಡುಕುವಬಲದೋಳಪಮಿರದೆಸಂತೈಸುದುಕ್ಷಾಂ ‖ ೯ ‖

ವಿದೂ.—ಬ್ರಾಹ್ಮಣವಚನವೆಂದಿಗೆ ತಪ್ಪೀತು.

(ರಾಯನು ಆಶಾಬದ್ಧನಾಗಿರಲು)

(ಆಕಾಶಮಾರ್ಗದಿಂದ ಊರ್ವಶೀ ಚಿತ್ರಲೇಖೆಯರು ಪ್ರವೇಶಿಸುವರು).

ಊರ್ವ.—(ತನ್ನನ್ನು ನೋಡಿಕೊಂಡು)*ಎಲೆ ಚಿತ್ರಲೇಖೆ ನನ್ನ ಪ್ರಾಣಕಾಂತನ ಸನ್ನಿಧಿಗೆ ಹೊರಟಿರುವ ನನಗೆ ಮಿತವಾದ ಆಭರಣಗಳಿಂದಲೂ ಕಪ್ಪಾದ ಮೇಲುಹೊದ್ದಿಕೆಯಿಂದಲೂ ಕೂಡಿರುವ ಈ ಅಲಂಕಾರವು ಒಪ್ಪುತ್ತಿರುವದೆ ?

ಚಿತ್ರ.—ಇದನ್ನು ಶ್ಲಾಘಿಸುವದಕ್ಕೆ ನನ್ನವಾಕ್ಕುಗಳು ಸಾಲದು. ಮನಸ್ಸಿಗಾದರೆ ನಾನೇ ಆ ಪುರೂರವನಾಗಬಿಡಲೆ ! ಎಂದು ತೋರುವದು.

ಊರ್ವ.—ಎಲೆಸಖಿ ಇದೇಕ್ಷಣದಲ್ಲಿ ನೀನು ನನ್ನನ್ನು ಆ ಮಹಾರಾಜನ ಬಳಿಗೆ ಕರದುಕೊಂಡು ಹೋಗೆಂದು ಮನ್ಮಥನು ನಿನಗಾಜ್ಞಾಪಿಸುವನು.

ಚಿತ್ರ.—ಎಲೆ ಊರ್ವಶಿ ರೂಪಾಂತರವನ್ನು ಹೊಂದಿದ ಕೈಲಾಸಶಿಖರವೋ ಎಂಬಂತೆ ಕಂಗೊಳಿಸುತ್ತಿರುವ ನಿನ್ನ ನಾಯಕನ ಅರಮನೆಗೆ ಬಂದೆವು.

ಊರ್ವ.—ಹಾಗಾದರೆ ನನ್ನ ಹೃದಯಚೋರನಾದ ಆ ಮಹಾರಾಜನು ಎಲ್ಲಿರುವನೊ ಏನುಮಾಡುತ್ತಿರುವನೊ ಪ್ರಭಾವದಿಂದ ನೋಡಿ ತಿಳಿ.

---

*॥ ರಾಗ —ಬೆಹಾಗು ॥ ॥ ರೂಪಕತಾಳ ॥

ಊರ್ವ.—ಸರಸಿಜಾಕ್ಷಿ ಪೋಗಲಾ ಅರಸನಲ್ಲಿಗೆ ॥ ಸರಿಯೆ ಪೇಳು ನನ್ನ ಸಿಂ । ಗರದಚಂದವು ॥ ೧ ॥

ಚಿತ್ರ.—ಪೊಗಳ್ವುದೇನು ನಿನ್ನಸೊಬಗ । ಮುಗುದೆನೋಡಲು ॥ ಸುಗುಣೆನಾನೆ ರಾಯನಾಗೆ । ಬಗೆಗೆ ತೋರ್ಪುದು ॥ ೨ ॥

ಊರ್ವ.—ಅರಸನಲ್ಲಿಗೋರ್ವಳೆನಾಂ । ತೆರಳಲಾರೆನು ॥ ಕರದುಕೊಂಡು ಜೊತೆಯೊಳೆನ್ನ ತರುಣಿಪೋಗುನೀಂ ॥ ೩ ॥

ಚಿತ್ರ.—(ಧ್ಯಾನದಿಂದ ನೋಡಿ ನಕ್ಕು ಆತ್ಮಗತವಾಗಿ) ಒಳ್ಳೇದು ಈಗ ಸ್ವಲ್ಪ ಚಮತ್ಕಾರವಾಗಿ ಮಾತನಾಡುತ್ತೇನೆ. (ಪ್ರಕಾಶ) ಎಲೆ ಊರ್ವಶಿ ನಾನು ನೋಡಲಿಕ್ಕಾಗಿ ಆತನು ಉಪಭೋಗಕ್ಕೆ ಯೋಗ್ಯವಾದ ಸ್ಥಾನದಲ್ಲಿ ತನ್ನ ಮನೋರಥದಿಂದ ಕಲ್ಪಿತಳಾದ ಪ್ರಿಯಳ ಸಮಾಗಮಸುಖವನ್ನು ಅನುಭವಿಸುತ್ತಿರುವನು.

ಊರ್ವ.—ಏನಂದೆ ? ಹಾಗಿದ್ದರೆ ಆಕೆಯು ಧನ್ಯಳಲ್ಲವೆ ?

ಚಿತ್ರ.—ಎಲೆ ಮುಗ್ಧೆ ನೀನಲ್ಲದೆ ಆತನ ಸಂಕಲ್ಪಕ್ಕೆ ಗೋಚರಳಾದವಳು ಇನ್ನಾ್ಯರು ?

ಊರ್ವ.—ಅಷ್ಟುಮಟ್ಟಿಗೆ ತಿಳಿಯಲಾರದ ಈ ನನ್ನ ಮನಸ್ಸು ಸಂದೇಹ ಪಡುತ್ತಿರುವದು.

ಚಿತ್ರ.—(ನೋಡಿ) ಎಲೆ ಸಖಿ ಆ ರಾಜರ್ಷಿಯು ಮಣಿಹರ್ಮ್ಯದಲ್ಲಿ ತನ್ನ ಮಿತ್ರನೊಡನೆ ಸೇರಿರುವನು. ಅಲ್ಲಿಗೆ ಹೋಗೋಣ ನಡೆ.

(ಎಂದಿಬ್ಬರೂ ಇಳಿಯುವರು).

ರಾಜಂ.—ಮಿತ್ರನೆ ನನಗೆ ರಾತ್ರಿಯಂತೆ ಮನ್ಮಥತಾಪವೂ ಹೆಚ್ಚುತ್ತಿರುವದು.

ಊರ್ವ.—ಎಲೆ ಕೆಳದಿ ಈ ಮಾತಿನ ಅರ್ಥವು ಸ್ಪಷ್ಟವಾಗಿಲ್ಲ. ನಿನ್ನ ಮಾತಿನಿಂದ ಸ್ವಲ್ಪ ನೆಮ್ಮದಿಯಾಗಿದ್ದ ನನ್ನ ಮನಸ್ಸಿಗೆ ಕಳವಳವುಂಟಾಗಿರುವದು ; ಸಂದೇಹಪರಿಹಾರವಾಗುವವರಿಗೂ ನಾವು ತಿರಸ್ಕರಿಣೀ ಪ್ರಭಾವದಿಂದ ಕಾಣಿಸಿಕೊಳ್ಳದಂತೆ ಇಲ್ಲಿಯೇ ಮರೆಯಾಗಿ ನಿಂತು ಅವರ ಸ್ವೇಚ್ಛಾಲಾಪಗಳನ್ನು ಕೇಳೋಣ.

ಚಿತ್ರ.—ಒಳ್ಳೇದು ನಿನ್ನಿಷ್ಟವಿದ್ದಂತಾಗಲಿ.

(ಎಂದು ಮರೆಯಾಗಿ ನಿಲ್ಲುವರು).

ವಿದೂ.—ಮಿತ್ರನೆ ಹಾಗಾದರೆ ನಿನ್ನ ಸಂತಾಪವನ್ನು ಕಳೆಯುವದಕ್ಕೆ ಒಂದುಪಾಯವುಂಟು, ಕೇಳು ; ಅತ್ಯಂತ ಶೀತಳವಾಗಿರುವ ಅಮೃತಮಯವಾದ ಚಂದ್ರನ ಕಿರಣಗಳನ್ನು ಸೇವಿಸು.

ರಾಜಂ.—ಇವುಗಳಿಂದಲೆಲ್ಲಾ ಏನೂ ಆಗಲಾರದು.

ವೃತ್ತ॥ ನವಸುಮತಲ್ಪಮುಂಮಣಿಸರಂಗಳು ಮುತ್ತಮಗಂಧಲೇಪಮುಂ॥
ಕುವಲಯಬಾಂಧವಾಂಶುಗಳು ವಾರಿಸಲಾರವನಂಗತಾಪಮಂ।
ದಿವಿಭವೆಯಾಸುಧಾಂಶುಮುಖಿಯಾರಿಸಲಾಪ್ಪಳದಂ
ಊರ್ವ.—ಆ ದಿವ್ಯಸ್ತ್ರೀ ಇನ್ಯಾವಳು.!
ರಾಜಂ.—ಮನೋಜ್ಞವಾ.।
ಯುವತಿಯನಿಶ್ಚಲಾಕಕೃತಸಂಕಥೆಯಾದೊಡಮಾಪ್ಪದಾರಿಸಲ್॥

ಊರ್ವ.—ಎಲೆ ಮನಸ್ಸೆ ನೀನು ಅಂಥಾ ಸ್ವರ್ಗವನ್ನು ಬಿಟ್ಟು ಬಂದದ್ದಕ್ಕೆ ತಕ್ಕ ಫಲವಾಯಿತು.

ವಿದೂ.—ನನಗೂ ದಿವ್ಯವಾದ ದ್ರಾಕ್ಷೀಹಣ್ಣೂ ಮಾವಿನಹಣ್ಣೂ ಸಿಕ್ಕದೇ ಇದ್ದಾಗ ನಾನೂ ಅವುಗಳನ್ನು ನೆನಸಿಕೊಂಡೇ ತೃಪ್ತಿಪಡುವೆನು.

ರಾಜಂ.—ಆಹಣ್ಣು ನಿನಗೆ ದೊರೆಯಬಹುದು.

ವಿದೂ.—ಹಾಗಾದರೆ ಆ ಹೆಣ್ಣೂ ನಿನಗೆ ದೊರೆಯುಬಹುದು.

ರಾಜಂ.—ಮಿತ್ರನೆ ನಾನು ತಿಳಿದಿರುವದನ್ನು ಕೇಳು.

ಚಿತ್ರ.—ಎಲೆ ಸಂಶಯಾತ್ಮಳೆ ಚೆನ್ನಾಗಿ ಕೇಳು.

ವಿದೂ.—ಹ್ಯಾಗೆ ಹೇಳು ಸ್ವಲ್ಪ ಕೇಳೋಣ.

ರಾಜಂ.—ಕಂ॥ ಆತೇಲಲುಗಿದೊಡಾಮುನಿ।
ಜಾತೆಯಭುಜಶಿರವಸೋಂಕಿದೆನ್ನೀಭುಜಮೊಂ॥
ದೇತಾನಾದುದುಧನ್ಯಂ।
ಭೂತಳಕತ್ಯಂತಭಾರಮುಳಿದಂಗಂಗಳ್॥ ೧೧॥

ಚಿತ್ರ.—ಎಲೆ ಸಖಿ ಇನ್ನೂ ತಡವೇತಕ್ಕೆ.?

ಊರ್ವ.—(ಜಾಗ್ರತೆಯಾಗಿ ಮುಂದೆ ಬಂದು) ಎಲೆ ಚಿತ್ರಲೇಖೆ ಇದೇನು ನಾನು ಎದುರಿಗೆ ನಿಂತಿದ್ದಾಗ್ಯೂ ಮಹಾರಾಜನು ಉದಾಸೀನನಾಗಿರುವನು.?

ಚಿತ್ರ.—(ನಕ್ಕು) ಆತುರದಿಂದ ತಿರಸ್ಕರಿಣಿಯನ್ನು ತೆಗೆಯದೆ ಹೋದೆ. ನಿನ್ನನ್ನು ಕಾಣಲಾರದ ಮಹಾರಾಜನನ್ನು ಉದಾಸೀನನೆಂದು ಹ್ಯಾಗೆ ತಿಳಿಸುವೆ ?

ತೆರೆಯಲ್ಲಿ.—ಇತ್ತ ಲಿತ್ತ ಲ್ ಮಹಾರಾಣಿಯು.

(ಎಲ್ಲರೂ ಕಿವಿಗೊಟ್ಟು ಕೇಳುವರು).

(ಊರ್ವಶಿಯು ಸಂಭ್ರಾಂತಳಾಗಿ ನಿಲ್ಲುವಳು).

ವಿದೂ.—ಓಹೊ ! ಮಹಾರಾಣಿಯು ಬಂದು ಬಿಟ್ಟಳು ; ಇನ್ನು ಭದ್ರವಾಗಿ ಬಾಯಿಮುಚ್ಚು.

ರಾಜಂ.—ನೀನೂ ಈ ಸಂಗತಿ ಪ್ರಕಾಶವಾಗದಂತೆ ಸುಮ್ಮನಿರು.

ಊರ್ವ.—ಚಿತ್ರಲೇಖೆ ಈಗ ನಾವೇನು ಮಾಡತಕ್ಕದ್ದು ?

ಚಿತ್ರ.—ಯಾತಕ್ಕೋಸ್ಕರ ಭಯಪಡುತ್ತೀಯೆ ? ತಿರಸ್ಕರಿಣೀ ವಿದ್ಯೆ ನಮ್ಮಲ್ಲಿಲ್ಲವೆ ? ವ್ರತನಿಯಮದಲ್ಲಿರತಕ್ಕ ಈಕೆ ರಾಯನ ಸಮೀಪದಲ್ಲಿ ಬಹಳಹೊತ್ತು ನಿಲ್ಲುವದಿಲ್ಲ.

(ರಾಣಿಯು ಪೂಜಾಸಾಮಗ್ರೀಸಹಿತರಾದ ಚೇಟಿಯರೊಡನೆ ಪ್ರವೇಶಿಸುವಳು).

ಚೇಟಿ.—ಇತ್ತ ಲಿತ್ತ ಲ್ ಮಹಾರಾಣಿಯು.

ರಾಣಿ.—(ಚಂದ್ರನನ್ನು ನೋಡಿ) ಎಲೆ ನಿಪುಣಿಕೆ ಈ ಚಂದ್ರನು ರೋಹಿಣೀ ಸಂಯೋಗದಿಂದ ಈಗ ಅತ್ಯಂತವಾಗಿ ಪ್ರಕಾಶಿಸುತ್ತಿರುವನು.

ನಿಪು.—ತಮ್ಮ ಸಾನ್ನಿಧ್ಯದಿಂದ ಮಹಾರಾಜನು ಪ್ರಕಾಶಿಸುವಂತೆ ರೋಹಿಣಿಯ ಸಾನ್ನಿಧ್ಯದಿಂದ ಚಂದ್ರನು ವಿಶೇಷವಾಗಿ ಪ್ರಕಾಶಿಸುವದೇ ಸಹಜ.

ವಿದೂ.—ಅಯ್ಯೋ ಮಹಾರಾಣಿಯು ಬ್ರಾಹ್ಮಣನಾದ ನನಗೆ ಸ್ವಸ್ತಿವಾಚನನಿಮಿತ್ತವಾದ ಉಪಾಯನ ದಾನವನ್ನು ಕೊಟ್ಟಾಳೆಂತಲೂ ನಿನ್ನ ವಿಷಯದಲ್ಲಿ ಚಂದ್ರವ್ರತವನ್ನು ಮಾಡಬೇಕೆಂಬ ನೆವದಿಂದ ಕೋಪವನ್ನು

ಬಿಟ್ಟು ಪ್ರಸನ್ನಳಾಗಿರುವಂತೆಯೂ ತೋರುವದ್ದರಿಂದ ನನ್ನ ಕಣ್ಣಿಗೆ ಅತ್ಯಂತ ಸಂತೋಷಕರಳಾಗಿದಾಳೆ.

ರಾಜಂ.—(ನಸುನಕ್ಕು) ಈಕೆಯು ಸಂತೋಷಕರಳಾಗಿರುವದಕ್ಕೆ ನಿನ್ನ ವಿಷಯದಲ್ಲಿ ಎರಡು ಕಾರಣಗಳೂ ಇರಬಹುದು; ನನಗಾದರೆ ಎರಡನೇ ಕಾರಣ ವೊಂದೇ. ಕೇಳು—

ವೃತ್ತ॥ ಕರದೊಳ್ ಮಂಗಳಸೂತ್ರವೊಪ್ಪೆ ಕುರುಳೊಳ್ ದೂರ್ವಾಂಕುರಂ
ಶೋಭಿಸಲ್ ।
ಪಿರಿದುಂ ರಂಜಿಸೆ ಕೋಮಲಾಂಗಲತೆಯೊಳ್ ನವ್ಯಂದುಕೂಲಂ ವ್ರತಾ॥
ಚರಣವ್ಯಾಜದೆ ವಕ್ರಭಾವಮುಳಿದಿರ್ಪೀಮಾನಿನೀರತ್ನದೊಂ ।
ದಿರವೇ ಎನ್ನೊಳತಿ ಪ್ರಸನ್ನೆಯೆನುತಂಪೇಳುತ್ತಮಿರ್ಕ್ಕುಂನಿಜಂ ॥೧೦॥

ರಾಣಿ.—(ಸಮೀಪಕ್ಕೆ ಬಂದು) ಆರ್ಯಪುತ್ರನಿಗೆ ಜಯವಾಗಲಿ.

ಚೇಟಿಯರು.—ಮಹಾರಾಜನಿಗೆ ಜಯವಾಗಲಿ.

ವಿದೂ.—ಎಲೌ ಪೂಜ್ಯಳೆ ನಿನಗೆ ಮಂಗಳವಾಗಲಿ.

ರಾಜಂ.—ಎಲೆ ದೇವಿ ನಿನಗೆ ಸುಖಾಗಮನವೆ?

(ಕೈ ಹಿಡಿದುಕೊಂಡು ಕೂಡಿಸಿಕೊಳ್ಳುವನು).

ಊರ್ವ.—ಎಲೆ ಸಖಿ ಈಕೆ ದೇವಿಯೆಂದು ಕರಸಿಕೊಳ್ಳುವದಕ್ಕೆ ಯೋಗ್ಯಳೇ ಸರಿ. ಗುಣಗಳಲ್ಲಿ ಯಾವಭಾಗದಲ್ಲಿತಾನೇ ದೇವತಾ ಸ್ತ್ರೀಗಿಂತ ಕಡಮೆಯಾಗಿಧಾಳೆ?

ಚಿತ್ರ.—ನಿಜ ಮಾತ್ಸರವಿಲ್ಲದೆ ನೀನು ಸರಿಯಾಗಿ ಹೇಳಿದೆ.

ರಾಣಿ.—ಆರ್ಯಪುತ್ರನೆ ನಿನ್ನನ್ನು ಪುರಸ್ಕರಿಸಿ ಈಗ ನಾನೊಂದು ವ್ರತವನ್ನು ಆಚರಿಸುವೆನು. ಅದಕ್ಕೋಸ್ಕರ ಬಂದು ಮುಹೂರ್ತ ನನ್ನ ನಿರ್ಬಂಧವನ್ನು ಸಹಿಸಬೇಕು.

ರಾಜಂ.—ಮಾಣವಕನೆ ಈಕೆ ಮಾಡುವ ನಿರ್ಬಂಧವು ನನಗೆ ಅನುಗ್ರಹವಲ್ಲವೆ?

ವಿದೂ.—ನನಗೆ ಸ್ವಸ್ತಿವಾಚನೆ ದೊರೆಯತಕ್ಕ ಇಂಥಾ ನಿರ್ಬಂಧಗಳು ಎಷ್ಟಾದರೂ ಆಗಲಿ.

ರಾಜಂ.—ಈಗ ದೇವಿ ಮಾಡತಕ್ಕ ವ್ರತದ ಹೆಸರೇನು ?

ರಾಣಿ.—(ನಿಪುಣಿಕೆಯ ಮುಖವನ್ನು ನೋಡುವಳು).

ನಿಪು.—ಮಹಾರಾಜನೆ ಈ ವ್ರತದ ಹೆಸರು ಪ್ರಿಯಪ್ರಸಾದನವೆಂದು.

ರಾಜಂ.—(ರಾಣಿಯನ್ನುನೋಡಿ)—

ಕಂ ॥ ಎಲೆ ಕೋಮಲಾಂಗಿ ನಿನ್ನಯ ।
ತಿಳಿವನೆ ಹಾರೈಸುತಿರ್ಪ್ಪ ದಾಸನನೆನ್ನಂ ॥
ತಿಳಿಯಿಪವಮನದಿಂ ನಿನ್ನಯ ।
ಲಲಿತಾಂಗವನೇತಕಿಂತು ಕಂದಿಪೆ ಮುಗುದೇ ॥ ೧೩ ॥

ಊರ್ವ.—ಎಲೆ ಸಖಿ ಈತನು ರಾಣಿಯನ್ನು ಎಷ್ಟುಮೇಲಾಗಿ ತಿಳಿದಿರುವನು ?

ಚಿತ್ರ.—ಎಲೆ ಮುಗ್ಧೆ ಹಾಗಲ್ಲ ಕೇಳು, ಅನ್ಯಸ್ತ್ರೀಯರಲ್ಲಿ ಅನುರಕ್ತರಾದ ಪುರುಷರು ಸ್ವಸ್ತ್ರೀಯಲ್ಲಿ ಅತಿ ವಿನಯವನ್ನು ತೋರಿಸತಕ್ಕದ್ದೇ ಸ್ವಭಾವ.

ರಾಣಿ.—ಉಪಕ್ರಮದಲ್ಲೇ ಫಲವನ್ನು ತೋರಿಸುವ ಈ ವ್ರತದ ಮಾಹಾತ್ಮ್ಯವನ್ನು ಎಷ್ಟೆಂದು ಹೇಳಲಿ. ಆರ್ಯಪುತ್ರನ ಮುಖದಿಂದ ಇಷ್ಟುಮಟ್ಟಿಗೆ ಮಾತನಾಡಿಸಿತಲ್ಲಾ !

ವಿದೂ.—ಮಹಾರಾಣಿಯೆ ಮಹಾರಾಜನು ಯುಕ್ತವಾಗಿ ಹೇಳಿರುವನು ; ಅದನ್ನು ಮೀರಿ ನಡೆಯುವದು ನಿನಗೆ ಯುಕ್ತವಲ್ಲ.

ರಾಣಿ.—ಎಲೆ ಕನ್ನೆಯರಿರಾ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಬನ್ನಿ ; ಈ ಉಪ್ಪರಿಗೆಯ ಮೇಲೆ ಪ್ರಸರಿಸಿರುವ ಚಂದ್ರಕಿರಣಗಳನ್ನು ಪೂಜಿಸುವೆನು.

ಚೇಟಿಯರು.—ಮಹಾರಾಣಿಯ ಅಪ್ಪಣೆಯಾದಂತಾಗಲಿ.

(ಎಂದು ಪೂಜಾಸಾಮಗ್ರಿಯನ್ನು ಒಪ್ಪಿಸುವರು.)

ರಾಣಿ.—(ಚಂದ್ರಕಿರಣಗಳನ್ನು ಕ್ರಮವಾಗಿ ಪೂಜಿಸಿ) ಎಲೆ ನಿಪುಣಿಕೆ ನಿವೇದನಕ್ಕೋಸ್ಕರ ತಂದಿರತಕ್ಕ ಮೋದಕಗಳನ್ನು ಭಕ್ಷ್ಯಗಳಲ್ಲಿ ವಿಶೇಷಾಸಕ್ತಿಯುಳ್ಳ ಆರ್ಯನಾದ ಮಾಣವಕನಿಗೆ ತಂದುಕೊಡು.

ಚೇಟಿ.—ಅಪ್ಪಣೆ. (ಎಂದು ಕಡಬಿನ ತಟ್ಟೆಯನ್ನು ತಂದಿರಿಸುವಳು.)

ಊರ್ವ.—ಈ ರಾಣಿಗೆ ಈ ಬ್ರಾಹ್ಮಣನಲ್ಲಿ ತುಂಬಾ ಬಹುಮಾನವಿರುವ ಹಾಗೆ ತೋರುತ್ತೆ.

ರಾಣಿ.—ಎಲೈ ಪೂಜ್ಯನಾದ ಮಾಣವಕನೆ ಇದು ನಿನ್ನದು, ತೆಗೆದುಕೊಳ್ಳಬೇಕು. (ಎಂದು ಉಪಾಯನವನ್ನು ಕೊಡುವಳು)

ವಿದೂ.—(ತೆಗೆದುಕೊಂಡು) ಮಹಾರಾಣಿಯೆ ನಿನಗೆ ಮಂಗಳವಾಗಲಿ, ಈ ವ್ರತವು ನಿನಗೆ ಅಧಿಕವಾದ ಫಲವನ್ನು ಕೊಡಲಿ.

ರಾಣಿ.—ಆರ್ಯಪುತ್ರನೆ ಇತ್ತ ಲಾಲಿಸಬೇಕು.

ರಾಜಂ.—ಇದೋ ಸಿದ್ಧನಾಗಿರುವೆನು.

ರಾಣಿ.—(ನಮಸ್ಕಾರಮಾಡಿ ಕೈಮುಗಿದುಕೊಂಡು) * ರೋಹಿಣೀಸಹಿತನಾದ ಚಂದ್ರನನ್ನು ಸಾಕ್ಷಿಯಿಟ್ಟುಕೊಂಡು ಆರ್ಯಪುತ್ರನ ಕೋಪವನ್ನು ಪರಿಹರಿಸುವೆನು. ಆರ್ಯಪುತ್ರನು ಯಾವ ಕಾಂತೆಯಲ್ಲಿ ಅನುರಕ್ತನಾಗಿರುವನೋ ಯಾವಳು ಆರ್ಯಪುತ್ರನಲ್ಲಿ ಅತ್ಯಂತ ಅನುರಕ್ತಳಾಗಿರುವಳೋ ಇಂದುಮೊದಲಾಗಿ ಆರ್ಯಪುತ್ರನು ಆಕೆಯಲ್ಲೂ ನನ್ನಲ್ಲೂ ಸಮಾನವಾದ ಪ್ರೇಮದಿಂದಿರಲೆಂದು ಪ್ರಾರ್ಥಿಸುತ್ತೇನೆ.

---

*॥ ರಾಗ—ಭೈರವಿ ॥ ॥ ರೂಪಕತಾಳ ॥

ಚಂದ್ರಕುಲಜನೇ । ದೇ । ವೇಂದ್ರಮಿತ್ರನೇ ॥ ಸಾಂದ್ರಕರುಣ ಕೇಳುವಿಗತ । ತಂದ್ರನಾಗಿ ನನ್ನ ನುಡಿಯ ॥ ೧ ॥ ವಂದನೀಯನೇ । ಮಾರ । ಸುಂದರಾಂಗನೇ ॥ ಇಂದುಸಾಕ್ಷಿಯಾಗೆ ನಾ । ನಿಂದು ಬೇಡಿಕೊಂಬೆ ನಿನ್ನ ॥ ೨ ॥ ನಿನ್ನನಾವಳು । ಮನ । ದನ್ನವರಿಸಳು ॥ ಎನ್ನೊಳವಳೊಳುಂ ನೀನ । ಭಿನ್ನವೃತ್ತಿಯಿಂದಲಿಹುದು ॥ ೩ ॥

ಊರ್ವ.—ಇದು ಪರಿಹಾಸ್ಯದಮಾತೊ ಅಥವಾ ನಿಜವೊ ತಿಳೀದು ನನೆಗಂತೂ ನಂಬಿಕೆಸಾಲದು.

ಚಿತ್ರ.—ಮಹಾನುಭಾವಳಾಗಿಯೂ ಪತಿವ್ರತೆಯಾಗಿಯೂ ಇರುವ ಈಕೆ ನಿನ್ನಿಷ್ಟಾರ್ಥವನ್ನು ಅನುಮತಿಸಿರುವಳು. ಇನ್ನುಮೇಲೆ ನಿನಗೆ ಈ ಮಹಾರಾಜನ ಸಮಾಗಮವು ನಿರ್ವಿಘ್ನವಾಗಿ ಉಂಟಾಗುವದು.

ವಿದೂ.—(ರಾಯನನ್ನು ನೋಡಿ ಮರೆಯಾಗಿ) ಮೀನು ಕೈತಪ್ಪಿಸಿಕೊಂಡು ಹೋದಮೇಲೆ ಜಾಣನಾದ ಬೆಸ್ತರವನು ಹೋಗಲಿ ಪುಣ್ಯಬಂತೆಂದು ಹೇಳುವಂತೆ ಈಗ ಮಹಾರಾಣಿ ಹೇಳಿದ್ದೆಲ್ಲಾ ಸಹಜ. (ಪ್ರಕಾಶ) ಮಹಾರಾಣಿಯೆ ಹಾಗಾದರೇನು ನಮ್ಮ ಮಹಾರಾಜನು ಅಂಥಾವನೆ ?

ರಾಣಿ.—ಎಲೈ ಮೂಢನೆ ನಾನು ಇದೊಂದು ವ್ರತದಿಂದ ಆರ್ಯಪುತ್ರನ ಶರೀರಸಂತಾಪವನ್ನು ಪರಿಹರಿಸಬೇಕೆಂದು ಪ್ರವರ್ತಿಸಿರುವೆನು ಇದರಿಂದ ಆರ್ಯಪುತ್ರನ ಸಂತಾಪವು ಶಾಂತವಾಗಿರುವದೋ ಇಲ್ಲವೋ ತಿಳಿಯದು.

ರಾಜಂ.—*ಕಂ ॥ ಎನ್ನಂ ಪೆರಳ್ಗೀಯಲ್ಕೇಣ್ ।
ನಿನ್ನವನಂ ಮಾಡಿಕೊಳ್ಳಲುಂ ಪ್ರಭವಿಪೆ ನೀಂ ॥
ಸನ್ನುತಶೀಲಾನ್ವಿತೆ ಯೇ ।
ಕೆನ್ನೊಳ್ ಶಂಕಿಸುವೆ ನಿನ್ನೊಳಾನಂತಲ್ಲಂ ॥ ೧೪ ॥

ರಾಣಿ.—ಹಾಗಿರಲಿ ಇಲ್ಲದೇಇರಲಿ, ನನ್ನ ವ್ರತವಂತೂ ನೆರವೇರಿತು; ಎಲೆ ಚೇಟಿಯರಿರಾ ಬನ್ನಿಬನ್ನಿ ಹೋಗೋಣ.

ರಾಜಂ.—(ಎದ್ದುಬಂದು ತಡೆದು) ಎಲೆ ಪ್ರಿಯೆ ಹೀಗೆ ಬಿಟ್ಟು ಹೋದರೆ ನನ್ನನ್ನು ನೀನು ಪ್ರಸನ್ನನನ್ನು ಮಾಡಿದ್ದೇ ಸುಳ್ಳಾಗುವದಿಲ್ಲವೆ ?

---

*॥ ರಾಗ—ಸುರಟಿ ॥ ॥ ಆದಿತಾಳ ॥

ಭಾಮಿನೀ ಭೀರುವೇ ॥ಪ॥ ೧ ಅಂಕುರಿಸುವುದೆ ಕ । ಳಂಕವು ನನ್ನೊಳು ॥ ಶಂಕಿಪುದೇನಿದು । ಪಂಕಮುಖಿ ॥ ೧ ॥ ೨ ಒಡತಿಯು ನೀನೀ । ಪೊಡವಿಗೆ ಭೋಗಿಸೆ ॥ ಕೊಡಲಥವಾ ಪೆರ । ಮಡದಿಯರಿಗೆ ॥ ೨ ॥ ೩ ಕನಸಿನೊಳುಂ ಪರ । ವನಿತೆಯ ನೇರುವ ॥ ವನೆ ನಾಂ ನುಡಿ ನೀಂ । ಮನವನ್ನೆಯೆ ॥ ೩ ॥

ರಾಣಿ.—ಆರ್ಯಪುತ್ರನೆ ಯಾವಾಗಲಾದರೂ ನಾನು ವ್ರತನಿಯಮವನ್ನು ಮೀರಿ ನಡೆಯುವದುಂಟೆ ? (ಎಂದು ಚೇಟಿಯರೊಡನೆ ತೆರಳಿದಳು.)

ಊರ್ವ.—ಎಲೌ ಚಿತ್ರಲೇಖೆ ಈ ರಾಯನು ಪತ್ನಿಯಲ್ಲಿ ಬಹಳ ಪ್ರೀತಿಯುಳ್ಳವನಾಗಿರುವನು, ಆದರೂ ಈತನಲ್ಲಿ ಸೇರಿರತಕ್ಕ ನನ್ನ ಮನಸ್ಸನ್ನು ನಾನು ಹಿಂತಿರುಗಿಸಲಾರೆ.

ಚಿತ್ರ.—ಇದೇನು ನೀನು ನಿರಾಶಳಾಗಿ ಯೋಚಿಸುವದು ?

ರಾಜಂ.—(ಪೀಠದಲ್ಲಿ ಕೂತುಕೊಂಡು) ಮಿತ್ರನೆ ದೇವಿ ಇನ್ನೂ ದೂರ ಹೋಗಿರಲಾರಳಲ್ಲವೆ ?

ವಿದೂ.—ಮಹಾರಾಜನೆ ವೈದ್ಯನು ರೋಗವು ಅಸಾಧ್ಯವೆಂದು ತಿಳಿದು ರೋಗಿಯನ್ನು ಅವನ ಇಷ್ಟಾನುಸಾರವಾಗಿ ಬಿಟ್ಟುಬಿಡುವಂತೆ ನಿನ್ನ ಭ್ರಾಂತಿಯನ್ನು ತಪ್ಪಿಸುವದು ಅಸಾಧ್ಯವೆಂದು ತಿಳಿದು ಮಹಾರಾಣಿಯು ನಿನ್ನನ್ನು ಸ್ವಚ್ಛಂದವಾಗಿ ಬಿಟ್ಟುಬಿಟ್ಟಿರುವಳು. ಇನ್ನು ನೀನು ಹೇಳಬೇಕಾದ ಸಂಗತಿಯನ್ನು ಸ್ವಲ್ಪವೂ ಅಳುಕದೆ ಹೇಳು.

ರಾಜಂ.—ಈಗ ಊರ್ವಶಿಯು.

ಊರ್ವ.—ಈಗ ನಾನು ಕೃತಾರ್ಥಳು.

ರಾಜಂ.—

ವೃ ॥ ಕಿವಿಯೊಳದೊರ್ಮ್ಮೆಬೀಳಪಳೆತಾಂಮರೆಗೊಂಡುಲತಾಂಗಿನೂಪುರಾ ।
ರವಮ ನದೊರ್ಮ್ಮೆ ಪಿಂದೆನಡೆತಂದು ತಳಿಗ್ಗೆಣೆಯಾದ ಕಯ್ಗಳಿಂ ॥
ತವಕದೊಳೆನ್ನ ಕಣ್ಗಳನೆ ಮುಚ್ಚುವಳೀ ಸಖಿಯೆನ್ನ ಭಾಗ್ಯದಿಂ ।
ದವಳನದೊರ್ಮ್ಮೆಯೆಯ್ದಿಪಳೆ ಈಕರುಮಾಡವನೊಯ್ಯನೊಯ್ಯನೇ ॥

ಊರ್ವಶಿ.—ಎಲೆ ಚಿತ್ರಲೇಖೆ ಮಹಾರಾಜನ ಈ ಮನೋರಥವನ್ನು ನೆರವೇರಿಸುವೆನು.

(ಎಂದು ಅದೃಶ್ಯಳಾಗಿಯೇ ಹಿಂದೆಬಂದು ರಾಯನ ಕಣ್ಣು ಮುಚ್ಚುವಳು).

ಚಿತ್ರ.—(ಪ್ರತ್ಯಕ್ಷವಾಗಿ ಗುಟ್ಟಾಗಿ ವಿದೂಷಕನನ್ನು ಕುರಿತು “ಈಗ ನಿನ್ನ ಕಣ್ಣು ಮುಚ್ಚಿದವರು ಯಾರು” ಎಂದು ರಾಯನನ್ನು ಕೇಳುವಂತೆ ಸನ್ನೆ ಮಾಡುವಳು).

ವಿದೂ.—ಮಹಾರಾಜನೆ ನಿನ್ನ ಕಣ್ಣುಮುಚ್ಚಿದವರು ಯಾರು?

ರಾಜಂ.—(ಸ್ಪರ್ಶಸುಖವನ್ನು ನಟಿಸಿ) ಮಿತ್ರನೆ ಇನ್ನಾರು? ನಾರಾಯಣಮಹರ್ಷಿಯ ಶರೀರದಲ್ಲಿ ಹುಟ್ಟಿದ ಆ ಊರ್ವಶಿಯೇ—ಕೇಳು.

ಕಂ ॥ ಇನ್ನಾವಳ್ ಕಯ್ಸೋಂಕಿನೊ ।
ಳೆನ್ನೀಸ್ಮರತಪ್ತದೇಹಮಂ ತಂಪಿಸುವಳ್ ॥
ಕನ್ನೆಯ್ದಿಲೆಗೆವಿಕಾಸಂ ।
ಜೊನ್ನದಿನಪ್ಪಂತಿರಪ್ಪುದೇನಾತಪದಿಂ ॥ ೧೬ ॥

(ಎಂದು ಅದೇ ಕಯ್ಯನ್ನು ಹಿಡಿದುಕೊಂಡು ಎದ್ದು ಊರ್ವಶಿಯನ್ನು ಆಲಿಂಗಿಸುವನು).

ಊರ್ವ.—(ಸ್ವಲ್ಪ ಹಿಂಜರಿದು ಎದುರಿಗೆ ಬಂದು) ಮಹಾರಾಜನಿಗೆ ಜಯವಾಗಲಿ.

ಚಿತ್ರ.—ಮಹಾರಾಜನಿಗೆ ಸೌಖ್ಯವೆ?

ರಾಜಂ.—ಈಗ ನೀನು ಹೀಗೆ ಕೇಳುವದು ಸರಿಯಾಗಿದೆ.

ಊರ್ವ.—ಎಲೆ ಚಿತ್ರಲೇಖೆ ಮಹಾರಾಜನನ್ನು ರಾಣಿಯೇ ನನಗೊಪ್ಪಿಸಿರುವಳು. ಆದ್ದರಿಂದ ನಾನೀತನ ವಿಷಯದಲ್ಲಿ ಇಷ್ಟು ಸ್ವಾತಂತ್ರ್ಯವನ್ನು ನಡಸಿದೆನು. ನನ್ನನ್ನು ವಿರುದ್ಧವಾಗಿ ನಡದಳೆಂದು ನೀನೆಣಿಸಬೇಡ.

ವಿದೂ.—ಹಾಗಾದರೇನು ನೀವು ಸೂರ್ಯಾಸ್ತಮಯಕ್ಕೆ ಮುಂಚಿತವಾಗಿಯೇ ಇಲ್ಲಿಗೆ ಬಂದಿರೊ? ಸರಿ ಸರಿ!

ರಾಜಂ.—(ಊರ್ವಶಿಯನ್ನು ನೋಡಿ)

ಕಂ ॥ ಎನಗಿತ್ತಳ್ ದೇವಿಯೆ ತಾ ।
ನೆನುತುಪಭೋಗಿಸುವೊಡೆನ್ನ ತನುವಂ ನೀನಾ ॥
ರನುಮತಿಯಿಂ ಮೊದಲೆನ್ನಯ ।
ಮನಮಂ ನೆರೆಕೊಂಡೆ ಪೇಳ್ವಯೋರುಹನಯನೇ ॥ ೧೭ ॥

ಚಿತ್ರ.— ಮಹಾರಾಜನೆ ಈ ಮಾತಿಗೆ ಇವಳೇನುತ್ತರ ಹೇಳುವಳು? ನನ್ನದೊಂದು ವಿಜ್ಞಾಪನೆಯನ್ನು ಲಾಲಿಸಬೇಕು.

ರಾಜಂ.—ಅದೇನು ಹೇಳು, ಕೇಳುವೆನು.

ಚಿತ್ರ.—ವಸಂತಋತು ಕಳೆದಮೇಲೆ ಬೇಸಿಗೇಕಾಲದಲ್ಲಿ ನಾನು ಸೂರ್ಯೋಪಾಸನೆಗೋಸ್ಕರ ಹೋಗಬೇಕಾಗಿರುವದ್ದರಿಂದ ಈ ನನ್ನ ಸಖಿಯು ಯಾವದಾದರೂ ನಿಮಿತ್ತದಿಂದ ಅಯ್ಯೋ! ಸ್ವರ್ಗವನ್ನು ಬಿಟ್ಟುಬಂದೆನಲ್ಲಾ! ಎಂದು ಅಂದುಕೊಳ್ಳದಹಾಗೆ ಈಕೆಯನ್ನು ನೀನು ಆದರಿಸಿಕೊಂಡಿರಬೇಕು.

ವಿದೂ.—ಏನಂದೆ! ಸ್ವರ್ಗವನ್ನೇಕೆ ನೆನಸುವಳು? ಅಲ್ಲೇನಿದೆ! ಅಲ್ಲಿರತಕ್ಕವರಿಗೆ ಆಹಾರಕ್ಕೇ ಗತಿಯಿಲ್ಲದೆ ಎಲ್ಲರೂ ಮೀನುಗಳಂತೆ ಸರ್ವದಾ ಕಣ್ಣುಬಿಟ್ಟುಕೊಂಡಿರುವದೇ ಪುರುಷಾರ್ಥವಾದ್ದರಿಂದ ಲೋಕದಲ್ಲಿ ಮಿಟಿಮಿಟಿಸ್ವರ್ಗವೆಂದು ಜನರು ಹೇಳುವರು.

ರಾಜಂ.—ಎಲೆ ಸಖಿಯೆ—

ಅಗಣಿತಮೆನಿಸಿದಸಗ್ಗದ।
ಸೊಗಮುಂಮರಸಲ್ಕದಾವನಾಪ್ಪಂಕೇಳೀ।
ಮುಗುದ್ಧೆಗೆಪುರೂರವಂ ತಾಂ।
ಮಿಗಿಲೆನೆಪೆರಪೆಂಡಿರಿಂದೆ ದಾಸಪ್ರಾಯಂ ॥ ೧೮ ॥

ಚಿತ್ರ.—ನಾನು ಕೃತಾರ್ಥಳಾದೆನು. ಎಲೆ ಊರ್ವಶಿ ಇನ್ನು ಭಯಪಡಬೇಡ. ನನ್ನನ್ನು ಕಳುಹಿಸಿಕೊಡು.

ಊರ್ವ.—(ಚಿತ್ರಲೇಖೆಯನ್ನು ಆಲಿಂಗಿಸಿ) ಎಲೆ ಸಖಿ ನನ್ನನ್ನು ಮರೆಯಬೇಡ.

ಚಿತ್ರ.—(ನಸುನಗುತ) ಮಹಾರಾಜನೊಡಗೂಡಿದ ನಿನ್ನ ಸಂಗಡ ನಾನಾ ಚತಕ್ಕ ಮಾತನ್ನು ನನ್ನ ಸಂಗಡ ನೀನೇ ಆಡಿದೆಯಾ?

(ಎಂದು ರಾಯನಿಗೆ ವಂದಿಸಿ ತೆರಳಿದಳು).

ವಿದೂ.—ಮಹಾರಾಜನೆ ದೈವಯೋಗದಿಂದ ನಿನ್ನಿಷ್ಟಾರ್ಥ ಕೈಗೂಡಿತಲ್ಲವೆ ?

ರಾಜಂ.—ಮಿತ್ರನೆ ಕೇಳು—

ಕಂ ॥ ಎಂತಾಂಕೃತಾರ್ಥನೀಸುರ ।
ಕಾಂತೆಯಲಾಭದೆಕೃತಾರ್ಥನಂತಲ್ಲಂ ಸಾ ॥
ಮಂತಕಿರೀಟಮಣೀರುಚಿ ।
ದಂತುರಪದಪೀಠವೆನಿಪಸಾಮ್ರಾಜ್ಯದೊಳಂ ॥ ೧೯ ॥

ಊರ್ವ.—ಇದಕ್ಕಿಂತಲೂ ಮೇಲಾದ ಪ್ರಿಯವಚನವನ್ನು ಹೇಳುವಷ್ಟು ವಚನ ಸಂಪತ್ತು ನನಗಿಲ್ಲ.

ರಾಜಂ.—(ಊರ್ವಶಿಯ ಕೈ ಹಿಡಿದು) ಆಃ ಇಷ್ಟಾರ್ಥಲಾಭವೆಂಬುವದು ಪ್ರತಿಕೂಲವಾಗಿದ್ದದ್ದನ್ನೂ ಅನುಕೂಲ ಪಡಿಸುವದು.

ಕಂ ॥ ಸುತನುವೆ ನಿನ್ನ ವಿಯೋಗದೊ ।
ಳತಿತಾಪವ ನೆಸಗುತಿರ್ದ್ದ ಚಂದ್ರನ ಕರಮುಂ ॥
ರತಿಪತಿಯ ನಿಶಿತಶರಮುಂ ।
ಹಿತಕಾರಿಗಳಾದು ವರಸಿ ನಿನ್ನಂ ಸೇರಲ್ ॥ ೨೦ ॥

*ಊರ್ವ.—ರಾಜೇಂದ್ರನೆ ಇದುವರಿಗೂ ತಡಮಾಡಿ ನಾನು ನಿನಗೆ ಗಾಯಾಸವನ್ನುಂಟುಮಾಡಿದ್ದರಿಂದ ಅಪರಾಧವಂತಳಾಗಿಧ್ದೇನೆ.

ರಾಜಂ.—ಎಲೆ ಸುಂದರಿ ಹಾಗಲ್ಲ ಹಾಗಲ್ಲ ಕೇಳು.—

---

* ॥ ರಾಗ—ಶ್ಯಾಮಕಲ್ಯಾಣಿ ॥ ॥ ಆದಿತಾಳ ॥

ರಾಜೇಂದ್ರನೇ । ಮನ್ನಿಸು ॥ ಪ ॥ ಸ್ಮರರೂಪ ಜೀವೇ । ಶ್ವರ ನಿನ್ನ ಸೇರಲೀ ॥ ವರಿಗು ತಡವ ಮಾ । ಡಿರುವಪರಾಧವ ॥ ೧ ॥ ಧರಣೀಶನಾಂ ಮೊದಲ್ । ಸುರರಾಜನಾಜ್ಞೆಯಿಂ ॥ ದಿರದೆ ನಿನ್ನಂ ಬಿಟ್ಟು । ತೆರಳ್ದಪರಾಧವ ॥ ೨ ॥ ವಸುಧಾ ಮಹೇಂದ್ರನೇ । ಕುಸುಮಾಸ್ತ್ರನಿಂದನೀಂ ॥ ಬಸವಳಿವ್ವೋಲ್ವಿರ । ಚಿಸಿದಪರಾಧವ ॥ ೩ ॥

ಕಂ ॥ ಪಿರಿದುಂದುಃಖಮನಾಂತಗೆ ।
ದೊರೆದಾಸುಖಮೇವಿಶೇಷಸುಖಮೆಂದೆನಿಕುಂ ॥
ಮರಗನೆಳಲ್ ಕಡುವಿಸಿಲಿಂ ।
ಪರಿತಪಿಸಿದವಂಗತೀವಸುಖಕರಮಲ್ತೇ ॥ ೨೧ ॥

ವಿದೂ.—ಮಹಾರಾಜನೆ ಮನೋಹರವಾದ ಚಂದ್ರಕಿರಣಗಳನ್ನು ಸೇವಿಸಿದ್ದಾಯಿತ್ತು; ಇನ್ನು ನೀನು ಅರಮನೆಯನ್ನು ಪ್ರವೇಶಿಸುವದಕ್ಕೆ ಸಮಯವಲ್ಲವೆ ?

ರಾಜಂ.—ಹಾಗಾದರೆ ಇನ್ನು ನಿನ್ನ ಸಖಿಗೆ ಮಾರ್ಗವನ್ನು ತೋರಿಸು.

ವಿದೂ.—ಇತ್ತಲಿತ್ತಲ್ ಪೂಜ್ಯಳು.

ರಾಜಂ.—ಎಲೆ ಸುಂದರಿ ಈಗ ನನ್ನ ಪ್ರಾರ್ಥನೆ—ಇದು.

ಊರ್ವ.—ಅದೇನು ?

ರಾಜಂ.—ಕೇಳು.—

ಕಂ ॥ ಮೊದಲಿಷ್ಟಾರ್ಥಂಕಯ್ಸೇ ।
ರದೆ ಶತಗುಣಮೆನಿಸಿ ಪಾಯ್ದು ಪೊಂದೊಂದಿರುಳುಂ ॥
ಪದುಳದೆಶತಾಂಶಮೆಂದೆನಿ ।
ಸಿದೊಡಮ್ರನಿನ್ನೊಂದುಗೂಡಿದೆನ ಗಾಂಧರ್ವ್ಯಂ ॥ ೨೨ ॥

---

* ॥ ರಾಗ—ಬೆಹಾಗ್ ॥ ॥ ಮಿಶ್ರಛಾಪುತಾಳ ॥

ಸುಂದರಾಂಗಿಯೆ । ಚಂದಿರಮುಖಿಯೇ ॥ ಪ ॥ ಇಂದುನಾನು ನಿನ್ನನ್ನಿಂತಾ । ನಂದದಿಂದ ಸಂಪ್ರಾರ್ಥಿಪೆನು ॥ ಅ ॥ ಅಗಲಿನಿನ್ನನದಾವಿರುಳೆಂದು । ಯುಗದೊಲಾದುದು ತಾನದುಬಂದು ॥ ಸುಗುಣೆನಿನ್ನನು ಸೇರಲಾನಿಂದು । ಮಿಗೆ ಸಂಪ್ರಾರ್ಥಿಪೆ ಅಂತಾಗಲೆಂದು ॥ ೧ ॥ ಪರಮಮೌನಿ ನಾರಾಯಣಜಾತೆ । ದೊರೆಯೆನಿನ್ನಯ ಕರುಣವು ದಯಿತೆ ॥ ವಿರಚಿಸಿರುವೆನ್ನಯ ಪುಣ್ಯಲತೆ । ಧರೆಯೊಳ್ಫಲಿಸಿದುದೀಗ ಕಾಂತೇ ॥ ೨ ॥ ಇಂದುಕಾಮಿನಿ ನೀನೆನ್ನ ಸೇರೆ ! ಕುಂದಿತೆನ್ನಯ ತಾಪವು ಚದುರೆ ॥ ಪೊಂದುತಾನಂದವನೀರೆ । ಮಂದಗಾಮಿನಿ ಪೋಪೆವು ಬಾರೇ ॥ ೩ ॥

ಮೂರನೆಯ ಅಂಕವು ಮುಗಿದುದು.

ಚತುರ್ಥಾಂಕಂ.

(ಸಹಜನ್ಯಾ ಚಿತ್ರಲೇಖೆಯರು ವಿಮಾನಾರೂಢರಾಗಿ ಬರುವರು.)

ಸಹ.—(ಚಿತ್ರಲೇಖೆಯನ್ನು ನೋಡಿ) ಎಲೆ ಚಿತ್ರಲೇಖೆ ನಿನ್ನ ಮುಖವು ಬಾಡಿದ ತಾವರೇಹೂವಿನಂತೆ ಮಲಿನವಾಗಿರುವದು ; ಇದನ್ನು ನೋಡಿದರೆ ನಿನ್ನ ಮನಸ್ಸಿನಲ್ಲೇನೋ ದುಃಖವಿರುವಂತೆ ತೋರುವದು ; ಅದೇನು ನನ್ನಸಂಗಡ ಹೇಳಕೂಡದೊ ?

ಚಿತ್ರ.—ಎಲೆ ಕೆಳದಿ ಯಾವಾಗಲೂ ಊರ್ವಶಿಯಸಂಗಡ ಸೂರ್ಯೋಪಾಸನೆಗೆ ಬರುತ್ತಿದ್ದು, ಈಬಾರಿ ನಿನ್ನಸಂಗಡ ಬಂದಿರುವ ನನಗೆ ಊರ್ವಶಿಯ ಜ್ಞಾಪಕ ಬಂದು, ತುಂಬಾ ಕಳವಳವುಂಟಾಗಿರುವದು.

ಸಹ.—ನಿಮ್ಮ ಅನ್ಯೋನ್ಯವಾದ ಪ್ರೇಮಾತಿಶಯವನ್ನು ನಾನು ಚೆನ್ನಾಗಿ ಬಲ್ಲೆ ; ಆಮೇಲೆ ?

ಚಿತ್ರ.—ಈಗ ನನ್ನ ಸಖಿಯ ವಿಶೇಷವೃತ್ತಾಂತವೇನೆಂದು ಧ್ಯಾನದೃಷ್ಟಿಯಿಂದ ನೋಡಲು, ಆಕೆಯು ಬಹಳ ಕಷ್ಟಕ್ಕೆ ಸಿಕ್ಕಿರುವಳೆಂದು ತಿಳಿದು ಬಂತು.

ಸಹ.—(ಕಳವಳಪಟ್ಟು) ಅದೇನು ? ಹೇಳುಹೇಳು.

ಚಿತ್ರ.—ನನ್ನ ಪ್ರಿಯಸಖಿಯಾದ ಊರ್ವಶಿಯು ಕ್ರೀಡಾಸಕ್ತನಾಗಿ ಮಂತ್ರಿಗಳಲ್ಲಿ ರಾಜ್ಯಭಾರವನ್ನು ನೇಮಿಸಿದ ಮಹಾರಾಜನಾದ ಪುರೂರವ ನನ್ನು ಸಂಗಡ ಕರೆದುಕೊಂಡು ಹೋಗಿ, ಗಂಧಮಾದನಪರ್ವತದ ಮನೋಹರವಾದ ಪ್ರದೇಶಗಳಲ್ಲಿ ವಿಹರಿಸುತ್ತಿದ್ದಳು.

ಸಹ.—ಅಂಥಾ ಪ್ರದೇಶಗಳಲ್ಲಿ ಅನುಭವಿಸತಕ್ಕದ್ದೇ ಸಂಭೋಗವೆನ್ನಿಸುವದು ; ಆಮೇಲೆ ?

ಚಿತ್ರ.—ಹೀಗಿರುವಲ್ಲಿ ಆ ಮಹಾರಾಜನು ಒಂದುದಿವಸ ಗಂಗಾತೀರದಲ್ಲಿ ಮರಳುಗುಡ್ಡೆಗಳಮೇಲೆ ಆಟವಾಡುತ್ತಿದ್ದ ಉದಯವತಿಯೆಂಬ ವಿದ್ಯಾ

ಧರಕನ್ಯೆಯನ್ನು ಕ್ಷಣಕಾಲ ದೃಷ್ಟಿಸಿನೋಡಿದನೆಂದು ನನ್ನ ಸಖಿಯು ಕೋಪಿಸಿಕೊಂಡಳು.

ಸಹ.—ನಿಜ, ಪ್ರಿಯನಲ್ಲಿ ಪ್ರೇಮವು ಮಿತಿಮೀರಲು ಸ್ತ್ರೀಯರಿಗೆ ಹೀಗೆಲ್ಲಾ ಅಸಹನವುಂಟಾಗತಕ್ಕದ್ದು ಸಹಜವೇಸರಿ; ಮುಂದೇನು ?

ಚಿತ್ರ.—ಮುಂದೆ ಆ ರಾಜರ್ಷಿಯು ಎಷ್ಟು ಸಮಾಧಾನಮಾಡಿದಾಗ್ಯೂ ಕೇಳದೆ ಗುರುಶಾಪದಿಂದ ಮೂಢಳಾದ ನನ್ನ ಸಖಿಯು ಅಪ್ಸರಸ್ತ್ರೀಯರಾದ ನಾವು ಯಾರೂ ಪ್ರವೇಶಮಾಡಕೂಡದ ಕುಮಾರವನವನ್ನು ಪ್ರವೇಶಿಸಿದಳು ; ಅಲ್ಲಿ ಪ್ರವೇಶಮಾಡಿದ ಕೂಡಲೇ ಬಂದು ಲತೆಯಾಗಿಬಿಟ್ಟಳು.

ಸಹ.—ಹಾಹಾ ! ದೈವಗತಿ ಮೀರತಕ್ಕದ್ದಲ್ಲ. ಆ ರಾಯನಿಗೂ ಊರ್ವಶಿಗೂ ಇದ್ದ ಆರೀತಿಯಾದ ಅನುರಾಗಕ್ಕೆ ಅಕಸ್ಮಾತ್ತಾಗಿ ಈ ಪಾಡು ಬಂತೆ ! ಮಾಡತಕ್ಕದ್ದೇನು ! ಆಮೇಲೆ ಆ ರಾಜನ ಪಾಡೇನಾಯಿತು ?

ಚಿತ್ರ—ಆ ರಾಜನು ಆ ವನಭಾಗದಲ್ಲಿ ಊರ್ವಶಿಯನ್ನೇ ಹುಡುಕುತ್ತ ಹುಚ್ಚು ಹಿಡಿದವನಂತೆ ಕಾಲಹರಣ ಮಾಡುತ್ತಿರುವನು ; ಇದರಮೇಲೆ ಸುಖಿತರಾದವರಿಗೂ ಮನೋವಿಕಾರವನ್ನುಂಟುಮಾಡತಕ್ಕ ಈ ಮೇಘೋದಯವೊಂದುಂಟಾಗಿರುವದು ; ಇದನ್ನು ನೋಡಿದಮೇಲೆ ಇನ್ನೇನು ಅನರ್ಥವುಂಟಾಗುವದೊ ತಿಳಿಯದು.

ಸಹ.—ಸಜ್ಜನರಿಗೆ ಬಂದ ದುಃಖ ಬಹುಕಾಲ ನಿಲ್ಲುವದಿಲ್ಲ ; ಆದಕಾರಣ ಯಾವದಾದರೂ ಬಂದು ದೇವತಾನುಗ್ರಹದಿಂದ ಅವರಿಬ್ಬರೂ ಸೇರುವದರಲ್ಲಿ ಸಂದೇಹವಿಲ್ಲ ; (ಪೂರ್ವದಿಕ್ಕನ್ನು ನೋಡಿ) *ಓಹೊ ! ಬೆಳಗಾಯಿತು ;

---

* ರಾಗ—ಪೂರ್ವಕಲ್ಯಾಣಿ ॥ ॥ ಆದಿತಾಳ ॥

ಬೆಳಗಾದುದೀಗ । ನಳಿನಾಯತಾಕ್ಷಿ ॥ ಪ ॥ ಮೂಡುವರ್ಕನ ಕಾಂತಿ । ಮೂಡಣದೆಸೆಯೊಳು ॥ ನಾಡೆರಂಜಿಪುದನು । ನೋಡುನೋಡಿತ್ತನೀಂ ॥ ೧ ॥ ಅರಳಿದಪೂಸತಾ। ವರೆಗಳ ಪರಿಮಳ ॥ ಭರವನುತಾಳಿ ಸಂ । ಚರಿಪುದು ತಂಗಾಳಿ ॥ ೨ ॥ ಕುಮುದವನವ ಬಿಟ್ಟು । ಕಮಲವನಕೆ ಬಹ ॥ ಭ್ರಮರಗಳುಲಿವ ಸಂ । ಭ್ರಮವಿದೊತೋರ್ಪುದು ॥ ೩ ॥

ನಡೆ ಇನ್ನು ಸೂರ್ಯೋಪಾಸನೆಗೆ ಹೋಗೋಣ ಉದಯಕಾಲ ಮೀರೀತು.
(ಎಂದು ತೆರಳಿದರು.)

(ಇಂತಿದು ಪ್ರವೇಶಕವು).

(ಬಳಿಕ ರಾಜನು ಉನ್ಮತ್ತವೇಷದಿಂದ ಪ್ರವೇಶಿಸುವನು.)

ರಾಜಂ.—(ನಿಟ್ಟುಸುರುಬಿಟ್ಟು) *ನನ್ನ ಪ್ರಿಯೆಯನ್ನು ಎಂದಿಗೆ ನೋಡೇನು. (ಆಕಾಶವನ್ನು ನೋಡುತ್ತ ಕೋಪದಿಂದ) †ಎಲವೆಲವೋ ದುರಾತ್ಮನಾದ ರಾಕ್ಷಸನೆ ನಿಲ್ಲುನಿಲ್ಲು; ನನ್ನ ಪ್ರಾಣಕಾಂತೆಯನ್ನು ತೆಗೆದುಕೊಂಡು ಎಲ್ಲಿಹೋಗುವೆ? ಓಹೊ! ಇದೇನು ಪರ್ವತಶಿಖರದಿಂದ ಆಕಾಶಕ್ಕೆ ನೆಗೆದು ಧನುಸ್ಸನ್ನೆಳೆದು ನನ್ನ ಮೇಲೆ ಬಾಣವೃಷ್ಟಿಯನ್ನು ಕರೆಯುವನು!
(ಹಾಗೇ ನೋಡಿ ದುಃಖದಿಂದ)

ವೃತ್ತ॥ ಇದುಪೊಸಕಾರ್ಮುಗಿಲ್ದುರುಳರಕ್ಕಸನಲ್ತುಸುರೇಂದ್ರಚಾಪವಿಂ।
ತುದಯಿಸಿತೋರ್ಕ್ಕುವಲ್ಲದೆ ಮಹತ್ತರಮಪ್ಪ ಧನುಸ್ಸಿದಲ್ತು ಬಾ॥
ಣದಸರಿಯಲ್ತಿದಾಗಸದೆ ಬೀಳ್ವ ನಿರಂತರವಾರಿಧಾರೆಯು।
ಲ್ಲದೆಕುಡಿಮಿಂಚುಮಿಂಚುವುದುಪೊನ್ನೊರೆಯಂತಿರೆಕಾಂತೆಯಲ್ತಿದುಂ॥

(ಯೋಚಿಸಿ) ಈಗ ಊರ್ವಶಿ ಯೆಲ್ಲಿಕಾನೇ ಹೋಗಿರಬಹುದು—

---

* ರಾಗ—ತೋಡಿ॥ ॥ರೂಪಕತಾಳ॥

ಎಂದುನೋಳ್ಪೆನು। ಪೂ। ರ್ಣೇಂದುಮುಖಿಯನು॥ ಪೊಂದಿಮುದವನು। ನಾ। ನೆಂದು ಸುಖಿಪೆನು॥ ೧॥ ವಿರಹದುರಿಯನು। ಸೈಸ। ಲರಿಯದೀತನು॥ ಸ್ಮರನಸತಿಯನು। ಧಿ। ಕ್ಕರಿಸುವಸಿಯನು॥ ೨॥ ಮಥಿಸುತಿರುವನು। ಮ। ನ್ಮಥನು ಮನವನು॥ ಪ್ರಥಿತಗುಣೆಯನು। ನೋಳ್ಪ। ಪಥವನರಿಯೆನು॥ ೩॥

† ನೋಟು॥ ರಾಗ—ಬಿಲಹರಿ॥ ॥ಏಕತಾಳ॥

ನಿಲ್ಲುನಿಲ್ಲು ಖುಲ್ಲನೀ। ನೆಲ್ಲಿಗೈದುವೆ॥ ಪಲ್ಲಮುರಿದು ನಿನ್ನ ನಿಮಿಷ। ದಲ್ಲಿ ಕೊಲ್ಲುವೆ॥೧॥ ಕಾಣದಂತೆ ಕೊಂಡುಮ। ತ್ಪ್ರಾಣಕಾಂತೆಯಾ॥ ಕೋಣಪಾಧಮನೆನೀಂ ಪ್ರ। ಯಾಣಗೈವೆಯಾ॥ ೨॥ ಸರಸಿಜಾಕ್ಷಿಯನ್ನು ಬಿಟ್ಟು। ತೆರಳಿಪೋಪೆಯೊ॥ ದುರುಳಪೇಳ್ವ ಧುರದೆನಿನ್ನ। ಹರಣವೀವೆಯೊ॥ ೩॥

ವೃ॥ ಮುನಿಸಿಂ ಮೆಯ್ಗರೆದಿರ್ದೊಡಂ ಮಹಿಮೆಯಿಂ ತಾನೀಸು ಪೊಳ್ತಿನ್ನನಾ ।
ಯೆನಿಯಳ್ ಬಿಟ್ಟಿರಳೆನ್ನ ಮುಂದಸುರರೊಯ್ಯಲ್ಕಾಪ್ಸರೆಂ ತಾಕೆಯುಂ ॥
ಅನುರಾಗಂ ಪಿರಿದೆನ್ನೊಳಾಕೆಗದರಿಂ ನಾಕಾಲಯುಂ ಪೊಕ್ಕಳ ।
ಲ್ತನವದ್ಯಾಂಗಿಯದೃಶ್ಯೆಯಾದಳಕಟಾ ದೈವೇಚ್ಛೆಯೇಂ ಚಿತ್ರಮೋ ॥

(ದಿಕ್ಕುಗಳನ್ನು ನೋಡಿ) ಅಯ್ಯೋ! ನಮ್ಮಂಥಾ ಪುಣ್ಯಹೀನರಿಗೆ ದುಃಖದ ಮೇಲೆ ದುಃಖಬರತಕ್ಕದ್ದು ಸ್ವಭಾವ—

ಕಂ॥ ಬಂದುದು ವಿರಹವ್ಯಥೆಯಾ ।
ಸುಂದರಿಯುಂ ಕಾಣದೆನಗೆ ಮೇಣದರೊಡನೈ ॥
ತಂದುದು ಮಿರುಗುವ ತಂಬಿಸಿ ।
ಲಿಂದಂ ಮೊಳಗಿಂದಮಾದ ಮಸೆವೀದಿನಮುಂ ॥ ೩ ॥

ಆಹ! ನನ್ನ ಸಂತಾಪವನ್ನು ನಾನೇ ವ್ಯರ್ಥವಾಗಿ ಉಪೇಕ್ಷಿಸಿಕೊಂಡಿರುವೆನು. "ರಾಜಾ ಕಾಲಸ್ಯ ಕಾರಣಂ" ಎಂದು ಮಹಾತ್ಮರಾದ ಮುನಿಗಳು ಹೇಳುತ್ತಿರುವರಷ್ಟೆ? ಈಗ ಈ ವರ್ಷಾಕಾಲವನ್ನು ನಾನು ಯಾತಕ್ಕೆ ನಿವಾರಣೆಮಾಡಕೂಡದು? (ನೋಡಿ) ಒಂದುವೇಳೆ ಇದನ್ನು ಯಾತಕ್ಕೆ ನಿವಾರಿಸಲಿ; ಈ ವರ್ಷಾಕಾಲದಲ್ಲಿ ಉಂಟಾಗತಕ್ಕ ಚಿಹ್ನೆಗಳಿಂದಲೇ ನನಗೆ ರಾಜೋಪಚಾರವಾಗುತ್ತಿರುವದು. ಇದೋ ಈಗ,—

ವೃತ್ತ॥ ಸೆಳೆಮಿಂಚೊಪ್ಪೆ ಸುವರ್ಣಚಿತ್ರಮೆನೆ ಮೇಘಶ್ರೇಣಿ ಚಂದ್ರಾತಪಂ।
ಬೆಳರ್ತೇವೇತಸಗುಚ್ಛಮಕ್ಕು ಮೆನಗುದ್ಯಚ್ಚಾಮರಂಪಾಂಡರಂ ॥
ಕಳೆಯಲ್ ಬೇಸಿಗೆನುಣ್ಚರಂಬಡೆದು ಸೊಕ್ಕಿಪ್ಪೀನವಿಲ್ಗಳ್ ಪೊಗ ।
ಳ್ಕುಳಗಳ್ ವಾರಿದವೈಶ್ಯ ರಿತ್ತಪ ರುದಾರಾಸಾರಹಾರಂಗಳಂ ॥ ೪ ॥

ಈಗ ಸುಮ್ಮನೆ ರಾಜೋಪಚಾರಗಳನ್ನು ಶ್ಲಾಘಿಸಿಕೊಂಡದ್ದರಿಂದ ಪ್ರಯೋಜನವೇನು? ಈ ವನದಲ್ಲಿ ನನ್ನ ಪ್ರಾಣಕಾಂತೆಯನ್ನು ಹುಡುಕುವೆನು. (ಎಂದು ನಡೆದುನೋಡಿ) ಅಯ್ಯೋ! ಪ್ರಿಯೆಯನ್ನು ಹುಡುಕುವದಕ್ಕೆ

ಹೊರಟ ನನಗೆ ಇನ್ನೂ ವಿರಹತಾಪ ಹೆಚ್ಚುವಹಾಗಾಯ್ತು; ಯಾತಕ್ಕೆಂದರೆ,—

ಕಂ॥ ತಳಿದೆಳಗೆಂಪಂ ತುದಿಯೊಳ್ ।
ಸಲಿಲಮನೊಳಕೊಂಡು ಮೂಡಿದಲರಿಂ ಪೊಸಕಂ ॥
ದಳಿಯಿದುಮುಳಿಸಿಂ ಕಂಬನಿ ।
ದಳೆದೆಳೆಯಳಲೋಚನಂಗಳಂ ನೆನೆಯಿಸುಗುಂ ॥ ೫ ॥

ನನ್ನ ಪ್ರಾಣಕಾಂತೆ ಎಲ್ಲಿಹೋದಳೆಂದು ಹುಡುಕಲಿ ?

ಕಂ॥ ಅಡಿಯಿಂ ನೆಲನಂ ಸೋಂಕಿ ।
ರ್ದೊಡ್ಡಿ ಸೋನೆಯೊಳಂತು ನಾಂದಮಳಲೆಡೆಯೊಳ್ ಮುಂ ॥
ಗಡೆಯುಬ್ಬಿರ್ದತಗ್ಗ ದಪಿಂ ।
ಗಡೆಯ ನಿತಂಬಿನಿಯ ಪಜ್ಜೆ ಕಾಣದೆ ನೋಡಲ್ ॥ ೬ ॥

(ಸ್ವಲ್ಪ ನಡೆದು ನೋಡಿ) ಆಹ ! ಗುರುತು ಸಿಕ್ಕಿತು ಸಿಕ್ಕಿತು, ಇದರಿಂದ ಆಕೆ ಈಮಾರ್ಗದಲ್ಲೇ ಹೋಗಿರುವಳೆಂದು ಚೆನ್ನಾಗಿ ಗೊತ್ತಾಗುವದು.

ಕಂ॥ ಕಡುಮುಳಿಸಿಂ ನಡೆವಾಗಳ್ ।
ತೊಡೆಯುತೆ ತುಟಿಗೆಂಪನುದಿರ್ದ ಕಂಬನಿವೆರಸೀ ॥
ಯೆಡೆಯೊಳ್ ಕೆಡೆದಿರ್ಕ್ಕುಗುಮಾ ।
ಮಡದಿಯ ಕುಚವಸ್ತ್ರ ಮಿದೊ ಶುಕೋದರವರ್ಣಂ ॥ ೭ ॥

ಒಳ್ಳೇದು ಇದನ್ನು ತೆಗೆದುಕೊಳ್ಳುವೆನು.

(ಎಂದು ನಡೆದು ಚೆನ್ನಾಗಿನೋಡಿ ಕಂಬನಿದುಂಬಿ)

ಅಯ್ಯೋ ! ಇದು ಇಂದ್ರಗೋಪಗಳಿಂದೊಡಗೂಡಿದ ಕೋಮಲವಾದ ಗರಿಕೆ ಬೆಳದಿರುವ ಸ್ಥಳವು, ಇದನ್ನು ನೋಡಿ ನಾನು ಭ್ರಾಂತನಾದೆನು. ಈ ನಿರ್ಜನವಾದ ವನದಲ್ಲಿ ನನ್ನ ಪ್ರಿಯೆಯ ವೃತ್ತಾಂತವನ್ನು ನಾನು ಯಾರಮುಖದಿಂದ ತಿಳಿಯಲಿ ; ಒಳ್ಳೇದು ಈ ಪರ್ವತದ ದಡದಲ್ಲಿ ಸೋನೆಯಿಂದುಬ್ಬಿದ ಗೈರಿಕಧಾತು ಮುಚ್ಚಿಕೊಂಡಿರುವ ಕೋಡುಗಲ್ಲಿನಮೇಲೆ ಕೂತುಕೊಂಡು—

ಕಂ॥ ಹರಿಸದೊಳೀ ನವಿಲಲೆಯು ॥
ತ್ತಿರೆ ಮುಂಬಿರುಗಾಳಿಯಿಂದೆ ವಿರುಪಶಿಖಂಡಂ ॥
ನಿರುಕಿಸುತಿರ್ಕ್ಕುಂ ಧಾರಾ ।
ಧರಂಗಳಂ ನಾಡೆಸೀಳ್ದು ಕೀಗುವ ಕೊರಳಂ ॥ ೮ ॥

ಈ ನವಿಲನ್ನು ಕೇಳಿ ನನ್ನ ಪ್ರಿಯೆಯ ವೃತ್ತಾಂತವನ್ನು ತಿಳಿಯುವೆನು. (ಸಮೀಪಕ್ಕೆ ಬಂದು)

*ಕಂ॥ ಎಲೆನೀಲಕಂಠ ನುಡಿನೀ ।
ನಲಸದೆ ಸೋತ್ಕಂಠೆಯುಂ ಸಿತಾಪಾಂಗನೆ ದೀ ॥
ರ್ಘಲಸದಪಾಂಗೆಯ ನೆನ್ನಯ ।
ಲಲನೆಯ ನೀವನದೆ ಕಂಡೆಯೇಂದ್ಯಕ್ಪ್ರಿಯೆಯಂ ॥ ೯ ॥

ಇದೇನು ನನ್ನ ಮಾತಿಗೆ ಉತ್ತರವನ್ನೇ ಕೊಡದೆ ಕುಣಿಯುತ್ತಿರುವದು. ಇದರ ಸಂತೋಷಕ್ಕೆ ಕಾರಣವೇನು! (ಚಿಂತಿಸಿ) ಓಹೊ! ತಿಳಿಯಿತು ತಿಳಿಯಿತು.

ಕಂ॥ ಮುಡಿಯಿಂ ಸೋಗೆಯಜ್ಜೈಸಿ ।
ಪ್ಪುಡುಪತಿಮುಖಿ ಬಳಿಯೊಳಿಲ್ಲದಿಪ್ಪುದರಿಂದಂ ॥
ಕಡುಸಂತಸದಿಂದೀಪರಿ ।
ಬಿಡದೆ ನವಿಲ್ನೋಡೆ ನಾಡೆನಟಿಸುತ್ತಿರ್ಕ್ಕುಂ ॥ ೧೦ ॥

ಕಂ॥ ಕೇಳೀಸಮಯದೆ ಕೆದರ್ದ ।
ಕಾಳೋರಗಸನ್ನಿಕಾಶವೇಣಿಯ ಕೇಶಂ ।
ತಾಳಲ್ವಿಚಿತ್ರತರಸುಮ ।
ಜಾಲವನಂದೀ ಮಯೂರವೋಗೆಯ್ವುದು ತಾಂ ॥ ೧೧ ॥

---

* ರಾಗ—ಕಾನ್ನಡ ॥ ॥ ತಾಳ ಮಿಶ್ರಛಾಪು ॥

ನವಿಲೇ । ನುಡಿವುದುನೀನೆಲೆ ॥ಪ॥ ಕಂಡೆಯರಾಕೇಂದು । ಮಂಡಲಮುಖಿಯು ಸ್ತ್ರೀ ॥ ಮಂಡಲಮಣಿಯಾದ । ಪುಂಡರೀಕಾಕ್ಷಿಯ ॥ ೧ ॥ ಕಂಠನಿರ್ಜಿತ ಕಲ । ಕಂಠಾಂಗನೆ ನೀಲ ॥ ಕಂಠರಾಜನೆ ಸೋ । ತ್ಕಂಠೆಯೆಲ್ಲಿಗೆ ಪೋದಳ್ ॥ ೨ ॥ ಧವಳಾಕ್ಷನೆ ಫುಲ್ಲ । ಕುವಲಯನೇತ್ರೆಯ ॥ ನವಘನಕೇಶಿಯ । ನವಲೋಕಿಸಿನೆಲ್ಲಿ ॥ ೩ ॥

ಮತ್ತೊಬ್ಬನ ವ್ಯಸನವನ್ನು ನೋಡಿ ಸಂತೋಷಪಡುತ್ತಿರುವ ಇದನ್ನು ನಾನು ಕೇಳಬಾರದು (ಎಂದು ಇನ್ನೊಂದುಕಡೆಗೆ ಹೋಗಿ ನೋಡಿ) ಇದೋ ಈ ನೇರಳೇಮರದ ಮೇಲೆ ಬಿಸಿಲಿಲ್ಲದ್ದರಿಂದ ಮದವೇರಿದ ಕೋಗಿಲೆಯು ಕೂತುಕೊಂಡಿರುವದು ; ಪಕ್ಷಿಗಳಲ್ಲಿ ಇದು ಪಂಡಿತಜಾತಿ ; ಒಳ್ಳೇದು ಇದನ್ನು ಕೇಳುವೆನು.

ಕಂ॥ ಎಲೆಮದನದೂತಿ ಕೋಗಿಲೆ ।
ಕಲಭಾಷಿಣಿಯೆನ್ನನಿನಿಯಳೊಡನೆನ್ನೊಡನಾ ॥
ಲಲನೆಯು ಮೋಹಸ್ಸೇರಿಸು ಕಾ ।
ದಲಗ್ಗೆ ನೀನಲ್ತೆ ಮಾನಭೇದನಮಸ್ತ್ರಂ ॥ ೧೦ ॥

(ಆಕಾಶದಲ್ಲಿ ಅದರ ಧ್ವನಿಯನ್ನು ಕೇಳಿ)

ಏನುಹೇಳುತೀಯೆ ? ಈಪ್ರಕಾರ ಅನುರಕ್ತನಾಗಿರುವ ನಿನ್ನನ್ನು ಬಿಟ್ಟು ಅಕೆ ಹ್ಯಾಗೆ ಹೋದಳೆಂದೊ ? ಕೇಳು.

ಕಂ॥ ಮುಳಿಸಂ ತಾಳ್ದಿದಳೆನ್ನೊಳ್ ।
ತಿಳಿಯೇಂ ಕಾರಣಮನಾಣಮಿದಕೆನ್ನೊಳಗಾಂ ॥
ಎಳಸುವುದಿಲ್ಲಂ ಭಾವ ।
ಸ್ಖಳಿತಮನಿನರೊಳ್ ಪ್ರಭುತ್ವಮಬಲಾಜನದಾ ॥ ೧೩ ॥

(ನೋಡಿ) ಇದೇನು ಒಂದು ಮಾತನ್ನೂ ಆಡದೆ ಸ್ವಕಾರ್ಯದಲ್ಲಿ ಪ್ರವರ್ತಿಸಿತು.

ಕಂ॥ ಪೆರರಳಲಂ ಪಿರಿದಾದೊಡ ।
ಮರಿವರ್ ಶಾಂತಮೆನೆ ಮತ್ತರೀದುಃಖಿಯನ ॥
ಳ್ಕರಿಸದೆ ನೇರಿಲಸವಿಪ ।
ಸ್ಸ್ಗರಗಿದುದಿದು ಸವಿವ ಚಂದದಿಂ ಚೆಂದುಟಿಯುಂ ॥ ೧೪ ॥

ಒಳ್ಳೇದು ಹೋಗಲಿ, ಇದು ನನ್ನ ಪ್ರಾಣಕಾಂತೆಯಂತೆ ಮನೋಹರವಾದ ಕಂಠವುಳ್ಳದ್ದೆಂದು ಇದರಮೇಲೆ ನನಗೆ ಕೋಪವಿಲ್ಲ, ಇದು ಸುಖ

ವಾಗಿರಲಿ. (ಎಂದು ನಡೆದು ಕಿವಿಗೊಟ್ಟು ಕೇಳಿ) ಇದೇನು! ಈ ದಕ್ಷಿಣದಿಕ್ಕಿನಲ್ಲಿ ನನ್ನ ಪ್ರಿಯೆಯು ಕಾಲುಕಡಗದ ಸದ್ದು ಕೇಳಿಬರುವಂತಿದೆ, ಬಹುಶಃ ಆಕೆ ಅಲ್ಲಿ ಸಂಚಾರಮಾಡುತ್ತಿರಬಹುದು; ಒಳ್ಳೇದು ಅಲ್ಲಿಗೆ ಹೋಗುವೆನು. (ಅತ್ತಲಾಗಿ ಹೋಗಿನೋಡಿ) ಅಯ್ಯೋ!

ಕಂ॥ ಜಳಧರಸಂಕುಳದಿಂ ಶ್ಯಾ।
ಮಳಮಪ್ಪೆಣ್ದೆಸೆಯ ನೋಡಿ ಮಾನಸಸರಕು॥
ಚ್ಚಳಿಪರಸಂಚೆಯ ಕೋಮಲ।
ಗಳರವಮಿದು ನೋಡೆ ನೂಪುರಾರವಮಲ್ಲಂ॥ ೧೫॥

ಒಳ್ಳೇದು ಇದು ಈ ಸರೋವರವನ್ನು ಬಿಟ್ಟು ಮಾನಸಸರೋವರಕ್ಕೆ ಹೋಗುವದರೊಳಗಾಗಿ ಇದನ್ನು ಕೇಳಿ ನನ್ನ ಪ್ರಿಯೆಯು ವೃತ್ತಾಂತವನ್ನು ತಿಳಿದುಕೊಳ್ಳುವೆನು. (ಎಂದು ಹಂಸವನ್ನು ನೋಡಿ) ಎಲೈ ಜಲಪಕ್ಷಿರಾಜನಾದ

*ಕಂ॥ ಕಲಹಂಸಬಿಸದಬುತ್ತಿಯ।
ನುಳಿಬಳಿಕಂ ಕೊಳ್ವಿಬೆಸಸು ಮುಂಪ್ರಿಯೆಯಿರವಂ॥
ಬಳಿಕಂ ಪೋ ಮಾನಸಕುರೆ।
ತಿಳಿದರ್ ನಂಬಿದರ ಕಾರ್ಯಮಂ ಕಡೆಗಣಿಸರ॥ ೧೬॥

ಇದೇನು ಸುಮ್ಮನೆ ಕತ್ತುಬಗ್ಗಿಸಿಕೊಂಡಿರುವದು, ಇದು ಸುಮ್ಮನೆ ಇರುವದನ್ನು ನೋಡಿದರೆ ಮಾನಸಸರೋವರಕ್ಕೆ ಹೋಗುವದಕ್ಕೋಸ್ಕರ ಕಳವಳಪಡುತ್ತಿರುವ ತಾನು ಆಕೆಯನ್ನು ನೋಡಲಿಲ್ಲವೆಂದು ಹೇಳಿದಂತಾಯಿತು. (ಸ್ವಲ್ಪ ಕೋಪದಿಂದ)

---

*ರಾಗ—ಕಲಹರಪ್ರಿಯ॥ ॥ತಾಳ ಮಿಶ್ರಛಾಪು॥

ಕಲಹಂಸರಾಜನೆ। ಕಲಹಂಸಗಮನೆ॥ ನೆಲಸಿರ್ಪನೆಲೆಯ ನೀ। ಗಳೆಪೇಳುವುದು ನೀಂ॥ ೧॥ ನವಬಿಸಪಾಥೇ। ಯವನಿಲ್ಲಿರಿಸು॥ ಸುದತೀವಿಯುಕ್ತನಾ। ದಿವನನ್ನಾದರಿಸು॥ ೨॥ ಸ್ವಾರ್ಥಕ್ಕಿಂತಧಿಕ ಪ। ರಾರ್ಥಸಂತರಿಗೆ॥ ಪ್ರಾರ್ಥಿಪವೇಳು ಮ। ದರ್ಥವಾಗಿದಿಗೆ॥ ೩॥

ಕಂ॥ ಎಲೆ ಕಲಹಂಸನೆ ನೀನಾ ।
ಲಲನೆಯ ನೀಸರದ ತೀರದೊಳ್ ಕಾಣದಿರಲ್ ॥
ಕಲಿತೆಯದೆಲ್ಲಿಂದಂ ನೀಂ ।
ಖಲನೇ ಬೆಸಸಿಂತು ಬೆಡಗುವಡೆದೀ ನಡೆಯಂ ॥ ೧೭ ॥

ಕಂ॥ ನಡೆ ತೋರಿಸೆನ್ನ ಕಾಂತೆಯ ।
ನಡೆಯಂ ಕಳ್ದಿರ್ಪ್ಪ ನೀನೆ ಕಳ್ದಯ್ಯವಳಂ ॥
ಕುಡುಗವನೆಲ್ಲವುಮಂ ಪೋ ।
ದೊಡವೆಯ ಕಡಿಯೊಂದದಾವನೊಳ್ ದೊರೆವುದೊತಾಂ ॥೧೮॥

ಓಹೋ! ಇವನು ಮಹಾರಾಜನು ಈತನು ನನಗೇನಾದರೂ ಶಿಕ್ಷೆಯನ್ನು ಮಾಡಿಯಾನೆಂದು ಭಯದಿಂದ ಹಾರಿಹೋಯಿತು. (ನೋಡಿ) ಇಲ್ಲಿ ತನ್ನ ಪ್ರಿಯೆಯೊಡನೆ ಕುಳಿತಿರುವ ಚಕ್ರವಾಕಪಕ್ಷಿಯನ್ನಾದರೂ ಕೇಳುವೆನು.

ಕಂ॥ ಆನಲ್ತೆ ರಥಿ ರಥಾಂಗಂ ।
ನೀನಲ್ತೆ ರಥಾಂಗಚಾರುಸುಶ್ರೋಣಿ ಕನ ॥
ಲ್ದೀನಗದೊಳೆನ್ನನಗಲ್ದಳ್ ।
ತಾನೀಯನು ಬಂಧದಿಂದೆ ನಿನ್ನಂ ಬೇಳ್ಪೆಂ ॥ ॥ ೧೯ ॥

ಇದೇನು ಸಂಸ್ಕೃತಜ್ಞನಂತೆ ನೀನುಯಾರುಯಾರು? ಅನ್ನುವದಕ್ಕೆ ಪ್ರತಿಯಾಗಿ ಕಃಕಃ ಎಂದು ನುಡಿಯುವದು. ಇದಕ್ಕೆ ನಾನುಗೊತ್ತಿಲ್ಲವೆ?

ಕಂ॥ ಶ್ರೀಮತ್ಕುವಲಯಬಂಧು ಪಿ ।
ತಾಮಹನಾವಂಗೆ ಮೇಣ್ಪಯೋಜಸಖಂ ಮಾ ॥
ತಾಮಹ ನೂರ್ವಶಿಯಿಂದಂ ।
ಭೂಮಾನಿನಿಯಿಂ ಸ್ವಯಂವೃತಂ ಪತಿಯವನೆಂ ॥ ೨೦ ॥

ಇದೇನು ಸುಮ್ಮನೆ ಕೂತಿರುವದು! ಇರಲಿ, ಇದನ್ನು ಆಕ್ಷೇಪಿಸಿ ನಿಂದಿಸುವೆನು.

ಕಂ॥ ವನರುಹದಳದೊಳ್ ಮರೆಗೊಂ ।
ಡಿನಿಯಳ ಬಹುದೂರವಿರ್ಪ್ಪವೋಲರಿದೊಳರ್ವ್ವಯ್ ॥
ಎನಗಂ ವಿರಹವ್ಯಥೆಯಿಂ ।
ತೆನುತರಿಯೆಯು ಪೇಳದಿರ್ಪ್ಪೆಯೇಂ ಪ್ರಿಯೆಯಿರವಂ ॥ ೨೧ ॥

ನೀನು ಯಾವದನ್ನೂ ಹೇಳದೆ ಹೀಗೆ ಸುಮ್ಮನಿರುವದು ನನ್ನ ದುರದೃಷ್ಟದ ಪ್ರಭಾವ; ಬಳ್ಳೇದು ಮತ್ತೊಂದುಕಡೆ ಹೋಗಿ ನೋಡುವೆನು (ಒಂದು ಹೆಜ್ಜೆ ಹೋಗಿ) ಈ ಪ್ರದೇಶವನ್ನು ಬಿಟ್ಟು ನಾನು ಹ್ಯಾಗೆ ಹೋಗಲಿ.

ಕಂ॥ ಬಳಗೊಂಡುಜಿ ನುಂಗುತ್ತಿ ।
ರ್ಪ್ಪಳಿಯಂ ಕಮಳಮಿದು ಕಚ್ಚರ್ಲಾಂ ಚೆಂದುಟಿಯಂ ॥
ಕಳಸೀತ್ಕಾರಾಂಚಿತ ಮು ।
ಪ್ಪಳಿಯಳ ಮೊಗದಂತೆ ನೋಡಲೆನ್ನಂ ತಡೆಗುಂ ॥ ೨೨ ॥

ಬುದ್ಧಿಗೆಟ್ಟು ಪ್ರಿಯೆಯು ಮುಖದರ್ಶನವನ್ನು ತೊರೆದುಕೊಂಡು ಪೇಚಾಡುತ್ತಿರುವ ನಾನು ಇಂಥಾ ಕಮಲವನ್ನು ಬಿಡದೆ ಸೇವಿಸುತ್ತಿರುವ ಈ ದುಂಬಿಯನ್ನೇ ಬಹುಮಾನಿಸುವೆನು.

ಕಂ॥ ತಿಳುಪೆನಗಿನಿಯಳುದಂತವ ।
ನಳಿಯೇ ಮೇಣ್ಕಂಡುದಿಲ್ಲ ನೀನಾರ್ಕೆಯುನಾ ॥
ಯೆಳೆಯಳಸುಯ್ಯ್ನರುಗಂಪಂ ।
ಬಳಸಿರ್ದ್ದೊಡೆ ಬಯಸುತಿರ್ದ್ದಯೇಂ ತಾವರೆಯಂ ॥ ೨೩ ॥

ಇನ್ನೊಂದುಕಡೆ ಹೋಗುವೆನು. (ಎಂದು ನಡೆದು ನೋಡಿ) ಅದೋ ಆಕಡೆ ಒಂದು ಆನೆಯು ನೀಪವೃಕ್ಷದಮೇಲೆ ಸೊಂಡಿಲಿಟ್ಟುಕೊಂಡು ಹೆಣ್ಣಾನೆಯ ಜೊತೆಯಲ್ಲಿ ನಿಂತಿರುವದು. ಬಳ್ಳೇದು ಅಲ್ಲಿಗೆ ಹೋಗಿಅದನ್ನು ಕೇಳುವೆನು. (ಒಂದು ಹೆಜ್ಜೆ ನಡೆದು) ಓಹೊ! ಈಗ ಜಾಗ್ರತೆಯಾಗಿ ಹತ್ತರಕ್ಕೆ ಹೋಗಬಾರದು,

ಕಂ॥ ಪಲ್ಲವಿತಂ ನಲವಿಂದಂ ।
ವಲ್ಲಭೆ ತಂದಿತ್ತ ಸುರಭಿಳಾಸವಸಾರಂ ॥
ಸಲ್ಲಲಿತಂ ಮದಗಜವಿದು ।
ಸಲ್ಲಕಿಯಾಶಾಖೆಯಂ ತುಡುಂಕುಗೆ ಮುನ್ನಂ ॥ ೬೩ ॥

(ಸ್ವಲ್ಪಹೊತ್ತು ನೋಡುತ್ತಿದ್ದು) ಅದು ಆಹಾರದಿಂದ ತೃಪ್ತಿಪಟ್ಟಿತು; ಇನ್ನು ಅದರ ಸಮೀಪಕ್ಕೆ ಹೋಗುವೆನು. (ಸಮೀಪಕ್ಕೆ ಹೋಗಿ)—

*ಕಂ॥ ಸ್ಥಿರಯೌವನೆ ಸೇವಂತಿಗೆ ।
ಯುರಲಿಂ ಚಿತ್ರಿತಮೆನಿಪ್ಪ ನುಣ್ಗುರುಳನಿಯಳ್ ॥
ಕರಿಹಸ್ತೋರುಸುದರ್ಶನೆ ।
ಕರಿನಾಯಕ ನಿನ್ನ ಕಣ್ಗೆ ಗೋಚರಿಸಿದಳೇಂ ॥ ೬೪ ॥

(ಸಂತೋಷದಿಂದ) ಇದೋ ಇದು ಮನೋಹರವಾಗಿಯೂ ಗಂಭೀರವಾಗಿಯೂ ಇರುವದ್ದರಿಂದಲೇ ನನ್ನ ಪ್ರಿಯೆಯ ಸಮಾಚಾರವನ್ನು ಸೂಚಿಸುವಂತಿರುವ ಶಬ್ದದಿಂದ ನನ್ನನ್ನು ಸಂತೈಸುವಂತಿದೆ; ಇದು ನನ್ನಹಾಗಿರುವದ್ದರಿಂದ ನನಗೆ ಇದರಲ್ಲಿ ತುಂಬಾ ವಿಶ್ವಾಸವುಂಟಾಗಿರುವದು.

ವೃತ್ತ॥ ನುಡಿವರ್ಭ್ಯುಪತಿಮಂಡಲೇಂದ್ರನೆನುತೆನ್ನಂ ದಂತಿಚಕ್ರಕ್ಕೆ ನೀ ।
ನೊಡೆಯಂನಿನ್ನೊಳಮೆನ್ನೊಳಂಪಿರಿದುದಾನಂಯಾಚಕಾಳಿಪ್ರಿಯಂ ॥

---

*ರಾಗ—ಕಮಾಚ್ ॥ ॥ಹಿಂದೂಸ್ಥಾನಿ ಆದಿತಾಳ॥

ಗಜರಾಜೇಂದ್ರನೆ ಪೇಳುನೀಂ । ಗಜರಾಜಯಾನೆಯನು ಕಾಣೆಯಾ ॥ ಪ ॥ ವಿಜನವಾಗಿರು ವೀವನ । ಭಾಗದೆ ಭೂರುಹಬೃಂದದೆ । ನಿಜದೂರಲೋಕನದ ಮಾರ್ಗದೆ ॥ ಅ ॥ ನರಪತಿಯೆನಿಸಿರ್ಪ ನಾಂ । ಕರಿಪತಿಯೆನಿಸಿರ್ಪ ನೀಂ ॥ ನಿರುತನಿನ್ನೊಳುಮೆನ್ನೊಳುಂ । ಪಿರಿದುಯಾಚಕಾಳಿಪ್ರಿಯಂ । ಸರಿಯೆನಿಪ್ಪುದುದಾನವು ॥ ೧ ॥ ಅನುಪಮ ಗುಣರಾಶಿ । ವನಿತೆಯರೊಳ ಗೂರ್ವಶಿ ॥ ಎನಗೆ ತಾಂ ಪ್ರಿಯಳಾದಳು । ನಿನಗಮಿಾಪಿಡಿಯಾನೆವಿಂ । ದಿನೊಳು ತಾಂ ಪ್ರಿಯಮಾದುದು ॥ ೨ ॥ ಇಂತುಟೆಲ್ಲದರಲ್ಲಿ ಯೆ । ನ್ನಂತಿರೆ ಪೋಲು ನೀನಿಹೆ ॥ ನೀಂ ತಳೆಯದಿರಾದೊಡಂ । ಕಾಂತೆಯ ವಿರಹವ್ಯಥಾ । ಚಿಂತೆಯ ಕರಿಣೀಪ್ರಿಯ ॥ ೩ ॥

ಕಡುರಾಗಂಬಡೆದಿಪ್ಪೆನೂರ್ವಶಿಯೊಳಾಂನೀನಂತುಕೂರ್ತಿಪ್ಪೆಯಿಾ ।
ಪಿಡಿಯಲ್ಲಾಂಸಮರಾದೊಡಂಗಜಪನೀಂಪೊರ್ದಲ್ವಿಯೋಗಾರ್ತಿಯಂ ॥

ಇನ್ನು ಇಲ್ಲಿಂದ ಮುಂದಕ್ಕೆ ಹೋಗುವೆನು. (ಎಂದು ನಡೆದು ಪಾರ್ಶ್ವದಲ್ಲಿ ನೋಡಿ) ಆಹ! ಸುರಭಿಕಂದರವೆಂಬ ಈ ಪರ್ವತವು ವಿಶೇಷವಾಗಿ ಮನೋಹರವಾದದ್ದು; ಇದರ ತಪ್ಪಲಲ್ಲೇನಾದರೂ ನನ್ನ ಪ್ರಿಯೆ ದೊರೆತಾಳೆ? (ಎಂದು ನಡೆದು ಪಾರ್ಶ್ವದಲ್ಲಿ ನೋಡಿ) ಅಯ್ಯೋ! ನಾನು ಮಿಂಚಿನಿಂದೊಡಗೂಡಿದ ಮೇಘವನ್ನು ನೋಡುತ್ತ ಆ ಪ್ರಿಯಳು ಸಮೀಪದಲ್ಲಿದ್ದಾಗಿನ ಸ್ಥಿತಿಯನ್ನು ಭಾವಿಸಿಕೊಂಡಾದರೂ ಸ್ವಲ್ಪ ದುಃಖಶಾಂತಿಯನ್ನು ಹೊಂದಿದ್ದೆ; ಈಗ ನನ್ನ ದುರದೃಷ್ಟದಿಂದ ಆ ಮೇಘವೂ ಮಿಂಚನ್ನಗಲಿ ಹೋಯಿತು; ನಾನು ಇಷ್ಟು ಮಂದಭಾಗ್ಯನಾದರೂ ನಿರಾಶನಾಗದೇ ಇರುವೆನು; ಆದ್ದರಿಂದ ಈ ಪರ್ವತವನ್ನು ಕೇಳದೆ ಸುಮ್ಮನೆ ಹಿಂತಿರುಗಲಾರೆ.

ಕಂ॥ ರತಿಗೇಣೆ ಸೂಕ್ಷ್ಮಭುಜಾಂತರೆ ।
ನಿತಂಬವತಿ ಪೃಥುನಿತಂಬ ಪರ್ವಸ್ಥಲಸಂ ॥
ನತೆ ಪರ್ವತೇಂದ್ರ ಮತ್ಪ್ರಿಯೆ ॥
ಲತಾಂಗಿ ತಾಂ ನಿನ್ನ ತಪ್ಪಲೊಳಗಿರ್ದಪಳೇಂ ॥ ೬೭ ॥

ಇದೇನು ಸುಮ್ಮನಿರುವದು; ದೂರದಲ್ಲಿರುವದರಿಂದ ನನ್ನ ಮಾತು ಕೇಳಿಸಲಿಲ್ಲವೇನೊ, ಒಳ್ಳೇದು ಸಮೀಪಕ್ಕೆ ಹೋಗಿ ಕೇಳುವೆನು. (ಸಮೀಪಕ್ಕೆ ಹೋಗಿ)—

ಕಂ॥ ಎನ್ನಿಂ ಪಿಯುಕ್ತೆ ಭಾಮಿನಿ ।
ನಿನ್ನಿಂ ಸರ್ವಾಂಗಸೌಂದರೀಶಾಲಿನಿ ಸ ॥
ರ್ವೋನ್ನತ ಸಕಲಧರಿತ್ರೀ ।
ಭೃನ್ನಾಯಕ ದೃಷ್ಟೆ ರಮ್ಯವೆನಿಪೀ ವನದೊಳ್ ॥ ೬೮ ॥

(ಕಿವಿಗೊಟ್ಟು ಪ್ರತಿಶಬ್ದವನ್ನು ಕೇಳಿ ಸಂತೋಷದಿಂದ) ಯಥಾಕ್ರಮವಾಗಿ ದೃಷ್ಟೆಯೆಂದು ಹೇಳಿತು. ಎಲೈ ಪರ್ವತಶ್ರೇಷ್ಠನೆ ಹಾಗಾದರೆ ಎಲ್ಲಿ ನನ್ನ ಪ್ರಿಯೆ? (ಎಲ್ಲಾ ಕಡೆಯಲ್ಲೂ ನೋಡಿ) ಅಯ್ಯೋ! ಇದು ಈ ಪರ್ವ

ತದ ಗುಹೆಯಲ್ಲಿ ಹುಟ್ಟಿದ ನನ್ನ ಧ್ವನಿಯ ಪ್ರತಿಧ್ವನಿಯೇ ಹೊರತು ಬೇರೆಯಲ್ಲ. (ಎಂದು ಮೂರ್ಛೆಬಿದ್ದು ಹಾಗೇ ಸಂತವಿಟ್ಟುಕೊಂಡು ಎದ್ದು ನಿಟ್ಟುಸುರು ಬಿಟ್ಟು) ನಾನು ಬಹಳವಾಗಿ ಬಳಲಿದೆ ಈ ಗಿರಿನದೀತೀರಕ್ಕಾದರೂ ಹೋಗಿ ತರಂಗಗಳ ಮೇಲಿಣಿಂದ ಬರುವ ತಂಗಾಳಿಯನ್ನು ಸೇವಿಸುವೆನು. (ನಡೆದು ನೋಡಿ) ಹೊಸನೀರು ಬಂದು ಕದಡಿರುವ ಈ ನದಿಯನ್ನು ನೋಡಿ ನನ್ನ ಮನಸ್ಸಿಗೆ ಬಹಳ ಸಂತೋಷವುಂಟಾಗುತ್ತಿರುವದು ಯಾತಕ್ಕಂದರೆ—

ವೃತ್ತ॥ ಕುಣಿಯೆ ತರಂಗವೆಂಬ ಕುಡಿವುರ್ಬ್ಬುಗಳಳ್ಕಿದ ಜಕ್ಕವಕ್ಕಿ ಗೊಂ।
ದಣಿ ಮಣಿಕಾಂಚಿಯಂತೆಸೆಯೆ ಸಂಭ್ರಮದಿಂದೆ ಸಡಿಲ್ದ ಸೀರೆಯಂ॥
ತಣಿಯುರಮಿರ್ಪ್ಪಬೆಳ್ನೊರೆಯಕಯ್ಕೊಳುತೆಯ್ದುತೆಕೊಂಕಿನಿಂದೆತ।
ಪ್ಪಿಣಿಸಿಕನಲ್ದುಕಾಂತೆಪರಿಣಾಮಿಸಿದಳ್ತೊರೆಯಾಗಿಭಾವಿಸಲ್ ೨೯॥

ಬಳ್ಳೇದು ಇವಳ ಮುನಿಸನ್ನು ತಿಳಿಸುವೆನು.

ಕಂ ನುಡಿದಪೆನಾಂ ಸವಿಮಾತಂ।
ಕಡುಕೂರ್ಮೆಯ ನಿನ್ನೊಳಾಂತಪೆಂ ನಡೆದಪೆನಾಂ॥
ಸಡಿಲದವೋ ಲೋಲವೆನ್ನಂ।
ಬಿಡಲೆನ್ನೊಳಗಾವ ತಪ್ಪನೆಣಿಸುವೆ ನೀಂಪೇಳ್ ॥ ೩೦ ॥

ಇದೇನು! ಸುಮ್ಮನಿರುವಳು, (ನೋಡಿ) ಓಹೊ! ಇದು ನಿಜವಾದ ನದಿಯೆಂತ ಲೇತೋರುತ್ತೆ; ಊರ್ವಶಿಯು ಈರೂಪಳಾಗಿದ್ದಪಕ್ಷದಲ್ಲಿ ಪುರೂರವನನ್ನು ಬಿಟ್ಟು ಸಮುದ್ರನ ಕಡೆಗೆ ಹೋಗುತ್ತಿರಲಿಲ್ಲ; ಆಗಲಿ ಚಿಂತೆಯಿಲ್ಲ, ಬಹಳವಾಗಿ ಬೇಸರಗೊಂಡವರಿಗೆ ಶ್ರೇಯಸ್ಸಾಗಲಾರದು; ಆದ್ದರಿಂದ ನನ್ನ ಪ್ರಾಣಕಾಂತೆಯು ಎಲ್ಲಿ ನನ್ನ ಕಣ್ಣಿಗೆ ಮರೆಯಾಗಿ ಹೋದಳೊ, ಪುನಶ್ಚ ಅದೇ ಸ್ಥಳಕ್ಕೆ ಹೋಗುವೆನು. (ನಡೆದು ನೋಡಿ) ಓಹೊ! ಅಲ್ಲಿಗೆ ಹೋಗುವ ಮಾರ್ಗದ ಗುರುತು ಸಿಕ್ಕಿತು.

ಕಂ॥ ಆಕೆಂಗಡಹದ ಮರನಿದು ।
ರಾಕೇಂದುನಿಭಾಸ್ಯೆಯಾವುದರಸುಮುಮಂ ವ ॥
ರ್ಷಾಕಾಲಕೆ ಸೂಚಕಮಂ ।
ಸಾಕಾಂಕ್ಷಂ ಮುಡಿದಳುದಿತ ನವಕೇಸರಮಂ ॥ ೩೧ ॥

ಒಳ್ಳೇದು, ಇಲ್ಲಿ ಸುಖವಾಗಿ ಮಲಗಿರುವ ಜಿಂಕೆಯನ್ನು ಕೇಳಿ ನನ್ನ ಪ್ರಿಯೆಯ ವೃತ್ತಾಂತವನ್ನು ತಿಳಿಯುವೆನು. ಇದೇನು! ನನ್ನನ್ನು ಲಕ್ಷ್ಯಮಾಡದೆ ಆಕಡೆಗೆ ನೋಡುತ್ತಿರುವದು.

ಕಂ॥ ತಡೆತಡೆದಡಿಗಡಿಗಂ ಮೊಲೆ ।
ಗುಡಿಮೆಳವರಿಯೊಂದುಗೂಡಿಕೊಂಡೊಯ್ಯನೆ ತ ॥
ನ್ನೆಡೆಗೆ ನಡೆತಪ್ಪ ಹುಲ್ಲೆಯ ।
ಕಡುನೇಹದೆ ದಿಟ್ಟಿಸುವುದು ಕೊಂಕಿಸಿ ಕೊರಲಂ ॥ ೩೨ ॥

ಆಹ!

ಕಂ॥ ವನಶೋಭೆಯ ನೀಕ್ಷಿಸಲೀ ।
ಬನಸಿರಿಯಿರಿಸಿದ ಕಟಾಕ್ಷಮೆಂದೆಂಬ ವಿಭಾ ॥
ವನೆಯಿವ ಕೃಷ್ಣಸಾರದ ।
ತನುರುಚಿ ಸಂತಾನಮೀಂ ವಿರಾಜಿಸಿದಪುದೋ ॥ ೩೩ ॥

ಒಳ್ಳೇದು ಇದನ್ನು ಕೇಳುವೆನು. (ಎಂದು ಕಯ್ಮುಗಿದುಕೊಂಡು)

*ಕಂ॥ ಹರಿಣನೆ ಕಂಡೆಯ ಪೇಳ್ ।
ನ್ನರಸಿಯ ನಾಕೆಗಿದು ಕುರುಪು ಕೇಳಾಯತಸುಂ ॥
ದರಲೋಚನೆ ನಿನ್ನಯ ಸಹ ।
ಚರಿಯುವ್ರೊಲವಳುಂ ಮನೋಜ್ಞಮೆನಲೀಕ್ಷಿಪಳೈ ॥ ೩೪ ॥

---

*ರಾಗ—ಕಾಂಭೋಜಿ॥ ॥ಆದಿತಾಳ॥

ಕೃಷ್ಣಸಾರನೆ ನೀಂ । ಕಂಡೆಯಾ ಪ್ರಿಯೆಯಾ ॥ ಕೃಷ್ಣವೇಣಿಯಾದ ಕಾಮಿನೀ ಮಣಿಯಾ ॥ ೧ ॥ ದಯದೋರಿ ಹೇಳೆ । ನ್ನಯ ಕಾಂತೆ ನಿನ್ನ ॥ ಪ್ರಿಯೆಪ್ರೋಲ್ವಿಶಾಲಾ । ಕ್ಷಿಯು ಸುಂದರಾಂಗಿ ॥ ೨ ॥ ಕುರುಹಿಂತಿದಾ ಕಾ । ತರ ಕಾತರಾಕ್ಷಿ ॥ ಹರಿಣಾಂಗನೆ ಯಂ । ತಿರೆ ನೋಡುತಿರ್ದಳ್ ॥ ೩ ॥

ಇದೇನು ನನ್ನ ಮಾತನ್ನು ಲಕ್ಷ್ಯಮಾಡದೆ ತನ್ನ ಪ್ರಿಯೆಯಕಡೆಗೆ ತಿರುಗಿಕೊಂಡಿತು ; ದುರದೃಷ್ಟವೆಂಬುವದು ಸರ್ವಪ್ರಕಾರದಿಂದಲೂ ಹೀಗೆಲ್ಲಾ ಅವಮಾನಪಡುವದಕ್ಕೆ ಕಾರಣವಾದದ್ದು ; ಒಳ್ಳೇದು ಇತ್ತ ಹೋಗುವೆನು. (ಎಂದು ನಡೆದು ನೋಡಿ) ಈ ಕಲ್ಲಿನ ಸಂದಿಯಲ್ಲಿ ಕಾಣುವದೇನು ?

ವೃತ್ತ॥ ಪುದಿದಪುದಿಂತಿದಂ ತೊಳಪುಸಿಂಹಹತದ್ವಿಪಮಾಂಸಖಂಡಮು ।
ಲ್ತಿದೆ ಸರಿಯಿಂದೆನಾಂದುದು ವನಸ್ಥಲಿಕೆಂಗಿಡಿಯುಲ್ತ ನೋಡೆ ತಾ ॥
ನಿದಸುಗೆಗೊಂಚಲಂತೆ ಕಿಸುವಣ್ಣದೆ ರಂಜಿಪ ರನ್ನವೋವೊಬೆಂ ।
ಗದಿರನಿದಂನಿಮಿಚ್ಛಿರ್ದಕರಾಗ್ರದೆಕೊಂಡಪನಂತೆತೋರುಗುಂ॥೩೪॥

ಇದು ನನ್ನ ಮನಸ್ಸನ್ನು ಅಪಹರಿಸುವದು, ಇದನ್ನು ತೆಗದುಕೊಳ್ಳುವೆನು. ಅಥವಾ ಯಾತಕ್ಕೆ ತೆಗದುಕೊಳ್ಳಲಿ—

ಕಂ॥ ಈ ರತ್ನಂ ಸುರತರುಸುಮ ।
ಸಾರಭದಿಂ ತೀವಿದವಳ ಮುಡಿಗಿಡೆಯೋಗ್ಯಂ ॥
ಆ ರಮಣಿ ಯಗಲ್ದಿರೆ ಕ ।
ಣ್ಣೀರಿಂದಿದನೇತಕಾಂ ವಿವರ್ಣಂ ಗೆಯ್ವೆಂ ॥ ೩೬ ॥

ತೆರೆಯಲ್ಲಿ.—ತೆಗೆದುಕೊ ತೆಗೆದುಕೋ—

ಕಂ ಶ್ರೀಗಿರಿಜಾಚರಣಾಂಬುಜ ।
ರಾಗದಿ ನಿದು ಸಂಭವಿಸಿದ ಸಂಗಮನೀಯಮಾ ॥
ಖ್ಯಾಗತಮಣಿ ಯಿದನಾಂತವ ।
ನೇಗಂ ಪಡೆಗುಂ ನಿಜೇಷ್ಟಜನಸಂಗಮಮಂ ॥ ೩೭ ॥

ರಾಜಂ.—(ಕಿವಿಗೊಟ್ಟು ಕೇಳಿ) ಇದ್ಯಾರು ! ಹೀಗೆ ನನ್ನಲ್ಲಿ ಕರುಣವಿಟ್ಟು ಹೇಳುವರು ; (ಸ್ವಲ್ಪ ಯೋಚಿಸಿ) ಆಹ ! ಆ ಗಜಚರ್ಮಧಾರಿಯಾದ ಭಗವಂತನೇ ನನ್ನನ್ನು ಕರುಣಿಸುವನು ; ಎಲೈ ಪೂಜ್ಯನಾದ ಮಹೇಶ್ವರನೆ ನಾನು ಅನುಗೃಹೀತನಾದೆನು. (ಎಂದು ಮಣಿಯನ್ನು ತೆಗದುಕೊಂಡು) ಎಲೆ ಸಂಗಮನೀಯುವೆ.

ಕಂ॥ ಆತನು ಮಧ್ಯೆಯು ವಿರಹದಿ ।
ನೀತೆರನಳಲ್ವೆನ್ನ ನಾಕೆಯೊಡವೆರಸಿದೊಡಾಂ ॥
ಪ್ರೀತಿಯಿನಾಂಪೆಂ ನಿನ್ನಂ ।
ಭೂತೇಶಂ ಪೆರೆಯನಾಂತತೆರದಿಂ ತಲೆಯೊಳ್ ॥ ೩೮ ॥

(ಎಂದು ಸ್ವಲ್ಪ ನಡೆದು ನೋಡಿ) ಇದೇನು ಈ ಲತೆಯು ಹೂವನ್ನು ಬಿಡದೇ ಇದ್ದಾಗ್ಯೂ ನನ್ನ ಮನಸ್ಸಿಗೇನೋ ಪ್ರೀತಿಯನ್ನುಂಟುಮಾಡುತ್ತಿರುವದು; ಅಥವಾ ಮನೋಹರವಾಗಿರುವದರಿಂದ ಇದು ನನ್ನನ್ನು ಪ್ರೀತಿಪಡಿಸುವದು ಯುಕ್ತ; (ನೋಡಿ) ಆಹ! ಈ ಲತೆಯು—

ವೃ॥ ಮಳೆಯಿಂದಂಚೆಂದಳರ್ನ್ಲಾಂದಿರೆನಯನಜಲಾಪಾತಧೌತೋಷ್ಠಮೆಂಬಂ।
ತಳಿರಾವಾಭಾವದಿಂ ಚಿಂತಿಸುತ ಮುಸಿಕನಿರ್ಪ್ಪಂತೆ ಚೈತ್ರಂ ಬಿಡಲ್ ಪೂ ॥
ಗಳಬೀಡಳ್ಗಿರ್ಪ್ಪನಂ ಪಚ್ಚಮನುಳಿದವೊಲಿರ್ಪ್ಪಂ ತೆತೋರುತ್ತಮೆನ್ನಂ।
ಮುಳಿಸಿಂಕುಂಬಿಟ್ಟೊಡಂಲಕ್ಷಿಸದನುಶಯವಾಂತೋಪಳಂಪೋಲುತಿರ್ಕ್ಕುಂ

ನನ್ನ ಪ್ರಾಣಕಾಂತೆಯನ್ನು ಹೋಲುತ್ತಿರುವ ಇದನ್ನಾದರೂ ಆಲಿಂಗಿಸಿ ಕೊಂಡು ಮನಸ್ಸನ್ನು ಸ್ವಲ್ಪ ಸಮಾಧಾನಪಡಿಸುವೆನು. (ಆಲಿಂಗಿಸುವನು)

(ಲತಾಸ್ಥಾನದಲ್ಲಿ ಊರ್ವಶಿಯು ಪ್ರವೇಶಿಸುವಳು.)

ರಾಜಂ.—(ಕಣ್ಮುಚ್ಚಿಕೊಂಡಿದ್ದ ಹಾಗೇ ಸ್ಪರ್ಶಸುಖವನ್ನು ನಟಿಸಿ) ಇದೇನು! ನನ್ನ ಶರೀರವು ಊರ್ವಶಿಯ ಮೈಸೋಂಕಿದಂತೆ ಸುಖಪಡುವದು; ನನಗಂತೂ ಈ ವಿಷಯದಲ್ಲಿ ನಂಬಿಕೆಯಿಲ್ಲ. ಯಾತಕ್ಕಂದರೆ,

ಕಂ॥ ಮೊದಲಿನಿಯಳೆಂದು ಭಾವಿಸಿ ।
ದುದು ಪೆರತೊಂದಾದುದೊಡನೆ ತಾನದರಿನಲ ॥
ಚ್ಚರ್ದೆ ಭೋಂಕನೆ ಕಂಣಂ ಸ್ಪ ।
ರ್ಶದೆ ಭಾವಿಸುತಂ ಲತಾಂಗಿಯಂ ಸುಖಿಸುವೆ ನಾಂ ॥ ೪೦ ॥

(ಮೆಲ್ಲಮೆಲ್ಲಗೆ ಕಣ್ಣನ್ನು ಬಿಟ್ಟು ನೋಡಿ) ಇದೇನು! ನಿಜವಾಗಿ ನನ್ನ ಕಾಂತೆ!

ಊರ್ವ.—(ಆನಂದಬಾಷ್ಪವನ್ನು ಬಿಟ್ಟು) ಮಹಾರಾಜನಿಗೆ ಜಯವಾಗಲಿ.

ರಾಜಂ.--*ಕಂ॥ ಚಿರಕೋಪಶೀಲೆ ನಿನ್ನಯ।
ವಿರಹದೆಜನಿಯಿಸಿದ ಮೋಹದೊಳ್ ಮುಳುಗಿರ್ದಾಂ॥
ಅರಸಿಯೆಸೇರ್ದೆಂನಿನ್ನಂ।
ಹರಣಂದೊರೆದಾತನಾಂತ ಮೋಲ್ಕ್ಟೀತನೆಯುಂ॥ ೪೧॥

ಊರ್ವ.—ಮಹಾರಾಜನೆ ಸ್ಥಾವರರೂಪವನ್ನು ಹೊಂದಿದ್ದ ನನಗೆ ಬಹಿರಿಂದ್ರಿಯ ವ್ಯಾಪಾರವಿಲ್ಲದ್ದರಿಂದ ಅಂತರಿಂದ್ರಿಯ ವ್ಯಾಪಾರದಿಂದಲೇ ನಿನ್ನ ವೃತ್ತಾಂತವನ್ನೆಲ್ಲಾ ಚನ್ನಾಗಿ ತಿಳಿದೆನು.

ರಾಜಂ.—ನಿನಗೆ ಸ್ಥಾವರರೂಪ ಬಂದದ್ದು ಹ್ಯಾಗೆ?

ಊರ್ವ.—ಮಹಾರಾಜನೆ ಅದನ್ನು ಹೇಳುತ್ತೇನೆ; ಆದರೆ ಕೋಪದಿಂದ ನಾನು ನಿನ್ನನ್ನಗಲಿ ನಿನಗೆ ಇಷ್ಟು ದುಃಖವನ್ನುಂಟುಮಾಡಿದ್ದರಿಂದ ನಿನ್ನ ಕೋಪಕ್ಕೆ ಪಾತ್ರಳಾಗುವದಕ್ಕೆ ಅರ್ಹಳಾಗಿದೇನೆ; ಆದ್ದರಿಂದ ನೀನು ಪ್ರಸನ್ನನಾಗಬೇಕೆಂದು ಬೇಡುವೆನು.

ರಾಜಂ.—ನೀನೇನೂ ನನ್ನನ್ನು ಪ್ರಸನ್ನನನ್ನು ಮಾಡಬೇಡ; ನಿನ್ನನ್ನು ಕಂಡಮಾತ್ರದಿಂದಲೇ ನಾನು ಒಳಗೂ ಹೊರಗೂ ಸಹ ಪ್ರಸನ್ನನಾಗಿಯೇ ಇರುವೆನು. ನೀನು ಇದುವರಿಗೂ ನನ್ನನ್ನು ಬಿಟ್ಟಿದ್ದದ್ದು ಹ್ಯಾಗೆ? ಹೇಳು.

ಊ.—ಮಹಾಹಾಜನೆ ಕೇಳು, ಪೂರ್ವದಲ್ಲಿ ಪೂಜ್ಯನಾದ ಷಣ್ಮುಖನು ಶಾಶ್ವತವಾದ ಕುಮಾರವ್ರತವನ್ನು ಪರಿಗ್ರಹಿಸಿ ಈ ಗಂಧಮಾದನ ಪರ್ವತದ ಅಕಲುಷವೆಂಬ ಜಲಪ್ರಾಯವಾದ ಪ್ರದೇಶದಲ್ಲಿ ವಾಸಮಾಡುತ್ತಿದ್ದನು;

---

*ರಾಗ—ಜಂಝೋಟಿ॥ ॥ಏಕತಾಳ॥

ಇಂತುಸಂತೋಷವಾಂತೆನು ಕಾಂತೆ ॥ ಪ ॥ ಚಿರಕುಪಿತೇ ನಿನ್ನ ॥ ವಿರಹದಿ ಜನಿಸಿದ ॥ ನಿರವಧಿಮೋಹದೊಳಿರ್ದನಾ । ನಿಂತು ॥ ೧ ॥ ಹರಣವ ನುಳಿದವಂ । ನೆರೆದಪೊಲಸುವನು॥ ತರುಣಿಯೆ ನಿನ್ನನು ಸೇರಿನಾ । ನಿಂತು ॥ ೨ ॥ ಸುತನುವೆನೀಂ ಲತಾ । ಕೃತಿಯನುಳಿದು ನಿಜಾ ॥ ಕೃತಿಯನಾಂತೆನ್ನನು ಸೇರೆನಾ । ನಿಂತು ॥ ೩ ॥

ಆಗ ಯಾವಸ್ತ್ರೀಯು ಈ ವನವನ್ನು ಪ್ರವೇಶಿಸುವಳೊ ಅವಳು ಲತಾ ರೂಪವನ್ನು ಹೊಂದಲಿ ಎಂತಲೂ ಈ ಲತಾರೂಪವು ಪಾರ್ವತಿಯ ಚರಣ ರಾಗದಿಂದುಂಟಾದ ರತ್ನದ ಸಂಬಂಧವಿಲ್ಲದೆ ಕಳೆಯುವದಿಲ್ಲವೆಂತಲೂ ಕಟ್ಟ ನ್ನು ಮಾಡಿದ್ದನು; ಗುರುಶಾಪದಿಂದ ಮೂಢಳಾದ ನಾನು ಈ ಸಂಗತಿಯನ್ನು ತಿಳಿಯದೆ ನಿನ್ನ ಅನುನಯವನ್ನೂ ಕೇಳದೆ ಈ ವನಕ್ಕೆ ಪ್ರವೇಶಮಾಡಿದ ಮಾತ್ರಕ್ಕೆ ಬಂದು ವಾಸಂತೀ ಲತೆಯಾದೆನು.

ರಾ.—ನೀನು ಹೇಳಿದ್ದೆಲ್ಲಾ ಸಂಗತವಾಗಿದೆ ಆದರೆ,

ಕಂ॥ ಅಲಸಿರತಿಯಿಂದೆಪಾಸೊಳೆ ।
ಮಲಂಗಿದೆನ್ನಂ ಪ್ರವಾಸಿಯಂತೆಣಿಸುವನೀಂ ॥
ಪಲವುಪಗಲಿರುಳುಮೆಂತು ।
ತ್ಪಲಾಕ್ಷಿಮಚ್ಚಿರವಿಯೋಗವಮಂ ಸಹಿಸಿದೆಪೇಳ್ ॥ ೪೦ ॥

ಇದೊ ನೋಡು ನಿನ್ನ ಸಮಾಗಮಕ್ಕೆ ಕಾರಣವಾದ ಆ ರತ್ನವು ನನಗೆ ಸಿಕ್ಕಿರುವದು ; ಇದರ ಮಹಿಮೆಯಿಂದಲೇ ನಾನು ನಿನ್ನನ್ನು ಸೇರಿದ್ದು.

(ಎಂದು ರತ್ನವನ್ನು ತೋರಿಸುವನು.)

ಊ.—(ನೋಡಿ) ಓಹೊ ! ಇದು ಆಸಂಗಮನೀಯ ರತ್ನವೆ ? ಇದರಿಂ ದಲೇ ಮಹಾರಾಜನಾದ ನೀನು ಲತಾರೂಪಳಾದ ನನ್ನನ್ನು ಆಲಿಂಗಿಸಿಕೊಂ ಡಮಾತ್ರಕ್ಕೆ ನಾನು ನಿಜರೂಪವನ್ನು ಹೊಂದಿದೆನು.

(ಎಂದು ಆ ರತ್ನವನ್ನು ಹಣೆಯಮೇಲಿಟ್ಟುಕೊಂಡು ವಂದಿಸುವಳು.)

ರಾಜಂ.—ಎಲೆ ಸುಂದರಿ ಹಾಗೇ ಕ್ಷಣಕಾಲ ನಿಂತುಕೊಂಡಿರು.

ಕಂ॥ ಥಳಥಳಸುವ ರನ್ನದ ಕೆಂ ।
ಬೆಳಗುಗಳಿಂದಳುರ್ದ ನಿನ್ನ ನಗೆಮೊಗವಿದು ತ ॥
ಳ್ತೆಳವಿಸಿಲಿಂತುರುಗಿದ ನವ ।
ನಳಿನದ ಪಾಸಟಿಯನಾಂತದೇಂ ಮೆರೆದಪುದೋ ॥ ೪೨ ॥

ಊರ್ವ.—ಮಹಾರಾಜನೆ ನೀನು ರಾಜಧಾನಿಯನ್ನು ಬಿಟ್ಟುಬಂದು ಬಹಳ ದಿವಸಗಳಾಗಲಿಲ್ಲವೆ ? ಇನ್ನೂ ನಾವು ಇಲ್ಲೇ ಇದ್ದರೆ ಪ್ರಜೆಗಳೆಲ್ಲರೂ

ನನ್ನ ಮೇಲೆ ದುಃಖಪಡುವರು; ಆದ್ದರಿಂದ ನಾವಿನ್ನು ಇಲ್ಲಿಂದ ಹೊರಡೋಣ.

ರಾಜಂ.—ದೇವಿ ನಿನ್ನಾಜ್ಞೆಯಾದಂತೆಯೇ ಆಗಲಿ.

ಊರ್ವ.—ಮಹಾರಾಜನೆ ಯಾವ ರೀತಿಯಿಂದ ಹೊರಡಲಿಚ್ಛೈಸುವೆ?

ರಾಜಂ.—

*ಕಂ॥ ಸುರಚಾಪಂ ಚಿತ್ರದವೋ।
ಲಿರೆ ಪಳವಿಗೆಯಾಗೆ ಮಿಂಚು ನಡೆಮಾದವೋಲ್॥
ಚರಿಸುವ ಪೊಸಮುಗಿಲಿಂದೆ।
ನ್ನರಮನೆಗೆ ವಿಲಾಸಗಮನೆ ಸಾರ್ಚುವುದೆನ್ನಂ॥ ೪೪॥

(ಎಂದಿಬ್ಬರೂ ತೆರಳಿದರು.)

---

*ರಾಗ—ಸುರಟಿ॥ ॥ರೂಪಕತಾಳ॥

ಮುಗಿಲೆನಿಪ್ಪ ತೇರಿನಿಂದ। ನಗರಕೆನ್ನನು॥ ಗಗನಮಾರ್ಗದಲ್ಲಿ ಬೇಗ। ಮಗುಳೆ ಕಳುಹು ನೀಂ॥ ೧॥ ಕಾಂತೆ ಮಿಂಚುತಾಂ ಪತಾಕೆ। ಯಂತೆ ಶೋಭಿಸೆ॥ ಅಂತರಿಕ್ಷದೊಳು ವಿಮಾನ। ದಂತೆ ಚರಿಸುವ॥ ೨॥ ಬರೆದಚಿತ್ರದಂತೆ ಮೆರೆಯೆ। ಸುರಪಚಾಪವು॥ ಪಿರಿದುವೇಗದಿಂದ ಮನವ। ಹರಿಸಗೊಳಿಸುವ॥ ೩॥

ಚತುರ್ಥಾಂಕವು ಮುಗಿದುದು.

ಪಂಚಮಾಂಕಂ.

(ಅನಂತರ ವಿದೂಷಕನು ಪ್ರವೇಶಿಸಿ ಸಂತೋಷದಿಂದ)

ವಿದೂ.—*ಭಾಪು! ಭಾಪು! ನಮ್ಮ ಮಹಾರಾಜನು ಊರ್ವಶೀಸಹಿತನಾಗಿ ನಂದನವನ ಮೊದಲಾದ ದೇವತಾವನಗಳಲ್ಲಿ ವಿಹಾರಮಾಡಿಕೊಂಡು, ಬಹುಕಾಲಕ್ಕೆ ರಾಜಧಾನಿಗೆ ಬಂದು ಸೇರಿದನು. ಈಗ ಪ್ರಜೆಗಳನ್ನೆಲ್ಲಾ ಸತ್ಕರಿಸಿ ಸಂತೋಷಪಡಿಸುತ್ತಾ, ರಾಜ್ಯಪರಿಪಾಲನೆಯನ್ನು ಮಾಡುತ್ತಿರುವನು. ಈತನ ವಿಷಯದಲ್ಲಿ ಸಂತಾನವಿಲ್ಲದೇ ಇರುವದೊಂದೇ ಪ್ರಜೆಗಳ ಕೊರತೆಗೆ ಕಾರಣವೇ ಹೊರತು ಇನ್ನ್ಯಾವದೂ ಇಲ್ಲ. ಈವೊತ್ತೇನೊ ಪುಣ್ಯಕಾಲವೆಂದು ಗಂಗಾಯಮುನಾ ಸಂಗಮದಲ್ಲಿ ಮಹಾರಾಣಿಯೊಡನೆ ಮಂಗಳಸ್ನಾನವನ್ನು ಮಾಡಿ, ಅಲಂಕಾರಮಾಡಿಕೊಳ್ಳುವದಕ್ಕೋಸ್ಕರ ಅಲಂಕಾರಮಂಟಪಕ್ಕೆ ಬಂದಿರುವನು; ಈಗಲೇ ನಾನು ಅಲ್ಲಿಗೆ ಹೋಗದೇ ಇದ್ದರೆ ಗಂಧಪುಷ್ಪಗಳಲ್ಲಿ ನನಗೆ ಬರುವ ಅಗ್ರಭಾಗವು ತಪ್ಪಿಹೋಗುವದು; ಆದ್ದರಿಂದ ಜಾಗ್ರತೆಯಾಗಿ ಅಲ್ಲಿಗೆ ಹೋಗುವೆನು.

(ಎಂದು ನಡೆದು ಬರುತ್ತಿರಲು)

ತೆರೆಯಲ್ಲಿ.—ಅಯ್ಯೋ! ಅಯ್ಯೋ! ಪಟ್ಟೇಬಟ್ಟೆಯನ್ನು ಹಾಸಿದ ಚಿನ್ನದ ತಟ್ಟೆಯಲ್ಲಿಟ್ಟುಕೊಂಡು ತರುತ್ತಿದ್ದ ಊರ್ವಶಿಯ ಚೂಡಾಭರಣರತ್ನವನ್ನು ಮಾಂಸಭ್ರಾಂತಿಯಿಂದ ಹದ್ದೆತ್ತಿಕೊಂಡು ಹೋಯಿತು.

ವಿದೂ.—(ಕೇಳಿ) ಆಹ! ಇದೇನು! ಆ ರತ್ನವು ಮಹಾರಾಜನು ಅತ್ಯಂತ ಬಹುಮಾನದಿಂದ ಇಟ್ಟುಕೊಂಡಿದ್ದ ಸಂಗಮನೀಯವೆಂಬ ಚೂಡಾರತ್ನ

---

*ಸೋಟು ರಾಗ—ಶಂಕರಾಭರಣ ‖ ‖ ಏಕತಾಳ ‖

ಈಗ ನನ್ನ ಮನವು ದೈವ । ಯೋಗದಿಂದಲಿ ‖ ನೀಗಿ ಚಿಂತೆಯನ್ನು ಚೆ । ನ್ನಾಗಿ ಸುಖಿಪುದು ‖ ೧ ‖ ನಂದನಾದಿ ವನವಿಹಾರ । ದಿಂದ ಸುಖಿಸುತ ‖ ಇಂದು ನಮ್ಮರಾಯ ಪುರಕೆ । ಬಂದು ಸೇರ್ದನು ‖ ೨ ‖ ಏರಿ ಸಿಂಹಪೀಠವನ್ನು । ಭೂರಿತೋಷದಿ ‖ ಸೇರಿ ಸಚಿವರೊಡನೆ ರಾಜ್ಯ । ಭಾರಗೈವನು ‖ ೩ ‖

ವಲ್ಲವೆ! ಅದನ್ನು ಹದ್ದೆತ್ತಿಕೊಂಡು ಹೋಯಿತೆ! (ಎಂದು ನೋಡಿ) ಇದೊ ಈ ಮಾತನ್ನು ಕೇಳಿ ನಮ್ಮ ಮಹಾರಾಜನು ಅಲಂಕಾರಮಾಡಿ ಕೊಳ್ಳುವದನ್ನೂ ಬಿಟ್ಟು, ಇತ್ತಲಾಗಿಯೇ ಬರುತ್ತಿರುವನು; ನಾನೂ ಆತನ ಸಮೀಪಕ್ಕೆ ಹೋಗಿ ಸೇರಿಕೊಳ್ಳುವೆನು. (ಎಂದು ತೆರಳಿದನು.)

ಇಂತಿದು ಪ್ರವೇಶಕವು.

(ಬಳಿಕ ಸಂಭ್ರಾಂತರಾದ ಪರಿಜನರೊಡನೆ ರಾಜನು ಪ್ರವೇಶಿಸುವನು.)

ರಾಜಂ.—

ಕಂ॥ ಉತ್ತಮವೆನಿಸಿದ ಮಣಿಯಂ।
ಮೊತ್ತಮೊದಲ್ ಕಳ್ದು ರಾಜಗೃಹದೊಳ್ ತನ್ನಾ ॥
ಪತ್ತಂ ತಾನೇ ಕಯ್ಕೊಂ।
ಡೆತ್ತಲ್ ಘಡ ಪಾರಿಪೋದುದಾ ಚೋರಖಗಂ ॥ ೧ ॥

ಕಿರಾತಿಯು.—(ಪ್ರವೇಶಿಸಿ) ಮಹಾರಾಜನೆ ಇದೊ ನೋಡು, ಆ ಹದ್ದು ಚಿನ್ನದ ದಾರದಲ್ಲಿ ಪೋಣಿಸಿರುವ ಆ ದಿವ್ಯರತ್ನವನ್ನು ಕಚ್ಚಿಕೊಂಡು, ಈ ತೆರನಾಗಿ ಚಿತ್ರದಲ್ಲಿ ಬರೆದ ಪಕ್ಷಿಯಂತೆ ಆಕಾಶದಲ್ಲಿ ಸುತ್ತುತ್ತಿರುವದು.

ರಾಜಂ.—ಆಹ!

*ವೃತ್ತ॥ ಗಗನಾಭ್ಯಂತರದೊಳ್ ವಿಚಿತ್ರಮೆನೆ ಸುತ್ತುತ್ತಂ ಮಹಾವೇಗದಿಂ।
ಮೊಗದೊಳ್ಪೊನ್ನೆಳೆಯಿಂದೆ ಕೋದಮಣಿಯುಂಮುಂಗೊಕ್ಕಿನೊಳ್
ತಾಳ್ದು ಕೇ ॥
ಡಿಗನಾಪದ್ದ್ರ್ಹಹಾ ವಿಲೋಕಿಪೊಡೆ ಕಟ್ಟುತ್ತಿಕ್ಕ್ರಮಾಕೆಂಬರಲ್।
ಬೊಗರಿಂ ಮಂಡಲರೇಖೆಯಂ ಜ್ವಲಿಪಸುತ್ತುಂಗೊಳ್ಳಿಯಾಸುತ್ತು
ವ್ರೋಲ್॥ ೨ ॥

ಈಗ ಹ್ಯಾಗೆಮಾಡೋಣ?

---

*ರಾಗ—ಜಲಾಬ್ ॥ ॥ ಆದಿತಾಳ ॥

ಆಗಸದೊಳು ಬಲು। ವೇಗದಿಪದ್ದಿದು ॥ ಪೋಗುವಪರಿ ಸೊಗ। ಸಾಗಿಹುದೀಗ॥೧॥
ಕೆಂಡದಂದದ ಮಣಿ। ಗೊಂಡಿದು ಬೆಂಕಿಯು॥ ದಂಡವ ಸುತ್ತಿಪೊಲು। ಮಂಡಲಗತಿಯು ॥೨॥
ಮಿರುಗುವ ರನ್ನದ। ಕಿರಣಸಮೂಹದಿ ॥ ಪರಿವೇಷವ ಕಟ್ಟು। ತ್ತಿರುವದು ನೋಡೇ ॥೩॥

ವಿದೂ.—(ಸಮೀಪಕ್ಕೆ ಬಂದು) ಹ್ಯಾಗೆ ಮಾಡುವದೇನು? ಸಾಕುಸಾಕು ನಿನ್ನಕರುಣ, ಈ ಅಪರಾಧಿಯನ್ನು ಬೇಗ ಶಿಕ್ಷಿಸು.

ರಾಜಂ.—ಹೌದು, ನೀನುಹೇಳಿದ್ದು ಸರಿ; ಎಲ್ಲಿ ನನ್ನ ಧನುಸ್ಸು?

ಯವನಿಕೆ.—ಇದೊತಂದೆನು. (ಎಂದು ತೆರಳಿದಳು)

ರಾಜಂ.—ಎಲ್ಲಿ? ಆ ಕಳ್ಳಹದ್ದು ಕಣ್ಣಿಗೆ ಕಾಣದಹಾಗಾಯಿತು!

ವಿದೂ.—ಮಹಾರಾಜನೆ ಆ ರಣಹದ್ದು ಇತ್ತಲಾಗಿ ದಕ್ಷಿಣದಿಕ್ಕಿನ ಕೊನೆಯನ್ನು ಸೇರಿದಹಾಗೆ ಕಂಡುಬಂತು.

ರಾಜಂ—(ತಿರುಗಿನೋಡಿ) ಇದೊ ಈಗ ಕಾಣುತ್ತಿರುವದು.

ಕಂ॥ ಮಿಸುಗುವ ಕದಿರ್ಗಳ್ ಬಳಸಿರ ।
ಲಸುಗೆಯ ಪೊಸಗೊಂಚಲಂತೆ ತೋರ್ಪ್ಪ ಮಣಿಯಿಂ ॥
ದೆಸೆವೆಣ್ಣಿನ ಮುಂದಲೆಯಂ ।
ಪಸದನಗೊಳಿಪಂತೆ ನೋಡಲಾಪರ್ದ್ದೆಸೆಗುಂ ॥ ೩ ॥

ಯವನಿಕೆ.—(ಧನುರ್ಬಾಣಗಳನ್ನು ತೆಗೆದುಕೊಂಡುಬಂದು) ಮಹಾರಾಜನೆ ಇದೊ ಬಾಣಸಹಿತವಾದ ಧನುಸ್ಸು.

ರಾಜಂ.—ಈಗ ಧನುಸ್ಸಿನಿಂದತಾನೆ ಏನುಪ್ರಯೋಜನ? ಆ ಹದ್ದಾಗಲೇ ಬಾಣಮಾರ್ಗವನ್ನು ಅತಿಕ್ರಮಿಸಿ ಹೊರಟು ಹೋಯಿತು. ಇದೊ

ಕಂ॥ ತಾರಗೆ ವಟ್ಟಿಗೆ ಪರ್ದ್ದೊ ।
ಯ್ದಾರತ್ನಮಿರುಳ್ ಘನಾಭ್ರಖಂಡದೆಬೆರೆದಂ ॥
ಗಾರಕ ನಕ್ಷತ್ರದವೋಲ್ ।
ದೂರದೆಮಿಣಮಿಣನೆ ಮಿನುಗುತಿರ್ಕ್ಕುಂ ನೋಡಲ್ ॥ ೪ ॥

(ಎಂದು ಕಂಚುಕಿಯನ್ನು ನೋಡಿ) ಎಲೈ ಲಾತವ್ಯನೆ,

ಕಂಚು.—ಮಹಾರಾಜನೆ ಏನಪ್ಪಣೆ?

ರಾಜಂ.—ಸಾಯಂಕಾಲದಲ್ಲಿ ಯಾವದಾದರೂ ಬಂದು ಮರದಮೇಲೆ ಹೋಗಿ ಸೇರತಕ್ಕ ಆ ಕಳ್ಳಹದ್ದನ್ನು ಹುಡುಕತಕ್ಕದ್ದೆಂದು ನಗರಾಧ್ಯಕ್ಷ ನಿಗೆ ಆಜ್ಞಾಪಿಸು.

ಕಂಚು.—ಮಹಾರಾಜನ ಅಪ್ಪಣೆಯಾದಂತೆ. (ಎಂದು ತೆರಳಿದನು.)

ವಿದೂ.—ಮಹಾರಾಜನೆ ಇನ್ನು ಕೂತುಕೊಳ್ಳಬಹುದು; ಆ ರತ್ನ ವನ್ನು ಕದ್ದಿರತಕ್ಕ ಹದ್ದು ಈಗ ಇನ್ನೆಲ್ಲಿತಾನೇ ಹೋದೀತು? ಅದೆಂದಿಗೂ ನಿನ್ನ ಆಜ್ಞೆಯಿಂದ ಬಿಡಿಸಿಕೊಳ್ಳಲಾರದು.

ರಾಜಂ.—ಬಳ್ಳೇದು ಆಗಲಿ. (ಎಂದು ವಿದೂಷಕನೊಡನೆ ಕೂತುಕೊಂಡು) ಎಲೈ ಮಿತ್ರನೆ,

ಕಂ॥ ಇನಿತಾದರಮಿಲ್ಲದು ಮಣಿ।
ಯೆನುತಾಪದ್ದೆ ತ್ತಿಕೊಂಡು ಪೋದಾಮಣಿಯೊಳ್ ॥
ಎನಗದರೋಳಿನಿತಾದರ।
ಮಿನಿಯಳನೆನ್ನೊಂದುಗೂಡಿಸಿತ್ತದೆನುತ್ತಂ ॥ ೫ ॥

ವಿದೂ.—ಮಹಾರಾಜನೆ ಈ ನಿನ್ನ ಮಾತಿನಿಂದ ಊರ್ವಶೀಸಹಿತನಾಗಿ ನೀನು ದೇವತಾವನಗಳಲ್ಲಿ ವಿಹರಿಸುತ್ತಿದ್ದಾಗ ನಡೆದ ಸಂಗತಿಗಳೆಲ್ಲಾ ತಿಳಿದುಬಂದಹಾಗಾಯಿತು.

(ಬಳಿಕ ಬಾಣದೊಡನೆ ರತ್ನವನ್ನು ತೆಗೆದುಕೊಂಡು ಕಂಚುಕಿಯೂ ಕಿರಾತಿಯೂ ಪ್ರವೇಶಿಸುವರು.)

ಕಂಚು.—ಮಹಾರಾಜನಿಗೆ ಜಯವಾಗಲಿ.

ಕಂ॥ ಶರರೂಪವನಾಂತೀ ನಿ।
ನ್ನುರುಕೋಪದೆ ಗಾಸಿವಡೆದು ತದ್ವರರತ್ನಂ ॥
ಬೆರಸಂತರಿಕ್ಷದಿಂದಂ।
ಕರುವಮಾಡದ ನಡುವೆ ಕೆಡೆದು ದಾಚೋರಖಗಂ ॥ ೬ ॥

ಎಲ್ಲರೂ.—(ಆಶ್ಚರ್ಯವನ್ನು ನಟಿಸುವರು)

ಕಂಚು.—ಇದೋ ರತ್ನವನ್ನು ನೀರಿನಲ್ಲಿ ತೊಳೆದು ತಂದಿರುವೆನು; ಇದನ್ನು ಯಾರವಶಕ್ಕೆ ಕೊಡುವಂತೆ ಅಪ್ಪಣೆಯಾಗುತ್ತೆ?

ರಾಜಂ.—ಎಲೆ ರೈವತಕೆ ಈ ರತ್ನಕ್ಕೆ ಅಗ್ನಿಪ್ರದರ್ಶನಶುದ್ಧಿಯನ್ನು ಮಾಡಿ ಇದನ್ನು ಬೊಕ್ಕಸಕ್ಕೆ ಸೇರಿಸತಕ್ಕದ್ದು.

ಕಿರಾತಿ.—ಮಹಾರಾಜನ ಅಪ್ಪಣೆಯಾದಂತಾಗಲಿ.

(ಎಂದು ರತ್ನವನ್ನು ತೆಗೆದುಕೊಂಡು ಹೋದಳು.)

ರಾಜಂ.—ಎಲೈ ಲಾತವ್ಯನೆ ಈ ಬಾಣ ಯಾರದಾಗಿರಬಹುದು? ನಿನಗೆ ಗೊತ್ತುಂಟೆ?

ಕಂಚು.—ಇದರಲ್ಲಿ ಹೆಸಕ್ಷರಗಳು ಬರದಿವೆ; ಆದರೆ ಇದನ್ನು ಓದುವದಕ್ಕೆ ನನ್ನ ದೃಷ್ಟಿ ಮಧ್ಯಸ್ಥವಾಗಿದೆ.

ರಾಜಂ.—ಹಾಗಾದರೆ ಆ ಬಾಣವನ್ನು ಇಲ್ಲಿ ಕೊಡು.

ಕಂಚು.—ಒಪ್ಪಿಸಿಕೊಳ್ಳಬೇಕು. (ಎಂದು ಒಪ್ಪಿಸುವನು.)

ರಾಜಂ.—(ಬಾಣದಮೇಲೆ ಬರೆದಿರುವ ಅಕ್ಷರಗಳನ್ನು ನೋಡಿ ತಾನು ಪುತ್ರವಂತನೆಂಬ ಹರ್ಷಭಾವವನ್ನು ನಟಿಸುವನು.)

ಕಂಚು.—ಅಪ್ಪಣೆಯಾದರೆ ನನ್ನ ಕೆಲಸಕ್ಕೆ ನಾನು ಹೋಗುವೆನು.

ರಾಜಂ.—ಒಳ್ಳೇದು.

ಕಂಚು.—(ತೆರಳಿದನು.)

ವಿದೂ.—ಅಯ್ಯಾ ಇದೇನು! ಮನಸ್ಸಿನಲ್ಲೇ ಬಹಳ ವಿಚಾರನಡಿಸುತ್ತಾ ಇರುವಹಾಗಿದೆ.

ರಾಜಂ.—ಮಿತ್ರನೆ ಹಾಗಾದರೆ ಕೇಳು, ಈ ಬಾಣದಮೇಲೆ ಬರೆದಿರುವ ಅಂಕಿತಶ್ಲೋಕವನ್ನು ಓದುವೆನು. (ಬಾಣವನ್ನು ನೋಡುತ್ತ ಓದುವನು.)

ಕಂ॥ ರಾಯಪುರೂರವನಣುಗನ ।
ಕೋಯುಂಡಂಬಿಡಿದ ನೂರ್ವಶೀಸಂಭವನಾ ॥
ದಾಯುಃಕುಮಾರನ ವಿಪ ।
ಕ್ಷಾಯುವನೊರಸುವನ ಬಾಣವಿದು ವಿಖ್ಯಾತಂ ॥ ೭ ॥

ವಿದೂ.—(ಸಂತೋಷದಿಂದ) ಭಾಪು! ಮಹಾರಾಜನೆ ಭಾಪು! ನಿನಗೆ ಪುತ್ರೋತ್ಸವವೂ ಆಗಿರುವದೆ?

ರಾಜಂ.—ಮಿತ್ರನೆ ಈ ವಿಷಯವು ಸಂತೋಷಕರವಾದದ್ದೇಸರಿ; ಆದರೆ ಮಹರ್ಷಿಗಳ ಯಾಗರಕ್ಷಣೆಗೋಸ್ಕರ ನೈಮಿಶಾರಣ್ಯಕ್ಕೆ ಹೋಗಿದ್ದಾಗ ಹೊರತಾಗಿ ಇನ್ನಾವ್ಯವಾಗಲೂ ನಾನು ಊರ್ವಶಿಯನ್ನು ಬಂದು ಕ್ಷಣವೂ ಅಗಲಿದವನಲ್ಲ; ಹೀಗಿದ್ದ ನಾನು ಆಕೆಯು ಗರ್ಭಿಣಿಯಾದದ್ದನ್ನೇ ಅರಿಯೆ; ಹೀಗಿರುವಲ್ಲಿ ಪುತ್ರೋತ್ಪತ್ತಿಯಾದ ವಿಷಯವು ನನಗೆ ತಿಳಿಯದೆಂಬುವದನ್ನು ನಾನಾಡಬೇಕೆ? ಆದರೆ,

ಕಂ॥ ಕೆಲವುದಿನವಮಾಶುಭಾಂಗಿಯು।
ಲಲಿತಾಂಗಂ ರಂಜಿಸುತ್ತಮಿದ್ದುದು ಲವಲೀ॥
ಫಲಪಾಂಡುಮುಟದ್ಯುತಿಯಿಂ।
ದಲಸೇಕ್ಷಣದಿಂದೆ ಮಲಿನಚೂಚುಕರುಚಿಯಿಂ॥ ೮॥

ವಿದೂ.—ಹೀಗೆಲ್ಲಾ ಮನುಷ್ಯಸ್ತ್ರೀಯರ ಸ್ವಭಾವವನ್ನು ದಿವ್ಯಲೋಕದ ಸ್ತ್ರೀಯರಲ್ಲಿ ನೀನೆಣಿಸಬೇಡ, ಮಹಾತ್ಮರಾದ ದೇವತಾಸ್ತ್ರೀಯರ ನಡವಳಿತವು ಸಾಧಾರಣವಾಗಿ ನಮಗೆ ಗೊತ್ತಾಗತಕ್ಕದ್ದಲ್ಲ.

ರಾಜಂ.—ನೀನು ಹೇಳಿದಂತೆಯೇ ಆಗಲಿ, ಆದರೆ ಆಕೆಯು ಪುತ್ರನನ್ನು ಮರಸುವದಕ್ಕೆ ಕಾರಣವೇನು?

ವಿದೂ.—ಬೇರೆ ಕಾರಣ ಯಾವದು? ಹೆತ್ತಮೇಲೆ ಹೆಂಡತಿಯಲ್ಲಿ ಗಂಡನಿಗೆ ಪ್ರೀತಿ ಕಡಮೆಯಾಗುವದೆಂದು.

ರಾಜಂ.—ಮಿತ್ರನೆ ಪರಿಹಾಸ್ಯ ಸಾಕು, ಚೆನ್ನಾಗಿ ಯೋಚಿಸು.

ವಿದೂ.—ದೇವತಾರಹಸ್ಯವನ್ನು ಯೋಚಿಸಿ ತಿಳಿಯುವದಕ್ಕಾದೀತೆ?

ಕಂ.—(ಬಂದು) ಮಹಾರಾಜನಿಗೆ ಜಯವಾಗಲಿ; ಮಹಾರಾಜನೆ ಚ್ಯವನಮಹರ್ಷಿಗಳ ಆಶ್ರಮದಿಂದ ಒಬ್ಬ ತಾಪಸಿಯು ಒಬ್ಬ ಕುಮಾರನನ್ನು ಕರದುಕೊಂಡು ತಮ್ಮನ್ನು ಕಾಣುವದಕ್ಕೆ ಬಂದಿರುವಳು.

ರಾಜಂ.—ಅವರನ್ನು ಬೇಗ ಕರದುಕೊಂಡುಬಾ.

ಕಂ.—ಅಪ್ಪಣೆ (ಎಂದು ಹೋಗಿ ಧನುರ್ಧಾರಿಯಾದ ಕುಮಾರನೊಡನೆ ತಾಪಸಿಯನ್ನು ಕರದುಕೊಂಡುಬಂದು) ಎಲೌ ಪೂಜ್ಯಳೆ ಹೀಗೆ ದಯಮಾಡಿಸಬೇಕು.

(ಎಲ್ಲರೂ ನಡೆತರುವರು.)

ವಿದೂ.—(ಕುಮಾರನನ್ನು ನೋಡಿ) ಮಹಾರಾಜನೆ ಈತನು ಕ್ಷತ್ರಿಯ ಕುಮಾರನಂತೆ ಕಾಣಿಸುವನು. ಈತನಲ್ಲಿ ನಿನ್ನ ಹೋಲಿಕೆ ವಿಶೇಷವಾಗಿರುವದ್ದರಿಂದ ಆ ಹದ್ದನ್ನು ಸಂಹರಿಸಿದ ಈ ಬಾಣವು ಈತನದಾಗಿಯೇ ಇರಬಹುದು.

ರಾಜಂ.—ಇದ್ದರೂ ಇರಬಹುದು. ಆದ್ದರಿಂದಲೇ,

*ಕಂ॥ ಹೃದಯದೆ ವಾತ್ಸಲ್ಯಂ ನೇ।
ತ್ರದೆ ಬಾಷ್ಪಂ ತಿಳಿವು ಮನದೆ ನಡುಕಂ ಕರದೊಳ್॥
ಉದಯಿಸೆ ಧೈರ್ಯಂ ವಿಗಳಿಸೆ।
ಮೊದಲಾಂ ಬಿಗಿದಿವನ ನಪ್ಪಿಕೊಳಲೆಳಸಿದಪೆಂ॥ ೯ ॥

ಕಂ.—ಹೀಗೆ ನಿಂತುಕೊಳ್ಳಿರಿ.

(ತಾಪಸೀಕುಮಾರರು ಒಂದುಕಡೆ ನಿಂತುಕೊಳ್ಳುವರು.)

ರಾಜಂ.—ಎಲೌ ಪೂಜ್ಯಳೆ ವಂದಿಸುವೆನು.

ತಾಪಸಿ.—ಎಲೈ ಮಹಾರಾಜನೆ ಚಂದ್ರವಂಶೋದ್ಧಾರಕನಾಗು. (ತನ್ನಲ್ಲಿ ತಾನು) ಯಾರೂ ಹೇಳದೇ ಇದ್ದಾಗ್ಯೂ ಈ ರಾಜರ್ಷಿಗೂ ಈ ಕುಮಾರನಿಗೂ ಔರಸಸಂಬಂಧವು ಚೆನ್ನಾಗಿ ಗೊತ್ತಾಗುತ್ತಿರುವದು. (ಪ್ರ) ವತ್ಸನೆ ನಿಮ್ಮ ತಂದೆಗೆ ನಮಸ್ಕಾರಮಾಡು.

---

*ರಾಗ—ಘರ್ಜ್॥ ॥ಏಕತಾಳ॥

ಬಾಲಕನಿವನನು ನೋಡಿ। ಆನಂದತೋರ್ಪುದು। ಮಾನಸದೊಳೇನಿದು ॥ ಪ ॥
ಈ ನೇತ್ರಯುಗದೊಳ। ಗಾನಂದಬಾಷ್ಪವು। ನೀ ನೋಡುಬರುತಿದೆ। ತಾನೀಗಳೇನಿದು ॥
ಹೃದಯದಿವಾತ್ಸಲ್ಯ। ವೊದಗಿತೋರುತ್ತಿದೆ। ಇದ ಕೇನೊಕಾರಣ। ವದಕಾಣೆನೇನಿದು ॥
ಈ ಲಲಿತಾಂಗನ। ಆಲೋಕಿಸಲುಬಿಗಿ। ದಾಲಿಂಗಿಸಲುಮನ। ಕಾಕಾಂಕ್ಷೆಯೇನಿದು ॥ ೩ ॥

ಆಯುಸ್ಸು.—(ಧನುಸ್ಸಿನೊಡನೆ ಕೈಜೋಡಿಸಿಕೊಂಡು ವಂದಿಸುವನು.)

ರಾಜಂ.—ಆಯುಷ್ಮಂತನಾಗು.

ಆಯು.—(ತನ್ನಲ್ಲಿತಾನು)

ಕಂ॥ ತಂದೆಯಿವನೆನಗಿವಂ ಗಾಂ ।
ನಂದನನೆಂದರಿಯಲಿನಿತೆನಿಪ್ಪೊಡೆನೇಹಂ ॥
ತಂದೆಗಳಂಕದೆವೃದ್ಧಿಯ ।
ನೊಂದಿದ ಸುತರ್ಗೆನಿತು ನೇಹವೋತಂದೆಗಳೊಳ್ ॥ ೧೦ ॥

ರಾಜಂ.—ಎಲೌ ಪೂಜ್ಯಳೆ ನೀನು ಬಂದಕಾರಣವೇನು ?

ತಾ.—ಮಹಾರಾಜನೆ ಕೇಳಬೇಕು ; ಊರ್ವಶಿಯು ದೀರ್ಘಾಯುಷ್ಮಂತನಾದ ಈ ಆಯುಃಕುಮಾರನನ್ನು ಹೆತ್ತಕೂಡಲೆ ಯಾತಕ್ಕೋಸ್ಕರಲೋ ನಿನಗೆ ತೋರಿಸದೆ ನನ್ನ ಕೈಸೇರಿಸಿದ್ದಳು ; ಪೂಜ್ಯರಾದ ಚ್ಯವನಮಹರ್ಷಿಗಳು ಕ್ಷತ್ರಿಯರಿಗೆ ಉಕ್ತವಾಗಿರುವ ಕ್ರಮದಿಂದ ಈ ಚಿರಂಜೀವಿಗೆ ಜಾತಕರ್ಮಾದಿಗಳನ್ನು ನೆರವೇರಿಸಿರುವರು ; ಅವರಲ್ಲೇ ಇವನು ವಿದ್ಯಾಭ್ಯಾಸವನ್ನುಮಾಡಿ ಧನುರ್ವಿದ್ಯವನ್ನೂ ಕಲಿತಿರುವನು.

ರಾಜಂ.—ಹಾಗಾದರೆ ಇವನು ಅನಾಥನಾಗಿರಲಿಲ್ಲ.

ತಾ.—ಈದಿವಸ ಇವನು ಋಷಿಕುಮಾರರೊಡನೆ ಹೂವನ್ನೂ ಸಮಿತ್ತನ್ನೂ ತರುವದಕ್ಕೆ ಹೋಗಿ ಋಷ್ಯಾಶ್ರಮಕ್ಕೆ ವಿರುದ್ಧವಾದ ಕೆಲಸವನ್ನು ಮಾಡಿದನು.

ವಿದೂ.—(ದಿಗಿಲುಬಿದ್ದು) ಅದೇನು ?

ತಾ.—ಒಂದು ಹದ್ದು ಮಾಂಸಖಂಡವನ್ನು ಕಚ್ಚಿಕೊಂಡು ಒಂದು ಮರದಮೇಲೆ ಬಂದು ಸೇರುತ್ತಿತ್ತು ; ಅದನ್ನು ಇವನು ತನ್ನ ಬಾಣಕ್ಕೆ ಗುರಿಮಾಡಿದನು.

ವಿದೂ.—(ರಾಯನ ಮುಖವನ್ನು ನೋಡುವನು).

ರಾಜಂ.—ಆಮೇಲೆ ?

ತಾ.—ಅನಮೇಲೆ ಈ ವೃತ್ತಾಂತವನ್ನು ಚ್ಯವನ ಮಹರ್ಷಿಗಳು ಕೇಳಿ, "ಊರ್ವಶಿಯು ನಿನ್ನ ಕಯ್ಯಲ್ಲಿ ಕೊಟ್ಟಿರುವ ಈ ಕುಮಾರನನ್ನು ಕರದು ಕೊಂಡುಹೋಗಿ ಆಕೆಯ ಕೈಸೇರಿಸಿ ಬಾ" ಎಂದು ನನಗಾಜ್ಞಾಪಿಸಿರುವರು. ಆದ್ದರಿಂದ ಈಗ ಊರ್ವಶಿಯನ್ನು ಕಾಣಲಿಚ್ಛೈಸುವೆನು.

ರಾಜಂ.—ಎಲೌ ಪೂಜ್ಯಳೆ ಹಾಗಾದರೆ ಈ ಪೀಠದಲ್ಲಿ ಕೂತುಕೊಳ್ಳ ಬಹುದು.

ತಾ.—ಒಳ್ಳೇದು. (ಎಂದು ಕೂತುಕೊಳ್ಳುವಳು).

ರಾಜಂ.—(ಕಂಚುಕಿಯನ್ನು ನೋಡಿ) ಎಲೈ ಲಾತವ್ಯನೆ ಊರ್ವಶಿಯನ್ನು ಕರದುಕೊಂಡು ಬರತಕ್ಕದ್ದು.

ಕಂ.—ಅಪ್ಪಣೆ. (ಎಂದು ತೆರಳಿದನು).

ರಾಜಂ.—(ಕುಮಾರನನ್ನು ನೋಡಿ)

ಕಂ॥ ಕಂದನವೆಯಯೆನ್ನೀಂಕುಕರಂ ।
ತಂದೆಯನಾಹ್ಲಾದಗೊಳಿಪುದಿಂದೂಪಳನುಂ ॥
ಚಂದಿರಕರಮಾಹ್ಲಾದಿಸು ।
ವಂದದೊಳದರಿಂದಮಿತ್ತುಬಾರೈವತ್ಸಾ ॥ ೧೧ ॥

ತಾ.—ವತ್ಸನೆ ನಿಮ್ಮ ತಂದೆಯನ್ನು ಸಂತೋಷಪಡಿಸು.

ಆಯು.—(ತಂದೆಯ ಬಳಿಗೆಬಂದು ಪಾದವಂದನೆಯನ್ನು ಮಾಡುವನು).

ರಾಜಂ.—(ಕುಮಾರನನ್ನು ಆಲಿಂಗಿಸಿಕೊಂಡು ಪಾದಪೀಠದಮೇಲೆ ಕೂರಿಸಿಕೊಂಡು) ವತ್ಸನೆ ನಿಮ್ಮತಂದೆಗೆ ಮಿತ್ರನಾದ ಈ ಬ್ರಾಹ್ಮಣನಿಗೆ ಭಯಪಡದೆ ನಮಸ್ಕಾರಮಾಡು.

ವಿದೂ.—ಯಾತಕ್ಕೆ ಭಯಪಡುವನು? ಇವನು ತಪೋವನದಲ್ಲಿದ್ದವನಾದಕಾರಣ ಇವನಿಗೆ ಕೋತಿಗಳ ಪರಿಚಯವಿದ್ದೇ ಇರಬಹುದು.

ಆಯು.—(ನಸುನಗುತ) ಆರ್ಯನೆ ವಂದಿಸುವೆನು. (ಎಂದು ನಮಸ್ಕರಿಸುವನು.)

ವಿದೂ.—ನಿನಗೆ ಮಂಗಳವಾಗಲಿ.

(ಬಳಿಕ ಊರ್ವಶಿಯೂ ಕಂಚುಕಿಯೂ ಪ್ರವೇಶಿಸುವರು).

ಕಂಚು.—ಎಲೌ ಪೂಜ್ಯಳೆ ಹೀಗೆ ದಯಮಾಡಿಸಬೇಕು.

ಊ.—(ನೋಡಿ) *ಈ ಬಾಲಕನು ಯಾರು ! ಧನುಸ್ಸನ್ನು ಹಿಡಿದಿರುವನು ! ಮಹಾರಾಜನು ತನ್ನ ಪಾದಪೀಠದಮೇಲೆ ಕೂರಿಸಿಕೊಂಡು ಕೆದರಿಹೋದ ಈತನ ಮುಂಡೇಕೂದಲನ್ನು ತಾನೇ ಗಂಟುಹಾಕುತ್ತಿರುವನು ! (ತಾಪಸಿಯನ್ನು ನೋಡಿ) ಓಹೊ ! ಪೂಜ್ಯಳಾದ ಸತ್ಯವತಿಯುಬಂದಿರುವದ್ದರಿಂದ ಈಗಲೀಗ ಗೊತ್ತಾಯಿತು. ಇವನು ನನ್ನ ಪುತ್ರನಾದ ಆಯುಸ್ಸು. ಈಗ ದೊಡ್ಡವನಾಗಿರುವನು. (ಎಂದು ಮುಂದೆ ಬರುವಳು).

ರಾಜಂ.—(ಊರ್ವಶಿಯನ್ನು ನೋಡಿ ಆಯುಸ್ಸನ್ನು ಕುರಿತು)—

ಕಂ॥ ಎಲೆವತ್ಸನಿನ್ನನೀಕ್ಷಿಸೆ ।
ನಲವಿಂದಂ ನಿನ್ನಜನನಿ ಬಂದಪಳಿದೊ ವ ॥
ತ್ಸಲತೆಯಿನೊಸರ್ದಪಕುಚದು ।
ಚ್ಚಲಿಸುವಮೇಲುದನೆತಳ್ತುನೇರ್ಪ್ಪಡಿಸುತ್ತಂ ॥ ೧೦ ॥

ತಾ—ವತ್ಸನೆ ನಿಮ್ಮತಾಯಿಯನ್ನು ಎದುರುಗೊಳ್ಳಡೆ.

ಆಯು.—(ಊರ್ವಶಿಯನ್ನು ಎದುರುಗೊಳ್ಳುವನು.)

ಊರ್ವ.—(ಪ್ರೀತಿಯಿಂದ ಮಗನನ್ನು ನೋಡುತ್ತ ಸತ್ಯವತಿಯನ್ನು ನೋಡಿ) ಎಲೌ ಪೂಜ್ಯಳೆ ವಂದಿಸುವೆನು.

ತಾ.—ಎಲೆ ಮಗಳೆ ಪತಿಹಿತೆಯಾಗಿ ಬಾಳು.

ಆಯು.—(ಊರ್ವಶಿಯ ಬಳಿಗೆ ಬಂದು) ಅಮ್ಮಾ ನಮಸ್ಕರಿಸುವೆನು.

---

*ರಾಗ—ಶಂಕರಾಭರಣ ॥ ॥ ಆದಿತಾಳ ॥

ಈಬಾಲನಾವನು । ಶ್ರೀಬಾಲರೂಪನು ॥ ಪ ॥ ಆಜಾನುಬಾಹುವು । ತೇಜಸ್ವಿಯನೋಡಲು । ರಾಜಲಕ್ಷಣದಿಂದ । ರಾಜಿಸುತಿರ್ಪನು ॥ ೧ ॥ ಕುಟಿಲನೀಲಾಳಕ । ಜಟಿಲನಿಟಾಲನು ॥ ಸ್ಫುಟ ಕಮಲಾಕ್ಷನು । ಪಟುತರ ಶೀಲನು ॥ ೨ ॥ ಈ ಸಭೆಯೊಳು ಕನ । ಕಾಸನತಲದೊಳು । ವಾಸವಸುತನೊಲು । ಭಾಸಿಸುತಿರುವನು ॥ ೩ ॥

ಊ.—(ಕುಮಾರನನ್ನು ತಬ್ಬಿಕೊಂಡು ಮುದ್ದಾಡಿ) ವತ್ಸನೆ ಸಕಲವಿಷಯ ದಲ್ಲೂ ತಂದೆಯನ್ನು ಮೆಚ್ಚಿಸುತ್ತಾ ಇರು. (ಎಂದು ರಾಯನಬಳಿಗೆ ಬಂದು) ಮಹಾರಾಜನಿಗೆ ಜಯವಾಗಲಿ.

ರಾಜಂ.—ಎಲೆ ಪುತ್ರವತಿಯೆ ನಿನಗೆ ಸುಖಾಗಮನವೆ? ಇಲ್ಲಿ ಕೂತುಕೊ.

(ಎಂದು ತನ್ನ ಅರ್ಧಾಸನವನ್ನು ಬಿಡುವನು.)

ಊರ್ವ.—(ಸತ್ಯವತಿಯನ್ನು ನೋಡಿ) ಎಲೌ ಪೂಜ್ಯಳೆ ಕೂತುಕೊಳ್ಳಬೇಕು.

(ಎಲ್ಲರೂ ಅವರವರ ಸ್ಥಾನಗಳಲ್ಲಿ ಕೂತುಕೊಳ್ಳುವರು.)

ತಾ.—ಎಲೆ ಮಗಳೆ ಚಿರಂಜೀವಿಯಾದ ಈ ನಿನ್ನ ಮಗನು ವಿದ್ಯಾವಂತ ನಾಗಿ ದೊಡ್ಡವನಾಗಿರುವನು; ಇದೊ ಇವನನ್ನು ನಿನ್ನ ಗಂಡನೆದುರಿಗೆ ನಿನ್ನ ಕಯ್ಯಲ್ಲಿ ಕೊಟ್ಟಿರುವೆನು; ಕರದುಕೊ. ಆಶ್ರಮಧರ್ಮವು ನನ್ನ ಮನಸ್ಸನ್ನು ಸೆಳೆಯುವದ್ದರಿಂದ ನಾನು ಹೋಗಿಬರುವೆನು.

ಊರ್ವ.—ಎಲೌ ಪೂಜ್ಯಳೆ ನಿನ್ನನ್ನು ನೋಡಿ ಬಹಳ ದಿವಸಗಳಾದ್ದ ರಿಂದ ಈಗಲೇ ನಿನ್ನನ್ನು ಕಳುಹಿಸಿಕೊಡುವದಕ್ಕೆ ನನ್ನ ಮನಸ್ಸು ಬರು ವದಿಲ್ಲ; ಆದರೂ ಆಶ್ರಮಧರ್ಮಕ್ಕೆ ತಡೆಮಾಡತಕ್ಕದ್ದು ಸರಿಯಲ್ಲವಾದ್ದ ರಿಂದ ಹೋಗಿಬರಬಹುದು.

ರಾಜಂ.—ಆರ್ಯಳೆ ಪೂಜ್ಯರಾದ ಚ್ಯವನಮಹರ್ಷಿಗಳಿಗೆ ನನ್ನ ನಮಸ್ಕಾ ರವನ್ನು ತಿಳಿಸಬೇಕು.

ತಾ.—ಬಳ್ಳೇದು ತಿಳಿಸುವೆನು.

ಆಯು.—(ಸತ್ಯವತಿಯನ್ನು ನೋಡಿ) *ಅಮ್ಮಾ ನೀನು ನಿಜವಾಗಿ ಆಶ್ರಮಕ್ಕೆ ಹೋಗುವೆಯಾ? ಹಾಗಾದರೆ ನನ್ನನ್ನೂ ಕರದುಕೊಂಡು ಹೋಗು.

---

*ರಾಗ—ಕಲಹರಪ್ರಿಯ ‖ ‖ ತಾಳ—ಮಿಶ್ರಛಾಪು ‖

ಈಗಳೆ ಪೋಪೆಯ ತಾಯೆ । ಆ ಗುರುಸನ್ನಿಧಿಗೇ ಮಹನೀಯೆ ‖ ನಾಗರರೆನಿಸಿರ್ಪ ಈ ಜನಸಮೂಹದೆ ನನ್ನನು ಬಿಟ್ಟು ‖ ೧ ‖

ರಾಜಂ.—ಕುಮಾರನೆ ನೀನು ಮೊದಲನೆಯ ಆಶ್ರಮದಲ್ಲಿದ್ದದ್ದಾಯಿತು ; ಈಗ ನಿನ್ನ ವಯಸ್ಸು ಎರಡನೆಯ ಆಶ್ರಮಕ್ಕೆ ಅರ್ಹವಾಗಿದೆ.

ತಾ.—ವತ್ಸನೆ ನಿಮ್ಮ ತಂದೆಯ ಮಾತನ್ನು ನಡಸು.

ಆಯು.—ಹಾಗಾದರೆ,

*ಕಂ॥ ನಖಮುಖದಿಂ ಲಾಲಿಸುತಿರೆ ।
ಶಿಖಂಡಮಂ ತಾಂ ಮದಂಕದೊಳ್ ನಿದ್ರಿಸುತಂ ॥
ಸುಖಮಿದ್ದಾರ್ಗ ಮಣಿಕಂಠಕ ।
ಶಿಖಿಯಂ ಗರಿಗಟ್ಟಿದೊಡನೆ ಮರೆಯದೆ ಕಳುಪಾ ॥ ೧೩ ॥

ತಾ.—ವತ್ಸನೆ ಹಾಗೇ ಆಗಲಿ ಕಳುಹಿಸಿಕೊಡುತ್ತೇನೆ ದೀರ್ಘಾಯುಷ್ಮಂತನಾಗಿರು. (ಎಂದು ತೆರಳಿದಳು.)

ರಾಜಂ.—(ಊರ್ವಶಿಯನ್ನು ಕುರಿತು)

ಕಂ॥ ಸುಂದರಿಯೇ ಕೇಳ್ ನಿನ್ನಯ ।
ನಂದನನಿಂ ಪುತ್ರವಂತರೊಳ್ ಗಣ್ಯತೆಯಂ ॥
ಪೊಂದಿದೆನಾಂ ಮಿಗೆ ಸಂತಸ ।
ಮಿಂದು ಶಚೀಭವ ಜಯಂತನಿಂದಿಂದ್ರನವೋಲ್ ॥ ೧೪ ॥

ಊರ್ವ.—(ಸ್ಮರಿಸಿಕೊಂಡು ಅಳುವಳು.)

ವಿದೂ.—ಇದೇನು ! ಈಕೆ ಇದ್ದಕ್ಕಿದ್ದಹಾಗೆ ಕಂಬನಿದುಂಬಿ ಅಳುವಳು.

ರಾಜಂ.—(ದಿಗಿಲುಬಿದ್ದು)

ವೃತ್ತ॥ ನೀನೇಕೆ ಶೋಕಿಸುವೆ ಪೇಳೊದವಿರ್ಪೆನಂ ಸಂ ।
ತಾನಾಭಿವೃದ್ಧಿಕರ ನಂದನನಿಂ ಪ್ರಮೋದಂ ॥

---

*ತನ್ನಯ ತಾಯಿಯ ಹಂಬ । ಲನ್ನುಳಿದಾಬಿಕನೀ ನಂಬ ॥ ಎನ್ನಯ ಮಣಿಕಂಠವೆನ್ನುವ ನವಿಲನು ಮುನ್ನಮೆ ಕಳುಹು ॥ ೧ ॥ ಬೇಗದೆ ನನ್ನಯ ಗಿಡದೆ । ಆಗುವ ಪಣ್ಗಳನು ನೀಂ ಮರೆಯದೆ ॥ ರಾಗದೆ ಕಳುಹಿಲ್ಲಿ ಗಾ ಮುನಿ ಕುಮಾರರ ಬಿಟ್ಟಹೆನೆಂತು ॥ ೨ ॥

ಪೀನೋನ್ನತಸ್ತನದೆ ಕಂಬನಿಮಾಲೆಯಿಂದಂ ।
ಮೀನಾಕ್ಷಿ ತಾರಸರಮಂ ಪೆರತೊಂದಿಡುತ್ತಂ ॥ ೧೫ ॥

(ಎಂದು ಕಣ್ಣೀರೊರಸುವನು.

ಊರ್ವ.—ಮಹಾರಾಜನೆ ಕೇಳು, ಈ ಕುಮಾರನ ಮುಖಕಮಲವನ್ನು ನೋಡಿ ಸಂತೋಷಪಡುತ್ತ ಮರತಿದ್ದೆನು. ಈಗ ನೀನು ಇಂದ್ರನ ಹೆಸರನ್ನು ಹೇಳಿದ್ದರಿಂದ ನನ್ನ ನಿಬಂಧನೆಯು ಜ್ಞಾಪಕಕ್ಕೆ ಬಂದು ನನ್ನ ಮನಸ್ಸು ಕಳವಳಪಡಿಸಿತು.

ರಾಜಂ.—ನಿನ್ನ ನಿಬಂಧನೆಯೆಂಬುವದು ಯಾವದು ?

ಊರ್ವ.—ಮಹಾರಾಜನೆ ನಿನ್ನಲ್ಲಿ ಅನುರಕ್ತಳಾದ ನನಗೆ ಮಹೇಂದ್ರನು ಪೂರ್ವದಲ್ಲಿ ಬಂದು ಆಜ್ಞೆಯನ್ನು ಮಾಡಿದ್ದನು.

ರಾಜಂ.—ಏನೆಂತ ?

ಊರ್ವ.—ನನಗೆ ಪ್ರಿಯಮಿತ್ರನಾಗಿಯೂ ಮತ್ತೂ ನನಗೆ ಯುದ್ಧದಲ್ಲಿ ಸಹಾಯನಾಗಿಯೂ ಇರುವ ಪುರೂರವರಾಯನನ್ನು ನೀನು ಸೇರಿದ್ದು, ಆತನು ನಿನ್ನಲ್ಲಿ ಹುಟ್ಟಿದ ಪುತ್ರನ ಮುಖವನ್ನು ಯಾವಾಗ ನೋಡುವನೊ ಆಗ ಪುನಃ ನೀನು ನನ್ನ ಸಮೀಪಕ್ಕೆ ಬಂದುಬಿಡತಕ್ಕದ್ದೆಂದು ಆಜ್ಞಾಪಿಸಿದ್ದನು. ಆದ್ದರಿಂದ ಶೀಘ್ರವಾಗಿ ನಿನ್ನ ವಿಯೋಗವುಂಟಾಗುವದೆಂಬ ದಿಗಿಲಿನಿಂದ ನಾನು ಈ ಕುಮಾರನನ್ನು ಹುಟ್ಟಿದಕ್ಷಣವೇ ವಿದ್ಯಾಭ್ಯಾಸ ನಿಮಿತ್ತವಾಗಿ ಪೂಜ್ಯರಾದ ಚ್ಯವನಮಹರ್ಷಿಗಳ ಆಶ್ರಮದಲ್ಲಿ ಯಾರೂ ಕಾಣದಂತೆ ಆರ್ಯಳಾದ ಸತ್ಯವತಿಯ ಕೈಸೇರಿಸಿದ್ದೆನು ; ಈ ಚಿರಂಜೀವಿಯು ಈಗ ದೊಡ್ಡವನಾಗಿ ನಿನ್ನ ಸನ್ನಿಧಿಯನ್ನು ಸೇರಿದನು. ಇಲ್ಲಿನವರಿಗೆ ನಾನು ನಿನ್ನೊಡನೆ ಇದ್ದದ್ದಾಯಿತು. ಇನ್ನು * ಮಹೇಂದ್ರನಪ್ಪಣೆಯಾದಂತೆ ನಡದುಕೊಳ್ಳುವೆನೆಂಬುವದಕ್ಕೆ ನನ್ನ ಬಾಯಿಬರದು.

---

*ರಾಗ—ನಾದನಾಮಕ್ರಿಯೆ ॥ ॥ ಮಿಶ್ರಛಾಪು ॥

ಪ್ರಿಯನೇ । ಸುಂದರನಿಜಕಾಯನೇ ॥ ಪ ॥ ಹೋಗಿಬರುವೆನಾ । ನೀಗಳಿಂದಿರನಲ್ಲಿ ॥ ಗಾಗಿಸನ್ನುತಗುಣ । ಭೋಗದೇವೇಂದ್ರನೇ ॥ ೧ ॥ ವರಗುಣನಾದೀ । ತರಳನು ನಿನಗೆ ॥ ದೊರೆಯಲಿನ್ನಿಷ್ಟವು । ನೆರವೇರಿದುದಾಪ ॥ ೨ ॥ ಸುರಪನಧೀನಳಾ । ಗಿರುವೆನುನಾನು ॥ ಮರುಗುವುದೇಕೆನೀಂ । ನಿರುಪಮಧೈರ್ಯನೆ ॥ ೩ ॥

ರಾಜಂ.—ಹಾ ! (ಎಂದು ಮೂರ್ಛೆಯನ್ನು ಹೊಂದುವನು).

(ಎಲ್ಲರೂ ವ್ಯಸನವನ್ನು ನಟಿಸುವರು).

ಊರ್ವ.—*ಪ್ರಿಯನೆ ಸಂತೈಸಿಕೊ ಸಂತೈಸಿಕೊ ಯಾತಕ್ಕೆ ಇಷ್ಟೊಂದು ವ್ಯಸನಪಡುವೆ ?

ಕಂ.—ಮಹಾರಾಜನೆ ಸಂತೈಸಿಕೋಬೇಕು ಸಂತೈಸಿಕೋಬೇಕು.

ರಾಜಂ.—(ಮೆಲ್ಲನೆದ್ದು ನಿಟ್ಟುಸುರುಬಿಟ್ಟು) ಅಯ್ಯೊ ! ಪ್ರಾಣಿಗಳ ಸುಖವಿಷಯದಲ್ಲಿ ದೈವದ ಅಸಹನವು ಆಶ್ಚರ್ಯಕರವಾದದ್ದು.

†ವೃತ್ತ॥ ತನಯನ ಜನ್ಮದಿಂದೊದವಿದುತ್ಕಟಸಂಮದದಿಂದೆ ಸಂತವಿ ।
ಟ್ಟೆನಗೊಡನಿಂತು ತೋರಿತು ಕೃಶೋದರಿ ನಿನ್ನ ವಿಯೋಗವೇ ॥
ದನೆ ಬೆಳಗಾರಪೆರ್ಮಳೆಯೊಳಾತಪತಾಪವುಡಂಗಿ ತಣ್ಪನಾಂ ।
ತನುಪದದೊಳ್ಮರಕ್ಕೆ ಪೊಡೆದಂತಿರೆ ಪೊಲ್ಸಿಡಿಲಕ್ಕಟಕ್ಕಟಾ ॥ ೧೬ ॥

ವಿದೂ.—ಮಹಾರಾಜನೆ ರಾಜ್ಯಭಾರಸಮರ್ಥನಾದ ಕುಮಾರನು ನಿನಗೆ ದೊರೆದ ಕೂಡಲೇ ಕುಲಪದ್ಧತಿಯಪ್ರಕಾರ ನೀನು ನಾರುಮಡಿಯನ್ನುಟ್ಟುಕೊಂಡು ತಪಸ್ಸನ್ನು ಮಾಡುವದಕ್ಕಾಗಿ ಅರಣ್ಯಕ್ಕೆ ಹೊರಡಬೇಕಾಯಿ

---

* ರಾಗ.—ತೋಡಿ ॥ ॥ ಮಿಶ್ರಛಾಪು ॥

ನನಗಾಗಿನಿತೇತಕೆ ನೀಂ ರಮಣ ॥ ಮನದೊಳ್ಮರುಗುತ್ತಿರುವೇ ಸುಗುಣ ॥ ೧ ॥ ಪಣೆಯೊಳ್ಬರೆದಾವಿಧಿಯಾಜ್ಞೆಯನು ॥ ಕ್ಷಣವಾದರುಮೀರುವನಾವವನು ॥ ೨ ॥ ಪ್ರಿಯನೇಬಿಡುನನ್ನಯಚಿಂತೆಯನು ॥ ಜಯವಾಗಲಿನಾಸಿದೊಪೋಗುವೆನು ॥ ೩ ॥

† ರಾಗ.—ಮಾಂಜಿ ॥ ॥ ಮಿಶ್ರಛಾಪು ॥

ನಾನೆಂತುಸೈಸಲಿಕಾಂತೆ । ನೀನಿಂತುನುಡಿಯೆಮಾನಸದಳಲ ॥ ಪ ॥ ಸರಸಿಜಲೋಚನೆ । ಶರದಿಂದುವದನೇ । ವರಶುಕಮಂಜುಳವಚನೇ ॥ ಸುರಪತಿಯಾಜ್ಞಾಪಿ । ಸಿರುವಂತೆದಿವಿಚರ । ಪುರಕೆಪೋಗುವಮನದಿಂದ । ನೀನಿಂತುನುಡಿಯೆ ॥ ೧ ॥ ಸರಿಯಿಂದತಂಪನು । ಪೊರೆದನುಪದದೆ । ಮರಕೆತಾಗಿದಪೊಲುಸಿಡಿಲು ॥ ತರಳನಜನ್ಮದಿ । ಹರುಷದೊಳಿರ್ದೆನ । ಗರಿಬಂದುದು ನಿನ್ನ ವಿರಹ । ನೀನಿಂತುನುಡಿಯೆ ॥ ೨ ॥

ತೆಂದು ನಾನು ಯೋಚಿಸಿದ್ದೆ; ಅದಕ್ಕೆ ಹಠಾತ್ತಾಗಿ ಇದೊಂದು ಕಾರಣವೂ ಬದಗಿತು. ಮಾಡತಕ್ಕದ್ದೇನು !

ಊರ್ವ.—ಹಾ ಹಾ ! ಮಹಾರಾಜನೆ ನೀನು ಸಮರ್ಥನಾದ ಪುತ್ರನು ದೊರೆದನೆಂದು ರಾಜ್ಯಪರಿಪಾಲನೆಯಲ್ಲಿ ನಿರಾತಂಕನಾಗಿ, ತಪ್ಪಿಲ್ಲದೆ ನಿನ್ನನ್ನು ಅಗಲುವ ಯೋಚನೆಯುಳ್ಳ ಮಂದಭಾಗ್ಯಳಾದ ನನ್ನನ್ನು ಸಂಗಡಲೇ ಸ್ವರ್ಗಕ್ಕಾದರೂ ಬಂದು ಅನುವರ್ತಿಸಬೇಕೆಂದು ಯೋಚಿಸುವೆಯೊ ಏನೊ !

ರಾಜಂ.—ಪ್ರಿಯೆ ಮಂದಭಾಗ್ಯಳೆಂದು ಯಾತಕ್ಕೆ ಆತ್ಮನಿಂದೆಯನ್ನು ಮಾಡಿಕೊಳ್ಳುವೆ ?

*ವೃತ್ತ॥ ಸುಲಭವಿಯೋಗಮಪ್ಪ ಪರತಂತ್ರತೆ ಪೂರಿಸಲಾಪ್ಪುದಿಲ್ಲ ತ ।
ವ್ಮೆಳವನಿರಿಂದ್ರನಾಜ್ಞೆಯೊಳೆ ನೀನದರಿಂ ಪ್ರಿಯೆಯಾನುಮೀಮಹೀ॥
ವಳಯದ ಭಾರಮಂ ತವತನೂಭವನಾದ ಚಿರಾಯುವಾಯುವಿಂ ।
ತಳೆಯಿಸಿ ಸಂಚರನ್ಮೃಗಕುಲಂಗಳನೊಪ್ಪುವರಣ್ಯಕೈದುವೆಂ ॥ ೧೩ ॥

ಆಯು.—ತಂದೆಯೇ ನೀನು ಹೀಗೆ ಯೋಚಿಸಕೂಡದು ; ತಿದ್ದಿದ ದೊಡ್ಡ ಎತ್ತಿನಭಾರವನ್ನು ಹೋರಿಯು ಹೊರಬಲ್ಲದೆ ?

ರಾಜಂ.—ವತ್ಸನೆ ಕೇಳು—

ವೃ॥ ಮರಿಯಾಗಿದ್ದೊಡಮನ್ಯದಂತಿಕುಲಮಂಸೊಕ್ಕಾನೆತಾಂಮೀರದೇ
ಪಿರಿದುಂ ವೇಗಮನಾನದಿಕ್ಕುಮೆ ವಿಷಂ ಬಾಲೋರಗೀಯಂ ನೃಪಂ ॥

---

* ರಾಗ.—ಆನಂದಭೈರವಿ ॥ ॥ ಮಿಶ್ರಛಾಪು ॥

ಪ್ರಿಯೆಯೇ । ನಿನ್ನನ್ನುಬಿಟ್ಟುನಾನಿರ್ಪಪರಿಯೇ । ನೆನ್ನಯಪ್ರಾಣ ॥ ಪ ॥ ವಿರಹಕಾರಣವಾದ । ಪರತಂತ್ರಭಾವವು ॥ ನಿರುತಂತವಿಮ್ಮಿಷ್ಟವ । ನೆರವೇರಿಸುವುದಿಲ್ಲ ॥ ೧ ॥ ಸ್ವಾರಾಜನಾಜ್ಞೆಯ । ಮೀರದಂದದಿನೀನು ॥ ಸಾರುವುದುಚಿತಬ್ಬಂ । ದಾರಕನಗರಿಗೆ ತನಯನೊಳೀರಾಜ್ಯ । ವಸುನಿಯುಮಿಸಿನಾನು ॥ ಅನಘತಪೋವನ । ವನುಸವಾಶ್ರಮಿಸೆನು ॥ ೨ ॥

ಧರೆಯಂ ಬಾಲಕನಾದೊಡಂ ಪೊರೆಯಲಾಪ್ಪರ್ಗಂ ಪ್ರಾಯದಿಂದಕ್ಕುಮೇಂ
ನೆರೆದಿರ್ಕ್ಕುಂ ನಿಜಜಾತಿಸಿದ್ಧಮಿವನೋಳಾತ್ಮಕ್ರಿಯಾರ್ಹಂ ಗುಣಂ ||

ಎಲೈ ಕಂಚುಕಿಯೆ ಚಿರಂಜೀವಿಯಾದ ಆಯುಃಕುಮಾರನ ರಾಜ್ಯಾಭಿಷೇಕಕ್ಕೆ ತಕ್ಕ ಸನ್ನಾಹವನ್ನು ಮಾಡಬೇಕೆಂದು ನಮ್ಮ ಮಂತ್ರಿಗಳಿಗೆ ತಿಳಿಸತಕ್ಕದ್ದು.

ಕಂ.—ಮಹಾರಾಜನ ಅಪ್ಪಣೆಯಾದಂತಾಗಲಿ.

(ಎಂದು ದುಃಖಿಸುತ್ತಾ ತೆರಳಿದನು).

(ಎಲ್ಲರೂ ತೇಜಸ್ಸಿನಿಂದ ಕಣ್ಣು ಕೊಕ್ಕರಿಸಿದ್ದನ್ನು ನಟಿಸುವರು).

ರಾಜಂ.—ಇದೇನು! ಮೇಘವಿಲ್ಲದೆ ಸುಮ್ಮನೆ ಮಿಂಚುಮಾತ್ರ ಮಿಂಚುತ್ತಿರುವದು.

ಊರ್ವ.—ಓಹೊ! ಪೂಜ್ಯರಾದ ನಾರದರು ದಯಮಾಡಿಸಿದರು.

ರಾಜಂ.—ಏನು! ಪೂಜ್ಯರಾದ ನಾರದರೆ? (ನೋಡಿ) ಆಹ!

ವೃತ್ತ || ಜಡೆಪೋಲುತ್ತಿರೆ ಕರ್ಷಣೋಪಲಲಸದ್ಗೋರೋಚನಾರೇಖೆಯಂ |
ಕಡೆಗಣ್ಬುತ್ತಿರೆ ಶಾರದೇಂದುಕಲೆಯಂ ಯಜ್ಞೋಪವೀತಂ ಸಿತಂ ||
ಬಿಡದೊಳ್ಮುತ್ತಿನ ಮಾಲೆಯಂ ತಳೆದು ಪೊಂಬೀಳಲ್ಗಳೊಪ್ಪುತ್ತಿರಲ್ |
ನಡೆತಪ್ಪಂತಿರೆ ಪಾರಿಜಾತತರು ತಾನೀ ನಾರದಂ ತೋರ್ದಪಂ ||

(ಎಂದು ಊರ್ವಶಿಯನ್ನು ನೋಡಿ) ಎಲ್ಲಿ ಪೂಜಾದ್ರವ್ಯ?

ಊರ್ವ.—(ಪೂಜಾದ್ರವ್ಯವನ್ನು ತೆಗೆದುಕೊಂಡುಬಂದು) ಇದೊ ಪೂಜಾದ್ರವ್ಯ ಸಿದ್ಧವಾಗಿರುವದು.

ನಾರದರು.—(ಬಂದು) ಎಲೈ ಭೂಮೀಶ್ವರನೇ ಜಯಶೀಲನಾಗು.

ರಾಜಂ.—(ಊರ್ವಶಿಯ ಹಸ್ತದಿಂದ ಪೂಜಾದ್ರವ್ಯವನ್ನು ತೆಗೆದುಕೊಂಡು ನಾರದರನ್ನು ಸತ್ಕರಿಸಿ) ಪೂಜ್ಯರೆ ನಮಸ್ಕರಿಸುವೆನು.

ಊರ್ವ.—ಮಹಾತ್ಮರಿಗೆ ವಂದಿಸುವೆನು.

ನಾರ.—ನೀವಿಬ್ಬರೂ ಆಗಲದೇ ಇರಿ.

ರಾಜಂ.—(ತನ್ನಲ್ಲಿತಾನು) ಹೀಗಾದೀತೆ? (ಪ್ರಕಾಶ) ಈ ಪೀಠದಲ್ಲಿ ದಯಮಾಡಿಸಬೇಕು.

(ನಾರದರು ಪೀಠದಲ್ಲಿ ಕೂತುಕೊಂಡಮೇಲೆ ಎಲ್ಲರೂ ಕೂತುಕೊಳ್ಳುವರು)

ನಾರ.—ಎಲೈ ಮಹಾರಾಜನೆ ದಿವ್ಯದೃಷ್ಟಿಯುಳ್ಳ ದೇವೇಂದ್ರನು ತಪೋವನಕ್ಕೆ ಹೋಗುವದಕ್ಕೋಸ್ಕರ ಯತ್ನಿಸಿರುವ ನಿನಗೆ ಈ ಮಾತನ್ನು ಹೇಳಿ ಕಳುಹಿಸಿರುವನು.

ರಾಜಂ.—ಅದೇನಾಜ್ಞಾಪಿಸುವನು? ಅಪ್ಪಣೆಯಾಗಬೇಕು.

ನಾರ.—ಕಾಲತ್ರಯವನ್ನು ತಿಳಿದಿರುವ ಮಹರ್ಷಿಗಳು ಮುಂದೆ ದೇವಾಸುರರಿಗೆ ಯುದ್ಧನಡೆಯುವದೆಂದು ಹೇಳಿರುವರು. ಆದ್ದರಿಂದ ನನಗೆ ಯುದ್ಧದಲ್ಲಿ ಸಹಾಯನಾಗಿರತಕ್ಕ ನೀನು ಶಸ್ತ್ರತ್ಯಾಗವನ್ನು ಮಾಡಿ ತಪೋವನಕ್ಕೆ ಹೋಗಕೂಡದೆಂತಲೂ ನಿನಗೆ ಧರ್ಮಪತ್ನಿಯಾಗಿರುವ ಊರ್ವಶಿಯು ನಿನ್ನ ಯಾವಜ್ಜೀವವೂ ನಿನ್ನ ಸಮೀಪದಲ್ಲೇ ಇರಬಹುದೆಂತಲೂ ಹೇಳಿರುವನು.

ಊ.—ಈಗ ನನ್ನ ಮನೋವ್ಯಥೆ ಪರಿಹಾರವಾಯಿತು.

ರಾಜಂ.—ದೇವೇಂದ್ರನ ಅಪ್ಪಣೆಯಾದಂತೆ ನಡೆದುಕೊಳ್ಳುವೆನು.

ನಾರದ—*ಕಂ ॥ ಸುರಪತಿ ನಿನ್ನಿಷ್ಟವ ನಾ ।
ಚರಿಪಂ ನೀನಾತನಿಷ್ಟವಂ ಸಲಿಪುದು ಭಾ ॥
ಸ್ಕರನಗ್ನಿಯ ನಿಜತೇಜದೆ ।
ಪೊರೆವಂತಿರೆ ಪೊರೆವನಲ್ತೆ ಶಿಖಿಯುಂ ರವಿಯುಂ ॥ ೭೦ ॥

---

* ॥ ರಾಗ—ಕಮಾಚ್ ॥ ॥ ರೂಪಕತಾಳ ॥

ಸ್ವಾರಾಜಮಿತ್ರನೇ । ತಾರೇಶಕುಲಜನೇ ॥ ಪ ॥ ದಿವಿಜಪತಿಯುನಿನ್ನ ಕಾಮಿ । ತವನು ಸಲ್ಲಿಪಂ ॥ ಅವನಕಾಮಿತವನು ನೀನು । ಮಂತುಸಲ್ಲಿಸೈ ॥ ೧ ॥ ತರಣಿತನ್ನ ತೇಜದಿಂದ । ಪೊರೆವನಗ್ನಿಯಂ ॥ ಪೊರೆವನಲ್ತೆರವಿಯನಾ । ತೆರದೊಳಗ್ನಿಯು ॥ ೨ ॥

(ಆಕಾಶದಲ್ಲಿ ನೋಡಿ) ಎಲೆರಂಭೆ, ಆಯುಃಕುಮಾರನ ಯೌವರಾಜ್ಯಾಭಿಷೇಕಸಾಮಗ್ರಿಗಳನ್ನು ಬೇಗ ಸಿದ್ಧಪಡಿಸತಕ್ಕದ್ದು.

ಅಪ್ಸರಸ್ತ್ರೀಯರು.—(ಪ್ರವೇಶಿಸಿ) ಮಹಾತ್ಮರೆ ಇದೊ ಪಟ್ಟಾಭಿಷೇಕ ಸಾಮಗ್ರಿಯು ಸಿದ್ಧವಾಗಿರುವದು.

ನಾರ.—ಈ ಆಯುಃಕುಮಾರನನ್ನು ಈ ಸಿಂಹಾಸನದಮೇಲೆ ಬೆಳಸ ತಕ್ಕದ್ದು.

ರಂಭೆ.—ವತ್ಸನೆ ಇತ್ತಬಾ. (ಎಂದು ಸಿಂಹಾಸನದಮೇಲೆ ಕೂರಿಸುವಳು)

ನಾರ.—(ಸುವರ್ಣಕಲಶೋದಕದಿಂದ ಪಟ್ಟಾಭಿಷೇಕವನ್ನು ಮಾಡಿ), ಎಲೆ ರಂಭೆ ಕುಮಾರನಿಗೆ ಉಳಿದ ರಾಜೋಪಚಾರಗಳನ್ನೆಲ್ಲಾ ನೆರವೇರಿಸತಕ್ಕದ್ದು.

ರಂಭೆ.—(ಪುಷ್ಪಮಾಲಿಕಾದಿಗಳನ್ನು ಒಪ್ಪಿಸಿ ರಾಜೋಪಚಾರಗಳನ್ನು ಮಾಡಿ) ಯುವರಾಜನೆ, ಪೂಜ್ಯರಾದ ನಾರದರಿಗೂ ನಿಮ್ಮ ತಂದೆತಾಯಿಗಳಿಗೂ ನಮಸ್ಕಾರ ಮಾಡು.

ಆಯು.—(ಕ್ರಮವಾಗಿ ನಮಸ್ಕಾರ ಮಾಡುವನು).

ನಾರ.—*ವತ್ಸನೆ ನಿನಗೆ ಮಂಗಳವಾಗಲಿ.

ರಾಜಂ.—ಕುಮಾರನೆ ವಂಶೋದ್ಧಾರಕನಾಗು.

ಊರ್ವ.—ಕಂದನೆ ಯಾವಾಗಲೂ ತಂದೆಗೆ ಇಷ್ಟನಾಗಿರು.

ತೆರೆಯಲ್ಲಿ.—ಯುವರಾಜನಿಗೆ ಜಯವಾಗಲಿ ಜಯವಾಗಲಿ.

---

* ‖ ರಾಗ.—ಶಂಕರಾಭರಣ ‖ ‖ ಆದಿತಾಳ ‖

ರಾಜಕುಲಜನೇ । ಯುವ । ರಾಜವೀರನೇ ‖ ಪ ‖ ಈಜಗತಿಯಪಾಲಿಸುತಾ । ರಾಜಿಸೈ ಚಿರಂ ‖ ಅ ‖ ಸುಂದರಾಂಗನೇ । ಅರ । ವಿಂದನೇತ್ರನೇ ‖ ಇಂದುಕುಲವನುದ್ಧರಿಸಾ । ನಂದದಿಂದಲಿ ‖ ೧ ‖ ಮಹಾನುಭಾವನೇ । ಮಹ ನೀಯಚರಿತನೇ ‖ ನಿಹತ ವೈರಿಯಾಗಿರ್ಸೈ । ಬಹಳಕಾಲನೀಂ ‖ ೨ ‖ ವಿಜಯಿಸೈಮಹಾ । ಭುಜನೆನಿಸುತಲಿ ‖ ರಜನಿಕಾಂತನಿಭಯಶೋ । ರಾಶಿಯಾಗಿರೈ ‖ ೩ ‖

ಸ್ತುತಿಪಾಠಕರಲ್ಲಿ ಒಬ್ಬನು.—

ಕಂ॥ ಕಮಲಜನಿಗತ್ರಿ ಯತ್ರಿಗೆ ।
ಹಿಮಕರ ನಿಂದುಗೆ ಬುಧಂ ಬುಧಂಗೀ ಜನಪಂ ॥
ಸಮನೆನಿಸಿದಂತೆ ತಂದೆಗೆ ।
ಸಮನೆನಿಸ್ಯೆ ಪೆರತು ನಿನಗೆ ಹರಸುವುದಿನ್ನೇಂ ॥ ೨೧ ॥

ಎರಡನೆಯವನು.—

ವೃತ್ತ॥ ಸಮುನ್ನತನೊಳೀ ಭವಜ್ಜನಕನಲ್ಲಿಯುಂ ಧೀರನೊಳ್ ।
ಸಮಸ್ಥಿತಿಯೊಳಂತು ನೋಡೆ ನೃಪಲಕ್ಷ್ಮಿ ನಿನ್ನಲ್ಲಿಯುಂ ॥
ಹಿಮಾಚಲದೊಳಂ ಪಯೋನಿಧಿಯೊಳಂ ವಿಭಕ್ತಾಂಬುವಾ ।
ದಮರ್ತ್ಯನದಿಯಂತಿರಿರ್ಮ್ಮಡಿಯೆನಲ್ಕರಂ ರಾಜಿಕುಂ ॥ ೨೨ ॥

ಅಪ್ಸರಸ್ತ್ರೀಯರು.—(ಊರ್ವಶಿಯ ಬಳಿಗೆ ಬಂದು) ಎಲೆ ಸಖಿ ಭಾಪು ಭಾಪು ನಿನ್ನ ಮಗನು ಯುವರಾಜನಾದ್ದರಿಂದಲೂ ನಿನಗೆ ಮಹಾರಾಜನ ವಿಯೋಗ ತಪ್ಪಿದ್ದರಿಂದಲೂ ನಿನಗೆ ಬಹಳ ಸಂತೋಷವಾಯಿತಲ್ಲವೆ ?

(ಎಂದೆಲ್ಲರೂ ಹರಸುವರು).

ಊರ್ವ.—ಎಲೆ ಸಖಿಯರಿರಾ, ಈ ಸಂತೋಷವು ನನ್ನದೊಬ್ಬಳದೇ ಅಲ್ಲ. ನಿಮ್ಮದೂ ಆಗಿದೆ. ಎಲೈ ವತ್ಸನೆ, ನಿಮ್ಮ ಹಿರೀತಾಯಿಗೆ ನಮಸ್ಕಾರ ಮಾಡಿ ಬಾ.

ಆಯು.—ಬಳ್ಳೇದು ಆಗಲಿ. (ಎಂದು ಹೊರಟನು.)

ರಾಜಂ.—ವತ್ಸನೆ ನಿಲ್ಲುನಿಲ್ಲು ; ಎಲ್ಲರೂ ಜೊತೆಯಾಗಿ ದೇವಿಯ ಬಳಿಗೆ ಹೋಗೋಣ.

ನಾರ.—

ಕಂ॥ ಮನುಜೇಂದ್ರನೆ ಕೇಳ್ ನಿನ್ನಯ ।
ತನಯನ ಯುವರಾಜಲಕ್ಷ್ಮಿಯಂ ನೋಡುತ್ತಾಂ ॥

ನೆನೆದಪೆನೆಂದಮರವರೂ ।
ಥಿನಿಯೊಳ್ ಪಟ್ಟಾಭಿಷಿಕ್ತನಾದರುವೊಗನಂ ॥ ೨೩ ॥

ರಾಜಂ.—ಈ ಪ್ರಕಾರ ತಮ್ಮನುಗ್ರಹಕ್ಕೆ ಪಾತ್ರನಾದ ಈ ಕುಮಾರನ ಹ್ಯಾಗೆತಾನೇ ಅಯೋಗ್ಯನಾದಾನು ?

ನಾರ.—ಮಹಾರಾಜನೆ, ಮಹೇಂದ್ರನು ನಿನಗೆ ಇದಕ್ಕಿಂತಲೂ ಇನ್ನೇನು ಸಂತೋಷವನ್ನುಂಟುಮಾಡಬೇಕು ?

ರಾಜಂ.—ಮಹಾತ್ಮನಾದ ದೇವೇಂದ್ರನು ನನ್ನ ವಿಷಯದಲ್ಲಿ ಪ್ರಸನ್ನನಾಗಿರುವಾಗ್ಯೆ ನಾನು ಇನ್ನೇನು ಅಪೇಕ್ಷಿಸತಕ್ಕದ್ದುಂಟು?

ನಾರ.—ಆದರೂ ಈ ಭರತವಾಕ್ಯವು ನೆರವೇರಬೇಕೆಂದು ಕೋರುವೆನು.

ಭರತವಾಕ್ಯಂ.—

ಕಂ॥ ಧರಣಿಯೊಳರ್ವ್ವರುವೊರ್ವ್ವನೊ ।
ಳಿರದೆ ಪರಸ್ಪರವಿರುದ್ಧಭಾವದೊಳಿರ್಺್ಪ್ ॥
ಸಿರಿಸರಸತಿಯರ ಸಂಗಂ ।
ಸ್ಥಿರವಾಗುಗೆ ಸಜ್ಜನರ್ಕ್ಕಳೊಳ್ ಶಿವಕೃಪೆಯಿಂ ॥ ೨೪ ॥

(ಎಂದೆಲ್ಲರೂ ತೆರಳಿದರು.)

ವೃತ್ತ॥ ಅವನಿಪತೀಂದ್ರಚಾಮನೃಪಧೀಸಚಿವಂ ನರಸಿಂಹವರ್ಯಭೂ ।
ದಿವಿಜನುದೀರಿಸಲ್ಗರಪುರೀಶಸುಧೀಸುತ ನಯ್ಯಶಾಸ್ತ್ರತಾಂ ॥
ಪ್ರವಿದಿತ ಕಾಳಿದಾಸಕವಿನಿರ್ಮ್ಮಿತ ಸಂಸ್ಕೃತವಿಕ್ರಮೋರ್ವಶೀ ।
ಯುವ ನಭಿರಾಮವೆಂದೆಸಿಪ ಕನ್ನಡದೊಳ್ ಪದೆದಿಂ ತೊಡರ್ಚ್ಚಿದಂ ॥

ಪಂಚಮಾಂಕವು ಮುಗಿದುದು.

॥ ರಾಗ.—ಸುರಟಿ ॥ ॥ ಆದಿತಾಳ ॥

ಮಂಗಳಂ ಶಿವೇ । ಮಂಗಳೋತ್ಸವೇ ॥ ಪ ॥ ಮಂಗಳಂ ಭವೇ । ತುಂಗವೈಭವೇ ॥ ಅ ॥ ಲಲಿತಾಂಬಿಕೇ । ಜಲಜಾಂಬಕೇ । ಕಲಿಭಂಜಿಕೇ । ಚಲಬಾಲಿಕೇ ॥ ೧ ॥ ಸುರಪೂಜಿತೇ । ಹರಿಸನ್ನುತೇ ॥ ಕರುಣಾನ್ವಿತೇ । ಪರದೇವತೇ ॥ ೨ ॥ ಚಾಮಭೂಪತಿ । ಕ್ಷೇಮಕೃನ್ಮತೀ ॥ ಚಾಮುಂಡೇಶ್ವರೀ । ಸೋಮಸುಂದರೀ ॥ ೩ ॥

ಕಂ ॥ ಕ್ಷಿತಿಪೋತ್ತಮ ಚಾಮೋರ್ವೀ ।
ಪತಿಬಾಂಧವ ಲಿಂಗರಾಜನುತ್ಸಾಹಿಸೆ ಸ ॥
ನ್ನುತವಿಕ್ರಮೋರ್ವಶೀಯಂ ।
ಕೃತಮಾಯ್ತಿಂತಯ್ಯಶಾಸ್ತ್ರಿಯಿಂ ಕನ್ನಡದೊಳ್ ॥

ಸಂಪೂರ್ಣಂ.